ಕನ್ನಡದ ಯುರೋಪ್ ಪ್ರವಾಸ ಕಥನಗಳು

ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.) ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಧ್ಯಯನ ಮಹಾಪ್ರಬಂಧ

ನೋಂದಣಿ ಸಂಖ್ಯೆ/ ದಿನಾಂಕ : 140801020009/25.09.2014

ಸಂಶೋಧಕ

ಪ್ರವೀಣ ಕುಮಾರ್ ಎಸ್.

ಮಾರ್ಗದರ್ಶಕ

ಡಾ. ಶರತ್ ಕುಮಾರ್ ಟಿ.ಕೆ.

ಮಾನ್ಯತಾ ಸಂಸ್ಥೆ

ಹಾ.ಮಾ.ನಾ. ಸಂಶೋಧನಾ ಕೇಂದ್ರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಥಮ ದರ್ಜೆ ಕಾಲೇಜು

ಉಜಿರೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ

2020

ಕನ್ನಡದ ಯುರೋಪ್ ಪ್ರವಾಸ ಕಥನಗಳು

ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.) ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಧ್ಯಯನ ಮಹಾಪ್ರಬಂಧ

ನೋಂದಣಿ ಸಂಖ್ಯೆ/ ದಿನಾಂಕ : ೧೪೦೮೦೧೦೨೦೦೦೯/೨೫.೦೯.೨೦೧೪

ಸಂಶೋಧಕ

ಪ್ರವೀಣ ಕುಮಾರ್ ಎಸ್.

ಮಾರ್ಗದರ್ಶಕ

ಡಾ. ಶರತ್ ಕುಮಾರ್ ಟಿ.ಕೆ.

ಮಾನ್ಯತಾ ಸಂಸ್ಥೆ

ಹಾ.ಮಾ.ನಾ. ಸಂಶೋಧನಾ ಕೇಂದ್ರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಥಮ ದರ್ಜೆ ಕಾಲೇಜು

ಉಜಿರೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಪ್ರವೀಣ ಕುಮಾರ್ ಎಸ್. ಇವರು ನನ್ನ ಮಾರ್ಗದರ್ಶನದಲ್ಲಿ 'ಕನ್ನಡದ ಯುರೋಪ್ ಪ್ರವಾಸ ಕಥನಗಳು' ಎಂಬ ವಿಷಯವನ್ನು ಕುರಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:
ಸ್ಥಳ: ಬೆಳ್ತಂಗಡಿ

ಡಾ. ಶರತ್ ಕುಮಾರ್ ಟಿ.ಕೆ
ಸಹ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಮೆಲಂತಬೆಟ್ಟು
ಬೆಳ್ತಂಗಡಿ, ದ.ಕ.

ಸಂಶೋಧಕರ ಪ್ರಮಾಣ ಪತ್ರ

'ಕನ್ನಡದ ಯುರೋಪ್ ಪ್ರವಾಸ ಕಥನಗಳು' ವಿಷಯವನ್ನು ಕುರಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧವನ್ನು ಡಾ. ಶರತ್ ಕುಮಾರ್ ಟಿ.ಕೆ. ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮಾನ್ಯತಾ ಸಂಸ್ಥೆ ಹಾ. ಮಾ. ನಾ. ಸಂಶೋಧನಾ ಕೇಂದ್ರ, ಉಜಿರೆಯ ಸಂಶೋಧನಾ ವಿದ್ಯಾರ್ಥಿಯಾದ ನಾನು ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ: ಹೆಬ್ರಿ

ಪ್ರವೀಣ ಕುಮಾರ್. ಎಸ್.
ಸಂಶೋಧನಾ ಅಭ್ಯರ್ಥಿ
ಮಾಚೇನಹಳ್ಳಿ ತಾಂಡ್ಯ
ಮಾಚೇನಹಳ್ಳಿ ಅಂಚೆ
ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ
ಪಿನ್ ಕೋಡ್–೫೭೭೧೪೬
ಕರ್ನಾಟಕ ರಾಜ್ಯ

ಪರಿವಿಡಿ

ಅಧ್ಯಾಯ: ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

೧. ೧ ಪ್ರಸ್ತಾವನೆ

೧. ೨ ಅಧ್ಯಯನದ ಉದ್ದೇಶ

೧. ೩ ಅಧ್ಯಯನದ ವ್ಯಾಪ್ತಿ.

೧. ೪ ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ

೧. ೫ ಅಧ್ಯಯನದ ವಿಧಾನ

ಅಧ್ಯಾಯ : ೧
ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

೧.೧ ಪ್ರಸ್ತಾವನೆ

Travel, which is like a greater and graver science, brings us back to ourselves ಎಂದು ಆಲ್ಬರ್ಟ್ ಕಾಮು ಪ್ರವಾಸವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅರ್ಥೈಸಿರುವುದು ಪ್ರವಾಸದ ಮಹತ್ವವನ್ನು, ಸಾಹಿತ್ಯದಲ್ಲಿ ಅದರ ಸ್ಥಾನವನ್ನು ಸೂಚಿಸುತ್ತದೆ.[೧] 'ಪ್ರವಾಸ' ಪದಕ್ಕೆ ಆಂಗ್ಲಭಾಷೆಯಲ್ಲಿ 'ಟ್ರಾವೆಲ್' ಎಂಬ ಪದ ಸಂವಾದಿಯಾಗಿದೆ. ಟ್ರಾವೆಲ್ ಎಂಬ ಪದಕ್ಕೆ 'ಆಕ್ಸ್‌ಫರ್ಡ್ ಲರ್ನರ್ ಡಿಕ್ಷನರಿ'ಯಲ್ಲಿ "go from one place to another; make journey(s) especially long or abroad" (Oxford Dictionary and Thesaurus 3rd., ಪು–೮೨೧) 'ಒಂದು ಸ್ಥಳದಿಂದ ಮತ್ತೊಂದು ದೂರದ ಸ್ಥಳಕ್ಕೆ ಅಥವಾ ವಿದೇಶಕ್ಕೆ ಪ್ರಯಾಣ ಮಾಡುವುದೇ ಪ್ರವಾಸ' ಎಂಬ ವಿವರಣೆ ನೀಡಲಾಗಿದೆ. 'ಟ್ರಾವೆಲ್' ಪದದ ನಿಷ್ಪತ್ತಿಯನ್ನು ಗಮನಿಸಿದಾಗ ಅದು ಫ್ರೆಂಚ್ ಮೂಲದ್ದು ಎಂದು ತಿಳಿದುಬರುತ್ತದೆ. ಯುರೋಪ್ ಖಂಡದಿಂದಲೇ ಪ್ರವಾಸದ ಪರಿಕಲ್ಪನೆ ಸ್ಪಷ್ಟ ರೂಪವನ್ನು ತಾಳಿದೆ ಎನ್ನಬಹುದು.

ಪ್ರವಾಸವು ಭೌತಿಕ ಸ್ವರೂಪವನ್ನು ಹೊಂದಿದ್ದರೂ ಅದೊಂದು ಮಾನಸಿಕ ಪ್ರಕ್ರಿಯೆ. ಪ್ರವಾಸದಲ್ಲಿ ದೊರಕಿದ ನೈಜ ಅನುಭವಗಳು ಮನಸ್ಸಿನ ಮೇಲೆ ಪರಿಣಾಮ ಬೀರಿ ಹೊಸ ತಿಳಿವಳಿಕೆಯನ್ನು ಕೊಡುತ್ತದೆ. ಶಿಕ್ಷಣದ ಒಂದು ಭಾಗವಾಗಿ ಹಲವು ಲಾಭಗಳು ದೊರೆಯುತ್ತವೆ. ಆಂಗ್ಲಕವಿ ವಿಲಿಯಂ ಷೇಕ್ಸ್‌ಪಿಯರ್ ಹೇಳುವಂತೆ "Home-keeping youths have ever homely wits"(ವಿ.ಕೃ. ಗೋಕಾಕ್., ಸಮುದ್ರದಾಚೆಯಿಂದ., ಪು–30) ಎಂಬ ಮಾತು ಮಗುವಿನ ಬೌದ್ಧಿಕ ಮಟ್ಟದ ವೈಶಾಲ್ಯತೆಗೆ ಪ್ರವಾಸ ಹೇಗೆ ಪ್ರೇರಕ ಮತ್ತು ಪೋಷಕ ಎಂಬುದನ್ನು ತಿಳಿಸುತ್ತದೆ. ದ.ರಾ. ಬೇಂದ್ರೆಯವರು "ವಿಭೂತಿಯಿರದ ಸ್ಥಳವು ಯಾತ್ರೆಗೆ ಯೋಗ್ಯವಲ್ಲ. ದೋಷ ತಗ್ಗಿಸಿ, ಗುಣ ಹಿಗ್ಗಿಸದ ಯಾತ್ರೆ ಯಾತ್ರೆಯಲ್ಲ"(ಪ್ರವಾಸ ಸಾಹಿತ್ಯ., ಸಾ. ಶಿ ಮರುಳಯ್ಯ., ಕನ್ನಡನುಡಿ ಬೆಳ್ಳಿ ಸಂಚಿಕೆ., ಕ. ಸಾ. ಪ., 1963., ಪು–75)ಎಂದಿದ್ದಾರೆ. ಬೇಂದ್ರೆ ಅವರು ಹೇಳುವಂತೆ ಪ್ರವಾಸವು ದೋಷವನ್ನು ತಗ್ಗಿಸಿ ಗುಣವನ್ನು ಹಿಗ್ಗಿಸುವ ಕಾರ್ಯವನ್ನು ಮಾಡುತ್ತದೆ.

ಪ್ರವಾಸ ಸಾಹಿತ್ಯ ಕಟ್ಟು ಕಥೆಯಲ್ಲ, ಅದು ನೈಜ ಅನುಭವಗಳ ಜೀವಂತ ಸಾಹಿತ್ಯ. ಪ್ರಪಂಚದ ಯಾವುದೇ ಭಾಷೆಯ ಸಾಹಿತ್ಯವೂ ಈ ಪ್ರಕಾರದಿಂದ ಹೊರತಾಗಿಲ್ಲ. ಸಾಹಿತ್ಯ ಚರಿತ್ರೆಯನ್ನು ಹೊಂದಿರುವ ಪ್ರಪಂಚದ ಹಲವು ಭಾಷೆಗಳಲ್ಲಿ ಪ್ರವಾಸ ಸಾಹಿತ್ಯ ರಚಿತವಾಗಿದೆ. ಪ್ರವಾಸದ ಮಹತ್ವವನ್ನು ಕುರಿತು, ಜವಾಹರಲಾಲ ನೆಹರು ಅವರು ಕೆ.ಪಿ.ಎಸ್ ಮೆನನ್ ಅವರ 'ವಿಶ್ವ ಪರ್ಯಟನೆ' ಕೃತಿಗೆ ಮುನ್ನುಡಿ ಬರೆಯುತ್ತಾ "ಪ್ರವಾಸ ಮಾಡುವುದು ಒಳ್ಳೆಯದು. ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ"(ವರದರಾಜ ಹುಯಿಲುಗೋಳ., 'ಪ್ರವಾಸಸಾಹಿತ್ಯ' ಎಂಬ ಲೇಖನ 'ಪ್ರಬುದ್ಧ ಕರ್ನಾಟಕದ' ಚಿನ್ನದ ಸಂಚಿಕೆಯಲ್ಲಿ ೧೯೬೮., ಪು–೩೪೮)ಎಂದಿದ್ದಾರೆ. ಬರಗೂರು ರಾಮಚಂದ್ರಪ್ಪ ಅವರು ಪಿ. ಆರ್. ತಿಪ್ಪೇಸ್ವಾಮಿ ಅವರ 'ಕಲಾವಿದ ಕಂಡ

ಫ್ರಾನ್ಸ್' ಕೃತಿಗೆ ಮುನ್ನುಡಿ ಬರೆಯುತ್ತಾ ಪ್ರವಾಸವು "ಅನುಭವಗಳ ಪುನರಾವಲೋಕನ ಮತ್ತು ಪುನರ್ ಸಂಯೋಜನ ಪ್ರಕ್ರಿಯೆ. ಪ್ರವಾಸಕ್ಕೆ ನಿರ್ದಿಷ್ಟ ಉದ್ದೇಶ, ಮಾರ್ಗ ಎಲ್ಲವೂ ಇರುತ್ತದೆ. ಪರಿವೀಕ್ಷಣೆಯ ಒತ್ತಾಸೆಯಿರುತ್ತದೆ. ವ್ಯಕ್ತಿಯ ಒಳಹೊರಗುಗಳೆಲ್ಲ ಎಚ್ಚರಗೊಂಡು, ಕಣ್ಣೊಳಗೆ ಎಲ್ಲವನ್ನೂ ತುಂಬಿಕೊಂಡು ನೋಡುತ್ತವೆ"(ಪಿ.ಆರ್ ತಿಪ್ಪೇಸ್ವಾಮಿ., ಕಲಾವಿದ ಕಂಡ ಫ್ರಾನ್ಸ್., ಮುನ್ನುಡಿ., ಪು–iix)ಎಂದಿದ್ದಾರೆ. ನಾವು ನೋಡಿದ್ದನ್ನು ಬರೆಯುವಾಗ ಒಳಗಣ್ಣು ಮತ್ತೂ ಸ್ಪಷ್ಟವಾಗಿ ನೋಡುತ್ತದೆ. ಪ್ರವಾಸ ಕಥನವು ತಾವು ನೈಜವಾಗಿ ಪಡೆದ ಅನುಭವಗಳನ್ನು ಪುನಃ ಅವಲೋಕಿಸುವ ಅವಕಾಶವನ್ನು ನೀಡುತ್ತದೆ. ಅದರ ಮೂಲಕ ಅನುಭವಗಳನ್ನು ಮರುರಚಿಸಿ ಸಂಯೋಜಿಸುತ್ತದೆ.

ಹೇಮಲತಾ ಮಹಿಷಿ ಅವರು "ತಿಳಿಯದ ವಿಷಯಗಳನ್ನು ತಿಳಿಯಬೇಕೆಂಬ ಕುತೂಹಲವೇ ಮನುಷ್ಯನನ್ನು ಪ್ರವಾಸಿಯನ್ನಾಗಿಸಿತು ಎಂದು ನಾನು ಭಾವಿಸುತ್ತೇನೆ"(ಹೇಮಲತಾ ಮಹಿಷಿ., ಯೂರೋ–ದರ್ಶನ., ಪು–೧)ಎಂದಿದ್ದಾರೆ. ಪ್ರವಾಸದ ಉದ್ದೇಶ ಕೇವಲ ಮನೋರಂಜನೆ ಮಾತ್ರವಲ್ಲ. ತಿಳಿವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಕೂಡ ಪ್ರವಾಸ ಮಾಡಲಾಗುತ್ತದೆ. ತಮ್ಮ ಸ್ವಂತ ಸ್ಥಳದಿಂದ ಬೇರೆ ಸ್ಥಳಗಳಿಗೆ ಹೋದಾಗ ಆ ಪ್ರದೇಶವು ನಮ್ಮ ಕುತೂಹಲಕ್ಕೆ ಕಾರಣವಾಗುತ್ತದೆ. ಕುತೂಹಲವು ನೋಡಿದ ಸ್ಥಳಗಳ ಬಗ್ಗೆ ತಿಳಿಯಬೇಕೆಂಬ ಹಂಬಲವನ್ನು ಹುಟ್ಟಿಸುತ್ತದೆ. ಅಲ್ಲಿ ನೋಡಿ ಗ್ರಹಿಸಿ ಪಡೆದ ವಿಶಿಷ್ಟವಾದ ಅನುಭವಗಳು ನಮ್ಮ ಜ್ಞಾನ ವಿಸ್ತಾರಕ್ಕೆ ಕಾರಣವಾಗುತ್ತದೆ. ಆ ಅನುಭವಗಳನ್ನು(ಜ್ಞಾನವನ್ನು) ನಾವು ರಸವತ್ತಾಗಿ ಮತ್ತೊಬ್ಬರಲ್ಲಿ ಬಣ್ಣಿಸಿ ಹೇಳುತ್ತೇವೆ. ಪ್ರವಾಸ ಸಾಹಿತ್ಯ ಹುಟ್ಟಿಕೊಳ್ಳುವುದೇ ಇಂತಹ ಸಂದರ್ಭಗಳಲ್ಲಿ. ಗಳಿಸಿದ ಅನುಭವವನ್ನು ಬರವಣಿಗೆಯ ರೂಪಕ್ಕೆ ಇಳಿಸಿದರೆ ಸಾಹಿತ್ಯವಾಗುತ್ತದೆ. ಆದ್ದರಿಂದ ನಾವು ಪ್ರವಾಸ ಸಾಹಿತ್ಯದ ಪ್ರಾಚೀನತೆಯನ್ನು ಜನಪದ ಸಾಹಿತ್ಯದಿಂದಲೇ ಗುರುತಿಸಬಹುದು. ಬಾಗ್ದಾದಿನ ಸಿಂದಾಬಾದ್‌ನ ಸಮುದ್ರಯಾನದ ಸಾಹಸಗಳು, ಮಂಟೇಸ್ವಾಮಿಯ ಮಹಾಕಾವ್ಯ, ಮಲೆಮಹಾದೇಶ್ವರನ ಮಹಾಕಾವ್ಯ ಇದಕ್ಕೆ ನಿದರ್ಶನವಾಗಿದೆ. ಮಂಟೇಸ್ವಾಮಿ ಮತ್ತು ಮಲೆಮಹಾದೇಶ್ವರ ಕಾವ್ಯಗಳು ಚಲನಶೀಲ ಕೃತಿಗಳು. ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ ಗುಣಧರ್ಮವುಳ್ಳ ಕೃತಿಗಳು. ತಮ್ಮೊಳಗೆ ಒಂದು ಅನಿರ್ವಚನೀಯ ಪ್ರವಾಸಗಾಥೆಯನ್ನು ಹೊಂದಿರುವ ಕಲಾಶಿಲ್ಪಗಳು.

ಶಿಷ್ಟ ಸಾಹಿತ್ಯ ಪರಂಪರೆಯಲ್ಲಿ ವಿಶ್ವದ ಮೊದಲ ಪ್ರವಾಸ ಕೃತಿ ಯಾವುದು ಎನ್ನುವುದರ ಬಗ್ಗೆ ಏಕಾಭಿಪ್ರಾಯವಿಲ್ಲ. 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಸಂಶೋಧನೆ ಮಾಡಿದ ಅನುರಾಧ ಬಿ.ಟಿ. ಅವರು ಪೆಟ್ರಾರ್ಕ್ಸ್ (ಕ್ರಿ.ಶ. ೧೩೦೪–೧೩೭೪)ಅವರು ಬರೆದ 'ಅಸೆಂಟ್ ಆಫ್ ಮೌಂಟ್ ವೆಂಟೋಕ್ಸ್' ಎಂಬ ಕೃತಿಯೇ ವಿಶ್ವದ ಪ್ರಥಮ ಪ್ರವಾಸ ಸಾಹಿತ್ಯ ಕೃತಿ ಎಂದಿದ್ದಾರೆ. 'ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಉಗಮ ಮತ್ತು ವಿಕಾಸ' ಎಂಬ ಶೀರ್ಷಿಕೆಯಲ್ಲಿ ಸಂಶೋಧನೆ ಕೈಗೊಂಡ ಶೇಖರ ಸಿ. ಕೆ ಅವರು 'ದ ಜರ್ನಿಯಿಂಗ್ ಆಫ್ ದ ಮಾಸ್ಟರ್ ಆಫ್ ದ ಕ್ಯಾಪ್ಟೈನ್ ಆಫ್ ಈಜಿಪ್ಟ್' ಎಂಬ ಅನಾಮಧೇಯನ ಪುಸ್ತಕ ಜಾಗತಿಕ ಪ್ರವಾಸ ಸಾಹಿತ್ಯದ ಮೊದಲ ಕೃತಿ ಎಂದಿದ್ದಾರೆ. ಹೆಚ್. ಎಲ್. ನಾಗೇಗೌಡರು 'ಪ್ರವಾಸಿ ಕಂಡ ಇಂಡಿಯಾ' ಪುಸ್ತಕದಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಬಗ್ಗೆ, ಅವರ ಬರವಣಿಗೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಲೇಖಕರು ಈ ಕೃತಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಬರೆಹಗಳನ್ನು ಒಂದು ಕಡೆ ಸಂಗ್ರಹ ಮಾಡುವ ಕಾರ್ಯವನ್ನು ಮಾಡಿದ್ದಾರೆ. ಆದರೆ ಈ ಕೃತಿಯಲ್ಲಿಯೂ ವಿಶ್ವದ ಮೊದಲ ಪ್ರವಾಸ ಕೃತಿ ಯಾವುದು

ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ. ವಿಕಿಪೀಡಿಯಾದಲ್ಲಿ ಜಾಗತಿಕ ಪ್ರವಾಸ ಸಾಹಿತ್ಯದ ಬಗ್ಗೆ ಪರಿಶೀಲಿಸಿದಾಗ ಗ್ರೀಕ್ ನಾಗರಿಕತೆಯ ಸಂದರ್ಭದಲ್ಲಿಯೇ ಪ್ರವಾಸ ಕೃತಿಯನ್ನು ಬರೆಯಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಅದರ ಪ್ರಕಾರ 'ಪೌಸಾನಿಯಸ್' (ಕ್ರಿ.ಪೂ. ೧೧೦-೧೮೦)ಎಂಬ ಭೂಗೋಳತಜ್ಞ ಗ್ರೀಕ್ ದೇಶಕ್ಕೆ ಭೇಟಿ ನೀಡಿ ಬರೆದಿರುವ 'ಡಿಸ್ಕ್ರಿಪ್ಷನ್ ಆಫ್ ಗ್ರೀಸ್' ಎಂಬ ಬರೆಹ ಜಾಗತಿಕ ಪ್ರವಾಸದ ಮೊದಲ ದಾಖಲೆಯಾಗಿದೆ ಎಂದು ತಿಳಿದುಬರುತ್ತದೆ. ಜಾಗತಿಕ ಸಾಹಿತ್ಯದ ಮೊದಲ ಪ್ರವಾಸ ಕೃತಿಯು ಯುರೋಪ್ ಖಂಡದಲ್ಲಿಯೇ ರಚಿತವಾಗಿದೆ.

ಪ್ರವಾಸ ಸಾಹಿತ್ಯಕ್ಕೆ ಪಂಚೇಂದ್ರಿಯಗಳಿಂದ ಪಡೆದ ಅನುಭವವೆ ಮೂಲ ಸರಕು. ಸಾಮಾನ್ಯ ಅರ್ಥದಲ್ಲಿ 'ಪ್ರವಾಸ' ಎಂದರೆ 'ಒಂದು ನಿರ್ದಿಷ್ಟ ಉದ್ದೇಶದೊಂದಿಗೆ, ತಕ್ಕ ಯೋಜನೆಯೊಂದಿಗೆ, ಮನೋರಂಜನೆಯ ಕಾರಣದಿಂದ ವ್ಯಕ್ತಿ ಅಥವಾ ಗುಂಪು ಕೈಗೊಳ್ಳುವ ಪ್ರಯಾಣವೇ ಪ್ರವಾಸ'. ಬೆಂಗಳೂರು ವಿಶ್ವವಿದ್ಯಾಲಯದಿಂದ ಗುರುಪ್ರಸಾದ್ ಎಂಬುವವರ ಮಾರ್ಗದರ್ಶನದಲ್ಲಿ 'ಸಾಹಿತಿಗಳ ವಿದೇಶ ಪ್ರವಾಸ : ಒಂದು ತೌಲನಿಕ ಅಧ್ಯಯನ' ಎಂಬ ಪ್ರಬಂಧ ಮಂಡಿಸಿರುವ ನಳಿನಾ ಎಸ್. ಅವರು ಪ್ರವಾಸ ಎಂಬ ಪದವನ್ನು ನಿರ್ವಚಿಸುತ್ತಾ 'ಪ್ರವಾಸಿ ತಾನು ಚಾಕ್ಷುಷದಲ್ಲಿ ಕಂಡ ಬದುಕಿನ ವಿಸ್ತಾರಗಳನ್ನು ಅಕ್ಷರದಲ್ಲಿ ಹಿಡಿದಿಡುವ ಪ್ರಯತ್ನ' ಎಂದಿದ್ದಾರೆ. ಪ್ರವಾಸಕ್ಕೆ ನಿರ್ಧಿಷ್ಟವಾದ (ಖಚಿತವಾದ ಅದರ ಸ್ವರೂಪ, ಲಕ್ಷಣ ಹೀಗೆ ಪೂರ್ಣ ಅರ್ಥವನ್ನು ಒಳಗೊಂಡಂತೆ) ಒಂದು ವ್ಯಾಖ್ಯೆಯನ್ನು ಹೇಳಲಾಗುವುದಿಲ್ಲ. ಇದಕ್ಕೆ ಕಾರಣ ಕಾಲ ದೇಶ ಸಂದರ್ಭಕ್ಕೆ ಅನುಗುಣವಾಗಿ ಅದರ ವ್ಯಾಪ್ತಿ, ಸ್ವರೂಪ, ಲಕ್ಷಣಗಳು ಬದಲಾಗುತ್ತಿರುತ್ತದೆ. ಪ್ರವಾಸ ಜೀವನದ ಅವಿಭಾಜ್ಯ ಅಂಗವಾಗಿದೆ. ಪ್ರವಾಸ ಎನ್ನುವುದು ಮಾನವ ನಾಗರಿಕನಾಗುವ ಮೊದಲಿನಿಂದಲೇ ಇರುವಂತಹದ್ದು. ಆಹಾರಕ್ಕಾಗಿ, ಉಪಜೀವನ ನಿರ್ವಹಣೆಗಾಗಿ ಆದಿಮಾನವ ಅಲೆಮಾರಿಯಾಗಿದ್ದ. ತಾನು ನಾಗರಿಕನಾಗಿ ಬೆಳೆದಂತೆಲ್ಲಾ ಧಾರ್ಮಿಕ ಕಾರಣಕ್ಕಾಗಿಯೋ, ಜ್ಞಾನ ದಾಹ ನೀಗಿಸಿಕೊಳ್ಳಲೋ, ಸಾಮ್ರಾಜ್ಯ ವಿಸ್ತರಣೆಗೋ, ಪರ ದೇಶ/ಖಂಡಗಳನ್ನು ಹುಡುಕಲು ಪ್ರವಾಸ ಮಾಡಿದ. ಪ್ರವಾಸ ಎಂಬ ಪರಿಕಲ್ಪನೆ ಹೀಗೆ ಮೂಡಿರಬಹುದು. ಇಂದು ಈ ಕಲ್ಪನೆ ವಿಸ್ತರಿಸುತ್ತಾ ಹೋಗಿ ಪ್ರಪಂಚವೆ 'ವಿಶ್ವಗ್ರಾಮ'ವಾಗಿ ರೂಪಗೊಂಡಿದೆ. ಮತ್ತು ಅದರ ಆಳ ವಿಸ್ತಾರಗಳು ಚಾಚಿಕೊಳ್ಳುತ್ತಲೇ ಇದೆ. ಚಂದ್ರನ ಅಂಗಳಕ್ಕೆ ಮಾನವ ಪ್ರವಾಸ ಮಾಡಿದ್ದರೆ; ಮಂಗಳನ ಅಂಗಳಕ್ಕೆ ಮಾನವ ನಿರ್ಮಿತ ಯಂತ್ರಗಳು ಪ್ರಯಾಣ ಮಾಡಿವೆ. ಹೀಗೆ ಪ್ರವಾಸದ ರೂಪ ರೇಖೆಗಳು ವಿಸ್ತರಿಸಿಕೊಳ್ಳುತ್ತಲೇ ಹೋಗುವುದರಿಂದ ಅದಕ್ಕೊಂದು ವ್ಯಾಖ್ಯೆಯ ಚೌಕಟ್ಟು ಹಾಕಿ ಕೂಡಿಡುವ ಪಾಡು ಬೇಡವೆಂಬುದೇ ಸರಿಯಾದ ನಡೆ ಎನಿಸುತ್ತದೆ.

ಭಾರತದ ಇತಿಹಾಸದಲ್ಲಿ ಹದಿನೆಂಟನೆಯ ಶತಮಾನ ಒಂದು ಮಹತ್ವಪೂರ್ಣ ಕಾಲಘಟ್ಟ. ಯುರೋಪಿಯನ್ನರ ಆಗಮನ ಭಾರತೀಯ ಜನ ಜೀವನದಲ್ಲಿ ಮಹತ್ತರವಾದ ಬದಲಾವಣೆಯ ಗಾಳಿ ಬೀಸ ತೊಡಗಿದ ಕಾಲ. "ದೇಶ ಸುತ್ತು ಕೋಶ ಓದು" ಎಂಬ ಗಾದೆ ಮಾತಿನಂತೆ ಜ್ಞಾನದ ಹೊಸ ಮಾರ್ಗವನ್ನು ತೋರಿದ ಕಾಲ. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ೨೦ನೇ ಶತಮಾನದ ಹೊತ್ತಿಗೆ ಜನರ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಹೊಸ ಚಿಂತನೆಗಳು ಮೂಡ ತೊಡಗಿದ್ದವು. ಇದರ ಫಲವಾಗಿ ಸಾಹಿತ್ಯದಲ್ಲೂ ಕಥೆ, ನಾಟಕ, ಕಾದಂಬರಿ, ಆತ್ಮಕಥೆಯ ಜೊತೆಗೆ 'ಪ್ರವಾಸ ಸಾಹಿತ್ಯ' ಎಂಬ ಹೊಸ ಸಾಹಿತ್ಯ ಪ್ರಕಾರವು ಮೂಡಿಬಂದಿತು. ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ಇಂದು ವಿಪುಲವಾಗಿ ರಚಿತವಾಗಿವೆ. 'ನದಿ ದಾಟಿ ಪ್ರವಾಸ ಮಾಡಬಾರದು' ಎಂಬ ನಂಬಿಕೆಯೊಂದಿಗೆ ಬದುಕಿದ ಸಂಸ್ಕೃತಿಯೊಂದು ತನ್ನನ್ನು ತಾನು ತೆರೆದುಕೊಳ್ಳುವ

ಮೂಲಕ ಹೊಸ ಜಗತ್ತಿನ ಹೊಸ ಬದುಕನ್ನು ಕಣ್ತೆರೆದು ನೋಡಿತು. ಆ ತನ್ನ ಅನುಭವಗಳನ್ನು ದಾಖಲಿಸಿದ ಬರೆಹಗಳಿಂದು ಅಪಾರ ಪ್ರಮಾಣದಲ್ಲಿದೆ. ಇವುಗಳನ್ನು ಸ್ಥೂಲವಾಗಿ 'ಪ್ರವಾಸ ಕಥನಗಳು' ಎಂದು ಕರೆಯಲಾಗಿದೆ. ಬ್ರಿಟೀಷರ ಆಡಳಿತ ಪೂರ್ವದಲ್ಲಿಯೇ ಕನ್ನಡದಲ್ಲಿ ಪ್ರವಾಸ ಕಥನದ ಎಳೆಗಳು ಅಲ್ಲಲ್ಲಿ ಕಂಡುಬರುತ್ತದೆ. ಮನುಷ್ಯನ ಒಳಗಣ ಕುತೂಹಲ ಮತ್ತು ಸಂಶೋಧನ ಗುಣಗಳು ಪ್ರವಾಸ ಕಥನಗಳ ಬರೆಹಕ್ಕೆ ಮೂಲವಾಗುತ್ತದೆ. ಹೊಸತನ್ನು ನೋಡುವ, ಅವುಗಳನ್ನು ವಿವೇಚಿಸುವ, ವೈಚಾರಿಕ ದೃಷ್ಟಿಕೋನದ ಜೊತೆಗೆ ಮಾನವನಿಗಿರುವ ಸೌಂದರ್ಯ ಪ್ರಜ್ಞೆ ಪ್ರವಾಸ ಕಥನಗಳಲ್ಲಿ ಹಾಸುಹೊಕ್ಕಾಗಿರುತ್ತದೆ. ಮತ್ತು ಇದು ಜ್ಞಾನಕೋಶ ಪರಿಧಿಯ ವಿಸ್ತರಣೆಗೆ ಅವಕಾಶವನ್ನು ಒದಗಿಸುತ್ತದೆ. ಮನುಷ್ಯನ ಈ ಗುಣವೇ ಪ್ರವಾಸ ಹಾಗೂ ಪ್ರವಾಸ ಕಥನಗಳಿಗೆ ಕಾರಣವಾಗಿದೆ.

'ಪ್ರವಾಸ ಹೋಗುವುದು, ಬರುವುದು ಮಾತ್ರವಲ್ಲ, ಬದಲಿಗೆ ಅದನ್ನು ಅಕ್ಷರಗಳಲ್ಲಿ ಮೂಡಿಸಿ ಶಾಶ್ವತಗೊಳಿಸಬೇಕು' ಎಂದು ಬಿ.ಎ. ವಿವೇಕ ರೈ ಅವರು ಹೇಳಿದ್ದಾರೆ. ಅವರು 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಎಂಬ ಲೇಖನದಲ್ಲಿ 'ಹೊರದೇಶಗಳಿಗೆ ಪ್ರವಾಸ ಹೋಗುವವರು ಪ್ರವಾಸ ಕೃತಿಯನ್ನು ಬರೆಯಲೇಬೇಕು, ಇಲ್ಲದಿದ್ದರೆ ಅವರು ದೇಶಕ್ಕೆ ದ್ರೋಹ ಬಗೆದಂತೆ, ಆತ್ಮವಂಚನೆ ಮಾಡಿಕೊಂಡಂತೆ, ಸಂಪತ್ತಿನ ಅಪವ್ಯಯ ಮಾಡಿದಂತೆ. ಕೇವಲ ಹೋದ ಪುಟ್ಟ ಬಂದ ಪುಟ್ಟ ಎಂದರೆ ಆಗದು ಅಣ್ಣಪ್ಪನ ದಂಡಿಗೆ ಹೋದರೂ ಒಂದೆ ಇಲ್ಲದಿದ್ದರು ಒಂದೆ'(ಬಿ.ಎ. ವಿವೇಕ ರೈ., ಕನ್ನಡದಲ್ಲಿ ಪ್ರವಾಸ ಸಾಹಿತ್ಯ., ಪ್ರಬುದ್ಧ ಕರ್ನಾಟಕ., ಅಶ್ವಯುಜ ಸಂಚಿಕೆ., ಪು-೯೫) ಎಂದು ಹೇಳಿದ್ದಾರೆ. ಆದರೆ ಪ್ರವಾಸ ಹೋದವರೆಲ್ಲರೂ ಕೃತಿ ರಚಿಸುವುದಿಲ್ಲ. ರಚಿತಗೊಂಡ ಪ್ರವಾಸ ಕೃತಿಗಳೆಲ್ಲವು ಜನಮನ್ನಣೆ ಪಡೆಯುವುದಿಲ್ಲ. ಇದಕ್ಕೆ ಕಾರಣ ಪ್ರವಾಸದಲ್ಲಿ ಪಡೆದ ಅನುಭವಗಳನ್ನು ಬರೆಯುವ ಕಲೆ ಕೆಲವರಿಗೆ ಮಾತ್ರ ಒಲಿದಿದ್ದು, ತೌಲನಿಕ ವಿವೇಚನೆ, ಸೂಕ್ಷ್ಮ ದೃಷ್ಟಿಕೋನ, ಒಳನೋಟ, ಸಾಂಸ್ಕೃತಿಕ ಸ್ವಯಂ ಸಂಸ್ಕಾರ, ಎಂತಹ ಪರಿಸ್ಥಿತಿಯನ್ನು ಬೇಕಾದರೂ ಎದುರಿಸುತ್ತೇನೆ ಎಂಬ ಧೈರ್ಯ, ತಾನು ಹೋದ ರಾಷ್ಟ್ರಗಳ ಬಗ್ಗೆ ಸವಿಸ್ತಾರವಾದ ಜ್ಞಾನ, ಪರಿಸ್ಥಿತಿಗೆ ತಕ್ಕ ಚಾಕಚಕ್ಯತೆ, ಬರವಣಿಗೆಯ ಹದವಾದ ಕೈ, ಮೊದಲಾದ ವಿಶೇಷ ಸರಕುಗಳು ಇರುವುದು ಅಗತ್ಯ. ಇವುಗಳ ಮೂಲ ಅರಿತ ಕನ್ನಡದ ಹಲವಾರು ಲೇಖಕರು ಈ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿ ಅನೇಕ ಕೃತಿಗಳನ್ನು ಬರೆದಿದ್ದಾರೆ.

ಪ್ರವಾಸ ಕೃತಿಗಳು ತಾವು ದರ್ಶಿಸಿದ ಸಮಾಜದ ಜೀವನಕ್ರಮವನ್ನು ಕುರಿತು ಹೇಳುತ್ತವೆ. ಯುರೋಪ್ ಪ್ರವಾಸ ಕೃತಿಗಳಲ್ಲಿಯೂ ಸಮಾಜದ ಜೀವನಕ್ರಮಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಸಮಾಜದ ಆಗುಹೋಗುಗಳನ್ನು, ರೂಢಿ, ಸಂಪ್ರದಾಯಗಳನ್ನು ಒಳಗಣ್ಣಿನಿಂದ ಕಂಡು ನಿರೂಪಿಸುವ ಕೃತಿಗಳು ಹಲವಾರಿವೆ. ಕೆಲವು ಪ್ರವಾಸ ಕೃತಿಗಳು ಕೇವಲ ಪ್ರವಾಸಿಗನ ಅನುಭವಗಳ ವಿವರಗಳಾಗಿ ಮಾತ್ರ ಉಳಿದುಬಿಡುತ್ತವೆ. ಕೆಲವೇ ಕೆಲವು ಪ್ರವಾಸ ಕೃತಿಗಳು ದೇಶದ ಅಥವಾ ಜನಾಂಗದ ಮುಖವಾಣಿಯಾಗಿ ವ್ಯಾಪಕತೆಯನ್ನು ಪಡೆದುಕೊಳ್ಳುತ್ತವೆ. ದೊಡ್ಡೇರಿ ವೆಂಕಟಗಿರಿರಾವ್ ಅವರು ಹೇಳುವಂತೆ ಪ್ರವಾಸಿ ಲೇಖಕ "ಮುಕ್ಕಣ್ಣನೇ ಆಗಬೇಕು, ನೋಡಲು ಎರಡು ಹೊರಗಣ್ಣು, ಅರ್ಥೈಸಿಕೊಳ್ಳಲು ಒಂದು ಜ್ಞಾನಚಕ್ಷು, ನೋಡುವವನಿಗೆ ಇರಬಹುದಾದ ಕಲಾಪ್ರಜ್ಞೆ, ಇತಿಹಾಸ ಮತ್ತು ವಾಸ್ತುಶಾಸ್ತ್ರ ಪರಿಚಯ, ಜೊತೆಗೆ ತಂತ್ರ ಕೌಶಲಗಳ ತಿಳಿವುಗಳನ್ನು ಅವಲಂಬಿಸಿದೆ. ಅವನ ಆನಂದಾನುಭೂತಿಯ ಮಟ್ಟ"(ಏಕಾಕಿ ಪ್ರವಾಸಿ., ದೊಡ್ಡೇರಿ ವೆಂಕಟಗಿರಿರಾವ್., ಪು-೧೨)ಎಂದಿದ್ದಾರೆ. ಲೇಖಕ ಕಂಡ ದೃಶ್ಯಗಳನ್ನು ಅರ್ಥೈಸಿಕೊಂಡು ಬರೆವಣಿಗೆಗೆ

ಇಳಿಸಲು ಒಳಗಣ್ಣು ಬಹುಮುಖ್ಯವಾದುದು. ಪ್ರವಾಸಿ ಲೇಖಕನಿಗೆ ಸಾಮಾನ್ಯ ಪ್ರವಾಸಿಗನಿಂದ ಬೇರ್ಪಡಿಸುವ ವಿಶೇಷವಾದ ಸೌಂದರ್ಯಪ್ರಜ್ಞೆ, ನೂತನ ದೃಷ್ಟಿಕೋನ ಇರಬೇಕು ಎಂದು ಹೇಳಿದ್ದಾರೆ.

ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿಶ್ಲೇಷಿಸಲಾಗಿದೆ.

೧. ಯಾವುದೇ ಸಮಾಜದ ಸಂಸ್ಕೃತಿ, ಜನಜೀವನ, ಆಚರಣೆ ಸಂಪ್ರದಾಯಗಳ ತಿರುಳನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಪ್ರವಾಸಕ್ಕೆ ಹೋದ ಅಲ್ಪ ದಿನಗಳಲ್ಲಿ ಸಾಧ್ಯವಿಲ್ಲ.

೨. ಲೇಖಕರು ತಾವು ಕಂಡ ದೃಶ್ಯಗಳನ್ನು ನೋಡಿ ಗ್ರಹಿಸಿದ ಪ್ರಮಾಣಕ್ಕೂ, ಗ್ರಹಿಸಿಕೊಂಡ ಅಂಶಗಳನ್ನು ಬರೆಹದಲ್ಲಿ ವ್ಯಕ್ತಪಡಿಸಿದ ಪ್ರಮಾಣಕ್ಕೂ ವ್ಯತ್ಯಾಸಗಳಿರುತ್ತವೆ.

೩. ಲೇಖಕರು ಪ್ರವಾಸದಲ್ಲಿ ನೋಡಿದ ದೃಶ್ಯಗಳನ್ನು ತಮ್ಮ ದೃಷ್ಟಿಕೋನಗಳ ಮೂಲಕ ಪದಗಳಲ್ಲಿ ಬರೆಯುವಾಗ ಅದರ ಅಧಿಕೃತತೆಯ ಬಗ್ಗೆ ಪ್ರಶ್ನೆಗಳು ಮೂಡುವುದು ಸಹಜವಾಗಿದೆ.

'ಭೌತಿಕ ವಸ್ತುಗಳ ವಿವರಗಳನ್ನು ಅಂಕಿಅಂಶಗಳ ಸಮೇತ ನೀಡಬಹುದು, ಆದರೆ ನೋಡಿ ಸಂವೇದನೆಗೆ ಕಾರಣವಾದ ಅಂಶಗಳನ್ನು ಬರೆವಣಿಗೆಯಲ್ಲಿ ನೂರಕ್ಕೆ ನೂರರಷ್ಟು ವ್ಯಕ್ತಪಡಿಸಲು ಸಾಧ್ಯವಿಲ್ಲ' ಎಂಬ ಮಿತಿಯನ್ನು ಗಮನದಲ್ಲಿರಿಸಿಕೊಂಡು ಪ್ರವಾಸ ಕೃತಿಯಲ್ಲಿ ಅಭಿಪ್ರಾಯಗಳ ಮೂಲಕ ವ್ಯಕ್ತವಾಗುವ ಸಂವೇದನೆಗಳನ್ನು ಪರಿಗಣಿಸಿ ಅಧ್ಯಯನ ಮಾಡಲಾಗಿದೆ.

ಪ್ರವಾಸವು ವೈಯಕ್ತಿಕವಾಗಿ ವಿಶೇಷವಾದ ಆಸಕ್ತಿಯನ್ನು ಕೆರಳಿಸುವಂತದ್ದು. ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಪ್ರವಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನೆಗಳು ವಿರಳವಾಗಿದೆ. ಅಧ್ಯಯನಕ್ಕೆ ಹೆಚ್ಚು ಅವಕಾಶಗಳಿರುವುದನ್ನು ಗಮನದಲ್ಲಿರಿಸಿಕೊಂಡು ಪ್ರವಾಸ ಸಾಹಿತ್ಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಎಸ್. ವಿದ್ಯಾಶಂಕರ್ ಅವರು ಪ್ರವಾಸಿಗಳನ್ನು ಹವ್ಯಾಸಿ ಪ್ರವಾಸಿಗಳು ಮತ್ತು ನಿಯೋಗಿ ಪ್ರವಾಸಿಗಳು ಎಂದು ಎರಡು ಭಾಗಗಳಾಗಿ ವಿಭಾಗಿಸಿದ್ದಾರೆ. ಧಾರ್ಮಿಕ ಕಾರಣಕ್ಕಾಗಿ ತೀರ್ಥ ಪ್ರವಾಸ ಹೋಗುವವರನ್ನು ನಿಯೋಗಿ ಪ್ರವಾಸಿಗಳು ಎಂದಿದ್ದಾರೆ. ಪ್ರಸ್ತುತ ಭಾರತದಲ್ಲಿ ಆಚರಣೆಯಲ್ಲಿರುವ ಎಲ್ಲಾ ಧರ್ಮಗಳಲ್ಲಿಯೂ ಧಾರ್ಮಿಕ ಕಾರಣಕ್ಕಾಗಿ ಪ್ರವಾಸ ಹೋಗುವ ಸಂಪ್ರದಾಯವಿದೆ. ಅಧ್ಯಯನದ ಉದ್ದೇಶದಿಂದ ಅಥವಾ ಮನೋರಂಜನೆಯ ಉದ್ದೇಶದಿಂದ ನಡೆಯುವ ಪ್ರವಾಸವನ್ನು ಹವ್ಯಾಸಿ ಪ್ರವಾಸ ಎಂದಿದ್ದಾರೆ. ಹವ್ಯಾಸಿ ಪ್ರವಾಸಕ್ಕೆ 'ಶೈಕ್ಷಣಿಕ ಪ್ರವಾಸ' ಉತ್ತಮ ಉದಾಹರಣೆಯಾಗಿದೆ. ವಿವಿಧ ಪ್ರದೇಶಗಳ ಸಂಸ್ಕೃತಿ, ಆಚರಣೆಗಳು ತಿಳಿದುಕೊಳ್ಳಬೇಕಾದರೆ ನಾವು ಆ ಪ್ರದೇಶಕ್ಕೆ ಭೇಟಿ ನೀಡಬೇಕು. ಅದು ಪ್ರವಾಸದಿಂದ ಸಾಧ್ಯವಾಗುತ್ತದೆ. ಶಿಕ್ಷಣವೇ ಪ್ರಮುಖವಾದ ಇಂದಿನ ಕಾಲದಲ್ಲಿ ಶೈಕ್ಷಣಿಕ ಪ್ರವಾಸಗಳ ಮೂಲಕ ನಡೆಯುವ ಅಧ್ಯಯನ ಒಂದು ಉತ್ತಮ ಬೋಧನಾ ವಿಧಾನವಾಗಿದೆ. ತರಗತಿ ಕೊಠಡಿಯ ನಾಲ್ಕು ಗೋಡೆಗಳ ಮಧ್ಯೆ ನೀಡುವ ಶಿಕ್ಷಣದಿಂದ ವಿದ್ಯಾರ್ಥಿಯ ಸರ್ವತೋಮುಖ ಪ್ರಗತಿ ಸಾಧ್ಯವಾಗುವುದಿಲ್ಲ. ದೇಶ ವಿದೇಶಗಳನ್ನು ಜ್ಞಾನಾರ್ಜನೆಯ ದೃಷ್ಟಿಯಿಂದ ಸಂದರ್ಶಿಸಿದಾಗ ಶಿಕ್ಷಣದಿಂದ ದೊರೆಯುವ ಜ್ಞಾನಕ್ಕೆ ಪೂರಕವಾದ ಜ್ಞಾನವನ್ನು ಪ್ರಾಯೋಗಿಕ ನೆಲೆಯಲ್ಲಿ ಪಡೆಯಲು ಸಾಧ್ಯವಾಗುತ್ತದೆ. ಯುರೋಪ್ ಪ್ರವಾಸ ಕೃತಿಗಳೆಲ್ಲಾ ಉನ್ನತ ಶಿಕ್ಷಣವನ್ನು ಪಡೆಯುವ ಉದ್ದೇಶದಿಂದ ಮತ್ತು ಮನೋರಂಜನೆಯ ಉದ್ದೇಶದಿಂದ ರಚಿತವಾಗಿರುವುದರಿಂದ ಹವ್ಯಾಸಿ ಪ್ರವಾಸಿಗಳ ಗುಂಪಿಗೆ ಸೇರುತ್ತದೆ.

ಕನ್ನಡದ ಪ್ರವಾಸ ಸಾಹಿತ್ಯದ ಪ್ರಾರಂಭಿಕ ಬರೆಹದ ಕಡೆಗೆ ಗಮನ ಹರಿಸಿದಾಗ ಪ್ರವಾಸ ಸಾಹಿತ್ಯದ ಮೊದಲ ಹೆಜ್ಜೆಗಳಾಗಿ ಅನೇಕ ಪತ್ರಿಕಾ ಲೇಖನಗಳು, ಅಂಕಣ ಬರಹಗಳು ಕೆಲವು ಕೃತಿಗಳು ಕಂಡು ಬರುತ್ತವೆ.[೨]

೧. ೨ ಅಧ್ಯಯನದ ಉದ್ದೇಶ

ಕನ್ನಡದಲ್ಲಿ ಪ್ರಕಟವಾಗಿರುವ ಯುರೋಪ್ ಪ್ರವಾಸ ಕೃತಿಗಳಲ್ಲಿ ವ್ಯಕ್ತವಾಗಿರುವ ಲೇಖಕರ ಅಭಿಪ್ರಾಯಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದೆ. ಅಭಿಪ್ರಾಯಗಳು ಲೇಖಕರ ವಿಭಿನ್ನ ಮನೋಧರ್ಮವನ್ನು ಹಾಗೂ ವಿವಿಧ ದೃಷ್ಟಿಕೋನಗಳನ್ನು ತಿಳಿಸುತ್ತವೆ. ಬೇರೆ ಬೇರೆ ವಯಸ್ಸಿನ, ವಿಭಿನ್ನ ಪರಿಸರದ ಹಿನ್ನೆಲೆಯನ್ನು ಹೊಂದಿರುವ, ವೈಚಾರಿಕ ಪ್ರಜ್ಞೆಯುಳ್ಳ ಲೇಖಕರ ಚಿಂತನೆಗಳ ಅಧ್ಯಯನ ಕುತೂಹಲಕಾರಿಯಾಗಿದೆ. ವಿದೇಶ ಪ್ರವಾಸಕ್ಕೆ ತೆರಳಲು ಕಾರಣವೇನು? ಅದರ ಹಿನ್ನೆಲೆಗಳು ಏನು? ಉದ್ದೇಶಗಳೇನು? ಸ್ಥಳ ಆಯ್ಕೆಗಳಲ್ಲಿ ಅವರ ಮನೋಧರ್ಮ ನಿರ್ವಹಿಸುವ ಪಾತ್ರವೇನು? ಒಂದೇ ದೇಶ/ಸ್ಥಳಗಳಿಗೆ ಪ್ರವಾಸ ಮಾಡಿದ ಬೇರೆ ಬೇರೆ ಬರೆಹಗಳಲ್ಲಿನ ವೈವಿಧ್ಯತೆಗೆ ಕಾರಣಗಳೇನು? ಬರೆಹಗಳಲ್ಲಿನ ಚಿಂತನೆಗಳ ಒತ್ತು ಯಾವ ವಿಚಾರಗಳಿಗೆ ಇದೆ? ಯುರೋಪಿನ ದೇಶಗಳನ್ನು ಕಾಣುವ ಭಾರತೀಯ ಲೇಖಕರಲ್ಲಿರುವ ಕುತೂಹಲಗಳೇನು? ಈ ಪ್ರಶ್ನೆಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದೆ.

ಪ್ರತಿಯೊಬ್ಬ ಲೇಖಕನು ಪ್ರವಾಸ ಮಾಡುವಾಗ ನಿರ್ದಿಷ್ಟ ಉದ್ದೇಶ ಹೊಂದಿರುತ್ತಾನೆ. ಎಲ್ಲರ ಉದ್ದೇಶ ಒಂದೇ ಆಗಿರುವುದಿಲ್ಲ. ಸ್ಥಳ ಆಯ್ಕೆಯಲ್ಲೂ ಲೇಖಕರ ನಡುವೆ ವೈವಿಧ್ಯತೆ ಕಂಡುಬರುತ್ತದೆ. ಲೇಖಕ ತನ್ನ ಮನೋಭಾವನೆಗಳಿಗೆ ಹೊಂದಾಣಿಕೆಯಾಗುವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಸ್ಥಳ ಆಯ್ಕೆಯು ಪ್ರವಾಸಿ ಲೇಖಕನ ಮನೋಧೋರಣೆಯನ್ನು ಸೂಚಿಸುತ್ತದೆ. ಒಬ್ಬ ಸಾಮಾನ್ಯ ಪ್ರವಾಸಿ, ಕಲಾವಿದ, ಸಂಗೀತಗಾರ, ನಿರ್ದೇಶಕ, ವೈದ್ಯ, ಶಿಕ್ಷಣತಜ್ಞ, ಇತಿಹಾಸಕಾರ, ಲೇಖಕ, ನಾಟಕಕಾರ, ವ್ಯಾಪಾರಿ, ಮಠದ ಸ್ವಾಮಿ, ನಿರೀಶ್ವರವಾದಿ, ಪತ್ರಕರ್ತ, ಉಪಕುಲಪತಿ, ಭೂ ವಿಜ್ಞಾನಿ ಮೊದಲಾದ ವಿಭಿನ್ನ ಕ್ಷೇತ್ರಗಳ ಹಿನ್ನೆಲೆ ಹೊಂದಿರುವವರು ತಮ್ಮ ತಮ್ಮ ಆಸಕ್ತಿಯ ಆಧಾರದ ಮೇಲೆ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇವರು ನಿರ್ದಿಷ್ಟ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಅವರ ಮೇಲೆ ಪ್ರಭಾವ ಬೀರಿದ ಅಂಶಗಳು ಯಾವುವು? ಎಂಬುದು ಕುತೂಹಲಕಾರಿಯಾಗಿದೆ. ಪ್ರತಿಯೊಬ್ಬ ಪ್ರವಾಸಿಯ ದೃಷ್ಟಿಕೋನ ವಿಭಿನ್ನವಾದುದು. ಈ ವಿಭಿನ್ನ ದೃಷ್ಟಿಕೋನಗಳ ಅಭಿಪ್ರಾಯಗಳನ್ನು ಅದು ಪ್ರಕಟಿಸುವ ಸಂವೇದನೆಗಳ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಬಸವರಾಜ ಕಟ್ಟಿಮನಿ, ಪಾಟೀಲ ಪುಟ್ಟಪ್ಪ, ಶ್ರೀರಂಗ, ಶ್ರೀರಂಗರಾಜ್ ಮೊದಲಾದ ದೇಶದ ಬೇರೆ ಬೇರೆ ರಂಗದ ಸಾಧಕರನ್ನು ಸೋವಿಯತ್ ದೇಶವು ಆಹ್ವಾನಿಸಿತ್ತು. ಇದಕ್ಕೆ ಕಾರಣವೇನು? ಆ ದೇಶದ ಹಿತಾಸಕ್ತಿಗಳೇನು? ಲೇಖಕರ ಯಾವ ಹಿತಾಸಕ್ತಿಗಳು ಅದೇ ದೇಶಕ್ಕೆ ಹೋಗುವಂತೆ ಮಾಡಿದೆ? ಆ ದೇಶದ ಹಿತಾಸಕ್ತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿರುವ ಕೃತಿಗಳಲ್ಲಿ ಕೃತಿಕಾರರು ಪ್ರತಿಕ್ರಿಯಿಸಿರುವ ಬಗೆ ಹೇಗೆ? ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಮತ್ತು ಈ ರಾಷ್ಟ್ರಗಳ ವೈವಿಧ್ಯತೆ ಮತ್ತು ಸಂಸ್ಕೃತಿಯನ್ನು ಕನ್ನಡ ಲೇಖಕರು ಕಂಡಿರುವ ದೃಷ್ಟಿಕೋನವನ್ನು ವಿಶ್ಲೇಷಿಸಲಾಗಿದೆ.

ದಿನಚರಿ ರೂಪದ ಪ್ರವಾಸ ಕೃತಿಗಳಿಗೂ ದಿನಚರಿ ರೂಪದಲ್ಲಿ ಬರೆಯದ, ಸಮಗ್ರ ನೋಟದೊಂದಿಗೆ ಬರೆದಿರುವ ಪ್ರವಾಸ ಕೃತಿಗಳಿಗೂ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ತೌಲನಿಕವಾಗಿ ವಿಮರ್ಶೆ ಮಾಡಲಾಗಿದೆ.

ಲೇಖಕರು ತಮ್ಮ ಪ್ರವಾಸ ಕೃತಿಗಳಲ್ಲಿ ಚಾರಿತ್ರಿಕ ದೃಷ್ಟಿಕೋನದಿಂದ ಪ್ರವಾಸಿ ಸ್ಥಳಗಳನ್ನು ವಿವರಿಸಿದ್ದಾರೆ. ಅವರ ಚಾರಿತ್ರಿಕ ಪ್ರಜ್ಞೆಗೆ ಕಾರಣವೇನು? ಚಾರಿತ್ರಿಕ ಅಂಶಗಳನ್ನು ನಿವೇದಿಸಿಕೊಳ್ಳಲು ಅವರ ಮೇಲಿದ್ದ ಒತ್ತಡಗಳೇನು? ಚಾರಿತ್ರಿಕ ಸಂಗತಿಗಳೊಂದಿಗೆ ಪ್ರವಾಸಿ ಲೇಖಕರು ಒಡನಾಡುವ ಬಗೆ ಹೇಗೆ ಎಂಬ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡದ ಯುರೋಪ್ ಪ್ರವಾಸ ಕೃತಿಗಳಲ್ಲಿ ಚರ್ಚಿತವಾಗಿರುವ ಶೈಕ್ಷಣಿಕ ಪದ್ಧತಿಯ ಬೋಧನಾ ವಿಧಾನಗಳು, ಸಂವಹನ ಮಾಧ್ಯಮ, ಔದ್ಯೋಗಿಕ ನೆಲೆಯಲ್ಲಿ ಶಿಕ್ಷಣದ ಕ್ರಮಗಳು ಮೊದಲಾದ ಶೈಕ್ಷಣಿಕ ಚಟುವಟಿಕೆಗಳ ಬಗೆಗಿನ ಅಭಿಪ್ರಾಯಗಳನ್ನು ಆಧರಿಸಿ ವಿಷಯಗಳನ್ನು ಕ್ರೋಢೀಕರಿಸಿ ಭಾರತೀಯ ಶಿಕ್ಷಣದ ಪದ್ಧತಿಯೊಂದಿಗೆ ಹೋಲಿಸಲಾಗಿದೆ. ಶಿಕ್ಷಣ ಪದ್ಧತಿಯ ಉಚಿತವಾದ ಕ್ರಮಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಭಾರತೀಯ ಸಮಾಜದ ಆಚರಣೆ, ಸಂಪ್ರದಾಯಗಳಿಂದ ಪ್ರೇರಿತರಾದ ಲೇಖಕರು ಯುರೋಪಿನ ಸಮಾಜವನ್ನು ನೋಡುವ ಬಗೆ ಹೇಗೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಲಾಗಿದೆ.

ಯುರೋಪಿನ ಸ್ತ್ರೀ ಪ್ರಜ್ಞೆಯನ್ನು ಭಾರತೀಯ ಮಹಿಳಾ ದೃಷ್ಟಿಕೋನದೊಂದಿಗೆ ಹೋಲಿಸಿ ನೋಡಲಾಗಿದೆ. ಎರಡೂ ಖಂಡಗಳ ದೇಶಗಳಲ್ಲಿನ ಮಹಿಳೆಯರ ಸ್ಥಾನಮಾನ, ಅಭಿಮಾನ, ಅವಕಾಶ, ಸ್ವಾಯತ್ತತೆಗಳನ್ನು ಪರಿಗಣಿಸಿ ವಿಶ್ಲೇಷಣೆ ಮಾಡಲಾಗಿದೆ.

ಪ್ರವಾಸಿ ಲೇಖಕರಲ್ಲಿ ಪ್ರವಾಸಕ್ಕಾಗಿ ಕೆಲವೇ ದೇಶಗಳನ್ನು ಹೆಚ್ಚು ಜನರು ಆಯ್ಕೆ ಮಾಡಿಕೊಳ್ಳಲು ಕಾರಣವೇನು? ಯುರೋಪ್ ಖಂಡದಲ್ಲಿ ನಲವತ್ತೆಂಟು ದೇಶಗಳಿವೆ. ಅವುಗಳಲ್ಲಿ ಮೂವತ್ತಕ್ಕೂ ಹೆಚ್ಚು ದೇಶಗಳಿಗೆ ಒಬ್ಬ ಕನ್ನಡದ ಲೇಖಕನೂ ಭೇಟಿ ನೀಡಿರುವುದಿಲ್ಲ. ಪ್ರವಾಸಕ್ಕಾಗಿ ಸ್ಥಳ ಆಯ್ಕೆ ಮಾಡಿಕೊಳ್ಳುವಾಗ ಯಾವ ನಿರ್ಧಾರಕ ಅಂಶಗಳು ಸ್ಥಳ ಆಯ್ಕೆಯ ಮೇಲೆ ಪ್ರಭಾವ ಬೀರುತ್ತದೆ? ತೃತೀಯ ರಾಷ್ಟ್ರಗಳಿಗೆ ಪ್ರವಾಸ ಹೋಗದಿರುವಂತೆ ಪ್ರಭಾವಿ ರಾಷ್ಟ್ರಗಳು ಏನಾದರು ಹುನ್ನಾರ ನಡೆಸಿವೆಯೇ? ಈ ಮೊದಲಾದ ಸಂಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಪ್ರತಿಯೊಬ್ಬ ಲೇಖಕನ ಬರೆವಣಿಗೆಯೂ ಅನನ್ಯವಾದುದು. ಆತನ ಬರೆವಣಿಗೆಯ ಮೇಲೆ ಜೀವನಾನುಭವ ಮತ್ತು ತಿಳಿವಳಿಕೆಯ ಪ್ರಭಾವ ದಟ್ಟವಾಗಿರುತ್ತದೆ. ಆದ್ದರಿಂದಲೇ ವ್ಯಾಸರಾಯ ಬಲ್ಲಾಳರು "ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪ್ರವಾಸದ ಅನುಭವವನ್ನು ಅರಗಿಸಿಕೊಳ್ಳುವುದು ಆತನ ಜೀವನಾನುಭವ ಹಾಗೂ ತಿಳಿವಳಿಕೆ ರೂಪಿಸಿದ ವಿಶಿಷ್ಟ ಮನೋಧರ್ಮಕ್ಕನುಗುಣವಾಗಿ"(ವ್ಯಾಸರಾಯ ಬಲ್ಲಾಳ., ನಾನೊಬ್ಬ ಭಾರತೀಯ ಪ್ರವಾಸಿ., ಪು–೧೫)ಎಂದಿದ್ದಾರೆ. ಲೇಖಕರ ಈ ಹೇಳಿಕೆಯು ಪ್ರವಾಸ ಕೃತಿಗಳಲ್ಲಿ ಕಂಡುಬರುವ ಭಿನ್ನ ಮನೋಧರ್ಮಗಳಿಗೆ ಕಾರಣವನ್ನು ವಿಶ್ಲೇಷಣೆ ಮಾಡಲಾಗಿದೆ.

೧. ೩ ಅಧ್ಯಯನದ ವ್ಯಾಪ್ತಿ

ವಿಸ್ತಾರವಾದ ಈ ಪ್ರಪಂಚದಲ್ಲಿ ೭ ಖಂಡಗಳಿವೆ. ೨೫೦ಕ್ಕೂ ಹೆಚ್ಚು ದೇಶಗಳಿವೆ. ಪ್ರತಿಯೊಂದು ಖಂಡವು ವೈವಿಧ್ಯಮಯವಾದುದು. ಇವುಗಳಲ್ಲಿ ಯುರೋಪ್ ಖಂಡವು ಹಲವು ಕಾರಣಗಳಿಗಾಗಿ ವಿಶಿಷ್ಟವೆನಿಸುತ್ತದೆ. ಪ್ರಾಚೀನತೆಯನ್ನು ಆಧುನಿಕತೆಯೊಂದಿಗೆ ಸಮತೂಗಿಸಿಕೊಂಡು, ಜಾನಪದೀಯ ಸಂಸ್ಕೃತಿಯನ್ನು ಆಧುನಿಕ ಸಂಸ್ಕೃತಿಯೊಂದಿಗೆ ಹೊಂದಿಸಿಕೊಂಡು, ಇಂದಿಗೂ ತನ್ನ ಒಡಲಲ್ಲಿ ಪುರಾತನತೆಯನ್ನು ಉಳಿಸಿಕೊಂಡು ಬಂದಿದೆ. ಟಿ.ಎಸ್. ವೆಂಕಣ್ಣಯ್ಯ ಅವರು "ಪ್ರಾಚೀನ ಆರ್ಯರ ನಾಗರೀಕತೆಯ ಒಂದು ಧಾರೆಯು ಯುರೋಪಿನಲ್ಲಿಯೂ ಮತ್ತೊಂದು ಧಾರೆಯು ಭರತಖಂಡದಲ್ಲಿಯೂ ಪ್ರವಹಿಸಿತು" (ಟಿ.ಎಸ್. ವೆಂಕಣ್ಣಯ್ಯ., ಪ್ರಾಚೀನ ಸಾಹಿತ್ಯ., ರಾಮಾಯಣ., ಪು–೨) ಎಂದಿದ್ದಾರೆ. ಆದ್ದರಿಂದಲೇ ಯುರೋಪ್ ಸಂಸ್ಕೃತಿ, ಆಚರಣೆಗಳಲ್ಲಿ ಭಾರತೀಯ ಸಾಂಸ್ಕೃತಿಕ ಜಗತ್ತನ್ನು ಗುರುತಿಸಲು ಸಾಧ್ಯವಾಗಿದೆ. ಇಂದಿರಾ ಶಿವಣ್ಣ ಅವರು ಯುರೋಪ್ ಖಂಡದ ಬಗ್ಗೆ "ಜಗತ್ತಿನಲ್ಲಿ ಭಾರತದಂತೆ ಭಾಷೆ, ಜಾತಿ, ಸಂಪ್ರದಾಯ, ರೀತಿ, ಆಹಾರ ಪದ್ಧತಿ, ಆಚಾರ ವಿಚಾರಗಳು, ಕಲೆಗಳು ಮುಂತಾದ ವಿಷಯಗಳಲ್ಲಿ ವೈವಿಧ್ಯತೆಯನ್ನು ತುಂಬಿಕೊಂಡಿರುವ ಮತ್ತೊಂದು ಭೂಭಾಗ ಯುರೋಪ್ ಖಂಡ. ತನ್ನ ಗತಕಾಲದ ಇತಿಹಾಸದಲ್ಲಿ ಅದ್ಭುತವಾದ ಘಟನೆಗಳನ್ನು ತುಂಬಿಕೊಂಡ ಭೂಭಾಗ. ಮಹಾನ್ ವ್ಯಕ್ತಿಗಳನ್ನು ಪ್ರಪಂಚಕ್ಕೆ ನೀಡಿದ ಪುಣ್ಯ ಭೂಮಿ, ಪುರಾತನ ನಾಗರೀಕತೆಯ ತವರು" (ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು–ಮುನ್ನುಡಿ., ಲೇಖಕಿಯ ಮಾತು)ಎಂದಿದ್ದಾರೆ. ಈ ಹೇಳಿಕೆಯ ಪ್ರಕಾರ ಭಾರತಕ್ಕೂ ಯುರೋಪಿಗೂ ಸಾಂಸ್ಕೃತಿಕ ಆಚರಣೆಗಳಲ್ಲಿ ಸಾಮ್ಯತೆ ಇದೆ. ಸಂಶೋಧನಾ ಅಧ್ಯಯನದಲ್ಲಿ ಈ ಸಾಮ್ಯ ಅಂಶಗಳನ್ನು ಆಧರಿಸಿ ಈ ಮೇಲಿನ ಅಭಿಪ್ರಾಯಗಳ ವಾಸ್ತವ ಸ್ಥಿತಿಗತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಯುರೋಪ್ ಖಂಡದಲ್ಲಿ ನಲವತ್ತೆಂಟು ದೇಶಗಳಿವೆ. ಯುರೋಪಿನ ದೇಶಗಳ ಸಾಹಿತ್ಯ ಮತ್ತು ತತ್ವಜ್ಞಾನದ ವಿಚಾರಗಳು ವಿಶ್ವದ ಇತರ ರಾಷ್ಟ್ರಗಳ ಮೇಲೆ ಪ್ರಭಾವ ಬೀರಿದೆ. ಯುರೋಪಿಯನ್ನರ ಆಗಮನದಿಂದ ಭಾರತದಲ್ಲಿ ನೂತನ ಪರ್ವವೇ ನಿರ್ಮಾಣವಾಗಿರುವುದನ್ನು ಐತಿಹಾಸಿಕ ಸಂಗತಿಗಳು ದೃಢಪಡಿಸುತ್ತವೆ. ಯುರೋಪ್ ಖಂಡವು ವಿಶ್ವದಲ್ಲಿಯೇ ವಿಶೇಷವಾದ ಸಾಂಸ್ಕೃತಿಕ, ರಾಜಕೀಯ ಆಯಾಮಗಳನ್ನು ಹೊಂದಿದ್ದು ಅನೇಕ ವಿದೇಶಿಯರನ್ನು ತನ್ನತ್ತ ಆಕರ್ಷಿಸಿದೆ. ಯುರೋಪಿನ ದೇಶಗಳಿಗೆ ಭಾರತೀಯ ಲೇಖಕರು ಪ್ರವಾಸಕ್ಕೆ ತೆರಳಿದಾಗ ಅಲ್ಲಿನ ಸಂಸ್ಕೃತಿಯು ಲೇಖಕರ ಮೇಲೆ ಪ್ರಭಾವ ಬೀರಿರುವುದನ್ನು ಕಂಡುಕೊಳ್ಳಲಾಗಿದೆ. ಪ್ರವಾಸಿ ಲೇಖಕರ ಆಸ್ಥೆ ಮತ್ತು ಅಭಿರುಚಿಯ ಹಿನ್ನೆಲೆಯಲ್ಲಿ ಅವರ ದೃಷ್ಟಿಕೋನವು ರೂಪಿತವಾಗಿದೆ. ಆದ್ದರಿಂದ ಲೇಖಕರು ನೋಡಿದ ದೃಶ್ಯಗಳು ಒಂದೇ ಆದರೂ ದೃಷ್ಟಿಕೋನಗಳು ಭಿನ್ನವಾಗಿರುವುದಕ್ಕೆ ಕಾರಣಗಳನ್ನು ಗುರುತಿಸಲಾಗಿದೆ.

ಪ್ರವಾಸ ಕಥನಗಳು ಆತ್ಮಕಥನಗಳಲ್ಲ. ಆತ್ಮಕಥನ ಶೈಲಿಯ ಒಂದು ಸರಳೀಕೃತ ಮಾದರಿ ಎಂದು ಹೇಳಬಹುದು. ಲೇಖಕರು ತಾವು ನೋಡಿದ ದೃಶ್ಯಗಳನ್ನು, ಅನುಭವಿಸಿದ ಘಟನಾವಳಿಗಳನ್ನು ಆತ್ಮಾನುಸಾರ ಬರೆಯುತ್ತಾರೆ. ಸಂದರ್ಭಕ್ಕೆ ತಕ್ಕನಾಗಿ ತಮ್ಮ ವೈಯಕ್ತಿಕ ವಿಷಯಗಳನ್ನು ಸೇರಿಸುತ್ತಾರೆ. ತಮ್ಮ ಮನೋಧೋರಣೆಗಳನ್ನು ಮುಕ್ತವಾಗಿ ಹೇಳಿಕೊಳ್ಳುತ್ತಾರೆ. ಜಿ. ಗೋಪಾಲ್ ಅವರು ತಮ್ಮ ಪ್ರವಾಸ ಕಥನಗಳಲ್ಲಿ ತಮ್ಮ ವೈಯಕ್ತಿಕ ಬದುಕಿನ ಹಲವು ಮಜಲುಗಳನ್ನು ಆತ್ಮಕಥನ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಕನ್ನಡದ ಯುರೋಪ್ ಪ್ರವಾಸ ಕಥನಗಳನ್ನು ಪ್ರಮುಖವಾಗಿ ಮೂರು ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

೧. ಲೇಖಕರು ವಾಸಿಸುವ ಸುತ್ತಲಿನ ಪರಿಸರವು ಲೇಖಕರಲ್ಲಿ ರೂಢಿಸಿರುವ ಸಂಸ್ಕೃತಿ ಮತ್ತು ಸಂಸ್ಕಾರ

೨. ಲೇಖಕರ ಮೇಲೆ ಪ್ರಭಾವ ಬೀರಿರುವ ಭಾರತೀಯ ಸಾಂಸ್ಕೃತಿಕ ಪರಿಸರ

೩. ಲೇಖಕರು ಪಾಶ್ಚಾತ್ಯ ಸಂಸ್ಕೃತಿಯನ್ನು ಗ್ರಹಿಸಿದ ರೀತಿ

ಈ ಮೂರು ದೃಷ್ಟಿಕೋನದ ಹಿನ್ನಲೆಯಲ್ಲಿ ಪ್ರವಾಸಿ ಲೇಖಕ ವೈಚಾರಿಕ ವಿಶ್ಲೇಷಣೆಗೆ ಹಾಗೂ ಸ್ಥೂಲ ವಿವರಣೆಗೆ ತೊಡಗುತ್ತಾನೆ. ಈ ವಿಶ್ಲೇಷಣೆ, ವಿವರಣೆಗಳನ್ನು ಏಕೆ? ಹೇಗೆ? ಎಂಬ ಪ್ರಶ್ನೆಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗುತ್ತದೆ.

ಕನ್ನಡದ ಯುರೋಪ್ ಪ್ರವಾಸ ಕೃತಿಗಳಲ್ಲಿ ಗುರುತಿಸಿಕೊಂಡಿರುವ ಅಧ್ಯಯನ ಕ್ಷೇತ್ರಗಳು

೧. ಶಿಕ್ಷಣ	೨. ಕೃಷಿ
೩. ವಿಜ್ಞಾನ ಮತ್ತು ತಂತ್ರಜ್ಞಾನ	೪. ಕೌಟುಂಬಿಕ ಮತ್ತು ಸಾಮುದಾಯಿಕ ಬದುಕು
೫. ಭ್ರಷ್ಟಾಚಾರ ಮತ್ತು ನಿರುದ್ಯೋಗ	೬. ಮಹಿಳೆಯ ಬದುಕು ಮತ್ತು ಸ್ವಾತಂತ್ರ್ಯ
೭. ಕಲೆ ಮತ್ತು ವಾಸ್ತುಶಿಲ್ಪ	೮. ದೇವರು, ಧರ್ಮ, ನಂಬಿಕೆ, ಆಚರಣೆಗಳು
೯. ಜಾನಪದ	೧೦. ಚಾರಿತ್ರಿಕ ಸಂಗತಿಗಳು
೧೧. ಸಂಸ್ಕೃತಿ	೧೨. ಪ್ರಭುತ್ವ–ಕ್ರಾಂತಿ–ಹೋರಾಟ

ಈ ಪ್ರಮುಖ ಅಧ್ಯಯನ ಕ್ಷೇತ್ರಗಳನ್ನು ಆಧಾರವಾಗಿಟ್ಟುಕೊಂಡು ಲೇಖಕರ ಅಭಿಪ್ರಾಯಗಳನ್ನು ತಾತ್ವಿಕವಾಗಿ ಹಾಗೂ ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

ಕನ್ನಡದಲ್ಲಿ ಪ್ರಕಟವಾಗಿರುವ ಯುರೋಪ್ ಪ್ರವಾಸ ಕೃತಿಗಳ ಸಂಖ್ಯೆ ಸುಮಾರು ೧೦೬ಕ್ಕಿಂತಲೂ ಹೆಚ್ಚು. ಈ ಕೃತಿಗಳಲ್ಲಿ ಯುರೋಪ್ ಖಂಡದಲ್ಲಿರುವ ದೇಶಗಳಿಗೆ ಪ್ರವಾಸ ಮಾಡಿರುವ ಕೃತಿಗಳಿವೆ. ಅವುಗಳ ಜೊತೆಗೆ ವಿಶ್ವ ಪರ್ಯಟನಾ ಕೃತಿಗಳು ಸೇರಿವೆ. ಅಮೆರಿಕ ಖಂಡದ ಜೊತೆಗೆ ಯುರೋಪ್ ಖಂಡದ ದೇಶಗಳನ್ನು ಪ್ರವಾಸ ಮಾಡಿದ ಕೃತಿಗಳೂ ಇವೆ. ಈ ಸಂಶೋಧನಾ ಅಧ್ಯಯನದಲ್ಲಿ ಯುರೋಪ್ ದೇಶಗಳಲ್ಲಿ ಪ್ರವಾಸ ಮಾಡಿದ ವಿವರಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಯುರೋಪ್ ಖಂಡದಲ್ಲಿ ಸುಮಾರು ನಲವತ್ತೆಂಟು ದೇಶಗಳಿವೆ.

ಯುರೋಪ್ ಖಂಡದ ದೇಶಗಳ ಪಟ್ಟಿ[೨]

೧.	ರಷ್ಯಾ	೨	ಜರ್ಮನಿ
೩	ಯುನೈಟೆಡ್ ಕಿಂಗ್‌ಡಮ್	೪	ಫ್ರಾನ್ಸ್
೫	ಇಟಲಿ	೬	ಸ್ಪೈನ್
೭	ಉಕ್ರೇನ್	೮	ಪೋಲ್ಯಾಂಡ್
೯	ರೋಮೇನಿಯಾ	೧೦	ನೆದರ್‌ಲ್ಯಾಂಡ್
೧೧	ಬೆಲ್ಜಿಯಂ	೧೨	ಸಿಜೆಷಿಯಾ(ಝೆಕ್ ರಿಪಬ್ಲಿಕ್)
೧೩	ಗ್ರೀಸ್	೧೪	ಪೋರ್ಚುಗಲ್
೧೫	ಸ್ವೀಡನ್	೧೬	ಹಂಗೇರಿ
೧೭	ಬೆಲಾರಸ್	೧೮	ಆಸ್ಟ್ರೀಯ
೧೯	ಸರ್ಬಿಯಾ	೨೦	ಸ್ವಿಟ್ಜರ್‌ಲ್ಯಾಂಡ್
೨೧	ಬಲ್ಗೇರಿಯಾ	೨೨	ಡೆನ್ಮಾರ್ಕ್
೨೩	ಫಿನ್‌ಲ್ಯಾಂಡ್	೨೪	ಸ್ಲೋವಾಕಿಯಾ
೨೫	ನಾರ್ವೆ	೨೬	ಐರ್‌ಲ್ಯಾಂಡ್
೨೭	ಕ್ರೋಷಿಯಾ	೨೮	ಮಾಲ್ಡೋವಾ
೨೯	ಬೋಸ್ನಿಯಾ ಮತ್ತು ಹರ್ಜಿಗೊವಿನ	೩೦	ಅಲ್ಬೆನಿಯಾ
೩೧	ಲಿಥುವೆನಿಯಾ	೩೨	ನಾರ್ಥ್ ಮ್ಯಾಸಿಡೋನಿಯಾ
೩೩	ಸ್ಲೋವೆನಿಯಾ	೩೪	ಲಟ್ವಿಯಾ
೩೫	ಎಸ್ಟೋನಿಯಾ	೩೬	ಮಾಂಟೆನೆಗ್ರೊ
೩೭	ಲಕ್ಸಂಬರ್ಗ್	೩೮	ಮಾಲ್ಟ
೩೯	ಐಸ್‌ಲ್ಯಾಂಡ್ಸ್	೪೦	ಚಾನಲ್ ಐಲ್ಯಾಂಡ್ಸ್
೪೧	ಇಸ್ಲೆ ಆಫ್ ಮ್ಯಾನ್	೪೨	ಅಂಡೋರಾ
೪೩	ಫೇರೋ ಐಲ್ಯಾಂಡ್ಸ್	೪೪	ಮೊನ್ಯಾಕೋ
೪೫	ಲಿಚ್‌ಟೆನ್‌ಸ್ಟೈನ್	೪೬	ಸ್ಯಾನ್ ಮೆರಿನೋ
೪೭	ಜಿಬ್ರಾಲ್ಟರ್	೪೮	ಹೋಲಿ ಸೀ

ಯುರೋಪ್ ಖಂಡದಲ್ಲಿರುವ ಈ ದೇಶಗಳಿಗೆ ಪ್ರವಾಸದ ಉದ್ದೇಶದಿಂದ ಭೇಟಿ ನೀಡಿರುವ ಲೇಖಕರ ಸಂಖ್ಯೆ ವಿರಳವಾದುದು. ಫ್ರಾನ್ಸ್, ರಷ್ಯಾ, ಯುನೈಟೆಡ್ ಕಿಂಗ್‌ಡಮ್ (ಇಂಗ್ಲೆಂಡ್), ಇಟಲಿ, ಸ್ವಿಟ್ಜರ್‌ಲ್ಯಾಂಡ್ ದೇಶಗಳಿಗೆ ಪ್ರವಾಸಕ್ಕೆ ತೆರಳಿದ ಲೇಖಕರ ಸಂಖ್ಯೆ ಅಧಿಕವಾಗಿದೆ. ಜರ್ಮನಿ, ನೆದರ್ಲ್ಯಾಂಡ್, ಪೋಲೆಂಡ್, ಗ್ರೀಸ್, ಹಂಗೇರಿ, ಡೆನ್ಮಾರ್ಕ್, ಆಸ್ಟ್ರೀಯಾ ಮೊದಲಾದ ದೇಶಗಳಿಗೆ ಪ್ರವಾಸಕ್ಕೆ ತೆರಳಿದ ಲೇಖಕರ ಸಂಖ್ಯೆ ಕಡಿಮೆ ಇದೆ. ಶಿವರಾಮ ಕಾರಂತರು ನಾರ್ವೆ ದೇಶಕ್ಕೆ, ದೇ. ಜವರೇಗೌಡರು

ಎಸ್ಟೋನಿಯಾ ದೇಶಕ್ಕೆ, ಕೃಷ್ಣಾನಂದ ಹೆಗ್ಡೆ ಅವರು ಲಿಚ್‌ಟೆನ್‌ಸ್ಟೈನ್ ದೇಶಕ್ಕೆ ತೆರಳಿದ್ದಾರೆ. ಇತರ ಕನ್ನಡದ ಲೇಖಕರು ಈ ದೇಶಗಳಿಗೆ ಭೇಟಿ ನೀಡಿಲ್ಲ. ಯುರೋಪ್ ಖಂಡದ ತೃತೀಯ ರಾಷ್ಟ್ರಗಳೆನಿಸಿದ ಬೋಸ್ನಿಯಾ, ಲಟ್‌ವಿಯಾ, ಮಾಲ್ಡೋವಾ, ಸಿಜೇಷಿಯಾ, ಬೆಲಾರಸ್, ಕ್ರೋಷಿಯಾ, ಮಾಂಟೆಗ್ರೋ, ಅಲ್ಬೇನಿಯಾ, ಅಂಡೋರಾ ಮೊದಲಾದ ದೇಶಗಳಿಗೆ ಯಾವ ಲೇಖಕರು ಪ್ರವಾಸ ಹೋಗಿರುವುದಿಲ್ಲ. ಕೆಲವೇ ದೇಶಗಳಿಗೆ ಹೆಚ್ಚು ಲೇಖಕರು ಪ್ರವಾಸಕ್ಕೆ ತೆರಳಲು ಕಾರಣವೇನು? ತೃತೀಯ ರಾಷ್ಟ್ರಗಳನ್ನು ಲೇಖಕರು ಪ್ರವಾಸಕ್ಕಾಗಿ ಏಕೆ ಆಯ್ಕೆ ಮಾಡಿಕೊಳ್ಳುವುದಿಲ್ಲ? ಪ್ರಭಲ ರಾಷ್ಟ್ರಗಳು ಪ್ರವಾಸಿ ದೇಶಗಳ ಆಯ್ಕೆಯ ಮೇಲೆ ಪ್ರಭಾವ ಬೀರುತ್ತಿವೆಯೇ? ಮೊದಲಾದ ವಿಚಾರಗಳನ್ನು ತಾತ್ವಿಕೆ ನೆಲೆಯಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಸುಮಾರು ನಲವತ್ತೈದಕ್ಕೂ ಹೆಚ್ಚು ಯುರೋಪ್ ಪ್ರವಾಸ ಕೃತಿಗಳನ್ನು ಪ್ರಾಥಮಿಕ ಆಕರಗಳನ್ನಾಗಿ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳೆಂದರೆ

೧೯೩೦ ರಿಂದ ೧೯೩೯ ರ ಕಾಲಘಟ್ಟದ ಕೃತಿಗಳು–೨

೧. **ವಿ.ಕೃ. ಗೋಕಾಕ್.**, ೧೯೩೬., **ಸಮುದ್ರದಾಚೆಯಿಂದ.**, ಸುರುಚಿ ಪ್ರಕಾಶನ., ಮೈಸೂರು,

೨. **ಆರ್.ಎಸ್ ನಾರಾಯಣರಾವ್.**, ೧೯೩೭., **ಪ್ರಭುವರ್ಯರ ಯೂರೋಪ್ ಪ್ರವಾಸ** (ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್)., ಗ್ರಂಥಕರ್ತ ಅರಳೇಪೇಟೆ., ಬೆಂಗಳೂರು.

೧೯೩೮ ರಿಂದ ೧೯೫೩ರ ವರೆಗೆ ಕನ್ನಡದಲ್ಲಿ ಯಾವುದೇ ಯುರೋಪ್ ಪ್ರವಾಸ ಕೃತಿಗಳು ಪ್ರಕಟವಾಗಿಲ್ಲ.

೧೯೫೦ ರಿಂದ ೧೯೫೯ ರ ಕಾಲಘಟ್ಟದ ಕೃತಿಗಳು–೨

೩. **ಕೆ. ಶಿವರಾಮ ಕಾರಂತ.**, ೧೯೫೪., **ಅಪೂರ್ವ ಪಶ್ಚಿಮ.**, ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್., ಬೆಂಗಳೂರು.

೪. **ಬಿಳಿಗೆರೆ ರಾಮಚಂದ್ರರಾಯ.**, ೧೯೫೬., **ನಾನು ಕಂಡ ರಷ್ಯಾ.**, ಜನಶಕ್ತಿ ಪ್ರಕಾಶನ., ಬೆಂಗಳೂರು.

೧೯೬೦ ರಿಂದ ೧೯೬೯ ರ ಕಾಲಘಟ್ಟದ ಕೃತಿಗಳು–೩

೫. **ಹೊ. ಶ್ರೀನಿವಾಸಯ್ಯ.**, ೧೯೬೭., **ನಾ ಕಂಡ ಜರ್ಮನಿ.**, ಜಯಶ್ರೀ ಟ್ರಸ್ಟ್., ಮಲ್ಲೇಶ್ವರಂ., ಬೆಂಗಳೂರು.

೬. **ರಾ.ಶಿ, ೧೯೬೮., ಕೊರವಂಜಿಯ ಪಡುವಣ ಯಾತ್ರೆ.**, ವಸಂತ ಪ್ರಕಾಶನ., ಬೆಂಗಳೂರು.

೭. **ಶ್ರೀರಂಗರಾಜ್.**, ೧೯೬೯., **ಸೋವಿಯೆತ್ ದಿನಚರಿ.**, ಪ್ರ. ಜೆ. ಎಸ್. ಎಸ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್., ಮೈಸೂರು.

೧೯೭೦ ರಿಂದ ೧೯೭೯ ರ ಕಾಲಘಟ್ಟದ ಕೃತಿಗಳು–೧೦

೮. **ಬಸವರಾಜ ಕಟ್ಟೀಮನಿ.**, ೧೯೭೦., **ನಾನು ಕಂಡ ರಶಿಯಾ.**, ಉಷಾ ಸಾಹಿತ್ಯ ಮಾಲೆ., ಮೈಸೂರು.

೯. **ದೇ. ಜವರೇಗೌಡ.**, ೧೯೭೦., **ವಿದೇಶದಲ್ಲಿ ನಾಲ್ಕುವಾರ.**, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ., ನಿಯಮಿತ., ಬೆಂಗಳೂರು.

೧೦. **ಶ್ರೀರಂಗ.**, ೧೯೭೦., **ಶ್ರೀ–ರಂಗ–ಯಾತ್ರೆ.**, ಉಷಾ ಸಾಹಿತ್ಯ ಮಾಲೆ., ಮೈಸೂರು.

೧೧. **ದೇ. ಜವರೇಗೌಡ.**, ೧೯೭೧., **ಪ್ರವಾಸಿಯ ದಿನಚರಿ.**, ತ. ವೆಂ. ಸ್ಮಾರಕ ಮಾಲೆ.,. ಮೈಸೂರು.

೧೨. **ಜಿ.ಎಸ್. ಶಿವರುದ್ರಪ್ಪ.**, ೧೯೭೩., **ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ.**, ತ. ವೆಂ. ಸ್ಮಾರಕ ಮಾಲೆ, ಮೈಸೂರು.

೧೩. **ಬೀಚಿ.**, ೧೯೭೪., **ದೇವರಿಲ್ಲದ ಗುಡಿ.**, ಸಮಾಜ ಪುಸ್ತಕಾಲಯ., ಧಾರವಾಡ.

೧೪. **ಹ.ವೆಂ. ನಾಗರಾಜರಾವ್.**, ೧೯೭೪., **ನವ ರಷ್ಯದ ನೋಟ.**, ಸಾಹಿತ್ಯ ಲೋಕ., ಬೆಂಗಳೂರು.

೧೫. **ಅನುಪಮಾ ನಿರಂಜನ.**, ೧೯೭೮., **ಸ್ನೇಹಯಾತ್ರೆ**, ಡಿ.ವಿ.ಕೆ. ಮೂರ್ತಿ ಪ್ರಕಾಶನ., ಮೈಸೂರು.

೧೬. **ವಸಂತ ಕವಲಿ.**, ೧೯೭೯., **ರಾಗ ತಾನ : ಸೇನ ದಡದಲ್ಲಿ.**, ಮಾನಸೋಲ್ಲಾಸ ಪ್ರಕಾಶನ., ಬೆಂಗಳೂರು.

೧೭. **ಮೂಜಗಂ.**, ೧೯೭೯., **ನಮ್ಮ ವಿದೇಶಯಾತ್ರೆ**, ಶ್ರೀ ಜಗದ್ಗುರು ಧರ್ಮ ಪ್ರಚಾರ ಮಂಡಳಿ., ಹುಬ್ಬಳ್ಳಿ.

೧೯೮೦ ರಿಂದ ೧೯೮೯ ರ ಕಾಲಘಟ್ಟದ ಕೃತಿಗಳು–೧೪

೧೮. **ಉ.ಕಾ. ಸುಬ್ಬರಾಯಾಚಾರ್.**, ೧೯೮೦., **ಸೋವಿಯೆತ್ ನಾಡಿನಲ್ಲಿ ಹತ್ತು ದಿನಗಳು.**, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್., ಮೈಸೂರು.

೧೯. **ಜಿ. ಗೋಪಾಲ್.**, ೧೯೮೦., **ವೈದ್ಯನ ವಿದೇಶ ಪ್ರವಾಸ.**, ಗಿರಿ ಪ್ರಕಾಶನ, ಮೈಸೂರು.

೨೦. **ಹೊ. ಶ್ರೀನಿವಾಸಯ್ಯ.**, ೧೯೮೦., **ಶಶಿ ಕಂಡ ಜರ್ಮನಿ.**, ಕಿರಿಯರ ಪುಸ್ತಕ ಮಾಲೆ., ಕನ್ನಡ ಸಾಹಿತ್ಯ ಪರಿಷತ್., ಚಾಮರಾಜಪೇಟೆ., ಬೆಂಗಳೂರು.

೨೧. **ಕು.ಶಿ. ಹರಿದಾಸಭಟ್ಟ.**, ೧೯೮೩., **ಒಮ್ಮೆ ರಶಿಯ ಇನ್ನೊಮ್ಮೆ ಇತಾಲಿಯಾ.**, ವಾಣಿ ಪ್ರೆಸ್ಸ್., ಮೈಸೂರು.

೨೨. **ಕು.ಶಿ ಹರಿದಾಸಭಟ್ಟ.**, ೧೯೮೩., **ಇತಾಲಿಯಾ ನಾನು ಕಂಡಂತೆ.**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಬೆಂಗಳೂರು.

೨೩. **ದೊಡ್ಡೇರಿ ವೆಂಕಟಗಿರಿರಾವ್.**, ೧೯೮೪., **ಏಕಾಕಿ ಪ್ರವಾಸಿ.**, ಐ.ಬಿ.ಹೆಚ್ ಪ್ರಕಾಶನ., ಬೆಂಗಳೂರು.

೨೪. **ಅನುಪಮಾ ನಿರಂಜನ.**, ೧೯೮೪., **ಅಂಗೈಯಲ್ಲಿ ಯೂರೋ ಅಮೆರಿಕ.**, ಡಿ.ವಿ.ಕೆ. ಮೂರ್ತಿ ಪ್ರಕಾಶನ., ಮೈಸೂರು.

೨೫. **ವೈ. ಎನ್. ಕೃಷ್ಣಮೂರ್ತಿ.**, ೧೯೮೪., **ಹೈಡ್ ಪಾರ್ಕ್.**, ಅಕ್ಷರ ಪ್ರಕಾಶನ., ಹೆಗ್ಗೋಡು., ಶಿವಮೊಗ್ಗ.

೨೬. **ಜಿ. ಗೋಪಾಲ್.**, ೧೯೮೫., **ಬೆಂಗಳೂರಿಂದ ಬಾರ್ಸೆಲೋನಕ್ಕೆ.**, ಗಿರಿ ಪ್ರಕಾಶನ., ಮೈಸೂರು.

೨೭. **ಪುಂಡಿಕಾಯ್ ಗಣಪಯ್ಯ ಭಟ್ಟ.**, ೧೯೮೫., **ಯುರೋಪ್ ನೆನಪುಗಳು.**, ಕನ್ನಡ ಸಂಘ., ದರ್ಬೆ., ಪುತ್ತೂರು.

೨೮. **ವ್ಯಾಸರಾಯ ಬಲ್ಲಾಳ.**, ೧೯೮೭., **ನಾನೊಬ್ಬ ಭಾರತೀಯ ಪ್ರವಾಸಿ.**, ಗೀತಾ ಬುಕ್ ಹೌಸ್., ಮೈಸೂರು.

೨೯. **ಕೆ ಶಿವರಾಮ ಕಾರಂತ.**, ೧೯೮೭., **ಅರಸಿಕರಲ್ಲ.**, ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್., ಬೆಂಗಳೂರು.

೩೦. **ಹೊ. ಶ್ರೀನಿವಾಸಯ್ಯ.**, ೧೯೮೯., **ಜಯಶ್ರೀ ಕಂಡ ಜಗತ್ತು.**, ಸುವಿದ್ಯಾ ಪ್ರಕಾಶನ., ಬೆಂಗಳೂರು.

೩೧. **ಪಾಟೀಲ ಪುಟ್ಟಪ್ಪ.**, ೧೯೮೯., **ಸೋವಿಯತ್ ದೇಶ ಕಂಡೆ.**, ಸಾಹಿತ್ಯ ಪ್ರಕಾಶನ., ಹುಬ್ಬಳ್ಳಿ.

೧೯೯೦ ರಿಂದ ೧೯೯೯ ರ ಕಾಲಘಟ್ಟದ ಕೃತಿಗಳು-೮

೩೨. **ನಾಗತಿಹಳ್ಳಿ ಚಂದ್ರಶೇಖರ.,** ೧೯೯೧., **ನನ್ನ ಗ್ರಹಿಕೆಯ ಫ್ರಾನ್ಸ್ (ಅಯನ).,** ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ., ಬೆಂಗಳೂರು.

೧೯೯೧ರಲ್ಲಿ ಸೋವಿಯತ್ ಒಕ್ಕೂಟ ಹೊಡೆದು ಹದಿನಾಲ್ಕು ದೇಶಗಳಾಗಿ ವಿಭಜನೆ ಹೊಂದಿದ ಬಳಿಕ ಬಂದ ಕೃತಿಗಳು

೩೩. **ಲತಾ ಗುತ್ತಿ.,** ೧೯೯೩., **ಯುರೋ ನಾಡಿನಲ್ಲಿ.,** ಸುಂದರ ಪುಸ್ತಕ ಪ್ರಕಾಶನ., ಧಾರವಾಡ.

೩೪. **ದೇವಕಿ ಮೂರ್ತಿ.,** ೧೯೯೪., **ಯೂರೋ ಅಮೆರಿಕದ ಇಣುಕು ನೋಟ.,** ಕಾವ್ಯಾಲಯ ಪ್ರಕಾಶನ., ಮೈಸೂರು.

೩೫. **ಪಿ. ಆರ್. ತಿಪ್ಪೇಸ್ವಾಮಿ.,** ೧೯೯೪., **ಕಲಾವಿದ ಕಂಡ ಫ್ರಾನ್ಸ್.,** ಮಯೂರ್ ಪಬ್ಲಿಕೇಷನ್ಸ್., ಬೆಂಗಳೂರು.

೩೬. **ಕೃಷ್ಣಾನಂದ ಹೆಗ್ಡೆ.,** ೧೯೯೫., **ಯೂರೋಪ್ ಯಾತ್ರೆ.,** ಗೋವಿಂದ ಪೈ ಸಂಶೋಧನ ಕೇಂದ್ರ., ಉಡುಪಿ.

೩೭. **ಜಿ.ಎಸ್. ಶಿವರುದ್ರಪ್ಪ.,** ೧೯೯೭., **ಇಂಗ್ಲೆಂಡಿನಲ್ಲಿ ಚತುರ್ಮಾಸ.,** ಇಳಾ ಪ್ರಕಾಶನ., ಬೆಂಗಳೂರು.

೩೮. **ಹೇಮಲತಾ ಮಹಿಷಿ.,** ೧೯೯೯., **ಯುರೋ-ದರ್ಶನ.,** ಮನೋಹರ ಗ್ರಂಥಮಾಲೆ., ಧಾರವಾಡ.

೩೯. **ನೇಮಿಚಂದ್ರ.,** ೧೯೯೯., **ಒಂದು ಕನಸಿನ ಪಯಣ.,** ಚೈತನ್ಯ ಆಫ್‌ಸೆಟ್ ಪ್ರಿಂಟರ್ಸ್., ಗದಗ.

೨೦೦೦ ರಿಂದ ೨೦೧೨ ರವರೆಗಿನ ಕೃತಿಗಳು-೬

೪೦. **ಭಾರತಿ ಭಟ್,** ೨೦೦೦., **ನನ್ನ ಬೆಲ್ಜಿಯಂ ಪ್ರವಾಸ.,** ಭಾಷಾ ಪ್ರಕಾಶನ., ಮೈಸೂರು.

೪೧. **ಇಂದಿರಾ ಶಿವಣ್ಣ.,** ೨೦೦೧., **ಹಾಲೆಂಡ್‌ನಿಂದ ಲಂಡನ್‌ವರೆಗೆ.,** ಸಪ್ನ ಬುಕ್‌ಹೌಸ್., ಬೆಂಗಳೂರು.

೪೨. **ಪ್ರಭಾಕರ ಶಿಶಿಲ.,** ೨೦೦೮., **ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ.,** ರಾಜ್ ಪ್ರಕಾಶನ., ಮೈಸೂರು.

೪೩. **ಕೆ.ಜಿ. ಸುಬ್ರಾಯಶರ್ಮಾ.,** ೨೦೦೮., **ಜರ್ಮನಿಯಲ್ಲಿ ಶರ್ಮರು.,** ಶ್ರೀ ನಿತ್ಯಾನಂದ ಪ್ರಕಾಶನ., ಬೆಂಗಳೂರು.

೪೪. **ಟಿ. ಆರ್. ಅನಂತರಾಮು.,** ೨೦೦೮., **ಪಶ್ಚಿಮ ಮುಖಿ.,** ನವಕರ್ನಾಟಕ ಪಬ್ಲಿಕೇಶನ್ಸ್., ಬೆಂಗಳೂರು.

೪೫. **ಇಂದಿರಾ ಶಿವಣ್ಣ..** ೨೦೧೨., **ಬದುಕಿಗೆ ಬಂಗಾರದ ಲೇಪನ.,** ಸಪ್ನ ಬುಕ್‌ಹೌಸ್., ಬೆಂಗಳೂರು.

ಮೇಲ್ಕಾಣಿಸಿದ ಕೃತಿಗಳ ಪ್ರವಾಸ ಕಥನಗಳ ಲೇಖಕರ ಅಧ್ಯಯನಶೀಲತೆ ಮತ್ತು ಅನುಭವಾಭಿವ್ಯಕ್ತಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರಮುಖ ಅಂಶಗಳಾಗಿವೆ. ಸಂಸ್ಕೃತಿ, ಶಿಕ್ಷಣ, ಬದುಕು, ವಿಜ್ಞಾನ ತಂತ್ರಜ್ಞಾನ, ಕೃಷಿ, ಭ್ರಷ್ಟಾಚಾರ, ನಿರುದ್ಯೋಗ, ದೇವರು, ಧರ್ಮ, ನಂಬಿಕೆ, ಸಾಂಪ್ರದಾಯಿಕ ಆಚರಣೆಗಳು, ಜಾನಪದ, ಪ್ರಭುತ್ವ, ಕ್ರಾಂತಿ, ಹೋರಾಟ, ಚಾರಿತ್ರಿಕ ಸಂಗತಿಗಳು ಮೊದಲಾದ ವಿಚಾರಗಳನ್ನು ಚರ್ಚಿಸಿರುವ ಕೃತಿಗಳನ್ನು ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಉಳಿದ ಯುರೋಪ್ ಪ್ರವಾಸ ಕೃತಿಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಆ ಕೃತಿಗಳನ್ನು ಆನುಷಂಗಿಕ ಆಕರಗಳ ಪಟ್ಟಿಯಲ್ಲಿ ನೀಡಲಾಗಿದೆ.

೧.೪ ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ

ಅ) ಪ್ರವಾಸ ಸಾಹಿತ್ಯದ ಸ್ವರೂಪ :

ಪ್ರವಾಸ ಸಾಹಿತ್ಯಕ್ಕೆ ನಿರ್ದಿಷ್ಟವಾಗಿ ಇಂತದ್ದೇ ರೂಪ ಇರಬೇಕೆಂಬ ನಿಯಮವಿಲ್ಲ. ಅದು ಗದ್ಯ, ಪದ್ಯ, ಹಾಗೂ ಚಂಪೂ ಹೀಗೆ ಮೂರು ಸ್ವರೂಪದಲ್ಲಿ ಬಳಕೆಯಾಗಿದೆ. ವಿ. ಕೃ. ಗೋಕಾಕ್ ಅವರ 'ಇಂದಿಲ್ಲ, ನಾಳೆ' ಕೃತಿ ಆಧುನಿಕ ಚಂಪೂ ಮಾದರಿಯಲ್ಲಿದೆ. 'ಸಮುದ್ರ ಗೀತೆಗಳು' ಕೃತಿಯು ಕವನಗಳ ರೂಪದಲ್ಲಿದೆ. ಆದರೆ ಗದ್ಯ ರೂಪದ ಬರಹಗಳೇ ಅಧಿಕವಾಗಿದೆ. ಗದ್ಯದಲ್ಲಿಯೂ ಅನೇಕ ಮಾದರಿಗಳಿವೆ. ಕೆ.ಆರ್. ಕಾರಂತರ 'ಪ್ರವಾಸಿಯ ಪತ್ರಗಳು' ಕೃತಿಯು ಪತ್ರ ರೂಪದಲ್ಲಿದೆ. ದೇ.ಜವರೇಗೌಡರು ತಮ್ಮ ಪ್ರವಾಸದ ಅನುಭವಗಳನ್ನು ದಿನಚರಿ ರೂಪದಲ್ಲಿಯೇ ದಾಖಲಿಸಿದ್ದಾರೆ. ಕುವೆಂಪು ಅವರು ಪ್ರಭುಶಂಕರ ಅವರ 'ಅಮೆರಿಕದಲ್ಲಿ ನಾನು, ಶಾಂತಿ' ಪ್ರವಾಸ ಕೃತಿಯ ಮುನ್ನುಡಿಯಲ್ಲಿ "ಕಾದಂಬರಿಯ ಸ್ವಾರಸ್ಯವೂ ಭಾವ ಪ್ರಬಂಧದ ಆತ್ಮೀಯತೆಯು ಹೊಸೆದುಕೊಂಡು ಪ್ರವಾಸ ಕಥನ ಪ್ರವಹಿಸುತ್ತಿತ್ತು"ಎಂದಿದ್ದಾರೆ. ಅಂದರೆ ಪ್ರವಾಸ ಸಾಹಿತ್ಯವು ಕಾದಂಬರಿಯ ಸ್ವರೂಪವನ್ನೂ ಹಾಗು ಪ್ರಬಂಧದ ಬಂಧ ಎರಡನ್ನೂ ತನ್ನೊಳಗೆ ಹಿಡಿದಿಟ್ಟುಕೊಳ್ಳುವ ಗುಣವನ್ನು ಹೊಂದಿರುವುದನ್ನು ಗುರುತಿಸಿದ್ದಾರೆ. ಹಾಗಾಗಿ ಪ್ರವಾಸ ಸಾಹಿತ್ಯ ನಿರ್ದಿಷ್ಟವಾಗಿ ಇಂತಹುದೇ ರೂಪದಲ್ಲಿರಬೇಕೆಂಬ ಕಟ್ಟುಪಾಡುಗಳೇನಿಲ್ಲ. ಕನ್ನಡ ಪ್ರವಾಸ ಸಾಹಿತ್ಯದಲ್ಲಿ ಗದ್ಯ ಶೈಲಿಯ ಪ್ರವಾಸ ಕಥನಗಳೇ ಹೆಚ್ಚಿದ್ದು, ಗದ್ಯ ಶೈಲಿಯಲ್ಲಿ ಒಳ ಪ್ರಕಾರಗಳನ್ನು ಕಾಣಬಹುದು. ದಿನಚರಿ, ಪತ್ರ, ನಾಟಕ, ಪ್ರಬಂಧ, ಲಘು ಕಥನ, ಕಾದಂಬರಿ, ಆತ್ಮ ಚರಿತ್ರೆ, ಮತ್ತು ಜೀವನ ಚರಿತ್ರೆ ರೂಪಗಳಲ್ಲಿದೆ.

>**ದಿನಚರಿ ರೂಪದ ಪ್ರವಾಸ ಕೃತಿಗಳು**

೧. ಸಮುದ್ರದಾಚೆಯಿಂದ– ವಿ. ಕೃ. ಗೋಕಾಕ್
೨. ನಮ್ಮ ವಿದೇಶ ಯಾತ್ರೆ– ಮೂಜಗಂ
೩. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ– ಜಿ.ಎಸ್. ಶಿವರುದ್ರಪ್ಪ
೪. ಸೋವಿಯೆತ್ ನಾಡಿನಲ್ಲಿ ಹತ್ತು ದಿನಗಳು– ಉ.ಕಾ. ಸುಬ್ಬರಾಯಚಾರ್
೫. ಸೋವಿಯೆತ್ ದಿನಚರಿ– ಶ್ರೀ ರಂಗರಾಜ್
೬. ವಿದೇಶದಲ್ಲಿ ನಾಲ್ಕು ವಾರ– ದೇ. ಜವರೇಗೌಡ
೭. ಪ್ರವಾಸಿಯ ದಿನಚರಿ– ದೇ. ಜವರೇಗೌಡ
೮. ಇಂಗ್ಲೆಂಡಿನಲ್ಲಿ ಚತುರ್ಮಾಸ– ಜಿ.ಎಸ್. ಶಿವರುದ್ರಪ್ಪ
೯. ಇತಾಲಿಯಾ ನಾನು ಕಂಡಂತೆ– ಕು.ಶಿ. ಹರಿದಾಸಭಟ್ಟ.

>**ಪತ್ರರೂಪದ ಪ್ರವಾಸ ಕೃತಿಗಳು**

೧. ಗೆಜ್ಜೆಯ ಹೆಜ್ಜೆ ನುಡಿ– ಚಂದ್ರಭಾಗದೇವಿ ಕೃಷ್ಣರಾವ್
೨. ಪ್ಯಾರಿಸ್ಸಿನಿಂದ ಪ್ರೇಯಸಿಗೆ– ನವರತ್ನಾ ರಾಂ.
೩. ಶಶಿ ಕಂಡ ಜರ್ಮನಿ– ಹೊ. ಶ್ರೀನಿವಾಸಯ್ಯ

೪. ಪ್ರವಾಸಿಯ ಪತ್ರಗಳು– ಕೆ.ಆರ್ ಕಾರಂತ್

>**ಪ್ರಬಂಧರೂಪದ ಪ್ರವಾಸ ಕೃತಿಗಳು**

೧. ಸೋವಿಯತ್ ದೇಶ ಕಂಡೆ– ಪಾಟೀಲ ಪುಟ್ಟಪ್ಪ

೨. ನನ್ನ ಬೆಲ್ಜಿಯಂ ಪ್ರವಾಸ – ಭಾರತೀ ಭಟ್

>**ಲಘು ಕಥನರೂಪದ ಪ್ರವಾಸ ಕೃತಿಗಳು.**

೧. ಅಯನ– ನಾಗತಿಹಳ್ಳಿ ಚಂದ್ರಶೇಖರ್

೨. ಕೊರವಂಜಿಯ ಪಡುವಣ ಯಾತ್ರೆ–ರಾ.ಶಿ.

೩. ದೇವರಿಲ್ಲದ ಗುಡಿ– ಬೀಚಿ

>**ಕಾದಂಬರಿರೂಪದ ಪ್ರವಾಸ ಕೃತಿಗಳು**

೧. ಅಪೂರ್ವ ಪಶ್ಚಿಮ– ಕೆ. ಶಿವರಾಮ ಕಾರಂತ

೨. ಒಂದು ಕನಸಿನ ಪಯಣ– ನೇಮಿಚಂದ್ರ

೩. ಸ್ನೇಹಯಾತ್ರೆ– ಅನುಪಮಾ ನಿರಂಜನ

೪. ಯುರೋ–ದರ್ಶನ, ಹೇಮಲತಾ ಮಹಿಷಿ

>**ಆತ್ಮಚರಿತ್ರೆಯ ರೂಪದ ಪ್ರವಾಸ ಕೃತಿಗಳು**

೧. ರಾಗ ತಾನ : ಸೇನ ದಡದಲ್ಲಿ– ವಸಂತ ಕವಲಿ

೨. ವೈದ್ಯನ ವಿದೇಶ ಪ್ರವಾಸ– ಜಿ. ಗೋಪಾಲ್

೩. ಬೆಂಗಳೂರಿಂದ ಬಾರ್ಸಲೋನಕ್ಕೆ– ಜಿ. ಗೋಪಾಲ್

>**ಜೀವನಚರಿತ್ರೆ ರೂಪದ ಪ್ರವಾಸ ಕೃತಿಗಳು**

೧. ಪ್ರಭುವರ್ಯರ ಯೂರೋಪ್ ಪ್ರವಾಸ(ಕೃಷ್ಣರಾಜ ಒಡೆಯರ್ ಅವರ ಯುರೋಪ್ ಪ್ರವಾಸ) – ಆರ್. ಎಸ್. ನಾರಾಯಣರಾವ್

>**ಪದ್ಯರೂಪದ ಪ್ರವಾಸ ಕೃತಿಗಳು**

೧. ಇಂಗ್ಲೆಂಡಿನಲ್ಲಿ ಏಸೊಂದು–ದೇಶಪಾಂಡೆ ಸುಬ್ಬರಾಯ ('ಏಕಪದಿ' ಹೊಸ ಕಾವ್ಯ ಪ್ರಕಾರದಲ್ಲಿ ರಚನೆಗೊಂಡ 'ಒಂದೇ ಸಾಲಿನ ಕವನ' ಗಳ ಕೃತಿ)

೨. ಸಮುದ್ರ ಗೀತೆಗಳು– ವಿ. ಕೃ. ಗೋಕಾಕ್

೩. ಇಂದಲ್ಲ, ನಾಳೆ (ಚಂಪೂ ಶೈಲಿಯ ಕೃತಿ)– ವಿ. ಕೃ. ಗೋಕಾಕ್

ಆ) ಪ್ರವಾಸ ಸಾಹಿತ್ಯ ಕೃತಿಗಳ ಸಾಮಾನ್ಯ ಲಕ್ಷಣಗಳು :

೧. 'ನಾನು' ಎಂಬ ಆತ್ಮ ನಿವೇದನಾ ಉದ್ಗಾರದೊಂದಿಗೆ ಪ್ರವಾಸ ಕೃತಿಗಳನ್ನು ನಿರೂಪಿಸಲಾಗುತ್ತದೆ.

೨. ಪ್ರವಾಸ ಕೃತಿಗಳು ಹೆಚ್ಚಾಗಿ ಗದ್ಯರೂಪದಲ್ಲಿ ಇರುತ್ತವೆ.

೩. ಪ್ರವಾಸದಲ್ಲಿ ಗಳಿಸಿದ ಅನುಭವಗಳೇ ಪ್ರವಾಸ ಸಾಹಿತ್ಯದ ವಸ್ತು ಆಗಿರುತ್ತದೆ.

೪. ನಿರೂಪಣಾ ಧಾಟಿಯಲ್ಲಿದ್ದು, ಇಡೀ ಕೃತಿಯಲ್ಲಿ ಲೇಖಕ ಕೇಂದ್ರಿತ ವಿವರಗಳಿರುತ್ತವೆ.

೫. ಒಂದೇ ಸ್ಥಳ/ವಸ್ತುಗಳ ಬಗ್ಗೆ ಲೇಖಕರ ಪ್ರತಿಕ್ರಿಯೆಗಳು/ಅಭಿಪ್ರಾಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ.

೬. ಪ್ರವಾಸ ಕೃತಿಗಳು ತಾವು ಭೇಟಿ ಮಾಡಿದ ಪ್ರೇಕ್ಷಣೀಯ ಸ್ಥಳಗಳ ಜೊತೆಗೆ ತಮ್ಮ ಬದುಕಿನ ಘಟನೆಗಳನ್ನೂ ಕೂಡ ಜೊತೆ ಜೊತೆಗೆ ದಾಖಲಿಸುತ್ತವೆ.

೭. ಪ್ರವಾಸ ಕೃತಿಗಳು ವ್ಯಕ್ತಿನಿಷ್ಠವಾಗಿವೆ.

ಅಧ್ಯಯನದ ಮಿತಿಗಳು :

ಕನ್ನಡದಲ್ಲಿ ಇದುವರೆಗೆ ಪ್ರಕಟವಾದ ಸುಮಾರು ೧೦೬ಕ್ಕೂ ಹೆಚ್ಚು ಕೃತಿಗಳಲ್ಲಿ ನಲವತ್ತೈದಕ್ಕೂ ಹೆಚ್ಚು ಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದ್ದು, ಈ ಕೃತಿಗಳನ್ನು ಆಧರಿಸಿ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಯನದ ವ್ಯಾಪ್ತಿಯ ಮಿತಿಯಲ್ಲಿಯೇ ಹೇಳಿಕೆಗಳನ್ನು ನಿರೂಪಿಸಲಾಗಿದೆ. ಯಾವುದೇ ದೇಶವನ್ನು ಪ್ರವಾಸದ ಸಂದರ್ಭದಲ್ಲಿ ಸಂದರ್ಶಿಸಿದ ಕೆಲವೇ ದಿನಗಳೊಳಗೆ ಅಳೆದು ತೂಗಿ ನೋಡಿ ತೀರ್ಮಾನಿಸಲು ಸಾಧ್ಯವಿಲ್ಲ ಎಂಬ ಮಿತಿಯನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಆ ಹಿನ್ನೆಲೆಯಲ್ಲಿಯೇ ಲೇಖಕರ ದೃಷ್ಟಿಕೋನಗಳನ್ನು, ಅಭಿಪ್ರಾಯಗಳನ್ನು ಸ್ವೀಕರಿಸಲಾಗಿದೆ. ಲೇಖಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಣೆ ಮಾಡಲಾಗಿದೆ.

ಲೇಖಕರಾರು 'ಕೃತಿಯಲ್ಲಿ ವ್ಯಕ್ತಪಡಿಸಿದ ವಿಚಾರಗಳು ತನ್ನ ಪೂರ್ಣ ಅನುಭವದ ಯಥಾವತ್ತು ದಾಖಲೀಕರಣವಾಗಿದೆ' ಎಂಬುದನ್ನು ಒಪ್ಪಿಕೊಂಡಿರುವುದಿಲ್ಲ. ಹಾಗೂ 'ತಮ್ಮ ಬರವಣಿಗೆಯು ಅನುಭವಗಳನ್ನು ನೂರಕ್ಕೆ ನೂರರಷ್ಟು ಓದುಗರನ್ನು ಮುಟ್ಟಿಸಲು ಸಶಕ್ತವಾಗಿದೆ' ಎಂಬ ಭಾವವನ್ನು ತಾಳಿರುವುದಿಲ್ಲ. ಅದಕ್ಕೆ ಕಾರಣ ತಾವು ಕಂಡು ಅನುಭವಿಸಿದ ವಿಚಾರಗಳನ್ನು ಸಶಕ್ತವಾಗಿ ಮೂಡಿಸಲು ಸಾಧ್ಯವಾಗದ ಕೊರತೆ ಲೇಖಕರಲ್ಲಿ ಕಾಣಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ. ಬಹುತೇಕ ಲೇಖಕರು ತಮ್ಮ ಕೃತಿಯ ಆರಂಭದಲ್ಲಿ ಅಥವಾ ಮುನ್ನುಡಿಯಲ್ಲಿ ಈ ಬಗೆಯ ಅಭಿಪ್ರಾಯವನ್ನು ನಿವೇದಿಸಿಕೊಂಡಿದ್ದಾರೆ. ಬರವಣಿಗೆಗೂ ಮಿತಿಗಳಿವೆ. ಬರವಣಿಗೆ ಲೇಖಕನು ಹೊಂದಿರುವ ಪದಗಳ ಜ್ಞಾನದ ಮಟ್ಟವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಪ್ರವಾಸ ಕೃತಿಗಳನ್ನು ಲೇಖಕನ ಪರಿಪೂರ್ಣ ಅನುಭವದ ಪರಿಪಾಕವೆಂದು ಹೇಳಲಾಗುವುದಿಲ್ಲ. ಸೀಮಿತ ಪರಿಮಿತಿಯ ಹಿನ್ನೆಲೆಯಲ್ಲಿ ತಾವು ಹೋಗಿ ಬಂದ ದೇಶಗಳ ಬಗೆಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಿತಿಗಳನ್ನು ಗಮನದಲ್ಲಿರಿಸಿಕೊಂಡು ಉಲ್ಲೇಖಿತ ಪ್ರವಾಸಕಥನಗಳನ್ನು ವಿಶ್ಲೇಷಣೆ ಮಾಡಲಾಗಿದೆ.

೧.೫ ಅಧ್ಯಯನದ ವಿಧಾನ

ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರವಾಸ ಕೃತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಸಂಶೋಧನಾ ವಿಧಾನವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಭಾರತೀಯ ಸಂಸ್ಕೃತಿ ಮತ್ತು ಯುರೋಪ್ ಸಂಸ್ಕೃತಿಯ ನಡುವೆ ಸಾಂಸ್ಕೃತಿಕವಾಗಿ ಅನೇಕ ಸಾಮ್ಯತೆಗಳಿವೆ. ಈ ಸಾಮ್ಯತೆ ಇರುವ ಅಂಶಗಳನ್ನು ತೌಲನಿಕ ವಿಧಾನದ ಮೂಲಕ ವಿಶ್ಲೇಷಣಾತ್ಮಕ ಅಧ್ಯಯನ ಮಾಡಲಾಗಿದೆ. ವಿಶ್ಲೇಷಣೆಗಾಗಿ ಅನುಗಮನ ತರ್ಕ ವಿಧಾನವನ್ನು ಅನುಸರಿಸಲಾಗಿದೆ. ಪಠ್ಯಗಳನ್ನು ಭೂಗೋಳಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ, ಶಿಕ್ಷಣಶಾಸ್ತ್ರ, ಮನೋವಿಜ್ಞಾನ ಹಾಗೂ ಸಮಾಜಶಾಸ್ತ್ರೀಯ ನೆಲೆಯಲ್ಲಿ ಬಹುಶಿಸ್ತೀಯ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ. ವಿವರಣಾತ್ಮಕ ಮಾದರಿಯ ಹಾಗೂ ವಿಶ್ಲೇಷಣಾತ್ಮಕ ಮಾದರಿಯ ಅಧ್ಯಯನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

ಕೊನೆ ಟಿಪ್ಪಣಿ

೧. https://www.goodreads.com/quotes...

೨. **ಕನ್ನಡದಲ್ಲಿ ಮೂಡಿಬಂದ ಪ್ರಾರಂಭಿಕ ಪ್ರವಾಸ ಕೃತಿಗಳೆಂದರೆ :-**

ಅ) ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ- ದಕ್ಷಿಣ ಭಾರತ ಯಾತ್ರೆ, ೧೮೯೦. (ಕನ್ನಡದ ಮೊದಲ ಪದ್ಯರೂಪದ ಪ್ರವಾಸ ಕೃತಿ)

ಆ) ಬಿ. ಪುಟ್ಟಯ್ಯ – ಅಭಿವೃದ್ಧಿ ಸಂದೇಶ, ೧೯೨೧ (ಕನ್ನಡದ ಮೊದಲ ವಿದೇಶ (ಯುರೋಪ್) ಪ್ರವಾಸ ಕೃತಿ)

ಇ) ಪಿ. ಸೀತಾರಾಮಯ್ಯ – ಪಂಪಾಯಾತ್ರೆ, ೧೯೨೬ (ಕನ್ನಡದ ಮೊದಲ ಗದ್ಯರೂಪದ ದೇಶಿ ಪ್ರವಾಸ ಕೃತಿ)

ಈ) ಸಿದ್ಧವನಹಲ್ಲಿ ಕೃಷ್ಣಶರ್ಮ- ವರ್ಧಾಯಾತ್ರೆ, ೧೯೩೯('ವಾರ್ಧಾಯಾತ್ರೆ'ಯ ಸಂದರ್ಭದ ಗಾಂಧೀಜಿಯವರ ಜೀವನ, ವ್ಯಕ್ತಿತ್ವ ಮತ್ತು ಅವರ ಸಾಹಿತ್ಯವನ್ನು ಪರಿಚಯಿಸುವ ಕೃತಿ)

ಉ) ವಿ.ಕೃ ಗೋಕಾಕ್ – ಸಮುದ್ರದಾಚೆಯಿಂದ, ೧೯೩೭.

೩. www.worldmetrs.info/population/countries-in-europe ವೆಬ್‌ಸೈಟ್‌ನಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಅಧ್ಯಾಯ: ೨
ಕನ್ನಡದ ಪ್ರವಾಸ ಸಾಹಿತ್ಯ ಕುರಿತು ಇದುವರೆಗೆ ನಡೆದಿರುವ ಅಧ್ಯಯನ ಸಮೀಕ್ಷೆ

೨.೧. ಕನ್ನಡದ ಪ್ರವಾಸ ಸಾಹಿತ್ಯ ಕುರಿತು ಇದುವರೆಗೆ ಪ್ರಕಟವಾಗಿರುವ ವಿಮರ್ಶಾತ್ಮಕ/ಸಂಶೋಧನಾ ಬರೆಹಗಳ ಸಮೀಕ್ಷೆ

೨.೨. ಕನ್ನಡದ ಯುರೋಪ್ ಪ್ರವಾಸ ಸಾಹಿತ್ಯ ಕುರಿತು ಇದುವರೆಗೆ ಪ್ರಕಟವಾಗಿರುವ ವಿಮರ್ಶಾತ್ಮಕ/ಸಂಶೋಧನಾ ಬರೆಹಗಳ ಸಮೀಕ್ಷೆ

ಅಧ್ಯಾಯ: ೨

ಕನ್ನಡದ ಪ್ರವಾಸ ಸಾಹಿತ್ಯದ ಕುರಿತು ಇದುವರೆಗೆ ನಡೆದಿರುವ ಅಧ್ಯಯನ ಸಮೀಕ್ಷೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವೋದಯ ಕಾಲಘಟ್ಟ ಪ್ರಾರಂಭವಾಗುವ ಮೊದಲೇ ಪ್ರವಾಸ ಸಾಹಿತ್ಯ ಪ್ರಕಾರದಲ್ಲಿ ಕೃತಿ ರಚಿತವಾಗಿದೆ. ೧೮೯೦ರಲ್ಲಿ 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಅವರ 'ದಕ್ಷಿಣ ಭಾರತ ಯಾತ್ರೆ' ಕನ್ನಡದ ಮೊದಲ ಪ್ರಕಟಿತ ಕೃತಿಯಾಗಿದೆ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಪ್ರವಾಸ ಕೃತಿಗಳು ರಚಿತವಾಗಿದ್ದರೂ ಸಂಖ್ಯೆಯಲ್ಲಿ ವಿರಳವಾಗಿದೆ. ಈ ಕಾಲಘಟ್ಟದಲ್ಲಿ ಪ್ರವಾಸ ಕೃತಿಗಳ ಸಂಖ್ಯೆಯಲ್ಲಿ ಎರಡಂಕಿಯನ್ನು ದಾಟಿಲ್ಲ. ವಿದೇಶ ಪ್ರವಾಸಕ್ಕಿದ್ದ ಅನನುಕೂಲತೆಗಳು, ಸಮಾಜದಲ್ಲಿದ್ದ ಮೂಢನಂಬಿಕೆಗಳು, ಶಿಕ್ಷಣದ ಕೊರತೆ ಮತ್ತು ವಿಶ್ವಯುದ್ಧಗಳು ವಿದೇಶಕ್ಕೆ ತೆರಳಲು ಅಡ್ಡಿಯಾಗಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯೋತ್ತರ ಕಾಲಘಟ್ಟದ ಮೊದಲೆರಡು ದಶಕಗಳಲ್ಲಿಯೂ ಹೆಚ್ಚು ಪ್ರವಾಸ ಕೃತಿಗಳು ಪ್ರಕಟವಾಗಿಲ್ಲ. ೧೯೭೦ರ ದಶಕದ ನಂತರ ಕನ್ನಡದ ಪ್ರವಾಸ ಸಾಹಿತ್ಯ ಕೃತಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಇಪ್ಪತ್ತೊಂದನೇ ಶತಮಾನದಲ್ಲಿ ಸಾಹಿತ್ಯದ ಇತರ ಪ್ರಕಾರಗಳಂತೆ ಪ್ರವಾಸ ಸಾಹಿತ್ಯ ಪ್ರಕಾರವು ಹೆಚ್ಚು ಲೇಖಕರನ್ನು ಆಕರ್ಷಿಸಿದೆ. ಜಿ.ಎಸ್. ಶಿವರುದ್ರಪ್ಪ, ಪೂರ್ಣಚಂದ್ರ ತೇಜಸ್ವಿ, ಕೆ. ಶಿವರಾಮ ಕಾರಂತ ವಿ.ಕೃ.ಗೋಕಾಕ್ ಮೊದಲಾದ ಕನ್ನಡ ಸಾಹಿತ್ಯದ ಅಗ್ರ ಲೇಖಕರು ಪ್ರವಾಸ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇವುಗಳಲ್ಲಿ ಯುರೋಪ್ ಪ್ರವಾಸ ಕೃತಿಗಳ ಕೊಡುಗೆ ಬಹುಮುಖ್ಯವಾಗಿದೆ.

ಪ್ರವಾಸ ಕೃತಿಗಳ ಸಂಖ್ಯೆ ಇಂದು ನಾಲ್ಕುನೂರರ ಗಡಿ ದಾಟಿದ್ದರೂ ಅವುಗಳ ಮೇಲೆ ಸಂಶೋಧನೆ ಮತ್ತು ವಿಮರ್ಶನ ಕಾರ್ಯ ಹೆಚ್ಚಾಗಿ ನಡೆದಿಲ್ಲ. ಹಾಗಾಗಿ ಇಂದಿಗೂ ಹೆಚ್ಚು ಚರ್ಚಿತವಾಗದೆ ಉಳಿದಿರುವ ಸಾಹಿತ್ಯದ ಪ್ರಕಾರವಾಗಿದೆ. ಸಾ.ಶಿ. ಮರುಳಯ್ಯ, ವರದರಾಜ ಹುಯಿಲುಗೋಳ, ಎನ್. ಎಸ್. ತಾರಾನಾಥ, ಎಸ್. ವಿದ್ಯಾಶಂಕರ್, ಮಲ್ಲೆಪುರಂ ಜಿ. ವೆಂಕಟೇಶ, ಬಿ.ಎ. ವಿವೇಕ ರೈ, ಮೊದಲಾದವರು ಪ್ರವಾಸ ಕೃತಿಗಳ ಮೇಲೆ ವಿಮರ್ಶೆ ಮಾಡಿದ್ದಾರೆ. ಆದರೂ ಈ ಕ್ಷೇತ್ರದಲ್ಲಿ ಬಂದಿರುವ ಸಂಶೋಧನಾ ಪ್ರಬಂಧಗಳು, ಲೇಖನಗಳು, ಕೃತಿಗಳ ಸಂಖ್ಯೆ ಹೆಚ್ಚಿಲ್ಲದಿರುವುದು ಕಂಡುಬಂದಿದೆ.

೨.೧. ಕನ್ನಡದ ಪ್ರವಾಸ ಸಾಹಿತ್ಯ ಕುರಿತು ಇದುವರೆಗೆ ಪ್ರಕಟವಾಗಿರುವ ವಿಮರ್ಶಾತ್ಮಕ/ಸಂಶೋಧನಾ ಬರೆಹಗಳ ಸಮೀಕ್ಷೆ

ಕನ್ನಡದಲ್ಲಿ ಪ್ರಕಟವಾದ ಪ್ರವಾಸ ಸಾಹಿತ್ಯ ಕೃತಿಗಳನ್ನು ಆಧರಿಸಿ ಅಧ್ಯಯನ ಮಾಡಲಾದ ಕೆಲವು ಸಂಶೋಧನಾ ಪ್ರಬಂಧಗಳಿವೆ. ಪ್ರವಾಸ ಸಾಹಿತ್ಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದವರಲ್ಲಿ ಮೊದಲಿಗರು ಡಾ॥ ಆರ್ಮುಗಂ. ಇವರು ಕುವೆಂಪು ವಿಶ್ವವಿದ್ಯಾಲಯದಲ್ಲಿ ತೀ.ನಂ.ಶಂಕರನಾರಾಯಣ ಅವರ ಮಾರ್ಗದರ್ಶನದಲ್ಲಿ ೧೯೯೩ರಲ್ಲಿ 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನಾ ಅಧ್ಯಯನ ಮಾಡಿದ್ದಾರೆ. ಈ ಪ್ರಬಂಧದಲ್ಲಿ ಅದುವರೆಗೆ ಪ್ರಕಟವಾದ ಬಹುತೇಕ ಕನ್ನಡದ ಎಲ್ಲಾ ಪ್ರವಾಸ ಕೃತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಅನುವಾದ ಪ್ರವಾಸ ಕೃತಿಗಳನ್ನೂ ಮತ್ತು ವಿದೇಶಿಯರ ಭಾರತ ಪ್ರವಾಸದ ಬರೆಹಗಳನ್ನೂ ಕೂಡ ತಮ್ಮ ಅಧ್ಯಯನದ ವ್ಯಾಪ್ತಿಯೊಳಗೆ

ತೆಗೆದುಕೊಂಡಿದ್ದಾರೆ. ಇವರು ಪ್ರವಾಸ ಕೃತಿಗಳನ್ನು ಸೃಜನಶೀಲ ಕೃತಿಗಳೆಂದು ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಈ ಮಹಾ ಪ್ರಬಂಧದಲ್ಲಿ ಪ್ರವಾಸ ಕೃತಿಗಳನ್ನು ನಾಲ್ಕು ಆಯಾಮಗಳ ಮೂಲಕ ವಿಶ್ಲೇಷಿಸಲಾಗಿದೆ. ಕರ್ತೃ, ಲೇಖಕನ ಮನೋಧರ್ಮ ಅಥವಾ ಸೈದ್ಧಾಂತಿಕತೆ, ಕಾಲಘಟ್ಟ, ಆಕೃತಿ ಎಂಬ ನಾಲ್ಕು ಅಂಶಗಳನ್ನು ಆಧರಿಸಿ ಪ್ರವಾಸ ಕೃತಿಗಳನ್ನು ವಿಶ್ಲೇಷಿಸಿದ್ದಾರೆ. ಅದುವರೆಗೆ ಪ್ರಕಟವಾಗಿದ್ದ ಎಲ್ಲಾ ಪ್ರವಾಸ ಕೃತಿಗಳನ್ನು ಈ ಅಧ್ಯಯನವು ಒಳಗೊಳ್ಳುವುದರಿಂದ ವ್ಯಾಪ್ತಿಯ ವಿಸ್ತಾರದ ಕಾರಣದಿಂದ ಕೇಂದ್ರೀಕೃತ ಮಾದರಿ ಸಂಶೋಧನಾ ಅಧ್ಯಯನಕ್ಕೆ ಹೆಚ್ಚು ಅವಕಾಶ ಸಿಗದಿರುವುದು ಈ ಪ್ರಬಂಧದ ಮಿತಿಯನ್ನು ಸೂಚಿಸುತ್ತದೆ.

ಲತಾಗುತ್ತಿ ಅವರು ೨೦೦೬ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಚೆನ್ನಕ್ಕ ಪಾವಟೆ ಅವರ ಮಾರ್ಗದರ್ಶನದಲ್ಲಿ "ಪ್ರವಾಸ ಸಾಹಿತ್ಯ : ಅನ್ಯಸಂಸ್ಕೃತಿಗಳ ಅಧ್ಯಯನ" ಎಂಬ ಸಂಶೋಧನಾ ಪ್ರಬಂಧವನ್ನು ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಹತ್ತು ಅಧ್ಯಾಯಗಳಿವೆ. ನಾಲ್ಕನೇ ಅಧ್ಯಾಯದಲ್ಲಿ ಯುರೋಪ್ ಸಂಸ್ಕೃತಿಯನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಕನ್ನಡದಲ್ಲಿ ಅದುವರೆಗೆ ಪ್ರಕಟವಾಗಿದ್ದ ಸುಮಾರು ೧೩೦ಕ್ಕೂ ಹೆಚ್ಚು ವಿದೇಶ ಪ್ರವಾಸ ಕೃತಿಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಭೌಗೋಳಿಕ ಮತ್ತು ಚಾರಿತ್ರಿಕ ನೆಲೆಯಲ್ಲಿ ಪ್ರವಾಸ ಕೃತಿಗಳನ್ನು ವಿಶ್ಲೇಷಿಸಲಾಗಿದ್ದು ಐತಿಹಾಸಿಕ ವಸ್ತು ಸಂಗತಿಗಳೇ ಪ್ರಬಂಧದ ಹೆಚ್ಚಿನ ಭಾಗವನ್ನು ಆವರಿಸಿಕೊಂಡಿದೆ.

ಬಿ.ಟಿ. ಅನುರಾಧ ಅವರು ೨೦೦೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸಿದ್ಧಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ "ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಪ್ರಬಂಧವನ್ನು ಸಲ್ಲಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಕನ್ನಡದಲ್ಲಿ ಪ್ರಕಟವಾದ ದೇಶಿ ಮತ್ತು ವಿದೇಶಿ ಪ್ರವಾಸ ಕೃತಿಗಳೆರಡನ್ನೂ ವಿಶ್ಲೇಷಿಸಲಾಗಿದೆ. ಇವರ ವಿಶ್ಲೇಷಣಾತ್ಮಕ ಮಾದರಿಯ ಅಧ್ಯಯನವು ಯುರೋಪ್ ಪ್ರವಾಸ ಕೃತಿಗಳಿಗಿಂತ ಅಮೆರಿಕಾ ದೇಶದ ಪ್ರವಾಸ ಕೃತಿಗಳನ್ನು ಆಧರಿಸಿದ ಚಿಂತನೆಗಳೇ ಕೇಂದ್ರೀಕೃತಗೊಂಡಿದೆ.

ಸಿ. ಕೆ. ಶೇಖರ ಅವರು ೨೦೦೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಕೆ. ಎಂ. ಮ್ಯಾಥ್ಯು ಅವರ ಮಾರ್ಗದರ್ಶನದಲ್ಲಿ "ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಉಗಮ ಮತ್ತು ವಿಕಾಸ" ಎಂಬ ಸಂಶೋಧನಾ ಪ್ರಬಂಧವನ್ನು ಸಲ್ಲಿಸಲಾಗಿದೆ. ಈ ಮಹಾ ಪ್ರಬಂಧದಲ್ಲಿ ಕನ್ನಡದ ಪ್ರವಾಸ ಸಾಹಿತ್ಯವನ್ನು ಕೇವಲ ಉಗಮ ಮತ್ತು ವಿಕಾಸದ ನೆಲೆಯಲ್ಲಿಯೇ ಚರ್ಚೆ ಮಾಡಿದ್ದಾರೆ. ವಿಶ್ವದ ಇತರ ಭಾಷೆಗಳಲ್ಲಿ ಪ್ರಕಟವಾಗಿರುವ ಪ್ರವಾಸ ಕೃತಿಗಳನ್ನೂ ಕೂಡ ತಮ್ಮ ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಂಡಿದ್ದು ಅವುಗಳನ್ನು ವಿಶ್ಲೇಷಣಾತ್ಮಕ ಅಧ್ಯಯನ ಮಾಡಿದ್ದಾರೆ.

ಎಸ್. ನಳಿನ ಅವರು ೨೦೧೦ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂ. ಗುರುಪ್ರಕಾಶ್ ಅವರ ಮಾರ್ಗದರ್ಶನದಲ್ಲಿ "ಕನ್ನಡ ಸಾಹಿತಿಗಳ ವಿದೇಶಿ ಪ್ರವಾಸ" ಎಂಬ ಸಂಶೋಧನಾ ಪ್ರಬಂಧದಲ್ಲಿ ಕರ್ತೃ ಕೇಂದ್ರಿತ ಅಧ್ಯಯನ ಮಾಡಲಾಗಿದೆ. ಇವರು ತಮ್ಮ ಪ್ರಬಂಧವನ್ನು ಕನ್ನಡದ ವಿದೇಶ ಪ್ರವಾಸ ಕೃತಿಗಳನ್ನು ಆಕರವನ್ನಾಗಿ ಮಾಡಿಕೊಂಡು ಏಳು ಅಧ್ಯಾಯಗಳನ್ನಾಗಿ ವಿಭಾಗಿಸಿ ಅಧ್ಯಯನ ಮಾಡಿದ್ದಾರೆ. ಸ್ತ್ರೀ ಕೇಂದ್ರಿತ ವಸ್ತುವಿಚಾರಗಳೇ ಇವರ ಅಧ್ಯಯನದ ಪ್ರಮುಖ ಗುರಿಯಾಗಿದೆ.

ಹಂಪಿ ವಿಶ್ವವಿದ್ಯಾಲಯದಲ್ಲಿ ತುಕಾರಾಂ ಅವರು "ಅಮೆರಿಕಾದ ಮೂರು ಪ್ರವಾಸ ಕಥನಗಳು" ಎಂಬ ಸಂಶೋಧನ ಅಧ್ಯಯನ ಕೈಗೊಂಡಿರುವ ಬಗ್ಗೆ ಮತ್ತು ಇದೇ ವಿಶ್ವವಿದ್ಯಾಲಯದಿಂದ ಆರ್. ಪೂರ್ಣಿಮ ಅವರು "ಅಮೆರಿಕಾದ ಪ್ರವಾಸ ಕಥನಗಳು" ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನೆ ಮಾಡಿದ್ದಾರೆ. ಈ ಎರಡು ಮಹಾಪ್ರಬಂಧಗಳಲ್ಲಿ ಅಮೆರಿಕಾ ಪ್ರವಾಸ ಕೃತಿಗಳನ್ನು ಕೇಂದ್ರೀಕರಿಸಿ ಅಧ್ಯಯನ ಮಾಡಲಾಗಿದೆ.

ಪ್ರವಾಸ ಸಾಹಿತ್ಯ ಕೃತಿಗಳನ್ನು ಆಧರಿಸಿ ಕೆಲವು ವಿಮರ್ಶಾ ಕೃತಿಗಳು ಪ್ರಕಟಗೊಂಡಿವೆ. ಅವುಗಳೆಂದರೆ.

೧) ಕನ್ನಡದಲ್ಲಿ ಪ್ರವಾಸ ಸಾಹಿತ್ಯ., ಜಿ.ಎಸ್.ವಡಗಾಂವಿ(೧೯೭೬)

೨) ಪ್ರವಾಸ ಸಾಹಿತ್ಯ., ಎನ್. ಎಸ್ ತಾರಾನಾಥ–(೧೯೯೦)

೩) ಪ್ರವಾಸೋದ್ಯಮ ಮತ್ತು ಕನ್ನಡದಲ್ಲಿ ಪ್ರವಾಸ ಸಾಹಿತ್ಯ., ವಿದ್ಯಾಶಂಕರ. ಎಸ್ (೧೯೯೨)

೪) ಪ್ರವಾಸ ಸಾಹಿತ್ಯ : ಒಂದು ಅಧ್ಯಯನ., ಮಲ್ಲೇಪುರಂ ಜಿ. ವೆಂಕಟೇಶ (ಸಂ) (೧೯೯೨)

ಎನ್. ಎಸ್. ತಾರಾನಾಥ ಅವರ ಪ್ರವಾಸ ಸಾಹಿತ್ಯ ಕೃತಿಯು ಪ್ರವಾಸದ ರೂಪುರೇಷೆ ಕುರಿತು ಪ್ರಾಥಮಿಕ ಮಾಹಿತಿಯನ್ನು ನೀಡುತ್ತದೆ. ಪ್ರವಾಸದ ಅರ್ಥ, ವ್ಯಾಖ್ಯಾನ, ಪ್ರಕಾರ, ಶೈಲಿಯನ್ನು ಆಧರಿಸಿದ ವಿಂಗಡಣೆ ಹೀಗೆ ಪ್ರವಾಸ ಸಾಹಿತ್ಯ ಕುರಿತ ಮೂಲ ಅಂಶಗಳನ್ನು ವಿಮರ್ಶಾತ್ಮಕವಾಗಿ ನಿರೂಪಿಸಿದ್ದಾರೆ. ಪ್ರವಾಸ ಸಾಹಿತ್ಯವನ್ನು ಸೃಜನೇತರ ಗುಂಪಿಗೆ ಸೇರಿಸಿದ್ದು ಯಾರು ಬೇಕಾದರೂ ಬರೆಯಬಹುದಾದ ಸರಳ ಪ್ರಕಾರ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಎಸ್. ವಿದ್ಯಾಶಂಕರ ಅವರು ಪ್ರವಾಸವನ್ನೇ ಕೇಂದ್ರೀಕರಿಸಿದ ಉದ್ಯಮಗಳ ಬಗ್ಗೆ ವಿಸ್ತಾರವಾದ ಚರ್ಚೆಯನ್ನು ಮಾಡಿದ್ದಾರೆ. ದೇಶದ ಅಭಿವೃದ್ಧಿಯಲ್ಲಿ ಪ್ರವಾಸವು ಆದಾಯದ ಮೂಲವಾಗಿ ಹೇಗೆ ಪ್ರಮುಖ ಎಂಬುದನ್ನು ಅಂಕಿ ಸಂಖ್ಯೆಗಳ ಸಮೇತ ವಿಶ್ಲೇಷಣೆ ಮಾಡಿದ್ದಾರೆ. ೧೯೯೨ರವರೆಗೆ ಪ್ರಕಟವಾದ ಪ್ರವಾಸ ಕೃತಿಗಳನ್ನು ಓದುಗನ ದೃಷ್ಟಿಯಲ್ಲಿ ಯಾವೆಲ್ಲಾ ಸಾಧ್ಯತೆಗಳಿವೆ ಎಂಬುದನ್ನು ವಿಮರ್ಶಾತ್ಮಕ ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಪ್ರವಾಸ ಸಾಹಿತ್ಯ: ಒಂದು ಅಧ್ಯಯನ' ಕೃತಿಯು ಸಂಪಾದನಾ ಗ್ರಂಥವಾಗಿದೆ. ಹೊ. ಶ್ರೀನಿವಾಸಯ್ಯ ಅವರ 'ಜಯಶ್ರೀ ಕಂಡ ಜಗತ್ತು' ಕೃತಿಯ ಬಿಡುಗಡೆಯ ಸಮಾರಂಭದ ದಿನದಂದು ಏರ್ಪಡಿಸಲಾದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ ಕೃತಿಯಾಗಿದೆ. ಎನ್.ಎಸ್. ತಾರಾನಾಥ., ಹೆಚ್. ಎಸ್. ವೆಂಕಟೇಶಮೂರ್ತಿ., ನರಹಳ್ಳಿ ಬಾಲಸುಬ್ರಹ್ಮಣ್ಯಂ., ಎಂ. ಹೆಚ್. ಕೃಷ್ಣಯ್ಯ., ಕೆ. ಎಂ. ಮುನಿಕೃಷ್ಣಪ್ಪ., ಕೆ. ಅನಂತರಾಮು., ಮೊದಲಾದವರು ಒಟ್ಟು ಪ್ರವಾಸ ಸಾಹಿತ್ಯದ ಸಮಗ್ರವಾದ ವಿಶ್ಲೇಷಣೆ ಸಾಧ್ಯವಾಗುವಂತೆ ವಲಯವಾರು ವಿಂಗಡಣೆ ಮಾಡಿಕೊಂಡು ವಿಶ್ಲೇಷಣೆ ಮಾಡಿದ್ದಾರೆ. ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರು ಯುರೋಪ್ ಪ್ರವಾಸ ಕೃತಿಗಳ ಕುರಿತು ಚಿಂತನಾತ್ಮಕ ವಿಚಾರಗಳನ್ನು ಮಂಡಿಸಿದ್ದಾರೆ.

ಪ್ರವಾಸ ಸಾಹಿತ್ಯದ ಕೃತಿಗಳನ್ನು ಆಧರಿಸಿ ಪ್ರಕಟವಾಗಿರುವ ವಿಮರ್ಶಾ ಲೇಖನಗಳೆಂದರೆ

೧. ಅಸುಂಡಿ ರಂಗರಾಯ ಅವರು ಬರೆದಿರುವ 'ವಿಲಾಯಿತಿಯ ಪ್ರವಾಸವು' ಎಂಬ ಲೇಖನವನ್ನು ಪ್ರವಾಸ ಸಾಹಿತ್ಯದ ಬಗೆಗಿನ ಮೊದಲ ಲೇಖನ ಎಂದು ಗುರುತಿಸಲಾಗಿದೆ.[೧]

೨. ಸಾ.ಶಿ.ಮರುಳಯ್ಯ ಅವರ 'ಕನ್ನಡನುಡಿ' ಎಂಬ ಲೇಖನ ೧೯೬೩ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಸಂಚಿಕೆಯಲ್ಲಿ (೨೬-೧೨) ಪ್ರಕಟಗೊಂಡಿದೆ. ಈ ಲೇಖನವು ಪ್ರವಾಸದ ಪ್ರಾಚೀನತೆಯನ್ನು ಪೌರಾಣಿಕ ಸಂಗತಿಗಳಿಂದ ಮೊದಲುಮಾಡಿ ಪುನರುಜ್ಜೀವನ ಕಾಲದ ನಾವಿಕರನ್ನು, ಇತಿಹಾಸಕಾರರನ್ನು ಒಳಗೊಂಡಂತೆ ವಿದೇಶಿ ಪ್ರವಾಸಿಗರ ಬರೆವಣಿಗೆಗಳನ್ನು ಮತ್ತು ಅದರ ಪ್ರಯೋಜನಗಳನ್ನು ಕುರಿತು ಚರ್ಚಿಸುತ್ತದೆ.

೩. ವರದರಾಜ ಹುಯಿಲುಗೋಳ ಅವರ 'ಪ್ರವಾಸ ಸಾಹಿತ್ಯ'ಎಂಬ ಲೇಖನ 'ಪ್ರಬುದ್ಧ ಕರ್ನಾಟಕ'ದ ಚಿನ್ನದಸಂಚಿಕೆಯಲ್ಲಿ ೧೯೭೦ರಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಪ್ರವಾಸ ಕೃತಿಗಳನ್ನು ಭೌಗೋಳಿಕ ನೆಲೆಯಲ್ಲಿ ವಿಂಗಡಿಸಿಕೊಂಡು ವಿಶ್ಲೇಷಿಸಿದ್ದಾರೆ. ಪ್ರವಾಸವು ಕೇವಲ ಪ್ರವಾಸ ಕೃತಿಯನ್ನು ಬರೆಯುವ ಸರಕಾಗಿ ಮಾತ್ರ ಬಳಕೆಯಾಗುವುದಿಲ್ಲ; ಬದಲಿಗೆ ವಿವಿಧ ಪ್ರಕಾರದ ಸಾಹಿತ್ಯ ಸೃಷ್ಟಿಗೂ ಪ್ರೇರಣೆ ನೀಡುತ್ತದೆ ಎಂದಿದ್ದಾರೆ. ವಿ.ಕೃ.ಗೋಕಾಕ್ ಅವರ 'ಸಮರಸವೇ ಜೀವನ' ಕಾದಂಬರಿಗೆ ಪ್ರವಾಸವು ಹೇಗೆ ನೆರವಾಗಿದೆ ಎಂಬುದನ್ನು ಉದಾಹರಿಸುತ್ತಾ ಪ್ರವಾಸದಿಂದಾಗುವ ಪ್ರಯೋಜನವನ್ನು ನಿರೂಪಿಸಿದ್ದಾರೆ.

೪. ಬಿ.ಎ. ವಿವೇಕ ರೈ ಅವರ 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಎಂಬ ಲೇಖನವು ಪ್ರಬುದ್ಧ ಕರ್ನಾಟಕದ ಅಶ್ವಯುಜ ಸಂಚಿಕೆಯಲ್ಲಿ ೧೯೭೦ರಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಕನ್ನಡದ ಪ್ರವಾಸ ಕೃತಿಗಳ ಜೊತೆಯಲ್ಲಿ ಅನುವಾದ ಪ್ರವಾಸ ಕೃತಿಗಳ ತಾತ್ವಿಕ ಅಂಶಗಳನ್ನು ಪ್ರಯೋಜನಾತ್ಮಕ ನೆಲೆಯಲ್ಲಿ ವಿವರಿಸಿದ್ದಾರೆ.

ಕುವೆಂಪು ವಿಶ್ವವಿದ್ಯಾಲಯದಲ್ಲಿ ತೀ.ನಂ ಶಂಕರನಾರಾಯಣ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಆಧುನಿಕತೆ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು' ಎಂಬ ಕೃತಿಯು ೨೦೧೦ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಪ್ರವಾಸ ಸಾಹಿತ್ಯವನ್ನು ಆಧುನಿಕ ನೆಲೆಯಲ್ಲಿ ವಿಶ್ಲೇಷಿಸುತ್ತಾ ಪ್ರವಾಸ ಕೃತಿಗಳನ್ನು ಬಹುಮುಖಿ ಪಠ್ಯದ ಹಿನ್ನೆಲೆಯಲ್ಲಿ ವಿಮರ್ಶೆ ಮಾಡಲಾಗಿದೆ. ಈ ಕೃತಿಯಲ್ಲಿ ಡಿ.ಎ ಶಂಕರ, ಲಕ್ಷ್ಮೀ ನಾರಾಯಣ ಅರೋರ, ಎಂ ಆರ್ಮುಗಂ ಮೊದಲಾದವರು ಲೇಖನಗಳನ್ನು ಬರೆದಿದ್ದಾರೆ.

೫. ಡಿ. ಎ ಶಂಕರ ಅವರ 'ಆಧುನಿಕತೆ: ಸಣ್ಣಕಥೆ ಮತ್ತು ಪ್ರವಾಸಸಾಹಿತ್ಯ' ಎಂಬ ಲೇಖನದಲ್ಲಿ ಪ್ರವಾಸ ಸಾಹಿತ್ಯದ ಬಗೆಗೆ ಪ್ರಾಥಮಿಕ ಪರಿಚಯ ನೀಡುವ ಮಾಹಿತಿಗಳಿದೆ.

೬. ಲಕ್ಷ್ಮೀನಾರಾಯಣ ಅರೋರ ಅವರು 'ಆಧುನಿಕತೆ: ಯುರೋಪ್ ಮತ್ತು ಅಮೆರಿಕಾ ಪ್ರವಾಸ ಸಾಹಿತ್ಯ' ಎಂಬ ಲೇಖನ ಬರೆದ್ದಾರೆ. ಈ ಲೇಖನದ ಅನುಬಂಧದಲ್ಲಿ ಅದುವರೆಗೆ ಪ್ರಕಟವಾಗಿದ್ದ ಸುಮಾರು ೧೧೫ ಕೃತಿಗಳ ಪಟ್ಟಿ ನೀಡಲಾಗಿದೆ. ಅಮೆರಿಕಾದ ಕೆಲವು ಪ್ರಮುಖ ಪ್ರವಾಸ ಕೃತಿಗಳನ್ನು ವಿವರಿಸಲಾಗಿದೆ.

೭. ಎಂ. ಆರ್ಮುಗಂ ಅವರು 'ಆಧುನಿಕತೆ, ಜಗತ್ತಿನ ಇತರ ದೇಶಗಳ ಪ್ರವಾಸ ಸಾಹಿತ್ಯ' ಎಂಬ ಲೇಖನ ಬರೆದಿದ್ದಾರೆ.

೮. ಜಿ.ಕೆ. ಮಧ್ಯಸ್ಥ ಅವರು 'ಪ್ರವಾಸ ಸಾಹಿತ್ಯ' ಎಂಬ ಲೇಖನವನ್ನು ಬರೆದಿದ್ದಾರೆ. (ಎಸ್.ಎಲ್. ಶೇಷಗಿರಿರಾವ್ ಅವರು ಸಂಪಾದಿಸಿರುವ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿ ಈ ಲೇಖನ ಪ್ರಕಟವಾಗಿದೆ.)

೯. ಎಂ.ಹೆಚ್. ಕೃಷ್ಣಯ್ಯ. ಅವರು 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಅಮೆರಿಕ' ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನವು ಮಲ್ಲೇಪುರಂ ಜಿ. ವೆಂಕಟೇಶ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ

'ಪ್ರವಾಸ ಸಾಹಿತ್ಯ- ಒಂದು ಅಧ್ಯಯನ' ಎಂಬ ಕೃತಿಯಲ್ಲಿದೆ. ಈ ಲೇಖನದಲ್ಲಿ ಅಮೆರಿಕ ಪ್ರವಾಸ ಕೃತಿಗಳನ್ನು ವಿಶ್ಲೇಷಿಸುತ್ತಾ ಯುರೋಪ್ ಪ್ರವಾಸ ಕೃತಿಗಳನ್ನು ವಿಮರ್ಶಿಸಿರುವ ಅಂಶಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೧೦. ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ 'ಸಾಮಾನ್ಯ ವಿಷಯ ವಿಶ್ವಕೋಶ'ದಲ್ಲಿ ಪ್ರವಾಸ ಸಾಹಿತ್ಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರುವ ಲೇಖನವಿದೆ. ಪ್ರವಾಸ ಸಾಹಿತ್ಯಕ್ಕೆ ಒಂದು ಪ್ರವೇಶಿಕೆ ಪಡೆಯಲು ಬೇಕಾಗುವ ಮಾಹಿತಿ ಈ ಲೇಖನದಲ್ಲಿದೆ.

೧೧. ಸಂತೋಷ್ ಕುಮಾರ್ ಗುಲ್ವಾಡಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ 'ಪ್ರವಾಸ ಸಾಹಿತ್ಯ' ಎಂಬ ಲೇಖನ ಬರೆದಿದ್ದಾರೆ. (ಪರಿಷತ್ ಪತ್ರಿಕೆಯ ಚಿನ್ನದ ಬೆಳಸು- ೧೯೭೦ ರ ಸಂಚಿಕೆಯಲ್ಲಿ ದೊರಕಿದೆ.)

ಈ ಸಂಶೋಧನಾ ಬರೆಹಗಳಲ್ಲಿ ಯುರೋಪಿನ ಪ್ರವಾಸ ಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ಚರ್ಚೆ ಮಾಡಲಾದ ಬರೆಹಗಳು ವಿರಳವಾಗಿದೆ. ಪ್ರವಾಸ ಕೃತಿಗಳನ್ನು ವಸ್ತುನಿಷ್ಠ ನೆಲೆಯಲ್ಲಿ ಚರ್ಚಿಸಿರುವ ಬರೆಹಗಳಲ್ಲಿ ಕೃತಿಕಾರನ ಮನೋಧೋರಣೆಗಳು ಕೃತಿಯ ನಿರೂಪಣೆಯ ಮೇಲೆ ಬೀರಬಹುದಾದ ಪ್ರಭಾವವನ್ನು ಆಧರಿಸಿ ವಿಶ್ಲೇಷಿಸಿರುವ ಬರೆಹಗಳು ವಿರಳವಾಗಿದೆ.

೨.೨. ಕನ್ನಡದ ಯುರೋಪ್ ಪ್ರವಾಸ ಸಾಹಿತ್ಯ ಕುರಿತು ಇದುವರೆಗೆ ಪ್ರಕಟವಾಗಿರುವ ವಿಮರ್ಶಾತ್ಮಕ/ಸಂಶೋಧನಾ ಬರೆಹಗಳ ಸಮೀಕ್ಷೆ

ಕನ್ನಡದಲ್ಲಿ ಪ್ರಕಟವಾಗಿರುವ ಯುರೋಪಿನ ಪ್ರವಾಸ ಕೃತಿಗಳನ್ನು ಆಧರಿಸಿ ಇದುವರೆಗೆ ಸಂಶೋಧನಾ ಪ್ರಬಂಧ ರಚಿತವಾಗಿಲ್ಲ.

ಕನ್ನಡದಲ್ಲಿನ ಯುರೋಪ್ ಪ್ರವಾಸ ಕೃತಿಗಳನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಇದುವರೆಗೂ ಯಾವುದೇ ವಿಮರ್ಶಾ ಕೃತಿಗಳು ಬಂದಿರುವುದಿಲ್ಲ. ಯುರೋಪ್ ಪ್ರವಾಸ ಸಾಹಿತ್ಯದ ಕುರಿತು ಕೆಲವು ಸಂಶೋಧನಾತ್ಮಕ ಹಾಗೂ ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ.

ಎಸ್. ವಿದ್ಯಾಶಂಕರ ಅವರ 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸಸಾಹಿತ್ಯ' ಎಂಬ ಕೃತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಅದುವರೆಗೆ ಪ್ರಕಟವಾಗಿದ್ದ ಎಲ್ಲಾ ಪ್ರವಾಸ ಕೃತಿಗಳ ಬಗ್ಗೆ ಪ್ರಾಥಮಿಕ ಮಾಹಿತಿಯೊಂದಿಗೆ ಸಂಕ್ಷಿಪ್ತ ವಿವರಣೆ ದೊರೆಯುತ್ತದೆ. ಲೇಖಕರು 'ಬೇರೆ ಬೇರೆ ದೇಶಗಳ ಪ್ರವಾಸ ಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ಹೆಸರಿಸಿ ಪ್ರಾಥಮಿಕ ಪರಿಚಯ ಮಾಡಿಕೊಟ್ಟಿದ್ದಾರೆ. ಇದು ಪ್ರವಾಸ ಸಾಹಿತ್ಯ ಕೃತಿಗಳನ್ನು ಆಧರಿಸಿ ಸಂಶೋಧನೆ ಕೈಗೊಳ್ಳುವವರಿಗೆ ಮಾರ್ಗದರ್ಶಕ ಕೃತಿಯಾಗಿದೆ.

ಕನ್ನಡದಲ್ಲಿ ರಚಿತವಾಗಿರುವ ಯುರೋಪ್ ಪ್ರವಾಸ ಕೃತಿಗಳನ್ನೇ ಕೇಂದ್ರವಾಗಿಟ್ಟುಕೊಂಡು ಪ್ರಕಟಗೊಂಡಿರುವ ವಿಮರ್ಶಾ ಲೇಖನಗಳು ವಿರಳ. ಕನ್ನಡದಲ್ಲಿ ಪ್ರಕಟವಾಗಿರುವ ದೇಶೀಯ ಮತ್ತು ವಿದೇಶಿಯ ಪ್ರವಾಸ ಕೃತಿಗಳ ಬಗ್ಗೆ ಚರ್ಚಿಸುವಾಗ ಸಾಂದರ್ಭಿಕವಾಗಿ ಕೆಲವು ಯುರೋಪ್ ಪ್ರವಾಸ ಕೃತಿಗಳನ್ನು ವಿಮರ್ಶೆ ಮಾಡಲಾಗಿದೆ.

೧.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಯುರೋಪ್' ಎಂಬ ಲೇಖನವನ್ನು ಗಮನಿಸಲಾಗಿದೆ. ಈ ಲೇಖನವು ಯುರೋಪ್ ಪ್ರವಾಸ ಕೃತಿಗಳನ್ನು ಅಮೆರಿಕಾ ಪ್ರವಾಸ ಕೃತಿಗಳೊಂದಿಗೆ ಹೋಲಿಸಿ ಅವೆರಡರ ನಡುವಿನ ವೈರುಧ್ಯ ಅಂಶಗಳನ್ನು ಕ್ರೋಢೀಕರಿಸುತ್ತದೆ. ಚಾರಿತ್ರಿಕ ಪ್ರಜ್ಞೆ, ಪರಂಪರೆಯ ಬಗೆಗಿನ ಅಭಿಮಾನ, ಕಮ್ಯುನಿಟಿ ಫೀಲಿಂಗ್, ತಾಂತ್ರಿಕ ಪ್ರಗತಿ ಮೊದಲಾದ ಅಂಶಗಳನ್ನು ಮಾನದಂಡವನ್ನಾಗಿ ಮಾಡಿಕೊಂಡು ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

೨.ಲತಾಗುತ್ತಿ ಅವರು ಯುರೋಪ್ ಖಂಡದ ಇತಿಹಾಸವನ್ನು ಕುರಿತು ಅಂತರ್ಜಾಲದಲ್ಲಿ ಲೇಖನ ಬರೆದಿದ್ದಾರೆ. ಈ ಲೇಖನದಲ್ಲಿ ಯುರೋಪಿನ ಪ್ರವಾಸ ಕೃತಿಗಳನ್ನು ಚಾರಿತ್ರಿಕ ದೃಷ್ಟಿಕೋನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಈ ಅಧ್ಯಯನ ಸಮೀಕ್ಷೆಯಿಂದ ತಿಳಿದುಬಂದ ಸಂಗತಿಗಳೆಂದರೆ ಕನ್ನಡದ ಪ್ರವಾಸ ಸಾಹಿತ್ಯ ಕುರಿತು ಅನೇಕ ಸಂಶೋಧನೆಗಳು ಹಾಗೂ ವಿಮರ್ಶಾ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಆದರೆ ಕಾದಂಬರಿ, ಕಥೆ, ನಾಟಕ ಪ್ರಕಾರಗಳೊಂದಿಗೆ ಹೋಲಿಸಿ ನೋಡಿದರೆ ವಿಮರ್ಶಕರು ಪ್ರವಾಸ ಸಾಹಿತ್ಯವನ್ನು ಹೆಚ್ಚು ಚರ್ಚೆ ಮಾಡಿದಂತಿಲ್ಲ. ಕೃತಿನಿಷ್ಠ/ವ್ಯಕ್ತಿನಿಷ್ಠ ವಿಮರ್ಶೆಯ ನೆಲೆಯಲ್ಲಿ ಕೆಲವು ಪ್ರವಾಸಿ ಲೇಖಕರ ಕೃತಿಗಳನ್ನು ಮಾತ್ರ (ಜಿ.ಎಸ್. ಶಿವರುದ್ರಪ್ಪ., ಕೆ. ಶಿವರಾಮ ಕಾರಂತ., ವಿ.ಕೃ. ಗೋಕಾಕ್) ವಿವಿಧ ಸಂದರ್ಭಗಳಲ್ಲಿ ಚರ್ಚೆ ಮಾಡಲಾಗಿದೆ. ಉಳಿದಂತೆ ಪ್ರಮುಖ ಎನಿಸುವ ಕೃತಿಗಳು ಕೂಡ ವಿಮರ್ಶಕರ ಅವಜ್ಞೆಗೆ ಒಳಗಾಗಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಯುರೋಪ್ ಪ್ರವಾಸ ಕೃತಿಗಳ ಕುರಿತು ಚರ್ಚೆ, ಸಂವಾದ, ವಿಮರ್ಶೆ ಮತ್ತು ಸಂಶೋಧನಾ ಅಧ್ಯಯನಗಳು ಹೆಚ್ಚು ನಡೆದಿಲ್ಲ. ಈ ದಿಸೆಯಲ್ಲಿ ಹೆಚ್ಚು ಚರ್ಚೆಗೆ ಅವಕಾಶಗಳಿರುವುದನ್ನು ಕಂಡು ಸಂಶೋಧನಾ ಅಧ್ಯಯನಕ್ಕೆ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕೊನೆ ಟಿಪ್ಪಣಿ

೧. ಎಲ್. ಎಸ್. ಶೇಷಗಿರಿ ರಾವ್ ಅವರು ಸಂಪಾದಿಸಿರುವ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಕೃತಿಯಲ್ಲಿರುವ ಜಿ.ಕೆ ಮಧ್ಯಸ್ಥ ಅವರ ಲೇಖನದಿಂದ ಮಾಹಿತಿಯನ್ನು ಪಡೆಯಲಾಗಿದೆ (ಎಲ್.ಎಸ್. ಶೇಷಗಿರಿ ರಾವ್.,(ಪ್ರ. ಸಂ.) ೧೯೯೩., ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ., ಉದಯಭಾನು ಕಲಾಸಂಘ., ಬೆಂಗಳೂರು)

ಅಧ್ಯಾಯ ೩

ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂವೇದನೆಗಳು

೩. ೧ ಸಾಂಸ್ಕೃತಿಕ ರೂಪಗಳು : ದೃಶ್ಯ ಮತ್ತು ದೃಷ್ಟಿಕೋನ

೩. ೧. ೧ ಆಚರಣೆಗಳು : ತೌಲನಿಕ ಚಿಂತನೆ

೩. ೧. ೨ ಆಹಾರಕ್ರಮ : ಸಂಪ್ರದಾಯವಾದಿಗಳು ಮತ್ತು ಸಾಮಾಜಿಕ ಸ್ಥಿತಿಗತಿ

೩. ೧. ೩ ಸಾಂಸ್ಕೃತಿಕ ರಾಜಕಾರಣ : ಸೋವಿಯತ್ ದೇಶದ ವೈಯಕ್ತಿಕ ಹಿತಾಸಕ್ತಿ ಕುರಿತ ಚಿಂತನೆ

೩. ೧. ೪ ಭೌಗೋಳಿಕ ಪರಿಸರ : ಪ್ರಭಾವ ಮತ್ತು ಪರಿಣಾಮ

೩. ೨ ಸಾಮಾಜಿಕ ಸಂಸ್ಕೃತಿ : ತೌಲನಿಕ ದೃಷ್ಟಿಕೋನ

೩. ೨. ೧ ಕೌಟುಂಬಿಕ ಮತ್ತು ಸಾಮುದಾಯಿಕ : ತೌಲನಿಕ ದೃಷ್ಟಿಕೋನ

೩. ೨. ೨ ಗ್ರಾಮೀಣ ಮತ್ತು ನಗರ ಸಮಾಜ : ತೌಲನಿಕ ದೃಷ್ಟಿಕೋನ

೩. ೨. ೩ ಸಾಮಾಜಿಕ ಅಸಮಾನತೆ : ತೌಲನಿಕ ದೃಷ್ಟಿಕೋನ

ಅಧ್ಯಾಯ : ೩

ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂವೇದನೆಗಳು

'ಸಂವೇದನೆ' ಎಂಬ ಪರಿಭಾಷೆಯು ಜ್ಞಾನ, ಅನುಭವ, ಅರಿವು, ತಿಳಿವಳಿಕೆ ಎಂಬ ಅರ್ಥಗಳನ್ನು ಹೊಂದಿದೆ.[1] ಸಂವೇದ್ಯ ಎಂಬ ಪದವು 'ಅನುಭವಕ್ಕೆ ಸಿಗುವಂಥದ್ದು' ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ 'ಸಾಂಸ್ಕೃತಿಕ ಸಂವೇದನೆ' ಎಂಬ ಪರಿಭಾಷೆಯನ್ನು ಬಳಸಲಾಗಿದೆ. ಈ ಪರಿಭಾಷೆಯಲ್ಲಿನ 'ಸಂವೇದನೆ' ಎಂಬ ಪದವನ್ನು 'ಅನುಭವಗಳಿಂದ ಪಡೆದ ಅರಿವು ಅಥವಾ ಜ್ಞಾನ' ಎಂದು ಅರ್ಥೈಸಿಕೊಳ್ಳಲಾಗಿದೆ. ಲೋಕದ ವಸ್ತುಗಳನ್ನು ನೋಡುವ ಪ್ರಕ್ರಿಯೆಯಲ್ಲಿ ನೋಡುವವನು(ಪ್ರವಾಸಿ ಲೇಖಕ) ಸಂವೇದನಾ ಕ್ರಿಯೆಗೆ ಒಳಗಾಗುತ್ತಾನೆ. ನೋಡುಗನಿಗೆ ಲೋಕದ ಎಲ್ಲಾ ವಸ್ತುಗಳು ಸಂವೇದನೆಗೆ ಕಾರಣವಾಗುವುದಿಲ್ಲ. ಕೆಲವು ವಸ್ತು ಮತ್ತು ಸಂಗತಿಗಳು ಮಾತ್ರ ಸಂವೇದನೆಗೆ ಕಾರಣವಾಗುತ್ತದೆ. ಎಸ್. ನಟರಾಜ ಬೂದಾಳು ಅವರು "ಎದುರಿಗಿರುವ ವಸ್ತುಲೋಕ ನಮ್ಮ ಅನುಭವಕ್ಕೆ ಬರುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಸಂಗತಿಗಳು ನಾಲ್ಕು. ಅ. ವಸ್ತುರೂಪ, ಆ. ಸ್ಪರ್ಶ ಇ. ಸಂವೇದನೆ, ಈ. ಬೋಧೆ"(ಎಸ್. ನಟರಾಜ ಬೂದಾಳು., ಕನ್ನಡ ಕಾವ್ಯ ಮೀಮಾಂಸೆ.,ಪು-೩೬) ಎಂದಿದ್ದಾರೆ. ಅಂದರೆ ನೋಡುವ ಪ್ರಕ್ರಿಯೆಯಲ್ಲಿ ಅನುಭವಕ್ಕೆ ಬರುವ ವಸ್ತುಗಳಲ್ಲಿ ಇಂದ್ರಿಯಗೋಚರವಾಗಿ ಮನಸ್ಸಿಗೆ ಬರುವ ವಸ್ತುಗಳು ಕೆಲವು ಮಾತ್ರ. ಮನಸ್ಸಿಗೆ ಬಂದ ವಸ್ತುಗಳಲ್ಲಿ ಕೆಲವು ಸಂವೇದನೆಗೆ ಕಾರಣವಾಗುತ್ತದೆ. ಸಂವೇದನೆಯನ್ನು ಉಂಟು ಮಾಡುವ ವಸ್ತು/ಸಂದರ್ಭಗಳು ಕ್ರಿಯೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿಯೊಂದಿಗೆ ಅಂತರ್‌ಸಂಬಂಧ ಹೊಂದಿರುತ್ತವೆ. ಸಮಾಜ ಮತ್ತು ಸಂಸ್ಕೃತಿ ಒಂದಕ್ಕೊಂದು ಪೂರಕವಾದ ಪರಿಕಲ್ಪನೆಗಳಾಗಿದ್ದು ಪ್ರವಾಸಿ ಲೇಖಕರಲ್ಲಿ ವ್ಯಕ್ತವಾದ ಸಂವೇದನಾಂಶಗಳನ್ನು ಈ ಎರಡೂ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ.

'ಸಾಂಸ್ಕೃತಿಕ ಸಂವೇದನೆ' ಎಂಬ ಪರಿಭಾಷೆಯನ್ನು ಅರ್ಥೈಸಿದಾಗ, ಯುರೋಪ್ ಪ್ರವಾಸಕ್ಕೆ ತೆರಳಿದ ಪ್ರವಾಸಿ ಲೇಖಕರನ್ನು ಆಧರಿಸಿ ಹೇಳುವುದಾದರೆ 'ಒಂದು ಸಮುದಾಯದಲ್ಲಿನ ಭೌತಿಕ ಮತ್ತು ಅಭೌತಿಕ ವಸ್ತು ವಿಷಯಗಳು ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ ಮಾನವನನ್ನು ಉದ್ದೀಪನಕ್ರಿಯೆಯಲ್ಲಿ ತೊಡಗಿಸುತ್ತದೆ. ಉದ್ದೀಪನೆಗೆ ಒಳಗಾದ ವ್ಯಕ್ತಿಯು ಅದರಿಂದ ಅನೇಕ ತಿಳಿವಳಿಕೆಯನ್ನು ಪಡೆಯುತ್ತಾನೆ. ಪ್ರವಾಸದಲ್ಲಿಯೂ ಇದೇ ಬಗೆಯ ಪ್ರಕ್ರಿಯೆ ನಡೆಯುತ್ತದೆ. ಪ್ರವಾಸದಿಂದ ಪಡೆದ ತಿಳಿವಳಿಕೆಯನ್ನು/ಸಂವೇದನೆಯನ್ನು ಪ್ರವಾಸಿ ಲೇಖಕರು ಬರೆಹಗಳ ಮೂಲಕ ವ್ಯಕ್ತಪಡಿಸುತ್ತಾರೆ. ಉದ್ದೀಪನೆಗೆ ಕಾರಣವಾದ ದೃಶ್ಯಗಳು ಸಂಸ್ಕೃತಿ ಪ್ರೇರಿತವಾಗಿದ್ದರೆ ಅವು ಲೇಖಕರ ದೃಷ್ಟಿಕೋನವನ್ನು ರೂಪಿಸುತ್ತದೆ. ರೂಪಿತವಾದ ದೃಷ್ಟಿಕೋನಕ್ಕೆ ಹಿನ್ನೆಲೆಯಾಗಿ ಆತನ ಸಂಸ್ಕೃತಿ ಪ್ರಭಾವಿಸುತ್ತದೆ. ಯುರೋಪ್ ಮತ್ತು ಭಾರತೀಯ ಸಂಸ್ಕೃತಿಯ ವಿಚಾರಗಳು ಮುಖಾಮುಖಿಯಾದಾಗ ಅದಕ್ಕೆ ಲೇಖಕರ ಪ್ರತಿಕ್ರಿಯೆಯು ಅಭಿಪ್ರಾಯದ ಮೂಲಕ ವ್ಯಕ್ತವಾಗುತ್ತದೆ. ಅಭಿಪ್ರಾಯಗಳು ಲೇಖಕರು ಸ್ಪಂದನೆಗೊಳಗಾದ ಸಂದರ್ಭದಲ್ಲಿನ ಸಂವೇದನಾತ್ಮಕ ಧೋರಣೆಗಳನ್ನು ವ್ಯಕ್ತಪಡಿಸುತ್ತದೆ. ಈ ಅಂಶವನ್ನು ಸ್ಥೂಲವಾಗಿ ಸಾಂಸ್ಕೃತಿಕ ಸಂವೇದನೆ ಎಂಬ ಪರಿಭಾಷೆಯ ಮೂಲಕ ರಚಿಸಿಕೊಳ್ಳಲಾಗಿದೆ.

ಮಾನವನಿಗೆ ತನ್ನದೇ ಆದ ಸಾಮಾಜಿಕ ಸಂಸ್ಕಾರ ಇರುತ್ತದೆ. ಅದರ ಜೊತೆ ತನ್ನ ದೇಶ-ಭಾಷೆ, ನಾಡು-ನುಡಿಯನ್ನು ಮೈಗೂಡಿಸಿಕೊಂಡಿರುತ್ತಾನೆ. ಪ್ರವಾಸಿ ಲೇಖಕನೂ ಇದಕ್ಕೆ ಹೊರತಾಗಿರುವುದಿಲ್ಲ.

ತಾನು ಭೇಟಿ ನೀಡಿದ ದೇಶದ ಅಥವಾ ಸ್ಥಳದ ಸಂಸ್ಕೃತಿಯನ್ನು ಗ್ರಹಿಸಿ, ಸಂವೇದನೆಗೆ ಒಳಗಾದ ಸಂದರ್ಭದಲ್ಲಿ ಉಂಟಾದ ಮಾನಸಿಕ ತುಮುಲಗಳನ್ನು ಬರೆವಣಿಗೆಯ ಮೂಲಕ ವ್ಯಕ್ತಪಡಿಸುತ್ತಾನೆ. ಅದರ ಔಚಿತ್ಯವನ್ನು ವಿಶ್ಲೇಷಿಸುವ ಕಾರ್ಯವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಪ್ರವಾಸ ಕೃತಿಗಳು ಕೇವಲ ಸಂದರ್ಶಿಸಿದ ಸ್ಥಳದ ವಿವರಣೆಗೆ ಸೀಮಿತವಾದರೆ ಅದು ಕೇವಲ ಮುಂದೆ ಪ್ರವಾಸ ಹೋಗುವವರಿಗೆ ಮಾರ್ಗದರ್ಶಿ ಕೈಪಿಡಿಯಾಗುತ್ತದೆ. ಪ್ರವಾಸಿ ಸ್ಥಳಗಳು ಕಾಣಿಸಿದ ನೋಟಗಳು ಲೇಖಕನ ತೌಲನಿಕ ವಿಮರ್ಶೆಗೆ ನಿಲುಕಿ ತನ್ನ ಮತ್ತು ತಾನು ಕಂಡದ್ದನ್ನು ವಿಚಕ್ಷಣ ದೃಷ್ಟಿಯಿಂದ ಶೋಧಿಸಿದಾಗ ಪ್ರವಾಸ ಕೃತಿಗಳು ವೈಚಾರಿಕ ನೆಲೆಯನ್ನು ಪಡೆದುಕೊಳ್ಳುತ್ತವೆ. ಈ ನೆಲೆಯಲ್ಲಿ ಲೇಖಕನಿಗೆ ಸಾಹಿತ್ಯಿಕ ದೃಷ್ಟಿಕೋನ ಇರಬೇಕು. ಓದುಗನಿಗೆ ಪ್ರವಾಸಿ ಲೇಖಕನ ಅನುಭವಗಳನ್ನು ತನ್ನದನ್ನಾಗಿ ಮಾಡಿಕೊಳ್ಳಲು ಸಹಾಯವಾಗುವಂತೆ ಬರೆಯುವ ಪ್ರತಿಭೆ ಅಗತ್ಯವಾಗಿರಬೇಕು. ಈ ಗುಣಗಳನ್ನು ಹೊಂದಿರುವ ಅನೇಕ ಯುರೋಪ್ ಪ್ರವಾಸ ಕೃತಿಗಳಿವೆ. ಈ ನೆಲೆಯಲ್ಲಿ ಯುರೋಪ್ ರಾಷ್ಟ್ರಗಳಿಗೆ ಭೇಟಿಕೊಟ್ಟ ಲೇಖಕರು ತಮ್ಮ ಸಂಸ್ಕೃತಿಯನ್ನು ಅಲ್ಲಿ ತಾವು ಕಂಡ ಸಂಸ್ಕೃತಿಯೊಂದಿಗೆ ಹೋಲಿಸಿ ಕೃತಿಯಲ್ಲಿ ದಾಖಲಿಸಿದ್ದಾರೆ.

ಈ ಅಧ್ಯಾಯವನ್ನು ಸಾಂಸ್ಕೃತಿಕ ರೂಪಗಳು : ದೃಶ್ಯ ಮತ್ತು ದೃಷ್ಟಿಕೋನ ಹಾಗೂ ಸಾಮಾಜಿಕ ಸಂಸ್ಕೃತಿ : ತೌಲನಿಕ ದೃಷ್ಟಿಕೋನ ಎಂಬ ಪರಿಕಲ್ಪನೆಗಳನ್ನು ರಚಿಸಿಕೊಂಡು ಅವುಗಳ ಅಡಿಯಲ್ಲಿ ವಿವಿಧ ಉಪಪರಿಕಲ್ಪನೆಗಳಾಗಿ ವಿಭಾಗಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

೩.೧ ಸಾಂಸ್ಕೃತಿಕ ರೂಪಗಳು: ದೃಶ್ಯ ಮತ್ತು ದೃಷ್ಟಿಕೋನ

'ಸಾಂಸ್ಕೃತಿಕ ರೂಪಗಳು' ಪರಿಕಲ್ಪನೆಯು ಜನರ ಜೀವನಕ್ರಮದೊಳಗೆ ಬರುವ ನಂಬಿಕೆಗಳು, ಧಾರ್ಮಿಕ ಆಚರಣೆಗಳು, ಪೌರಾಣಿಕ ಸಂಕಥನಗಳು, ಐತಿಹ್ಯಗಳು ಹೀಗೆ ಸಮಾಜವು ಒಳಗೊಳ್ಳುವ ಸಮಸ್ತ ವ್ಯವಸ್ಥೆಗಳ ಮೊತ್ತವಾಗಿದೆ. ಇದರ ಒಟ್ಟು ಸ್ವರೂಪವನ್ನು 'ಸಾಂಸ್ಕೃತಿಕ ರೂಪಗಳು' ಎಂದು ಪರಿಭಾಷಿಸಲಾಗಿದೆ. ಮುಂದುವರೆದು ಸಾಮಾಜಿಕ ಸಂವೇದನಾ ಅಂಶಗಳನ್ನು ಸಾಂಸ್ಕೃತಿಕ ಸಂವೇದನೆ ಪರಿಕಲ್ಪನೆಯ ಅಡಿಯಲ್ಲಿ ಉಪ ಅಧ್ಯಾಯವನ್ನಾಗಿ ಚರ್ಚಿಸಲಾಗಿದೆ. ಶೈಕ್ಷಣಿಕ, ಚಾರಿತ್ರಿಕ, ಮತ್ತು ಸ್ತ್ರೀ ಸಂವೇದನೆಗಳು ಸಂಸ್ಕೃತಿಯ ವ್ಯಾಪ್ತಿಯೊಳಗೆ ಗುರುತಿಸಿಕೊಂಡಿದ್ದರೂ ಅದನ್ನು ಬಹುಶಿಸ್ತೀಯ ನೆಲೆಯಲ್ಲಿ ಪ್ರತ್ಯೇಕ ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

'ಸಂಸ್ಕೃತಿ' ಎಂಬ ಪದವನ್ನು ಪ್ರವಾಸ ಕೃತಿಗಳಲ್ಲಿ ಲೇಖಕರು ಪ್ರಕಟಿಸಿರುವ ಸಾಂಸ್ಕೃತಿಕ ಸಂವೇದನೆಗಳ ಹಿನ್ನೆಲೆಯಲ್ಲಿ ಗ್ರಹಿಸಿಕೊಳ್ಳಲಾಗಿದೆ. ಎಂ. ಚಿದಾನಂದ ಮೂರ್ತಿ ಅವರು ಸಂಸ್ಕೃತಿ ಪದದ ಅರ್ಥವನ್ನು ನಿರ್ವಚಿಸುತ್ತಾ "ಸಂಸ್ಕೃತಿಯು ಒಂದು ಜನತೆಯ ಸಮಗ್ರ ಜೀವನ ವಿಧಾನವನ್ನು ಹೇಳುತ್ತದೆ"(ಎಂ.ಚಿದಾನಂದ ಮೂರ್ತಿ., ಕನ್ನಡ ಸಂಸ್ಕೃತಿ: ನಮ್ಮ ಹೆಮ್ಮೆ., ಪು-೪)ಎಂದಿದ್ದಾರೆ. ರಹಮತ್ ತರಿಕೆರೆ ಅವರು "ಒಂದು ಸಮುದಾಯ ಬದುಕುವ, ಆಲೋಚಿಸುವ ಸಮಸ್ತ ಆಯಾಮಗಳನ್ನು ಒಳಗೊಳ್ಳುವ ಒಂದು ಪರಿಭಾಷೆ"(ರಹಮತ್ ತರಿಕೆರೆ., ಸಾಂಸ್ಕೃತಿಕ ಅಧ್ಯಯನ., ಪು-೭)ಎಂದಿದ್ದಾರೆ. ಈ ಎರಡು ಹೇಳಿಕೆಗಳನ್ನು ಆಧರಿಸಿ ಸಂಸ್ಕೃತಿ ಪದದ ಅರ್ಥವನ್ನು ಹೀಗೆ ಗ್ರಹಿಸಿಕೊಳ್ಳಲಾಗಿದೆ. ಪ್ರತಿಯೊಂದು ದೇಶವು ತಮ್ಮ ಪ್ರಾಕೃತಿಕ ಲಕ್ಷಣಗಳ ಅನುಸಾರ ತಮ್ಮದೆಯಾದ ಸಂಸ್ಕೃತಿಯನ್ನು ರೂಢಿಸಿಕೊಂಡಿರುತ್ತದೆ.

ಆಯಾ ದೇಶದ ಲೇಖಕರು ತಾವು ವಾಸಿಸುವ ಪ್ರದೇಶದಲ್ಲಿ ಆಚರಣೆಯಲ್ಲಿರುವ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಅವರು ಪಾಶ್ಚಾತ್ಯ ಸಂಸ್ಕೃತಿಯನ್ನು ಗ್ರಹಿಸುವ ಬಗೆ ಹೇಗೆ ಎನ್ನುವುದನ್ನು ಅವರು ವ್ಯಕ್ತಪಡಿಸುವ ಅಭಿಪ್ರಾಯಗಳ ತಾತ್ವಿಕ ನೆಲೆಯ ಮೂಲಕ ತಿಳಿಯಲಾಗುತ್ತದೆ.

ಲೇಖಕರ ಪ್ರವಾಸದ ಉದ್ದೇಶ ಮತ್ತು ಸಾಮಾಜಿಕ ಹಿನ್ನೆಲೆ ಹಾಗೂ ಬೌದ್ಧಿಕ ಜ್ಞಾನವು ಪ್ರವಾಸದ ರೂಪುರೇಷೆಯನ್ನು ನಿರ್ಧರಿಸುತ್ತದೆ. ಆದರೆ ನಿಯೋಜಿತ ಪ್ರವಾಸದಲ್ಲಿ ಹೋದವರಿಗೆ ಸ್ವಾತಂತ್ರ್ಯ ಕಡಿಮೆ. ಕೆಲವು ಇತಿಮಿತಿಗಳ ನಡುವೆ ನೋಡಿ ಬರಬೇಕಾದ ಅನಿವಾರ್ಯತೆ ಇರುತ್ತದೆ. ಸಾಂಪ್ರದಾಯಿಕ ನೋಟ, ಸಾಮಾನ್ಯ ಗ್ರಹಿಕೆಯ ಆಚೆ ನಿಂತು ವಿಶ್ಲೇಷಿಸುವ ಲೇಖಕರ ಕೃತಿಗಳು ವೈಚಾರಿಕ ಪ್ರವಾಸ ಕೃತಿಗಳಾಗುತ್ತವೆ. ಪ್ರವಾಸಿ ಲೇಖಕ ಭಾರತೀಯತೆಯ ಬಂಧದಲ್ಲಿಯೇ ಯುರೋಪ್ ಸಂಸ್ಕೃತಿಯನ್ನು ಚಿತ್ರಿಸುವುದು ಸಾಮಾನ್ಯವಾಗಿದೆ. ಪ್ರತಿಯೊಂದು ಕೃತಿಯು ವಿದೇಶಗಳ ವಿಲಾಸವನ್ನು ಚಿತ್ರಿಸಿದರೂ ಅವುಗಳ ಒಳಗೆ ಸಂಗತವಾದ ಸ್ಥಳೀಯ ಪ್ರಜ್ಞೆ ಜಾಗೃತವಾಗಿರುವುದು ಕಂಡುಬರುತ್ತದೆ. ಈ ತರಹದ ಚಿತ್ರಣವು ಯುರೋಪ್‌ನ ಸಂಸ್ಕೃತಿಯನ್ನು ಪರಿಚಯಿಸದೆ ಭಾರತೀಯತೆಯನ್ನೇ ನಿರೂಪಿಸುತ್ತವೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಆಯ್ಕೆ ಮಾಡಿಕೊಂಡಿರುವ ಪ್ರವಾಸ ಕೃತಿಗಳನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.

೧೯೦೦ ರಿಂದ ೧೯೪೯ರ ಅವಧಿಯಲ್ಲಿ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

ಹದಿನೆಂಟನೆಯ ಶತಮಾನ ಮತ್ತು ಅದಕ್ಕಿಂತ ಹಿಂದಿನ ಕಾಲಘಟ್ಟದಲ್ಲಿ ಕನ್ನಡ ಶಿಷ್ಟ ಸಾಹಿತ್ಯ ಪರಂಪರೆಯಲ್ಲಿ ಯಾವುದೇ ಯುರೋಪ್ ಪ್ರವಾಸ ಕೃತಿ ಪ್ರಕಟವಾದ ಬಗ್ಗೆ ಮಾಹಿತಿಗಳಿಲ್ಲ. ಹತ್ತೊಂಬತ್ತನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿಯೂ ಕನ್ನಡದಲ್ಲಿ ಯಾವುದೇ ಯುರೋಪ್ ಪ್ರವಾಸ ಕೃತಿ ಪ್ರಕಟವಾಗಿರುವ ಬಗ್ಗೆ ಮಾಹಿತಿ ದೊರೆತಿಲ್ಲ. ಮೂರನೇ ದಶಕದ ಪ್ರಾರಂಭದ ವರ್ಷದಲ್ಲಿ 'ಬಿ. ಪುಟ್ಟಯ್ಯ' ಅವರ 'ಅಭಿವೃದ್ಧಿ ಸಂದೇಶ'(೧೯೨೧) ಎಂಬ ಕನ್ನಡದ ಮೊದಲ ಯುರೋಪ್ ಪ್ರವಾಸ ಕೃತಿ ಪ್ರಕಟವಾಗಿದೆ. ಈ ಕೃತಿಯು ಪಶ್ಚಿಮ ದೇಶಗಳ ಬಗ್ಗೆ ಪರಿಚಯಿಸಿದ ಮೊದಲ ಕೃತಿಯಾಗಿದೆ. ಈ ಕೃತಿಯೊಳಗೆ ಅಭಿವೃದ್ಧಿಯ ನೆಲೆಯಲ್ಲಿ ಭಾರತದೊಂದಿಗೆ ಪಶ್ಚಿಮ ದೇಶಗಳನ್ನು ಹೋಲಿಸುವ ದೃಷ್ಟಿಕೋನವಿದೆ. ನಾಲ್ಕನೇ ದಶಕದ ಮಧ್ಯಭಾಗದಲ್ಲಿ ವಿ.ಕೃ.ಗೋಕಾಕ್ ಅವರ 'ಸಮುದ್ರದಾಚೆಯಿಂದ' (೧೯೩೬) ಮತ್ತು ಆರ್. ಎಸ್ ನಾರಾಯಣ್‌ರಾವ್ ಅವರ 'ಪ್ರಭುವರ್ಯರ ಯುರೋಪ್ ಪ್ರವಾಸ'(೧೯೩೭), ಚನ್ನಾಜಮ್ಮಣ್ಣಿ ರಾಜಕುಮಾರಿ ಅವರ 'ನನ್ನ ಪ್ರಪಂಚ ಸಂಚಾರ' (೧೯೩೭)ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಈ ಕೃತಿಗಳು ರಚನೆಯಾದ ಕಾಲದಲ್ಲಿ ಭಾರತ ಬ್ರಿಟೀಷರ ವಸಾಹತು ಆಗಿತ್ತು. ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಳು ನಡೆಯುತ್ತಿದ್ದ ಸಂದರ್ಭದಲ್ಲಿ ವಿಲಾಯಿತಿಗೆ ಹೋಗುವುದು ಕಷ್ಟಕರವಾಗಿತ್ತು. ಆದರೆ ಇಂತಹ ಸಂದರ್ಭದಲ್ಲಿಯೂ ವಿ. ಕೃ. ಗೋಕಾಕ್ ಅವರು ಉನ್ನತ ಶಿಕ್ಷಣ ಪಡೆಯುವ ಉದ್ದೇಶದಿಂದ ಇಂಗ್ಲೆಂಡಿಗೆ ತೆರಳಿದ್ದರು. ಅದೇ ಕಾಲಘಟ್ಟದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ರಾಂತಿಗಾಗಿ ಯುರೋಪ್ ಪ್ರವಾಸ ಮಾಡಿರುವುದನ್ನು ಆರ್. ಎಸ್. ನಾರಾಯಣರಾವ್ ಅವರು ಕೃತಿಯಲ್ಲಿ ದಾಖಲಿಸಿದ್ದಾರೆ.

ಹತ್ತೊಂಬತ್ತನೆಯ ಶತಮಾನದ ನಾಲ್ಕನೇ ದಶಕದಲ್ಲಿ ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡಿತ್ತು. ಎರಡನೇ ಮಹಾಯುದ್ಧ ನಡೆಯುವ ಮುನ್ಸೂಚನೆಗಳಿದ್ದವು. ಪ್ರಪಂಚಕ್ಕೆಲ್ಲಾ ಒಂದು ರೀತಿಯ ಆತಂಕ ಆವರಿಸಿಕೊಂಡಿತ್ತು. ಎರಡನೇ ಮಹಾಯುದ್ಧ ನಡೆಯುವ ಸಂಭವ ಯುರೋಪ್ ಭಾಗದಲ್ಲಿ ಹೆಚ್ಚಿತ್ತು. ಪ್ರವಾಸಿಗಳು ಯುರೋಪ್ ದೇಶಗಳಿಗೆ ಪ್ರವಾಸಕ್ಕೆ ಹೋಗಲು ಹಿಂಜರಿಯುತ್ತಿದ್ದರು. ಆದ್ದರಿಂದ ನಾಲ್ಕನೇ ದಶಕದಲ್ಲಿ ಹೆಚ್ಚು ಪ್ರವಾಸ ಕೃತಿಗಳು ಪ್ರಕಟವಾಗಿಲ್ಲ.

ಹತ್ತೊಂಬತ್ತನೆಯ ಶತಮಾನದ ನಾಲ್ಕನೆಯ ದಶಕ(೧೯೩೦-೧೯೪೦) ಕನ್ನಡ ಸಾಹಿತ್ಯದ ಮೇಲೆ ಸ್ವಾತಂತ್ರ್ಯ ಹೋರಾಟದ ಪ್ರಭಾವ ಅಧಿಕವಾಗಿದ್ದ ಕಾಲವಾಗಿದೆ. ಸಾಹಿತಿಯ ಮೇಲೆ ಆಯಾ ಕಾಲದ ಘಟನಾವಳಿಗಳು ಪ್ರಭಾವ ಬೀರುತ್ತವೆ. ಅದನ್ನು ಕೃತಿಯ ಮೂಲಕ ಹೇಳಿಕೊಳ್ಳಲು ಅವಕಾಶವಿರುತ್ತದೆ. 'ಸಾಹಿತ್ಯವು ಸಮಾಜದ ಪ್ರತಿಬಿಂಬ' ಎಂಬ ಸಂಗತಿ ಇದಾಗಲೇ ವಿಧಿತವಾಗಿದೆ. ಆಯಾ ಕಾಲದ ತುರ್ತುಗಳು, ಮನೋವೇದನೆಗಳು ಮತ್ತು ಸಮಕಾಲೀನ ಚಳುವಳಿಗಳ ಪ್ರಭಾವಕ್ಕೆ ಒಳಗಾದ ಸಾಹಿತಿಯು ಅದನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ವ್ಯಕ್ತಪಡಿಸುತ್ತಾನೆ. ಕಾದಂಬರಿ ಪ್ರಕಾರವು ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಳಿಸಲು, ಜನರಲ್ಲಿ ಜಾಗೃತಿ ಮೂಡಿಸಲು ಪರಿಣಾಮಕಾರಿ ಮಾಧ್ಯಮವಾಗಿ ಬಳಕೆಯಾಗಿತ್ತು. ಆದರೆ ಅದೇ ಕಾಲಘಟ್ಟದಲ್ಲಿ ರಚಿತವಾದ ಪ್ರವಾಸ ಕೃತಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆಯಾಗಲಿ, ಬ್ರಿಟೀಷರ ಆಡಳಿತ ವೈಖರಿಯ ಬಗ್ಗೆಯಾಗಲಿ ಚರ್ಚೆಯಾಗಿಲ್ಲ. ವಿ. ಕೃ. ಗೋಕಾಕ್, ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಪ್ರವಾಸದ ಸಂದರ್ಭದಲ್ಲಿ ಭಾರತವನ್ನಾಳುತ್ತಿದ್ದ ಬ್ರಿಟೀಷರ ದೇಶದಲ್ಲಿಯೇ ಪ್ರವಾಸದಲ್ಲಿದ್ದರು. ಆದರೂ ಅವರ ಪ್ರವಾಸ ಕೃತಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆ, ಭಾರತದಲ್ಲಿ ಬ್ರಿಟೀಷರ ಆಡಳಿತದ ವೈಖರಿಯ ಬಗ್ಗೆ ಯಾವುದೇ ಅಭಿಪ್ರಾಯಗಳು ವ್ಯಕ್ತವಾಗಿರುವುದಿಲ್ಲ. ಆದ್ದರಿಂದ ಈ ದಶಕದಲ್ಲಿ ಪ್ರಕಟವಾದ ಕೃತಿಗಳು ಕೇವಲ ಪ್ರವಾಸದ ಸಾಮಾಜಿಕ ವಿವರಗಳ ತೌಲನಿಕ ವಿವೇಚನೆಯ ಮಟ್ಟಕ್ಕೆ ಸೀಮಿತವಾಗಿವೆ.

ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಯುರೋಪ್ ಪ್ರವಾಸ ಕೃತಿಗಳಲ್ಲಿ ವಿ. ಕೃ. ಗೋಕಾಕ್ ಅವರ 'ಸಮುದ್ರದಾಚೆಯಿಂದ' ಕೃತಿಯು ಮೊದಲ ಯುರೋಪ್ ಪ್ರವಾಸ ಕೃತಿಯಾಗಿದೆ. ಈ ಶೀರ್ಷಿಕೆಯೇ ಸಮುದ್ರೋಲ್ಲಂಘನವನ್ನು ಸೂಚಿಸುತ್ತದೆ. ವಸಾಹತು ಕಾಲಘಟ್ಟದಲ್ಲಿ ಇಂಗ್ಲೆಂಡಿನ ಆಕ್ಸ್‌ಫರ್ಡ್‌ಗೆ ಉನ್ನತ ಶಿಕ್ಷಣಕ್ಕಾಗಿ ತೆರಳಿದ ವಿ.ಕೃ. ಗೋಕಾಕ್ ಅವರು ಈ ಕೃತಿಯನ್ನು ದಿನಚರಿ ರೂಪದಲ್ಲಿ ಬರೆದಿದ್ದಾರೆ. ಅಧ್ಯಯನಕ್ಕಾಗಿ ವಿಲಾಯಿತಿಗೆ ಒಂಭತ್ತು ತಿಂಗಳ ಧೀರ್ಘ ಅವಧಿಗೆ ಹೋಗಿರುವುದರಿಂದ ಸಹಜವಾಗಿ ಇವರ ಕೃತಿಯಲ್ಲಿ ತೌಲನಿಕವಾದ ಸಾಮಾಜಿಕ ವಿಮರ್ಶೆಯನ್ನು ಗುರುತಿಸಬಹುದಾಗಿದೆ. ಅಂದಿನ ಸಾಂಸ್ಕೃತಿಕ ಬದುಕನ್ನು ಬಹಳ ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ. ಪ್ರವಾಸದ ಅವಧಿ ಕಡಿಮೆಯಿದ್ದರೆ ಪ್ರವಾಸಿಗನಿಗೆ ತಾನು ಕಂಡಿದ್ದೆಲ್ಲಾ ಹೊಸತಾಗಿ, ವೈಭವವಾಗಿ ಕಾಣುತ್ತದೆ. ಆದ್ದರಿಂದ ಮಾಂತ್ರಿಕ ಲೋಕದೊಳಗೆ ಪ್ರವೇಶಿಸಿದವರಂತೆ ಹೊಗಳಿಕೆಗಳಿಂದ ಕೃತಿಯನ್ನು ತುಂಬಿಸಿ ಬಿಡುತ್ತಾರೆ. ಉದಾಹರಣೆಗೆ ಎರಡು ವಾರಗಳ ಪ್ರವಾಸ ಮಾಡಿದ ಪಾಟೀಲ ಪುಟ್ಟಪ್ಪ ಅವರು 'ಸೋವಿಯತ್ ದೇಶ ಕಂಡೆ' ಕೃತಿಯಲ್ಲಿ "ಸ್ವರ್ಗ ಇಲ್ಲಿಯೇ ಇದೆ ಎನ್ನುವಂತೆ ಆ ಜನರು ಮಾಡಿದ್ದಾರೆ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪು-೬)ಎಂದಿದ್ದಾರೆ. ಹೆಚ್ಚು ಅವಧಿಯ ಪ್ರವಾಸಗಳು ಮತ್ತು ಉನ್ನತ ಶಿಕ್ಷಣ ಪಡೆಯುವುದಕ್ಕಾಗಿ ವಿದೇಶದಲ್ಲಿ ದೀರ್ಘ ಅವಧಿ ನೆಲೆಸಿ ಬರೆದ ಪ್ರವಾಸ ಕೃತಿಗಳು ಜನತೆಯ ಸಾಂಸ್ಕೃತಿಕ ಜೀವನವನ್ನು ನಿಷ್ಕರ್ಷಿಸುವ

ಮಟ್ಟದ್ದಾಗಿರುತ್ತವೆ ಮತ್ತು ನಂಬಿಕೆಗೆ ಹೆಚ್ಚು ಅರ್ಹವಾಗಿರುತ್ತವೆ. ಆದ್ದರಿಂದಲೇ 'ಸಮುದ್ರದಾಚೆಯಿಂದ' ಕೃತಿಯಲ್ಲಿ ಇಂಗ್ಲೆಂಡ್ ದೇಶದ ಸಾಮಾಜಿಕ ಬದುಕಿನ ನೈಜವರ್ಣನೆಗಳನ್ನು ಕಾಣಲು ಸಾಧ್ಯವಾಗಿದೆ. ಈ ಕೃತಿಯಲ್ಲಿ ಸುದೀರ್ಘವಾದ ಚರ್ಚೆಗಳಿವೆ. ಗೋಕಾಕ್‌ರ ಬರೆವಣಿಗೆಯ ಶಕ್ತಿ ಎಂದರೆ ನಡೆದ ಘಟನಾವಳಿಗಳ ವಿವರಗಳನ್ನು ನಡೆದಂತೆಯೇ ಬರೆದಿಡುವುದು. ಗೋಕಾಕ್‌ರು ಆರ್ಯ ಸಂಸ್ಕೃತಿಯ ಬಗ್ಗೆ ಹೆಚ್ಚು ಅಭಿಮಾನ ಹೊಂದಿದವರಾಗಿ ತೋರುತ್ತಾರೆ. 'ಮಾಂಗ್ ವನ್' ಎಂಬ ಬರ್ಮಿ ಕವಿಯ ಪರಿಚಯವಾದಾಗ ಆತನ ಬಗ್ಗೆ "ಅವನು ಒಳ್ಳೆ ಬರ್ಮಿ ಕವಿ. ಆರ್ಯ ಸಂಸ್ಕೃತಿಯ ಬಗ್ಗೆ ತುಂಬಾ ಪೂಜ್ಯಬುದ್ಧಿಯುಳ್ಳವ"(ವಿ.ಕೃ. ಗೋಕಾಕ್., ಸಮುದ್ರದಾಚೆಯಿಂದ., ಪು-೪೪)ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆರ್ಯ ಸಂಸ್ಕೃತಿಯ ಬಗ್ಗೆ ಹೆಚ್ಚು ಅಭಿಮಾನ ಹೊಂದಿರುವುದರಿಂದ ಆತನೊಂದಿಗೆ ಹೆಚ್ಚು ಆತ್ಮೀಯವಾಗಿ ವರ್ತಿಸಿರುವಂತೆ ತೋರುತ್ತದೆ. ತಾವು ಬರೆದ ಕವಿತೆಗಳನ್ನು ಆ ಕವಿಗೆ ಹೇಳಲು, ಮತ್ತು ಆತನಿಂದ ಬರ್ಮಿ ಕವಿತೆಗಳನ್ನು ತಿಳಿಯಲು ಉತ್ಸಾಹಿತರಾಗಿರುವುದು ಕಂಡುಬರುತ್ತದೆ.

ವಿ. ಕೃ. ಗೋಕಾಕ್ ಅವರು ಭಾರತೀಯ ಸಮಾಜದಲ್ಲಿರುವಂತೆ ಇಂಗ್ಲೆಂಡಿನಲ್ಲಿಯೂ ಮೂಢನಂಬಿಕೆಗಳು ಇರುವುದನ್ನು ಕೆಲವು ಘಟನೆಗಳ ಮೂಲಕ ಶ್ರುತಪಡಿಸಿದ್ದಾರೆ. ಲೇಖಕರು ಹಡಗಿಗೆ ಮೂರು ಲಾಳಿಕೆಗಳಿರುವುದನ್ನು ಕಂಡು ಹಡಗಿನ ನಿರ್ವಾಹಕರಲ್ಲಿ ವಿಚಾರಿಸುತ್ತಾರೆ. ಇದರಿಂದ ತಿಳಿದ ಸಂಗತಿ ಎಂದರೆ 'ಅದರಲ್ಲಿ ಒಂದು ಲಾಳಿಕೆ ಮಾತ್ರ ಹೊಗೆ ಬಿಡುತ್ತದೆ. ಉಳಿದೆರಡು ಲಾಳಿಕೆಗಳು ಹೊಗೆ ಬಿಡುವುದಿಲ್ಲ. ಹಡಗಿಗೆ ಮೂರು ಲಾಳಿಕೆಗಳು ಇರಬೇಕೆಂಬುದು ಒಂದು ನಂಬಿಕೆ. ಆ ಕಾರಣದಿಂದ ಮೂರು ಲಾಳಿಕೆಗಳನ್ನು ಹಾಕಿದ್ದಾರೆ' ಎಂದು ವಿವರಿಸಿದ್ದಾರೆ. ಗೋಕಾಕ್ ಅವರು ಭಾರತೀಯ ಪದ್ಧತಿಗಳನ್ನು, ಆಚರಣೆಗಳನ್ನು ಯುರೋಪ್ ಸಂಸ್ಕೃತಿಯೊಂದಿಗೆ ಹೋಲಿಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮೂಢನಂಬಿಕೆಗಳು ಸಾರ್ವತ್ರಿಕವಾದುದು ಎನಿಸುತ್ತದೆ. ಒಂದೇ ರೀತಿಯ ಮೂಢನಂಬಿಕೆ ಎಲ್ಲಾ ಕಡೆಯಲ್ಲಿಲ್ಲದಿದ್ದರೂ, ಆಯಾ ಪ್ರಾದೇಶಿಕ ವೈವಿಧ್ಯತೆಗೆ ಅನುಗುಣವಾಗಿ ಬೇರೆ ಬೇರೆ ರೀತಿಯ ಮೂಢನಂಬಿಕೆಗಳು ಸಮಾಜದಲ್ಲಿ ಇರುತ್ತದೆ. ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ನಾನಾ ಬಗೆಯ ಮೂಢನಂಬಿಕೆಗಳು ಆಯಾ ಕಾಲಘಟ್ಟಗಳಿಗೆ ಅನುಗುಣವಾಗಿ, ಆಯಾ ಪ್ರದೇಶಕ್ಕೆ ಸೀಮಿತವಾಗಿ ಚಾಲ್ತಿಯಲ್ಲಿರುತ್ತದೆ.

ಹತ್ತೊಂಬತ್ತನೆಯ ಶತಮಾನದ ನಾಲ್ಕನೇ ದಶಕದಲ್ಲಿ ಪ್ರಕಟವಾದ ಮತ್ತೊಂದು ಯುರೋಪ್ ಪ್ರವಾಸ ಕೃತಿ ಆರ್. ಎಸ್. ನಾರಾಯಣರಾವ್ ಅವರ 'ಪ್ರಭುವರ್ಯರ ಯೂರೋಪ್ ಪ್ರವಾಸ'. ಸ್ವಾತಂತ್ರ್ಯಪೂರ್ವದಲ್ಲಿ ವಿದೇಶಗಳಿಗೆ ಹೋಗುವುದೆಂದರೆ ಸುಲಭವಾದ ಕಾರ್ಯವಾಗಿರಲಿಲ್ಲ. ಅದರಲ್ಲಿಯೂ ಆಗಿನ ನಂಬಿಕೆಗಳನ್ನು ಮೀರಿ ಸಮುದ್ರ ದಾಟಿ ಹೋದರೆ ಆಶೀರ್ವಾದಕ್ಕಿಂತ ಹೆಚ್ಚಾಗಿ ಶಾಪಗಳೇ ಸಿಗುತ್ತಿತ್ತು. ಹಾಗಾಗಿ ವಿದೇಶ ಪ್ರವಾಸ ಹೋಗುವವರಿಗೆ ಅನೇಕ ಅಡೆತಡೆಗಳಿದ್ದವು. ಅದರಲ್ಲೂ ಮೈಸೂರು ಪ್ರಾಂತ್ಯದಲ್ಲಿ ಇಂತಹ ನಂಬಿಕೆಗಳು ಅಪಾರವಾಗಿತ್ತು. ಅಂತಹ ಸಂದರ್ಭದಲ್ಲಿ ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೩೬ರ ಜೂನ್ ಮಾಹೆಯಲ್ಲಿ ಯುರೋಪ್‌ಗೆ ಪ್ರವಾಸ ಹೋಗಿ ಮೂರು ತಿಂಗಳುಗಳ ಕಾಲ ವಿದೇಶಗಳಲ್ಲಿ ಸುತ್ತಾಡಿ ಬಂದರು. ಈ ಹಿಂದೆ ಇವರ ಹಿಂದಿನ ತಲೆಮಾರಿನ ಯಾವ ರಾಜರೂ ವಿಲಾಯಿತಿಗೆ ಪ್ರವಾಸ ಹೋಗಿರಲಿಲ್ಲ. ಒಡೆಯರ ಈ ದಿಟ್ಟ ಹೆಜ್ಜೆ ಒಂದು ಕ್ರಾಂತಿಕಾರಿ ಬೆಳವಣಿಗೆಯಾಯಿತು. ಸಮುದ್ರ ದಾಟಿ ಹೋಗಬಾರದು ಎಂಬ ನಂಬಿಕೆಯನ್ನು ಮೀರಿ ನಡೆದ ಈ ಪ್ರವಾಸ

ಮೈಸೂರು ಒಡೆಯರ ಇತಿಹಾಸದಲ್ಲಿಯೇ ಒಂದು ಪ್ರಗತಿಪರ ಹೆಜ್ಜೆ. ಮೂಢನಂಬಿಕೆಗಳಲ್ಲಿ ಹುದುಗಿಕೊಂಡಿದ್ದ ಸಾಮಾನ್ಯ ಜನರಿಗೆ ರಾಜರೇ ಹೊಸ ಮಾರ್ಗವನ್ನು ತೋರಿದ ಸಂದರ್ಭ ಇದಾಗಿದೆ. ಸಾಂಸ್ಕೃತಿಕವಾಗಿ ಶ್ರೀಮಂತವಾದ ದೇಶಗಳ ನಡುವೆ ಹೊಸ ಸಂಪರ್ಕಕ್ಕೆ ನಾಂದಿ ಹಾಡಿದ ಪ್ರವಾಸವಾಗಿದೆ.

೧೯೩೬ರಲ್ಲಿ ವಿ ಕೃ ಗೋಕಾಕ್ ಅವರು ವಿದೇಶಕ್ಕೆ ಹೋಗಿದ್ದ ಸಂದರ್ಭದಲ್ಲಿಯೇ ನಾಲ್ವಡಿ ಶ್ರೀಕೃಷ್ಣರಾಜೇದ್ರ ಒಡೆಯರ್ ಅವರು ಮದ್ಯುವರಾಜ ಶ್ರೀ ಕಂಠೀರವ ನರಸಿಂಹರಾಜೇಂದ್ರ ಒಡೆಯರ್, ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಸಹಿತ ಒಟ್ಟು ೩೨ ಜನರ ತಂಡದೊಂದಿಗೆ ಪ್ರವಾಸಕ್ಕೆ ತೆರಳಿದ್ದಾರೆ. ಇಂಗ್ಲೆಂಡ್, ಪ್ಯಾರಿಸ್, ಹಂಗೇರಿ, ಸ್ಟ್ರಾತ್‌ಮೋರ್, ಮಾರ್ಸೆಲ್ಸ್, ಸ್ವಿಟ್ಜರ್‌ಲ್ಯಾಂಡ್ ಮೊದಲಾದ ಸ್ಥಳಗಳಿಗೆ ಮೂರು ತಿಂಗಳ ಕಾಲ ಪ್ರವಾಸ ಮಾಡಿದ್ದರ ವಿವರ ಇದೆ. ಈ ಕೃತಿಯನ್ನು ಬರೆದ ಆರ್. ಎಸ್. ನಾರಾಯಣರಾವ್ ಅವರು ಪ್ರವಾಸಕ್ಕೆ ತೆರಳಿರಲಿಲ್ಲ. ಅವರು ಬೆಂಗಳೂರಿನ ತಾಯಿನಾಡು ಪತ್ರಿಕೆ ಪ್ರಕಟಿಸುತ್ತಿದ್ದ ರಾಜರ ಪ್ರವಾಸದ ವಿವರವನ್ನು ಓದಿ, ಇಂಗ್ಲೆಂಡ್‌ನ ಟೈಮ್ಸ್ ಪತ್ರಿಕೆ ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವಿವರಗಳನ್ನು ಆಧರಿಸಿ ಹಾಗೂ ಪ್ರಭುಗಳೊಂದಿಗೆ ಪ್ರವಾಸ ಮಾಡಿದವರ ಅಭಿಪ್ರಾಯಗಳನ್ನು ಕೇಳಿ ೩೦ ಪುಟಗಳ ಚಿಕ್ಕ ಕೃತಿಯನ್ನು ಬರೆದಿದ್ದಾರೆ. ಆದ್ದರಿಂದ ಇದನ್ನು ಪ್ರವಾಸ ಸಾಹಿತ್ಯದ ವಿವರಗಳನ್ನು ಒಳಗೊಂಡ 'ಐತಿಹಾಸಿಕ ದಾಖಲು ಕೃತಿ' ಎಂದು ಹೇಳಬಹುದು.

ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಅವರು ಕುದುರೆಗಳಿಗೆ ಕೊಡುವ ಶಿಕ್ಷಣ ಕ್ರಮಗಳ ಬಗ್ಗೆ ತಿಳಿಯುವ ಉತ್ಸಾಹವನ್ನು ತೋರಿದ್ದಾರೆ. ಹಂಗೇರಿಯ ಜನಪದ ನಾಟ್ಯವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಇವು ರಾಜರ ಆಸಕ್ತಿಯ ವಿಷಯಗಳಾಗಿದ್ದವು ಎಂಬ ಮಾಹಿತಿಯನ್ನು ಲೇಖಕರು ನೀಡಿದ್ದಾರೆ. ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಅವರು ತಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ವಿದೇಶದಲ್ಲಿದ್ದರೂ ಬಿಡದೆ ಪಾಲಿಸುತ್ತಿದ್ದರು ಎಂದು ಹೇಳಲಾಗಿದೆ. ಅದಕ್ಕೆ ಪೂರಕವಾಗಿ 'ಮಹಾರಾಜರು ಮಾರ್ಸೆಲ್ಸ್‌ನಲ್ಲಿ ಇದ್ದಾಗ ವಿನಾಯಕ ಚತುರ್ಥಿ ವ್ರತ ಆಚರಿಸಿದ್ದನ್ನು ಮತ್ತು ಚಾಮುಂಡೇಶ್ವರಿ ದೇವಿಯ ಮೂರ್ತಿಯನ್ನು ಜೊತೆಯಲ್ಲಿಯೇ ಕೊಂಡೊಯ್ದು ಪ್ರತಿನಿತ್ಯ ತಪ್ಪದೆ ಪೂಜಾ ಕೈಂಕರ್ಯ ನೇರವೇರಿಸುತ್ತಿದ್ದ ಮಾಹಿತಿಯನ್ನು ನಮೂದಿಸಿದ್ದಾರೆ. ರಾಜರು ಸಮುದ್ರ ದಾಟಿ ವಿದೇಶಕ್ಕೆ ಹೋದರೂ ತಮ್ಮ ಪರಂಪರೆ, ಸಂಪ್ರದಾಯವನ್ನು ಮರೆಯದೇ ಪಾಲಿಸಿದ್ದಾರೆ ಎಂಬ ಅಂಶವನ್ನು ಓದುಗರಿಗೆ ತಿಳಿಸುವುದು ಲೇಖಕರ ಉದ್ದೇಶವಾಗಿರುವಂತಿದೆ.

ಪ್ರಭುವರ್ಯರ ಯುರೋಪ್ ಪ್ರವಾಸ ಕೃತಿಯು 'ಜೀವನ ಚರಿತ್ರೆ'ಯ ಸ್ವರೂಪದಲ್ಲಿದೆ. ಪ್ರವಾಸ ಹೋಗದಿದ್ದರೂ ಪ್ರವಾಸ ಹೋಗಿ ಬಂದವರ ಪ್ರವಾಸದ ವಿವರಗಳನ್ನು ದಾಖಲಿಸಿರುವ ಏಕೈಕ ಯುರೋಪ್ ಪ್ರವಾಸ ಕೃತಿಯಾಗಿದೆ. ಲೇಖಕರು ಪ್ರವಾಸ ಮಾಡಿಲ್ಲವಾದರೂ ಆ ಪ್ರವಾಸದ ಮಾಹಿತಿಗಳನ್ನು ಇತರ ಮಾಧ್ಯಮಗಳಿಂದ ಪಡೆದು ಪ್ರವಾಸದ ವಿವರಗಳನ್ನು ದಾಖಲಿಸಿರುವುದು ಈ ಕೃತಿಯ ಮಿತಿಯಾಗಿದೆ. ಇತರ ಮಾಧ್ಯಮಗಳಿಂದ ಪಡೆದ ಮಾಹಿತಿಗಳನ್ನು ಪಡೆಯುವಾಗ ಅಧಿಕೃತತೆಯ ಬಗ್ಗೆ ಪ್ರಶ್ನೆ ಮೂಡುತ್ತದೆ. ಈ ವಿವರಗಳು ಏನೇ ಇದ್ದರೂ ಸ್ವಾತಂತ್ರ್ಯಪೂರ್ವದಲ್ಲಿನ ಕೃತಿಯಾದ್ದರಿಂದ ಮತ್ತು ಮೈಸೂರಿನ ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಅವರ ವಿವರ ಎನ್ನುವ ಕಾರಣದಿಂದ ಈ ಕೃತಿ ಮುಖ್ಯವೆನಿಸುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಗೊಂಡ ಮತ್ತೊಂದು ಕೃತಿ ರಾಜಕುಮಾರಿ ಚನ್ನಾಜಮ್ಮಣ್ಣಿ ಅವರ 'ನಮ್ಮ ಪ್ರಪಂಚ ಸಂಚಾರ'. ಈ ಕೃತಿಯಲ್ಲಿ ಯುರೋಪ್, ಅಮೆರಿಕಾ, ಏಷ್ಯಾ ಖಂಡಗಳಲ್ಲಿ ಪ್ರವಾಸ ಮಾಡಿದ ವಿವರ ಇದೆ. ಯುರೋಪ್ ಖಂಡದಲ್ಲಿ ಲಂಡನ್, ಪ್ಯಾರಿಸ್, ಇಂಟರ್‌ಲಾಕನ್, ಲ್ಯೂಸೆನ್, ಜ್ಯೂರಿಚ್,

ಮ್ಯೂನಿಚ್, ಬರ್ಲಿನ್, ಆಮ್‌ಸ್ಟರ್‌ಡಾಮ್, ಬ್ರುಸೆಲ್, ಸ್ಕಾಟ್‌ಲ್ಯಾಂಡ್ ಮೊದಲಾದ ಸ್ಥಳಗಳಿಗೆ ಪ್ರವಾಸ ಮಾಡಿರುವ ಬಗ್ಗೆ ವಿವರ ಇದೆ. [೨]

ಈ ಮೂರು ಕೃತಿಗಳ ನಂತರ ೧೯೩೮ ರಿಂದ ೧೯೫೩ರವರೆಗೆ ಕನ್ನಡದಲ್ಲಿ ಯಾವುದೇ ಯುರೋಪ್ ಪ್ರವಾಸ ಕೃತಿಗಳು ಪ್ರಕಟವಾಗಿಲ್ಲ. ಇದಕ್ಕೆ ಕಾರಣ ಎರಡನೇ ಮಹಾಯುದ್ಧ(೧೯೩೯-೧೯೪೫). ಈ ಅವಧಿಯಲ್ಲಿ ಇಡೀ ಪ್ರಪಂಚವೇ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿತ್ತು. ಯುರೋಪ್ ಪ್ರವಾಸಕ್ಕೆ ಸಂಬಂಧಿಸಿದಂತೆ ಈ ಅವಧಿಯನ್ನು 'ಕಪ್ಪು ಕಾಲ' (ಬ್ಲಾಕ್ ಪೀರಿಯಡ್) ಎಂದು ಕರೆಯಬಹುದು.

೧೯೫೦ರಿಂದ ೧೯೯೯ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

೧೯೪೫ರಲ್ಲಿ ಎರಡನೇ ಮಹಾಯುದ್ಧ ಮುಗಿದ ಬಳಿಕ ೧೯೫೩ರವರೆಗೆ ಯಾವುದೇ ಯುರೋಪ್ ಪ್ರವಾಸ ಕೃತಿ ಪ್ರಕಟವಾಗಿಲ್ಲ. ಕೆ. ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ'(೧೯೫೪) ಭಾರತವು ಸ್ವಾತಂತ್ರ್ಯ ಪಡೆದ ನಂತರ ಪ್ರಕಟವಾದ ಮೊದಲ ಯುರೋಪ್ ಪ್ರವಾಸ ಕೃತಿಯಾಗಿದೆ. ಯುದ್ಧ ಭೀತಿಯ ಕಾಲದಲ್ಲಿಯೂ ವಿದೇಶ ಪ್ರವಾಸಕ್ಕೆ ಹೋಗಲು ಹಿಂಜರಿಯದೆ ಯುರೋಪ್ ಪ್ರವಾಸ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಕಾರಂತರು 'ಮೂರನೇ ಮಹಾಯುದ್ಧ ನಡೆದು ಯುರೋಪ್ ಸಂಪೂರ್ಣ ನಾಶವಾದ ಮೇಲೆ ಹೋಗಿ ನೋಡುವುದಾದರು ಏನು? ನೋಡಿದರೆ ಈಗಲೇ ನೋಡಬೇಕು. ಊರುಗೋಲು ಹಿಡಿದು ಮುದುಕನಾದ ಮೇಲೆ ವಿದೇಶ ಬರಿ ಕನಸಾದೀತು' ಎಂಬ ಅಭಿಪ್ರಾಯವು ಕಾರಂತರಿಗೆ ವಿದೇಶಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲ ಮತ್ತು ಜ್ಞಾನದಾಹದ ಮಟ್ಟವನ್ನು ಹಾಗೂ ಮೂರನೇ ಮಹಾಯುದ್ಧವು ಸಮಾಜದಲ್ಲಿ ಉಂಟುಮಾಡಿದ್ದ ಭೀತಿಯನ್ನು ಸೂಚಿಸುತ್ತದೆ.

'ಅಪೂರ್ವ ಪಶ್ಚಿಮ' ಕೃತಿಯು ತಾತ್ವಿಕ ಚಿಂತನೆಗಳನ್ನು ಓದುಗರೊಂದಿಗೆ ಮುಖಾಮುಖಿಯಾಗಿಸಿ ಚರ್ಚಿಸುತ್ತಾ, ತೀರ್ಮಾನಗಳನ್ನು ತಿಳಿಸುತ್ತಾ ಚಿಂತನೆಗೆ ಒಳಗು ಮಾಡುವ ಕೃತಿಯಾಗಿದೆ. ಯುರೋಪ್ ಖಂಡದ ದೇಶಗಳಾದ ಇಂಗ್ಲೆಂಡ್, ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಹಾಲೆಂಡ್, ಹೆಂಬರ್ಗ್, ಬೆಲ್ಜಿಯಮ್, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್, ಇಟಲಿ, ರೋಮ್ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡಿರುವ ವಿವರಗಳಿರುವ ಕೃತಿಯಾಗಿದೆ. ಕಾರಂತರೆ 'ಸುಮಾರು ಎಪ್ಪತ್ತು ದಿನಗಳ ಪ್ರವಾಸ' ಎಂದು ನಮೂದಿಸಿದ್ದಾರೆ. ಯುರೋಪ್ ಪ್ರವಾಸಕ್ಕೆ ಹೋಗುವ ಉದ್ದೇಶವನ್ನು ಹೇಳುತ್ತಾ "ನಮ್ಮ ದೇಶದಲ್ಲಿ ಕಾಣಲಾರದ ಯಾವುದೋ ಒಂದು ಬಗೆಯ ಚೆಲುವು ಅಲ್ಲಿ ಕಾಣಲು ಸಿಕ್ಕೀತು ಎಂಬ ಆಸೆ ಉಂಟಾಗಿತ್ತು"(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೧)ಎಂದಿದ್ದಾರೆ. ಯುರೋಪಿಯನ್ ದೇಶಗಳ ಪ್ರಸಿದ್ಧ ಚಿತ್ರಕಾರರ ಚಿತ್ರಕೃತಿಗಳನ್ನು ಕಾಣುವ ಹಂಬಲದ ಜೊತೆಗೆ, ಆ ದೇಶದ ಜನರ ನೃತ್ಯ, ಬ್ಯಾಲೆ, ನಾಟಕ ಹೇಗಿದೆ? ಅವರ ಉದ್ಯಮ ಹೇಗೆ? ಸಂಸ್ಕೃತಿ ಯಾವ ಬಗೆಯದು? ಅವುಗಳು ನಮ್ಮ ಪಾಲಿಗೆ ಅನುಕರಣೀಯವೇ?' ಮೊದಲಾದ ವಿಷಯಗಳ ಸಮಗ್ರ ತಿಳಿವಳಿಕೆಗಾಗಿ ನಿಡುವಾಯಿದೆಯ ಸಾಲ ಮಾಡಿ ಪ್ರವಾಸ ಹೋಗುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

ಕಾರಂತರ ಬರೆವಣಿಗೆಯಲ್ಲಿ ಸಹಜವಾದ ಮತ್ತು ಸರಾಗವಾದ ವಿವರಣೆ ದೊರೆಯುತ್ತದೆ. ತಾವು ಹೇಳಬೇಕಾಗಿರುವುದನ್ನು ನಿಖರವಾಗಿ ಓದುಗರಿಗೆ ಮನಮುಟ್ಟುವಂತೆ ಬರೆದಿದ್ದಾರೆ. ತಮ್ಮ ಪ್ರವಾಸದ ಉದ್ದೇಶಕ್ಕೆ ಅನುಗುಣವಾದ ಬರೆವಣಿಗೆಯ ಓಘವಿದೆ. ಪದ ಬಳಕೆ ಸರಳವಾಗಿದೆ. ಅತಿರೇಕದ

ವರ್ಣನೆಗಳಿಲ್ಲದ ಸಹಜವಾದ ಅಲಂಕಾರಗಳನ್ನು ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿದ್ದಾರೆ. ಕಾರಂತರ ತೌಲನಿಕ ದೃಷ್ಟಿಕೋನ ಅಪೂರ್ವವಾದುದು. ಕೃಷಿಭೂಮಿಯಿಂದ ಹಿಡಿದು ಜನರ ಸಂಸ್ಕೃತಿ, ನೃತ್ಯ, ಕಲೆ, ಚಿತ್ರಕಲೆ, ಬ್ಯಾಲೆ, ನಾಟಕ, ಸಿನಿಮಾ, ಜನ ಜೀವನದವರಗೆ ಎಲ್ಲಾ ವಿಷಯಗಳಲ್ಲಿಯೂ ತಮ್ಮ ದೇಶಕ್ಕೂ ಯುರೋಪಿಯನ್ ದೇಶಗಳ ನಡುವೆ ಇರುವ ವ್ಯತ್ಯಾಸಗಳನ್ನು ಮತ್ತು ವೈವಿಧ್ಯಗಳನ್ನು ಗುರುತಿಸಿ ತೌಲನಿಕವಾಗಿ ವಿಮರ್ಶಿಸಿದ್ದಾರೆ. ಕಲೆ, ಸಾಹಿತ್ಯ, ಸಂಸ್ಕೃತಿ ಸಾಮಾಜಿಕ ಬದುಕಿನ ವಿವಿಧ ಸ್ಥರಗಳನ್ನು ಹೋಲಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕೆಲವೆಡೆಗಳಲ್ಲಿ ಭಾರತದ ಸ್ಥಿತಿಯನ್ನು ನೆನಪಿಸಿಕೊಂಡು ಮರುಗುವ ಅಭಿಪ್ರಾಯಗಳು ವ್ಯಕ್ತವಾಗಿವೆ. ಒಬ್ಬ ಪ್ರವಾಸಿಗನಿಗೆ ಈ ಬಗೆಯ ತೌಲನಿಕ ದೃಷ್ಟಿಕೋನ ಅಗತ್ಯವಾಗಿ ಇರಬೇಕು. ಕಾರಂತರ ನೆನಪಿನ ಶಕ್ತಿ ಅಗಾಧವಾದದ್ದು. ಅವರು ಕಂಡದ್ದನ್ನು ಓದುಗರೂ ಕಾಣುವಂತೆ ಬರೆಯುವ ಶಕ್ತಿ ಉಳ್ಳವರು. ಅಂತೆಯೇ ಕಾಣದ್ದನ್ನು ಕಲ್ಪಿಸಿ ವರ್ಣಿಸುವ ಗೋಜಿಗೂ ಹೋಗಿಲ್ಲ. ಇಂಗ್ಲೆಂಡಿನಲ್ಲಿನ ಸ್ವಚ್ಛತೆಯ ಬಗೆಗಿನ ಕಾಳಜಿಯನ್ನು ಕಂಡು ಮೆಚ್ಚುತ್ತಾರೆ. ಅದೇ ರೀತಿ 'ಇಂಗ್ಲೆಂಡಿನ ನೆಲ ಅಷ್ಟು ಸಾರಭರಿತ ಎಂದು ಅನಿಸಲಿಲ್ಲ' ಎಂದಿದ್ದಾರೆ. ಇಂಗ್ಲೆಂಡಿಗರ ಸಾಹಸಶೀಲ ಗುಣ, ಶ್ರಮ ಸಂಸ್ಕೃತಿಯನ್ನು ಮತ್ತು ಜಾತ್ಯತೀತ ಸಮಾಜವನ್ನು ಹೊಗಳಿದ್ದಾರೆ. ನಮ್ಮ ದೇಶದ ಜನರ ಸೋಮಾರಿತನವನ್ನು, ಜಾತಿ ಪದ್ಧತಿಯ ಆಚರಣೆಯನ್ನು ಖಂಡಿಸಿದ್ದಾರೆ. ಬ್ರಿಟೀಷರ ಬಗ್ಗೆ ಇತರ ದೇಶಗಳ ಜನರು ಯಾವ ಅಭಿಪ್ರಾಯ ಹೊಂದಿದ್ದಾರೆ ಎಂದು ತಿಳಿದುಕೊಳ್ಳುವ ಕುತೂಹಲವನ್ನು ವ್ಯಕ್ತಪಡಿಸಿದ್ದಾರೆ. ಈ ಕೃತಿಯಲ್ಲಿ ಯಾವುದೇ ಪೂರ್ವಾಗ್ರಹಗಳಿಗೆ ಒಳಗಾಗದ ನಿರ್ಧಿಷ್ಟವಾದ ವಿವರಗಳಿವೆ.

ಕಾರಂತರ 'ಅಪೂರ್ವ ಪಶ್ಚಿಮ' ಮತ್ತು 'ಅರಸಿಕರಲ್ಲ' ಕೃತಿಗಳು ಯುರೋಪ್ ದೇಶಗಳ ಬಗ್ಗೆ ತಿಳಿಸುವ 'ಕಿರು ವಿಶ್ವಕೋಶ'ಗಳಿದ್ದಂತೆ. ಅವರು ತಮ್ಮ ಕೃತಿಯಲ್ಲಿ ವಿಜ್ಞಾನ, ಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ಸಂಸ್ಕೃತಿ, ಸಾಹಿತ್ಯ, ಕೃಷಿ, ಜಾನಪದ, ವೈದ್ಯಪದ್ಧತಿ, ನೃತ್ಯ, ನಾಗರಿಕತೆ, ಹೀಗೆ ಎಲ್ಲಾ ಕ್ಷೇತ್ರಗಳನ್ನು ಅನಾವರಣಗೊಳಿಸುವ ಪರಿ ಅವರ ಜ್ಞಾನಭಂಡಾರದ ಅಗಾಧತೆಯನ್ನು ತೋರಿಸುತ್ತದೆ. ಕಾರಂತರು ಕೃತಿಯೊಳಗೆ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಮಾರ್ಗದರ್ಶಕರಾಗಿ, ನಾಟಕಕಾರರಾಗಿ, ವಿಜ್ಞಾನಿಯಾಗಿ, ವ್ಯಾಕರಣಕಾರರಾಗಿ, ಭಾಷಾತಜ್ಞರಾಗಿ, ತತ್ವಜ್ಞಾನಿಯಾಗಿ, ಪಂಡಿತರಾಗಿ, ಕಲಾರಾಧಕರಾಗಿ, ದಾರ್ಶನಿಕರಾಗಿ, ಕವಿನಿಪುಣರಾಗಿ, ಸಹೃದಯಿ ಓದುಗರಾಗಿ, ಅಂತೆಯೇ ಉತ್ತಮ ಬರಹಗಾರರಾಗಿ ಕಂಡುಬರುತ್ತಾರೆ.

ಕಾರಂತರು ಕಲೆಯ ಆರಾಧಕರು. ಚಿತ್ರಕಲೆಯ ಆಳ ಅರಿವುಗಳನ್ನು ಬಲ್ಲವರು. ಬ್ರಿಟನ್, ಪ್ಯಾರಿಸ್, ಇಟಲಿ, ರೋಮ್, ಪಾಂಪೆ ಗಳಲ್ಲಿ ಕಂಡ ಚಿತ್ರಗಳನ್ನು, ಶಿಲ್ಪಗಳನ್ನು ಬಹುಶಿಸ್ತೀಯ ನೆಲೆಯಲ್ಲಿ ವಿವರಿಸಿದ್ದಾರೆ. ಕಾರಂತರು "ಯುರೋಪಿನ ಉತ್ತರ ಭಾಗ ಶ್ರೀಮಂತ ಸ್ವಚ್ಛ ಸುಂದರವಾಗಿದ್ದರೆ ಯುರೋಪ್‌ನ ದಕ್ಷಿಣ ಇಟಲಿಯ ಬಾಗ ಅಷ್ಟೆ ಬಡತನ, ಕೊಳಕು, ದಾರಿದ್ರ್ಯದಿಂದ ಕೂಡಿದೆ"(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು–೨೮೧) ಎಂದು ಹೇಳುವ ಮೂಲಕ ಸಂಪೂರ್ಣ ಯುರೋಪ್ ಬಡತನ ಮುಕ್ತವಾಗಿಲ್ಲ ಎಂದಿದ್ದಾರೆ. ಲೇಖಕರ ತೌಲನಿಕ ಪ್ರಜ್ಞೆಯನ್ನು ಇಲ್ಲಿ ಗುರುತಿಸಲಾಗಿದೆ. ಕಾರಂತರು 'ರೋಮ್‌ನ ಬೀದಿಯಲ್ಲಿ ಬಿದ್ದಿದ್ದ ಸಿಗರೇಟ್ ತುಂಡುಗಳನ್ನು ಆಯುತ್ತಿದ್ದ ಇಬ್ಬರು ಬಡಪಾಯಿಗಳನ್ನು ನೋಡಿದೆ' ಎಂದು ಉಲ್ಲೇಖಿಸಿದ್ದಾರೆ. ಈ ವಿವರಗಳಿಂದ 'ಎಲ್ಲಾ ರಾಷ್ಟ್ರಗಳಲ್ಲಿಯೂ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಸಾಮಾನ್ಯವಾಗಿದ್ದು, ಪ್ರಮಾಣಗಳಲ್ಲಿ ವ್ಯತ್ಯಾಸಗಳಿವೆ' ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ. ಆಯಾ

ಕಾಲಘಟ್ಟದಲ್ಲಿ ರಚನೆಯಾದ ಪ್ರವಾಸ ಕೃತಿಗಳು ಅಂದಿನ ಕಾಲಘಟ್ಟದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ನೆರವಾಗುತ್ತವೆ.

ಕಾರಂತರು ಯಾವ ದೇಶಕ್ಕೆ ಹೋಗುತ್ತಾರೆಯೋ ಆ ದೇಶದ ಭೌಗೋಳಿಕ ಪರಿಸರ, ಜೈವಿಕ ವಿವರ, ಐತಿಹಾಸಿಕ ಘಟನೆಗಳು, ಕೃಷಿ, ಕಲೆ, ಶಿಕ್ಷಣ, ಹೀಗೆ ಅವರ ತೆಕ್ಕೆಗೆ ದಕ್ಕಿದ ಎಲ್ಲಾ ವಿಚಾರಗಳು ಅಕ್ಷರರೂಪವನ್ನು ಪಡೆಯುತ್ತವೆ. ಆಯಾ ದೇಶಗಳು ಮಾಡಿರುವ ಸಾಧನೆಗಳನ್ನು ಮೆಚ್ಚಿಕೊಳ್ಳುವುದಲ್ಲದೆ ನಮ್ಮ ದೇಶದ ಆಲಸ್ಯತನ, ಭ್ರಷ್ಟ ವ್ಯವಸ್ಥೆಯನ್ನು ಟೀಕಿಸಿದ್ದಾರೆ. ಭೇಟಿ ಮಾಡಿದ ಆಯಾ ಸ್ಥಳಗಳಲ್ಲಿನ ಮಿಥಿಕ ಕಥೆಗಳನ್ನು ಹೇಳಿದ್ದಾರೆ. ಇಂಟರ್‌ಲಾಕನ್ ಎಂಬ ಊರಿಗೆ ಹೋದಾಗ ತಂದೆಯು ತನ್ನ ಬಿಲ್ವಿದ್ಯೆಯ ಪ್ರದರ್ಶನಕ್ಕಾಗಿ ಮಗನ ತಲೆಯ ಮೇಲೆ ನಿಂಬೆ ಹಣ್ಣನ್ನು ಇಟ್ಟು ಕೈಚಳಕ ತೋರಿಸಿದ ಮಿಥಿಕಕಥೆಯನ್ನು ಹೇಳಿದ್ದಾರೆ. ಭಾರತೀಯ ಪುರಾಣಗಳಲ್ಲಿಯೂ ಇದೇ ರೀತಿಯ ಮಿಥಿಕಕಥೆಗಳು ನಿರೂಪಿತವಾಗಿದೆ. ಕಾರಂತರು ಯುರೋಪಿನ ದೇಶಗಳಲ್ಲಿ ಕಂಡ ವಿವಿಧ ಸಾಂಸ್ಕೃತಿಕ ರೂಪಗಳನ್ನು, ತಾವು ನೋಡಿದ ದೃಶ್ಯಕ್ಕೆ ಅನುಗುಣವಾಗಿ ವಿವಿಧ ಆಯಾಮಗಳ ಮೂಲಕ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತೆ ನಿರೂಪಿಸಿದ್ದಾರೆ.

ಕಾರಂತರು ಯುಗೋಸ್ಲಾವಿಯಾದ ಸಂಸ್ಕೃತಿಯ ಬಗ್ಗೆ ವಿಮರ್ಶಿಸುತ್ತಾ ಹೀಗೆ ಹೇಳಿದ್ದಾರೆ. "ಯುಗೋಸ್ಲಾವಿಯಾದ ಸಂಸ್ಕೃತಿ ಅರ್ಧ ಪೌರ್ವಾತ್ಯ, ಮತ್ತು ಅರ್ಧ ಪಾಶ್ಚಿಮಾತ್ಯ ಎನ್ನಲೂಬಹುದು...... ಈ ದೇಶವು ಹಲವು ಶತಮಾನಗಳ ಕಾಲದ ತನಕ ತುರ್ಕಿ ದೊರೆಗಳ ಕೆಳಗೆ ಇದ್ದುದರ ಪರಿಣಾಮವಾಗಿ, ಮುಸ್ಲಿಂ ಗೀತದ ವರ್ಚಸ್ಸೂ, ಕುಣಿತದ ವರ್ಚಸ್ಸೂ ಅವರ ಜಾನಪದ ಗೀತ, ನೃತ್ಯಗಳ ಮೇಲೆ ಬಿದ್ದಿದೆ"(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೮೬)ಎಂದಿದ್ದಾರೆ. ವಿದೇಶಿಯರ ಆಕ್ರಮಣದಿಂದ ದೇಶಿಯ ಸಂಸ್ಕೃತಿಯ ವರ್ಚಸ್ಸಿನಲ್ಲಿ ಬದಲಾವಣೆಯಾಗುವ ಪ್ರಕ್ರಿಯೆಯು ಸಾಮಾನ್ಯವಾದುದು. ಕನ್ನಡದಲ್ಲಿ ಮುಸ್ಲಿಂ ಲೇಖಕರ ಪ್ರಭಾವದಿಂದ ಶಾಯಿರಿಗಳು ರಚನೆಗಳಾಗಿವೆ. 'ಅಸಾದುಲ್ಲಾ ಬೇಗ್' ಅವರು ಬರೆದಿರುವ ಕನ್ನಡ ಶಾಯಿರಿಗಳ ಮೇಲೆ ಹಿಂದಿ ಶಾಯಿರಿಗಳ ವರ್ಚಸ್ಸು ಬಿದ್ದಿರುವುದನ್ನು ಗುರುತಿಸಬಹುದು. 'ಶಿಶುನಾಳ ಷರೀಫ'ರ ಜಾನಪದ ಶೈಲಿಯ ಕನ್ನಡ ಗೀತೆಗಳ ಮೇಲೆ ಮುಸ್ಲಿಂ ಗೀತದ ವರ್ಚಸ್ಸು ಬಿದ್ದಿದೆ. ಪ್ರಪಂಚದ ಯಾವುದೇ ಸಂಸ್ಕೃತಿಗೆ ತಮ್ಮ ಮೂಲ ಸಂಸ್ಕೃತಿಯನ್ನು ಅನ್ಯ ಸಂಸ್ಕೃತಿಯ ಪ್ರಭಾವಗಳಿಗೆ ಒಳಗಾಗದೆ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಉಡುಗೆ-ತೊಡುಗೆಗಳಲ್ಲಿಯೂ ಸಂಸ್ಕೃತಿಯ ಮಿಶ್ರಣವನ್ನು ಗುರುತಿಸಬಹುದು.

ಪರಭಾಷೆ ಮತ್ತು ಪರ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಮೂಲ ಸಂಸ್ಕೃತಿಯು ಕಾಲಕ್ಕನುಗುಣವಾಗಿ ಬದಲಾಗಬೇಕು. ಆದರೆ ಮೂಲ ಸಂಸ್ಕೃತಿ ಸಂಪೂರ್ಣವಾಗಿ ಮರೆಯಾಗಬಾರದು. ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವಿಕೆಯ ಬಗ್ಗೆ ಕಾರಂತರು 'ನಮ್ಮ ಮೂಲ ಜನಪದ ಕಲೆ, ನೃತ್ಯ, ಗೀತೆಗಳನ್ನು ಇದ್ದಂತೆಯೆ ಉಳಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಮೂಲ ಜನಪದ ಕಲಾ ಪ್ರಕಾರಗಳು ವರ್ತಮಾನದ ಬೇಡಿಕೆಗೆ ಅನುಗುಣವಾಗಿ ತನ್ನೊಳಗಿನ ಮೂಲ ಸತ್ವಗಳನ್ನು ಉಳಿಸಿಕೊಂಡು ಬದಲಾಗಬೇಕು' ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ಬ್ಯಾಲೆಯ ನೃತ್ಯ ಶೈಲಿಯನ್ನು ಯಕ್ಷಗಾನದಲ್ಲಿ ಬಳಸಿಕೊಳ್ಳುವ ಬಗ್ಗೆ ಚರ್ಚಿಸಿದ್ದಾರೆ. ಕಾರಂತರ ಅಭಿಪ್ರಾಯವನ್ನು ಒಪ್ಪುತ್ತಾ ಅವರ ಅಭಿಪ್ರಾಯಕ್ಕೆ ಪೂರಕವಾಗಿ ಹೇಳುವುದಾದರೆ 'ಜಾನಪದ ಕಲೆಗಳು ತಮ್ಮ ಅಂತಃಸ್ಸತ್ವವನ್ನು ಉಳಿಸಿಕೊಂಡು ಪ್ರಸ್ತುತದ ಬೇಡಿಕೆಗೆ ತೆರೆದುಕೊಳ್ಳಬೇಕು. ಇಂದಿನ ಯುವಜನಾಂಗದ ಅಭಿರುಚಿಗೆ ತಕ್ಕಂತೆ ಬದಲಾಗಬೇಕು. ಇಲ್ಲದಿದ್ದರೆ ಅವನತಿಯ ಹಾದಿಯನ್ನು ಹಿಡಿಯುವುದರಲ್ಲಿ ಸಂದೇಹವಿಲ್ಲ'.

ಯಾವುದೇ ದೇಶವು ಪ್ರಗತಿಪಥದತ್ತ ಸಾಗಬೇಕಾದರೆ ಆ ದೇಶ ಹೊಂದಿರುವ ಪುರಾತನ ಸಂಸ್ಕೃತಿಯನ್ನು ಜನತೆಗೆ ತಲುಪಿಸುವ ನಿಟ್ಟಿನಲ್ಲಿ ಮಾಡಿರುವ ಕೆಲಸಗಳು ಪ್ರಮುಖವಾಗುತ್ತದೆ. ಬ್ರಿಟೀಷರು ತಮ್ಮ ಪರಂಪರೆಯನ್ನು ಜನತೆಗೆ ಪರಿಚಯಿಸಲು ಸುಲಭವಾದ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಕಾರಂತರು ಅದನ್ನು ಗುರುತಿಸುತ್ತಾ "ಬ್ರಿಟಿಷ್ ಮ್ಯೂಸಿಯಮಿನವರು-ಮೇಲಿನ ಹಲವು ವಿವರಗಳನ್ನು, ಶಿಲ್ಪಗಳನ್ನು, ಬಿಡು ಚಿತ್ರಗಳನ್ನು, ಸುಂದರವಾಗಿ ಮುದ್ರಿಸಿ, ಅಗ್ಗದ ಅಂಚೆ ಕಾರ್ಡುಗಳನ್ನಾಗಿ ಮಾಡಿ ಮಾರುತ್ತಿದ್ದಾರೆ. ಯಾವುದೊಂದು ಸಂಸ್ಕೃತಿಯ ಪರಿಚಯವನ್ನು ಜನಸಾಮಾನ್ಯರಿಗೆ ಮಾಡಿಕೊಡಲು ಇಂತಹ ಪ್ರಯತ್ನಗಳು ಅತ್ಯಾವಶ್ಯಕವಾಗಿವೆ"(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೯೦)ಎಂದಿದ್ದಾರೆ. ನಮ್ಮ ಸಂಸ್ಕೃತಿ ಪರಂಪರೆಯನ್ನು ಜನತೆಗೆ ತಲುಪಿಸುವ ನಿಟ್ಟಿನಲ್ಲಿ ಇದು ಒಳ್ಳೆಯ ಕ್ರಮವಾಗಿದೆ. ಪ್ರವಾಸಿ ಟಿಕೆಟ್, ಬಸ್ ಟಿಕೆಟ್, ಎ.ಟಿ.ಎಂ ರಸೀದಿ, ಕರೆಂಟ್ ಬಿಲ್ಲುಗಳಲ್ಲಿ ಹಾಗೂ ಇನ್ನಿತರ ಜನ ಸಂಪರ್ಕ ವಸ್ತುಗಳ ಮೇಲೆ ಅಗ್ಗದ ದರದಲ್ಲಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಪ್ರಮುಖ ಶಿಲ್ಪ, ಚಿತ್ರ, ಕಲಾ ಪ್ರಕಾರಗಳನ್ನು ಮುದ್ರಿಸುವುದರಿಂದ ಜನರಿಗೆ ನಮ್ಮ ಪರಂಪರೆಯ ಬಗ್ಗೆ ಅರಿವು ಉಂಟಾಗಲು ನೆರವಾಗುತ್ತದೆ. ನಮ್ಮ ಸರಕಾರಗಳು ಈ ಬಗೆಯ ನೂತನ ಕ್ರಮಗಳನ್ನು ಜಾರಿಗೊಳಿಸಬೇಕಿದೆ.

ಸರಕಾರವು ಭಾರತೀಯ ಸಂಸ್ಕೃತಿಯ ಅನನ್ಯತೆಯನ್ನು ಜನತೆಗೆ ತಲುಪಿಸುವುದರ ಜೊತೆಜೊತೆಗೆ ಅವುಗಳ ಬಗ್ಗೆ ಹೊಸ ಹೊಸ ಸಂಶೋಧನೆಗಳನ್ನು ಕೈಗೊಳ್ಳಲು ಸಾಕಷ್ಟು ಹಣವನ್ನು ಮೀಸಲಿಡಬೇಕು. ಮತ್ತು ಯೋಗ್ಯ ರೀತಿಯಲ್ಲಿ ಸಂಶೋಧನೆ, ಅಧ್ಯಯನ ನಡೆಯಲು ಬೇಕಾಗುವ ಸಕಲ ಸವಲತ್ತುಗಳನ್ನು ಪೂರೈಸಬೇಕು. ಆದರೆ ಸರಕಾರ ಹಾಗೂ ವಿಶ್ವವಿದ್ಯಾಲಯಗಳು ಈ ವಿಷಯಗಳ ಕಡೆ ಸಾಕಷ್ಟು ಗಮನ ಹರಿಸಿಲ್ಲ ಎನಿಸುತ್ತದೆ ಎಂತಲೂ, ಈ ವಿಚಾರದಲ್ಲಿ ಬ್ರಿಟೀಷರು ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದಾರೆ ಎಂಬುದಾಗಿ ಲೇಖಕರು ತಿಳಿಸಿದ್ದಾರೆ. ಕಾರಂತರು "ಲಂಡನ್ ವಿಶ್ವವಿದ್ಯಾಲಯದವರು ಪೌರ್ವಾತ್ಯ ದೇಶಗಳ ಸಂಸ್ಕೃತಿಗಳ ವಿಚಾರದಲ್ಲಿ ನಡೆಯಿಸುತ್ತಿರುವ ಸಂಶೋಧನೆ, ಅದಕ್ಕಾಗಿ ಇರಿಸಿಕೊಂಡ ಪ್ರಾಧ್ಯಾಪಕ ವರ್ಗ, ವ್ಯಯಿಸುತ್ತಿರುವ ಹಣ-ಇವನ್ನೆಲ್ಲ ಕಾಣುತ್ತಿರುವಾಗ ನಮ್ಮ ದೇಶವೇ ನಮ್ಮ ಸಂಸ್ಕೃತಿಯ ವಿಚಾರದಲ್ಲಿ ಎಷ್ಟೊಂದು ಉದಾಸೀನವಾಗಿದೆ-ಎನಿಸದಿರದು".(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೯೪) ಎಂದು ಹೇಳಿದ್ದಾರೆ. ಕಾರಂತರು ಯುರೋಪಿಗೆ ಭೇಟಿ ನೀಡಿದ್ದ ವರ್ಷದಲ್ಲಿ(೧೯೫೪) ಸ್ವಾತಂತ್ರ್ಯ ಪಡೆದು ಕೆಲವೇ ವರ್ಷಗಳಾಗಿದ್ದ ಭಾರತಕ್ಕೆ ಅನಕ್ಷರತೆ, ಬಡತನ, ನಿರುದ್ಯೋಗ, ಜನಸಂಖ್ಯಾ ಸ್ಫೋಟ, ಲಿಂಗ ತಾರತಮ್ಯ ಮೊದಲಾದ ಸಮಸ್ಯೆಗಳು ಕಾಡುತ್ತಿದ್ದವು. ಆಗ ಭಾರತದಲ್ಲಿ ಬೆರಳಣಿಕೆಯಷ್ಟು ವಿಶ್ವವಿದ್ಯಾಲಯಗಳಿದ್ದವು. ಇಂತಹ ಸಂದರ್ಭದಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ಲಂಡನ್ ವಿಶ್ವವಿದ್ಯಾಲಯದೊಂದಿಗೆ ನಮ್ಮ ವಿಶ್ವವಿದ್ಯಾಲಯಗಳನ್ನು ಹೋಲಿಸುವುದು ಸರಿಯಾದ ಪ್ರಮಾಣವಾಗಲಾರದು. ಇಪ್ಪತ್ತೊಂದನೇ ಶತಮಾನದಲ್ಲಿ ಭಾರತವು ಅನೇಕ ಸುಧಾರಣೆಗಳನ್ನು ಕಂಡಿದೆ. ತಕ್ಕಮಟ್ಟಿಗೆ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡಿದೆ. ನಮ್ಮ ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆಗಳ ಬಗ್ಗೆ ವಿಚಾರಗೋಷ್ಠಿಗಳು ನಡೆಯುತ್ತಿವೆ. ಅಧ್ಯಯನ ಪೀಠಗಳು ಸ್ಥಾಪನೆಯಾಗಿದೆ. ಅದರಡಿಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸಾಂಸ್ಕೃತಿಕ ಅಧ್ಯಯನ ನಡೆಯುತ್ತಿದೆ. ಪ್ರಗತಿಯ ನಡೆಯಲ್ಲಿ ನಿಧಾನಗತಿ ಇರಬಹುದು ಸಂಸ್ಕೃತಿಯನ್ನು ಉಳಿಸುವ ಮತ್ತು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಭಾರತದ ಬಹುತೇಕ ವಿಶ್ವವಿದ್ಯಾಲಯಗಳು ಕಾರ್ಯೋನ್ಮುಖವಾಗಿವೆ. ಬೆಂಗಳೂರು ವಿಶ್ವವಿದ್ಯಾಲಯದ ಸಾಮಾನ್ಯನಿಗೆ

ಸಾಹಿತ್ಯ ಚರಿತ್ರೆ ಮತ್ತು ಮೈಸೂರು ವಿಶ್ವವಿದ್ಯಾಲಯದ ಬೃಹತ್ ವಿಶ್ವಕೋಶಗಳು ಸಂಸ್ಕೃತಿಯನ್ನು ಉಳಿಸುವ, ಮುಂದಿನ ಪೀಳಿಗೆಗೆ ಪರಿಚಯಿಸುವ ಹಾಗೂ ಜನರಿಗೆ ನಮ್ಮ ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಸಾಕಷ್ಟು ಕೆಲಸಗಳಾಗಿರುವುದನ್ನು ತೋರಿಸುತ್ತದೆ.

ಬ್ರಿಟೀಷರು ತಮ್ಮ ಪಾರಂಪರಿಕ ಕುರುಹುಗಳನ್ನು ಆಧುನಿಕತೆಯ ಭರಾಟೆಗೆ ಮಣಿದು ಬದಲಾವಣೆಗೆ ಒಳಗಾಗದೆ ಅದನ್ನು ಇರುವಂತೆಯೇ ಉಳಿಸಿಕೊಳ್ಳುವಲ್ಲಿ ಸಿದ್ಧಹಸ್ತರು. ಇಂಗ್ಲೆಂಡಿನ ಪಾರಂಪರಿಕ ತಾಣವಾದ ಪಾರ್ಲಿಮೆಂಟ್ ಭವನ ಇದಕ್ಕೆ ಸಾಕ್ಷಿಯಾಗಿದೆ. ೧೧೧೬ರಲ್ಲಿ ಸ್ಥಾಪನೆಯಾದ ಬ್ರಿಟೀಷ್ ಪಾರ್ಲಿಮೆಂಟ್ ಭವನವು ೧೮೩೪ರಲ್ಲಿ ಬೆಂಕಿಗೆ ಆಹುತಿಯಾಯಿತು. ಆಗ ಬ್ರಿಟೀಷರು ಈ ಭವನವನ್ನು ಪುನಃ ಕಟ್ಟುವ ಮೂಲಕ ತಮ್ಮ ಪಾರಂಪರಿಕ ಪ್ರಜ್ಞೆಯನ್ನು ತೋರಿಸಿದ್ದಾರೆ. ಗೋಥಿಕ್ ಶೈಲಿಯ ಈ ಭವನವನ್ನು ಅಗತ್ಯಕ್ಕೆ ಅನುಗುಣವಾಗಿ ಅದರ ವಿಸ್ತಾರವನ್ನು ಹೆಚ್ಚಿಸಿದ್ದರೂ ಅದರ ಮೂಲ ಶೈಲಿಗೆ ಧಕ್ಕೆ ಬರದಂತೆ ಕಾಪಾಡಿಕೊಂಡು ಬಂದಿದ್ದಾರೆ. ಇಂದಿಗೂ ಮಧ್ಯಯುಗದ ಕಾಲದಲ್ಲಿ ಧರಿಸುತ್ತಿದ್ದ ಉಡುಗೆಗಳನ್ನೇ ತೊಟ್ಟು ಕಾವಲುಗಾರರು ಕಾವಲು ಕಾಯುತ್ತಿರುವುದನ್ನು ಗಮನಿಸಬಹುದು. ಇದನ್ನು ಕುರಿತು ಕಾರಂತರು "ಯಾವೊಂದು ಜನಾಂಗದ ಸಂಸ್ಕೃತಿಯೂ ತನ್ನ ಪೂರ್ವದ ಬೇರುಗಳನ್ನು ಸಂಪೂರ್ಣವಾಗಿ ಕಡಿದುಕೊಂಡು ಬಾಳಲಾರದಷ್ಟೆ" (ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೪೪) ಎಂದಿದ್ದಾರೆ. ಭಾರತದಲ್ಲಿ ಪಾರಂಪರಿಕವಾದ ಕಟ್ಟಡಗಳನ್ನು, ಕಲಾ ಶಿಲ್ಪಗಳನ್ನು ಉಳಿಸಿಕೊಂಡು ಬರುವಲ್ಲಿ ಪ್ರಯತ್ನ ನಡೆಯುತ್ತಿದೆ. ಆದರೆ ಆ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯೋನ್ಮುಖವಾಗಬೇಕಿದೆ. ಇನ್ನೂ ಸಾಕಷ್ಟು ಪಾರಂಪರಿಕ ತಾಣಗಳನ್ನು ಸ್ಮಾರಕಗಳನ್ನು ರಕ್ಷಿಸಬೇಕಾಗಿದೆ. ಪ್ರಮುಖವಾಗಿ ಜನರಲ್ಲಿ ಪಾರಂಪರಿಕ ತಾಣಗಳನ್ನು ರಕ್ಷಿಸುವ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗಿದೆ.

ಬ್ರಿಟೀಷರು "ಉಡಬಲ್ಲರು; ಉಣಬಲ್ಲರು; ಕುಡಿಯಬಲ್ಲರು; ಕುಣಿಯಬಲ್ಲರು. ಜೀವನವನ್ನು ಆನಂದದಿಂದ ತುಂಬಿಸಿಕೊಳ್ಳಬಲ್ಲ ಶಕ್ತಿಯಿದೆ, ಉತ್ಸಾಹವಿದೆ. ಅದಕ್ಕೆ ಸಮತೂಕದಲ್ಲಿ ಅವರು ಚೆನ್ನಾಗಿ ದುಡಿಯಬಲ್ಲರು, ಕಷ್ಟಪಡಬಲ್ಲರು. ಸಾಹಸಶೀಲತೆ ಅವರ ಗುಣ"ಎಂದಿದ್ದಾರೆ.(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೩೮) ಒಂದು ದೇಶಕ್ಕೆ ಭೇಟಿ ನೀಡಿದ ಬಳಿಕ ನಾವು ಆ ದೇಶದ ಪ್ರವಾಸಿ ತಾಣಗಳ ವೈಭವ, ಲಾಸ್ಯವನ್ನು ಹೊಗಳಿದರೆ ಸಾಲದು. ಅಲ್ಲಿನ ಜನರ ಜೀವನ, ಸಂಸ್ಕೃತಿ ಯಾವ ಬಗೆಯದು? ಅವರ ಗುಣ ಸ್ವಭಾವಗಳು ಹೇಗೆ? ದೇಶದ ಅಭಿವೃದ್ಧಿಯಲ್ಲಿ ಆ ಜನತೆ ನಿರ್ವಹಿಸುವ ಪಾತ್ರ ಏನು? ಎಂಬ ಅಂಶಗಳನ್ನು ಪ್ರವಾಸಿ ಲೇಖಕ ಗಮನಿಸಬೇಕಾಗುತ್ತದೆ. ಈ ಅಂಶಗಳನ್ನು ಗ್ರಹಿಸದ ಕೃತಿಗಳು ಓದುಗರನ್ನು ಸೆಳೆಯುವಲ್ಲಿ ವಿಫಲವಾಗುತ್ತವೆ. ಕಾರಂತರ ಒಳಗಿರುವ ಪ್ರವಾಸಿಗನಿಗೆ ಜನ-ಜೀವನ-ಸಂಸ್ಕೃತಿಯೇ ಪ್ರಮುಖ. ಆದ್ದರಿಂದಲೇ ನಮ್ಮನ್ನು ಆಳಿದ ಬ್ರಿಟೀಷರ ನಡೆವಳಿಕೆ, ಸ್ವಭಾವಗಳನ್ನು ಹತ್ತಿರದಿಂದ ಗ್ರಹಿಸಿ ವಿಮರ್ಶಿಸಿ ಈ ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಯುರೋಪಿಗೆ ಭೇಟಿ ನೀಡಿದ ಪ್ರವಾಸಿ ಲೇಖಕರಲ್ಲಿ (ಲಭ್ಯವಿರುವ ಪ್ರವಾಸ ಕೃತಿಗಳನ್ನು ಆಧರಿಸಿ) ನಾರ್ವೆ ದೇಶಕ್ಕೆ ಭೇಟಿ ನೀಡಿದವರು ಕಾರಂತರು ಒಬ್ಬರೇ. ಕಾರಂತರು ನಿರೂಪಿಸುವಂತೆ ನಾರ್ವೆ ದೇಶ ದಕ್ಷಿಣ ಧ್ರುವ ಪ್ರದೇಶಕ್ಕೆ ಹತ್ತಿರವಾದ ಅತಿ ಶೀತಲ ಪ್ರದೇಶ. ಸೂರ್ಯನ ಓರೆ ಕಿರಣಗಳ ಪ್ರಭಾವದಿಂದ ಸರಿಸುಮಾರು ಆರು ತಿಂಗಳು ಬೆಳಕಿದ್ದರೆ ಮತ್ತೆ ಆರು ತಿಂಗಳು ಕತ್ತಲೆಯಿರುವ ದೇಶ. ದಕ್ಷಿಣ ಧ್ರುವದಲ್ಲಿರುವ ದೇಶಗಳಿಗೆ ಪ್ರವಾಸಿಗರು ಭೇಟಿ ನೀಡುವುದು ವಿರಳ. ಏಕೆಂದರೆ ಪ್ರವಾಸಿಗರಿಗೆ ಬೇಕಾಗುವ ಅಗತ್ಯ

ಸೌಕರ್ಯಗಳು ಈ ದೇಶಗಳಲ್ಲಿ ಸಿಗುವುದಿಲ್ಲ. ಯುರೋಪಿನ ದೇಶಗಳಿಗೆ ಭೇಟಿ ನೀಡಿರುವ ಪ್ರವಾಸಿಗರ ಸಂಖ್ಯೆಯನ್ನು ಗಮನಿಸಿದಾಗ ಈ ಅಂಶವು ತಿಳಿದುಬರುತ್ತದೆ. ಕಾರಂತರು ಈ ಮಿತಿಗಳನ್ನು ಮೀರಿ ಹೆಚ್ಚು ಸೌಕರ್ಯಗಳಿಲ್ಲದ ಸಂದರ್ಭದಲ್ಲಿಯೇ ನಾರ್ವೆ ದೇಶಕ್ಕೆ ಪ್ರವಾಸ ಮಾಡಿರುವುದು ಅವರಿಗಿದ್ದ ತಿಳಿಯಬೇಕೆಂಬ ಹಂಬಲ ಮತ್ತು ಸಾಹಸ ಮನೋಭಾವವನ್ನು ಸೂಚಿಸುತ್ತದೆ.

ನಾರ್ವೆ ದೇಶವು ಸುತ್ತಲೂ ಸಮುದ್ರದಿಂದ ಸುತ್ತುವರಿದ ದೇಶ. ಈ ದೇಶಕ್ಕೆ ಮೀನುಗಾರಿಕೆಯೇ ಪ್ರಥಮ ವಾಣಿಜ್ಯ ಬೆಳೆ. ಇಲ್ಲಿ ಅನೇಕ ಸಾಹಸ ಸಮುದ್ರಯಾನಗಳು ಇತಿಹಾಸದ ಪುಟದಲ್ಲಿ ದಾಖಲಾಗಿವೆ. ಕಾರಂತರು 'ಕಾಂಟಕಿ ಮ್ಯೂಸಿಯಂ' ಬಗ್ಗೆ ಹೇಳುತ್ತಾ 'ಹೈರ್ಡಾಲ್'ರ ಸಾಹಸ ಯಾತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಹೈರ್ಡಾಲ್ ಎಂಬ ವಿಜ್ಞಾನಿಯು ಅಮೆರಿಕಾದ ದಕ್ಷಿಣ ಭಾಗದಲ್ಲಿರುವ ಪೆರುವಿನ ಸಂಸ್ಕೃತಿಗೂ ಶಾಂತಸಾಗರದಲ್ಲಿರುವ 'ಸೌತ್ ಸೀ' ದ್ವೀಪದ ಜನರ ಸಂಸ್ಕೃತಿಗೂ ಸಾಮ್ಯತೆ ಇರುವುದನ್ನು ಗುರುತಿಸಿ ಒಂದು ಸಿದ್ಧಾಂತವನ್ನು ಮಂಡಿಸುತ್ತಾನೆ. ಈ ಸಿದ್ಧಾಂತವು ವೈಜ್ಞಾನಿಕ ತಳಹದಿಯ ಮೇಲೆ ರೂಪಿತವಾಗಿದ್ದು, ಹೈರ್ಡಾಲ್ ಅವರು ಪ್ರಾಯೋಗಿಕವಾಗಿ ನಿರೂಪಿಸಿದ ಸಂಗತಿಯನ್ನು ಲೇಖಕರು ಚಾರಿತ್ರಿಕ ಅಂಶಗಳ ಮುಖೇನ ದಾಖಲಿಸಿದ್ದಾರೆ. ಆ ಮೂಲಕ ಪ್ರವಾಸ ಕೃತಿಗಳಲ್ಲಿ ತೌಲನಿಕ ಸಾಂಸ್ಕೃತಿಕ ಅಧ್ಯಯನದ ಸಾಧ್ಯತೆಗಳನ್ನು ಪರಿಚಯಿಸಿದ್ದಾರೆ. ಪ್ರವಾಸ ಕಥನದ ಏಕತಾನತೆಯನ್ನು ಹೋಗಲಾಡಿಸಿದ್ದಾರೆ. ಪ್ರವಾಸದ ಕೃತಿಯೊಳಗೂ ಕುತೂಹಲವನ್ನು ಕೆರಳಿಸುವ, ಜ್ಞಾನವನ್ನು ವೃದ್ಧಿಸುವ, ವೈಜ್ಞಾನಿಕ ಸಿದ್ಧಾಂತಗಳ ಹಿನ್ನೆಲೆಯಿರುವ ಘಟನೆಗಳನ್ನು ಔಚಿತ್ಯವಾಗಿ ಬಳಸಿಕೊಳ್ಳಬಹುದು ಎಂಬುದಕ್ಕೆ ಕಾರಂತರ ಕೃತಿ ನಿದರ್ಶನವಾಗಿದೆ.

ಯಾವುದೇ ದೇಶ ತನ್ನ ಪರಂಪರೆ, ಸಂಸ್ಕೃತಿಯನ್ನು ರಕ್ಷಿಸದೇ ಆಧುನಿಕ ಜಗತ್ತಿನ ಹೊಸ ಸಾಧ್ಯತೆಗಳಿಗೆ ತೆರೆದುಕೊಳ್ಳಲಾರದು. 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂಬ ಮಾತಿದೆ. ಅಂತೆಯೇ ತಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮರೆತವರು ಅ ದೇಶವನ್ನು ಸಶಕ್ತವಾಗಿ ಕಟ್ಟಲಾರರು. ದೇಶದ ಅನನ್ಯತೆ ಅಡಗಿರುವುದೇ ಸಂಸ್ಕೃತಿಯಲ್ಲಿ. ಸಂಸ್ಕೃತಿಯನ್ನು ರಕ್ಷಿಸುವ ಜೊತೆಗೆ ಅದನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಕಾರ್ಯವನ್ನು ಮಾಡಬೇಕು. ಡೆನ್ಮಾರ್ಕ್ ದೇಶವು ತನ್ನ ಪರಂಪರಾಗತ ಜನಪದ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಮತ್ತು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಅನೇಕ ಮ್ಯೂಸಿಯಂಗಳನ್ನು ಸ್ಥಾಪಿಸಿ ತನ್ನ ಪರಂಪರೆಯನ್ನು ಕಾಯ್ದುಕೊಂಡಿದೆ. ಕಾರಂತರು 'ನಮ್ಮ ಸರಕಾರಗಳು ಈ ವಿಷಯದಲ್ಲಿ ಆಸಕ್ತಿಯನ್ನು ತೋರಿಸಿಲ್ಲ' ಎಂದು ಅಭಿಪ್ರಾಯ ಪಟ್ಟಿದ್ದಾರೆ. "ನಾವು ನಡೆಯಿಸಿದ ಅಭ್ಯಾಸ, ಸಂಗ್ರಹ, ನಮ್ಮ ಸರಕಾರ ತೋರುತ್ತಿರುವ ಆಸಕ್ತಿ- ನಾಮ ಪೂರ್ತಿ! ಮಾತಿಗೆ ಬಂದರೋ 'ಸಂಸ್ಕೃತಿಯ ತುತ್ತೂರಿ'ಯೇ ನಮ್ಮ ಬಾಯಲ್ಲಿ; ಕೃತಿಯಲ್ಲಿ ಶೂನ್ಯರು ನಾವು. ನಿಜವೆಂದರೆ-ಎಷ್ಟೇ ಮುಖ್ಯವಾದ ಇತರ ಪ್ರಶ್ನೆಗಳಿರಲಿ, ನಮ್ಮ ಹಿರಿಮೆಯ ಮಾತು ಒಣಜಂಭಕ್ಕಿಂತ ಹೆಚ್ಚಿನ ಮೂರ್ತ ಸ್ವರೂಪವನ್ನು ಇನ್ನೂ ತಾಳಿಲ್ಲ. ಡೆನ್‌ಮಾರ್ಕಿನಂತಹ ಸಣ್ಣ ದೇಶವೊಂದು ಮಾಡಿರುವ ಕೆಲಸದ ನೂರನೆಯ ಒಂದಂಶವನ್ನೂ ನಾವು ಮಾಡಿದವರಲ್ಲ-ಎನಿಸುತ್ತದೆ. ಅದಕ್ಕೆ ಅವರ ಒಂದು ಮ್ಯೂಸಿಯಂ ಸಾಕ್ಷಿಯಾಗಿದೆ".(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು-೧೫೨)ಎಂದಿದ್ದಾರೆ. ಕಾರಂತರು ಪರಂಪರೆಯನ್ನು ಉಳಿಸಿಕೊಳ್ಳುವ ಮತ್ತು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ನಮ್ಮ ಕಾರ್ಯಗಳ ಬಗ್ಗೆ ಎಚ್ಚರಿಸಿದ್ದಾರೆ. ಅದರ ಮೂಲಕ ನಾವು ಮಾಡಬೇಕಾದ ಕಾರ್ಯಗಳೇನು? ನಮ್ಮಲ್ಲಿರುವ ದುರ್ಬಲ

ಮ್ಯೂಸಿಯಂಗಳನ್ನು ಶೈಕ್ಷಣಿಕ ಕೇಂದ್ರಗಳನ್ನಾಗಿ ಮಾಡಲು ಹಮ್ಮಿಕೊಳ್ಳಬೇಕಾದ ಕಾರ್ಯಸೂಚಿಗಳೇನು? ಎನ್ನುವುದರ ಬಗ್ಗೆ ಚಿಂತಿಸುವಂತೆ ಪ್ರೇರೇಪಿಸಿದ್ದಾರೆ. ಪ್ರವಾಸ ಕೃತಿಗಳು ದೇಶವನ್ನು ಸಶಕ್ತವಾಗಿ ನಿರ್ಮಾಣ ಮಾಡಲು ಅಗತ್ಯವಾಗುವ ವಿಚಾರ-ವಿಮರ್ಶೆಗಳನ್ನು ಮಾಡುತ್ತದೆ. ಆ ದಿಸೆಯಲ್ಲಿ ಚಿಂತಿಸುವಂತೆ ಪ್ರೇರೇಪಿಸುತ್ತವೆ.

ಪ್ರವಾಸ ಸಾಹಿತ್ಯ ಕೃತಿಗಳು ದೇಶದ ಹಿತಕ್ಕೆ, ಸಂಸ್ಕೃತಿಯ ಮುಂದುವರಿಕೆಗೆ ಮಾರ್ಗದರ್ಶನ ನೀಡುವ ನೆಲೆಯಲ್ಲಿ ರಚನೆಯಾಗಿರುವುದನ್ನು ಕಾಣಬಹುದು. ಯಾವುದೇ ದೇಶ ತನ್ನ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದರ ಜೊತೆಗೆ ಪರದೇಶದ ಸಂಸ್ಕೃತಿ, ಪರಂಪರೆಯನ್ನು ತನ್ನ ಜನತೆಗೆ ಪರಿಚಯಿಸುವ ಕೆಲಸವನ್ನೂ ಮಾಡಬೇಕಾಗುತ್ತದೆ. ಡೆನ್ಮಾರ್ಕಿನ ರಾಜಧಾನಿ ಆಮ್‌ಸ್ಟರ್‌ಡಾಮ್‌ನಲ್ಲಿ 'ರಿಕ್ಸ್ ಮ್ಯೂಸಿಯಂ' ಇದೆ. ಈ ಮ್ಯೂಸಿಯಂನಲ್ಲಿ ಡೆನ್ಮಾರ್ಕ್ ದೇಶದ ಸಂಸ್ಕೃತಿಯ ಜೊತೆಗೆ ಪ್ರಪಂಚದ ಇತರ ದೇಶಗಳ ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಲಾ ಪ್ರಕಾರಗಳನ್ನು, ಶಿಲ್ಪಗಳನ್ನು ಪ್ರದರ್ಶಿಸಿದ್ದಾರೆ. ಈ ಮ್ಯೂಸಿಯಂನ್ನು ವೀಕ್ಷಿಸುತ್ತಾ ಕಾರಂತರು ಭಾರತೀಯ ಸಂಸ್ಕೃತಿಗೂ ಇಂಡೋನೇಷ್ಯಾ, ಜಾವಾ, ಬಾಲಿ, ಸುಮಾತ್ರ ಪ್ರದೇಶಗಳ ಸಂಸ್ಕೃತಿಗೂ ಹೋಲಿಕೆ ಇರುವುದನ್ನು ಗುರುತಿಸಿದ್ದಾರೆ. ಆಲ್ಫ್ರೆಡ್ ವೆಗ್‌ನರ್‌ನ ಭೂ ಖಂಡಗಳ ಅಲೆತ ಸಿದ್ಧಾಂತದ ಪ್ರಕಾರ ಭಾರತವು ಮೊದಲು ಆಫ್ರಿಕಾ ಖಂಡದೊಂದಿಗೆ ಭೂಭಾಗವನ್ನು ಹಂಚಿಕೊಂಡಿತ್ತು. ಈಗ ದೂರವಾಗಿವೆ. ಆದರೆ ಆ ಪ್ರದೇಶದ ಜನರು ಅನುಸರಿಸುವ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಅನೇಕ ಸಾಮ್ಯತೆಗಳಿರುವುದನ್ನು ಲೇಖಕರು ಸೂಚಿಸಿದ್ದಾರೆ. 'ರಿಕ್ಸ್ ಮ್ಯೂಸಿಯಂ'ನಲ್ಲಿ ಎಲ್ಲಾ ದೇಶಗಳ ಸಂಸ್ಕೃತಿಯನ್ನು ಒಂದೆಡೆ ಪ್ರದರ್ಶಿಸಿರುವುದರಿಂದ ವಿಶ್ವ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಲು ಅನುಕೂಲವಾಗಿದೆ. ಭಾರತೀಯ ಹಿಂದೂ ಸಂಸ್ಕೃತಿಯನ್ನು ಪ್ರತಿನಿಧಿಸುವ ವೀರಭದ್ರನ ಪ್ರತಿಮೆ, ಗಣೇಶ, ಬ್ರಹ್ಮ, ದುರ್ಗಾ, ಮಹಾಕಾಲ, ಭೈರವ ಮೊದಲಾದ ಶಿಲ್ಪಗಳ ಮೂರ್ತಿಗಳಿವೆ. ಗರುಡವಾಹನ ವಿಷ್ಣು, ಆಂಜನೇಯ, ಭೀಮ, ರಾವಣ ಮೊದಲಾದ ಬಣ್ಣದ ಗೊಂಬೆಗಳನ್ನು ಮರದಲ್ಲಿ ಕೆತ್ತಿದ್ದಾರೆ. ಡೆನ್ಮಾರ್ಕಿನಂತಹ ಚಿಕ್ಕ ದೇಶವು ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡಿದೆ. ಬೇರೆ ದೇಶಗಳ ಸಂಸ್ಕೃತಿಯನ್ನು ತನ್ನ ಜನರಿಗೆ ಪರಿಚಯಿಸುವ ಕಾರ್ಯವನ್ನು ಮ್ಯೂಸಿಯಂಗಳ ಮೂಲಕ ಮಾಡುತ್ತಿದೆ. ನಮ್ಮ ದೇಶದಲ್ಲಿ 'ಇಂದಿರಾಗಾಂಧಿ ಮ್ಯೂಸಿಯಂ' 'ಅಲಹಾಬಾದ್ ಮ್ಯೂಸಿಯಂ' 'ಕಲ್ಕತ್ತಾ ಮ್ಯೂಸಿಯಂ'ಗಳಂತಹ ಕೆಲವು ಮ್ಯೂಸಿಯಂಗಳನ್ನು ಬಿಟ್ಟರೆ ಅಂತರಾಷ್ಟ್ರೀಯ ಮಟ್ಟದ ಮ್ಯೂಸಿಯಂಗಳನ್ನು ಅಭಿವೃದ್ಧಿ ಪಡಿಸಿಲ್ಲ. ಕಾರಂತರು ಈ ಅಂಶಗಳ ಕಡೆಗೆ ಗಮನ ಸೆಳೆದಿರುವುದು ಅವರ ವಿಶಾಲ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ಶಿಲ್ಪಕಲೆಯಲ್ಲಾಗಲಿ, ಚಿತ್ರಕಲೆಯಲ್ಲಾಗಲಿ ಅಥವಾ ಯಾವುದೇ ಇತರ ಕಲಾ ಪ್ರಕಾರವೇ ಆಗಲಿ ಅದರ ಪೂರ್ವಾಪರಗಳನ್ನು ತಿಳಿಸಿಕೊಟ್ಟಿದ್ದಾರೆ. ಪ್ರವಾಸಿಗರಲ್ಲಿ ಇಂತಹ ದೃಷ್ಟಿಕೋನ ಇರಬೇಕಾದುದು ಅಗತ್ಯವಾಗಿದೆ. ಹಾಗಿದ್ದಾಗ ಮಾತ್ರ ನಮ್ಮ ದೇಶವನ್ನು ಬೇರೆ ದೇಶದೊಂದಿಗೆ ಹೋಲಿಸಲು ಸಾಧ್ಯ. ನಮ್ಮ ಕೊರತೆಗಳ ಬಗ್ಗೆ ಮನಗಾಣಲು ಸಾಧ್ಯ.

ಚಿತ್ರಕಾರರು ಆಯಾ ದೇಶದ ಸಾಂಸ್ಕೃತಿಕ ಪ್ರತಿನಿಧಿಗಳು. ತಮ್ಮ ದೇಶ, ಭಾಷೆ, ಜನತೆಯ ಬಗ್ಗೆ, ಜೀವನದ ವೈವಿಧ್ಯಗಳ ಬಗ್ಗೆ, ತಮ್ಮ ಚಿತ್ರಕೃತಿಯಲ್ಲಿ ಹಿಡಿದಿಡಬಲ್ಲರು. ಚಿತ್ರಗಳ ಮೂಲಕ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವವರಾಗಿದ್ದಾರೆ. ಆದ್ದರಿಂದ ಚಿತ್ರಕಾರರು ಆ ದೇಶದ ಸಂಪತ್ತು ಇದ್ದಂತೆ. ಕಾರಂತರಿಗೆ ಈ ಚಿತ್ರಕಾರರ ಬಗ್ಗೆ ತುಂಬಾ ಅಭಿಮಾನ. ಲೇಖಕರಲ್ಲಿನ ಚಿತ್ರಕಾರರ ಬಗೆಗೆ ಹೊಂದಿರುವ

ಜ್ಞಾನವನ್ನೂ, ಚಿತ್ರ ವಿಶ್ಲೇಷಣೆಯ ಪರಿಣಿತಿಯನ್ನೂ ಮೆಚ್ಚಲೇಬೇಕು. ತಾವು ಸಂದರ್ಶಿಸಿದ ದೇಶದ ಚಿತ್ರಕಾರರ ಬಗ್ಗೆ ಅವರ ಬದುಕಿನ ಹಿನ್ನೆಲೆಗಳನ್ನು ಒಳಗೊಂಡಂತೆ ಅನೇಕ ವಿಚಾರಗಳನ್ನು ಉಲ್ಲೇಖಿಸಿದ್ದಾರೆ. ಆಮ್‌ಸ್ಟರ್‌ಡಾಮ್‌ನ 'ರಿಕ್ಸ್ ಮ್ಯೂಸಿಯಂ'ನಲ್ಲಿ 'ವರ್ಮೀರ್' ಎಂಬ ಚಿತ್ರಕಾರನ ಚಿತ್ರಗಳಿವೆ. ಆತನ ಸಣ್ಣದೊಂದು ಚಿತ್ರಕ್ಕೆ ರಿಕ್ಸ್ ಮ್ಯೂಸಿಯಂನವರು ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ತಂದಿರುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಈತನ ಬದುಕಿನ ಕೆಲವು ಘಟನೆಗಳನ್ನು ನೆನಪಿಸಿಕೊಂಡಿದ್ದಾರೆ. 'ವರ್ಮೀರ್‌ನು ಮೊದಲು ಕೊಲೆಗಾರ ಎಂಬ ಆಪಾದನೆಯನ್ನು ಹೊಂದಿದ್ದ. ವರ್ಮೀರನಿಂದ ಕೊಲೆಯಾದ ಎಂದು ಹೇಳಲಾದ ವ್ಯಕ್ತಿಯು ಕೊಲೆಯಾಗುವ ಮೊದಲೇ ವರ್ಮೀರನು ತೀರಿಕೊಂಡಿದ್ದ. ಈ ವಿಷಯವು ವರ್ಮೀರನು ಮರಣ ಹೊಂದಿದ ಬಳಿಕ, ಒಂದೆರಡು ಶತಮಾನಗಳ ನಂತರ ಎಲ್ಲರಿಗೂ ತಿಳಿಯಿತು. ಆಗ ಈತನ ಮೇಲಿದ್ದ ಕೊಲೆಯ ಆರೋಪ ಸುಳ್ಳು ಎಂದು ಸಾಬೀತಾಯಿತು' ಎಂದು ವಿವರಣೆ ನೀಡಿದ್ದಾರೆ. ಲೇಖಕರು ಚಿತ್ರಕಾರರ ಬದುಕಿನ ಘಟನೆಗಳನ್ನು ಪ್ರವಾಸ ಸಾಹಿತ್ಯದ ಮೂಲಕ ಪರಿಚಯಿಸಲು ಸಾಧ್ಯ ಎಂಬುದನ್ನು ನಿರೂಪಿಸಿದ್ದಾರೆ. ಅದರ ಮೂಲಕ ಓದುಗರಿಗೆ ಪ್ರವಾಸದ ವಿವರಗಳ ಜೊತೆಗೆ ಪರಿಚಯಿಸಲು ಸಾಧ್ಯವಿರುವ ಅಂಶಗಳ ಕಡೆಗೆ ಗಮನ ಹರಿಸುವಂತೆ ಮಾಡಿದ್ದಾರೆ. ಪ್ರವಾಸ ಕಥನಗಳನ್ನು ಬರೆಯುವವರಿಗೆ ಈ ಅಂಶಗಳು ಮಾದರಿಯಾಗಿವೆ.

ನೃತ್ಯದ ಗತ್ತುಗಳನ್ನು, ಸಂಗೀತದ ತಾನಗಳನ್ನು ಬಲ್ಲ ಕಾರಂತರು ತಾವು ನೋಡಿದ ಬ್ಯಾಲೆ ನೃತ್ಯಗಳನ್ನು ಕಂಡಂತೆ ವರ್ಣಿಸಿದ್ದಾರೆ. ಕಾರಂತರ ಸಂಗೀತದ ಜ್ಞಾನ ಅಮೋಘವಾದದ್ದು. ಪಾಶ್ಚಾತ್ಯ ಸಂಗೀತ ಕೇಳಿ ಅದನ್ನು ಯಕ್ಷಗಾನದ ಗತಿ ಹಾಗೂ ಶಾಸ್ತ್ರೀಯ ಸಂಗೀತದೊಂದಿಗೆ ಹೋಲಿಸಿ ವಿಮರ್ಶಿಸಿದ್ದಾರೆ. ಅಲ್ಲದೆ ಯಕ್ಷಗಾನದಲ್ಲಿ ಪಾಶ್ಚಾತ್ಯರ ಸಂಗೀತ ಶೈಲಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಚಿಂತಿಸಿದ್ದಾರೆ. ಹೊಸ ತಲೆಮಾರಿಗೆ ಇಷ್ಟವಾಗುವಂತೆ ಪೂರ್ವಸೂರಿಗಳ ನಾದವನ್ನು ಹದಗೊಳಿಸಿ ಹೊಸ ರೀತಿಯಲ್ಲಿ ಇಂದಿನ ಕಾಲಕ್ಕೆ ಹೊಂದಿಕೊಳ್ಳುವಂತೆ ಪರಿವರ್ತಿಸಬೇಕೆಂಬುದು ಕಾರಂತರ ಅಭಿಪ್ರಾಯವಾಗಿದೆ.

ಕಾರಂತರ 'ಅಪೂರ್ವ ಪಶ್ಚಿಮ' ಕೃತಿಯಲ್ಲಿ ನಿರೂಪಿಸಲಾಗಿರುವ ಎಲ್ಲಾ ವಿಷಯ ವಸ್ತುಗಳಿಗೂ ಸಮಾನವಾದ ಪ್ರಾಧಾನ್ಯತೆಯನ್ನು ನೀಡಲಾಗಿದೆ. ಕಲೆ, ವಾಸ್ತುಶಿಲ್ಪ, ಜಾನಪದ, ಆರ್ಥಿಕತೆ, ಸಾಮಾಜಿಕತೆ ಹೀಗೆ ಎಲ್ಲಾ ವಿಷಯಗಳನ್ನು ಸಮಾನ ನೆಲೆಯಲ್ಲಿ ಚರ್ಚಿಸಲಾಗಿದೆ. ಬಹುಶಿಸ್ತೀಯ ನೆಲೆಯಲ್ಲಿ ವಿಚಾರ ಮಂಥನ ಮಾಡಲಾಗಿದೆ. ಇವರ ವಿಚಾರಗಳು ಸಮತಾವಾದವನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ತಿಳಿಸುವ ತಾತ್ವಿಕಮಟ್ಟದ ಬರೆವಣಿಗೆಯನ್ನು ಹೊಂದಿದೆ.

ಬಿಳಿಗಿರೆ ರಾಮಚಂದ್ರರಾಯರ 'ನಾನು ಕಂಡ ರಷ್ಯಾ' ಕೃತಿಯು ಪೂರ್ವ ರಾಷ್ಟ್ರಗಳಿಗೂ ಪಶ್ಚಿಮ ರಾಷ್ಟ್ರಗಳಿಗೂ ಬೆಸೆದ ಸಾಂಸ್ಕೃತಿಕ ಕೊಂಡಿಯಂತಿದೆ. ಈ ಕೃತಿಯು ೧೯೫೬ರಲ್ಲಿ ಬೆಂಗಳೂರಿನ ಜನಶಕ್ತಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಲೇಖಕರು ೧೯೫೫ರಲ್ಲಿ ಹೆಲ್ಸಿಂಕಿಯಲ್ಲಿ (ಫಿನ್ಲೆಂಡಿನ ರಾಜಧಾನಿ) ನಡೆದ ವಿಶ್ವ ಶಾಂತಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇವರು ಸರಕಾರದ ವೆಚ್ಚದಲ್ಲಿ ಪ್ರವಾಸ ಮಾಡಿದ ಮೊದಲ ಲೇಖಕರಾಗಿದ್ದಾರೆ. ಎರಡು ಮಹಾಯುದ್ಧಗಳನ್ನು ಕಂಡ ನಂತರ ಇಡೀ ಜಗತ್ತೇ ತಲ್ಲಣಗೊಂಡಿತ್ತು. ಇದರ ಫಲವಾಗಿಯೇ ವಿಶ್ವ ಶಾಂತಿ ಸಮ್ಮೇಳನಗಳು ಜರುಗಿದ್ದು, ಅದರಲ್ಲಿ ಭಾಗವಹಿಸಲು ಬಿಳಿಗಿರೆ ರಾಮಚಂದ್ರರಾಯರಿಗೆ ಯುರೋಪ್‌ಗೆ ಹೋಗುವ ಅವಕಾಶ ಸಿಕ್ಕಿತು. ಇವರ ಕೃತಿಯಲ್ಲಿ ಫಿನ್ಲೆಂಡ್, ಸೋವಿಯತ್ ರಷ್ಯಾ, ಜೆಕೊಸ್ಲೋವಾಕಿಯಾ ದೇಶಗಳಿಗೆ ಪ್ರವಾಸ ಹೋಗಿದ್ದರ ವಿವರ ಇದೆ. ಇವರ

ಕೃತಿಯಲ್ಲಿ ಗಮನಿಸಬಹುದಾದ ಅಂಶವೆಂದರೆ ರಷ್ಯಾ ದೇಶದ 'ನ್ಯಾಯಪರಿಪಾಲನೆಯ ಬಗ್ಗೆ ಪರಿಚಯ' ನೀಡಿದ್ದಾರೆ. ಯಾವ ಪ್ರವಾಸ ಕೃತಿಯೂ ವಿದೇಶಗಳ ನ್ಯಾಯ ಪರಿಪಾಲನೆ ವ್ಯವಸ್ಥೆಯ ಕುರಿತು ಚರ್ಚೆ ಮಾಡಿರುವುದಿಲ್ಲ.

'ನಾನು ಕಂಡ ರಷ್ಯಾ' ಕೃತಿಯು ಪ್ರಕಟವಾದ ನಂತರ ಮತ್ತೆ ಹನ್ನೆರಡು ವರ್ಷಗಳ (೧೯೫೬ ರಿಂದ ೧೯೬೮ರವರೆಗೆ) ಕಾಲ ಯಾವುದೇ ಯುರೋಪ್ ಪ್ರವಾಸ ಕೃತಿಗಳು ಪ್ರಕಟವಾಗಿಲ್ಲ. ೧೯೬೨ರಲ್ಲಿ ಭಾರತವು ಚೀನಾದೊಂದಿಗೆ ಯುದ್ಧ ಮಾಡಿತ್ತು. ಮೂರನೇ ಮಹಾಯುದ್ಧ ನಡೆಯುವ ಸಾಧ್ಯತೆ ಇದೆ ಎಂದು ಭಾವಿಸಲಾಗಿತ್ತು. ಆದ್ದರಿಂದ ಈ ಅವಧಿಯಲ್ಲಿ ಯಾವುದೇ ಪ್ರವಾಸ ಕೃತಿಗಳು ಪ್ರಕಟವಾಗಿಲ್ಲ.

೧೯೬೦ರಿಂದ ೧೯೬೯ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

ಎರಡನೇ ಮಹಾಯುದ್ಧದ ಪರಿಣಾಮದಿಂದ ವಿಶ್ವಸಂಸ್ಥೆ ಸ್ಥಾಪನೆಯಾಯಿತು. ಪ್ರಪಂಚದ ಅನೇಕ ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯತ್ವವನ್ನು ಸ್ವೀಕರಿಸಿದವು. ವಿಶ್ವಸಂಸ್ಥೆಯ ಅನುಮತಿಯಿಲ್ಲದೆ ಯುದ್ಧವನ್ನು ಸಾರುವಂತಿಲ್ಲ ಎಂಬ ಷರತ್ತಿಗೆ ಸದಸ್ಯ ರಾಷ್ಟ್ರಗಳು ಒಪ್ಪಿಗೆಯನ್ನಿತ್ತವು. ಪ್ರಪಂಚದಲ್ಲಿ ಶಾಂತಿ ನೆಲೆಸತೊಡಗಿತು. ವಿದೇಶ ಪ್ರವಾಸಕ್ಕೆ ಬೇಡಿಕೆ ಹೆಚ್ಚಾಯಿತು. ಅರವತ್ತರ ದಶಕದ ಕೊನೆಯಲ್ಲಿ ಕನ್ನಡದ ಯುರೋಪ್ ಪ್ರವಾಸ ಕೃತಿಗಳ ಸಂಖ್ಯೆಯಲ್ಲಿ ಕೊಂಚ ಏರಿಕೆ ಕಂಡಿತು. ಸೋವಿಯತ್ ಇಡೀ ಪ್ರಪಂಚದ ಗಮನವನ್ನು ತನ್ನೆಡೆಗೆ ಸೆಳೆಯಲು ಕಾತರವಾಗಿತ್ತು. ಅಲ್ಲದೆ ತಾನು ಅನುಸರಿಸುತ್ತಿದ್ದ ಸಮಾಜವಾದಿ ಧೋರಣೆಯನ್ನು ಪ್ರಪಂಚದ ಇತರ ರಾಷ್ಟ್ರಗಳಲ್ಲಿ ಹರಡಲು ಅನುವಾಗಿತ್ತು. ಆದ್ದರಿಂದ ಪ್ರಪಂಚದ ಬೇರೆ ಬೇರೆ ಕ್ಷೇತ್ರದ ಸಾಧಕರನ್ನು ತನ್ನ ದೇಶಕ್ಕೆ ಕರೆಸಿಕೊಂಡು ಅವರ ಮೂಲಕ ತಮ್ಮ ಧೋರಣೆಗಳನ್ನು ಬೇರೆ ದೇಶಗಳಿಗೆ ತಲುಪಿಸುವ ಉದ್ದೇಶವನ್ನು ಹೊಂದಿತ್ತು. ಪರಿಣಾಮವಾಗಿ ಅರವತ್ತರ ದಶಕದಲ್ಲಿ ಅನೇಕ ಕನ್ನಡದ ಲೇಖಕರು ಸೋವಿಯತ್ ದೇಶಕ್ಕೆ ಪ್ರವಾಸ ಮಾಡಿದ್ದಾರೆ.

ಲೇಖಕರಾದ ರಾ.ಶಿ ಮತ್ತು ಶ್ರೀರಂಗರಾಜು ಅವರನ್ನು ಸೋವಿಯತ್ ದೇಶ ಆಹ್ವಾನಿಸಿತ್ತು. ವೈದ್ಯರಾಗಿದ್ದ ರಾ.ಶಿ.ಯವರು ವೈದ್ಯಕೀಯ ಸಂಘದ ಆಶ್ರಯದಲ್ಲಿ ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಸೋವಿಯತ್ ದೇಶದ ಅತಿಥಿಯಾಗಿ ಪ್ರವಾಸಕ್ಕೆ ತೆರಳಿದ್ದರು. ಇವರು ತಮ್ಮ ಪ್ರವಾಸಾನುಭವಗಳನ್ನು ಕಾಲ್ಪನಿಕ ಮಗಳು ಕೊರವಂಜಿಗೆ ಹೇಳುವಂತೆ ಕಲ್ಪಿಸಿ ಬರೆದಿದ್ದಾರೆ. ಕೊರವಂಜಿಗೆ ಸಲಹೆ ಕೇಳುತ್ತಾರೆ. ತಮ್ಮ ಮನಸ್ಸಿನ ದುಗುಡವನ್ನು ಹೇಳಿಕೊಳ್ಳುತ್ತಾರೆ, ನಿವಾರಿಸಿಕೊಳ್ಳುತ್ತಾರೆ. ಈ ರೀತಿಯ ಕಾಲ್ಪನಿಕ ವ್ಯಕ್ತಿಗಳನ್ನು ಚಿತ್ರಿಸುವ ಬರೆವಣಿಗೆ ಸಾಮಾನ್ಯವಾಗಿ ಕಥೆ, ಕಾದಂಬರಿಗಳಲ್ಲಿರುತ್ತದೆ. ಆದರೆ ನೈಜ ಘಟನಾವಳಿಗಳ ವಿವರಗಳನ್ನು ಹೊಂದಿರುವ ಪ್ರವಾಸ ಕಥನದಲ್ಲಿ ಕಲ್ಪನೆಯನ್ನು ಅಳವಡಿಸಿಕೊಂಡಿರುವುದು ವಿಶಿಷ್ಟವಾಗಿದೆ. ಆದ್ದರಿಂದ ಈ ಪ್ರವಾಸ ಕೃತಿಯು ಫ್ಯಾಂಟಸಿ ರೂಪದ ಫಿಕ್ಷನಲ್ ಕಾದಂಬರಿಯಂತೆ ತೋರುತ್ತದೆ.

ಯುನೆಸ್ಕೋ ಸಂಸ್ಥೆಯ ವತಿಯಿಂದ ಮೈಸೂರು ಸರಕಾರದ ಸಹಕಾರದೊಂದಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ 'ಶ್ರೀರಂಗರಾಜ್' ಅವರು ತಮ್ಮ 'ಸೋವಿಯೆತ್ ದಿನಚರಿ' ಕೃತಿಯಲ್ಲಿ ತಾವು ಪಡೆದ ಅಂದಂದಿನ ಅನುಭವಗಳನ್ನು ಅಂದೇ ದಿನಚರಿ ಮೂಲಕ ದಾಖಲಿಸಿದ್ದಾರೆ. ದಿನಚರಿ ರೂಪದ ಪ್ರವಾಸ ಕೃತಿಗಳಿಗೆ ಕೆಲವು ಮಿತಿಗಳಿವೆ. ಅಂದಿನ ಅನುಭವಗಳನ್ನು ಯಥಾವತ್ತಾಗಿ ಬರೆದು ಬಿಡುವುದರಿಂದ ಪ್ರವಾಸದ ಸಮಗ್ರ

ದೃಷ್ಟಿಕೋನ ಸಾಧ್ಯವಾಗುವುದಿಲ್ಲ. ಪ್ರವಾಸ ಪೂರ್ಣಗೊಂಡ ಬಳಿಕ ತಾವು ಮಾಡಿಕೊಂಡ ಟಿಪ್ಪಣಿಗಳನ್ನು ಆಧರಿಸಿ ಬರೆವಣಿಗೆಯಲ್ಲಿ ತೊಡಗಿದಾಗ ಪ್ರವಾಸದ ಪೂರ್ಣ ನೋಟವನ್ನು ಇಟ್ಟುಕೊಂಡ ತೌಲನಿಕ ವಿವೇಚನೆ ಸಾಧ್ಯವಾಗುತ್ತದೆ. ದಿನಚರಿಯಲ್ಲಿನ ಅಭಿಪ್ರಾಯಗಳು ಪರಿಪೂರ್ಣವಾದ ವಿಶ್ಲೇಷಣಾತ್ಮಕ ಬರೆವಣಿಗೆಗೆ ತಡೆಯನ್ನು ಉಂಟು ಮಾಡುತ್ತದೆ. ಈ ಮಿತಿಗಳ ನಡುವೆಯೂ ಲೇಖಕರು ತಾವು ಸಂದರ್ಶಿಸಿದ ಸೋವಿಯತ್ ರಾಷ್ಟ್ರದ ಬಗ್ಗೆ ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿದ್ದಾರೆ.

ಸೋವಿಯತ್ ದೇಶದಲ್ಲಿ ಆಸ್ತಿಕರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಮುದುಕರು ಮತ್ತು ಅವರ ಮೊಮ್ಮಕ್ಕಳು ಭಾನುವಾರದಂದು ಮಾತ್ರ ಚರ್ಚಿಗೆ ಹೋಗುತ್ತಾರೆ. ಆದ್ದರಿಂದ ಬೀಚಿ ಸೋವಿಯತ್ ದೇಶವನ್ನು 'ದೇವರಿಲ್ಲದ ಗುಡಿ' ಎಂದು ಕರೆದಿದ್ದಾರೆ. ದೇವರನ್ನು ನಂಬದ ಜನ ಅಲ್ಲಿನ ಕವಿಗಳನ್ನು, ತಮ್ಮ ದೇಶದ ಪ್ರಮುಖ ನಾಯಕರನ್ನು ದೇವರನ್ನು ಆರಾಧಿಸುವಂತೆಯೇ ಗೌರವಿಸಿದ್ದಾರೆ. ಸೋವಿಯತ್ ದೇಶದ ನಾಯಕ 'ಲೆನಿನ್'ನ್ನು ಈ ಜನರು ತಮ್ಮ ಮನೆಗಳಲ್ಲಿ, ಅಂಗಡಿಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಭಾವಚಿತ್ರವನ್ನು ಪ್ರದರ್ಶಿಸುವ ಮೂಲಕ ತಮ್ಮ ಗೌರವಯುತ ಭಕ್ತಿಯನ್ನು ಪ್ರದರ್ಶಿಸಿರುವುದನ್ನು ಲೇಖಕರು ಗುರುತಿಸಿದ್ದಾರೆ. ಅದನ್ನು ಕಂಡು ಭಾರತೀಯರಲ್ಲಿ ಹಿರಿಯ ಕವಿಗಳಿಗೆ ಸೂಕ್ತ ಗೌರವಗಳನ್ನು ಸಲ್ಲಿಸುವ ಪ್ರಜ್ಞೆ ಬೆಳೆದಿಲ್ಲ ಎಂದು ಹೇಳಿದ್ದಾರೆ. ಲೇಖಕರ ಅಭಿಪ್ರಾಯವನ್ನು ಒಪ್ಪಬೇಕಾಗಿದೆ. ಜೈಮಿನಿ ಭಾರತದ ಕರ್ತೃ ದೇವನೂರಿನ 'ಲಕ್ಷ್ಮೀಶನ ಗುಡಿ' ಎಂದು ಹೇಳಲಾಗುವ ದೇವಸ್ಥಾನದ ಸುತ್ತಲೆಲ್ಲ ಮುಳ್ಳುಕಂಟಿಗಳು ಬೆಳೆದಿರುವುದು ನಾವು ನಮ್ಮ ಹಿರಿಯ ಕವಿಗಳಿಗೆ ತೋರುವ ಅಗೌರವಕ್ಕೆ ಸಾಕ್ಷಿಯಾಗಿದೆ.

ಶ್ರೀರಂಗರಾಜ್ ಅವರು ಭಾರತೀಯ ಸಾಂಸ್ಕೃತಿಕ ದೃಷ್ಟಿಕೋನದ ಮೂಲಕ ಯುರೋಪಿನ ಸಂಸ್ಕೃತಿಯನ್ನು ನೋಡಿದ್ದಾರೆ. ಬ್ಯಾಲೆ ನೃತ್ಯಗಾರ್ತಿಯರು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಸೂಕ್ತವೆನಿಸುವ ಮೈ ಬಿಗಿಯಾದ ಉಡುಪುಗಳನ್ನು ಧರಿಸಿದ್ದನ್ನು ಕಂಡು "ಎಲ್ಲಾ ನೃತ್ಯಗಾರರು ಮೈಯನ್ನು ಬಿಗಿ ಹಿಡಿದಿರುವ(ಟೈಟ್) ಬಟ್ಟೆಗಳನ್ನು ಧರಿಸುತ್ತಾರೆ. ತೀರಾ ಮಡಿವಂತರಿಗೆ ಇದು ಅಶ್ಲೀಲವಾಗಿ ಕಂಡರೆ ಆಶ್ಚರ್ಯವೇನಿಲ್ಲ .... ಪಾಶ್ಚಿಮಾತ್ಯರ ದೇಹ ಸೌಂದರ್ಯ ಪ್ರದರ್ಶನ ಅಂತಹ ದಿವ್ಯ ಕಲೆಯ ಅಂಗವೊ? ಹೀಗಾದರೆ ಸ್ವಲ್ಪ ಕುಂದೇ ಹೌದು" (ಶ್ರೀರಂಗರಾಜ್., ಸೋವಿಯೆತ್ ದಿನಚರಿ., ಪು-೨೩)ಎಂದಿದ್ದಾರೆ. ಪಾಶ್ಚಿಮಾತ್ಯರು ತಮ್ಮ ದೇಹದ ಸೌಂದರ್ಯವನ್ನು ಪ್ರದರ್ಶನ ಮಾಡುವುದಕ್ಕೆ ಹಿಂಜರಿಯುವ ಮನೋಭಾವದರಲ್ಲ. ಯುರೋಪಿನ ಸಂಸ್ಕೃತಿಯು ದೇಹ ಸೌಂದರ್ಯ ಪ್ರದರ್ಶನವನ್ನು 'ಶೀಲ'ದ ದೃಷ್ಟಿಕೋನದಿಂದ ನೋಡುವುದಿಲ್ಲ. ಆದರೆ ಭಾರತೀಯರಲ್ಲಿ ಸ್ತ್ರೀಯರಿಗೆ 'ಶೀಲ' ಪ್ರಾಣದಷ್ಟೇ ಪ್ರಮುಖ ಎಂಬಂತೆ ಬಿಂಬಿತವಾಗಿದೆ. ಹೆಣ್ಣು ಮಕ್ಕಳು ತಮ್ಮ ದೇಹದ ಅಂಗ ಪ್ರದರ್ಶನ ಮಾಡುವುದನ್ನು ಭಾರತೀಯ ಮನಸ್ಥಿತಿ ಒಪ್ಪುವುದಿಲ್ಲ. ಆದರೆ ಬ್ಯಾಲೆಗೆ ಸೂಕ್ತವೆನಿಸುವ ಬಟ್ಟೆಯನ್ನು ಧರಿಸುವುದು ಕಲಾ ಪ್ರದರ್ಶನಕ್ಕೆ ಅನುಕೂಲಕರ, ಅದನ್ನು ಅಶ್ಲೀಲವೆಂದು ನೋಡುವುದು ಮತ್ತು 'ಬ್ಯಾಲೆಯ ನೃತ್ಯದ ಕಲೆಯಲ್ಲಿ ಕುಂದು ಇದೆ' ಎಂದಿರುವುದು ಲೇಖಕರ ಮನೋಭಾವವನ್ನು ತಿಳಿಸುತ್ತದೆ. ಭಾರತೀಯ ಸಂಸ್ಕೃತಿಯಿಂದ ಪ್ರೇರಿತವಾದ ಮನಸ್ಥಿತಿಯು ಈ ಅಭಿಪ್ರಾಯಕ್ಕೆ ಕಾರಣವಾಗಿದೆ.

ನಮ್ಮ ದೇಶದ ಸಂಸ್ಕೃತಿಗೂ ಯುರೋಪಿನ ಸಂಸ್ಕೃತಿಗೂ ದೇವರು, ಧರ್ಮ, ನಂಬಿಕೆಗಳ ವಿಷಯದಲ್ಲಿ ತುಂಬಾ ವ್ಯತ್ಯಾಸ ಇದೆ. ಯುರೋಪಿನ ದೇಶಗಳಲ್ಲಿ ದೇವರು, ಧರ್ಮಕ್ಕಿಂತ ಹೆಚ್ಚಾಗಿ ತಾವು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಮೇಲೆ ಗಮನ ಕೊಡುತ್ತಾರೆ. ದೇವರ ಮೇಲಿನ ನಂಬಿಕೆಗಿಂತ

ಕರ್ತವ್ಯಪರತೆಯನ್ನು ಹೆಚ್ಚು ಜನರು ನಂಬುತ್ತಾರೆ. ಲೇಖಕರು ಯುರೋಪಿನ ಜನರ ಈ ಭಾವವು ಪತ್ರಿಕೆಯಲ್ಲಿ ಪ್ರಕಟವಾಗಿದ್ದನ್ನು ಗುರುತಿಸಿ ಉಲ್ಲೇಖಿಸಿದ್ದಾರೆ. ಮಾಸ ಪತ್ರಿಕೆಯಲ್ಲಿ ಒಂದು ವ್ಯಂಗ್ಯ ಚಿತ್ರ ಪ್ರಕಟವಾಗಿರುತ್ತದೆ. ಅದರ ಶೀರ್ಷಿಕೆ 'ಶಿಲುಬೆ ಮತ್ತು ಟ್ರಾಕ್ಟರ್'. ಧರ್ಮವನ್ನು ನಂಬಿದವನು ಶಿಲುಬೆಯನ್ನು ಹೊತ್ತುಕೊಂಡು ಅದರ ಭಾರದಲ್ಲಿ ನಜ್ಜಿ ಹೋಗುತ್ತಿರುವುದೂ, ಟ್ರಾಕ್ಟರನ್ನು ನಡೆಸುತ್ತಿರುವ ಸುಂದರ ಕಾಯದ ಯುವಕನು ಅವನನ್ನು ನೋಡಿ ಸಹಾನುಭೂತಿ ವ್ಯಕ್ತಪಡಿಸುವುದೂ ಚಿತ್ರಿತವಾಗಿರುತ್ತದೆ. ಈ ಚಿತ್ರ ಆ ದೇಶದ ಮನೋಭಾವವನ್ನು, ಹಿತಾಸಕ್ತಿಯನ್ನು ಪ್ರತಿಬಿಂಬಿಸುತ್ತದೆ. ಜನರನ್ನು ಸಾಮಾಜಿಕ ಮೂಢನಂಬಿಕೆಗಳಿಗೆ ಒಳಗಾಗದಂತೆ ಎಚ್ಚರಗೊಳಿಸುವುದು ಪತ್ರಿಕೆಗಳು ಮಾಡಬೇಕಾದ ಸಮಾಜಮುಖಿ ಕಾರ್ಯವಾಗಿದೆ. ಲೇಖಕರು ಈ ಚಿತ್ರಗಳ ವಿವರಗಳನ್ನು ನಿರೂಪಿಸಿರುವ ಉದ್ದೇಶವು ಭಾರತದಲ್ಲಿ ಮೂಢನಂಬಿಕೆಗಳ ಪ್ರಮಾಣ ಹೆಚ್ಚಿದ್ದು, ಹೊಸ ದಿಕ್ಕಿನೆಡೆಗೆ ಚಿಂತಿಸಬೇಕಾದ ಅನಿವಾರ್ಯತೆ ಇರುವುದನ್ನು ಸೂಚಿಸುತ್ತದೆ.

೧೯೭೦ರಿಂದ ೧೯೭೯ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

೧೯೭೦ರಿಂದ ೧೯೭೯ರ ನಡುವಿನ ಅವಧಿ ಕನ್ನಡದ ಯುರೋಪ್ ಪ್ರವಾಸ ಸಾಹಿತ್ಯ ಕ್ಷೇತ್ರಕ್ಕೆ ಚೇತರಿಕೆ ನೀಡಿದ ಕಾಲಘಟ್ಟ. ಈ ದಶಕದಲ್ಲಿ ಹದಿನೆಂಟಕ್ಕೂ ಹೆಚ್ಚು ಕೃತಿಗಳು ಪ್ರಕಟವಾಯಿತು. ಈ ದಶಕದಲ್ಲಿ ಉಂಟಾದ ರಾಷ್ಟ್ರ ರಾಜಕಾರಣದ ಮಹತ್ತರವಾದ ಬದಲಾವಣೆಗಳು ವಿದೇಶ ಪ್ರವಾಸಕ್ಕೆ ಪೂರಕವಾಗಿಯೇ ಘಟಿಸಿರುವುದು ಕಂಡುಬರುತ್ತದೆ. ಶಿಕ್ಷಣ ಕ್ಷೇತ್ರದ ಬೆಳವಣಿಗೆಯೂ ಇದಕ್ಕೆ ಕಾರಣವಾಯಿತು. ಕನ್ನಡ ಸಾಹಿತ್ಯದ ಪ್ರಮುಖ ಲೇಖಕರೆಲ್ಲ ಪ್ರವಾಸ ಸಾಹಿತ್ಯ ರಚನೆಗೆ ತೊಡಗಿದರು. ಜಿ.ಎಸ್.ಶಿವರುದ್ರಪ್ಪ, ಕೆ. ಶಿವರಾಮ ಕಾರಂತ, ('ಅರಸಿಕರಲ್ಲ'–ಎರಡನೇ ಪ್ರವಾಸ ಕೃತಿ) ಬೀಚಿ, ಶ್ರೀರಂಗ, ಬಸವರಾಜ ಕಟ್ಟೀಮನಿ, ದೇ. ಜವರೇಗೌಡ ಮೊದಲಾದವರು ಈ ಕ್ಷೇತ್ರದಲ್ಲಿ ಕೃಷಿ ಮಾಡಿದರು. ಈ ಸಂಕ್ರಮಣ ಕಾಲಘಟ್ಟವನ್ನು "ಕನ್ನಡದ ಯುರೋಪ್ ಪ್ರವಾಸ ಕಥನಗಳ ಸುವರ್ಣ ದಶಕ" ಎಂದು ಕರೆಯಬಹುದು. ಹಾಗೂ ಈ ಕಾಲಘಟ್ಟದಲ್ಲಿ ವೈವಿಧ್ಯಮಯ ಕ್ಷೇತ್ರದ ಬರಹಗಾರರು ಪ್ರವಾಸ ಕೃತಿ ರಚಿಸಿದರು. ಸಂಗೀತಗಾರರು, ಚಲನಚಿತ್ರದ ನಿರ್ದೇಶಕರು, ನಾಟಕಕಾರರು, ಮಠಾಧೀಶರು, ವಿಶ್ವವಿದ್ಯಾಲಯದ ಕುಲಪತಿಗಳು, ಹಾಸ್ಯ ಸಾಹಿತಿಗಳು ಹೀಗೆ ಬೇರೆ ಬೇರೆ ಕ್ಷೇತ್ರದ ಸಾಧಕರು ಪ್ರವಾಸ ಕೃತಿಯನ್ನು ಬರೆದಿದ್ದಾರೆ. ವಿದೇಶಕ್ಕೆ ತೆರಳುವವರ ಪ್ರಮಾಣ ಅಧಿಕವಾಗಲು ಸೋವಿಯತ್ ದೇಶದ ಅಂದಿನ ನಾಯಕರಾದ 'ಗೋರ್ಬಚೇವ್' ಅವರು ಪಾಲಿಸಿದ 'ಗ್ಲಾಸ್‌ನೋಸ್ಟ್' ಎಂಬ ಮುಕ್ತ ಸಮಾಜದ ನೀತಿ ಕಾರಣವಾಗಿದೆ. ಈ ದಶಕದಲ್ಲಿ ಪ್ರಕಟವಾದ ಹದಿನೆಂಟು ಪ್ರವಾಸ ಕೃತಿಗಳಲ್ಲಿ ಹತ್ತಕ್ಕೂ ಹೆಚ್ಚು ಕೃತಿಗಳು ಸೋವಿಯತ್ ದೇಶದ ಆಹ್ವಾನದ ಮೇರೆಗೆ ಪ್ರವಾಸ ಹೋಗಿದ್ದಾರೆ. ಈ ದಶಕದಲ್ಲಿ ವಸಾಹತೋತ್ತರ ಕಾಲಘಟ್ಟದ ಮೊದಲ ಮಹಿಳಾ ಪ್ರವಾಸ ಕೃತಿ ಪ್ರಕಟವಾಯಿತು.

೧೯೭೦ರಲ್ಲಿ ಪ್ರಕಟಗೊಂಡ ಈ ದಶಕದ ಮೊದಲ ಕೃತಿ 'ನಾ ಕಂಡ ರಷ್ಯ'. ಪ್ರಗತಿಶೀಲ ಚಿಂತಕರಾದ ಬಸವರಾಜ ಕಟ್ಟೀಮನಿ ಅವರು ೧೯೬೯ ರಲ್ಲಿ ಸೋವಿಯತ್ ದೇಶದ ಆಹ್ವಾನದ ಮೇರೆಗೆ ರಷ್ಯಾ ಪ್ರವಾಸ ಕೈಗೊಳ್ಳುತ್ತಾರೆ. ಕಟ್ಟೀಮನಿ ಅವರು ತಮ್ಮ ಪ್ರಗತಿಶೀಲ ಸಾಹಿತ್ಯದ ಚಿಂತನಧಾರೆಗಳನ್ನು ಪ್ರವಾಸ ಕೃತಿಯಲ್ಲಿಯೂ ವ್ಯಕ್ತಪಡಿಸಿದ್ದಾರೆ. ನಾ ಕಂಡ ರಷ್ಯಾ ಕೃತಿಯಲ್ಲಿ ಪ್ರಗತಿಶೀಲ ಸಾಹಿತ್ಯದ ಪರಿಕಲ್ಪನೆಯ ಬಗ್ಗೆ

ಹೇಳುತ್ತಾ "ವಾಸ್ತವ ಪರಿಸ್ಥಿತಿಗೆ ಕಣ್ಣು ಕಿವಿ ತೆರೆದಿಟ್ಟು, ಒಳ್ಳೆಯ ಬದುಕಿಗಾಗಿ ಹೋರಾಡುತ್ತಿರುವ ಜನತೆಗೆ ಸ್ಫೂರ್ತಿ ನೀಡುವಂತೆ ಕೃತಿ ರಚಿಸುವುದೇ ಪ್ರಗತಿಶೀಲತೆ" (ಬಸವರಾಜ ಕಟ್ಟಿಮನಿ., ನಾ ಕಂಡ ರಷ್ಯಾ., ಪು-೭)ಎಂದಿದ್ದಾರೆ. 'ಪ್ರಗತಿಶೀಲ ಸಾಹಿತ್ಯ'ವು ಸ್ವಾತಂತ್ರ್ಯ ಪಡೆಯಬೇಕೆಂಬ ಹಂಬಲದ ಪ್ರೇರಣೆಯಿಂದ ಹುಟ್ಟಿಕೊಂಡ ಹೊಸಗನ್ನಡದ ಸಾಹಿತ್ಯ ಪ್ರಕಾರವಾಗಿದೆ. ಪ್ರವಾಸ ಸಾಹಿತ್ಯವು ಸಮಕಾಲೀನ ಸಾಹಿತ್ಯಿಕ ಧೋರಣೆಗಳಿಗೆ ಪ್ರತಿಸ್ಪಂದಿಸುತ್ತದೆ ಎಂಬುದನ್ನು ಗುರುತಿಸಲಾಗಿದೆ. ಪ್ರವಾಸ ಸಾಹಿತ್ಯ ಕೇವಲ ಪ್ರವಾಸಾನುಭವಗಳ ವಿವರ ಮಾತ್ರ ಅಲ್ಲ. ಅದು ಸಾಹಿತ್ಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಒಂದು ಸಾಹಿತ್ಯದ ಅಂಗವಾಗಿದೆ. ಬಸವರಾಜ ಕಟ್ಟಿಮನಿ ಅವರು ಪ್ರಗತಿಶೀಲ ಸಾಹಿತ್ಯದ ಧೋರಣೆಗಳನ್ನು ಜನರಿಗೆ ತಲುಪಿಸಲು ಪ್ರವಾಸ ಸಾಹಿತ್ಯವನ್ನು ಬಳಸಿಕೊಂಡಿರುವುದನ್ನು ಗುರುತಿಸಬಹುದು.

ಕಟ್ಟಿಮನಿ ಅವರು 'ರಷ್ಯಾ ದೇಶವು ಲಿಂಗ ತಾರತಮ್ಯವಿಲ್ಲದ, ಸಮಾನ ದುಡಿಮೆಗೆ ಸಮಾನ ವೇತನವೆಂಬಂತೆ ನಡೆದುಕೊಳ್ಳುವ ಪ್ರಗತಿ ಹೊಂದಿದ ದೇಶ' ಎಂಬ ಅಭಿಪ್ರಾಯವನ್ನು ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ್ದಾರೆ. ರಷ್ಯಾದ ಸಾಧನೆಗಳನ್ನು ಮೆಚ್ಚಿಕೊಂಡಿದ್ದಾರೆ. ನಮ್ಮ ದೇಶವನ್ನು ರಷ್ಯಾ ದೇಶದೊಂದಿಗೆ ಹೋಲಿಸಿ 'ನಾವು ಇವರ ಮಟ್ಟಕ್ಕೆ ಅಭಿವೃದ್ಧಿ ಹೊಂದಲು ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತದೆಯೋ' ಎಂದು ಉದ್ಗರಿಸಿದ್ದಾರೆ. ಲೇಖಕರು ಪ್ರಗತಿಯ ಹಿನ್ನೆಲೆಯಲ್ಲಿ ತುಲನೆ ಮಾಡಿ ಭಾರತದಲ್ಲಿ ಕೆಲಸ ಹಂಚಿಕೆ ಮಾಡುವಾಗ ಲಿಂಗ ತಾರತಮ್ಯ ಇರುವುದನ್ನು ಮತ್ತು ಸಮಾನ ದುಡಿಮೆಗೆ ಸಮಾನ ವೇತನ ಇಲ್ಲದ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ್ದಾರೆ. ಆದ್ದರಿಂದ 'ಯಾವುದೇ ದೇಶ ಅಭಿವೃದ್ಧಿಯ ಪಥದಲ್ಲಿ ಸಾಗಬೇಕಾದರೆ ಆ ದೇಶದ ಎಲ್ಲಾ ಪ್ರಜೆಗಳು ತಮ್ಮ ಶಕ್ತ್ಯಾನುಸಾರ ತಮ್ಮ ದೇಶಕ್ಕಾಗಿ ದುಡಿಯಬೇಕಾಗುತ್ತದೆ. ಮತ್ತು ಆ ದುಡಿಮೆಗೆ ತಕ್ಕಂತೆ ವೇತನವನ್ನು ನಿಗದಿಗೊಳಿಸಬೇಕಾಗುತ್ತದೆ' ಎಂಬ ಅಂಶವನ್ನು ಕಂಡುಕೊಂಡಿದ್ದಾರೆ. ಲೇಖಕರ ರಾಷ್ಟ್ರೀಯ ಪ್ರಜ್ಞೆಯು ದೇಶದಲ್ಲಿನ ಕೊರತೆಯನ್ನು ಪ್ರತಿನಿಧಿಸಿದೆ. ಕಟ್ಟಿಮನಿ ಅವರು ದೇಶದ ಪ್ರಗತಿಯ ಹಿನ್ನೆಲೆಯಲ್ಲಿ ಚಿಂತಿಸುತ್ತಾ ಪ್ರಗತಿಶೀಲತೆಯ ಧೋರಣೆಗಳನ್ನು ಪ್ರಸ್ತಾಪಿಸಿದ್ದಾರೆ.

ಕಟ್ಟಿಮನಿ ಅವರು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ರಷ್ಯಾ ದೇಶದ ಸಂಸ್ಕೃತಿಯನ್ನು ವಿಶ್ಲೇಷಿಸಿದ್ದಾರೆ. ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾಗ 'ಗಗನಸಖಿಯರು ಬೆಲೆವೆಣ್ಣುಗಳಂತೆ ಉಬ್ಬು ತಗ್ಗು ಪ್ರದರ್ಶಿಸುತ್ತಾರೆ' ಎಂದಿದ್ದಾರೆ. ಲೇಖಕರು ದೇಶೀಯ ಸಂಸ್ಕೃತಿಯಿಂದ ಸಂಸ್ಕಾರಗೊಂಡ ಮನೋಧೋರಣೆ ಹೊಂದಿರುವುದೇ ಈ ಅಭಿಪ್ರಾಯಕ್ಕೆ ಕಾರಣವಾಗಿದೆ. ಪರದೇಶದವರಲ್ಲಿ ಭಾರತೀಯ ಸಂಸ್ಕಾರವನ್ನು ಕಾಣಲು ಪ್ರಯತ್ನಿಸಿದ್ದಾರೆ. ರಷ್ಯಾ ದೇಶದ ಸಮಾಜವಾದಿ ಆಡಳಿತವನ್ನು ಮೆಚ್ಚಿಕೊಳ್ಳುವ ಲೇಖಕರು ರಷ್ಯಾದ ಮುಕ್ತ ಸಂಸ್ಕೃತಿಯನ್ನು ಒಪ್ಪಿರುವುದಿಲ್ಲ. ಹೆಣ್ಣು ಮಕ್ಕಳಲ್ಲಿನ ಉಡುಗೆ-ತೊಡುಗೆಯು ಭಾರತೀಯ ಸಂಸ್ಕೃತಿಗೆ ವ್ಯತಿರಿಕ್ತವಾಗಿರುವುದರಿಂದ ಅವರಿಗೆ ಹಿಡಿಸುವುದಿಲ್ಲ. ಈ ಬಗೆಯ ಮನೋಭಾವವು ಸಂಸ್ಕೃತಿ ಪ್ರೇರಿತವಾದ ನಡವಳಿಕೆಗಳಿಂದ ರೂಪಿತವಾಗುತ್ತದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

"ಜನತೆಗೆ ಲಾಭವಾಗದ ಯಾತ್ರೆ ವ್ಯರ್ಥ"(ದೇ. ಜವರೇಗೌಡ., ವಿದೇಶದಲ್ಲಿ ನಾಲ್ಕು ವಾರ., ಮುನ್ನುಡಿ)ಎಂದು ಹೇಳುವ ದೇ. ಜವರೇಗೌಡರು ನಾಲ್ಕು ವಾರದ ತಮ್ಮ ವಿದೇಶ ಪ್ರವಾಸದಲ್ಲಿ ಪ್ರಮುಖವಾಗಿ ಸಂಸ್ಕೃತಿಯ ಚಿಂತಕರಾಗಿ ಗುರುತಿಸಿಕೊಂಡಿದ್ದಾರೆ. ಪ್ರವಾಸವು ನಾಡಿನ ಜನತೆಗೆ ಲಾಭವನ್ನು ಉಂಟುಮಾಡುವಂತೆ ಇರಬೇಕು ಎಂಬುದು ಲೇಖಕರ ಅಭಿಪ್ರಾಯವಾಗಿದೆ. ದೇ. ಜವರೇಗೌಡರ ಪ್ರವಾಸ

ಕೃತಿಗಳಾದ 'ವಿದೇಶದಲ್ಲಿ ನಾಲ್ಕು ವಾರ' ಮತ್ತು ಪ್ರವಾಸಿಯ ದಿನಚರಿ' ಕೃತಿಗಳು ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ಉಪಯುಕ್ತ ವಿಶ್ಲೇಷಣೆಗಳನ್ನು ನೀಡಿರುವ ಕೃತಿಗಳಾಗಿವೆ.

ದೇಜಗೌ ಅವರು ಯುರೋಪ್ ಖಂಡದ ಬೇರೆ ಬೇರೆ ದೇಶಗಳಲ್ಲಿ ಒಂದೇ ಬಗೆಯ ಸಂಪ್ರದಾಯ, ಆಚರಣೆಗಳಿರುವುದನ್ನು ಗುರುತಿಸಿದ್ದಾರೆ. ಅವುಗಳ ನಡುವೆ ಸಾಮ್ಯತೆ ಇರುವುದನ್ನು ತಿಳಿದು 'ಕ್ರಿ.ಶ ಹತ್ತನೇ ಶತಮಾನಕ್ಕೂ ಮೊದಲು ಯುರೋಪ್ ದೇಶಗಳಲ್ಲಿ ಬಹುದೇವತಾರಾಧನೆ ಇದ್ದಿತು, ಈ ರಾಷ್ಟ್ರಗಳಿಗೆ ಕ್ರಿಶ್ಚಿಯನ್ ಧರ್ಮ ಪ್ರವೇಶಿಸಿದ ಬಳಿಕ ಅಲ್ಲಿನ ಬಹುದೇವತಾರಾಧನೆ ಸಂಸ್ಕೃತಿ ಅಳಿಯಿತು. ಅಪಾಲೋ, ಜುಪಿಟರ್ ಮಿನರ್ವ ಮೊದಲಾದ ಮೂಲ ದೇವತೆಗಳನ್ನು ಮೂಲೋತ್ಪಾಟನೆ ಮಾಡಿ ಕ್ರೈಸ್ತ ದೇವಾಲಯಗಳನ್ನು ಪ್ರತಿಷ್ಠಾಪಿಸಲಾಯಿತು. ಮಿನರ್ವ ದೇವತೆಯ ಕೈಯಲ್ಲಿದ್ದ ಖಡ್ಗವನ್ನು ತೆಗೆದು ಶಿಲುಬೆಯನ್ನು ಸ್ಥಾಪಿಸಿರುವುದು ಇದಕ್ಕೆ ನಿದರ್ಶನವಾಗಿದೆ' ಎಂದು ಹೇಳಿದ್ದಾರೆ. ರೋಮನ್ ದೇವತೆಯ ದೇವಾಲಯವು ಕ್ರೈಸ್ತ ದೇವಾಲಯವಾಗಿ ಪರಿವರ್ತನೆಗೊಂಡಿರುವುದನ್ನು ಉಲ್ಲೇಖಿಸಿದ್ದಾರೆ. ಲೇಖಕರ ಈ ಅಭಿಪ್ರಾಯವನ್ನು ಆಧರಿಸಿ ವಿಶ್ಲೇಷಣೆ ಮಾಡಿದಾಗ ತಿಳಿದು ಬರುವ ಅಂಶಗಳೆಂದರೆ 'ಎರಡು ವಿಶ್ವ ಮಹಾಯುದ್ಧಗಳನ್ನು ಕಂಡ ನಂತರ ಯುರೋಪಿನ ಜನರ ಧಾರ್ಮಿಕ ಪ್ರಜ್ಞೆಯ ಮೇಲೆ ಬಲವಾದ ಹೊಡೆತ ಬಿದ್ದಿತು. ಅದೇ ಸಮಯಕ್ಕೆ ಸರಿಯಾಗಿ ಕಮ್ಯುನಿಸಂ ಸಿದ್ಧಾಂತ ಆ ಜನರನ್ನು ಒಗ್ಗೂಡಿಸಿ, ಎಲ್ಲರಲ್ಲೂ ದೇಶಭಕ್ತಿ, ಸ್ವದೇಶ ಪ್ರಜ್ಞೆ ಜಾಗೃತವಾಗಲು ಕಾರಣವಾಯಿತು. ಕಮ್ಯುನಿಸ್ಟ್ ಸಿದ್ಧಾಂತದ ಪ್ರಭಾವಕ್ಕೆ ಒಳಗಾದ ಜನರಲ್ಲಿ ದೇವರ ಮೇಲಿದ್ದ ನಂಬಿಕೆ ಕಡಿಮೆಯಾಯಿತು. ಚರ್ಚುಗಳೆಲ್ಲಾ ಮ್ಯೂಸಿಯಂಗಳಾಗಿ ಬದಲಾದವು. ಆದ್ದರಿಂದ ಬಹುದೇವತಾರಾದನೆ ಸಂಸ್ಕೃತಿಯು ಅಳಿದು ಕ್ರೈಸ್ತ ಧರ್ಮ ಪ್ರಚಾರಕ್ಕೆ ಬಂದ ಬಳಿಕ ಜನರು ಏಕದೇವೋಪಾಸನೆಯಲ್ಲಿ ನಂಬಿಕೆ ಇಟ್ಟರು. ಲೇಖಕರು ಪ್ರವಾಸಕ್ಕೆ ತೆರಳಿದ್ದ ಸಂದರ್ಭದಲ್ಲಿ ಈ ಅಂಶವನ್ನು ಗುರುತಿಸಿ ನಿರೂಪಿಸಿದ್ದಾರೆ. ಯುರೋಪಿನ ಸಾಂಸ್ಕೃತಿಕ ಬದಲಾವಣೆಯು ಕಾಲಪ್ರೇರಿತವಾದುದು. ಸಮಯ ಸರಿದಂತೆ ಆಚರಣೆಗಳಲ್ಲಿ ವೈಜ್ಞಾನಿಕ ಪ್ರಶ್ನೆಗಳು ತಲೆದೋರುತ್ತದೆ. ದೇವರ ಮೇಲಿನ ನಂಬಿಕೆ ಕಡಿಮೆಯಾಗುತ್ತಾ ಹೋಗುತ್ತದೆ. ಯುರೋಪಿನ ಜನರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಲೇಖಕರ ಮಾತುಗಳಲ್ಲಿ ಕಾಣಲು ಸಾಧ್ಯವಾಯಿತು. ಯುರೋಪಿನ ಬಹುದೇವತಾರಾಧನೆ ಸಂಸ್ಕೃತಿಗೂ ಭಾರತದಲ್ಲಿನ ಬಹುದೇವಾತಾರಾದನೆ ಸಂಸ್ಕೃತಿಗೂ ಸಾಮ್ಯತೆ ಇರುವುದನ್ನು ಹೇಳಿದ್ದಾರೆ. ಹೊ. ಶ್ರೀನಿವಾಸಯ್ಯನವರು 'ಶಶಿ ಕಂಡ ಜರ್ಮನಿ' ಕೃತಿಯಲ್ಲಿಯೂ ಭಾರತ ಮತ್ತು ಜರ್ಮನಿಯ ನಡುವೆ ಸಾಂಪ್ರದಾಯಿಕ ಆಚರಣೆಗಳಲ್ಲಿ ಸಾಮ್ಯತೆ ಹೊಂದಿರುವ ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ.

ಯುರೋಪಿನ ಸಂಸ್ಕೃತಿಯಲ್ಲಿ ಹೆಂಗಸರು ಇತರ ಗಂಡಸರೊಂದಿಗೆ ಸಲಿಗೆಯಿಂದ ವರ್ತಿಸುವುದು ಸಾಮಾನ್ಯವಾದ ನಡವಳಿಕೆಯಾಗಿದೆ. ಭಾರತೀಯ ಸಂಪ್ರದಾಯಬದ್ಧ ಲೇಖಕರಿಗೆ ಯುರೋಪಿಯನ್ನರ ಈ ರೀತಿಯ ಮುಕ್ತ ಸಂಸ್ಕೃತಿಯು ಹಿಡಿಸುವುದಿಲ್ಲ. ದೇ. ಜವರೇಗೌಡರು ಒಬ್ಬ ಧಡೂತಿ ಹೆಂಗಸು ಪರ ಗಂಡಸಿನೊಂದಿಗೆ ಕುಣಿಯುತ್ತಿರುವುದನ್ನು ಕಂಡು "ಈ ಸಂಪ್ರದಾಯ ನಮ್ಮ ಸಮಾಜಕ್ಕೆ ಹಿಡಿಸದಿರಬಹುದು. ಅದು ಬೇಡವೂ ಬೇಡ. ಇಲ್ಲಿಯೇ ಇರಲಿ ಅದು" (ದೇ.ಜವರೇಗೌಡ., ವಿದೇಶದಲ್ಲಿ ನಾಲ್ಕು ವಾರ., ಪು-೯೯)ಎನ್ನುತ್ತಾರೆ. ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಹಾನಿ ಉಂಟು ಮಾಡುವ ಸಂಪ್ರದಾಯಗಳು ಬೇಡ ಎಂಬ ಧೋರಣೆಯನ್ನು ಹೊಂದಿರುವ ದೇ. ಜವರೇಗೌಡರು ಕೃತಿಯ ಮುನ್ನುಡಿಯಲ್ಲಿ "ನಮ್ಮ ಸಂಸ್ಕೃತಿಗೆ ಭಾಧಕವಾಗದಂತೆ ಅದರ ಪ್ರಗತಿಯ ದೃಷ್ಟಿಯಿಂದ ಅನ್ಯ ಸಂಸ್ಕೃತಿಯ ಶ್ರೇಷ್ಠ ಗುಣಗಳನ್ನು

ಅಳವಡಿಸಿಕೊಳ್ಳಬೇಕೆಂಬುದೇ ನನ್ನ ಸ್ಪಷ್ಟ ನಿಲವು" (ದೇ.ಜವರೇಗೌಡ., ವಿದೇಶದಲ್ಲಿ ನಾಲ್ಕು ವಾರ.. ಪು-ಮಸ್ಸುಡಿ)ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ. ಲೇಖಕರ ಈ ಎರಡೂ ಅಭಿಪ್ರಾಯಗಳನ್ನು, ಆಲೋಚನೆಯನ್ನು ವಿಶ್ಲೇಷಿಸುವುದಾದರೆ 'ಬೇರೆ ಸಂಸ್ಕೃತಿಯಿಂದ ಉಪಯುಕ್ತವೆನಿಸುವ ಕೆಲವು ಆಚರಣೆಗಳನ್ನು ನಾವು ಪಾಲಿಸಬೇಕು. ಯುರೋಪಿಯನ್ನರ ದೇಶಭಕ್ತಿ, ಕರ್ತವ್ಯ ಪ್ರಜ್ಞೆ ನಮಗೆ ಮಾದರಿ ಆಗಬೇಕು. ಜೊತೆಗೆ ಯುರೋಪಿನ ಕೆಲವು ಸಂಪ್ರದಾಯಗಳನ್ನು ಅನುಸರಿಸಬಾರದು. ಭಾರತೀಯ ಸಮಾಜದ ಸ್ವಾಸ್ಥ್ಯಕ್ಕೆ, ಸಂಸ್ಕೃತಿಗೆ ಧಕ್ಕೆಯನ್ನುಂಟು ಮಾಡುವಂತಹ ಆಚರಣೆ ಸಂಪ್ರದಾಯಗಳನ್ನು ಪಾಲಿಸದಿರುವುದೇ ಒಳ್ಳೆಯದು ಎಂದಿದ್ದಾರೆ. ಹಲವು ದೇಶಗಳಲ್ಲಿ ವಿಭಿನ್ನವಾದ ಸಂಸ್ಕೃತಿಗಳನ್ನು ನೋಡುವ ಪ್ರವಾಸಿ ಲೇಖಕರು ಸಾಮಾಜಿಕ ಹಿತದೃಷ್ಟಿಯನ್ನು ಕಾಪಾಡುವ ಸಂಸ್ಕೃತಿ, ಆಚರಣೆಗಳನ್ನು ನಾವು ಅಳವಡಿಸಿಕೊಳ್ಳುವಂತೆಯೂ ಮತ್ತು ನಮ್ಮ ಸಾಮಾಜಿಕ ಪರಿಸ್ಥಿತಿಗಳ ಉನ್ನತೀಕರಣಕ್ಕೆ ಪೂರಕವಾಗುವ ಸಂಪ್ರದಾಯಗಳನ್ನು ಪಾಲಿಸುವಂತೆ ಸೂಚಿಸಿರುವುದಕ್ಕೆ ಸಕಾರಣವಿದೆ. ಗಾಂಧೀ ತತ್ವಾನುಯಾಯಿಗಳಾದ ಲೇಖಕರು ಸ್ವದೇಶಿ ಚಿಂತನಾಕ್ರಮವನ್ನು ಪಾಲಿಸುತ್ತಿದ್ದರು. ೧೯೭೦ರ ಕಾಲಘಟ್ಟದಲ್ಲಿ ಭಾರತೀಯ ಸಮಾಜದಲ್ಲಿ ಅನುಚಿತವೆನಿಸುವ ವಿದೇಶಿ ಸಂಸ್ಕೃತಿಗಳ ಪಾಲನೆ ನಗರ ಭಾಗದಲ್ಲಿ ಹೆಚ್ಚಾಗಿತ್ತು. ಪತ್ರಿಕೆಗಳಲ್ಲಿ ಟಿ.ವಿ. ಮಾಧ್ಯಮಗಳಲ್ಲಿ ದೇಶಿ ಸಂಸ್ಕೃತಿಯ ಅವಗಣನೆಯನ್ನು ಖಂಡಿಸಿ ಭಾಷಣಗಳು, ಲೇಖನಗಳು, ವ್ಯಂಗ್ಯಚಿತ್ರಗಳು ಪ್ರಕಟಗೊಂಡವು. ಶಾಲಾ ಕಾಲೇಜುಗಳಲ್ಲಿ ಚರ್ಚಾಸ್ಪರ್ಧೆ, ಭಾಷಣಸ್ಪರ್ಧೆಗಳಲ್ಲಿ ದೇಶಿ ಸಂಸ್ಕೃತಿಯ ಪಾಲನೆಗೆ ಸಂಬಂಧಿಸಿದ ವಿಷಯಗಳು ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತಿತ್ತು. ದೇಶಿ ಸಂಸ್ಕೃತಿ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಪಠ್ಯಗಳಲ್ಲಿಯೂ ಅಳವಡಿಸಲಾಯಿತು. ಇವೆಲ್ಲದರ ಪರಿಣಾಮವಾಗಿ ಯುರೋಪ್ ದೇಶಕ್ಕೆ ತೆರಳಿದ ಲೇಖಕರು ಯುರೋಪಿನ ಸಂಸ್ಕೃತಿಯೊಂದಿಗೆ ಭಾರತೀಯ ಸಂಸ್ಕೃತಿಯ ಆಚರಣೆ, ಸಂಪ್ರದಾಯಗಳನ್ನು ಮುಖಾಮುಖಿಯಾಗಿಸಿ ತೌಲನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ ಸ್ವದೇಶಿ ಸಂಸ್ಕೃತಿಯ ಪರವಾದ ಧೋರಣೆಗಳನ್ನು ವ್ಯಕ್ತಪಡಿಸಿದ್ದಾರೆ.

ದೇ. ಜವರೇಗೌಡ ಅವರು ಬರೆದಿರುವ ಎರಡೂ ಪ್ರವಾಸ ಕೃತಿಗಳನ್ನು ಗಮನಿಸಿದಾಗ ಗಾಂಧಿ ತತ್ವಗಳ ಪಾಲನೆಯಲ್ಲಿ ವೈಯಕ್ತಿಕ ಆಸಕ್ತಿ ಹೊಂದಿರುವ ಬಗ್ಗೆ ತಿಳಿಯುತ್ತದೆ. ರಷ್ಯಾ ದೇಶದಲ್ಲಿ 'ಲಿನಿನ್'ನನ್ನು ಅಲ್ಲಿನ ಜನರು ಗೌರವಿಸುವ, ಆಧರಿಸುವ, ಪೂಜಿಸುವ ಸಂದರ್ಭವನ್ನು ದಾಖಲಿಸುತ್ತಾ, ಗಾಂಧೀಜಿಯನ್ನು ಮತ್ತು ಅವರ ತತ್ವಗಳನ್ನು ಕೆಲವರು ಅಸಡ್ಡೆಯಿಂದಲೂ, ನಿರ್ಲಕ್ಷದಿಂದಲೂ ಕಾಣುವುದನ್ನು ಖಂಡಿಸಿದ್ದಾರೆ. ಲೇಖಕರು 'ಒಂದು ರಾಷ್ಟ್ರದ ಸಮಗ್ರತೆ ಮತ್ತು ಏಕತೆಗೆ ರಾಷ್ಟ್ರನಾಯಕರ ಪಾತ್ರ ಮಹತ್ವವಾದುದು' ಎಂಬ ಸಂದೇಶವನ್ನು ಓದುಗರಿಗೆ ನೀಡಿದ್ದಾರೆ.

ಕಲಾ ಮೀಮಾಂಸೆಗೆ ಸಂಬಂಧಿಸಿದಂತೆ 'ಯುರೋಪಿನ ಶಿಲ್ಪಕಲೆ ಮತ್ತು ವಾಸ್ತು ಶಿಲ್ಪ ಶೈಲಿಯಲ್ಲಿ ಆರ್ಯ ಮತ್ತು ದ್ರಾವಿಡ ಶಿಲ್ಪಕಲೆಗಳ ಸಂಗಮವನ್ನು ನೋಡಬಹುದು' ಎಂದು ದೊಡ್ಡೇರಿ ವೆಂಕಟಗಿರಿರಾವ್ ಅವರು ಹೇಳಿದ್ದಾರೆ. ಅಥೆನಾ ದೇವಾಲಯದಲ್ಲಿ ಚಾವಡಿಯ ಮೇಲ್ಭಾಗದ ತೊಲೆಯನ್ನು ಅಷ್ಟ ಸುಂದರಿಯರು ಹೊತ್ತಿರುವಂತೆ ಕೆತ್ತಿರುವುದನ್ನು ಹೊಯ್ಸಳ ಶಿಲ್ಪಕಲೆಯೊಂದಿಗೆ ಹೋಲಿಸಿದ್ದಾರೆ. ಅಲ್ಲದೆ "ಅಥೆನಾ ದೇವಿಯು ಬಗ್ಗಿ ತನ್ನ ಪಾದರಕ್ಷೆಯನ್ನು ಸರಿಪಡಿಸಿಕೊಳ್ಳುವ ಉಬ್ಬುಗೆತ್ತನೆಯ ಚಿತ್ರ ಸುಂದರ. ಮನೋಜ್ಞ, ನಮ್ಮ ದೇಶದ ಖಜುರಾಹೋ, ಮತ್ತು ಕೊನಾರ್ಕಗಳಲ್ಲಿ ಇಂಥದೇ ಭಂಗಿಯ ಸುಂದರ ಶಿಲಾಬಾಲಿಕೆಯನ್ನು ಕಂಡ ನೆನಪು ಬಂತು"(ದೊಡ್ಡೇರಿ ವೆಂಕಟಗಿರಿರಾವ್., ಏಕಾಕಿ ಪ್ರವಾಸ.. ಪು-

೬)ಎಂದಿದ್ದಾರೆ. ರೋಮಿನ ಶಿಲ್ಪಕಲೆಯ ನೈಪುಣ್ಯತೆಗೂ ಭಾರತೀಯ ಶಿಲ್ಪಶಾಸ್ತ್ರಗಳಲ್ಲಿನ ಕಲಾ ನೈಪುಣ್ಯತೆಗೂ ಸಾಮ್ಯತೆ ಇರುವುದನ್ನು ಲೇಖಕರು ಹೋಲಿಸಿದ್ದಾರೆ. ಕಲಾ ವಿಷಯಗಳಿಗೆ ಸಂಬಂಧಿಸಿದಂತೆ ಮನುಷ್ಯನ ಕಲ್ಪನಾ ಚಾತುರ್ಯವು ಶಿಲ್ಪಿಯಿಂದ ಶಿಲ್ಪಿಗೆ ಹೋಲಿಕೆಯೂ ಇರುತ್ತದೆ, ವೈವಿಧ್ಯವೂ ಇರುತ್ತದೆ ಎಂಬುದನ್ನು ಈ ಮೇಲಿನ ನಿದರ್ಶನಗಳಿಂದ ತಿಳಿಯಬಹುದಾಗಿದೆ.

ದೇ.ಜವರೇಗೌಡ ಅವರು ಯುರೋಪಿನ ಬಹುತೇಕ ಮ್ಯೂಸಿಯಂಗಳಲ್ಲಿ ಭಾರತದಿಂದ ರವಾನೆಯಾಗಿರುವ ಅನೇಕ ಕಲಾಕೃತಿಗಳನ್ನು ನೋಡಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಐತಿಹಾಸಿಕ ಶಿಲ್ಪಕಲಾ ಕೃತಿಗಳನ್ನು ಮತ್ತು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಐತಿಹಾಸಿಕ ಮಹತ್ವವುಳ್ಳ ಅಪರೂಪದ ವಸ್ತುಗಳನ್ನು ವಿದೇಶಗಳಿಗೆ ಮಾರಾಟಮಾಡಿದ ಕುರಿತು ಎಚ್ಚರಿಸಿದ್ದಾರೆ. ಕೆಲವರು ಆಮಿಷಕ್ಕೊಳಗಾಗಿ ಅಪರೂಪದ ವಸ್ತುಗಳನ್ನು ವಿದೇಶಗಳಿಗೆ ಮಾರಾಟ ಮಾಡಿರುವುದನ್ನು ಖಂಡಿಸಿದ್ದಾರೆ. 'ಭಾರತವು ಬಡವರಿಂದ ಕೂಡಿದ ಶ್ರೀಮಂತ ರಾಷ್ಟ್ರ' ಎಂದು ಹೇಳುವುದೇ ಭಾರತೀಯ ಕಲಾ ಸಂಪತ್ತಿನ ಕಾರಣದಿಂದ. ಆದರೆ ಭಾರತೀಯರಲ್ಲಿ ಚಾರಿತ್ರಿಕ ಪ್ರಜ್ಞೆ ಕಡಿಮೆ. ಪ್ರಸಿದ್ಧ ಐತಿಹಾಸಿಕ ಸ್ಥಳಗಳನ್ನು ಕಾಪಾಡುವಲ್ಲಿ ಮತ್ತು ಐತಿಹಾಸಿಕ ಕಲಾ ಸಂಪತ್ತನ್ನು ರಕ್ಷಿಸುವಲ್ಲಿ ನಾವು ತೋರಿರುವ ಆಸ್ಥೆ ನಾಮಮಾತ್ರ. ದೇಶದ ಅಪೂರ್ವ ಸಂಪತ್ತನ್ನು ಕೆಲವು ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಮಾರಿಕೊಂಡಿದ್ದಾರೆ. ಬಡವರು, ಅಶಿಕ್ಷಿತರು ಎಷ್ಟೋ ಅಪೂರ್ವ ಕಲಾ ಸಂಪತ್ತನ್ನು ಹಾಳು ಮಾಡಿದ್ದಾರೆ. ಹಂಪಿಯ ದೇವಾಲಯಗಳ ಸಂಕೀರ್ಣವು ಇದಕ್ಕೆ ನಿದರ್ಶನವಾಗಿದೆ. ಇದರ ಪರಿಣಾಮ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ. ಮಕ್ಕಳಿಗೆ ಉತ್ತಮ ಗುಣಮಟ್ಟದ, ಕೌಶಲ್ಯಪೂರ್ಣವಾದ ಶಿಕ್ಷಣವನ್ನು ನೀಡಿದಾಗ ಮಾತ್ರ ಅಪೂರ್ವ ಕಲಾ ಸಂಪತ್ತನ್ನು ರಕ್ಷಿಸುವ ಪ್ರಜ್ಞೆಯನ್ನು ಜಾಗೃತಗೊಳಿಸಲು ಸಾಧ್ಯವಾಗುತ್ತದೆ.

ದೇ. ಜವರೇಗೌಡ ಅವರು ಹೇಳುವಂತೆ 'ನಾಟಕವು ಶಿಕ್ಷಣದ ಮಾಧ್ಯಮವಾಗಬೇಕು. ಜನರಲ್ಲಿ ನಾಟಕಾಭಿರುಚಿಯನ್ನು ಬೆಳೆಸುವುದು ಕಲಾವಿದರರ ಕರ್ತವ್ಯ. ಅಂತಹ ಅಭಿರುಚಿ ಇಂಗ್ಲೆಂಡಿನಲ್ಲಿ ಸಾಕಷ್ಟು ಬೆಳೆದಿದೆ. ಕಲಾವಿದರೇ ಪ್ರೇಕ್ಷಕರನ್ನು ತಮ್ಮೆಡೆಗೆ ಸೆಳೆದುಕೊಳ್ಳುವಂತೆ ಕಲಾ ಪ್ರದರ್ಶನ ನೀಡಬೇಕು. ಸಮಾಜವನ್ನು ತಿದ್ದಲು, ಜನರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಕಲಾವಿದರು ಕಂಕಣಬದ್ಧರಾಗಬೇಕು. ಸಮಾಜವನ್ನು ದೂರುವ ಬದಲು ಪ್ರೇಕ್ಷಕರೇ ತಮ್ಮೆಡೆಗೆ ಹರಿದು ಬರುವಂತೆ ಕಲಾಪ್ರದರ್ಶನವನ್ನು ತೋರಿಸಬೇಕು. ಹಾಗಾಗಬೇಕಾದರೆ ಸಾಕಷ್ಟು ಕಸರತ್ತನ್ನು ಮಾಡಲೇಬೇಕು. ಅದಕ್ಕೆ ತಕ್ಕಂತೆ ವೃತ್ತಿಪರತೆಯನ್ನು ಕಾಯ್ದುಕೊಳ್ಳಬೇಕು' ಎಂದು ಸಮಾಜದಲ್ಲಿ ನಾಟಕ ಪ್ರಕಾರದ ಮಹತ್ವವನ್ನು ಕುರಿತು ಹೇಳಿದ್ದಾರೆ. ಲೇಖಕರ ಅಭಿಪ್ರಾಯವು ಭಾರತದಲ್ಲಿ ಕಲಾವಿದರಿಗೆ ಪ್ರೋತ್ಸಾಹದ ಕೊರತೆಯ ಜೊತೆಗೆ ಕಲಾವಿದರ ವೃತ್ತಿಪರತೆಯ ನಿರ್ಲಕ್ಷತೆಯು ಕಾರಣವಾಗಿದೆ ಎಂಬುದನ್ನು ಸೂಚಿಸುತ್ತದೆ. ಜನರಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ರೂಢಿಸಲು 'ನಾಟಕ' ಮುಖ್ಯವಾದ ಮಾಧ್ಯಮವಾಗಿದೆ. ಆದರೆ ಭಾರತದಲ್ಲಿ ಸಿನಿಮಾ ಮಾಧ್ಯಮಕ್ಕಿರುವಷ್ಟು ಪ್ರೇಕ್ಷಕರು ನಾಟಕಕ್ಕಿಲ್ಲ. ಕಾರಣ ಆಧುನಿಕ ನಾಟಕಗಳು ಪ್ರೇಕ್ಷಕರನ್ನು ತಮ್ಮತ್ತ ಸೆಳೆಯುವಲ್ಲಿ ವಿಫಲವಾಗಿರುವುದರ ಜೊತೆಗೆ ಸಿನಿಮಾ ಮಾಧ್ಯಮವು ತಂತ್ರಜ್ಞಾನದ ಸಹಾಯದಿಂದ ಪ್ರೇಕ್ಷಕರನ್ನು ತನ್ನತ್ತ ಸೆಳೆಯುವಲ್ಲಿ ಸಫಲಗೊಂಡಿದೆ. ಆದ್ದರಿಂದ ಇಂದಿನ ತುರ್ತುಗಳಿಗೆ ಅನುಗುಣವಾಗಿ ನಾಟಕದಲ್ಲಿಯೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹೊಸ ಹೊಸ ಸಾಧ್ಯತೆಗಳನ್ನು ಪರಿಚಯಿಸಬೇಕಾಗುತ್ತದೆ. ಆಧುನಿಕರಿಗೆ ರುಚಿಸುವಂತೆ ಕಟ್ಟಬೇಕಾಗುತ್ತದೆ. ಜನರ ಬದುಕಿನ ಸುಧಾರಣೆಗೆ ಜೀವಂತ ಕಲೆಯಾದ

ನಾಟಕವು ಸೂಕ್ತವಾದ ಕಲಾ ಮಾಧ್ಯಮವಾಗಿದೆ. ಸರಕಾರವು ನಾಟಕ ಕಲೆಗೆ, ಕಲಾವಿದರಿಗೆ ಪ್ರೋತ್ಸಾಹ ನೀಡಬೇಕಾಗಿರುವುದು ದೇಶದ ಹಿತದೃಷ್ಟಿಯಿಂದ ಪ್ರಮುಖವಾಗಿದೆ. ಯುರೋಪಿನ ದೇಶಗಳಲ್ಲಿ ನಾಟಕ ಕಲೆಗೆ ಪ್ರೋತ್ಸಾಹವನ್ನು ನೀಡಲು ನಾಟಕೋತ್ಸವವನ್ನೇ ಏರ್ಪಡಿಸುತ್ತಾರೆ. ನಾಟಕೋತ್ಸವಗಳಿಗೆ ವಿವಿಧ ದೇಶದ ಕಲಾವಿದರನ್ನು, ನಟರನ್ನು, ನಿರ್ದೇಶಕರನ್ನು ಆಮಂತ್ರಿಸುತ್ತಾರೆ. ೧೯೬೯ರಲ್ಲಿ ಬರ್ಲಿನ್‌ನಲ್ಲಿ ನಡೆದ ನಾಟಕ ಮತ್ತು ಸಂಗೀತದ ೧೩ನೇ ಮಹೋತ್ಸವಕ್ಕೆ ನಾಟಕಕಾರರಾದ ಶ್ರೀರಂಗ ಅವರನ್ನು ಆಮಂತ್ರಿಸಿರುವುದನ್ನು ಕಾಣಬಹುದು.

ಪ್ರವಾಸಕ್ಕೆ ಹೋದಾಗ ನಮಗೆ ಎದುರಾಗುವ ಅನಿರೀಕ್ಷಿತ ಸಮಸ್ಯೆಗಳ ಬಗೆಗೆ ಅರಿವು ಇರುವುದಿಲ್ಲ. ಜಿ.ಎಸ್. ಶಿವರುದ್ರಪ್ಪ ಅವರು ಮಾಸ್ಕೋ ವಿಮಾನ ನಿಲ್ದಾಣದಲ್ಲಿ ಇಂತಹದೊಂದು ಊಹಿಸದ ಸಮಸ್ಯೆಯಲ್ಲಿ ಸಿಲುಕುತ್ತಾರೆ. ಮಾಸ್ಕೋ ವಿಮಾನ ನಿಲ್ದಾಣದಲ್ಲಿ ಇಳಿದಾಗ ಲೇಖಕರನ್ನು ಬರಮಾಡಿಕೊಂಡವರು ಊಟ ಉಪಚಾರದ ವ್ಯವಸ್ಥೆಯನ್ನು ಮಾಡದೆ ಅಲ್ಲಿನ ಒಂದು ಹೋಟೆಲ್‌ನಲ್ಲಿ ಉಳಿಯುವ ವ್ಯವಸ್ಥೆ ಮಾಡಿ ಹೊರಟುಹೋಗುತ್ತಾರೆ. ಇವರ ಕೈಯಲ್ಲಿ ಡಾಲರ್ ಹಣ ಇರುತ್ತದೆ. ರಷ್ಯಾ ದೇಶದ ಸ್ಥಳೀಯ ಚಲಾವಣೆ ಹಣ 'ರೂಬೆಲ್' ಇರುವುದಿಲ್ಲ. ಲೇಖಕರಿಗೆ ಹಸಿವಾಗಿರುತ್ತದೆ. ರೂಬೆಲ್ ಇಲ್ಲದೆ ಊಟ ಮಾಡಲು ಸಾಧ್ಯವಿಲ್ಲ. ಲೇಖಕರು ಈ ವಿಷಯವನ್ನು ಹೋಟೆಲಿನವರಲ್ಲಿ ತಮ್ಮ ಸಮಸ್ಯೆಯನ್ನು ನಿವೇದಿಸಿಕೊಂಡು, ರೂಬೆಲ್ ಹಣ ಸಿಕ್ಕ ಕೂಡಲೇ ಹಣ ಮರುಸಂದಾಯ ಮಾಡುವ ಭರವಸೆ ನೀಡಿದರೂ ಹೋಟೆಲ್‌ನ ಮಾಲೀಕರು ಇವರಿಗೆ ಊಟ ಕೊಡಲು ನಿರಾಕರಿಸುತ್ತಾರೆ. ಮಾನವೀಯ ದೃಷ್ಟಿಯಿಂದ ನೋಡಿದಾಗ ಹೊರದೇಶದವರು ಭೌತಿಕ ಅಗತ್ಯಗಳ ಸಮಸ್ಯೆಗಳನ್ನು ಹೇಳಿಕೊಂಡಾಗ ಕೂಡಲೇ ಅವರಿಗೆ ನೆರವಾಗಬೇಕಾಗುತ್ತದೆ. ಆದರೆ ಹೋಟೆಲಿನ ಮಾಲೀಕರು ನಿರಾಕರಿಸಿದ್ದು ಮನುಷ್ಯ ಸಂಬಂಧಕ್ಕಿಂತ ಹಣಕ್ಕೆ ಹೆಚ್ಚು ಬೆಲೆ ನೀಡಿದಂತಾಯಿತು. ಈ ಘಟನೆಯನ್ನು ಆಧರಿಸಿ ಇಡೀ ದೇಶದ ಜನರ ಸಾಮಾಜಿಕ ಮನೋಭಾವವನ್ನು ಋಣಾತ್ಮಕ ಕೋನದಲ್ಲಿ ಅಳೆಯಲಾಗುವುದಿಲ್ಲ. ಆದರೆ 'ಯುರೋಪಿನ ದೇಶಗಳಲ್ಲಿ ಮನುಷ್ಯ ಸಂಬಂಧಗಳು ತಾತ್ಸಾರಕ್ಕೆ ಒಳಗಾಗುತ್ತಿದೆ, ವ್ಯಾವಹಾರಿಕ ಗುಣವೇ ವಿಜೃಂಭಿಸುತ್ತಿದೆ' ಎಂಬ ತಾತ್ವಿಕ ನೆಲೆಗಟ್ಟನ್ನು ಸಂಸ್ಕೃತಿಯ ಒಂದು ಭಾಗವಾಗಿ ಜನರ ಮನೋಭಾವವನ್ನು ಅರಿತುಕೊಳ್ಳಲು ಸಹಕಾರಿಯಾಗಿದೆ.

ಜಿ.ಎಸ್. ಶಿವರುದ್ರಪ್ಪ ಅವರು ಯುರೋಪಿನವರ ಧಾರ್ಮಿಕ ನಂಬಿಕೆಯ ಕುರಿತು "ಧರ್ಮವನ್ನು ದೂರೀಕರಿಸಿ, ಇದ್ದ ಚರ್ಚುಗಳನ್ನೆಲ್ಲ ವಸ್ತುಸಂಗ್ರಹಾಲಯ ಮಾಡಿದ ಜನ, ಲೆನಿನ್ನನನ್ನೆ ದೇವರ ನಿಲುವಿಗೆ ಏರಿಸಿ, ಈ ಶವಾಲಯವನ್ನೇ ದೇಗುಲವನ್ನಾಗಿ ಮಾಡಿಕೊಂಡಂತೆ ತೋರುತ್ತದೆ"(ಜಿ.ಎಸ್. ಶಿವರುದ್ರಪ್ಪ., ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ., ಪು–೪೬)ಎಂದಿದ್ದಾರೆ. ಯುರೋಪಿಯನ್ನರು ಧಾರ್ಮಿಕವಾಗಿ ನಾಸ್ತಿಕರು. ತಮ್ಮ ದೇಶಕ್ಕೆ ಬಹುದೊಡ್ಡ ಕಾಣಿಕೆ ನೀಡಿದ ವ್ಯಕ್ತಿಯನ್ನು ಗೌರವದಿಂದ ದೇವರ ಸ್ಥಾನಕ್ಕೆ ಏರಿಸುವುದರಲ್ಲಿ ಅವರು ತೋರಿರುವ ಆಸ್ತಿಕ ಭಾವ ಪ್ರಶ್ನಾರ್ಥಕವೇನಲ್ಲ. ಲೇಖಕರು ಯುರೋಪಿಯನ್ನರು ವ್ಯಕ್ತಿಯನ್ನು ಪೂಜ್ಯ ಭಾವನೆಯಿಂದ ಕಾಣುವ ಧೋರಣೆಯನ್ನು ಅಲ್ಲಗಳೆಯದೇ, ದೇವರ ಅಸ್ತಿತ್ವವನ್ನು ನಿರಾಕರಿಸಿರುವುದು ಉಚಿತವಲ್ಲ ಎಂಬ ಭಾವನೆಯನ್ನು ವ್ಯಕ್ತ ಪಡಿಸಿದ್ದಾರೆ. ಲೇಖಕರ ಆಸ್ತಿಕ ಭಾವ ಯುರೋಪಿನವರ ಧರ್ಮನಿರಾಕರಣ ಧೋರಣೆಯನ್ನು ಒಪ್ಪಿರುವುದಿಲ್ಲ. ಲೇಖಕರು 'ದೇವರಲ್ಲಿ ನಂಬಿಕೆ ಇರಬೇಕು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರವಾಸ ಕೃತಿಗಳಲ್ಲಿ ಬೇರೆ ದೇಶಗಳ ಸಂಸ್ಕೃತಿಯನ್ನು

ವಿಶ್ಲೇಷಣೆ ಮಾಡುವಾಗ ಲೇಖಕರ ವೈಯಕ್ತಿಕ ನಂಬಿಕೆಗಳು ಪ್ರಭಾವಿಸುತ್ತವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಶಿವರುದ್ರಪ್ಪ ಅವರು ಯುರೋಪಿನಲ್ಲಿ ಜೂಜು ಅಡ್ಡೆಗಳಿರುವ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಈ ವಿಷಯದ ಕುರಿತು 'ಸರಕಾರವೇ ಜೂಜುಅಡ್ಡೆಗಳ ನೇತೃತ್ವ ವಹಿಸಿರುತ್ತದೆ. ಜನರು ತಮ್ಮ ಅದೃಷ್ಟವನ್ನು ಲಾಟರಿ ಮೂಲಕ ಪರೀಕ್ಷಿಸಿಕೊಳ್ಳುತ್ತಾರೆ. ಇಲ್ಲಿನ ಲಾಟರಿ ಆಟವು ಸರಕಾರದ ವತಿಯಿಂದಲೇ ನಡೆಯುತ್ತದೆ. ಅದು ತಮ್ಮ ಜನರನ್ನು ಮೋಸಗೊಳಿಸಿ ಹಣ ಗಳಿಸಲು ಮಾಡಿದಂತೆ ತೋರುವುದಿಲ್ಲ ಎನ್ನುತ್ತಾರೆ. ಜಿ. ಎಸ್. ಶಿವರುದ್ರಪ್ಪ ಅವರ ದ್ವಿಭಾಷಿ ವೊಲೋಜನು "ಇಲ್ಲೂ ಸರ್ಕಾರವೆ ಲಾಟರಿ ಏರ್ಪಡಿಸಿದೆ. ಆದರೆ ಅದರಿಂದ ಅದೃಷ್ಟವಿದ್ದವನಿಗೆ ಬರುವ ಹಣದ ಪರಮಾವಧಿ ಐದು ಸಾವಿರ ರೂಬಲ್ಲುಗಳು. ಒಂದು ರೇಡಿಯೋ, ರಿಫ್ರಿಜರೇಟರು, ಕಾರು ಇಂಥ ಉಪಯೋಗದ ವಸ್ತುಗಳನ್ನೇ ಹಣದ ಬದಲು ಲಾಟರಿಯಲ್ಲಿ ಗೆದ್ದವರಿಗೆ ಕೊಡಲಾಗುತ್ತದೆ. ಒಂದು ವೇಳೆ, ಅವನ ಬಳಿ ಆಗಲೇ ಅವುಗಳಲ್ಲಿ ಯಾವುದಾದರೂ ವಸ್ತು ಇದ್ದ ಪಕ್ಷದಲ್ಲಿ, ಆತನ ಕೋರಿಕೆಯ ಮೇಲೆ, ಅವನಲ್ಲಿ ಇಲ್ಲದ ಬೇರೆ ವಸ್ತುವನ್ನು ಕೊಡಲಾಗುತ್ತದೆ"(ಜಿ.ಎಸ್. ಶಿವರುದ್ರಪ್ಪ., ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ., ಪು-೬೩)ಎನ್ನುತ್ತಾನೆ. ಲಾಟರಿಯನ್ನು ನಡೆಸುವ ಸರಕಾರದ ಈ ವಿಧಾನವು ಜನರ ಹಿತದೃಷ್ಟಿಯಿಂದ ಅನುಕೂಲಕರವಾಗಿದೆ. ಕರ್ನಾಟಕದಲ್ಲಿಯೂ ಸರಕಾರದ ವತಿಯಿಂದ ಲಾಟರಿ ನಡೆಸಲಾಗುತ್ತಿತ್ತು. ಈ ಲಾಟರಿಯಲ್ಲಿ ಗೆದ್ದವರಿಗೆ ಹಣವನ್ನು ನೀಡಲಾಗುತಿತ್ತು. ಹಣವನ್ನು ನೀಡುವುದು ಜನರನ್ನು ಮೋಸ ಹೋಗಲು ಪ್ರೇರೇಪಿಸಿದಂತಾಗುತ್ತದೆ. ಆದ್ದರಿಂದ ರಷ್ಯಾದ ಲಾಟರಿ ಮಾದರಿಯಂತೆ ಗೆದ್ದವರಿಗೆ ಆತನಲ್ಲಿ ಇಲ್ಲದ ಗೃಹಪಯೋಗಿ ವಸ್ತುಗಳನ್ನು ನೀಡುವುದು ಒಳ್ಳೆಯ ಕ್ರಮವಾಗಿದೆ. ಜೂಜು ಸಂಸ್ಕೃತಿಯು ಎಲ್ಲಾ ದೇಶಗಳಲ್ಲೂ ಇದೆ. ಅದಕ್ಕೆ ಯುರೋಪ್ ದೇಶಗಳೂ ಹೊರತಾಗಿಲ್ಲ ಎನ್ನುವುದಕ್ಕೆ ಮೇಲಿನ ಉಲ್ಲೇಖವು ನಿದರ್ಶನವಾಗಿದೆ. ದೇವರನ್ನೇ ನಂಬದ ರಷ್ಯಾದ ಜನರು ಅದೃಷ್ಟವನ್ನು ನಂಬಿ ಹಣ ಹೂಡುತ್ತಾರೆ.

ವಿದೇಶಿಯರು ಭಾರತಕ್ಕೆ ಬಂದಾಗ ಅವರ ದೇಶದ ಬಗ್ಗೆ, ಜನ ಜೀವನದ ಬಗ್ಗೆ, ಸರಕಾರದ ಕಾರ್ಯ ವೈಖರಿಯ ಬಗ್ಗೆ ಕುತೂಹಲಕ್ಕಾದರೂ ಮಾಹಿತಿಯನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಆಸಕ್ತಿ ಸಹಜವಾಗಿ ಎಲ್ಲರಲ್ಲಿಯೂ ಇರುತ್ತದೆ. ಪರದೇಶದ ಸಂಸ್ಕೃತಿಯ ವಿಶಿಷ್ಟತೆಯನ್ನು ತಿಳಿಯಬೇಕೆಂಬ ಹಂಬಲ ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ಆದರೆ ಜಿ.ಎಸ್ ಶಿವರುದ್ರಪ್ಪ ಅವರು ಮಾಸ್ಕೋಗೆ ಉಪನ್ಯಾಸಕ್ಕಾಗಿ ತೆರಳಿದ್ದಾಗ, 'ಇನ್ಸ್ಟಿಟ್ಯೂಟ್ ಆಫ್ ಪೀಪಲ್ಸ್ ಆಫ್ ಏಷ್ಯಾ'ದ ವಿದ್ಯಾರ್ಥಿಗಳಾಗಲಿ, ಉಪನ್ಯಾಸಕರಾಗಲಿ, ಲೇಖಕರ ದ್ವಿಭಾಷಿ ವೋಲೋಜನಾಗಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಕೇಳುವ ಆಸಕ್ತಿಯನ್ನೇ ವ್ಯಕ್ತಪಡಿಸುವುದಿಲ್ಲ. ಬದಲಿಗೆ "ಕನ್ನಡ ಸಾಹಿತ್ಯದ ಮೇಲೆ ರಷ್ಯನ್ ಸಾಹಿತ್ಯದ ಪ್ರಭಾವ ಎಷ್ಟಾಗಿದೆ, ಏನೇನು ರಷ್ಯನ್ ಕೃತಿಗಳು ಕನ್ನಡಕ್ಕೆ ಅನುವಾದವಾಗಿವೆ, ಎಂಬ ಪ್ರಶ್ನೆಗಳು!...... ಕೇವಲ ಕುತೂಹಲಕ್ಕಾದರೂ ಇಂಡಿಯಾದ ಜನಜೀವನದ ಬಗೆಗಾಗಲಿ, ಸಂಸ್ಕೃತಿಯ ಬಗೆಗಾಗಲಿ, ಎಂದೂ ಪ್ರಶ್ನೆಗಳನ್ನು ಕೇಳುತ್ತಲೇ ಇರಲಿಲ್ಲ"(ಜಿ.ಎಸ್ ಶಿವರುದ್ರಪ್ಪ., ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ., ಪು-೬೪)ಎಂದು ಉಲ್ಲೇಖಿಸಿದ್ದಾರೆ. ಈ ಬಗೆಯ ಮನಸ್ಥಿತಿಯನ್ನು ಕಂಡ ಲೇಖಕರು ಆ ದೇಶದ ರಾಜಕೀಯ ವ್ಯವಸ್ಥೆಯ ಪ್ರಭಾವದಿಂದ ಸೋವಿಯತ್ ಜನರು ಹೀಗಾಗಿರಬಹುದೇ? ಎಂದು ಅನುಮಾನಿಸಿದ್ದಾರೆ. ಹಾಗಾದರೆ ಸೋವಿಯತ್ ಜನರಿಗೆ ಬೇರೆ ದೇಶಗಳಿಂದ ಕಲಿಯುವ ಮನಸ್ಸಿಲ್ಲವೆ? ಅಥವಾ ತಾವು ಬಡರಾಷ್ಟ್ರದಿಂದ ತಿಳಿಯುವುದೇನು

ಎಂಬ ತಾತ್ಪರವೇ?. ಆ ದೇಶದ ಬಿಗುವಿನ ಆಡಳಿತದ ಕಾರಣದಿಂದ ಅಲ್ಲಿನ ಜನರು ಕೇವಲ ತಮ್ಮ ದೇಶದ ಬಗ್ಗೆ ಯೋಚಿಸುವಂತೆಯೂ, ಪರದೇಶದ ಬಗ್ಗೆ ತಿಳಿಯುವ ಕುತೂಹಲ ಇಲ್ಲದಂತೆಯೂ ಮಾಡಿರುವ ಸಾಧ್ಯತೆ ಇದೆಯೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತದೆ. ಆಡಳಿತ ವೈಖರಿಯು ಅಲ್ಲಿನ ಜನರ ಮನೋಭಾವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎನಿಸುತ್ತದೆ.

ಬೀಚಿ ಅವರು ಸೋವಿಯತ್ ರಷ್ಯಾದ ಸಾಂಸ್ಕೃತಿಕ ಲೋಕವನ್ನು ಸಮಗ್ರವಾಗಿ ಗ್ರಹಿಸಿ 'ದೇವರಿಲ್ಲದಗುಡಿ' ಎಂದು ಕರೆದಿದ್ದಾರೆ. ನಾಸ್ತಿಕರಾದ ಬೀಚಿಗೆ ಯುರೋಪ್ ಕೂಡ ನಾಸ್ತಿಕರ ದೇಶದಂತೆಯೇ ಕಂಡುಬಂದಿರುವ ಸಾಧ್ಯತೆಗಳಿವೆ. ತಮ್ಮ ಪ್ರವಾಸ ಕಥನದಲ್ಲಿ ಹಲವು ಕಡೆಗಳಲ್ಲಿ ತಾವು ನಾಸ್ತಿಕರೆಂದು ತೋರಿಸುವ ಹೇಳಿಕೆಗಳನ್ನು ನೀಡಿದ್ದಾರೆ. 'ನನ್ನ ಹೆಂಡತಿಯ ದೇವರು' 'ಮೂಢರ ದೇವರು ಹೇಡಿಯೇ' 'ದಶಾವತಾರಗಳಲ್ಲ ಅವು ದಶಾಪರಾಧಗಳು' ಎಂಬ ಹೇಳಿಕೆಗಳು ಈ ಮಾತಿಗೆ ಪುಷ್ಟಿ ನೀಡುತ್ತವೆ. ದೇಶವು ಅಭಿವೃದ್ಧಿಯನ್ನು ಹೊಂದಬೇಕಾದರೆ ದೇವರನ್ನು ಪೂಜಿಸುತ್ತಾ ಕುಳಿತರೆ ಆಗುವುದಿಲ್ಲ, ಯುರೋಪಿನ ಅಭಿವೃದ್ಧಿಗೆ ಅವರ ನಾಸ್ತಿಕತೆಯೇ ಕಾರಣ ಎಂಬ ಅಭಿಪ್ರಾಯ ಲೇಖಕರದ್ದಾಗಿದೆ. 'ಭಾರತದಲ್ಲಿಯೇ ಏಕೆ ದಶಾವತಾರಗಳು ಆಗಿವೆ? ಬೇರೆ ದೇಶಗಳಲ್ಲಿ ಯಾಕೆ ಆಗಿಲ್ಲ?' ಎಂದು ಪ್ರಶ್ನಿಸಿರುವುದು ಅವರ ಮನೋಧೋರಣೆಯನ್ನು ಸೂಚಿಸುತ್ತದೆ. ಲೇಖಕರು ಸಾಮಾಜಿಕ ಸಂಸ್ಕೃತಿಗೂ ಅಭಿವೃದ್ಧಿಗೂ ಅಂತರ್‌ಸಂಬಂಧ ಇದ್ದಂತೆ ಭಾವಿಸಿದ್ದಾರೆ. 'ಸಂಸ್ಕೃತಿಯು ಆ ದೇಶದ ಜನರ ಒಟ್ಟು ಬದುಕಿನ ಪ್ರತಿಬಿಂಬ. ಕಾಯಕ ಸಂಸ್ಕೃತಿಯೇ ಅವರ ಅಭಿವೃದ್ಧಿಗೆ ಕಾರಣ' ಎಂಬುದು ಬೀಚಿಯವರ ಅಭಿಮತ. ಈ ಅಭಿಪ್ರಾಯವನ್ನು ಪುರಸ್ಕರಿಸುತ್ತಾ ವಿಶ್ಲೇಷಿಸುವುದಾದರೆ 'ಲೇಖಕರು ಭಾವಿಸಿರುವಂತೆ ರಷ್ಯಾ ದೇಶದ ನಾಸ್ತಿಕ ಭಾವವೇ ಅಭಿವೃದ್ಧಿಗೆ ಕಾರಣ ಎಂಬ ಅಭಿಪ್ರಾಯವನ್ನು ಒಪ್ಪಿದರೂ ಸಂಪೂರ್ಣವಾಗಿ ನಾಸ್ತಿಕ ಭಾವದ ಕಾರಣದಿಂದಲೇ ಅಭಿವೃದ್ಧಿ ಹೊಂದಿದ್ದಾರೆ ಎಂದು ಹೇಳುವಂತಿಲ್ಲ. ಕಮ್ಯುನಿಸ್ಟ್ ದೇಶಗಳು ಪ್ರಜೆಗಳನ್ನು ತಮ್ಮ ಹತೋಟಿಯಲ್ಲಿ ತೆಗೆದುಕೊಂಡು ತಮ್ಮ ದೇಶದ ಅನುಕೂಲಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸುವಂತೆ ಮಾಡುವುದರಿಂದ ಅಭಿವೃದ್ಧಿಗೆ ಪ್ರೇರಕವಾಗಿದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

ಎನ್.ಕೆ.ಉಪಾಧ್ಯಾ ಅವರು ಬೀಚಿ ಅವರ 'ದೇವರಿಲ್ಲದ ಗುಡಿ' ಎಂಬ ಅಭಿಪ್ರಾಯವನ್ನು ಒಪ್ಪದೆ ಯುರೋಪ್ ದೇವರಿಲ್ಲದ ಗುಡಿ ಅಲ್ಲ; ಅದು "ದೇವರ ಗುಡಿ" ಎಂದು ಮರು ವ್ಯಾಖ್ಯಾನಿಸಿದ್ದಾರೆ. ಇಲ್ಲಿ ಒಂದು ದೇಶದ ಬಗ್ಗೆ ಭಿನ್ನ ಅಭಿಪ್ರಾಯಗಳು ಬಂದಿವೆ. ಅಭಿಪ್ರಾಯಗಳು ಅವರು ಬೆಳೆದ ಪರಿಸರದ ಪ್ರಭಾವದಿಂದ ಪರಿಪಾಕಗೊಂಡ ವ್ಯಕ್ತಿತ್ವದ ಉತ್ಪನ್ನ. ಅವರ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಸಂಸ್ಕೃತಿಯನ್ನು ತಿಳಿಸುತ್ತದೆ. ಅವರ ವೈಯಕ್ತಿಕ ಸಂಸ್ಕೃತಿಯ ಮೂಲಕ ಬೇರೆ ಸಂಸ್ಕೃತಿಯನ್ನು ನೋಡಿದಾಗ ಇಂತಹ ಭಿನ್ನ ಅಭಿಪ್ರಾಯಗಳು ಹುಟ್ಟಿಕೊಳ್ಳುತ್ತವೆ.

ಪ್ರಜಾಮತ ಪತ್ರಿಕೆಯ ಮುಖ್ಯ ಸಂಪಾದಕರಾದ ಹ.ವೆಂ. ನಾಗರಾಜರಾವ್ ಅವರು ತಮ್ಮ ಪ್ರವಾಸ ಕಥನಕ್ಕೆ 'ನವ ರಷ್ಯದ ನೋಟ' ಎಂಬ ಶೀರ್ಷಿಕೆಯನ್ನು ನೀಡಿದ್ದಾರೆ. ಈ ಕೃತಿಯು ಕೇವಲ ಪ್ರವಾಸ ಕಥನಗಳ ವಿವರಗಳಿಗೆ ಸೀಮಿತವಾಗಿಲ್ಲ. 'ವಿಶ್ವವಿದ್ಯಾನಿಲಯ, ಸಾಮೂಹಿಕ ಕೃಷಿ ಕ್ಷೇತ್ರ, ಲೇಖಕರ ಸಂಘ, ಪ್ರಕಾಶನ ಸಂಸ್ಥೆ, ಫಿಲ್ಮ್ ಸ್ಟುಡಿಯೋ, ಇಸ್ತಾ ಸುದ್ದಿ ಪತ್ರಿಕೆಯ ವಸ್ತು ಸಂಗ್ರಹಾಲಯ, ಇತರ ಮ್ಯೂಸಿಯಂಗಳು, 'ವೋಲ್ಗಾಗ್ರಾಡ್' ಹಾಗೂ ಟಾಲ್‌ಸ್ಟಾಯ್‌ನ ತಪೋಭೂಮಿ 'ಯೆಸ್ನಾಯಾ ಪೋಲ್ಯಾಯ' ಮೊದಲಾದ ವೈವಿಧ್ಯಮಯ ಸ್ಥಳಗಳಿಗೆ ಭೇಟಿ ನೀಡಿರುವುದರ ವಿವರಗಳನ್ನು ತೌಲನಿಕ ಮನೋಭಾವದಿಂದ

ವಿಶ್ಲೇಷಿಸಿದ್ದಾರೆ. ಪ್ರವಾಸಿ ಸ್ಥಳಗಳ ಜೊತೆಗೆ ತಾವು ನೋಡಿದ ಸ್ಥಳಗಳನ್ನು ನವೀನ ದೃಷ್ಟಿಕೋನದೊಂದಿಗೆ ವಿಶ್ಲೇಷಿಸಿದಾಗ ಆ ರಾಷ್ಟ್ರದ ಬಗೆಗಿನ ಅಭಿಪ್ರಾಯದಲ್ಲಿ ಒಂದಷ್ಟು ಗಟ್ಟಿತನ ಇರುತ್ತದೆ. 'ನವ ರಷ್ಯದ ನೋಟ' ಕೃತಿಯಲ್ಲಿ ಪ್ರಮುಖವಾಗಿ ರಷ್ಯಾ ದೇಶದ ಅಭಿವೃದ್ಧಿಗೆ ಕಾರಣವಾಗುವ ಅಂಶಗಳನ್ನು ಓದುಗರಿಗೆ ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಕಾಣಬಹುದಾಗಿದೆ. ಲೇಖಕರು ಅಭಿವೃದ್ಧಿಯ ಹಿನ್ನೆಲೆಯಲ್ಲಿ ಸಂವೇದನೆಗಳನ್ನು ಅಭಿಪ್ರಾಯಗಳ ಮೂಲಕ ವ್ಯಕ್ತಪಡಿಸಿದ್ದಾರೆ. ರಷ್ಯಾದ ಸಮಾಜವನ್ನು ಮತ್ತು ಸಂಸ್ಕೃತಿಯನ್ನು ತೌಲನಿಕ ದೃಷ್ಟಿಕೋನದಿಂದಲೇ ನೋಡಿದ್ದಾರೆ. ಉದಾಹರಣೆಗೆ ರಷ್ಯಾ ದೇಶದ ಜನಪದ ಸಂಗೀತಕ್ಕೂ ಕರ್ನಾಟಕದ ಜನಪದ ಸಂಗೀತಕ್ಕೂ ಸಾಮ್ಯತೆ ಇರುವುದನ್ನು ಗುರುತಿಸಿದ್ದಾರೆ. "ರಷ್ಯದ ಕೆಲವು ಜಾನಪದ ಗೀತೆಗಳನ್ನು ಹಾಡಿದರು. ಅದರಲ್ಲಿ ಕರ್ನಾಟಕದ ಜಾನಪದ ಸಂಗೀತದ ಕೆಲವು ಛಾಯೆಗಳನ್ನು ಗುರುತಿಸಿದ್ದೆ. ನೆಲಕ್ಕೂ ಮಾನವನ ಬದುಕಿಗೂ ತೀರ ಸಮೀಪವಾದ ಈ ಜಾನಪದ ಸಂಗೀತ ಎಲ್ಲೆಡೆಯೂ ಮೂಲಭೂತವಾಗಿ ಒಂದೇ ನಾದವನ್ನು ಹೊಂದಿದಂತಿದೆ"(ಹ.ವೆಂ.ನಾಗರಾಜರಾವ್., ನವರಷ್ಯಾದ ನೋಟ., ಪು-೯೫)ಎಂದಿದ್ದಾರೆ. ಇಲ್ಲಿ ಲೇಖಕರ ಅಭಿಪ್ರಾಯವು ಜಾನಪದ ಗೀತದ ಲಯವನ್ನು ಹೋಲಿಸುತ್ತಾ ಮಾನವನ ಯೋಚನಾ ಲಹರಿ ಎಲ್ಲಾ ಕಡೆಯೂ ಒಂದೇ ರೀತಿಯಲ್ಲಿದೆ ಎಂಬ ಧೋರಣೆ ವ್ಯಕ್ತವಾಗಿದೆ. ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಈ ಅಭಿಪ್ರಾಯವನ್ನು ವಿಶ್ಲೇಷಿಸಿದಾಗ ಜೇಮ್ಸ್ ಜಾರ್ಜ್ ಫ್ರೇಜರ್‌ನ ದೈವೀ ಮೂಲ ಸಿದ್ಧಾಂತಕ್ಕೆ ಹೊಂದಿಕೆ ಆಗುತ್ತದೆ.

ಅನುಪಮಾ ನಿರಂಜನ ಅವರು ತಮ್ಮ ಮೊದಲ ಪ್ರವಾಸ ಕೃತಿ 'ಸ್ನೇಹಯಾತ್ರೆ'ಯನ್ನು ಸ್ತ್ರೀವಾದಿ ನೆಲೆಯಲ್ಲಿ ಬರೆದಿದ್ದಾರೆ. ಯುರೋಪ್‌ನ ಬರ್ಲಿನ್‌ಗೆ ಅಂತರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ನಲ್ಲಿ ಭಾಗವಹಿಸಲು ಹೋಗಿದ್ದರು. ಆದ್ದರಿಂದ ಸಹಜವಾಗಿ ಅವರ ಚರ್ಚಾ ವಿಷಯಗಳು ಹೆಣ್ಣಿನ ಸ್ಥಾನಮಾನಗಳ ಕುರಿತಾಗಿಯೇ ಇದೆ. ಯುರೋಪ್ ದೇಶದಲ್ಲಿನ ಸ್ತ್ರೀಯರ ಸ್ಥಿತಿಗತಿಯ ಬಗ್ಗೆ ತಿಳಿಯಬೇಕು ಎನ್ನುವ ಹಂಬಲ, ಸ್ತ್ರೀಯರ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಇರುವುದು ವ್ಯಕ್ತವಾಗಿದೆ. ಯುರೋಪಿನ ಮಹಿಳೆಯರ ವೈವಾಹಿಕ ಪದ್ಧತಿ, ಕೌಟುಂಬಿಕ ಜೀವನ, ಸಾಮಾಜಿಕ ಆಚರಣೆಗಳು, ಲಿಂಗ ತಾರತಮ್ಯ, ಹೆಣ್ಣಿನ ಸ್ಥಾನಮಾನ ಮೊದಲಾದ ಅಂಶಗಳನ್ನು ತಿಳಿದುಕೊಳ್ಳಲು ಹೆಚ್ಚಿನ ಆಸಕ್ತಿ ತೋರಿದ್ದಾರೆ. ಮಾರ್ಗದರ್ಶಕರನ್ನು ಸ್ತ್ರೀಯರ ಸಾಮಾಜಿಕ ಸ್ಥಾನಮಾನಗಳ ಕುರಿತು ಪ್ರಶ್ನಿಸಿ, ಚರ್ಚಿಸಿ ಭಾರತೀಯ ಸ್ತ್ರೀಯ ಸಾಮಾಜಿಕ ಸ್ಥಾನಮಾನಗಳನ್ನು ತೌಲನಿಕವಾಗಿ ಹೋಲಿಸಿದ್ದಾರೆ. ಭಾರತೀಯ ಸಂಸ್ಕೃತಿಯು ಸ್ತ್ರೀಯನ್ನು ನಡೆಸಿಕೊಂಡಿರುವ ಬಗೆಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಲೇಖಕಿ ಹೆಚ್ಚಾಗಿ ಮಹಿಳೆಯರ ಸಮಾನತೆಯ ಬಗ್ಗೆ ಚರ್ಚಿಸಿದ್ದಾರೆ. ಸ್ತ್ರೀಪರವಾದ ವಿಷಯಗಳನ್ನು ಬಹುಶಿಸ್ತೀಯ ನೆಲೆಯಲ್ಲಿ ಪ್ರತ್ಯೇಕ ಅಧ್ಯಯನವನ್ನಾಗಿ ವಿಭಾಗಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

ಲೇಖಕಿ ವೃತ್ತಿಯಲ್ಲಿ ವೈದ್ಯರಾಗಿದ್ದರೂ ಆಯಾ ದೇಶ ಹಾಗೂ ಸ್ಥಳದ ಐತಿಹಾಸಿಕ ವಿವರಗಳನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ. ಸಂಸ್ಕೃತಿಯ ವೈವಿಧ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಕೇವಲ ಪ್ರವಾಸಿ ಮನೋಧೋರಣೆಯನ್ನು ಹೊಂದದೆ ಸ್ವಾಸ್ಥ್ಯ ಸಮಾಜದ ಆಗು ಹೋಗುಗಳನ್ನು ತೆರೆದ ಮನಸ್ಸಿನಿಂದ ನೋಡಿದ್ದಾರೆ. ಅವರ ಅವಲೋಕನದ ಸ್ವರೂಪವು ಮಹಿಳಾ ನೆಲೆಯಲ್ಲಿ ಮತ್ತು ಸಾಮಾಜಿಕ ಸಮಾನತೆಯ ನೆಲೆಯಲ್ಲಿಯೇ ಇರುವುದನ್ನು ಗುರುತಿಸಲಾಗಿದೆ.

ಹುಬ್ಬಳ್ಳಿಯ ಸಾವಿರಮಠದ ಮಠಾಧಿಪತಿಗಳಾದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಬೆಲ್ಜಿಯಂನ ಲ್ಯೂವೆನ್ ನಗರದಲ್ಲಿ ೧೯೭೪ರಲ್ಲಿ ಜರುಗಿದ ವಿಶ್ವ ಶಾಂತಿ ಧರ್ಮ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಯುರೋಪ್ ಪ್ರವಾಸ ಮಾಡಿದ್ದಾರೆ. ಇವರು 'ಸಮುದ್ರ ದಾಟಿ ಹೋಗಬಾರದು' ಎಂಬ ಪ್ರಾಚೀನರ ನಂಬಿಕೆಗಳನ್ನು ಹಿಂದೂ ಧಾರ್ಮಿಕ ಸಂತರಾಗಿ ಮೀರುವ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಿದರು. ತಮ್ಮ ದಿನ ನಿತ್ಯದ ಪೂಜೆ ಸ್ನಾನಾದಿಗಳಿಗೆ ಚ್ಯುತಿಯಿಲ್ಲದೆ, ಭಾರತದಲ್ಲಿದ್ದಾಗ ಹೇಗೆ ಜೀವನ ಪ್ರವೃತ್ತಿ ನಡೆಯುತ್ತಿತ್ತೊ ಅಂತೆಯೇ ಪ್ರವಾಸ ಕಾಲದಲ್ಲಿಯೂ ತಮ್ಮ ದೈವ ನಿಷ್ಠೆಯನ್ನು ಪಾಲಿಸಿದ್ದಾಗಿ ಹೇಳಿಕೊಂಡಿದ್ದಾರೆ. ಲೇಖಕರು ಒಂದು ಕಡೆ ಮೂಢನಂಬಿಕೆಗೆ ಒಳಗಾಗದ, ಪ್ರಾಚೀನರ ನಂಬಿಕೆಗಳನ್ನು ಮೀರಿ ಸಮುದ್ರದಾಟಿದ ವೈಚಾರಿಕ ವ್ಯಕ್ತಿತ್ವದವರಾಗಿ ಕಂಡುಬಂದರೆ, ಮತ್ತೊಂದು ಕಡೆ ದೈವ ನಿಷ್ಠೆಯ ಪಾಲಕರಾಗಿಯೂ ಕಂಡುಬರುತ್ತಾರೆ. ಬೀಚಿಯವರಂತೆ ನಾಸ್ತಿಕವಾದಿಯಾಗದೆ ವೈಚಾರಿಕತೆಯೊಂದಿಗೆ ದೈವನಿಷ್ಠೆಯನ್ನು ಹೊಂದಿದವರಾಗಿದ್ದಾರೆ.

'ನಮ್ಮ ವಿದೇಶ ಯಾತ್ರೆ' ಕೃತಿಯಲ್ಲಿ ಲೇಖಕರ ಸಾಂಸ್ಕೃತಿಕ ದೃಷ್ಟಿಕೋನವನ್ನು ಕಾಣಬಹುದು. ಭಾರತೀಯ ಪರಂಪರೆ, ಆಚರಣೆಗಳಿಗೆ ಬದ್ಧರಾದ ಲೇಖಕರಿಗೆ ಯುರೋಪಿನ ಮುಕ್ತ ಸಂಸ್ಕೃತಿಯು ಸ್ವೇಚ್ಛಾಚಾರವಾಗಿ ಕಾಣುತ್ತದೆ. ಹೆಣ್ಣು ಮಕ್ಕಳು ಸಿಗರೇಟು ಸೇದುವುದನ್ನು ಕಂಡು ಆಶ್ಚರ್ಯಚಕಿತರಾಗುತ್ತಾರೆ. "ಸಿಗರೇಟು ಸೇದುವಲ್ಲಿ ಪುರುಷರಿಗಿಂತ ಸ್ತ್ರೀಯರು ಮಿಗಿಲೆಂಬಂತೆ ತೋರುತ್ತಾರೆ" (ಮೂಜಗಂ., ನಮ್ಮ ವಿದೇಶ ಯಾತ್ರೆ., ಪು-೧೦೧)ಎಂದಿದ್ದಾರೆ. ಯುರೋಪಿನ ದೇಶಗಳಲ್ಲಿ ಯುವಕ-ಯುವತಿಯರು ಕುಟುಂಬದಿಂದ ದೂರವಿರುತ್ತಾರೆ. ಯಾರ ಹತೋಟಿಯೂ ಇಲ್ಲದ ಸ್ವಚ್ಛಂದ ಬದುಕಿನಲ್ಲಿ ತಮ್ಮ ಯೌವನದ ಬದುಕನ್ನು ಇಷ್ಟಬಂದಂತೆ ಕಳೆಯುತ್ತಾರೆ. ಈ ಕಾರಣದಿಂದ ಯುವಕ ಯುವತಿಯರು ಧೂಮಪಾನ, ಮದ್ಯಪಾನದ ಚಟಗಳಿಗೆ ಒಳಗಾಗುತ್ತಾರೆ. ಇದರಿಂದ ತಿಳಿದುಬರುವ ಸಂಗತಿಯೆಂದರೆ 'ಸಾಮಾಜಿಕ, ಕೌಟುಂಬಿಕ ಪದ್ಧತಿಗಳು ವ್ಯಕ್ತಿತ್ವವನ್ನು ರೂಪಿಸುತ್ತದೆ ಮತ್ತು ನಿಯಂತ್ರಿಸುತ್ತದೆ.

ಕವಿಗಳು, ಲೇಖಕರು, ಶಿಲ್ಪಿಗಳು, ಚಿತ್ರಕಾರರು ಆಯಾ ದೇಶದ ಸಂಪತ್ತು ಇದ್ದಂತೆ. ಕಲಾಕಾರರಿಂದಲೇ ಸಂಸ್ಕೃತಿ ಉಳಿಯುತ್ತದೆ, ಬೆಳೆಯುತ್ತದೆ ಮತ್ತು ಮುಂದಿನ ಜನಾಂಗಕ್ಕೆ ತಿಳಿಯುತ್ತದೆ. ಇವರನ್ನು ಗೌರವಿಸುವುದು ಆಯಾ ದೇಶದ ಜನರ ಕರ್ತವ್ಯ. ಈ ವಿಚಾರದಲ್ಲಿ ಯುರೋಪಿಯನ್ ದೇಶಗಳು ಹೆಚ್ಚು ಕಾಳಜಿಯನ್ನು ತೋರಿವೆ. ಅಲ್ಲಿನ ಸರಕಾರ ಮತ್ತು ಸಂಘ ಸಂಸ್ಥೆಗಳು ಅವರ ದೇಶಕ್ಕೆ ಅತ್ಯುನ್ನತ ಕೊಡುಗೆ ನೀಡಿದ ಮಹನೀಯರನ್ನು ಇತರರಿಗೆ ಪರಿಚಯಿಸಲು ಅನುವಾಗುವಂತೆ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಷೇಕ್ಸ್‌ಪಿಯರ್‌ನ ಸ್ಟ್ರಾಟ್‌ಫರ್ಡ್‌ಗೆ ಭೇಟಿ ನೀಡುವ ಮೂಜಗಂ ಅವರು ಈ ಅಂಶವನ್ನು ಗಮನಿಸಿದ್ದಾರೆ. ಸ್ಟ್ರಾಟ್‌ಫರ್ಡ್ ಒಂದು ಚಿಕ್ಕ ಹಳ್ಳಿ. ಆದರೂ ಅಲ್ಲಿಗೆ ಪ್ರವಾಸಿಗರನ್ನು ಆಕರ್ಷಿಸುವಂತೆ ಕವಿಮನೆಯನ್ನು ಸಜ್ಜುಗೊಳಿಸಿದ್ದಾರೆ. ಷೇಕ್ಸ್‌ಪಿಯರ್‌ನ ನಾಟಕಗಳಿಗಾಗಿಯೇ ಅಲ್ಲಿ ಪ್ರತ್ಯೇಕ ರಂಗಮಂದಿರವನ್ನು ಕಟ್ಟಿ, ಪ್ರತಿನಿತ್ಯ ನಾಟಕಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದಾರೆ. ಆದರೆ ನಾವು ನಮ್ಮ ಮಹಾಕವಿಗಳಿಗೆ ತೋರಿರುವ ಕಾಳಜಿ ಹೇಗಿದೆ ಎಂದರೆ "ರಾಘವಾಂಕನ ಸಮಾಧಿ ತಿಪ್ಪೆಯಲ್ಲಿದೆ. ಬಸವಣ್ಣನವರ ಮಹಾಮನೆ ಇದ್ದ ಸ್ಥಳದಲ್ಲಿ ಇಂದು ಮುಳ್ಳುಕಂಟಿ ಬೆಳೆಯುತ್ತಿದೆ"(ಮೂಜಗಂ., ನಮ್ಮ ವಿದೇಶ ಯಾತ್ರೆ., ಪು-೧೦೫)ಎಂದು ನೆನಪಿಸಿಕೊಂಡಿದ್ದಾರೆ. ಇಂದು ಕೆಲವೇ ಕೆಲವು ಸಾಹಿತಿಗಳ ನೆನಪುಗಳನ್ನು ಉಳಿಸಿಕೊಳ್ಳುವಲ್ಲಿ ಆಸ್ಥೆ ತೋರಿದ್ದೇವೆಯಾದರೂ ಅವರನ್ನು ಇಂದಿನ ಹೊಸ ಪೀಳಿಗೆಗೆ

ಪರಿಚಯಿಸುವಲ್ಲಿ ಸೋತಿದ್ದೇವೆ. ಲೇಖಕರ ಈ ಕಾಳಜಿಯು ಒಪ್ಪುವಂತಿದೆ. ನಮ್ಮ ಸಂಸ್ಕೃತಿ ಪರಂಪರೆಯನ್ನು ಬೆಳೆಸಿದ, ಮುನ್ನಡೆಸಿದ ಹಾಗೂ ಜನರಲ್ಲಿ ಅರಿವನ್ನು ಮೂಡಿಸಿದ ಮಹಾಕವಿಗಳನ್ನು ನಾವು ಅಸಡ್ಡೆಯಿಂದ ಕಾಣುವುದು ಸರಿಯಲ್ಲ. ಜನರಿಗೆ ಕವಿಗಳನ್ನು ಪರಿಚಯಿಸಲು ಅವರ ಸಾಧನೆಯನ್ನು ಶಾಸ್ವತಗೊಳಿಸಲು ಸರಕಾರದ ಜೊತೆಗೆ ಎಲ್ಲರೂ ಕೈಜೋಡಿಸಬೇಕಾದ ಅನಿವಾರ್ಯತೆಯನ್ನು ಲೇಖಕರ ಅಭಿಪ್ರಾಯವು ಸೂಚಿಸುತ್ತದೆ. ಎಲ್ಲರಲ್ಲಿಯೂ ಹಿರಿಯ ಕವಿಗಳನ್ನು ಗೌರವಿಸುವ ಮನೋಭಾವ ಮೂಡುವಂತೆ ಸಜ್ಜುಗೊಳಿಸಬೇಕಾದ ಜವಾಬ್ದಾರಿಯನ್ನು ನೆನಪಿಸುತ್ತದೆ. ಈ ದಿಸೆಯಲ್ಲಿ ಇನ್ನೂ ಹೆಚ್ಚು ಕೆಲಸವಾಗಬೇಕಿದೆ.

ಮೂಜಗಂ ಅವರ ದೃಷ್ಟಿಕೋನವು ಭಾರತೀಯ ಸಂಸ್ಕೃತಿಯಿಂದ ಪ್ರೇರಿತವಾಗಿದೆ. ಆದ್ದರಿಂದ ಲೇಖಕರಿಗೆ ಪ್ಯಾರಿಸ್ಸಿನ ಜನರು ಸ್ವೇಚ್ಛಾಚಾರದ, ಅಂಕೆಯಿಲ್ಲದ ಮೋಜು ಮಸ್ತಿಯ ಪ್ರಚೋದಕ ಮನಸ್ಥಿತಿಯವರಾಗಿ ಕಂಡಿದ್ದಾರೆ. ಸಿಗರೇಟು ಸೇದುವ, ಗಂಡಸರ ಪೋಷಾಕು ಧರಿಸುವ, ಅರೆನಗ್ನ ಉಡುಗೆಗಳ ಮಹಿಳೆಯರು. ಭಿನ್ನ ಭಿನ್ನವಾದ ಫ್ಯಾಷನ್ನುಗಳ, ಸ್ವಚ್ಛಂದವಾಗಿ ರಸ್ತೆ ಬದಿಯಲ್ಲೆ ಕಾಮನೆಗಳನ್ನು ತೀರಿಸಿಕೊಳ್ಳುವ ಹದಿ ಹರೆಯದ ಹುಡುಗ ಹುಡುಗಿಯರು. ಈ ತರಹದ ಸ್ವತಂತ್ರ ಬದುಕು ಲೇಖಕರನ್ನು ಚಕಿತಗೊಳಿಸುತ್ತದೆ. "ಭವಿಷ್ಯದಲ್ಲಿ ಈ ಸಂಸ್ಕೃತಿ ಭಾರತಕ್ಕೆ ಹರಿದು ಬಂದರೆ ಮುಂದೇನು ಗತಿ?" (ಮೂಜಗಂ., ನಮ್ಮ ವಿದೇಶ ಯಾತ್ರೆ., ಪು-೧೦೭)ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ದೇ. ಜವರೇಗೌಡರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ತಮ್ಮ ಮಠದ ಪರಿಸರವು ರೂಪಿಸಿದ ಸಂಸ್ಕೃತಿಗೆ ಅನುಗುಣವಾಗಿಯೇ ಮೂಜಗಂ ಅವರು ಯುರೋಪಿನ ಸಂಸ್ಕೃತಿಯನ್ನು ನೋಡಿದ್ದಾರೆ. ಲೇಖಕರು ಪ್ಯಾರಿಸ್ಸಿನವರ "ಜೀವನ ವಿಲಾಸಕ್ಕೆ; ಭಾರತೀಯ ದರ್ಶನವಾಣಿ, ಶರಣರ ಅನುಭವವಾಣಿ ಕನಸಿನಲ್ಲೂ ಗೋಚರವಾಗದು....... ಐಂದ್ರಿಕ ಪಿಪಾಸೆಗಳನ್ನು ಬಿಡುಗಡೆ ಮಾಡುವಲ್ಲಿ ದೊರೆಯುವ ಆನಂದಕ್ಕಿಂತ; ಅವುಗಳನ್ನು ದಿಗ್ಬಂಧಿಸುವಲ್ಲಿ ಅಧಿಕ ಆನಂದ ಅಡಗಿದೆ ಆದರೆ ಈ ಗುಟ್ಟು ಪ್ಯಾರೀಸ್‌ನವರಿಗೆ ಅರ್ಥವಾಗುವದೆಂತು?"(ಮೂಜಗಂ., ನಮ್ಮ ವಿದೇಶ ಯಾತ್ರೆ., ಪು-೧೦೭,೧೦೮) ಎಂದಿದ್ದಾರೆ. ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತರಾದ ಲೇಖಕರು ಯುರೋಪಿಯನ್ನರ ಸಂಸ್ಕೃತಿಯ ಬಗ್ಗೆ ವಿರೋಧ ಭಾವವನ್ನು ಹೊಂದಿರುವುದನ್ನು ಗುರುತಿಸಲಾಗಿದೆ. ಯುರೋಪಿಯನ್ನರಿಗೆ ಶರಣರ ತತ್ವ ದರ್ಶನಗಳು ತಿಳಿದಿಲ್ಲ, ತಿಳಿಯಬೇಕೆಂಬ ಆಗ್ರಹವೂ ಇಲ್ಲ. ಮೂಜಗಂ ಅವರ ಅಭಿಪ್ರಾಯವು ಯುರೋಪಿಯನ್ನರಿಗೂ ಶರಣರ ತತ್ವಗಳನ್ನು ಬೋಧಿಸುವ ರೀತಿಯಲ್ಲಿದೆ. ಪ್ರವೃತ್ತಿಗಳಿಗೆ ಅನುಗುಣವಾಗಿ ಪ್ರವಾಸ ಕಥನಗಳು ಭಿನ್ನ ಸ್ವರೂಪವನ್ನು, ವಿವಿಧ ದೃಷ್ಟಿಕೋನಗಳನ್ನು ಹೊಂದಿರುತ್ತವೆ.

ಮೂಜಗಂ ಅವರು 'ರಾಮಕೃಷ್ಣ ವೇದಾಂತ ಸೆಂಟರ್'ಗೆ ಮತ್ತು 'ಮಹರ್ಷಿ ಮಹೇಶ ಯೋಗಿ'ಗಳ 'ಅಂತರಾಷ್ಟ್ರೀಯ ಧ್ಯಾನಯೋಗ ಆಶ್ರಮ' ಕ್ಕೆ ಭೇಟಿ ನೀಡಿದ್ದಾರೆ. ಬೇರೆ ಯಾವ ಲೇಖಕರು ಈ ಸ್ಥಳಗಳಿಗೆ ಭೇಟಿ ನೀಡಿಲ್ಲ. ಲೇಖಕರು ಮಠದ ಸ್ವಾಮಿಗಳಾದ ಕಾರಣ ಅವರು ಭೇಟಿ ನೀಡಬೇಕಾದ ಸ್ಥಳಗಳು ಆಶ್ರಮಗಳೇ ಆಗಿರುವುದು 'ವೃತ್ತಿ ಹಾಗೂ ಪ್ರವೃತ್ತಿಗಳು ಪ್ರವಾಸ ಸ್ಥಳಗಳ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ' ಎಂಬುದಕ್ಕೆ ನಿದರ್ಶನವಾಗಿದೆ. ಗಮನಿಸಬೇಕಾದ ಅಂಶವೆಂದರೆ ಹಿಂದೂ ಧಾರ್ಮಿಕ ಸಂಸ್ಥೆಗಳು ಕ್ರೈಸ್ತ ಧರ್ಮೀಯರೇ ಹೆಚ್ಚಾಗಿರುವ ಯುರೋಪಿನಲ್ಲಿ ನೆಲೆಗೊಂಡಿರುವುದು. ಭಾರತಿಯ ಸಂಸ್ಕೃತಿಯ ತತ್ವಗಳನ್ನು ಯುರೋಪಿಯನ್ ದೇಶಗಳಲ್ಲಿ ಪ್ರಚಾರ ಮಾಡುವ ಅನೇಕ ಸಂಸ್ಥೆಗಳಿವೆ. ಇದು ಪರಸ್ಪರ

ಭಾರತೀಯ ಮತ್ತು ಯುರೋಪಿಯನ್ ಸಂಸ್ಕೃತಿಯ ಬೆಸುಗೆಗೆ ಸಹಕಾರಿಯಾಗಿದೆ. ಸಂಸ್ಕೃತಿಯ ವಿನಿಮಯಕ್ಕೆ ಮಾರ್ಗವಾಗಿದೆ.

ಸಂಗೀತ ವಿದ್ವಾಂಸರಾದ ವಸಂತ ಕವಲಿ ಅವರು ಯುರೋಪನ್ನು ನೋಡುವ ಕ್ರಮವು ಕಲಾರಾಧನೆಯ ದೃಷ್ಟಿಕೋನದಿಂದ ಕೂಡಿದೆ. ಕವಲಿ ಅವರಿಗೆ ಯುರೋಪಿಯನ್ನರು ಸಂಗೀತ ಆಸ್ವಾದನೆಗೆ ಹೆಚ್ಚು ಮಹತ್ವ ಕೊಟ್ಟಿರುವಂತೆ ಕಾಣುತ್ತದೆ. ಪ್ರವಾಸ ಕಥನಗಳ ನಿರೂಪಣಾ ಶೈಲಿಯು ಲೇಖಕರ ಆಸಕ್ತಿಯ ಕ್ಷೇತ್ರಗಳನ್ನು ಅನುಸರಿಸಿ ನಿರೂಪಿತವಾಗುವುದನ್ನು ಗಮನಿಸಬಹುದು. ಯುರೋಪಿನಲ್ಲಿ ಸಂಗೀತ ಆರಾಧಕರು ಅಧಿಕವಾಗಿ ಇದ್ದಾರೆ ಎಂದು ಹೇಳಿದ್ದಾರೆ. ಶಿಸ್ತುಬದ್ಧ ಜೀವನವನ್ನು ನಿರ್ವಹಿಸುವ ಯುರೋಪಿಯನ್ನರು ಸಂಗೀತ ಕಛೇರಿಯಲ್ಲಿಯೂ ಅಷ್ಟೇ ಗಂಭೀರತೆಯಿಂದ, ಶಿಸ್ತಿನಿಂದ ವರ್ತಿಸುವುದನ್ನು ಮೆಚ್ಚಿಕೊಂಡಿದ್ದಾರೆ. ಒಂದು ಗೀತೆ ಪೂರ್ಣವಾಗಿ ಆಲಿಸಿದ ಮೇಲೆ ಎದ್ದು ನಿಂತು ಕರತಾಡನ ಮಾಡುತ್ತಾರೆ. ಭಾರತೀಯರಲ್ಲಿ ಈ ರೀತಿಯ ಶಿಸ್ತು ಇರುವುದಿಲ್ಲ. ಶಿಳ್ಳೆ, ಕೂಗಾಟ, ಕಿರುಚಾಟವೇ ಸಂತೋಷವನ್ನು ವ್ಯಕ್ತಪಡಿಸುವ ವರ್ತನೆಗಳು. ಭಾರತೀಯರು ಸಂಗೀತವನ್ನು ಆಲಿಸಿ ಸಂತೋಷವನ್ನು ವ್ಯಕ್ತಪಡಿಸುವ ರೀತಿಯಾಗಿದೆ. ಆದ್ದರಿಂದ 'ಭಾರತೀಯರಿಗೆ ಶಿಸ್ತುಬದ್ಧ ಬದುಕು ಆಗುವುದಿಲ್ಲ. ಜರ್ಮನರಲ್ಲಿನ ಕಾರ್ಯತತ್ಪರತೆ ಭಾರತೀಯರಲ್ಲಿಲ್ಲ' ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಸಂಗೀತ ಕಛೇರಿಗಳನ್ನು ನಡೆಸುವ ಕವಲಿ ಅವರು ಸಂಗೀತವನ್ನು ಆಲಿಸಲು ಬರುವ ವ್ಯಕ್ತಿಗಳ ಸಾಮಾಜಿಕ ವರ್ತನೆಗಳನ್ನು ಆಧರಿಸಿ ಹೋಲಿಸಿರುವ ಕ್ರಮವನ್ನು ಭಾಗಶಃ ಒಪ್ಪಬಹುದಾಗಿದೆ. ಈ ಅಭಿಪ್ರಾಯದಿಂದ ಸಾಮಾಜಿಕ ವರ್ತನೆಗಳನ್ನು ತುಲನೆ ಮಾಡುವುದು ಸರಿಯಾದ ಪ್ರಮಾಣವಾಗಲಾರದು. ಗುಂಪಿನಲ್ಲಿ ಜನರು ವರ್ತಿಸುವ ರೀತಿಗೂ ವ್ಯಕ್ತಿಗಳೊಂದಿಗೆ ವ್ಯವಹರಿಸುವಾಗ ನಡೆದುಕೊಳ್ಳುವ ಸಾಮಾಜಿಕ ರೀತಿಗೂ ವ್ಯತ್ಯಾಸಗಳಿರುತ್ತದೆ. ಗುಂಪಿನಲ್ಲಿ ವ್ಯಕ್ತಪಡಿಸಿದ ನಡೆವಳಿಕೆಗಳು ಸನ್ನಿವೇಶಗಳಿಂದ ಪ್ರೇರಿತವಾಗಿರುತ್ತದೆ. ಅದನ್ನು ಆಧರಿಸಿ ಭಾರತೀಯರಿಗೆ ಶಿಸ್ತುಬದ್ಧ ನಡೆವಳಿಕೆ ಆಗುವುದಿಲ್ಲ ಎಂಬ ಲೇಖಕರ ತೀರ್ಮಾನ ಮತ್ತು ಜರ್ಮನರೊಂದಿಗಿನ ಹೋಲಿಕೆಯು ಸರಿಯಾದ ಪ್ರಮಾಣವಲ್ಲ ಎನಿಸುತ್ತದೆ.

೧೯೮೦ರಿಂದ ೧೯೮೯ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

೧೯೮೦ರಿಂದ ೧೯೮೯ರ ಕಾಲಘಟ್ಟದಲ್ಲಿ ಸೋವಿಯತ್ ದೇಶಕ್ಕೆ ಪ್ರವಾಸ ತೆರಳುವವರಿಗೆ ಸೋವಿಯತ್ ಸರಕಾರದ ಸಹಕಾರ ಮುಂದುವರೆದಿತ್ತು. ಈ ದಶಕದಲ್ಲಿ ಇಪ್ಪತ್ತೊಂಬತ್ತು ಕನ್ನಡದ ಯುರೋಪ್ ಪ್ರವಾಸ ಕೃತಿಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಹದಿನೈದಕ್ಕೂ ಹೆಚ್ಚು ಲೇಖಕರು ಸರಕಾರದ ವೆಚ್ಚದಲ್ಲಿ ಪ್ರವಾಸ ಮಾಡಿದವರಾಗಿದ್ದಾರೆ. ಪತ್ರಕರ್ತರಾದ ಪಾಟೀಲ ಪುಟ್ಟಪ್ಪನವರು ಮತ್ತು ಉ.ಕಾ. ಸುಬ್ಬರಾಯಾಚಾರ್ ಅವರು ಸೋವಿಯತ್ ದೇಶದ ಅತಿಥಿಗಳಾಗಿ ಪ್ರವಾಸ ಮಾಡಿದ್ದಾರೆ. ಸೋವಿಯತ್ ಸರಕಾರದ ವೆಚ್ಚದಲ್ಲಿ ಪ್ರವಾಸ ಮಾಡಿದವರು ಹೆಚ್ಚಾಗಿ ಸೋವಿಯತ್ ಸರಕಾರಕ್ಕೆ ನಿಷ್ಠರಾಗಿದ್ದಾರೆ. ಅಂದರೆ ಸೋವಿಯತ್ ದೇಶದ ಬಗ್ಗೆ ಧನಾತ್ಮಕ ಅಂಶಗಳನ್ನೇ ಬರೆದಿದ್ದಾರೆ. ಸೋವಿಯತ್ ದೇಶದ ಆಡಳಿತ ವೈಖರಿ, ಕರ್ತವ್ಯಪರತೆ, ಸಮಾಜದಲ್ಲಿನ ಸಮಾನತೆಯ ಅಂಶಗಳನ್ನು ಕಂಡು ನಮ್ಮ ದೇಶವನ್ನು ಅವರೊಂದಿಗೆ ಹೋಲಿಸಿದ್ದಾರೆ. ನಮ್ಮ ದೇಶದಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ಗಮನಸೆಳೆದಿದ್ದಾರೆ. ಈ ದಶಕದಲ್ಲಿ

ಪುರುಷರಿಂದ ರಚಿತವಾದ ಪ್ರವಾಸ ಕೃತಿಗಳ ಸಂಖ್ಯೆ ಇಪ್ಪತ್ತೇಳು. ಮಹಿಳಾ ಪ್ರವಾಸ ಕಥನಗಳು ಬಂದಿರುವುದು ಕೇವಲ ಎರಡು. ಮಹಿಳಾ ಪ್ರವಾಸಕ್ಕೆ ಈ ದಶಕದಲ್ಲಿಯೂ ಉತ್ತೇಜನವಿಲ್ಲದಿರುವುದು ಕಂಡುಬರುತ್ತದೆ.

ಸೋವಿಯತ್‌ನ ಸಾಂಸ್ಕೃತಿಕ ಸಂಘದ ವತಿಯಿಂದ ಕರ್ನಾಟಕದ ಪ್ರತಿನಿಧಿಯಾಗಿ ಬೈಲೋರಷ್ಯಾಕ್ಕೆ ಉ.ಕಾ. ಸುಬ್ಬರಾಯಾಚಾರ್ ಅವರು ಪ್ರವಾಸಕ್ಕೆ ತೆರಳಿದ್ದರು. ಹತ್ತು ದಿನಗಳ ತಮ್ಮ ಪ್ರವಾಸದ ವಿವರಗಳನ್ನು ದಿನಚರಿ ರೂಪದಲ್ಲಿ ದಾಖಲಿಸಿದ್ದಾರೆ. ಕಡಿಮೆ ಅವಧಿಯ ಪ್ರವಾಸವಾಗಿದ್ದರೂ ಲೇಖಕರು ಚಿತ್ರಿಸುವ ಸಾಂಸ್ಕೃತಿಕ ಒಳನೋಟಗಳು ಪರಿಣಾಮಕಾರಿಯಾದುದಾಗಿದೆ. ಈ ಕೃತಿಯ ಆಧಾರದ ಮೇಲೆ ಹೇಳುವುದಾದರೆ ಒಂದು ದೇಶದ ಆಗುಹೋಗುಗಳನ್ನು ವಿಮರ್ಶಾತ್ಮಕವಾಗಿ ಗ್ರಹಿಸಲು ಕಾಲವೇನು ಮಿತಿಯಾಗುವುದಿಲ್ಲ ಎನಿಸುತ್ತದೆ. ಏಕೆಂದರೆ ದಿನಚರಿ ರೂಪದಲ್ಲಿ ಇದ್ದರೂ ಸಾಮಾಜಿಕ ವಿಶ್ಲೇಷಣೆ, ಶೈಕ್ಷಣಿಕ ಪ್ರಗತಿಯನ್ನು ಅಭಿವೃದ್ದಿಯ ನೆಲೆಯಲ್ಲಿ ದೇಶಗಳನ್ನು ತುಲನೆ ಮಾಡಲು ಸಾಕಷ್ಟು ಅವಕಾಶಗಳಿವೆ ಎಂಬುದಕ್ಕೆ ಈ ಕೃತಿ ನಿದರ್ಶನವಾಗಿದೆ.

ಉ.ಕಾ. ಸುಬ್ಬರಾಯಾಚಾರ್ ಅವರ 'ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು' ಕೃತಿಯಲ್ಲಿ ಈ ಹಿಂದಿನ ಕೃತಿಗಳಲ್ಲಿ ಬಾರದ ವಿಶಿಷ್ಟ ಭಾಗವನ್ನು ಒಳಗೊಂಡಿದೆ. ದಿನಚರಿ ರೂಪದಲ್ಲಿ ಪ್ರವಾಸದ ವಿವರಗಳನ್ನು ದಾಖಲಿಸಿದ ನಂತರ 'ಉಪಸಂಹಾರ' ಎಂಬ ಕೊನೆಯ ಭಾಗವನ್ನು ಸೇರಿಸಿದ್ದಾರೆ. ಈ ಭಾಗದಲ್ಲಿ ಪ್ರವಾಸದಿಂದ ಆದ ಪ್ರಯೋಜನಗಳೇನು?, ತಾನು ಗ್ರಹಿಸಿದ ಮೌಲ್ವಿಕ ಅಂಶಗಳೇನು? ಅದನ್ನು ನಮ್ಮ ಭಾರತೀಯ ಸಂದರ್ಭದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ವಿಶ್ಲೇಷಣಾತ್ಮಕವಾಗಿ ದಾಖಲಿಸಿದ್ದಾರೆ. ಅವರ ಗ್ರಹಿಕೆಯ ಒಟ್ಟು ಸಾರಾಂಶವನ್ನು ಹೀಗೆ ಕ್ರೋಢೀಕರಿಸಬಹುದಾಗಿದೆ. 'ಸೋವಿಯತ್‌ನ ಪೋಷಕರು ಮಕ್ಕಳಿಗೆ ಶಿಕ್ಷಿತರನ್ನಾಗಿಸಲು ಹೆಚ್ಚು ಗಮನ ವಹಿಸುತ್ತಾರೆ. ಕಿಂಡರ್‌ಗಾರ್ಡನ್ ಶಾಲೆಯ ಪದ್ಧತಿ ಅತ್ಯುತ್ತಮವಾದುದು. ಶುಚಿತ್ವಕ್ಕೆ ಹೆಚ್ಚು ಮಹತ್ವವನ್ನು ನೀಡಿದ್ದು ನೈರ್ಮಲ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ಇದೆ. ಸೋವಿಯತ್ ರಷ್ಯಾದಲ್ಲಿ ನಿರುದ್ಯೋಗ ಸಮಸ್ಯೆ ಇಲ್ಲ. ಇಲ್ಲಿ ಎಲ್ಲಾ ಕಾರ್ಮಿಕರಿಗೂ ಅತ್ಯುತ್ತಮ ಸಂಬಳ ವ್ಯವಸ್ಥೆ ಇದೆ. ಎಲ್ಲಾ ಉದ್ಯೋಗಿಗಳಿಗೂ ನಿವೃತ್ತಿಯ ವಯಸ್ಸನ್ನು ನಿಗದಿಗೊಳಿಸಿ ನಿವೃತ್ತಿ ವೇತನ ನೀಡುವ ವ್ಯವಸ್ಥೆ ಮಾಡಿದ್ದಾರೆ. ಈ ದೇಶದಲ್ಲಿ ಭಿಕ್ಷುಕರಿಲ್ಲ. ವೇಶ್ಯಾಗೃಹಗಳಿಲ್ಲ. ಇಲ್ಲಿ ಬದುಕುವ ಪ್ರತಿಯೊಬ್ಬ ನಾಗರಿಕನಿಗೂ ಅವರ ಕುಟುಂಬದ ಗಾತ್ರಕ್ಕೆ ತಕ್ಕಂತೆ ಸುಸಜ್ಜಿತ ವಸತಿ ವ್ಯವಸ್ಥೆ ಸರಕಾರದಿಂದಲೇ ನೀಡಲಾಗಿದೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಲ್ಲಾ ಹಂತದ ಶಿಕ್ಷಣವೂ ಉಚಿತವಾಗಿದೆ. ಸರಕಾರವೇ ವಿದ್ಯಾರ್ಥಿಗಳನ್ನು ಓದಿಸುವ ಜವಾಬ್ದಾರಿ ವಹಿಸಿಕೊಳ್ಳುತ್ತದೆ. ವಿದ್ಯಾರ್ಥಿಗಳಲ್ಲಿ ಶಿಸ್ತಿದೆ. ಮುಷ್ಕರಗಳಿಲ್ಲ. ಧಾರ್ಮಿಕ ಶ್ರದ್ಧೆ, ನಂಬಿಕೆಗೆ ಸಂಬಂಧಿಸಿದಂತೆ ಮುಕ್ತ ಅವಕಾಶಗಳಿವೆ. ತಮಗಿಷ್ಟವಾದ ದೇವರನ್ನು ಪೂಜಿಸಲು ಸಂಪೂರ್ಣವಾದ ಸ್ವಾತಂತ್ರ್ಯವಿದೆ. ಇಲ್ಲಿ ಯಾರಿಗೂ ಕರ್ಮಸಿದ್ಧಾಂತದ ಮೇಲೆ ನಂಬಿಕೆ ಇಲ್ಲ. ವೈದ್ಯಕೀಯ ವ್ಯವಸ್ಥೆ ಸಂಪೂರ್ಣ ಉಚಿತ. ಪ್ರತಿಯೊಬ್ಬ ಸೋವಿಯತ್ ಪ್ರಜೆಯು ವರ್ಷಕ್ಕೆ ಒಮ್ಮೆ ಕಡ್ಡಾಯವಾಗಿ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕೆಂಬ ನಿಯಮವಿದೆ. ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ, ಗೌರವವಿದೆ. ದೇಶದ ಎಲ್ಲಾ ರಂಗಗಳಲ್ಲಿಯೂ ಮಹಿಳೆಯರಿಗೆ ಪುರುಷರಿಗೆ ಸಮಾನವಾಗಿ ಕೆಲಸಮಾಡಲು ಅವಕಾಶಗಳಿವೆ. ಸೋವಿಯತ್ ದೇಶದಲ್ಲಿ ಬೀದಿಯ ಕಾಮಣ್ಣರಿಲ್ಲ. ಮಹಿಳೆಯರೂ ಅಷ್ಟೇ ಆಭರಣಗಳನ್ನು ಧರಿಸಬೇಕು, ವೈಯ್ಯಾರ ಬೆಡಗುಗಳು ಇರಬೇಕೆಂದು

ಅಪೇಕ್ಷಿಸುವುದಿಲ್ಲ. ಭಯವಿಲ್ಲದ, ಮೌಢ್ಯವಿಲ್ಲದ, ಶೋಷಣೆ ಇಲ್ಲದ ವಾತಾವರಣದಲ್ಲಿ ಅಲ್ಲಿನ ಮಹಿಳೆಯರು ಬದುಕುತ್ತಾರೆ. ಮದುವೆಯಾಗದ ಮಹಿಳೆಯರನ್ನು ಸಮಾಜ ದೂಷಿಸುವುದಿಲ್ಲ. ಸಾರ್ವಜನಿಕ ರಸ್ತೆ, ಕಟ್ಟಡಗಳು ಶುಭ್ರ, ನಿರ್ಮಲವಾಗಿರುತ್ತವೆ. ಸುಂದರ ಸ್ವಚ್ಛ ಉದ್ಯಾನವನಗಳು ಇದೆ. ಸೋವಿಯತ್ ದೇಶದವರು ಕಲಾವಂತರು. ತಮ್ಮ ರಾಷ್ಟ್ರ ಕವಿಗಳಿಗೆ ರಾಷ್ಟ್ರದ ವೀರರಿಗೆ, ಕ್ರೀಡಾಪಟುಗಳಿಗೆ ವಿವಿಧ ಕಲಾ ಪ್ರಕಾರಗಳ ಮೂಲಕ ಚಿತ್ರಿಸಿ ಹೆಚ್ಚಿನ ಗೌರವವನ್ನು ಸಲ್ಲಿಸಿದ್ದಾರೆ. ಕಳೆದ ೪೫ ವರ್ಷಗಳಲ್ಲಿ ಆಹಾರ ವಸ್ತುಗಳ ಬೆಲೆಗಳಲ್ಲಿ ಏರಿಳಿತಗಳಿಲ್ಲ. ಧಾನ್ಯಗಳ ಕೊರತೆ ಇಲ್ಲ. ನಮ್ಮ ದೇಶದಂತೆ ಲಾಭಕೋರರ ಹಾವಳಿ ಇಲ್ಲ. ಸುಸಜ್ಜಿತವಾದ ಮೆಟ್ರೋ ವ್ಯವಸ್ಥೆ ಇದೆ. ರಾಜಕೀಯ ಪಕ್ಷಗಳ ಪಕ್ಷಾಂತರದ ಪಿಡುಗು ಇಲ್ಲ. ಯಾವುದೇ ರಾಜಕೀಯ ವ್ಯಕ್ತಿ ಕಮ್ಯುನಿಸ್ಟ್ ಪಕ್ಷದ ಧ್ಯೇಯಗಳನ್ನು ಪಾಲಿಸಲೇಬೇಕು' ಎಂಬ ಅಂಶಗಳನ್ನು ಕ್ರೋಢೀಕರಿಸಿ ನೀಡಿದ್ದಾರೆ. ಈ ಮೇಲಿನ ಅಭಿಪ್ರಾಯಗಳು ರಷ್ಯಾ ದೇಶದ ಬಗ್ಗೆ ಸಮಗ್ರವಾದ ದೃಷ್ಟಿಕೋನವನ್ನು ನೀಡುತ್ತದೆ. ಈ ಪ್ರಮುಖ ಅಂಶಗಳನ್ನು ಗ್ರಹಿಸಿದ ಉ.ಕಾ. ಸುಬ್ಬರಾಯಾಚಾರ್ ಅವರು ನಮ್ಮ ದೇಶದಲ್ಲಿನ ಪದ್ಧತಿ, ಆಚರಣೆ, ಮೂಢನಂಬಿಕೆ, ಸ್ತ್ರೀಯರಿಗೆ ನಾವು ಕೊಟ್ಟಿರುವ ಸ್ಥಾನಮಾನ, ನಮ್ಮ ಶಿಕ್ಷಣ ಪದ್ಧತಿಯ ಅವ್ಯವಸ್ಥೆ, ರಾಜಕೀಯ ಮೇಲಾಟಗಳು, ಜಾತಿ, ಧರ್ಮಗಳ ಬಗೆಗಿನ ಸಿನಿಕತನದ ಪ್ರಜ್ಞೆ ಮೊದಲಾದವುಗಳನ್ನು ನಮಗೆ ನಾವೇ ಹೋಲಿಸಿ ನೋಡಿಕೊಳ್ಳುವಂತೆಯೂ, ನಮ್ಮ ದೇಶದ ಇಂದಿನ ಸ್ಥಿತಿಗೆ ನಮ್ಮಗಳ ಮನಸ್ಥಿತಿಯೇ ಹೇಗೆ ಕಾರಣ ಎಂಬುದನ್ನು ನಮಗೆ ನಾವೇ ಪ್ರಶ್ನಿಸಿಕೊಳ್ಳುವಂತಿದೆ. ಪ್ರವಾಸ ಕಥನ 'ಮಾರ್ಗದರ್ಶಿ ಹೊತ್ತಗೆ ಅಷ್ಟೇ' ಎಂಬ ನಿಲುವಿಗೆ ಉತ್ತರ ನೀಡುವಂತೆಯೂ, ಓದುಗರ ಮನಸ್ಸಿಗೆ ನಾಟುವಂತೆಯೂ ಒಂದು ದೇಶದ ಸಮಗ್ರ ಚಿತ್ರಣವನ್ನು ನೀಡುವಲ್ಲಿ ಈ ಕೃತಿಯು ಸಮರ್ಥವಾಗಿದೆ.

ಭಾರತೀಯ ಸಮಾಜದಲ್ಲಿ ಕೆಳವರ್ಗದವರಾಗಿದ್ದು ಯುರೋಪ್ ಪ್ರವಾಸ ಮಾಡಿದ ಲೇಖಕರು ತುಂಬಾ ವಿರಳ. ದೊರಕಿರುವ ಮಾಹಿತಿಗಳ ಪ್ರಕಾರ ಇದುವರೆಗೆ ಯಾರೂ ಹೋಗಿಲ್ಲ. ಕೆಳವರ್ಗದವರಾದ ಜಿ. ಗೋಪಾಲ್ ಅವರು ಯುರೋಪಿಗೆ ಉನ್ನತ ಅಧ್ಯಯನಕ್ಕಾಗಿ ತೆರಳಿದ ಮೊದಲ ಪ್ರವಾಸಿ ಲೇಖಕರಾಗಿದ್ದಾರೆ. ಅಲ್ಲಿ ಪಡೆದ ಅನುಭವಗಳನ್ನು 'ವೈದ್ಯನ ವಿದೇಶ ಪ್ರವಾಸ' ಕೃತಿಯಲ್ಲಿ ದಾಖಲಿಸಿದ್ದಾರೆ. ಈ ಕೃತಿಯು ಆತ್ಮಕಥೆಯ ಸ್ವರೂಪವನ್ನು ಪಡೆದುಕೊಂಡಿರುವುದು ವಿಶೇಷವಾಗಿದೆ. ಲೇಖಕರು ತಮ್ಮ ವೈದ್ಯ ಪದ್ಧತಿಯ ಮಕ್ಕಳ ಶಸ್ತ್ರಚಿಕಿತ್ಸೆಯಲ್ಲಿ ಉನ್ನತ ಅಧ್ಯಯನಕ್ಕಾಗಿ ಭಾರತ ಸರಕಾರದ ನಿಮ್ನ ವರ್ಗದ ಸ್ಕಾಲರ್‌ಶಿಪ್‌ನ ನೆರವಿನೊಂದಿಗೆ ಲಂಡನ್‌ಗೆ ತೆರಳಿದ್ದಾರೆ. ಪ್ರವಾಸ ವಿವರಗಳ ಜೊತೆಜೊತೆಗೆ ತಮ್ಮ ವೈಯಕ್ತಿಕ ಬದುಕಿನ ಅಂಶಗಳನ್ನು ದಾಖಲಿಸಿದ್ದಾರೆ. ಪ್ರವಾಸ ಕೃತಿಯು ದಲಿತ ಸಂವೇದನೆಯ ನೆಲೆಯಲ್ಲಿ ನಿರೂಪಿತವಾಗಿದೆ. ಅಥೆನ್ಸ್ ನಗರದ 'ಸ್ಟಾವ್‌ರಾಸ್ ಸಿಂಗ್ ಲೋಗ್ಲು' ಎಂಬುವವರು ಸ್ನೇಹಿತರಾದ ಲೇಖಕರನ್ನು 'ನಿಮ್ಮಲ್ಲಿ ಅಸ್ಪೃಶ್ಯರು ಎಂದರೆ ಹೇಗಿರುತ್ತಾರೆ?' ಎಂದು ಪ್ರಶ್ನಿಸಿದಾಗ ಲೇಖಕರು ನಗುತ್ತಲೇ 'ನಾನೇ ಅಸ್ಪೃಶ್ಯನಾಗಿದ್ದರೆ!' ಎಂದು ಮಾರುತ್ತರ ನೀಡಿದ್ದಾರೆ. ಈ ಘಟನೆಯು ಲೇಖಕರ ವೈಯಕ್ತಿಕ ವಿಚಾರ ಎನಿಸಿದರೂ ಸಾಮಾಜಿಕ ಸ್ವರೂಪದ್ದಾಗಿದೆ. ಲೋಗ್ಲು ಅವರು ಕೇಳಿದ ಪ್ರಶ್ನೆಯು ಭಾರತದ ಜಾತಿ ವ್ಯವಸ್ಥೆಯನ್ನು ವರ್ಣವ್ಯವಸ್ಥೆಯೊಂದಿಗೆ ಹೋಲಿಸುವ ಇರಾದೆಯನ್ನು ಸೂಚಿಸುತ್ತದೆ. ಆದರೆ ಲೇಖಕರು ಅವರ ಎದುರಿಗೆ ತಾವು ನಿಜವಾಗಿಯೂ ಅಸ್ಪೃಶ್ಯ ಜಾತಿಯವನು ಎಂದು ಮುಕ್ತವಾಗಿ ಹೇಳಿಕೊಳ್ಳುವುದಿಲ್ಲ. ಕೃತಿಯಲ್ಲಿ ತಮ್ಮ ಜಾತಿಯನ್ನು ಮರೆಮಾಚಿಲ್ಲ. ಲೇಖಕರು ತಾನು ಇಂಗ್ಲೆಂಡಿನಲ್ಲಿರುವಾಗ ತಮ್ಮ ಜಾತಿಯ ಬಗ್ಗೆ ಬೇರೆ ಜನರಿಗೆ ತಿಳಿದರೆ ಹೇಗೆ ಕಾಣುತ್ತಾರೋ? ಎಂಬ ಆತಂಕ ಅವರನ್ನು ಮುಕ್ತವಾಗಿ ತಮ್ಮ

ಜಾತಿಯ ಬಗ್ಗೆ ಹೇಳಿಕೊಳ್ಳಲು ಅಡ್ಡಿಯಾಗಿರುವ ಸಾಧ್ಯತೆ ಇದೆ. ಲೇಖಕರು ತಮ್ಮ ವೈಯಕ್ತಿಕ ನಿಲುವುಗಳನ್ನು ಪ್ರಕಟಿಸಲು ಪ್ರವಾಸ ಕೃತಿಗಳು ನೆರವಾಗುತ್ತವೆ ಎಂಬುದಕ್ಕೆ ಈ ಕೃತಿ ಉದಾಹರಣೆಯಾಗಿದೆ.

ಲೇಖಕರು ಪ್ರವಾಸ ಕೃತಿಯಲ್ಲಿ ಭಾರತ ಮತ್ತು ಇಂಗ್ಲೆಂಡ್ ದೇಶದ ನಡುವಿನ ಆರ್ಥಿಕ ಸಂಬಂಧವನ್ನು ಅಭಿವೃದ್ಧಿಯ ಹಿನ್ನಲೆಯಲ್ಲಿ ತೌಲನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. ಹೀಗೆ ತುಲನೆ ಮಾಡುವಾಗ ಅವರಿಗೆ 'ಭಾರತದಲ್ಲಿನ ಮೇಲು ಕೀಳು ಎಂಬ ತಾರತಮ್ಯ ಭಾವ, ಭ್ರಷ್ಟಾಚಾರ, ಸ್ವಜನಪಕ್ಷಪಾತ, ವ್ಯಾಪಕವಾಗಿ ಬೆಳೆದಿರುವ ಸ್ವಹಿತಾಸಕ್ತಿ ರಾಜಕಾರಣ ಮೊದಲಾದ ಸಮಸ್ಯೆಗಳು ಭಾರತವನ್ನು ಇನ್ನಿಲ್ಲದಂತೆ ಕಾಡುತ್ತಿರುವುದು ಗಮನಕ್ಕೆ ಬರುತ್ತದೆ. ಆದ್ದರಿಂದ ಲೇಖಕರು 'ನಮ್ಮ ದೇಶದ ಇಂದಿನ ಸ್ಥಿತಿಗೆ ಮೇಲ್ವರ್ಗದ ಜನರು ಬಿತ್ತಿದ ಮೂಢನಂಬಿಕೆ ಮತ್ತು ದಬ್ಬಾಳಿಕೆಯೇ ಕಾರಣ' ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಈ ಬಗೆಯ ತೌಲನಿಕ ದೃಷ್ಟಿಕೋನಗಳನ್ನು ನಿರೂಪಿಸುವಾಗ ಕೃತಿಯು ಪ್ರವಾಸ ಕಥನದ ಚೌಕಟ್ಟು ಮೀರಿ ದಲಿತ ಸಂವೇದನೆಯುಳ್ಳ ಕೃತಿಯಾಗಿ ಪರಿಣಮಿಸುತ್ತದೆ. ದೇಶದ ಅಭಿವೃದ್ಧಿಯು ಸ್ವಹಿತಾಸಕ್ತಿ ಸಂಪ್ರದಾಯಗಳ ಕಾರಣದಿಂದ ಕುಂಠಿತವಾಗುವ ಪರಿಯನ್ನು ವಿಶ್ಲೇಷಿಸಿದೆ. ವೈದ್ಯಲೋಕದಲ್ಲಿ ನಡೆಯುವ ಭ್ರಷ್ಟಚಾರದ ವಿವಿಧ ಸ್ವರೂಪಗಳ ವಿವಿರಗಳು ಇದನ್ನೇ ಸೂಚಿಸುತ್ತವೆ. ಭಾರತದ ಕೆಳವರ್ಗದ ಜನರ ಹೀನ ಸ್ಥಿತಿಗೆ ಮೇಲ್ವರ್ಗದ ಜನರ ದಬ್ಬಾಳಿಕೆ ಹೇಗೆ ಕಾರಣವಾಗುತ್ತದೆ ಎಂಬ ಬಗ್ಗೆಯೂ ಚರ್ಚೆ ಮಾಡಿದ್ದಾರೆ.

ಇಂಗ್ಲೆಂಡ್ ದೇಶವು 'ಅಭಿವೃದ್ಧಿ ಹೊಂದಿದ ನಾಗರಿಕರ ದೇಶ' ಎಂಬ ಅಭಿಪ್ರಾಯವನ್ನು ಬಹುತೇಕ ಲೇಖಕರು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯದ ಹಿಂದೆ ಋಣಸಂದಾಯದ ಮನೋಧೋರಣೆ ಇರುವುದು ಸ್ಪಷ್ಟವಾಗಿದೆ. ಸರಕಾರದ ಅನುದಾನದ ಸಹಾಯದಲ್ಲಿ ಯುರೋಪ್‌ಗೆ ಭೇಟಿ ನೀಡಿದ ಲೇಖಕರು ಸರಕಾರದ ಋಣಕ್ಕೆ ಕಟ್ಟುಬಿದ್ದು ಧನಾತ್ಮಕ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಿದ್ದಾರೆ. ಆದರೆ ಜಿ. ಗೋಪಾಲ್ ಅವರು ಯುರೋಪಿನ ಮುಂದುವರಿದ ದೇಶದ ಗುಣಾತ್ಮಕ ಅಂಶಗಳ ಜೊತೆಗೆ ಋಣಾತ್ಮಕ ಅಂಶಗಳನ್ನೂ ಹೇಳಿದ್ದಾರೆ. 'ಇಂಗ್ಲೆಂಡಿನಲ್ಲಿ ಕಳ್ಳರು, ಮೋಸಗಾರರು, ದರೋಡೆಕೋರರು ಇದ್ದಾರೆ. 'ಚೋರ್ ಬಜಾರ್ ಇದೆ' 'ರೌಡಿಸಂ' ಇದೆ, ಹೆಣ್ಣನ್ನು ಭೋಗದ ವಸ್ತುವಾಗಿ ನೋಡುವ 'ಕ್ಯಾಬ್ರೆ ಡಾನ್ಸ್‌ನ' ಪರಿಪಾಠವೂ ಇದೆ ಎಂದು ಹೇಳುವ ಮೂಲಕ ಲಂಡನ್ ನಗರದ ಇನ್ನೊಂದು ಆಯಾಮವನ್ನು ಪರಿಚಯಿಸಿದ್ದಾರೆ. ಈ ಅಂಶಗಳ ಮೂಲಕ ನಿರ್ವಚಿಸಬಹುದಾದ ಅಂಶವೆಂದರೆ ಯಾವ ದೇಶವೂ ಪರಿಪೂರ್ಣವಲ್ಲ. ಪ್ರತಿ ದೇಶವೂ ತನ್ನದೇ ಆದ ಸಮಸ್ಯೆಗಳನ್ನು ಹೊಂದಿರುತ್ತದೆ. ಕೆಲವು ದೇಶಗಳಲ್ಲಿ ಕೆಲವು ಸಮಸ್ಯೆಗಳು ಆಂತರಿಕ ಒತ್ತಡದ ಕಾರಣದಿಂದ ಹೆಚ್ಚಾಗಿರುತ್ತದೆ. ಕೆಲವು ದೇಶಗಳಲ್ಲಿ ಸಮಸ್ಯೆಗಳ ಪ್ರಮಾಣ ಕಡಿಮೆ ಇರುತ್ತದೆ. ಆಯಾ ದೇಶದ ಜನರ ವೈಯಕ್ತಿಕ ಹಿತಾಸಕ್ತಿಗಳು ಮತ್ತು ಅಧಿಕಾರಿವರ್ಗದವರ ಕರ್ತವ್ಯಪರತೆ ಸಮಸ್ಯೆಗಳ ಪ್ರಮಾಣವನ್ನು ನಿರ್ಧರಿಸುತ್ತದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

ಜಿ. ಗೋಪಾಲ್ ಅವರ ಕೃತಿಯಲ್ಲಿ ವ್ಯಕ್ತವಾಗಿರುವ ದಲಿತ ಸಂವೇದನೆಗಳು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಜೊತೆಗೆ ಒಂದು ಜನಪರವಾದ ದೇಶವನ್ನು ಕಾಣುವ ಹಂಬಲ, ತಾರತಮ್ಯರಹಿತ ಸಮಾಜದ ನಿರ್ಮಾಣದ ಕಳಕಳಿ, ಭ್ರಷ್ಟವ್ಯವಸ್ಥೆಯ ನಿರ್ಮೂಲನೆ ಮತ್ತು ಆರ್ಥಿಕವಾಗಿ ಸುಸ್ಥಿರವಾದ ಕುಟುಂಬಗಳನ್ನು ಕಟ್ಟುವ ತುಡಿತ ಕಂಡು ಬರುತ್ತದೆ.

ಹೋ. ಶ್ರೀನಿವಾಸಯ್ಯ ಅವರ 'ಶಶಿ ಕಂಡ ಜರ್ಮನಿ' ಕೃತಿಯು ಪತ್ರರೂಪದ ಪ್ರವಾಸಕೃತಿಯಾಗಿದೆ. ಈ ಕೃತಿಯ ಜಾಣ್ಮೆ ಇರುವುದು ಬರೆವಣಿಗೆ ಶೈಲಿಯಲ್ಲಿ. ಲೇಖಕರು ತಮ್ಮ ಪ್ರವಾಸದ ಅನುಭವಗಳನ್ನು

ಕಾಲ್ಪನಿಕ ವ್ಯಕ್ತಿ 'ಶಶಿ' ಎನ್ನುವವರು ಆತ್ಮೀಯ ಗೆಳತಿ 'ಗೀತಾ' ಅವರಿಗೆ ಪತ್ರದ ಮೂಲಕ ನಿವೇದಿಸುವ ಶೈಲಿಯಲ್ಲಿ ನಿರೂಪಿಸಿದ್ದಾರೆ. ವಾಸ್ತವ ನೆಲೆಗಟ್ಟಿನ ಮೇಲೆ ರೂಪಿತವಾಗುವ ಪ್ರವಾಸ ಕೃತಿಗಳಲ್ಲೂ ಕಾಲ್ಪನಿಕ ಅಂಶಗಳನ್ನು ಸೇರಿಸಿರುವುದು ಸೃಜನಶೀಲ ಬರೆವಣಿಗೆಗೆ ಉದಾಹರಣೆಯಾಗಿದೆ. ಈ ರೀತಿ ಕಾಲ್ಪನಿಕ ಪಾತ್ರಗಳ ಮೂಲಕ ನಿರೂಪಿಸಿರುವುದು ಕನ್ನಡ ಓದಲು ಬರೆಯಲು ಬರುವ ವಿದ್ಯಾರ್ಥಿಗಳಿಗೆ ಆ ದೇಶದ ಶಿಸ್ತು, ಪ್ರಾಮಾಣಿಕತೆ, ದಕ್ಷತೆ ಮತ್ತು ದೇಶಪ್ರೇಮವನ್ನು ಪರಿಚಯಿಸಿಕೊಡುವುದು ಈ ಕೃತಿಯ ಉದ್ದೇಶವಾಗಿದೆ. ಹೊ. ಶ್ರೀನಿವಾಸಯ್ಯನವರು ಗಾಂಧಿ ತತ್ವಗಳ ಪ್ರಚಾರಕರಾಗಿ ಚಿರಪರಿಚಿತರು. ಅವರು ಸಹಜವಾಗಿ ಮಕ್ಕಳಲ್ಲಿ ಗಾಂಧಿತತ್ವಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನೂ ಮಾಡಿದ್ದಾರೆ. ಲೇಖಕರು ಪ್ರಮುಖವಾಗಿ ತಮ್ಮ ಬರೆವಣಿಗೆಯಲ್ಲಿ ಮಕ್ಕಳಿಗೆ ಸರಳವಾಗಿ ಬೇರೊಂದು ದೇಶದ ಸಾಂಸ್ಕೃತಿಕ ಬದುಕನ್ನು ಅರ್ಥೈಸಿಕೊಡುವ ಉದ್ದೇಶವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಜರ್ಮನಿ ದೇಶವು ಎರಡನೇ ಮಹಾಯುದ್ಧದ ಬಳಿಕ ಮತ್ತೆ ಹೇಗೆ ಪುಟಿದೆದ್ದಿದೆ? ಅದರಲ್ಲಿ ಆ ಜನರ ಕಾರ್ಯದಕ್ಷತೆ ಹೇಗಿತ್ತು? ಅವರು ತಮ್ಮ ಕರ್ತವ್ಯ ಪಾಲನೆಯಲ್ಲಿನ ಶಿಸ್ತು, ನೈಪುಣ್ಯತೆ ಹಾಗು ಕೌಶಲ್ಯತೆಯಿಂದ ಇಡೀ ಪ್ರಪಂಚದಲ್ಲಿಯೇ ಹೇಗೆ ಶ್ರೀಮಂತ ರಾಷ್ಟ್ರಗಳ ಪಟ್ಟಿಗೆ ಬಂದರು? ಎಂಬುದರ ಬಗ್ಗೆ ಮಕ್ಕಳಲ್ಲಿ ಅರಿವನ್ನು ಉಂಟುಮಾಡುವ ಕೃತಿಯಾಗಿದೆ. ಆದ್ದರಿಂದ ಕೈಗಾರಿಕೆ, ವ್ಯವಸಾಯ ಹಾಗೂ ಶಿಕ್ಷಣ ಪದ್ಧತಿ ಮೊದಲಾದ ಕ್ಷೇತ್ರಗಳ ಪ್ರಗತಿಯ ಬಗ್ಗೆ ದಾಖಲಿಸಿದ್ದಾರೆ. ಅದರ ಜೊತೆ ಜೊತೆಯಲ್ಲಿಯೇ ನಮ್ಮ ದೇಶ ಹಿಂದುಳಿದಿರುವಿಕೆಗೆ ಭಾರತೀಯರ ಋಣಾತ್ಮಕ ಮನೋಭಾವ, ಸೋಮಾರಿತನ ಹೇಗೆ ಕಾರಣ ಎಂಬುದನ್ನು ತೌಲನಿಕವಾಗಿ ವಿಮರ್ಶಿಸಿದ್ದಾರೆ. ಸರಳ ನಿರೂಪಣಾ ಶೈಲಿಯನ್ನು ಹೊಂದಿರುವ ಈ ಕೃತಿಯಲ್ಲಿ ಮಕ್ಕಳಲ್ಲಿ ರಾಷ್ಟ್ರಪ್ರೇಮವನ್ನು ಜಾಗೃತಿ ಮೂಡಿಸುವ ನೆಲೆಗಳಿವೆ. ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ನಾಗರಿಕನ ಪಾತ್ರವೇನು ಎನ್ನುವುದರ ಬಗ್ಗೆ ಚಿಂತನೆಗಳಿವೆ. ಶ್ರಮ ಸಂಸ್ಕೃತಿಯೇ ದೇಶದ ಆಧಾರ ಸ್ಥಂಭ ಎಂಬ ಸಂದೇಶವಿದೆ. ಪ್ರವಾಸ ಕೃತಿಯ ಮೂಲಕ ದೇಶದ ಬಗೆಗೆ ಅಭಿಮಾನ ಮೂಡಿಸುವ, ನಾಗರಿಕರ ಕರ್ತವ್ಯಗಳ ಬಗ್ಗೆ ತಿಳಿ ಹೇಳುವ, ಪರಿಚಯಿಸುವ ಉಪಯುಕ್ತ ಅಂಶಗಳಿರುವುದನ್ನು ಗುರುತಿಸಲಾಗಿದೆ.

ಇಟಲಿಯ ಸರಕಾರದ ಶಿಷ್ಯವೇತನದ ಸಹಾಯದಿಂದ ಸುಮಾರು ಆರು ತಿಂಗಳ ಕಾಲ "ಇಸ್ವೇ" ಅಧ್ಯಯನ ಸಂಸ್ಥೆಯಲ್ಲಿ ಉನ್ನತ ಅಧ್ಯಯನಕ್ಕಾಗಿ ತೆರಳಿದ ಕು.ಶಿ ಹರಿದಾಸಭಟ್ಟ ಅವರು ತಮ್ಮ ಅನುಭವಗಳನ್ನು 'ಇತಾಲಿಯಾ ನಾನು ಕಂಡಂತೆ' ಎಂಬ ಪ್ರವಾಸ ಕೃತಿಯಲ್ಲಿ ದಾಖಲಿಸಿದ್ದಾರೆ. ಇದು ದಿನಚರಿ ರೂಪದಲ್ಲಿರುವ ಕೃತಿ. "ಇಸ್ವೇ" ಎಂಬ ಸಂಸ್ಥೆಯು ದೇಶದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡುತ್ತದೆ. ಲೇಖಕರು ಈ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿ ಸೇರಿಕೊಂಡಿದ್ದಾರೆ. ಈ ಸಂಸ್ಥೆಯ ಆಡಳಿತ ವ್ಯವಸ್ಥೆ, ಕಾರ್ಯ ನಿರ್ವಹಿಸುವ ಬಗೆ, ಪಾಠಬೋಧಿಸುವ ಕ್ರಮ, ಪಠ್ಯಕ್ರಮ ಹೀಗೆ ಸವಿವರವಾದ ಮಾಹಿತಿಯನ್ನು ಕೃತಿಯಲ್ಲಿ ದಾಖಲಿಸಿದ್ದಾರೆ.

'ಇತಾಲಿಯಾ ನಾನು ಕಂಡಂತೆ' ಕೃತಿಯ ವೈಶಿಷ್ಟ್ಯವೆಂದರೆ ಯುರೋಪ್ ಸಮಾಜವನ್ನು ಮತ್ತು ಅವರ ಸಾಂಸ್ಕೃತಿಕ ಬದುಕನ್ನು ಅಚ್ಚುಕಟ್ಟಾಗಿ ತಿಳಿ ಹೇಳುವ ಬರೆವಣಿಗೆ ಶೈಲಿ ಆತ್ಮಕಥನ ರೂಪದಲ್ಲಿದೆ. ಲೇಖಕರು ಬೆರಗು ಕಣ್ಣುಗಳಿಂದಲೇ ನೋಡುತ್ತಾ ಅವರ ಕಾಣುವಿಕೆಗೆ ದಕ್ಕುವ ಅಷ್ಟೂ ನೋಟಗಳನ್ನು ಸಹೃದಯರಿಗೆ ಮುಟ್ಟಿಸುವ ಪ್ರಯತ್ನ ಮಾಡಿದ್ದಾರೆ. ಸಾಂಪ್ರದಾಯಿಕ ಶೈಲಿಯ ಪ್ರವಾಸ ಕೃತಿಯಂತಿಲ್ಲ. ಕ್ಷೇತ್ರ ಅಧ್ಯಯನದ ವಿವರವಾದ ವರದಿ ಎಂಬಂತೆ ಭಾಸವಾಗುತ್ತದೆ. ಅಂಕಿ ಅಂಶಗಳ ವಿವರಗಳೊಂದಿಗೆ

ಯಾವತ್ತೂ ನಡೆದ ಘಟನಾವಳಿಗಳನ್ನು ಇದ್ದಂತೆ ಕಟ್ಟಿಕೊಟ್ಟಿದ್ದಾರೆ. ಇಟಲಿಯ ಜನರ ಜೀವನ ಶೈಲಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು, ಕಲೆ ಮತ್ತು ವಾಸ್ತುಶಿಲ್ಪಗಳ ಬಗ್ಗೆ ಸವಿವರವಾಗಿ ಬರೆದಿದ್ದಾರೆ.

ಕು.ಶಿ. ಹರಿದಾಸ ಭಟ್ಟ ಅವರು ಇಟಲಿಯ ಜನರಿಗೆ ಮನರಂಜನಾ ಮಾಧ್ಯಮಗಳಲ್ಲಿರುವ ಆಸಕ್ತಿಯ ಕುರಿತು ವಿವರಿಸಿದ್ದಾರೆ. ಇಟಲಿಯಲ್ಲಿ ಆರು ತಿಂಗಳ ಧೀರ್ಘ ಅವಧಿಯವರೆಗೆ ವಿದ್ಯಾಭ್ಯಾಸ ಮಾಡಲು ಇದ್ದುದರಿಂದ ಅಲ್ಲಿನ ಜನರ ರೀತಿ, ನಡೆವಳಿಕೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಸಾಂಸ್ಕೃತಿಕವಾಗಿ ಇಟಲಿಯು ಸಂಪದ್ಭರಿತವಾದ ದೇಶ. ಜನರನ್ನು ಮನರಂಜಿಸಲು ನಾಟಕ, ಅಪೆರಾ, ಸಿನೆಮಾಗಳಿವೆ. ಇಲ್ಲಿ ಅಪೆರಾಗಳಿಗೆ ಎಲ್ಲಿಲ್ಲದ ಬೇಡಿಕೆ ಇದೆ. ಎಷ್ಟೆಂದರೆ 'ಇಲ್ಲಿನ ಜನ ಸಿನೆಮಾಗಳಿಗೆ ಹೋಗುವುದಿಲ್ಲ. ನಮ್ಮಲ್ಲಿ ದೇವಸ್ಥಾನಗಳಿಗೆ ಹೋಗುವಂತೆ ಇಲ್ಲಿನ ಜನ ಅಪೆರಾಗಳಿಗೆ ಹೋಗುತ್ತಾರೆ' ಎಂದು ಲೇಖಕರು ಹೇಳಿದ್ದಾರೆ. ಭಾರತೀಯರ ಧಾರ್ಮಿಕ ಮನಸ್ಥಿತಿಗೂ, ಇಟಲಿಯ ಜನರ ಅಪೆರಾ ಪ್ರೀತಿಗೂ ಹೋಲಿಸುವಾಗ ವ್ಯಂಗ್ಯದ ಧ್ವನಿ ವ್ಯಕ್ತವಾಗಿದೆ. ಅಪೆರಾಗಳು ತುಂಬಿ ಪ್ರವೇಶ ಚೀಟಿ ಸಿಗದಿರುವಷ್ಟು ಬೇಡಿಕೆ ಹೆಚ್ಚಿರುತ್ತದಂತೆ. ಸಿನಿಮಾ ಮಂದಿರಗಳಿಗೆ ಹೋಗುವ ಅಭಿರುಚಿ ಉಳ್ಳವರ ಸಂಖ್ಯೆ ಕಡಿಮೆ. ಆದ್ದರಿಂದ ಇಲ್ಲಿನ ಸಿನೆಮಾ ಥಿಯೇಟರ್‌ಗಳ ಮಾಲಿಕರು ಜನರನ್ನು ತಮ್ಮತ್ತ ಆಕರ್ಷಿಸಲು ಕೆಲ ತಂತ್ರಗಳನ್ನು ಬಳಸುತ್ತಾರೆ. ಸಿನಿಮಾ ಮಂದಿರಗಳಲ್ಲಿಯೇ ಬಟ್ಟೆ ತೊಳೆಯುವ ಯಂತ್ರಗಳನ್ನು ಇಡಲಾಗುತ್ತದೆ. ಬಟ್ಟೆ ತೊಳೆಯಲು ಬರುವವರು ಯಂತ್ರಗಳಿಗೆ ಬಟ್ಟೆಯನ್ನು ತೊಳೆಯಲು ಹಾಕಿ, ಆ ಸಮಯದಲ್ಲಿ ಸಿನೆಮಾ ನೋಡುತ್ತಾರೆ. ಇದರಿಂದ ಸಿನಿಮಾ ಮಂದಿರದ ಮಾಲಿಕರಿಗೆ ಆದಾಯ ದ್ವಿಗುಣವಾಗುತ್ತದೆ. ಆದರೂ ಅಪೆರಾಗಳಿಗೆ ಹೋಲಿಸಿದರೆ ಸಿನಿಮಾ ನೋಡುವವರ ಪ್ರಮಾಣ ಕಡಿಮೆಯೇ ಎಂದಿದ್ದಾರೆ. ಲೇಖಕರ ಅಭಿಪ್ರಾಯವನ್ನು ವಿಶ್ಲೇಷಿಸಿದಾಗ ಇಟಲಿಯ ಜನರಲ್ಲಿ ಸಿನೆಮಾಗಳಿಗೆ ಹೋಗುವುದು ಎಂದರೆ ಸಾಮಾಜಿಕವಾಗಿ ಗೌರವ ಕಡಿಮೆ ಎಂಬ ಭಾವನೆ ಬೆಳೆದಿದೆ ಎನಿಸುತ್ತದೆ. ನಾಟಕ, ಅಪೆರಾಗಳ ಮುಂದೆ ಸಿನೆಮಾಗಳನ್ನು ಪ್ರೀತಿಸುವವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದು ಈ ಅಭಿಪ್ರಾಯಕ್ಕೆ ಕಾರಣವಾಗಿದೆ. ಲೇಖಕರು ನೀಡಿರುವ ಈ ಒಳನೋಟವು 'ಸಾಂಸ್ಕೃತಿಕ ಜಗತ್ತನ್ನು ರೂಪಿಸುವ ಅಭಿರುಚಿ ಪ್ರಜ್ಞೆ ಹೇಗೆ ತನ್ನ ಅಸ್ತಿತ್ವವನ್ನು ರಚಿಸಿಕೊಳ್ಳುತ್ತದೆ' ಎಂಬುದನ್ನು ನಿರೂಪಿಸಿದೆ. ಅಪೆರಾ, ನಾಟಕಗಳಂತಹ ಮನರಂಜನಾ ಕ್ಷೇತ್ರವು ತನ್ನ ವ್ಯಾಪ್ತಿಯನ್ನು ರಾಷ್ಟ್ರಾದ್ಯಂತ ವಿಸ್ತರಿಸಿ ಭದ್ರಪಡಿಸಿಕೊಂಡು ಯಜಮಾನಿಕೆಯನ್ನು ಸ್ಥಾಪಿಸಿಕೊಂಡಿರುವುದು ಸೋಜಿಗದ ಸಂಗತಿಯಾಗಿದೆ. ಸಾಂಸ್ಕೃತಿಕವಾಗಿ ಇಂತಹ ಯಜಮಾನ್ಯತನವು ಮತ್ತೊಂದು ಮನರಂಜನಾ ಕ್ಷೇತ್ರದ(ಸಿನಿಮಾ) ಮೇಲೆ ಋಣಾತ್ಮಕವಾದ ಪ್ರಭಾವ ಬೀರುವುದು ನವ ಸಾಂಸ್ಕೃತಿಕತೆಗೆ ಕಾರಣವಾಗಿದೆ. ಅಪೆರಾಗಳಿಗೆ ಬೇಡಿಕೆ ಇರುವ ಕಾರಣದಿಂದ ಅಪೆರಾಗಳಲ್ಲಿ ವಾದ್ಯಗಾರರಾಗಿ ದುಡಿಯುವವರಿಗೆ ಪ್ರಪಂಚದಾದ್ಯಂತ ಬೇಡಿಕೆ ಇದೆ ಎಂದು ಲೇಖಕರು ಹೇಳಿದ್ದಾರೆ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಅಪೆರಾಗಳಲ್ಲಿ ಸಂಗೀತ ವಾದ್ಯ ನುಡಿಸುವ ವಾದ್ಯಗಾರರಲ್ಲಿ ಇಟಲಿಯರ ಸಂಖ್ಯೆ ವಿಪುಲ ಪ್ರಮಾಣದಲ್ಲಿದೆ. ಅಪೆರಾಗಳ ಮೇಲೆ ಜನರ ಒಲವು ಅಧಿಕವಾಗಿರುವ ಕಾರಣ ಸಂಗೀತಗಾರರಿಗೆ ವಿಪುಲ ಅವಕಾಶಗಳನ್ನು ಒದಗಿಸಿಕೊಟ್ಟಿದೆ. ಅಪೆರಾಗಳು ಇಟಲಿಯ ನಿರುದ್ಯೋಗ ಸಮಸ್ಯೆಗೆ ತಕ್ಕಮಟ್ಟಿಗೆ ಪರಿಹಾರವಾಗಿದೆ ಎನಿಸುತ್ತದೆ.

'ಏಕಾಕಿ ಪ್ರವಾಸಿ' ದೊಡ್ಡೇರಿ ವೆಂಕಟಗಿರಿರಾವ್ ಅವರ ಒಂದು ಸಚಿತ್ರ ಪ್ರವಾಸ ಕಥನ. ಈ ಕೃತಿಯಲ್ಲಿ ಸಾಂಸ್ಕೃತಿಕ ಅಂಶಗಳು ವಿಪುಲ ಪ್ರಮಾಣದಲ್ಲಿದೆ. ಲೇಖಕರು ತಮ್ಮ ಪ್ರವಾಸ ಕಾಲದಲ್ಲಿ

ಅನುಭವಕ್ಕೆ ಬಂದ ಘಟನಾಂಶಗಳಲ್ಲಿ ಭಾಷೆ, ಸ್ಥಳ, ಪುರಾಣ, ಐತಿಹ್ಯಗಳನ್ನು ಭಾರತದ ದೇಶದಲ್ಲಿನ ಸ್ಥಳ, ಭಾಷೆ, ಪುರಾಣ, ಐತಿಹ್ಯಗಳಿಗೆ ಹೋಲಿಸಿ ತೌಲನಿಕ ದೃಷ್ಟಿಕೋನದೊಂದಿಗೆ ವಿವರಿಸಿದ್ದಾರೆ. ಅಥೆನ್ಸ್‌ನ 'ಅಕ್ರೋಪೋಲಿಸ್' ಎಂಬ ವಸ್ತು ಸಂಗ್ರಹಾಲಯದಲ್ಲಿ ಅನೇಕ ಗ್ರೀಕ್ ಶಿಲ್ಪಗಳಿವೆ. ಇಲ್ಲಿ 'ಅಥೆನಾ' ಮತ್ತು 'ಪೊಯೆಡೆನ್' ದೇವತೆಗಳು ಅಥೆನ್ಸ್ ನಗರದ ಪ್ರಧಾನ ದೇವತೆಗಳಾಗಲು ಪರಸ್ಪರ ಹೊಡೆದಾಡಿದ ಬಗ್ಗೆ ಒಂದು ಪೌರಾಣಿಕ ಕಥೆ ಇದೆ ಎಂದಿದ್ದಾರೆ. ಈ ಪೌರಾಣಿಕ ಕಥೆಯು ಭಾರತೀಯ ಪುರಾಣಗಳಲ್ಲಿನ ಕಥೆಗಳೊಂದಿಗೆ ಹೋಲಿಕೆಯಾಗುತ್ತದೆ ಇಂದ್ರ ಪದವಿಗಾಗಿ ದೇವ-ದಾನವರ ನಡುವೆ ನಡೆದಿರುವ ಯುದ್ಧಗಳನ್ನು ನೆನಪಿಸುತ್ತದೆ. ಈ ವಸ್ತು ಸಂಗ್ರಹಾಲಯದಲ್ಲಿ 'ಅಥೆನಾ ದೇವತೆಯು ಬಗ್ಗಿ ತನ್ನ ಪಾದರಕ್ಷೆಗಳನ್ನು ಸರಿ ಪಡಿಸಿಕೊಳ್ಳುತ್ತಿರುವ ಉಬ್ಬು ಶಿಲ್ಪವಿರುವುದನ್ನು ಗುರುತಿಸಿ ಖಜುರಾಹೋ ಅಥವಾ ಕೋನಾರ್ಕ್ ದೇವಸ್ಥಾನದಲ್ಲಿನ ಉಬ್ಬು ಶಿಲ್ಪಗಳಿಗೆ ಹೋಲಿಕೆ ಆಗುತ್ತದೆ' ಎಂದು ಲೇಖಕರು ತೌಲನಿಕ ದೃಷ್ಟಿಕೋನದೊಂದಿಗೆ ವಿವರಿಸಿದ್ದಾರೆ. ಲೇಖಕರು ಭಾರತೀಯ ಹಿಂದೂ ಪರಿಕಲ್ಪನೆಯ ಹಿನ್ನೆಲೆಯವರು. ಆದ್ದರಿಂದ ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ಗುರುತಿಸಲು ಸಾಧ್ಯವಿದೆ. ಪ್ರವಾಸಿ ಲೇಖಕರು ಮುಕ್ತ ಮನಸ್ಸಿನಿಂದ ಯಾವುದರ ಪ್ರಭಾವಕ್ಕೂ ಒಳಗಾಗದೇ ಬರೆಯಲು ಸಾಧ್ಯವಿಲ್ಲ ಎಂಬುದನ್ನು ಈ ಅಂಶಗಳು ನಿರೂಪಿಸಿದೆ. ರೋಂ ನಗರದಲ್ಲಿ ಗುರು, ಶುಕ್ರ, ಶನಿಯ ದೇವಾಲಯಗಳಿರುವುದನ್ನು, ಮಂಗಳ ಶುಕ್ರ ಗ್ರಹಗಳ ಪೂಜಾ ಮಂದಿರಗಳು ಇರುವುದನ್ನು ಲೇಖಕರು ಗುರುತಿಸಿದ್ದಾರೆ. ಅಕ್ರೋಪೊಲಿಸ್ ಮ್ಯೂಸಿಯಂನಲ್ಲಿ ರೋಮ್ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಾಲ್ಕು ಕುದುರೆಗಳಿಂದ ಎಳೆಯಲ್ಪಡುವ ದೇವತಾರಥದ ಕಂಚಿನ ಪ್ರತಿಮೆ ಇದೆ. ಈ ಕಲ್ಪನೆಯು ಶ್ರೀಕೃಷ್ಣ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸುವ ಕಲ್ಪನೆಯೊಂದಿಗೆ ಸಾಮ್ಯತೆಯನ್ನು ಹೊಂದಿದೆ. ಜಲದೇವತೆ 'ಮಿನರ್ವ' ಮತ್ತು 'ನೆಪ್ಚೂನ್ ಎಂಬ ಕಡಲ ದೇವತೆಗಳ ಪರಿಕಲ್ಪನೆಗಳು ಕ್ರಮವಾಗಿ ಗಂಗಾಮಾತೆ ಮತ್ತು ಸಮುದ್ರರಾಜನ ಪರಿಕಲ್ಪನೆಗಳೊಂದಿಗೆ ಹೊಂದಿಕೆ ಆಗುತ್ತದೆ. ಈ ಪೌರಾಣಿಕ ಕಲ್ಪನೆಗಳಲ್ಲಿ ಭಾರತೀಯತೆಯನ್ನು ಗುರುತಿಸಲು ಸಾಧ್ಯವಾಗಿದೆ. ಲೇಖಕರು ಈ ಅಂಶಗಳನ್ನೆಲ್ಲಾ ಉಲ್ಲೇಖಿಸುವ ಮೂಲಕ ಗ್ರೀಕ್ ಮತ್ತು ರೋಮ್‌ನ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯೊಂದಿಗೆ ಹೊಂದಿಕೆ ಆಗುತ್ತದೆ ಎಂದಿದ್ದಾರೆ. ಭಾರತೀಯ ಪೌರಾಣಿಕ ಕಲ್ಪನೆಗೂ ರೋಮಿನ ಪೌರಾಣಿಕ ಕಲ್ಪನೆಗೂ ನಡುವೆ ಸಾಮ್ಯತೆಯನ್ನು ಗುರುತಿಸಿದ ಲೇಖಕರ ಮನೋಧೋರಣೆಯು ಭಾರತೀಯ ಸಾಂಸ್ಕೃತಿಕತೆಯ ಪ್ರಭಾವದ ಪರಿಣಾಮ ಎಂಬುದಕ್ಕೆ ನಿದರ್ಶನವಾಗಿದೆ.

ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್ ನೂತನ ಫ್ಯಾಷನ್‌ಗಳನ್ನು ಜಗತ್ತಿಗೆ ಪರಿಚಯಿಸುವ ನಗರ. ಯುರೋಪ್ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಸಾಮ್ಯತೆ ಇರುವ ಅಂಶಗಳು ಮತ್ತು ಸಾಮ್ಯತೆ ಇಲ್ಲದ ಕೆಲವು ಅಂಶಗಳು ಪ್ಯಾರಿಸ್‌ನಲ್ಲಿದೆ. ಪ್ಯಾರಿಸ್‌ನ ಪ್ರಮುಖ ಬೀದಿಗಳಲ್ಲಿ ಮತ್ತು ಉದ್ಯಾನಗಳಲ್ಲಿ ಸ್ತ್ರೀ-ಪುರುಷರ ನಗ್ನ ಶಿಲ್ಪಗಳನ್ನು ಕಾಣಬಹುದು. ಅದು ಇಲ್ಲಿ ತೀರಾ ಸಾಮಾನ್ಯವಾಗಿರುತ್ತದೆ. ಭಾರತೀಯ ಸಂದರ್ಭದಲ್ಲಿ ಸಾರ್ವಜನಿಕವಾಗಿ ರಸ್ತೆಗಳಲ್ಲಿ ಮತ್ತು ಚೌಕಗಳಲ್ಲಿ ಈ ಬಗೆಯ ನಗ್ನ ಆಕೃತಿಗಳನ್ನು ಪ್ರದರ್ಶಿಸುವುದು ಒಪ್ಪಿತವಾಗುವುದಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ನಗ್ನತೆಗೂ ದೈವೀ ಕಲ್ಪನೆಯ ಹಿನ್ನೆಲೆ ಇದೆ. ಅದನ್ನು ಪೂಜ್ಯಭಾವದಿಂದ ಕಾಣುವಂತೆ ದೇವಸ್ಥಾನಗಳಲ್ಲಿ, ಪೂಜಾಸ್ಥಳಗಳಲ್ಲಿ ಪ್ರದರ್ಶಿಸಲಾಗಿದೆ. ಜೈನ ಮತ್ತು ಬೌದ್ಧ ಧರ್ಮಗಳಲ್ಲಿಯೂ ನಗ್ನತೆಯನ್ನು ಪೂಜ್ಯಭಾವದಿಂದ ಕಾಣುವ ಸಂಸ್ಕೃತಿಯನ್ನು ಅನುಸರಿಸಲಾಗುತ್ತದೆ. ಅದನ್ನು ಹೊರತುಪಡಿಸಿ ನಗ್ನ ಶಿಲ್ಪಗಳನ್ನು ಯುರೋಪಿನ ದೇಶಗಳಲ್ಲಿ ಪ್ರದರ್ಶಿಸುವಂತೆ ರಸ್ತೆಗಳಲ್ಲಿ,

ಚೌಕಗಳಲ್ಲಿ ಪ್ರದರ್ಶಿಸುವ ಸಂಸ್ಕೃತಿ ಭಾರತದಲ್ಲಿ ವಿರಳವಾಗಿದೆ. ನಮ್ಮ ಸಂಸ್ಕೃತಿಯಲ್ಲಿ ದೇಹದ ಅಂಗಾಂಗಗಳು ಪ್ರದರ್ಶನದ ವಸ್ತುಗಳಲ್ಲ. ನಗ್ನತೆಯ ಬಗ್ಗೆ ಬಹಿರಂಗವಾಗಿ ಮಾತನಾಡಿದರೆ ಅಪರಾಧವೆಂಬಂತೆ ನೋಡಲಾಗುತ್ತದೆ. ದೇಹವು ಪಂಚಭೂತಗಳಿಂದ ನಿರ್ಮಾಣವಾಗಿದ್ದು, ಪವಿತ್ರವಾದುದು ಎಂಬ ನಂಬಿಕೆ ಇದೆ. ಅದು ದೈವೀ ಕಲ್ಪನೆಗಳೊಂದಿಗೆ ಬೆಸೆದುಕೊಂಡಿದೆ. ಅದೊಂದು ಸಾಮಾಜಿಕ ಸಂಸ್ಕಾರವಾಗಿ ರೂಪುಗೊಂಡಿದೆ. ಆದುದರಿಂದಲೇ ದೊಡ್ಡೇರಿ ವೆಂಕಟಗಿರಿರಾವ್ ಅವರು ಆ ನಗ್ನ ಶಿಲ್ಪಗಳನ್ನು ಕಂಡು 'ಇದು ನಮಗೆ ಅಸಹ್ಯಕರ' ಎನ್ನುತ್ತಾರೆ. ಲೇಖಕರು ಭಾರತೀಯ ಸಂಸ್ಕಾರದ ಪ್ರಭಾವದಿಂದ ಈ ರೀತಿಯ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ಕಂಡುಕೊಳ್ಳಲಾಗಿದೆ.

೧೯೮೦ರ ದಶಕದ ಹಿಂದಿನ ಪ್ರವಾಸ ಕಥನಗಳಲ್ಲಿ ಹೆಚ್ಚು ಕೃತಿಗಳು ಪುರುಷ ಕೇಂದ್ರಿತ ನೆಲೆಯಲ್ಲಿ ನಿರೂಪಿತವಾಗಿರುವುದು ಕಂಡುಬರುತ್ತದೆ. ಸ್ತ್ರೀ ಸಂವೇದನೆಯ ನೆಲೆಯಲ್ಲಿ ಪ್ರಕಟಗೊಂಡ ಎರಡನೇ ಕೃತಿ 'ಅನುಪಮಾ ನಿರಂಜನ' ಅವರ 'ಅಂಗೈಯಲ್ಲಿ ಯೂರೊ ಅಮೆರಿಕಾ'. ಈ ಕೃತಿಯ ವಿಶೇಷವೆಂದರೆ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ವಿಚಾರ ವಿಮರ್ಶೆ ಮಾಡುವುದರ ಜೊತೆಗೆ, ಚಾರಿತ್ರಿಕ ಸಂಗತಿಗಳನ್ನು ಮೆಲುಕು ಹಾಕುತ್ತಾ, ವಾಸ್ತವದೊಂದಿಗೆ ಮುಖಾಮುಖಿಯಾಗುವುದು. ಕೇವಲ ಪ್ರವಾಸದ ವಿವರಣೆ ಅನುಭವಗಳ ಅಭಿವ್ಯಕ್ತಿಯಾಗುತ್ತದೆ. ಇತಿಹಾಸವು ಸೇರ್ಪಡೆಗೊಂಡಾಗ ಓದುಗರಿಗೆ ಅನುಭವಗಳ ಜೊತೆಗೆ ಸಾಮಾನ್ಯ ಜ್ಞಾನವನ್ನೂ ಪಡೆದಂತಾಗುತ್ತದೆ.

ಮಾನವನೊಳಗೆ ತಾರತಮ್ಯ ಭಾವ ಕಾಲ ದೇಶಗಳನ್ನು ಮೀರಿದ ಒಂದು ಜಾಡ್ಯ. ಅದು ಎಲ್ಲಾ ದೇಶಗಳಲ್ಲೂ ಬೇರೆ ಬೇರೆ ರೂಪಗಳಲ್ಲಿ ವ್ಯಾಪಿಸಿದೆ. ಯುರೋಪ್‌ನ ಬಹುತೇಕ ದೇಶಗಳಲ್ಲಿ ವರ್ಣಭೇದ ನೀತಿ ಆಚರಣೆಯಲ್ಲಿರುವ ಬಗ್ಗೆ ಪ್ರವಾಸ ಕೃತಿಗಳಲ್ಲಿ ಉಲ್ಲೇಖಗೊಂಡಿದೆ. ಫ್ರಾನ್ಸ್‌ನಲ್ಲಿ ಅನುಪಮಾ ನಿರಂಜನ ಅವರಿಗೆ ತಾವು ಪ್ರಯಾಣಿಸುತ್ತಿದ್ದ ರೈಲಿನ ಕಂಪಾರ್ಟ್‌ಮೆಂಟ್‌ನಲ್ಲಿದ್ದ ಇಬ್ಬರು ನೀಗ್ರೋ ಯುವಕರ ಭೇಟಿಯಾಗುತ್ತದೆ. ಲೇಖಕಿ ಅವರನ್ನು ಉದ್ದೇಶಿಸಿ 'ಇಲ್ಲಿನ ಜನ ನಿಮ್ಮನ್ನು ಹೇಗೆ ನೋಡಿಕೊಳ್ಳುತ್ತಾರೆ? ಎಂದು ಪ್ರಶ್ನಿಸಿದಾಗ ನೀಗ್ರೋ ಯುವಕರು "ಎಲ್ಲ ಕಡೆಯೂ ಒಂದೇ ರೀತಿ. ಕರಿಯರನ್ನು ಕಂಡ್ರೆ ಬಿಳಿಯರಿಗೆ ಯಾವಾಗ್ಲೂ ಅಷ್ಟಕ್ಕಷ್ಟೆ."(ಅಂಗೈಯಲ್ಲಿ ಯೂರೊ-ಅಮೆರಿಕಾ., ಅನುಪಮಾ ನಿರಂಜನ., ಪು-೬೦)ಎನ್ನುತ್ತಾರೆ. ಈ ಮಾತನ್ನು ಕೇಳಿದ ಲೇಖಕಿಯ ಪ್ರತಿಕ್ರಿಯೆಯು ನಿರಾಶಾದಾಯಕವಾಗಿದೆ. ಭಾರತದಲ್ಲಿನ ಜಾತಿಪದ್ಧತಿಯ ಅವ್ಯವಸ್ಥೆಯೊಂದಿಗೆ ತೌಲನಿಕ ದೃಷ್ಟಿಯಿಂದ ಹೋಲಿಸುತ್ತಾ ವಿಶ್ವಮಾನವತ್ವದ ಕಲ್ಪನೆಗೆ ಯುರೋಪಿನಲ್ಲಿಯೂ ನೆಲೆ ಇಲ್ಲದಿರುವ ಬಗ್ಗೆ ಮರಗುತ್ತಾರೆ. ಈ ಘಟನೆಯನ್ನು ಅವಲೋಕಿಸಿದಾಗ ಲೇಖಕಿಯ ಮನಸ್ಸು ತಾರತಮ್ಯರಹಿತ ಸಮಾಜದ ನಿರ್ಮಾಣಕ್ಕೆ ಹಾತೊರೆಯುತ್ತಿದೆ ಎನಿಸುತ್ತದೆ. ಲೇಖಕಿ ಲಿಂಗದ ಕಾರಣದಿಂದಾಗಲಿ, ಜಾತಿಯ ಕಾರಣದಿಂದಾಗಲಿ, ಅಥವಾ ಬಣ್ಣದ ಕಾರಣದಿಂದಾಗಲಿ ತಾರತಮ್ಯ ಮಾಡಬಾರದು ಎಂದು ಬಯಸುವ ಮನೋಭಾವದವರು. ಅದಕ್ಕೆ ಪೂರಕವಾಗಿ ಮೇಲಿನ ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ಅನುಪಮಾ ನಿರಂಜನ ಮತ್ತು ಜಿ. ಗೋಪಾಲ್ ಅವರು ಯುರೋಪಿನ ದೇಶಗಳಲ್ಲಿ ವರ್ಣಭೇಧ ನೀತಿ ಪಾಲನೆಯಾಗುತ್ತಿರುವ ಬಗ್ಗೆ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅದರ ಜೊತೆಗೆ ಜಾತಿ ಪದ್ಧತಿಯ ವಿರೋಧದ ನೆಲೆಗಳನ್ನು ಇವರ ಕೃತಿಯಲ್ಲಿ ಕಾಣಬಹುದಾಗಿದೆ.

ಭಾರತದಲ್ಲಿ ೧೯೮೦ರ ದಶಕದಲ್ಲಿ ಜಾತಿಪದ್ಧತಿಯ ಆಚರಣೆ ಬಹಳ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿತ್ತು. ಉನ್ನತವರ್ಗದವರಿಗೆ ಕೆಳವರ್ಗದವರು ಗುಲಾಮರಾಗಿ ಇರಬೇಕಾಗಿತ್ತು. ಸ್ತ್ರೀಯರನ್ನು

ಭಾರತದಲ್ಲಿ ಕೆಳದರ್ಜೆಯ ವ್ಯಕ್ತಿಗಳು ಎಂಬಂತೆ ನೋಡಲಾಗುತ್ತಿತ್ತು. ಲೇಖಕಿಗೆ ಈ ರೀತಿಯ ವಿಚಾರಗಳು ಕ್ರಾಂತಿಕಾರಕ ಯೋಚನೆಗಳಿಗೆ ಇಂಬು ಕೊಡುತ್ತಿತ್ತು. ಆದ್ದರಿಂದಲೇ 'ಈ ಘಟನೆಯಿಂದ ತನಗೆ ದುಃಖವಾಯಿತು' ಎಂದು ಹೇಳಿದ್ದಾರೆ. ಭಾರತೀಯ ಸಮಾಜದ ಸಾಮಾಜಿಕ ಸಮಸ್ಯೆಗಳು ಪ್ರವಾಸ ಕಥನದೊಳಗೆ ಲೇಖಕರ ಮನೋಧರ್ಮಗಳಿಗೆ ಅನುಗುಣವಾಗಿ ಕೃತಿಯೊಳಗೆ ಪ್ರವೇಶ ಪಡೆಯುತ್ತವೆ. ತಮ್ಮದಲ್ಲದ ಸಮಾಜದಲ್ಲಿ ಇದ್ದಾಗಲೂ ತಾವು ಬದುಕಿದ ಸಮಾಜದ ಆಚರಣೆಗಳು ಕೃತಿಯಲ್ಲಿ ಸ್ಥಾನವನ್ನು ಪಡೆದುಬಿಡುತ್ತದೆ. ಮನಸ್ಸು ತನ್ನ ಪರಿಸರದ ತೆಕ್ಕೆಗೆ ಬರುವ ಅಷ್ಟೂ ಅಂಶಗಳನ್ನು ಸಂವೇದಿಸುತ್ತದೆ. ಪ್ರವಾಸದ ಸಂದರ್ಭದಲ್ಲಿ ಲೇಖಕರು ವಿದೇಶಗಳಲ್ಲಿ ಸಂಚರಿಸುತ್ತಿದ್ದರೂ ಅವರ ಮನಸ್ಸು, ತುಡಿತ, ಪ್ರಜ್ಞೆಯು ರಾಷ್ಟ್ರೀಯತೆಯನ್ನೇ ಧ್ಯಾನಿಸುತ್ತದೆ.

ಪಾಟೀಲ ಪುಟ್ಟಪ್ಪ ಅವರು 'ಸೋವಿಯತ್ ದೇಶ ಕಂಡೆ' ಕೃತಿಯಲ್ಲಿ ಸೋವಿಯತ್ ಒಂದು 'ಆದರ್ಶವಾದ ದೇಶ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯದ ಮೇಲೆ ಸೋವಿಯತ್ ದೇಶವು ಲೇಖಕರಿಗೆ ನೀಡಿದ ಆತಿಥ್ಯದ ಪ್ರಭಾವ ಬೀರಿರುವ ಸಾಧ್ಯತೆಗಳಿದೆ. ಮೋಸಗಾರರು, ವಂಚಕರು, ಭ್ರಷ್ಟರು ಇಲ್ಲದ ಸುರಕ್ಷಿತ, ಸುಶಿಕ್ಷಿತ, ಪರಿಪೂರ್ಣ 'ಆದರ್ಶವಾದ ಸಮಾಜ' ಎಂಬುದು ವಾಸ್ತವ ಜಗತ್ತಿನಲ್ಲಿ ಇಲ್ಲ. ಹದಿನೆಂಟನೆಯ ಶತಮಾನದಲ್ಲಿ ಬರುವ ಸಮಾಜಶಾಸ್ತ್ರಜ್ಞ "ಥಾಮಸ್ ಹಬ್ಸ್" ತನ್ನ ಕೃತಿ "ಹಿತೋಪಿಯಾ" ದಲ್ಲಿ ಯಾವ ಕಾಲಘಟ್ಟದಲ್ಲೂ 'ಆದರ್ಶವಾದ ಸಮಾಜ' ಎಂಬುದು ಇರಲಿಲ್ಲ ಎಂದು ವಾದವನ್ನು ಮಂಡಿಸಿ ತಾನು ಇರಬಯಸುವ ಕಾಲ್ಪನಿಕ ಸಮಾಜದ ರೂಪುರೇಷೆಗಳನ್ನು ಹೇಳಿದ್ದಾನೆ. ಆತ ಹೇಳಿದ ಆ ಕಾಲ್ಪನಿಕ ಸಮಾಜವನ್ನು ಸಹ ನಾವು ಇಂದು ಕಾಣಲು ಸಾಧ್ಯವಿಲ್ಲವಾಗಿದೆ. 'ಕಾರ್ಲ್ ಮಾರ್ಕ್ಸ್' ತನ್ನ 'ವರ್ಗ ಸಂಘರ್ಷ ಸಿದ್ಧಾಂತ'ದಲ್ಲಿಯೂ ಸಮಾನತಾವಾದವನ್ನು ಮಂಡಿಸಿದ್ದಾನೆ. ಈ ಸಿದ್ಧಾಂತದ ಪ್ರಕಾರ ಸಮಾಜದಲ್ಲಿ ಬದುಕುವ ಎಲ್ಲರೂ ಸಮಾನರು. ಅವರ ಸಾಮರ್ಥ್ಯಕ್ಕೆ, ಕೌಶಲ್ಯಕ್ಕೆ ಅನುಗುಣವಾಗಿ ಎಲ್ಲರೂ ಕಾರ್ಯ ನಿರ್ವಹಿಸುತ್ತಾರೆ. ಅವರಿಗೆ ಬೇಕಾದ ಅಗತ್ಯ ವಸ್ತುಗಳು ದೊರೆಯುತ್ತದೆ ಎಂದಿದ್ದಾರೆ. ಆದರೆ ಮಾರ್ಕ್ಸ್‌ನ ಸಮಾನತಾವಾದ ಸಮಾಜವು ಇಂದು ಅಸ್ತಿತ್ವದಲ್ಲಿಲ್ಲ. ಕಾರ್ಲ್ ಮಾರ್ಕ್ಸ್ ಹೇಳಿದ 'ಸಮಾಜವಾದದ' ನೆರಳಲ್ಲಿ ಆಡಳಿತ ನಡೆಸುತ್ತಿರುವ ಸೋವಿಯತ್ ರಷ್ಯಾದಲ್ಲಿಯೂ ಇಂತಹ ಆದರ್ಶವಾದ ಸಮಾಜವನ್ನು ಕಾಣಲು ಸಾಧ್ಯವಾಗಿಲ್ಲ. ಈ ವಿವರಗಳಿಂದ ತಿಳಿಯುವ ಸಂಗತಿಯೆಂದರೆ ಕೆಲವು ಅಭಿವೃದ್ಧಿ ಹೊಂದಿದ ದೇಶಗಳನ್ನು ಭಾರತದೊಂದಿಗೆ ಹೋಲಿಸುವ ಅಗತ್ಯವಿಲ್ಲ. ಅಂತೆಯೇ ಯುರೋಪಿನ ದೇಶಗಳನ್ನು ವೈಭವೀಕರಿಸಿ ವರ್ಣಿಸಿರುವ ಕೃತಿಗಳು ಕೃತಜ್ಞತೆಗೆ ಕಟ್ಟುಬಿದ್ದು ನಿರೂಪಿಸಿರುವ ಸಾಧ್ಯತೆಗಳಿದೆ. ಯುರೋಪಿನ ಬಹುತೇಕ ದೇಶಗಳಲ್ಲಿ ಭ್ರಷ್ಟರು, ಕಳ್ಳರು ಇರುವುದನ್ನು ಪ್ರವಾಸ ಕೃತಿಗಳು ಉಲ್ಲೇಖಿಸಿವೆ. ಅನುಪಮಾ ನಿರಂಜನ ಅವರು ಲಂಡನ್ ನಗರದಲ್ಲಿ "Detective eye is watching you. Thieves will punished severely." (ನೀವು ಪೋಲೀಸರ ಕಣ್ಗಾವಲಿನಲ್ಲಿದ್ದೀರಿ. ಕಳ್ಳರಿಗೆ ಉಗ್ರವಾದ ಶಿಕ್ಷೆ ಆಗುತ್ತದೆ) (ಅನುಪಮಾ ನಿರಂಜನ, ಅಂಗೈಯಲ್ಲಿ ಯೂರೊ-ಅಮೆರಿಕ., ಪು-೮೧)ಎಂಬ ಬರೆಹ ಹೊಂದಿದ ಫಲಕವನ್ನು ತೂಗು ಹಾಕಿದ್ದನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಯುರೋಪಿನ ದೇಶಗಳಿಗೆ ಪ್ರವಾಸ ಮಾಡುವ ಲೇಖಕರಲ್ಲಿ ಇರುವ ಕೆಲವು ಪೂರ್ವಾಗ್ರಹಗಳ ಕಾರಣದಿಂದ 'ಯುರೋಪಿನ ದೇಶಗಳೆಲ್ಲಾ ಆದರ್ಶಯುತವಾಗಿವೆ' ಎಂಬ ಭ್ರಮೆಯಲ್ಲಿ ನಿರೂಪಿಸಿರುವುದನ್ನು ಗುರುತಿಸಲಾಗಿದೆ.

ಗೋಪಾಲ್ ಜಿ. ಅವರ 'ಬೆಂಗಳೂರಿಂದ ಬಾರ್ಸೆಲೋನಕ್ಕೆ' ಯುರೋಪ್ ಪ್ರವಾಸದ ಎರಡನೇ ಕೃತಿಯಾಗಿದೆ. ಲೇಖಕರು ಸ್ಪೈನ್ ದೇಶದ ಬಾರ್ಸೆಲೋನ ಪಟ್ಟಣಕ್ಕೆ ಅಂತರಾಷ್ಟ್ರೀಯ ನಾಲ್ಕನೇ ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞರ ಸಮ್ಮೇಳನದ ಗೋಷ್ಠಿಯಲ್ಲಿ ಭಾಗವಹಿಸಿ, ಪ್ರಬಂಧವನ್ನು ಮಂಡಿಸಲು ತೆರಳಿದ್ದರು. ಗೋಪಾಲ್ ಅವರ ಮೊದಲ ಕೃತಿಯಲ್ಲಿರುವಂತೆ ಎರಡನೇ ಕೃತಿಯಲ್ಲೂ ಲೇಖಕರ ಆತ್ಮ ಚರಿತ್ರೆಯ ಅಂಶಗಳು ದಾಖಲಾಗಿದೆ. ಪ್ರಾರಂಭದಲ್ಲಿ ತಾವು ತಿರುಪತಿಯ ತಿಮ್ಮಪ್ಪದೇವರ ಒಕ್ಕಲಾಗಲು ಕಾರಣವಾದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಘಟನೆಯನ್ನು ವಿವರಿಸಿದ್ದಾರೆ. ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರಾದ ರಾಮಾನುಜಾಚಾರ್ಯರ ತತ್ವಗಳ ಪ್ರಭಾವದಿಂದ ಹೊಯ್ಸಳರ ಬಿಟ್ಟಿದೇವನು ವೈಷ್ಣವಪಂಥಕ್ಕೆ ಸೇರಿ ವಿಷ್ಣುವರ್ಧನನಾಗಿ ಪರಿವರ್ತಿತನಾದನು. ಅದೇ ಸಂದರ್ಭದಲ್ಲಿ ಸಾವಿರಾರು ದಲಿತರು ವಿಶಿಷ್ಟಾದ್ವೈತ ಪಂಥಕ್ಕೆ ಸೇರ್ಪಡೆಗೊಳ್ಳುತ್ತಾರೆ. ಈ ರೀತಿ ನವಪಂಥಕ್ಕೆ ಸೇರ್ಪಡೆಗೊಂಡವರಲ್ಲಿ ತಮ್ಮ ವಂಶಜರು ಇದ್ದರು ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಆದ್ದರಿಂದ ಲೇಖಕರು ವಂಶಪಾರಂಪರ್ಯವಾಗಿ ಬಂದ ತಮ್ಮ ಪದ್ಧತಿಯಂತೆ ಪ್ರತಿ ಶನಿವಾರ ಶಂಖ ಜಾಗಟೆ ಸಮೇತ ತಿರುನಾಮಧಾರಿಗಳಾಗಿ ಎಡೆಯಿಟ್ಟು ಪೂಜೆ ಮಾಡುವುದಾಗಿ ಹೇಳಿಕೊಂಡಿದ್ದಾರೆ. ಈ ಘಟನೆಯು ಅವರ ಆತ್ಮಚರಿತ್ರೆಯ ಒಂದು ಭಾಗವಾಗಿದೆ. ಪ್ರವಾಸ ಕೃತಿಗಳು ತಮ್ಮ ಪ್ರವಾಸದ ವಿವರಗಳ ವ್ಯಾಪ್ತಿಯನ್ನು ಮೀರಿದ ವಿಷಯಗಳನ್ನು ಚರ್ಚಿಸಿರುವುದನ್ನು ಇಲ್ಲಿ ಗುರುತಿಸಲಾಗಿದೆ. ರಾಮಾನುಜಾಚಾರ್ಯರ ನೂತನ ಪಂಥವು ದಲಿತರು ನಂಬಿ ಪೂಜಿಸುತ್ತಿದ್ದ ದೇವರು, ದೈವಗಳ ಆಚರಣೆಗಳ ಮೇಲೆ ಋಣಾತ್ಮಕ ಪ್ರಭಾವ ಬೀರಿದೆ. ತಿರುಪತಿಯ ಒಕ್ಕಲಾಗುವಂತೆ ಮಾಡಿದೆ. ಪ್ರಭಲರಾದ ಉನ್ನತವರ್ಗದವರ ಆಚರಣೆಗಳು ಕೆಳವರ್ಗದ ಜನರ ಸಾಂಸ್ಕೃತಿಕ ನಂಬಿಕೆ ಮತ್ತು ಆಚರಣೆಗಳನ್ನು ಪಲ್ಲಟಗೊಳಿಸಿದೆ. ಪಲ್ಲಟಗೊಂಡ ಕೆಳವರ್ಗದವರ ದೇಸಿ ಸಂಸ್ಕೃತಿಯು ಕಾಲಾನಂತರದಲ್ಲಿ ಮುಖ್ಯವಾಹಿನಿಯಿಂದ ಮರೆಯಾಗಿರುವುದನ್ನು ಗುರುತಿಸಲಾಗಿದೆ. ಸಿದ್ಧಲಿಂಗಯ್ಯ ಅವರ 'ಗ್ರಾಮ ದೇವತೆಗಳು' ಸಂಶೋಧನಾ ಪ್ರಬಂಧದಲ್ಲಿ ದಲಿತರ ಮೂಲ ದೇವರುಗಳ ಸಂಪ್ರದಾಯ ಆಚರಣೆಗಳು ಹೇಗೆ ಮರೆಯಾಗಿವೆ ಎಂಬುದನ್ನು ಶೋಧಿಸಲಾಗಿದೆ.

'ಬೆಂಗಳೂರಿಂದ ಬಾರ್ಸೆಲೋನಕ್ಕೆ' ಕೃತಿಯಲ್ಲಿ ಲೇಖಕರು ಭ್ರಷ್ಟಾಚಾರ, ಜಾತೀಯತೆ, ರಾಜಕಾರಣದ ಪ್ರಭಾವ ಮೊದಲಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಸಮಾಜದಲ್ಲಿನ ಆರ್ಥಿಕ ಅಸಮಾನತೆ ಬಗ್ಗೆ, ಮತೀಯ ಧೋರಣೆಗಳ ಬಗ್ಗೆ ಅಸಹನೆ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆಗಳಲ್ಲಿ ಬಡರೋಗಿಗಳನ್ನು ಸುಲಿಗೆ ಮಾಡುವ ಕ್ರಮಗಳನ್ನು ವಿರೋಧಿಸಿದ್ದಾರೆ. ವೈದ್ಯಕ್ಷೇತ್ರದಲ್ಲಿ ನಡೆಯುತ್ತಿರುವ ಭ್ರಷ್ಟ ವ್ಯವಸ್ಥೆಯ ವಿವಿಧ ಮಜಲುಗಳನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಪ್ರವಾಸ ಕೃತಿಯ ಹಲವು ಸಾಧ್ಯತೆಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಈ ಕೃತಿಯು ಪ್ರಮುಖವಾಗುತ್ತದೆ. ಪ್ರವಾಸ ಕೃತಿಗಳು ಜನರಲ್ಲಿ ಅರಿವನ್ನು ಮೂಡಿಸುವ ಮಾಧ್ಯಮವಾಗಿಯೂ ಬಳಕೆಯಾಗುತ್ತವೆ ಎಂಬುದಕ್ಕೆ ಉದಾಹರಣೆಯಾಗಿದೆ.

ಲೇಖಕರು ವೈದ್ಯಕೀಯ ಕ್ಷೇತ್ರದಲ್ಲಿ ಜಾತಿರಾಜಕಾರಣದ ಹಸ್ತಕ್ಷೇಪ ವ್ಯಾಪಿಸಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ತಾವು ದಲಿತ ವರ್ಗಕ್ಕೆ ಸೇರಿದ್ದರಿಂದ ಉನ್ನತ ಹುದ್ದೆಯಲ್ಲಿರುವ ಸವರ್ಣೀಯರಿಂದ ಆಗುತ್ತಿದ್ದ ಅನ್ಯಾಯಗಳನ್ನು ದಾಖಲಿಸಿದ್ದಾರೆ. ಲೇಖಕರ ಅಸಹನೆಗಳು ಮತ್ತು ಅನಿಸಿಕೆಗಳು ಅಕ್ಷರರೂಪವನ್ನು ಪಡೆಯಲು ಪ್ರವಾಸ ಕೃತಿಯು ವೇದಿಕೆಯಾಗಿರುವ ಬಗ್ಗೆ ಗಮನ ಸೆಳೆಯುತ್ತದೆ. ಪ್ರವಾಸ ಸಾಹಿತ್ಯವು ದಲಿತಸಾಹಿತ್ಯದ ಸ್ವರೂಪವನ್ನು ಪಡೆದುಕೊಂಡಿದೆ. ಕೃತಿಕಾರನ ಬರೆವಣಿಗೆಯ ಒಳಗೆ ಬಂಡಾಯದ ಕಿಡಿ

ಗೋಚರಿಸುತ್ತದೆ. 'ಸಾಹಿತ್ಯವು ಸಮಾಜದ ಪ್ರತಿಧ್ವನಿಯಾಗಿ ಜನರಲ್ಲಿ ಜಾಗೃತಿ ಮೂಡಿಸಬೇಕು' ಎಂಬ ಧ್ವನಿ ಈ ಕೃತಿಯಲ್ಲಿ ಅಂತರ್ಗತವಾಗಿದೆ. ಓದುಗರಲ್ಲಿ ವೈದ್ಯಕೀಯ ಶಿಕ್ಷಣದ ನೈಜ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನವಿದೆ. 'ಜಾತೀಯತೆ, ಸ್ವಜನಪಕ್ಷಪಾತ ಅಲ್ಪಸಂಖ್ಯಾತರಾದ ಸವರ್ಣೀಯರನ್ನು ಉನ್ನತ ಹುದ್ದೆಗಳಿಗೆ ಏರಿಸಿದೆ. ಬಹುಸಂಖ್ಯಾತರಾದ ದಲಿತರನ್ನು ಅವರಿಗೆ ಸಿಗಬೇಕಿದ್ದ ಸವಲತ್ತುಗಳು ಸಿಗದಂತೆ ಮಾಡುವಲ್ಲಿ ಯಶಸ್ವಿಯಾಗಿದೆ' ಎಂಬ ಆಶಯವನ್ನು ಈ ಕೃತಿಯು ವ್ಯಕ್ತಪಡಿಸಿರುವುದನ್ನು ಕಂಡುಕೊಳ್ಳಲಾಗಿದೆ.

ಲೇಖಕರು ತಮ್ಮ ಕೃತಿಯಲ್ಲಿ ವೃತ್ತಿ ಬದುಕಿನ ನೈಜ ಘಟನಾವಳಿಗಳನ್ನು ಆತ್ಮ ಚರಿತ್ರೆಯ ಮಾದರಿಯಲ್ಲಿ ದಾಖಲಿಸಿದ್ದಾರೆ. ಭ್ರಷ್ಟ ವ್ಯಕ್ತಿಗಳ ಕರ್ತವ್ಯಲೋಪ, ಸ್ವಹಿತಾಸಕ್ತಿ ರಾಜಕಾರಣ, ಸ್ವಜನಪಕ್ಷಪಾತ, ಶಿಫಾರಸ್ಸುಗಳ ಮೇಲಾಟ ಮೊದಲಾದ ಘಟನಾವಳಿಗಳನ್ನು ಸಂಬಂಧಿಸಿದವರ ಹೆಸರುಗಳನ್ನು ಬಹಿರಂಗಪಡಿಸದೆ ವಿವರವಾಗಿ ಬರೆದಿದ್ದಾರೆ. "ಆ ಸಾರಿ ಸ್ನಾತಕೋತ್ತರ ಪರೀಕ್ಷೆಯಲ್ಲಿ ಸಥೇತಕರ ಅಳಿಯನೊಬ್ಬನೆ ತೇರ್ಗಡೆಯಾದ"(ಜಿ. ಗೋಪಾಲ್., ಬೆಂಗಳೂರಿಂದ ಬಾರ್ಸೆಲೋನಕ್ಕೆ., ಪು-೫೫)ಎಂದಿದ್ದಾರೆ. ಈ ರೀತಿಯಾಗಿ ಲೇಖಕರು ವೈದ್ಯಶಿಕ್ಷಣ ಕೇತ್ರದಲ್ಲಿನ ಲೋಪಗಳನ್ನು ನಿವೇದಿಸಿಕೊಳ್ಳುವ ಮೂಲಕ ಭ್ರಷ್ಟ ವ್ಯವಸ್ಥೆಯ ವಿರುದ್ಧ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಯುರೋಪ್ ಪ್ರವಾಸಕ್ಕೆ ಹೋದ ಲೇಖಕರಲ್ಲಿ ಇತಿಹಾಸ ವಿಷಯದ ಹಿನ್ನೆಲೆಯುಳ್ಳವರು ಹೆಚ್ಚಿಲ್ಲ. ಪುಂಡಿಕಾಯ್ ಗಣಪಯ್ಯ ಭಟ್ ಅವರು ಐತಿಹಾಸಿಕ ಹಾಗೂ ಪ್ರಾಗೈತಿಹಾಸಿಕ ಉತ್ಖನನದ ಜಿಜ್ಞಾಸು ವಿದ್ಯಾರ್ಥಿ. ಭಾರತ ಮತ್ತು ಗ್ರೀಕ್ ವಿದ್ಯಾ ಇಲಾಖೆಗಳು ಕೊಡಮಾಡಿದ ವಿದ್ಯಾರ್ಥಿವೇತನದ ಸಹಾಯದಿಂದ ಪ್ರಾಚ್ಯವಸ್ತು ಶಾಸ್ತ್ರದಲ್ಲಿ ಉನ್ನತ ತರಬೇತಿಗಾಗಿ ೧೯೭೭ರಲ್ಲಿ ಗ್ರೀಕ್ ದೇಶಕ್ಕೆ ತೆರಳಿದ್ದಾರೆ. ಒಂದು ವರ್ಷ ಆರು ತಿಂಗಳ ಸುಧೀರ್ಘ ಸಮಯವನ್ನು ಗ್ರೀಕ್ ದೇಶದಲ್ಲಿ ಕಳೆದಿದ್ದಾರೆ. ಆದ್ದರಿಂದ ಗ್ರೀಕರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ವಿವರಗಳನ್ನು ವಿಸ್ತೃತವಾಗಿ ಬರೆದಿದ್ದಾರೆ. ಸುದೀರ್ಘ ಪ್ರವಾಸಗಳು ನೀಡುವ ವಿವರಗಳು ಹೆಚ್ಚು ವಿಶ್ವಾಸಾರ್ಹವಾದವುಗಳಾಗಿರುತ್ತವೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು "ಸಂಸ್ಕೃತಿ ಎಂಬುದು ಡಿಗ್ರಿ ಮಾಡಿಕೊಳ್ಳುವುದರ ಮೂಲಕ ಗಳಿಸುವ ಮೌಲ್ಯವಲ್ಲ ಎಂಬ ಸತ್ಯ ಇಲ್ಲಿನ (ಗ್ರೀಕಿನ) ಜನರನ್ನು ನೋಡಿದಾಗ ಸ್ಪಷ್ಟವಾದೀತು" (ಪುಂಡಿಕಾಯ್ ಗಣಪಯ್ಯ ಭಟ್., ಯೂರೋಪ್ ನೆನಪುಗಳು., ಪು-೧೪)ಎಂದಿದ್ದಾರೆ. ಲೇಖಕರ ಈ ಮಾತು ಸಾಂಸ್ಕೃತಿಕ ಲೋಕದ ರಚನೆಗೆ ವ್ಯಕ್ತಿಯು ನಿರ್ವಚಿಸುವ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಗಳಿಸಿದ ವಿದ್ಯೆಗೂ ಬಾಲ್ಯದಿಂದ ಮೈಗೂಡಿಸಿಕೊಂಡ ಸಂಸ್ಕೃತಿಗೂ ಪರಸ್ಪರ ಸಮಾನಾಂತರ ಸಂಬಂಧ ಇರುವುದಿಲ್ಲ. ಈ ಎರಡು ಪರಿಭಾಷೆಗಳು ತಮ್ಮಷ್ಟಕ್ಕೆ ಸ್ವತಂತ್ರವಾಗಿವೆ. ವಿದ್ಯೆಯಿಂದ ಸಂಸ್ಕೃತಿಯನ್ನು ತಿಳಿಯಬಹುದು. ವಿದ್ಯೆಯು ವ್ಯಕ್ತಿಯಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಅಳವಡಿಸುವುದಿಲ್ಲ. ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕಾದರೆ ಕೆಲವು ದಿನಗಳ ಪ್ರಯತ್ನದಿಂದ ಅಸಾಧ್ಯ. ಗ್ರೀಕ್ ಸಂಸ್ಕೃತಿಯು ಪುರಾತನ ನಾಗರಿಕತೆಗಳಲ್ಲಿ ಒಂದು. ಗ್ರೀಕಿನ ಜನರ ರೀತಿ ನೀತಿ ನಡೆವಳಿಕೆಗಳು ಸುಸಂಸ್ಕೃತವಾಗಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಅವರ ಅಭಿಪ್ರಾಯವು ಗ್ರೀಕಿನ ಜನರ ಸುಸಂಸ್ಕೃತ ನಡೆವಳಿಕೆಯನ್ನು ಹೊಗಳುವುದರ ಜೊತೆಗೆ ಭಾರತೀಯರ ಸುಸಂಸ್ಕೃತವಲ್ಲದ ನಡೆವಳಿಕೆ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುವಂತಿದೆ. ನಮ್ಮ ದೇಶ ಎನ್ನುವ ಕಾರಣಕ್ಕಾಗಿ ನಮ್ಮ ತಪ್ಪುಗಳನ್ನು ಸರಿ ಎಂದು ವಾದಿಸುವುದಕ್ಕಿಂತ

ನಮ್ಮ ತಪ್ಪನ್ನು ಬೇರೆಯವರನ್ನು ನೋಡಿ ತಿದ್ದಿಕೊಳ್ಳುವ ವಿಶಾಲ ಗುಣ ನಮ್ಮದಾಗಬೇಕೆಂಬ ಆಶಯ ವ್ಯಕ್ತವಾಗಿದೆ.

ಗ್ರೀಕ್ ದೇಶ ಇಂದು ಕ್ರೈಸ್ತ ಧರ್ಮೀಯರ ನಾಡು. ಗ್ರೀಕ್ ದೇಶದ ಇತಿಹಾಸ ಮತ್ತು ಪರಂಪರೆಯನ್ನು ಗಮನಿಸಿದಾಗ ಕ್ರೈಸ್ತ ಧರ್ಮ ಆ ದೇಶದ ಮೂಲಧರ್ಮವಲ್ಲ ಎಂಬುದು ಸ್ಪಷ್ಟವಾಗಿದೆ. ಭಾರತೀಯ ಸಂಸ್ಕೃತಿಗೆ ಹತ್ತಿರ ಎನಿಸುವ ಆಚರಣೆಗಳನ್ನು ಹೊಂದಿದ 'ಬಹುದೇವತಾರಾಧನೆಯ ದೇಶವಾಗಿತ್ತು' ಎಂಬ ಅಂಶ ತಿಳಿದುಬರುತ್ತದೆ. ಕ್ರೈಸ್ತ ಧರ್ಮದ ಪ್ರಭಾವದ ಕಾರಣ ಇವರ ಬಹುದೇವತಾರಾಧನೆಯ ಪರಂಪರೆಯ ಮೇಲೆ ಏಕದೇವೋಪಾಸನೆಯ ಸಂಸ್ಕೃತಿಯನ್ನು ಹೇರಲಾಗಿದೆ. ಗ್ರೀಕರ ಮೂಲ ಸಂಸ್ಕೃತಿಯು ಸಾಂಸ್ಕೃತಿಕ ವಿಸ್ಮೃತಿಗೆ ಒಳಗಾಗಿ, ಕೇವಲ ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಸ್ಥಾಯಿಯಾಗಿದೆ. ಲೇಖಕರು ಈ ಅಂಶವನ್ನು ಗಮನಿಸಿ "ಕ್ರೈಸ್ತ ಧರ್ಮದ ಪ್ರಾದುರ್ಭವದಿಂದಾಗಿ ಸಾವಿರಾರು ವರ್ಷ ಬೆಳೆದು ಬಾಳಿದ ಗ್ರೀಕ್ ದರ್ಮ ನಾಶಹೊಂದುವಂತಾಯಿತು. ಈ ಪ್ರಾಚೀನ ಧರ್ಮದ ಕುರುಹು ಇಂದಿಗೆ ಉಳಿದಿದ್ದರೆ ಅದು ಗ್ರೀಕ್ ಇತಿಹಾಸದಲ್ಲಿ ಮತ್ತು ಸ್ಮಾರಕಗಳಲ್ಲಿ ಮಾತ್ರ"(ಪುಂಡಿಕಾಯ್ ಗಣಪಯ್ಯ ಭಟ್., ಯೂರೋಪ್ ನೆನಪುಗಳು., ಪು-೨೨) ಎಂದಿದ್ದಾರೆ. ಪ್ರವಾಸ ಕಥನಗಳಲ್ಲಿ ಸಾಂಸ್ಕೃತಿಕ ಚರ್ಚೆಗೆ ಅವಕಾಶಗಳಿರುವುದನ್ನು ಈ ಮೇಲಿನ ಹೇಳಿಕೆಯು ಶ್ರುತಪಡಿಸಿದೆ.

ನಗ್ನತೆಯು ಸಾರ್ವಜನಿಕವಾಗಿ ಪ್ರದರ್ಶಿತವಾಗುವುದನ್ನು ಗ್ರೀಕ್ ಸಂಸ್ಕೃತಿಯಲ್ಲಿ ಅಶ್ಲೀಲವೆಂದು ಭಾವಿಸುವುದಿಲ್ಲ. ಅದು ಸಂಸ್ಕೃತಿಯ ಒಂದು ಭಾಗ ಎನಿಸುತ್ತದೆ. ಇದಕ್ಕೆ ಪೂರಕವಾಗಿ ಪುಂಡಿಕಾಯ್ ಗಣಪಯ್ಯ ಭಟ್ ಅವರು ಕೆಲವು ಸಂದರ್ಭಗಳನ್ನು ಉಲ್ಲೇಖಿಸಿದ್ದಾರೆ. ನಗರದ ಪ್ರಮುಖ ವೃತ್ತಗಳಲ್ಲಿ ನಗ್ನಶಿಲ್ಪಗಳನ್ನು ಪ್ರದರ್ಶಿಸಿರುವುದು, ಸರಕಾರದಿಂದ ಅನುಮತಿಯೊಂದಿಗೆ ನಡೆಯುವ 'ನೆಕೆಡ್ ಬೀಚ್'ಗಳು, 'ಇಥಾಕ ಸಮ್ಮೇಳನ'ದಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಒಂದೇ ಕಡೆ ಬಾತ್‌ರೂಮಿನ ವ್ಯವಸ್ಥೆ ಮಾಡಲಾಗಿದ್ದು ಕನಿಷ್ಠ ವಸ್ತ್ರಧಾರಿಗಳಾದ ಸ್ತ್ರೀ-ಪುರುಷರು ಯಾವುದೇ ಮುಜುಗರವಿಲ್ಲದೆ ತಮ್ಮ ಮುಖ ಮಾರ್ಜನಾದಿ ಕ್ರಿಯೆಯಲ್ಲಿ ತೊಡಗಿರುವುದು ಹೀಗೆ ಅಲ್ಲಿನ ಮುಕ್ತ ಸಂಸ್ಕೃತಿಯನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಲೇಖಕರು ಆಶ್ಚರ್ಯಕ್ಕೆ ಒಳಗಾಗಲು ಭಾರತೀಯ ಸಂಸ್ಕೃತಿಯಲ್ಲಿನ ಅನನ್ಯತೆ ಕಾರಣವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ನಗ್ನತೆಯನ್ನು ಪ್ರದರ್ಶಿಸುವಂತಿಲ್ಲ. (ಧಾರ್ಮಿಕವಾಗಿ ದೈವೀ ಕಲ್ಪನೆಯ ಸ್ಥಳಗಳನ್ನು ಹೊರತುಪಡಿಸಿ)ಲೇಖಕರ ಮನೆಯ ಪರಿಸರವು ರೂಢಿಸಿದ ಸಂಸ್ಕೃತಿಯಿಂದ ಪ್ರಭಾವಿತರಾಗಿ, ಶಿಷ್ಟಾಚಾರ ಸಂಪ್ರದಾಯಬದ್ಧರಾದ ಕಾರಣ ಮಡಿವಂತಿಕೆಯನ್ನು ಪಾಲಿಸಿದ್ದಾರೆ. ಗ್ರೀಕರ ನಗ್ನತೆಯನ್ನು ಪ್ರದರ್ಶಿಸುವ ಸಂಪ್ರದಾಯಗಳು ಲೇಖಕರಿಗೆ ಅಸಂಬದ್ಧವಾಗಿ ಕಾಣುತ್ತದೆ. ಲೇಖಕರ ಮನಸ್ಥಿತಿಯು ಸಂಪ್ರದಾಯವಾದಿಯಾಗಿ ವರ್ತಿಸಿರುವುದೇ ಈ ಅಭಿಪ್ರಾಯಕ್ಕೆ ಕಾರಣವಾಗಿದೆ. ಅದಕ್ಕೆ ಅವರ ಹೇಳಿಕೆಯನ್ನು ಇಲ್ಲಿ ಉದಾಹರಿಸಬಹುದಾಗಿದೆ. "ಒಂದಿನಿತೂ ಬಟ್ಟೆ ಇಲ್ಲದೆ ಮರಳಲ್ಲಿ ಹೊರಳುತ್ತಾ ಸೂರ್ಯಕಿರಣಾನಂದವನ್ನನುಭವಿಸುತ್ತಿದ್ದ ದೃಶ್ಯ ಮಡಿವಂತರಾದ ನಮ್ಮನ್ನು ಕಂಗೆಡಿಸಿದ್ದು ನಿಜ. ದ್ರೌಪದೀ ವಸ್ತ್ರಾಪಹರಣ ಕಾಲದಲ್ಲಿ ವಸ್ತ್ರದಾನ ಮಾಡಿ ದ್ರೌಪದಿಯ ಮಾನ ಕಾಪಾಡಿದ ಆ ಶ್ರೀಕೃಷ್ಣಪರಮಾತ್ಮ ತನ್ನ ಸ್ಟಾಕಿನಿಂದ ಈ ಬೆತ್ತಲೆ ಜೀವಿಗಳಿಗೆ ವಸ್ತ್ರದಾನ ಮಾಡಿ ನಮ್ಮ(?) ಮಾನ ಕಾಪಾಡಬಾರದೇ ಎಂದು ಮನಸಲ್ಲೆ ಹಪಹಪಿಸಿದೆವು"(ಪುಂಡಿಕಾಯ್ ಗಣಪಯ್ಯ ಭಟ್., ಯೂರೋಪ್ ನೆನಪುಗಳು., ಪು-೫೫)ಎಂದಿದ್ದಾರೆ. ಲೇಖಕರು ಸ್ವಾರಸ್ಯವನ್ನು ತರುವ ಉದ್ದೇಶದಿಂದ ಈ ಪ್ರಸಂಗವನ್ನು ಹೇಳಿದಂತಿದ್ದರೂ

ಅವರ ಕೌಟುಂಬಿಕ ಸಂಪ್ರದಾಯದ ಪ್ರಭಾವದ ಕಾರಣದಿಂದ ಈ ಅಭಿಪ್ರಾಯವು ವ್ಯಕ್ತವಾಗಿದೆ ಎಂಬುದನ್ನು ಇಲ್ಲಿ ಗ್ರಹಿಸಲಾಗಿದೆ. 'ನಮ್ಮ' ಎಂಬ ಪದ ಬಳಕೆಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯು ಆವರಣದಲ್ಲಿರುವುದು ಲೇಖಕರನ್ನು ಹೊರತುಪಡಿಸಿ ಉಳಿದವರಿಗೆ ಮುಜುಗರವಾಗುವ ಬಗ್ಗೆ ಸಂಶಯ ಇರುವುದನ್ನು ಸೂಚಿಸುತ್ತದೆ. ಈ ಅಂಶವು ಕೂಡ ಭಾರತೀಯ ಮನಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

ವ್ಯಾಸರಾಯ ಬಲ್ಲಾಳ ಅವರು 'ನಾನೊಬ್ಬ ಭಾರತೀಯ ಪ್ರವಾಸಿ' ಕೃತಿಯಲ್ಲಿ ಯುರೋಪ್ ಮತ್ತು ಅಮೆರಿಕಾ ದೇಶಗಳ ಪ್ರವಾಸದ ವಿವರಗಳನ್ನು ದಾಖಲಿಸಿದ್ದಾರೆ. ಲೇಖಕರು ತಮ್ಮ ಪ್ರವಾಸದ ಉದ್ದೇಶದ ಕುರಿತು "ನನ್ನ ಅಮೆರಿಕಾ ಯಾತ್ರೆ, ಅದಕ್ಕೆ ಹೊಂದಿಕೊಂಡ ಯೂರೋಪು ಯಾತ್ರೆ ಕೈಗೊಂಡದ್ದು ತೀರ ಕೌಟುಂಬಿಕ ಕಾರಣಗಳಿಗಾಗಿಯಾದರೂ, ನಾನು ಈ ಮೊದಲೇ ಸ್ಪಷ್ಟಪಡಿಸಿದಂತೆ, ಭಾರತೀಯನಾಗಿ ದೀರ್ಘಕಾಲ ಅಮೆರಿಕದಲ್ಲಿ ನೆಲೆಸಬಯಸುವ ಭಾರತೀಯ ನಾಗರಿಕನ ಭಾರತೀಯತ್ವ ಪೂರ್ವ ಪಶ್ಚಿಮಗಳ ಸಾಂಸ್ಕೃತಿಕ ಸಂಘರ್ಷದಲ್ಲಿ ಹೇಗೆ ಉಳಿದೀತು ಎಂಬ ಚಿಂತನೆಯನ್ನು ಬೆನ್ನಟ್ಟಿಹೋಗಿರುವ ಒಬ್ಬ ಲೇಖಕನ ಪ್ರವಾಸ ಪ್ರಬಂಧ" (ವ್ಯಾಸರಾಯ ಬಲ್ಲಾಳ., ನಾನೊಬ್ಬ ಭಾರತೀಯ ಪ್ರವಾಸಿ., ಪು-೧೪,೧೫)ಎಂದಿದ್ದಾರೆ. 'ಭಾರತೀಯರು ವಿದೇಶದಲ್ಲಿ ಎದುರಿಸಬಹುದಾದ ಸಾಂಸ್ಕೃತಿಕ ಸಂಧಿಗ್ಧತೆಯನ್ನು ತಿಳಿಯುವ ಕುತೂಹಲ'ವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ಭಾರತದಿಂದ ವಿದೇಶಗಳಿಗೆ ಹೋಗಿ ನೆಲೆಸುವ ಕುಟುಂಬಗಳು ತಮ್ಮ ಮನೆಯ ಸಂಪ್ರದಾಯಗಳನ್ನು ಪಾಲಿಸಲಾಗದೇ, ಅಲ್ಲಿನ ಸ್ವತಂತ್ರ ಪ್ರವೃತ್ತಿಯ ನವೀನ ಬದುಕನ್ನು ಒಪ್ಪಿಕೊಳ್ಳಲಾಗದೇ ಚಡಪಡಿಸುತ್ತಾರೆ. ಕೊನೆಗೆ ಒಪ್ಪದೇ ವಿಧಿಯಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅನಿವಾರ್ಯವಾಗಿ ಪಾಲಿಸಲೇಬೇಕಾದ ಹೊಸ ಸಂಸ್ಕೃತಿಯನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದು ಕುತೂಹಲಕರವಾದುದಾಗಿದೆ. ಪ್ರವಾಸ ಸಾಹಿತ್ಯವು 'ಭಾರತೀಯರು ವಿದೇಶದಲ್ಲಿ ನೆಲೆಸಿದಾಗ ಅನುಭವಿಸಬೇಕಾದ ಸಂದಿಗ್ಧತೆಗಳ ಕುರಿತು ಚರ್ಚಿಸಲು ಅವಕಾಶವಿರುವುದನ್ನು ಇಲ್ಲಿ ಗಮನಿಸಲಾಗಿದೆ. ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಈ ಬಗೆಯ ಚರ್ಚೆಗಳು ಪ್ರಮುಖವಾಗಿದೆ.

ಕೆ. ಶಿವರಾಮ ಕಾರಂತರು ದೆಹಲಿಯ 'ಭಾರತೀಯ ಸಾಂಸ್ಕೃತಿಕ ಸಂಬಂಧ ಸಂಸ್ಥೆ'ಯ ವತಿಯಿಂದ ಎರಡನೇ ಬಾರಿ ಯುರೋಪ್ ಪ್ರವಾಸಕ್ಕೆ ತೆರಳಿದ್ದರು. ಪ್ರವಾಸದ ಅನುಭವಗಳನ್ನು 'ಅರಸಿಕರಲ್ಲ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಇದು ಸರಕಾರದ ವತಿಯಿಂದ ನಿಯೋಜಿಸಲ್ಪಟ್ಟ ಪ್ರವಾಸವಾಗಿದೆ. ಕಮ್ಯುನಿಸ್ಟ್ ರಾಷ್ಟ್ರಗಳಾದ ಜರ್ಮನಿ ಮತ್ತು ರಷ್ಯಾ ದೇಶಗಳನ್ನು ಭೇಟಿ ನೀಡಿದ ವಿವರವಿದೆ. ಲೇಖಕರು ೧೯೫೪ರಲ್ಲಿ ಸ್ವಂತ ಖರ್ಚಿನಲ್ಲಿ ಯುರೋಪ್ ಪ್ರವಾಸ ಕೈಗೊಂಡು 'ಅಪೂರ್ವ ಪಶ್ಚಿಮ' ಕೃತಿಯನ್ನು ಬರೆದಿದ್ದರು. ಈ ಕೃತಿಯ ಪ್ರವಾಸದ ವಿವರಗಳಿಗೂ, ಅರಸಿಕರಲ್ಲ ಕೃತಿಯ ಪ್ರವಾಸಾನುಭವಗಳಿಗೂ ವ್ಯತ್ಯಾಸಗಳಿವೆ. ಮೊದಲ ಕೃತಿಯಲ್ಲಿ ಇದ್ದ ಸ್ವತಂತ್ರ ಓಡಾಟ ಎರಡನೇ ಕೃತಿಯಲ್ಲಿಲ್ಲ. 'ಅರಸಿಕರಲ್ಲ' ಕೃತಿಯ ಪ್ರವಾಸದ ವಿವರಗಳನ್ನು ಗಮನಿಸಿದರೆ ಲೇಖಕರಿಗೆ ತಾವು ಸ್ವತಂತ್ರವಾಗಿ ತಮಗೆ ಬೇಕೆನಿಸಿದ ಸ್ಥಳಗಳಿಗೆ ಹೋಗುವ ಅವಕಾಶ ದೊರೆತಿಲ್ಲ. ಸರಕಾರದಿಂದ ನಿರ್ದಿಷ್ಟ ಪಡಿಸಿದ ಸ್ಥಳಗಳಿಗೆ ದ್ವಿಭಾಷಿಗಳ ಜೊತೆಯಲ್ಲಿಯೇ ಹೋಗಬೇಕಾಗಿದೆ. ಲೇಖಕರ ಜೊತೆಯಲ್ಲಿ ಭಾರತೀಯ ಸಾಂಸ್ಕೃತಿಕ ಸಂಸ್ಥೆಯು ಮುನಿಸ್ವಾಮಿ ಎಂಬ ಮೂಕಾಭಿನಯ ವಿದ್ವಾಂಸರನ್ನು ಜೊತೆಗಾರರಾಗಿ ಸೇರಿಸಿದ್ದರು. ಅವರ ಅಭಿರುಚಿಗಳನ್ನು ಪರಿಗಣಿಸಬೇಕಾದ ಕಾರಣ ಹೆಚ್ಚು ಸ್ವತಂತ್ರ ಓಡಾಟಕ್ಕೆ ಅವಕಾಶ ಸಿಕ್ಕಿಲ್ಲ. ಸ್ವತಂತ್ರವಾಗಿ ಹಾಗೂ ಮುಕ್ತವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕೂಡ ಸಾಧ್ಯವಾಗಿಲ್ಲ. ಈ ಕಾರಣದಿಂದಾಗಿ ಕೃತಿಯ ಬರೆವಣಿಗೆ ಹೆಚ್ಚು ವಿಸ್ತಾರವನ್ನು ಪಡೆದಿಲ್ಲ ಎನಿಸುತ್ತದೆ.

ಸರಕಾರದಿಂದ ಕೆಲವು ಷರತ್ತುಗಳನ್ನು ಒಪ್ಪಿಕೊಂಡು ನಿಯೋಜನೆಯ ಮೇಲೆ ಪ್ರವಾಸ ಹೋಗುವ ಪ್ರವಾಸಿಗರ ಅಭಿಪ್ರಾಯಗಳು ಸೀಮಿತ ವ್ಯಾಪ್ತಿಯನ್ನು ಹೊಂದಿರುತ್ತದೆ ಎಂಬ ಅಂಶವನ್ನು ಗ್ರಹಿಸಲಾಗಿದೆ.

ಲೇಖಕರು ಅರಸಿಕರಲ್ಲ ಕೃತಿಯಲ್ಲಿ ಕಲಾಪ್ರಕಾರಗಳ ವಿವರಣೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಕಮ್ಯುನಿಸ್ಟ್ ದೇಶಗಳಾದ ಜರ್ಮನಿ ಮತ್ತು ರಷ್ಯಾ ದೇಶಗಳು ಬಹುತೇಕ ನಾಸ್ತಿಕತೆಯನ್ನು ಒಪ್ಪಿಕೊಂಡಿವೆ. ಭೌತವಾದಿಗಳಾದ ಈ ದೇಶಗಳಲ್ಲಿ ಇರುವ ಕಲಾಭಿರುಚಿಯನ್ನು ಪರಿಗಣಿಸಿ ಲೇಖಕರು 'ಅರಸಿಕರಲ್ಲ' ಎಂಬ ಶೀರ್ಷಿಕೆಯನ್ನು ನೀಡಿದ್ದಾಗಿ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಶೀರ್ಷಿಕೆಗಳಿಗೂ ಕೃತಿಯ ವಸ್ತು ವಿಚಾರಗಳಿಗೂ ಒಂದಕ್ಕೊಂದು ಪೂರಕ ಸಂಬಂಧವಿರಬೇಕು ಎಂಬುದು ಈ ಮೇಲಿನ ಹೇಳಿಕೆಯಿಂದ ತಿಳಿಯುತ್ತದೆ. ಕಾರಂತರು ಪ್ರವಾಸದಿಂದಾದ ಪ್ರಯೋಜನವನ್ನು ಹೇಳುತ್ತಾ "ಈ ಪ್ರವಾಸ ಆ ಎರಡು ದೇಶಗಳು ತಮ್ಮ ಪ್ರಜೆಗಳ ಭಾವಜೀವನಕ್ಕೆ ಯಾವೆಲ್ಲಾ ಮುಖಗಳನ್ನು ಒದಗಿಸಿವೆ–ಎಂದು ತಿಳಿಯುವ ಅವಕಾಶವನ್ನು ಒದಗಿಸಿದುವು" (ಕೆ. ಶಿವರಾಮ ಕಾರಂತ., ಅರಸಿಕರಲ್ಲ., ಪು–ಮುನ್ನುಡಿ)ಎಂದಿದ್ದಾರೆ. ಈ ಕೃತಿಯು ಅಲ್ಲಿನ ಜನರ ಭಾವನಾತ್ಮಕ ಬದುಕಿನ ವಿವರಗಳನ್ನು ನೀಡಿದೆ. ಆದರೆ ಲೇಖಕರಿಗೆ ಕಡಿಮೆ ಅವಧಿಯ, ಅವಸರದ ಪ್ರವಾಸದಲ್ಲಿ ಸಂಸ್ಕೃತಿಯ ಸಮಗ್ರ ಅಧ್ಯಯನಕ್ಕೆ ಹೆಚ್ಚು ಅವಕಾಶ ದೊರೆತಿಲ್ಲ ಎನಿಸುತ್ತದೆ.

ಕಾರಂತರು ಪ್ರವಾಸ ಕೃತಿಯನ್ನು ಕೇವಲ ಪ್ರವಾಸದ ಅನುಭವಗಳನ್ನು ವಿವರಿಸುವುದಕ್ಕೆ ಮಾತ್ರ ಸೀಮಿತಗೊಳಿಸುವುದಿಲ್ಲ. ಸಹೃದಯರಿಗೆ ಪ್ರಯೋಜನವಾಗುವ ಹಲವಾರು ಅಂಶಗಳನ್ನು ಕುರಿತು ಚರ್ಚಿಸುತ್ತಾರೆ. ಬರ್ಲಿನ್ ನಗರದ ಸರಹದ್ದಿನಲ್ಲಿ ಒಂದು ಮಕ್ಕಳ ನಾಟಕಶಾಲೆ ಇದೆ. ಇಲ್ಲಿ ಮಕ್ಕಳಿಗೆ ನಾಟಕಗಳನ್ನು ಕಲಿಸಲು ಜರ್ಮನ್ ಸರಕಾರ ಸಾಕಷ್ಟು ಹಣ ವ್ಯಯಿಸುತ್ತದೆ. ಈ ಮಕ್ಕಳು ಪ್ರದರ್ಶಿಸಿದ ನಾಟಕವನ್ನು ಕಾರಂತರು ನೋಡಿದ್ದಾರೆ. ಆಗ ಲೇಖಕರು ತಮ್ಮ ಮನಸ್ಸಿನಲ್ಲಿ 'ಮಕ್ಕಳಿಗೆ ಕಲ್ಪನೆಯ ಮೇಲೆ ರಚನೆಗೊಂಡ ಸ್ವರ್ಗ–ನರಕಗಳ ಕಥೆಯನ್ನು, ಭೂತ–ಭೇತಾಳಗಳ ಪೌರಾಣಿಕ, ಇಲ್ಲವೆ ಅವಾಸ್ತವಿಕ ಕಥೆಗಳನ್ನು ಹೇಳುವುದು ಸರಿಯೆ?' ಎಂಬ ತರ್ಕ ಸರಣಿಯನ್ನು ನೆನಪಿಸಿಕೊಂಡಿದ್ದಾರೆ. ಇಂದಿನ ಕಂಪ್ಯೂಟರ್ ಯುಗದೊಳಗೆ ಈ ಬಗೆಯ ತರ್ಕದ ಸರಣಿ ಮೂಡಿರುವುದು ಸಹಜವೆ. ಇಂತಹ ಅವಾಸ್ತವಿಕ ಕಲ್ಪನೆಗಳು ಮಕ್ಕಳಿಗೆ ಭ್ರಮನಿರಸನವನ್ನು ಉಂಟು ಮಾಡಬಹುದು ಎಂಬುದು ತರ್ಕ ಮಾಡುವವರ ವಾದ. ಆದರೆ ಕಾರಂತರು ಈ ವಾದವನ್ನು ಒಪ್ಪುವುದಿಲ್ಲ. ಮಕ್ಕಳಿಗೆ "ಅವರ ಕಲ್ಪನಾ ಶಕ್ತಿ ಬೆಳೆಯುವುದಕ್ಕೆ ಪೌರಾಣಿಕ ಕಥೆಗಳು, 'ಫೇರಿ' ಕಥೆಗಳು, ಪ್ರಾಣಿ ಜೀವನದ ಕಥೆಗಳು, ಮಾತನಾಡಲಾರದ ಪ್ರಾಣಿಗಳಿಂದ ಮಾತನ್ನಾಡಿಸುವ ಪಂಚತಂತ್ರದಂಥ ಕಥೆಗಳು, ಅವರ ಮನಸ್ಸನ್ನು ಹಿಗ್ಗಿಸಬಲ್ಲ ಆಕರ್ಷಣೆಗಳು, ಅವರ ಪಾಲಿಗೆ ಬೇಕೇ ಬೇಕೆನಿಸುತ್ತದೆ."(ಕೆ. ಶಿವರಾಮ ಕಾರಂತ., ಅರಸಿಕರಲ್ಲ., ಪು–೫೭)ಎಂದಿದ್ದಾರೆ. ಬೆಳೆಯುವ ಮಕ್ಕಳು ಸುತ್ತಣ ಪ್ರಪಂಚವನ್ನು ನೋಡಿಯೇ ಕಲಿಯುತ್ತಾರೆ, ತಿಳಿಯುತ್ತಾರೆ. ಮಗುವಿನ ಮೆದುಳು ಬೆಳೆಯುವ ಸಂದರ್ಭದಲ್ಲಿ ಕಲ್ಪನೆಗಳನ್ನು ಸೃಜಿಸಿ ನೀಡಬೇಕು. ಆ ವಯಸ್ಸಿನಲ್ಲಿ ತನ್ನ ಮಿತಿಗೆ ದಕ್ಕಿದ ವಿಷಯಗಳನ್ನು ಆರ್ಜಿಸಿಕೊಳ್ಳುವ ಸಾಮರ್ಥ್ಯವಿರುತ್ತದೆ. ಮುಂದೆ ಅದೇ ಕಲ್ಪನೆಗಳು ಜ್ಞಾನವನ್ನು ವಿಸ್ತಾರಗೊಳಿಸುತ್ತದೆ. ಹೊಸ ಹೊಸ ಆವಿಷ್ಕಾರಗಳಿಗೂ ಕಾರಣವಾಗಬಹುದು. ಅಬ್ದುಲ್ ಕಲಾಂ ಪಕ್ಷಿ ಹಾರುತ್ತಿದ್ದ ರೀತಿಯನ್ನು ಕಂಡು ತಾನು ಹಾರಬೇಕೆಂದು ಕನಸು ಕಂಡವರು. ತಾವು ಹಾರುತ್ತಿರುವಂತೆ ಕಲ್ಪನೆ ಮಾಡಿಕೊಂಡರು. ಮುಂದೆ ರಾಕೆಟ್ ಉಡಾವಣೆ ಕ್ಷೇತ್ರದಲ್ಲಿ ದೊಡ್ಡ ವಿಜ್ಞಾನಿಯಾದರು. ಮಕ್ಕಳಿಗೆ ತಾವು

ಕಾಣುವ ವಾಸ್ತವ ಪ್ರಪಂಚಕ್ಕಿಂತ ಊಹೆಯಿಂದ ಮಾತ್ರ ಸಿಗುವ, ದೃಷ್ಟಿಕೋನಗಳಿಗೆ ಎಟುಕಬಲ್ಲ ಕಲ್ಪನೆಗಳು ಹೆಚ್ಚು ಆಪ್ತವಾಗಿರುತ್ತದೆ. ಬೆಳೆಯುತ್ತಾ ಹೋದಂತೆ ತಾವು ಕಂಡ ಅವಾಸ್ತವಿಕ ಕಲ್ಪನೆಗಳಲ್ಲಿ ಯಾವುದು ಸತ್ಯ ಯಾವುದು ಮಿಥ್ಯ ಎಂಬ ಅರಿವು ಬಂದೇ ಬರುತ್ತದೆ. ಆದ್ದರಿಂದ ಎಳವೆಯಲ್ಲಿಯೇ ಮಕ್ಕಳಿಗೆ ಕಲ್ಪನಾಶಕ್ತಿಯನ್ನು ಬೆಳೆಸುವ ಕಥೆಗಳನ್ನು, ಚಿತ್ರಗಳನ್ನು, ಸಿನಿಮಾಗಳನ್ನು, ಟಿ.ವಿ ಮಾಧ್ಯಮದಲ್ಲಿನ ಕಾರ್ಯಕ್ರಮಗಳನ್ನು ತೋರಿಸುವುದು ಮಕ್ಕಳ ಬೌದ್ಧಿಕ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದು.

ಪಾಟೀಲ ಪುಟ್ಟಪ್ಪ ಅವರು 'ಸೋವಿಯತ್ ದೇಶ ಕಂಡೆ' ಎಂಬ ಪ್ರವಾಸ ಕೃತಿಯನ್ನು ಬರೆದಿದ್ದಾರೆ. ಇವರು ಪತ್ರಕರ್ತರು. ಸ್ವದೇಶ ಮತ್ತು ವಿದೇಶಗಳ ಸಂಸ್ಕೃತಿಗಳ ಬಗ್ಗೆ ಸೂಕ್ಷ್ಮ ವಿಷಯಗಳನ್ನೆಲ್ಲಾ ತಿಳಿದಿದ್ದಾರೆ. ಇವರು ಸೋವಿಯತ್ ದೇಶಕ್ಕೆ ಹೋಗುವ ಮೊದಲೇ ಅಮೆರಿಕ ದೇಶಕ್ಕೆ ಪ್ರವಾಸ ಮಾಡಿದ್ದಾರೆ. ಹಾಗಾಗಿ ಇವರ ಈ ಕೃತಿಯಲ್ಲಿ ಎರಡು ವೈವಿದ್ಯ ಖಂಡಗಳ ನಡುವೆ ಇರುವ ಸಾಂಸ್ಕೃತಿಕ ಆಚರಣೆಗಳ ತೌಲನಿಕ ಹೋಲಿಕೆ ಸಾಧ್ಯವಾಗಿದೆ. ಅವರೇ ಈ ಕೃತಿಯ ಮುನ್ನುಡಿಯಲ್ಲಿ "ಅಮೇರಿಕೆಯನ್ನು ನೋಡಿ, ಸೋವಿಯೆತ್ ದೇಶವನ್ನು ನೋಡದಿದ್ದರೆ ನನ್ನ ಅನುಭವ ಅಪೂರ್ಣ ಎನಿಸುವುದು"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಮುನ್ನುಡಿ-೫) ಎಂದಿದ್ದಾರೆ. ಈ ಮಾತು ಅವರ ಪ್ರವಾಸದ ಉದ್ದೇಶವನ್ನು ನಿರ್ದೇಶಿಸುತ್ತದೆ. ಸಾಧ್ಯ ಇರುವ ಕಡೆಗಳಲ್ಲಿ ಸೋವಿಯತ್-ಭಾರತ-ಅಮೆರಿಕ ದೇಶಗಳ ನಡುವೆ ತೌಲನಿಕ ದೃಷ್ಟಿಕೋನದ ಮೂಲಕ ವಿಶ್ಲೇಷಣೆಗಳನ್ನು ಮಾಡಿದ್ದಾರೆ. "ಅಮೇರಿಕನ್ ಮಾದರಿಯ ಸಮೃದ್ಧಿ ರಶ್ಯದಲ್ಲಿ ಇನ್ನೂ ಬಂದಿಲ್ಲದೇ ಇರಬಹುದು. ಆದರೆ ಜೀವನಾವಶ್ಯಕ ವಸ್ತುಗಳ ಕೊರತೆ ಇಲ್ಲ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪುಟ-೫)ಎಂದಿದ್ದಾರೆ. ಲೇಖಕರು ಈ ಹಿಂದೆಯೇ ಅಮೆರಿಕಾ ಪ್ರವಾಸ ಮಾಡಿರುವುದರಿಂದ ಅಲ್ಲಿನ ಜನರ ಬದುಕಿನ ರೀತಿ ನಡೆವಳಿಕೆಗಳನ್ನು ರಶ್ಯ ದೇಶದ ಜನರೊಂದಿಗೆ ಹೋಲಿಸುತ್ತಾ ದೇಶದ ಅಭಿವೃದ್ಧಿಯಲ್ಲಿ ಅವುಗಳ ಸ್ಥಾನಗಳೇನು ಎಂಬ ಬಗ್ಗೆ ಚರ್ಚಿಸಿದ್ದಾರೆ. ಪ್ರವಾಸ ಕೃತಿಗಳು ಅಭಿವೃದ್ಧಿಯ ಹಿನ್ನೆಲೆಯಲ್ಲಿ ದೇಶಗಳ ನಡುವೆ ತೌಲನಿಕವಾದ ವಿಶ್ಲೇಷಣೆ ಮಾಡುವುದರಿಂದ ಓದುಗರಿಗೆ ಆ ದೇಶಗಳ ಬಗ್ಗೆ ಜ್ಞಾನ ಹೆಚ್ಚಾಗುತ್ತದೆ. ಹಾಗೂ ಆ ದೇಶಗಳ ಬಗ್ಗೆ ಅಭಿಪ್ರಾಯಗಳನ್ನು ರಚಿಸಿಕೊಳ್ಳಲು ನೆರವಾಗುತ್ತದೆ.

ಪಾಟೀಲ ಪುಟ್ಟಪ್ಪ ಅವರು ಸೋವಿಯತ್ ದೇಶದ ವಾರ್ತಾ ಸಂಸ್ಥೆಯವರ ಆಮಂತ್ರಣದ ಮೇರೆಗೆ ಎರಡು ವಾರಗಳ ಮಟ್ಟಿಗೆ ರಷ್ಯಾ ಪ್ರವಾಸಕ್ಕೆ ತೆರಳಿದ್ದಾರೆ. ಈ ಪ್ರವಾಸ ಕೃತಿಯು ಸಾಮಾನ್ಯವಾಗಿ ಪ್ರವಾಸ ಕೃತಿಗಳು ರಚನೆಯಾಗುವ ಸಾಂಪ್ರದಾಯಿಕ ಕೃತಿ ರಚನಾ ವಿಧಾನಕ್ಕಿಂತ ಭಿನ್ನವಾಗಿ ರಚಿತವಾಗಿದೆ. ಪ್ರತಿ ಪ್ರವಾಸ ಕೃತಿಯಲ್ಲಿಯೂ ಪ್ರವಾಸದ ಪೂರ್ವ ತಯಾರಿಗಳು, ವೀಸಾ-ಪಾಸ್‌ಪೋರ್ಟ್‌ಗಾಗಿ ಪರದಾಟ, ಪ್ರವಾಸದ ರೀತಿ, ತಾನು ಮೊದಲ ದಿನದಿಂದ ಪ್ರವಾಸದಿಂದ ಹಿಂತಿರುಗಿದ ಕಡೆಯ ದಿನದವರೆಗೆ ದಿನಚರಿ ರೂಪದಲ್ಲಿ ಮಾಹಿತಿಗಳನ್ನು ಒಂದಾದ ನಂತರ ಒಂದರಂತೆ ಬರೆಯುವುದು ಪ್ರವಾಸ ಸಾಹಿತ್ಯದ ಮಾದರಿಯಾಗಿದೆ. ಆದರೆ ಪಾಟೀಲ ಪುಟ್ಟಪ್ಪ ಅವರು ತಾವು ಪ್ರವಾಸ ಮಾಡಿ ಬಂದ ನಂತರ ತಮ್ಮ ಒಟ್ಟು ಅನುಭವಗಳನ್ನು ವಿವಿಧ ಶೀರ್ಷಿಕೆಯಲ್ಲಿ ವಿಂಗಡಿಸಿ ಆ ಶೀರ್ಷಿಕೆಗೆ ಅನುಗುಣವಾಗಿ ವಿವರಗಳನ್ನು ದಾಖಲಿಸಿದ್ದಾರೆ. ಪಾಸ್‌ಪೋರ್ಟ್ ವಿಚಾರವಾಗಲಿ, ಊಟ ನಿದ್ರೆಯ ವಿವರವಾಗಲಿ, ಶೌಚಾಲಯದ ಪರದಾಟದ ವಿವರಗಳನ್ನು ಹೇಳಿರುವುದಿಲ್ಲ. ದಿನಚರಿಯ ರೂಪದಲ್ಲಿಯೂ ಇಲ್ಲ. ತಮ್ಮ ಎರಡು ವಾರದ ಪ್ರವಾಸದ ಅವಧಿಯ ಒಟ್ಟು ಅನುಭವವನ್ನು ಓರಣವಾಗಿ ವಿಭಾಗಿಸಿ ಅಧ್ಯಾಯದ ರೂಪದಲ್ಲಿ ನೀಡಿದ್ದಾರೆ.

ಹಾಗಾಗಿ ಈ ಕೃತಿಯು ರಷ್ಯಾ ದೇಶದ ಬಗ್ಗೆ ಸಮಗ್ರ ವಿವರಗಳನ್ನು ಒಳಗೊಂಡ ಸಾಮಾನ್ಯಜ್ಞಾನ ಪುಸ್ತಕದಂತಿದೆ. ಸ್ತ್ರೀ ಬೆಳೆದ ರೀತಿ, ವಿದ್ಯಾರ್ಥಿಗಳಿಗೆ ಸಿಗುವ ಶಿಕ್ಷಣ, ಸಾರಿಗೆ-ಸಂಪರ್ಕ, ಧರ್ಮ ಮತ್ತು ದೇವರು, ಸಾಮೂಹಿಕ ಬೇಸಾಯ, ಬಂಧುರ ಕುಟುಂಬ, ಕೃಷಿ ಅಭಿವೃದ್ಧಿ ಹೀಗೆ ವೈವಿದ್ಯಮಯ ಅಧ್ಯಾಯಗಳಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. ಈ ರೀತಿಯ ವಿಂಗಡಣೆಯಿಂದ ಸಾಮಾನ್ಯ ಪ್ರವಾಸ ಕೃತಿ ರಚನಾ ವಿಧಾನಕ್ಕಿಂತ ಭಿನ್ನ ನೆಲೆಯಲ್ಲಿ ಕಾಣಲು ಸಾಧ್ಯವಾಗಿದೆ. ಲೇಖಕರು ತಮ್ಮ ಯುರೋಪ್ ಪ್ರವಾಸದ ಉದ್ದೇಶವನ್ನು ಹೇಳುತ್ತಾ "ಆ ದೇಶದ ಬಗ್ಗೆ ನಮ್ಮ ಜನರಲ್ಲಿ ಹೆಚ್ಚಿನ ತಿಳಿವಳಿಕೆಯನ್ನು ಮೂಡಿಸಬೇಕೆನ್ನುವುದು ನನ್ನ ಉದ್ದೇಶ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಮುನ್ನುಡಿ-೧೧)ಎಂದಿದ್ದಾರೆ. ಆ ಉದ್ದೇಶಕ್ಕೆ ಅನುಗುಣವಾಗಿ ಆ ಕಾಲಘಟ್ಟದ ರಷ್ಯಾ ದೇಶದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ನೀಡುವಂತೆ ಬರೆದಿದ್ದಾರೆ.

ಪಾಟೀಲ ಪುಟ್ಟಪ್ಪ ಅವರು ತಮ್ಮ ಪ್ರವಾಸದ ಪೂರ್ವದಲ್ಲಿ ಪ್ರಕಟಗೊಂಡ ಪ್ರವಾಸ ಕೃತಿಗಳನ್ನು ಬರೆದ ಲೇಖಕರ ಅಭಿಪ್ರಾಯಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ತಾವು ಕಂಡ ನೋಟಗಳನ್ನು ಅವರ ಅಭಿಪ್ರಾಯಗಳೊಂದಿಗೆ ತೌಲನಿಕವಾಗಿ ವಿಮರ್ಶಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಪಾಟೀಲ ಪುಟ್ಟಪ್ಪ ಅವರು "ನಮ್ಮ ಶಿವರಾಮಕಾರಂತರಂಥ ಹಿರಿಯ ವಿಚಾರವಾದಿಗಳು, ಅಲ್ಲಿ ಎಲ್ಲವನ್ನೂ ಶಸ್ತ್ರಾಸ್ತ್ರಗಳ ಮೇಲೆ ಸುರಿದಿದ್ದಾರೆ. ಜನಸಾಮಾನ್ಯರಿಗೇನೂ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಆದರೆ ಅದು ಸತ್ಯವಲ್ಲ. ಎಲ್ಲರಿಗೂ ಸಿಕ್ಕಬೇಕಾದ ವಸ್ತುಗಳು ಯಾರಿಗೂ ಸಿಗದೆ ಇರುವುದಿಲ್ಲ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪುಟ-೧೧)ಎಂದಿದ್ದಾರೆ. ಬೀಚಿಯವರ 'ದೇವರಿಲ್ಲದ ಗುಡಿ' ಎಂಬ ಶೀರ್ಷಿಕೆಯ ಬಗ್ಗೆ ತರ್ಕಿಸುತ್ತಾ "ಸೋವಿಯೆತ್ ಜನಪದದಲ್ಲಿ ಚರ್ಚುಗಳಿಗೆ ಹೋಗುವ ಜನರು ಶೇ. ೨೦ರಷ್ಟು ಮಾತ್ರ ಉಳಿದಿದ್ದಾರೆ...... ಸೋವಿಯೆತ್ ದೇಶವನ್ನು ದೇವರಿಲ್ಲದ ಗುಡಿ ಎಂದು ಹೇಳುವುದು ಸಂಪೂರ್ಣ ಸತ್ಯವಲ್ಲ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪುಟ-೮೮) ಎಂದಿದ್ದಾರೆ. ಪಾಟೀಲ ಪುಟ್ಟಪ್ಪ ಅವರು ರಷ್ಯಾ ದೇಶಕ್ಕೆ ತೆರಳುವ ಪೂರ್ವದಲ್ಲಿ ಪೂರ್ಣ ತಯಾರಿ ಮಾಡಿಕೊಂಡಿದ್ದರು ಎಂಬುದು ತಿಳಿಯುತ್ತದೆ. ಶಿವರಾಮ ಕಾರಂತರ ಎರಡು ಯುರೋಪ್ ಪ್ರವಾಸ ಕೃತಿಗಳನ್ನು ಹಾಗೂ ಬೀಚಿ ಅವರ ಕೃತಿಯನ್ನು ಮತ್ತು ಕನ್ನಡದ ಇತರ ಲೇಖಕರ ಯುರೋಪ್ ಪ್ರವಾಸ ಕೃತಿಗಳನ್ನು ಪ್ರವಾಸಕ್ಕೆ ತೆರಳುವ ಮುನ್ನ ಅಭ್ಯಾಸ ಮಾಡಿ ತಯಾರಿ ಮಾಡಿಕೊಂಡಿದ್ದರು. ಲೇಖಕರು ತಮ್ಮ ಪ್ರವೃತ್ತಿಯಲ್ಲಿ ಬದ್ಧತೆಯನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಬೇರೆಯವರ ಅಭಿಪ್ರಾಯಗಳನ್ನು ತಿಳಿದುಕೊಂಡಾಗ ತಮ್ಮ ಅಭಿಪ್ರಾಯವನ್ನು ಅದರೊಂದಿಗೆ ಹೋಲಿಸಲು ಮತ್ತು ತೌಲನಿಕವಾಗಿ ನೋಡಲು ಅನುಕೂಲವಾಗುತ್ತದೆ. ಈ ಬಗೆಯ ದೃಷ್ಟಿಕೋನವು ಓದುಗರಲ್ಲಿ ಹೆಚ್ಚು ತಿಳಿವಳಿಕೆಯನ್ನು ನೀಡುತ್ತದೆ. ಈ ರೀತಿಯ ಭಿನ್ನ ಅಭಿಪ್ರಾಯಗಳಿಗೆ ಕಾರಣವೇನೆಂದು ಪರಿಶೀಲಿಸಿದಾಗ 'ಕಾಲ ಬದಲಾದಂತೆ ಲೇಖಕರ ಧೋರಣೆಗಳು ಬದಲಾಗುತ್ತವೆ. ಪ್ರವಾಸಿ ಲೇಖಕರ ವೈಯಕ್ತಿಕ ನಂಬಿಕೆ, ಸಂಪ್ರದಾಯಗಳು ಅವರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುತ್ತದೆ' ಎಂಬುದು ಸ್ಪಷ್ಟವಾಗುತ್ತದೆ.

ಪಾಟೀಲ ಪುಟ್ಟಪ್ಪ ಅವರ ಕೃಷಿ ಕ್ಷೇತ್ರದ ಬಗೆಗಿನ ಮಾಹಿತಿ ಮೆಚ್ಚುವಂತದ್ದು. ಯಾವ ಕೃತಿಯಲ್ಲಿಯೂ ಕೃಷಿಯ ಬಗ್ಗೆ ಈ ಕೃತಿಯಲ್ಲಿ ವ್ಯಕ್ತವಾಗಿರುವ ಪ್ರಮಾಣದಲ್ಲಿ ಮಾಹಿತಿ ದೊರಕಿಲ್ಲ. ಲೇಖಕರು 'ಕ್ರಾಸ್ನಾಡಾರ್'. 'ಕಪಾನ್' ಮೊದಲಾದ ಸಾಮೂಹಿಕ ಕೃಷಿ ಕ್ಷೇತಗಳಿಗೆ ಭೇಟಿ ನೀಡಿದ್ದಾರೆ. ಅಲ್ಲಿನ

ನಿರ್ದೇಶಕರನ್ನು ಭೇಟಿಯಾಗಿದ್ದಾರೆ. ಅಲ್ಲಿ ತಮಗೆ ಬೇಕಾದ ಮಾಹಿತಿಯನ್ನು ಕಲೆಹಾಕಿ ಪರಿಪೂರ್ಣ ವಿವರವನ್ನು ಕೃತಿಯಲ್ಲಿ ದಾಖಲಿಸಿದ್ದಾರೆ. ಸೋವಿಯತ್ ದೇಶದ ಕೃಷಿ ಪದ್ಧತಿಯು ಹೊಸ ಬಗೆಯ ಪದ್ಧತಿಯಾಗಿದೆ. ನೂರಾರು ಜನರು ಸೇರಿ ಸಾಮೂಹಿಕ ಕೃಷಿ ಕ್ಷೇತ್ರಗಳನ್ನು ನಡೆಸುತ್ತಾರೆ. ಸರ್ಕಾರದಿಂದ ನೇಮಕವಾದ ನಿರ್ದೇಶಕನ ಅಡಿಯಲ್ಲಿ ನಿರ್ದಿಷ್ಟ ಸಂಖ್ಯೆಯ ತಂಡವು ಈ ಸಾಮೂಹಿಕ ಕೃಷಿ ಕ್ಷೇತ್ರವನ್ನು ನಿರ್ವಹಿಸುತ್ತದೆ. ಕೃಷಿಗೆ ಬೇಕಾಗುವ ಸಕಲ ಪರಿಕರಗಳನ್ನು ಸರ್ಕಾರವೆ ಒದಗಿಸಿ ಕೊಡುತ್ತದೆ. ಬೆಳೆ ಕಟಾವಿಗೆ ಬಂದ ಬಳಿಕ ಶೇ. ೭೦ ಭಾಗವನ್ನು ಸರ್ಕಾರಕ್ಕೆ ನೀಡಬೇಕಾಗುತ್ತದೆ. ಉಳಿದ ಶೇ. ೩೦ ಭಾಗವನ್ನು ಕೃಷಿಕರು ತಮ್ಮ ನಡುವೆ ಹಂಚಿಕೊಳ್ಳುತ್ತಾರೆ. ರೈತರಿಗೆ ನಿವೃತ್ತಿ ವಯಸ್ಸು ನಿಗದಿಪಡಿಸಿದ್ದಾರೆ. ನಿವೃತ್ತಿಯಾದ ನಂತರ ನಿವೃತ್ತಿ ವೇತನ ನೀಡುತ್ತಾರೆ. ಹೀಗೆ ಕೃಷಿಕರಿಗೆ ಅನೇಕ ಪ್ರೋತ್ಸಾಹದಾಯಕ ಕಾರ್ಯಗಳನ್ನು ಅಲ್ಲಿನ ಸರ್ಕಾರ ಮಾಡಿಕೊಂಡು ಬಂದಿದೆ. ಹೀಗೆ ಅನೇಕ ಅಂಶಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿದ್ದಾರೆ. ಪ್ರವಾಸ ಕೃತಿಗಳು ನಗರ ಪ್ರದೇಶದ ವರ್ಣನೆಗೆ ಸೀಮಿತವಾಗದೆ ಗ್ರಾಮೀಣ ಪ್ರದೇಶಗಳ ಜನರ ಬದುಕು ಮತ್ತು ಜೀವನ ವಿಧಾನಗಳನ್ನು ತಿಳಿಸುವ ದಿಕ್ಕಿನಲ್ಲಿಯೂ ಚಿಂತಿಸಬೇಕಾದ ಅಗತ್ಯವಿದೆ.

ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಕೃಷಿಯ ಪಾತ್ರ ಮಹತ್ತರವಾದುದು. ತಮ್ಮ ದೇಶಕ್ಕೆ ಬೇಕಾಗುವ ಅಗತ್ಯ ಕೃಷಿ ಸರಕುಗಳನ್ನು ಆ ದೇಶವೇ ಬೆಳೆದುಕೊಂಡರೆ ಮತ್ತೊಂದು ದೇಶದ ಕೃಷಿ ಸರಕುಗಳ ಮೇಲೆ ಅವಲಂಬಿತವಾಗಬೇಕಾದ ಅಗತ್ಯವಿರುವುದಿಲ್ಲ. ಆದ್ದರಿಂದಲೇ ಸೋವಿಯತ್ ದೇಶವು ಸಾಮೂಹಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದು ಲೇಖಕರು ಹೇಳಿದ್ದಾರೆ. ಕಮ್ಯುನಿಸ್ಟ್ ಆಡಳಿತ ಇರುವ ದೇಶಗಳಲ್ಲಿ ಸಾಮೂಹಿಕ ಕೃಷಿ ಪದ್ಧತಿಯು ಪರಿಣಾಮಕಾರಿಯಾಗಿ ಜಾರಿಯಾಗುತ್ತದೆ. ಆದರೆ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸರಕಾರಕ್ಕೆ ಅಧಿಕಾರಿಗಳ ಮೇಲಾಗಲಿ, ಕೃಷಿಕರ ಮೇಲಾಗಲಿ ಸಂಪೂರ್ಣ ಹಿಡಿತ ಇರುವುದಿಲ್ಲ. ಆದ್ದರಿಂದ ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಪರಿಣಾಮಕಾರಿಯಾಗಿ ಜಾರಿಮಾಡುವುದು ಕಷ್ಟಸಾಧ್ಯ ಎನಿಸುತ್ತದೆ.

ಪಾಟೀಲ ಪುಟ್ಟಪ್ಪ ಅವರು ಸೋವಿಯತ್ ದೇಶದ ಕನ್ನಡ ಪಂಡಿತರಾದ 'ಬೆಸ್ಕಾಫ್' ಅವರ ಬಗ್ಗೆ ಹೆಚ್ಚಿನ ವಿವರಗಳನ್ನು ದಾಖಲಿಸಿದ್ದಾರೆ. ಅವರ ಕನ್ನಡ ಕಲಿಕೆಯ ಸಂದರ್ಭ ಮತ್ತು ಸಾಧನೆಗಳನ್ನು ಈ ಕೃತಿಯಲ್ಲಿ ಹಂಚಿದ್ದಾರೆ. ರಷ್ಯಾ ದೇಶದ ಓದುಗರು ತಮ್ಮ ಕವಿಭಕ್ತಿಯನ್ನು ತೋರಿರುವ ಬಗ್ಗೆ ಹೋಲಿಸಿದ್ದಾರೆ. ರಷ್ಯನ್ನರು ಕಾವ್ಯಾರಾಧಕರು ಹೇಗೆ ಎಂಬ ಬಗ್ಗೆ ತೌಲನಿಕವಾಗಿ ವಿಮರ್ಶಿಸಿದ್ದಾರೆ. ಕೆಲವು ಕಡೆ ಐತಿಹಾಸಿಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಚಾರಧಾರೆಗಳನ್ನು ಮುಕ್ತವಾಗಿ ಪ್ರಶಂಸಿದ್ದಾರೆ. ನಗರಗಳ ವೈಭವವಾಗಲಿ, ಹಳ್ಳಿಗಾಡಿನ ಪರಿಸರವಾಗಲಿ ಎಲ್ಲದರ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಪಾಟೀಲ ಪುಟ್ಟಪ್ಪ ಅವರ ವಿಚಾರಗಳು ಬಹುಮುಖಿಯಾಗಿದ್ದು ಹಲವು ಆಯಾಮಗಳ ಮೂಲಕ ಸೋವಿಯತ್ ದೇಶವನ್ನು ಪರಿಚಯಿಸಿವೆ.

ಲೇಖಕರು ಸಾರ್ವತ್ರೀಕರಿಸಿ ಹೇಳಿರುವ ಕೆಲವು ಹೇಳಿಕೆಗಳು ಅತಿವ್ಯಾಪ್ತಿದೋಷದಿಂದ ಕೂಡಿವೆ. ಅವು ಪ್ರಶ್ನಾರ್ಥಕವಾಗಿಯೂ, ದ್ವಂದ್ವತೆಗೆ ಕಾರಣವಾಗುವಂತೆಯೂ ಇವೆ. ಉದಾಹರಣೆಗೆ "ಉಚಿತವಾದ ಸಾರ್ವತ್ರಿಕ ಶಿಕ್ಷಣವನ್ನು ಒದಗಿಸಿಕೊಡುವಲ್ಲಿ ಸೋವಿಯೆತ್ ದೇಶವನ್ನು ಸರಿಗಟ್ಟುವ ಬೇರೆ ದೇಶವೊಂದು ಜಗತ್ತಿನಲ್ಲಿ ಇಲ್ಲ" (ಪಾಟೀಲ ಪುಟ್ಟಪ್ಪ, ಸೋವಿಯತ್ ದೇಶ ಕಂಡೆ., ಪು-೪೪) "ಮನುಷ್ಯನನ್ನು ಹಾಳು ಮಾಡುವ ಪಾಶ್ಚಾತ್ಯ ದೇಶದ ಹವ್ಯಾಸಗಳು ಆ ದೇಶದಲ್ಲಿ ಹುಡುಕಿದರೂ ಕೂಡ ಸಿಕ್ಕಲಾರವು"(ಪಾಟೀಲ

ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪು-೧೯೪೯)ಮೊದಲಾದವು. ಲೇಖಕರ ಈ ಹೇಳಿಕೆಗಳನ್ನು ಗಮನಿಸಿದಾಗ ತಾವು ಸೋವಿಯತ್ ಸರಕಾರದ ಅನುದಾನದಲ್ಲಿ ಪ್ರವಾಸ ಕೈಗೊಂಡಿರುವುದರಿಂದ ಈ ಹೇಳಿಕೆಗಳು ಸೋವಿಯತ್ ಸರಕಾರವನ್ನು ಮೆಚ್ಚಿಸಲು ಬರೆದಂತಿದೆ. ಮತ್ತು ಕಮ್ಯುನಿಸ್ಟ್ ತತ್ವಗಳನ್ನು ಪಾಲಿಸುವ ದೇಶಗಳಲ್ಲಿ ಅಭಿವೃದ್ಧಿ ಸಾಧ್ಯ ಎನ್ನುವಂತೆ ಈ ಕೃತಿಯಲ್ಲಿ ಬಿಂಬಿಸಿದ್ದಾರೆ. ಪೂರ್ಣ ಕೃತಿಯು ಸೋವಿಯತ್ ದೇಶದ ಆಡಳಿತ ವೈಖರಿಯನ್ನು ಮೆಚ್ಚುಗೆ ಸೂಚಿಸುವ ರೀತಿಯಲ್ಲಿದೆ.

೧೯೯೦ ರಿಂದ ೨೦೦೦ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

೧೯೯೦ರ ದಶಕದವರೆಗೆ ಮಹಿಳೆಯರಿಂದ ರಚಿತವಾದ ಪ್ರವಾಸ ಕೃತಿಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ೧೯೯೦ರ ದಶಕದ ನಂತರ ಭಾರತೀಯ ಸಮಾಜದಲ್ಲಾದ ಕೆಲವು ಬದಲಾವಣೆಗಳ ಕಾರಣದಿಂದ ಮಹಿಳೆಯರು ಪ್ರವಾಸ ಕೃತಿಗಳ ರಚನೆಯಲ್ಲಿ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ದಶಕದಲ್ಲಿ ಹದಿನಾಲ್ಕು ಯುರೋಪ್ ಪ್ರವಾಸ ಕೃತಿಗಳು ಪ್ರಕಟಗೊಂಡಿವೆ.

ನಾಗತಿಹಳ್ಳಿ ಚಂದ್ರಶೇಖರ ಅವರ 'ಅಯನ'(೧೯೯೧)೧೯೯೦ರ ದಶಕದ ಮೊದಲ ಕೃತಿಯಾಗಿದೆ. ನಾಗತಿಹಳ್ಳಿ ಚಂದ್ರಶೇಖರ ಅವರು ತಮ್ಮನ್ನು 'ವಲಸೆ ಹಕ್ಕಿ' ಎಂದು ಕರೆದುಕೊಂಡಿದ್ದಾರೆ. ಇವರು ಸುಮಾರು ೩೬ ದೇಶಗಳ ಪ್ರವಾಸ ಮಾಡಿದ್ದಾರೆ. ೭ ಪ್ರವಾಸ ಕೃತಿಗಳನ್ನು ಬರೆದಿದ್ದಾರೆ. 'ಅಯನ' ಎಂದರೆ 'ಚಲಿಸು', 'ಭೂಮಧ್ಯ ರೇಖೆಯಿಂದ ಉತ್ತರಕ್ಕೆ ಅಥವಾ ದಕ್ಷಿಣಕ್ಕೆ ಸೂರ್ಯನು ಚಲಿಸುವ ಮಾರ್ಗ' ಎಂಬ ಅರ್ಥವಿದೆ. ಪ್ರವಾಸದ ಮೂಲಕವೇ ತಮ್ಮನ್ನು ಗುರುತಿಸಿಕೊಳ್ಳುವ ಲೇಖಕರು ಪೂರ್ವದಿಂದ ಪಶ್ಚಿಮ ದೇಶಗಳಿಗೆ ಪ್ರಯಾಣಿಸಿರುವುದರಿಂದ ಕೃತಿಗೆ 'ಅಯನ' ಎಂಬ ವಿಭಿನ್ನವಾದ ಶೀರ್ಷಿಕೆಯನ್ನಿಟ್ಟಿದ್ದಾರೆ. ವೈವಿಧ್ಯಮಯ ಆಸಕ್ತಿಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಶ್ರೀಯುತರು ಚಲನಚಿತ್ರ ನಿರ್ದೇಶಕರಾಗಿ ಪ್ರಸಿದ್ಧರು. ಇವರು ನಿರ್ದೇಶನ ಮಾಡಿರುವ 'ಅಮೆರಿಕ ಅಮೆರಿಕ' 'ಪ್ಯಾರಿಸ್ ಪ್ರಣಯ' 'ನನ್ನ ಪ್ರೀತಿಯ ಹುಡುಗಿ' 'ಅಮೃತಧಾರೆ' ಚಲನಚಿತ್ರಗಳು ಪ್ರವಾಸದ ಹಿನ್ನೆಲೆಯಲ್ಲಿಯೇ ಮೂಡಿಬಂದಿವೆ. ನಾಗತಿಹಳ್ಳಿ ಅವರಿಗೆ ಸುರೇಶ್ ಹೆಬ್ಳೀಕರ್ ಅವರ 'ಈಸ್ಟ್-ವೆಸ್ಟ್ ಕಲ್ಚರ್ ಅಸೋಸಿಯೇಶನ್'ನ ವತಿಯಿಂದ ಪ್ರವಾಸಕ್ಕೆ ತೆರಳುವ ಅವಕಾಶ ಸಿಕ್ಕಿರುತ್ತದೆ.

ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿನ ಜಾಗತಿಕ ಮಟ್ಟದ ಸಾಂಸ್ಕೃತಿಕ ಘಟನಾವಳಿಗಳು ಈ ಕೃತಿಯಲ್ಲಿದೆ. ಪ್ರವಾಸ ಕೃತಿಗಳು ಐತಿಹಾಸಿಕ ಘಟನೆಗಳನ್ನು ಪುನರ್‌ಮನನ ಮಾಡಿಕೊಳ್ಳುತ್ತವೆ. ಜೊತೆಗೆ ಅಂದು ನಡೆದ ಘಟನೆಗಳನ್ನು ತಾವು ಕಂಡಂತೆ ದಾಖಲಿಸುವುದರಿಂದ ಅವುಗಳನ್ನು ಇತಿಹಾಸದ ಆಕರಗಳಾಗಿಯೂ ಬಳಕೆಯಾಗುತ್ತವೆ. ಅಂದಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿದ್ಯಮಾನಗಳನ್ನು ತಿಳಿಯಲು ಅಧ್ಯಯನ ಯೋಗ್ಯ ದಾಖಲೆಗಳಾಗಿವೆ. ಈ ದೃಷ್ಟಿಕೋನದಿಂದ ಅಯನ ಕೃತಿಯು ಹೆಚ್ಚು ಉಪಯುಕ್ತವಾದುದಾಗಿದೆ. ತಿಳಿಯಾದ ಹಾಸ್ಯದೊಂದಿಗೆ ಫ್ರಾನ್ಸ್ ದೇಶದ ಬದುಕು-ಬವಣೆ, ಹಿರಿಮೆ-ಗರಿಮೆಗಳನ್ನು ಭಾರತದ ಜೊತೆಗೆ ಆರೋಗ್ಯಕರವಾಗಿ ಹೋಲಿಸಿದ್ದಾರೆ. ನಮ್ಮ ದೇಶದ ಇಂದಿನ ದುಸ್ಥಿತಿಗೆ ನಾವು ಎಷ್ಟು ಜವಾಬ್ದಾರರು?, ನಮ್ಮ ಕರ್ತವ್ಯವೇನು? ಎಂಬ ಬಗ್ಗೆ ತಿಳಿವಳಿಕೆಯನ್ನು ನೀಡುವ ಕೃತಿಯಾಗಿದೆ. ವ್ಯಂಗ್ಯ ಮತ್ತು ವಿನೋದ ಪ್ರಜ್ಞೆಗಳ ಮೂಲಕ ಮನಸೆಳೆಯುವ ಬರೆಹವಿದ್ದು ಓದಿಸಿಕೊಂಡು ಹೋಗುವ ಗುಣ ಹೊಂದಿದೆ. ಕೃತಿಯನ್ನು ಓದುತ್ತಲೇ ವಿಮರ್ಶನ ಮನೋಭಾವವನ್ನು ನಮ್ಮೊಳಗೆ

ಜಾಗೃತಗೊಳಿಸುತ್ತದೆ. ಪ್ರವಾಸ ಕೃತಿಯನ್ನು ಬರೆಯುವ ಲೇಖಕನಿಗೆ ಮುಖ್ಯವಾಗಿ ಇರಬೇಕಾದ ಒಳನೋಟ, ದೇಶದ ಬಗೆಗಿನ ಕಾಳಜಿ, ತೌಲನಿಕ ದೃಷ್ಟಿಕೋನ, ದರ್ಶನ, ಸಾಮಾಜಿಕ ಹೊಣೆಗಾರಿಕೆ, ಪೂರ್ವಗ್ರಹ ಪೀಡಿತನಾಗದ ಮುಕ್ತ ಮನಸ್ಸು ಮೊದಲಾದ ಗುಣಗಳನ್ನು ಈ ಕೃತಿ ಹೊಂದಿದೆ.

ಯಾವುದೇ ದೇಶವನ್ನು ಹೊಗಳುವುದರಿಂದ ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಅಂತೆಯೇ ದೌರ್ಬಲ್ಯಗಳನ್ನು, ಕೆಡುಕುಗಳನ್ನು ಗುರುತಿಸುವವರನ್ನು ದೇಶದ್ರೋಹಿ ಎಂದು ಪರಿಗಣಿಸಬೇಕಿಲ್ಲ. ಭೂಮಿಯಲ್ಲಿರುವ ಪ್ರತಿಯೊಬ್ಬರು ಪರಾವಲಂಬಿಗಳೇ. ಒಬ್ಬರನ್ನು ನೋಡಿ ಮತ್ತೊಬ್ಬರು ಕಲಿಯುವುದು ಸರ್ವಸಾಮಾನ್ಯ. ಆದ್ದರಿಂದಲೇ ಲೇಖಕರು ಭಾರತ ದೇಶದ ನ್ಯೂನತೆಗಳನ್ನು, ಲುಪ್ತತೆಗಳನ್ನು ಕಟುವಾಗಿ ಟೀಕಿಸಿದ್ದಾರೆ. ಹಳ್ಳಿಯ ಕೆಸರು ಗುಂಡಿಗಳಿಂದ ತುಂಬಿದ ರಸ್ತೆಗಳು, ಸಮಯಕ್ಕೆ ಸರಿಯಾಗಿ ಬಾರದ ಬಸ್ಸು, ರೈಲುಗಳು. ಅವ್ಯವಸ್ಥಿತ, ಅಶುದ್ಧ ನಗರಗಳು ಹೀಗೆ ಬೊಟ್ಟು ಮಾಡಿ ತೋರಿಸಬಹುದಾದ ನ್ಯೂನತೆಗಳನ್ನು ಹೇಳಿದ್ದಾರೆ. ಫ್ರಾನ್ಸ್‌ನಲ್ಲಿನ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಮೆಚ್ಚಿಕೊಂಡಿದ್ದಾರೆ. ಅಲ್ಲದೆ ನಮಗೆ ಅನುಕರಣೀಯವೆಂತಲೂ ಹೇಳಿದ್ದಾರೆ. ಹಾಗೆಂದು ಫ್ರಾನ್ಸ್ ಪರಿಪೂರ್ಣ, ಸುಸಜ್ಜಿತ ದೇಶ ಎಂದು ಬರೀ ಹೊಗಳಿಕೆಯ ಮಾತುಗಳನ್ನೇ ಹೇಳಿರುವುದಿಲ್ಲ. ಆ ದೇಶ ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಾದ ಕಳ್ಳತನ, ಕೊಲೆ, ಸುಲಿಗೆಗಳ ಬಗ್ಗೆಯೂ ಉಲ್ಲೇಖಿಸಿದ್ದಾರೆ.

ನಾಗತಿಹಳ್ಳಿ ಅವರು ತಮ್ಮ ಕೃತಿಯಲ್ಲಿ ಫ್ರಾನ್ಸ್ ದೇಶದಲ್ಲಿನ ವೈವಿಧ್ಯಮಯ ಆಚರಣೆಗಳನ್ನು ಹೊಂದಿರುವ, ವಿವಿಧ ಸಂಸ್ಕೃತಿಯ ವಿವಿಧ ಜನಾಂಗಗಳನ್ನು ಪರಿಚಯಿಸಿದ್ದಾರೆ. 'ಬಾಸ್ಕ್ ಜನಾಂಗದ ಸಂಸ್ಕೃತಿಯು ಫ್ರಾನ್ಸ್ ದೇಶದ ಸಾಮಾನ್ಯ ಸಂಸ್ಕೃತಿಗಿಂತ ಭಿನ್ನವಾದ ಸಂಸ್ಕೃತಿಯನ್ನು ಹೊಂದಿದೆ. ಇವರದೇ ಆದ ಪ್ರತ್ಯೇಕ ಭಾಷೆ ಇದೆ. ಹಾಡು, ಹಬ್ಬ, ಕುಣಿತ, ಜೀವನ ಶೈಲಿ, ಮನೆಗಳ ನಿರ್ಮಾಣ ಶೈಲಿ ಮತ್ತು ಒಳವಿನ್ಯಾಸ ಫ್ರೆಂಚರಿಗಿಂತ ಭಿನ್ನವಾಗಿರುತ್ತದೆ. 'ಸ್ಪೆಲೆಟ್' ಎಂಬ ವಿಶಿಷ್ಟ ಸಾಂಪ್ರಾದಾಯಿಕ ನೃತ್ಯ ಬಾಸ್ಕ್ ಜನರ ಅನನ್ಯತೆಯನ್ನು ತೋರಿಸುತ್ತದೆ. ಈ ಜನಾಂಗವು ತಮ್ಮದೇ ಆದ ಜನಪದ ಶೈಲಿಯನ್ನು ರೂಢಿಸಿಕೊಂಡು ಬಂದಿದೆ' ಎಂದು ಲೇಖಕರು ಬಾಸ್ಕ್ ಜನರ ಸಂಸ್ಕೃತಿಯ ವಿಶಿಷ್ಟತೆಗಳನ್ನು ತಿಳಿಸಿದ್ದಾರೆ. ವಿಶಾಲ ದೃಷ್ಟಿಕೋನವುಳ್ಳ ಪ್ರವಾಸಿ ಲೇಖಕರು ಸೂಕ್ಷ್ಮ ವಿಷಯಗಳನ್ನು ತಿಳಿದುಕೊಂಡು ವಿವರಿಸಲು ಸಾಧ್ಯ. ಪ್ರವಾಸಿ ಲೇಖಕ ಪ್ರವಾಸದ ಸಂದರ್ಭದಲ್ಲಿ ಯಾವ ಯಾವ ವಿಚಾರಗಳನ್ನು ಓದುಗರೊಂದಿಗೆ ಹಂಚಿಕೊಳ್ಳಬೇಕು ಎಂಬುದನ್ನು ಈ ಕೃತಿಯು ನಿರ್ದೇಶಿಸುತ್ತದೆ. ಪ್ರವಾಸ ಕೃತಿಗಳು ಚರ್ಚಿಸುವ ವಿಷಯಗಳ ವ್ಯಾಪ್ತಿ ಹಿರಿದಾದಷ್ಟು ಆ ಕೃತಿಯ ಮೌಲ್ಯ ಹೆಚ್ಚುತ್ತದೆ.

ನಾಗತಿಹಳ್ಳಿ ಚಂದ್ರಶೇಖರ್ ಅವರ ಭಾರತೀಯ ಸಂಸ್ಕೃತಿಯನ್ನು ಕುರಿತ ಚಿಂತನೆಯು ನಿರೀಶ್ವರವಾದಿ ಧೋರಣೆಯುಳ್ಳದ್ದಾಗಿದೆ. 'ಭಾರತೀಯ ಸಂಸ್ಕೃತಿಯು ದೇವಾಲಯದ ಗೋಪುರಗಳಲ್ಲಿ ಇಲ್ಲ. ಹಸಿದ ಹೊಟ್ಟೆಯಲ್ಲಿರುವ ಕೋಟ್ಯಂತರ ಬಡಜನರ ನೋವು, ನಿರಾಶೆಗಳಲ್ಲಿದೆ' ಎಂಬ ಹೇಳಿಕೆಯು ನಿರೀಶ್ವರವಾದಿ ಧೋರಣೆಯನ್ನು ಮತ್ತು ಶೋಷಿತರ ಪರವಾದ ನಿಲುವನ್ನು ವ್ಯಕ್ತಪಡಿಸುತ್ತದೆ.

೧೯೯೨ರಲ್ಲಿ ಸೋವಿಯತ್ ಒಕ್ಕೂಟವು ವಿಭಜನೆಗೊಂಡು ಹದಿನಾಲ್ಕು ದೇಶಗಳಾಗುತ್ತವೆ. ಈ ಸಂದರ್ಭದಲ್ಲಿನ ರಾಜಕೀಯ ವಿದ್ಯಮಾನಗಳು ಪ್ರವಾಸ ಕ್ಷೇತ್ರದ ಮೇಲೆ ನೇರ ಪರಿಣಾಮ ಬೀರಿದೆ. ವಿಭಜನೆಯ ಬಳಿಕ ಯುರೋಪಿನ ದೇಶಗಳ ಒಳಗೆ ಪ್ರವಾಸದ ಉತ್ತೇಜನಕ್ಕಾಗಿ 'ಯೂರೇಲ್ ಪಾಸ್' 'ಯೂರೋ ನಾಣ್ಯ' 'ಶೇಂಗೇನ್ ವೀಸಾ'ಗಳು ಪ್ರವರ್ಧಮಾನಕ್ಕೆ ಬಂದವು. ಇದರಿಂದ ಯುರೋಪ್

ದೇಶಗಳಲ್ಲಿ ಪ್ರವಾಸ ಮಾಡುವುದು ಸುಲಭವಾಯಿತು. ತತ್ಪರಿಣಾಮವಾಗಿ ಪ್ರವಾಸ ಕೃತಿಗಳ ಸಂಖ್ಯೆಯಲ್ಲಿ ಹೆಚ್ಚಳವಾಯಿತು. ೧೯೯೨ರ ನಂತರ ಕನ್ನಡದಲ್ಲಿ ಹದಿಮೂರು ಯುರೋಪ್ ಪ್ರವಾಸ ಕೃತಿಗಳು ಪ್ರಕಟಗೊಂಡಿವೆ. ಆ ಹದಿಮೂರು ಕೃತಿಗಳಲ್ಲಿ ಆರು ಕೃತಿಗಳು ಮಹಿಳೆಯರಿಂದ ರಚಿತವಾಗಿದೆ. ಇದು ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರ ಸ್ಥಾನಮಾನ, ಅವಕಾಶಗಳು ಹೆಚ್ಚುತ್ತಿದ್ದ ಸಂದರ್ಭವನ್ನು ಸೂಚಿಸುತ್ತದೆ. ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಳ್ಳಲು ಮಹಿಳೆಯರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು ಹೆಚ್ಚಾಗಿ ಪ್ರವಾಸ ಸಾಹಿತ್ಯ ಎಂದರೆ ತಪ್ಪಾಗಲಾರದು. ವಿದೇಶ ಪ್ರವಾಸಕ್ಕೆ ಹೋಗದಂತೆ ತಡೆಯುತ್ತಿದ್ದ, ಮೂಡನಂಬಿಕೆಗಳಿಂದ ಕೂಡಿದ ಸಾಂಸ್ಕೃತಿಕ ದಿಗ್ಬಂಧನಗಳು ಸಡಿಲಗೊಳ್ಳುತ್ತಾ ಬಂದಿತ್ತು. ಮಹಿಳೆಯರಲ್ಲಿ ಜಾಗೃತಿ ಮೂಡಿತ್ತು. ಆದ್ದರಿಂದಲೇ ಹಿಂದಿನ ದಶಕಗಳಲ್ಲಿ ಪ್ರಕಟವಾದ ಮಹಿಳಾ ಪ್ರವಾಸ ಕೃತಿಗಳಿಗಿಂತ ಈ ದಶಕದಲ್ಲಿ ಪ್ರಕಟವಾದ ಮಹಿಳಾ ಪ್ರವಾಸ ಕೃತಿಗಳ ಸಂಖ್ಯೆಯೇ ಹೆಚ್ಚಾಗಿದೆ.

ಈ ದಶಕದಲ್ಲಿ ಪ್ರಕಟಗೊಂಡ ಮೊದಲ ಮಹಿಳಾ ಪ್ರವಾಸ ಕಥನ ಲತಾ ಗುತ್ತಿ ಅವರ 'ಯುರೋ ನಾಡಿನಲ್ಲಿ'. ಇದು ಮಹಿಳಾ ಪ್ರವಾಸ ಕೃತಿಯಾದ್ದರಿಂದ ಸಹಜವಾಗಿ ಮಹಿಳಾ ಸಂವೇದನೆಗಳನ್ನು ನಿರೀಕ್ಷಿಸಲಾಗುತ್ತದೆ. ಆದರೆ ಲೇಖಕಿಯು ಪ್ರಧಾನವಾಗಿ ಚಾರಿತ್ರಿಕ ಧೋರಣೆಗಳಿಗೆ ಹಾಗೂ ಕಲಾ ಸಂವೇದನೆಗಳಿಗೆ ಹೆಚ್ಚು ಒತ್ತು ನೀಡಿದ್ದಾರೆ. ಗಂಡನೊಂದಿಗೆ ವಿದೇಶಗಳನ್ನು ಸುತ್ತಿದ್ದರಿಂದ ದಂಪತಿಗಳ ನಡುವಿನ ಒಲವು ನಿಲುವುಗಳು ರಸಾತ್ಮಕವಾಗಿ ಮೂಡಿ ಬಂದಿದೆ. ಲೇಖಕಿಯು ಈ ಕೃತಿಯಲ್ಲಿ ಸ್ಪಷ್ಟವಾಗಿ ಚಾರಿತ್ರಿಕ ನೆಲೆಯಲ್ಲಿಯೇ ಪ್ರವಾಸಿ ಸ್ಥಳಗಳನ್ನು ಕಾಣುವ ಮನೋಭಾವದವರಾಗಿಯೇ ಗುರುತಿಸಿಕೊಳ್ಳುತ್ತಾರೆ. ಲತಾ ಗುತ್ತಿ ಅವರು ಎಂ.ಎ ಪದವಿಧರೆಯಾಗಿದ್ದು; ಇತಿಹಾಸ, ವಾಸ್ತುಶಿಲ್ಪ, ಚಿತ್ರಕಲೆ, ಮೊದಲಾದವು ಇವರ ಆಸಕ್ತಿಯ ಕ್ಷೇತ್ರಗಳಾಗಿವೆ. ಆದ್ದರಿಂದ ಐತಿಹಾಸಿಕ ಅಂಶಗಳನ್ನು ಸವಿವರವಾಗಿ ವರ್ಣಿಸಿದ್ದಾರೆ. ಇದಕ್ಕೆ ಸ್ಥಳೀಯ ಮಾಹಿತಿಕೋಶಗಳ(ಬ್ರೌಷರ್) ಸಹಕಾರವನ್ನು ಪಡೆದಿದ್ದಾರೆ.

ಸಾಂಸ್ಕೃತಿಕ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಲತಾ ಗುತ್ತಿ ಅವರ ಬರೆವಣಿಗೆ ಸಾಮಾಜಿಕ ವಿಮರ್ಶೆಯ ಹಿನ್ನೆಲೆಯಲ್ಲಿ ಪ್ರಸ್ತುತವಾಗಿದೆ. ಸಂಪ್ರದಾಯ ಪ್ರಧಾನ ಮನೋಭಾವದವರಾದ ಲೇಖಕಿಗೆ ಅಸಂಪ್ರದಾಯಿಕವಾಗಿರುವ ಚಟುವಟಿಕೆಗಳು ಅನೈತಿಕವಾಗಿ ಕಾಣಿಸುತ್ತದೆ. ಇಂಗ್ಲೆಂಡ್ ದೇಶದಲ್ಲಿ ಹದಿಹರೆಯದ ವಯಸ್ಸಿಗೆ ಬಂದ ಹುಡುಗ ಹುಡುಗಿಯರು ಲೈಂಗಿಕ ಕಾಮನೆಗಳನ್ನು ಮುಕ್ತವಾಗಿಯೇ ತೀರಿಸಿಕೊಳ್ಳುವುದನ್ನು ಒಪ್ಪದ ಮನಸ್ಥಿತಿಯವರಾಗಿಯೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇಂಗ್ಲೆಂಡಿನ ಸಮಾಜದಲ್ಲಿ ಅದು ಒಪ್ಪಿತವಾದುದು. ಗುತ್ತಿ ಅವರು ಅದನ್ನು ಅನೈತಿಕ ಎಂಬ ದೃಷ್ಟಿಕೋನದಿಂದಲೇ ಕಾಣುತ್ತಾರೆ. ಈ ರೀತಿಯ ದೃಷ್ಟಿಕೋನಕ್ಕೆ ಭಾರತೀಯ ಸಾಂಸ್ಕೃತಿಕ ಮನಸ್ಥಿತಿಯೇ ಪ್ರಮುಖ ಕಾರಣವಾಗಿದೆ.

ಯುರೋಪಿನ ಲೈಂಗಿಕ ಮುಕ್ತ ಸಮಾಜದಲ್ಲಿಯೂ ನೀಲಿ ಚಿತ್ರಗಳ ಪ್ರದರ್ಶನ ನಡೆಯುವುದನ್ನು ಗುತ್ತಿ ಅವರು ಉಲ್ಲೇಖಿಸಿದ್ದಾರೆ. "ಬ್ಲೂ ಫಿಲ್ಮ್‌ಗಳಂತೂ ದೊಡ್ಡ ಥಿಯೇಟರ್‌ದಲ್ಲಿಯೇ ನಡೆಸುತ್ತಾರೆ. ಲೈಸನ್ಸ್‌ಗೇನೂ ಸಮಸ್ಯೆ ಇಲ್ಲವಂತೆ, ರಾತ್ರಿ ೩ರವರೆಗೆ, ಕೆಲವೊಂದು ಕಡೆಗೆ ಇಡೀ ರಾತ್ರಿಯೆಲ್ಲ ಪ್ರದರ್ಶನ ಇರುತ್ತದೆಯಂತೆ. ಕೆಲವೊಂದು ಕಡೆಗೆ ನೇರವಾಗಿ ಸೆಕ್ಸ್‌ದಲ್ಲಿ ತಲ್ಲೀನರಾದವರ ದೃಶ್ಯವನ್ನೂ ನೋಡುವ ಅಂಗಡಿಗಳಿವೆ"(ಎಂ. ಲತಾಗುತ್ತಿ., ಯೂರೋ ನಾಡಿನಲ್ಲಿ., ಪು-೬೦)ಎಂದು ಹೇಳುವ ಮೂಲಕ ಭಾರತದಲ್ಲಿ ಅನೈತಿಕ ಎನಿಸುವ ಚಟುವಟಿಕೆಗಳು ಯುರೋಪಿನಲ್ಲಿ ಕಾನೂನುಬದ್ಧವಾಗಿಯೇ ನಡೆಯುತ್ತದೆ ಎಂದಿದ್ದಾರೆ.

ಭಾರತೀಯ ಸಂಸ್ಕೃತಿ–ಸಂಪ್ರದಾಯದಲ್ಲಿ ಬೆಳೆದಿರುವ ಲೇಖಕಿಗೆ ಇಂತಹ ಘಟನೆಗಳು ಆಶ್ಚರ್ಯವನ್ನು ಉಂಟುಮಾಡುತ್ತದೆ. ಅದಕ್ಕೆ ಲೇಖಕಿ ಅಂತಹ ಸಂದರ್ಭವನ್ನು ಕಂಡು "ವಯಸ್ಕರೂ ಕೂಡ (ನೋಡಲಿಕ್ಕೆ ಒಳ್ಳೇ ಮನುಷ್ಯರಂತೆ ಕಾಣುತ್ತಾರೆ.) ಕೆಲವೊಂದು ಅಂತಹ ಶಾಪ್‌ಗಳ ಮುಂದೆ ಮುಗಿ ಬಿದ್ದಿರುತ್ತಾರೆ"(ಲತಾ ಗುತ್ತಿ., ಯುರೋ ನಾಡಿನಲ್ಲಿ., ಪು–೬೧)ಎಂದು ತಾತ್ಸಾರದಿಂದಲೇ ಹೇಳಿದ್ದಾರೆ. ಹಳ್ಳಿಯ ಸಂಪ್ರದಾಯಸ್ಥ ಮನೆತನದ ಹೆಣ್ಣುಮಕ್ಕಳು ವ್ಯಕ್ತಪಡಿಸುವ ನೈಜ ಭಾವನೆಯನ್ನು ಇಲ್ಲಿ ಕಾಣಬಹುದು.

ಭಾರತೀಯ ಪುರಾಣಗಳಿಗೂ ಯುರೋಪಿಯನ್ ದೇಶಗಳಲ್ಲಿರುವ ಪೌರಾಣಿಕ ಕಥನಗಳಿಗೂ ಕೆಲವು ಸಾಮ್ಯತೆಗಳಿರುವುದನ್ನು ಗುತ್ತಿಯವರು ವಿವರಿಸಿದ್ದಾರೆ. ಬ್ರಸ್ಸೆಲ್‌ನ ಟೌನ್‌ಹಾಲ್‌ನ ತುದಿಯಲ್ಲಿರುವ ಗಾಳಿಮಾಪಕ ಯಂತ್ರದಲ್ಲಿ ಕೆಟ್ಟ ಶಕ್ತಿಯ ಪ್ರತೀಕವಾದ ಡ್ರಾಗನ್ ಅನ್ನು ಸೇಂಟ್ ಮೈಕೆಲ್ ಎಂಬುವವನು ಸಂಹರಿಸುತ್ತಿರುವ ಪ್ರತಿಮೆಯನ್ನು ಪ್ರದರ್ಶಿಸಲಾಗಿದೆ. ಈ ಕಲ್ಪನೆಯು ಭಾರತೀಯ ಸಂಸ್ಕೃತಿಯಲ್ಲಿ ರಾಮನವಮಿಯ ದಿನದಂದು ಕೆಟ್ಟ ಶಕ್ತಿಯ ಪ್ರತೀಕವಾದ ರಾವಣನನ್ನು ರಾಮ ಸಂಹಾರ ಮಾಡುವ ಪೌರಾಣಿಕ ಕಥೆಯೊಂದಿಗೆ ಹೋಲಿಕೆಯಾಗುತ್ತದೆ. ಜಗತ್ತಿನ ಯಾವ ಮೂಲೆಗೆ ಹೋದರೂ ಕೆಟ್ಟ ಶಕ್ತಿ ಮತ್ತು ಒಳ್ಳೆಯ ಶಕ್ತಿಗಳ ನಡುವಿನ ಹೋರಾಟ, ಒಳ್ಳೆಯದರ ಗೆಲುವನ್ನು ಬಿಂಬಿಸುವ ಕಲ್ಪನೆಗಳು ಇದ್ದೇ ಇರುತ್ತವೆ. ಇದು ಮಾನವನ ಚಿಂತನಾಶಕ್ತಿಯು ಭೂಮಿಯಲ್ಲಿ ಎಲ್ಲೇ ಇದ್ದರೂ ಒಂದೇ ಬಗೆಯಲ್ಲಿ ಪ್ರವಹಿಸುತ್ತದೆ ಎಂಬುದಕ್ಕೆ ನಿದರ್ಶನವಾಗಿದೆ.

೧೯೯೦ರ ದಶಕದಲ್ಲಿ ಪ್ರಕಟವಾದ ಮತ್ತೊಂದು ಮಹಿಳಾ ಯುರೋಪ್ ಪ್ರವಾಸ ಸಾಹಿತ್ಯ ದೇವಕಿ ಮೂರ್ತಿ ಅವರ 'ಯೂರೋ ಅಮೆರಿಕಾದ ಇಣುಕು ನೋಟ'(೧೯೯೪). ಈ ಕೃತಿಯಲ್ಲಿ ಯುರೋಪ್ ಮತ್ತು ಅಮೆರಿಕಾ ಖಂಡಗಳ ಪ್ರವಾಸ ಮಾಡಿರುವುದರ ವಿವರಗಳಿವೆ. ಕೃತಿಯ ಮೊದಲ ೬೫ ಪುಟಗಳಲ್ಲಿ ಯುರೋಪ್ ಪ್ರವಾಸದ ಅನುಭವಗಳನ್ನು ಬರೆದಿದ್ದಾರೆ. ಇದು ಪ್ರವಾಸಿ ಸಂಸ್ಥೆಯವರ ಕಡೆಯಿಂದ ಯೋಜಿಸಲ್ಪಟ್ಟ 'ನಿಯೋಜಿತ ಪ್ರವಾಸ'ವಾಗಿದೆ. ನಿಯೋಜಿತ ಪ್ರವಾಸಗಳಿಗೆ ಮಿತಿಗಳಿವೆ. ಪ್ರವಾಸಿ ಗುಂಪಿನ ಅಗತ್ಯಕ್ಕೆ ಅನುಗುಣವಾಗಿ ಸಂಸ್ಥೆಯು ಒಂದು ಯೋಜನೆಯನ್ನು ಸಿದ್ಧಪಡಿಸಿರುತ್ತದೆ. ಪ್ರವಾಸಿಗಳು ಅದರ ಮಿತಿಗಳಿಗೆ ಅನುಸಾರವಾಗಿ ಹೊಂದಿಕೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಕೃತಿಯಲ್ಲಿ ಪ್ರವಾಸದ ಅನುಭವಗಳ ವಿವರಗಳು ಕೆಲವು ಮಿತಿಗಳ ನಡುವೆಯೂ ಉತ್ತಮವಾಗಿದೆ. ಈ ಕೃತಿಯ ಶೀರ್ಷಿಕೆ ಇರುವಂತೆ ಬರೆವಣಿಗೆಯು ಇಣುಕು ನೋಟಗಳ ಸೀಮಿತ ಪರಿಧಿಯಲ್ಲಿಯೇ ರಚಿತವಾಗಿದೆ. ಒಬ್ಬ ಸಾಮಾನ್ಯ ಪ್ರವಾಸಿಯ ಸಹಜ ಅನುಭವಗಳ ವಿವರವಿದೆ. ಬರೆವಣಿಗೆಯು ಸರಳವಾಗಿ, ಸಹಜವಾಗಿ, ನೇರ ವಿವರಣೆಗಳಿಂದ ಕೂಡಿದೆ.

'ಬೆಂಗಳೂರಿನ ಚಿತ್ರಕಲಾ ಪರಿಷತ್ತಿ'ನ ವತಿಯಿಂದ ಫ್ರಾನ್ಸ್‌ನ 'ಆವಗಾನ್' ನಗರದಲ್ಲಿ ನಡೆಯುವ 'ಆವಗಾನ್ ಉತ್ಸವ'ಕ್ಕೆ ಬೆಳ್ಳೂರಿನ 'ಭುವನೇಶ್ವರಿ ಯಕ್ಷಗಾನ ಸೂತ್ರದಬೊಂಬೆಯಾಟ' ತಂಡ ಭಾಗವಹಿಸಿತ್ತು. ಪಿ.ಆರ್. ತಿಪ್ಪೇಸ್ವಾಮಿ ಅವರ ನೇತೃತ್ವದಲ್ಲಿ ಹನ್ನೊಂದು ಜನರ ತಂಡ ಹದಿನೈದು ದಿನಗಳ ಪ್ರವಾಸಕ್ಕೆ ತೆರಳಿದ್ದರು. ಈ ಪ್ರವಾಸದ ಅನುಭವಗಳ ವಿವರವನ್ನು ಪಿ.ಆರ್. ತಿಪ್ಪೇಸ್ವಾಮಿ ಅವರು 'ಕಲಾವಿದ ಕಂಡ ಫ್ರಾನ್ಸ್'ಎಂಬ ಪ್ರವಾಸ ಕೃತಿಯಲ್ಲಿ ದಾಖಲಿಸಿದ್ದಾರೆ.

ಪಿ.ಆರ್. ತಿಪ್ಪೇಸ್ವಾಮಿ ಅವರು ಚಿತ್ರಕಲೆಯ ಕಲಾವಿದರು. ಅದಕ್ಕೆ ತಕ್ಕನಾಗಿ ತಮ್ಮ ಕೃತಿಯಲ್ಲಿ ತಾವು ನೋಡಿದ ದೃಶ್ಯಗಳಿಗೆ ಚಿತ್ರಕಲೆಯ ರೂಪ ಕೊಟ್ಟು, ಕೃತಿಯಲ್ಲಿ ಅಗತ್ಯ ಇರುವಕಡೆಗಳಲ್ಲಿ ತಮ್ಮ ಚಿತ್ರಕಲಾ

ನೈಪುಣ್ಯತೆಯನ್ನು ಪ್ರದರ್ಶಿಸಿದ್ದಾರೆ. ಇದು ಕೃತಿಯ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಲೇಖಕರು ತಾವು ನೋಡಿದ ದೃಶ್ಯಗಳನ್ನು ಚಿತ್ರಗಳ ರೂಪ ಕೊಟ್ಟು ವಿವರಿಸಿರುವುದರಿಂದ ಇದೊಂದು ಸಚಿತ್ರ ಪ್ರವಾಸ ಕೃತಿಯಾಗಿದೆ. ಓದುಗರಿಗೆ ಘಟನಾವಳಿಗಳ ವಿವರಗಳ ಜೊತೆಯಲ್ಲಿ ಆ ಘಟನೆಯ ದೃಶ್ಯವನ್ನು ಚಿತ್ರದ ಮುಖೇನ ನೀಡಿದಾಗ ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಪುಸ್ತಕದ ಸ್ವರೂಪವು ಯಾವುದೇ ಸಿದ್ಧ ಮಾದರಿಯಲ್ಲಿಲ್ಲ. ದೇಶಗಳ ಅಭಿವೃದ್ಧಿಯನ್ನು ಆಧರಿಸಿ ತೌಲನಿಕ ದೃಷ್ಟಿಕೋನದೊಂದಿಗೆ ಬರೆಯುವಾಗ ಹೆಚ್ಚು ಕಡೆಗಳಲ್ಲಿ ಫ್ರಾನ್ಸ್‌ನ್ನು ಹೊಗಳಿದ್ದಾರೆ. ಅದೇ ಸಮಯದಲ್ಲಿ ಭಾರತದಲ್ಲಿನ ಅವ್ಯವಸ್ಥೆಗಳನ್ನು ನೆನಪಿಸಿಕೊಂಡಿದ್ದಾರೆ. ಲೇಖಕರು ಫ್ರಾನ್ಸ್ ದೇಶದಲ್ಲಿನ ಉತ್ತಮ ಸಾರಿಗೆ ವ್ಯವಸ್ಥೆಯ ಬಗ್ಗೆ, ಸರಕಾರ ಜನರಿಗಾಗಿ ಮಾಡಿರುವ ಅನುಕೂಲಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ ಮಿತಿಮೀರಿದ ನಗರೀಕರಣದಿಂದಾಗುವ ಅಪಾಯಗಳ ಬಗ್ಗೆಯು ಎಚ್ಚರಿಕೆ ನೀಡಿದ್ದಾರೆ. "ಪ್ಯಾರೀಸ್ ನೋಡಲು ಹೊರಗೆ ಸುಂದರ. ಆದರೆ ಒಳಹೊಕ್ಕು ನೋಡಿದರೆ ಅಲ್ಲಿನ ಕಲಾವಿದರ, ಶ್ರೀ ಸಾಮಾನ್ಯನ ಜೀವನ ಅತ್ಯಂತ ಚಿಂತಾಜನಕ ಎನ್ನಿಸದಿರದು"(ಪಿ.ಆರ್. ತಿಪ್ಪೇಸ್ವಾಮಿ., ಕಲಾವಿದ ಕಂಡ ಫ್ರಾನ್ಸ್., ಪು-೯೮)ಎಂದಿದ್ದಾರೆ. ಲೇಖಕರು ಏಕಮುಖ ದೃಷ್ಟಿಕೋನದಿಂದ ಫ್ರಾನ್ಸ್ ದೇಶವನ್ನು ನೋಡದೆ ಅಲ್ಲಿನ ಒಳಿತು ಕೆಡುಕುಗಳೆರಡನ್ನು ಪರಿಗಣಿಸಿದ್ದಾರೆ.

ಪ್ರವಾಸಿಗ ತಾನು ಕಂಡದ್ದೆಲ್ಲಾ ಸತ್ಯವಾದುದು ಎಂದು ನಂಬುವಂತಿಲ್ಲ. ನಗರಗಳಿಗೆ ಹಲವು ಮುಖಗಳಿರುತ್ತವೆ. ಪ್ರವಾಸದ ನಿಗದಿತ, ಮಿತ ಅವಧಿಯೊಳಗೆ ತಾನು ಭೇಟಿ ನೀಡಿದ ಸ್ಥಳಗಳ ಪೂರ್ಣ ಮಾಹಿತಿಯನ್ನು ವಿವರಿಸಿ ಹೇಳಲು ಸಾಧ್ಯವಿಲ್ಲ. ಆ ಸ್ಥಳಕ್ಕೆ ಎಷ್ಟು ಜನರು ಭೇಟಿ ನೀಡುತ್ತಾರೋ ಅಷ್ಟು ಬಗೆಯ ಅಭಿಪ್ರಾಯಗಳು ವ್ಯಕ್ತವಾಗುತ್ತದೆ. ಆ ಸ್ಥಳಗಳ ಬಗ್ಗೆ ವರ್ಣಿಸಿ ಹೇಳುವವರೇ ಹೆಚ್ಚಾಗಿರುತ್ತಾರೆ. ಅಪರೂಪದಲ್ಲಿ ಕಂಡ ಸ್ಥಳಗಳು ಮೋಹಕವಾಗಿ ಕಾಣುವುದರಿಂದ ಪ್ರವಾಸಿ ಲೇಖಕರು ಹೊಗಳಿ ಬರೆಯುವುದು ಸಹಜವಾಗಿದೆ. ಆದರೆ ಪಿ.ಆರ್. ತಿಪ್ಪೇಸ್ವಾಮಿ ಅವರು ಪ್ಯಾರೀಸ್ ನಗರದ ಸೌಂದರ್ಯ ವರ್ಣನೆಯನ್ನು ಮಾಡುವುದರ ಜೊತೆಗೆ ಅತಿಯಾದ ನಗರೀಕರಣದ ಕಾರಣದಿಂದ ಪ್ಯಾರಿಸ್ ನಗರಕ್ಕೆ ಉಂಟಾಗಿರುವ ಕೆಡುಕುಗಳ ಬಗ್ಗೆಯೂ ಹೇಳಿದ್ದಾರೆ.

ಯುರೋಪ್ ಪ್ರವಾಸ ಕೈಗೊಂಡ ನಾಡಿನ ಪ್ರಮುಖ ಲೇಖಕರಲ್ಲಿ ಜಿ.ಎಸ್.ಶಿವರುದ್ರಪ್ಪ ಅವರು ಒಬ್ಬರು. ಶ್ರೀಯುತರು ಎರಡು ಪ್ರವಾಸ ಕೃತಿಗಳನ್ನು ಬರೆದಿದ್ದಾರೆ. ೧೯೭೩ರಲ್ಲಿ ಭಾರತ-ಸೋವಿಯಯತ್ ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ ಇಪ್ಪತ್ತೊಂದು ದಿನಗಳ ಕಾಲ ಮಾಸ್ಕೋ ಪ್ರವಾಸಕ್ಕೆ ತೆರಳಿದ್ದರು. ಸಮಯದ ಅಭಾವ ಹಾಗೂ ಪ್ರವಾಸದ ಯೋಜನೆಯ ಪರಿಮಿತಿಯ ಕಾರಣದಿಂದ ಯುರೋಪಿನ ಇತರ ದೇಶಗಳ ಭೇಟಿ ಸಾಧ್ಯವಾಗಿರಲಿಲ್ಲ ಎಂದಿದ್ದಾರೆ. ಜಿ.ಎಸ್. ಶಿವರುದ್ರಪ್ಪ ಅವರ ಮಗ ಪ್ರಸಾದ್ ಮತ್ತು ಆತನ ಮಡದಿಯು ವೈದ್ಯ ವೃತ್ತಿಯ ನಿಮಿತ್ತ ಇಂಗ್ಲೆಂಡ್‌ನ ಬರ್ಟನ್ ಎಂಬ ಸಣ್ಣ ಪಟ್ಟಣದಲ್ಲಿ ನೆಲೆಸಿರುತ್ತಾರೆ. ಅವರ ಕರೆಯ ಮೇರೆಗೆ ಅಲ್ಲಿಗೆ ತೆರಳಿದ ಲೇಖಕರು ನಾಲ್ಕು ತಿಂಗಳ ಕಾಲ ತಂಗಿದ್ದು ಯುರೋಪಿನ ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಅದರ ವಿವರಗಳನ್ನು 'ಇಂಗ್ಲೆಂಡಿನಲ್ಲಿ ಚತುರ್ಮಾಸ'(೧೯೯೬) ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಲೇಖಕರು ತಮ್ಮ ಅನುಭವಗಳನ್ನು ದಾಖಲಿಸುವಾಗ ಭಾರತ ಮತ್ತು ಯುರೋಪಿನ ದೇಶಗಳ ನಡುವಿನ ವ್ಯತ್ಯಾಸಗಳನ್ನು ಮತ್ತು ಸಾಮ್ಯತೆಗಳನ್ನು ಪರಿಗಣಿಸಿದ್ದಾರೆ. ತೌಲನಿಕ ದೃಷ್ಟಿಕೋನದ ಮೂಲಕ

ಅಭಿಪ್ರಾಯಗಳನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ತಾವು ಅಮೆರಿಕಾಗೆ ಭೇಟಿ ನೀಡಿ ಬಂದಿದ್ದರಿಂದ ಅಮೆರಿಕ ಜನರ ಮನೋಭಾವಗಳಿಗೂ ಯುರೋಪಿನವರ ಮನೋಭಾವಗಳಿಗೂ ತುಲನೆ ಮಾಡುವ ಮೂಲಕ ಸಂಸ್ಕೃತಿಯ ಅನನ್ಯತೆಗೆ ಕಾರಣಗಳನ್ನು ಪರಿಶೀಲಿಸಿದ್ದಾರೆ. ಯುರೋಪಿನಲ್ಲಿ 'ಥ್ಯಾಂಕ್ಯೂ' ಮತ್ತು 'ಬೈ' ಎಂಬ ಶಬ್ದಗಳು ಶಿಷ್ಟಾಚಾರದ ಅನಿವಾರ್ಯ ಅಂಗಗಳು. ಬಸ್ಸಿನ ಕಂಡಕ್ಟರ್‌ಗಳು ಮತ್ತು ಚಾಲಕರು ತಾವು ಭೇಟಿ ಮಾಡುವ ಪ್ರತಿವ್ಯಕ್ತಿಗಳಿಗೂ ವೆಲ್‌ಕಮ್, ಥ್ಯಾಂಕ್ಯೂ, ಬೈ ಪದಗಳನ್ನು ಬಳಸಬೇಕು. ಅದು ಅಲ್ಲಿನ ಶಿಷ್ಟಾಚಾರ. ಭಾರತದಲ್ಲಿ ಶಿಷ್ಟಾಚಾರದ ಅಂಗವಾಗಿ ಪರಿಚಯ ಇದ್ದವರಿಗೆ ಮಾತ್ರ 'ನಮಸ್ತೆ' ಎಂದು ಕೈ ಮುಗಿಯುತ್ತೇವೆ. ಇಂಗ್ಲೆಂಡಿನಲ್ಲಿ ಪರಿಚಯವಿರಲಿ, ಇಲ್ಲದಿರಲಿ ಮೇಲಿನ ಶಿಷ್ಟಾಚಾರವನ್ನು ತಪ್ಪದೇ ಪಾಲಿಸುತ್ತಾರೆ. ಅದು ಅಲ್ಲಿನ ಸಂಸ್ಕೃತಿಯ ಭಾಗವಾಗಿದೆ ಎಂದಿದ್ದಾರೆ. ಆಚರಣೆ, ಸಂಪ್ರದಾಯಗಳು ಆಯಾ ಪ್ರದೇಶಗಳ ಬೇಡಿಕೆಗಳಿಗೆ ಅನುಗುಣವಾಗಿ ಚಾಲ್ತಿಯಲ್ಲಿರುತ್ತದೆ.

'ಇಂಗ್ಲೆಂಡಿನಲ್ಲಿ ಚತುರ್ಮಾಸ' ಪ್ರವಾಸ ಕೃತಿಯು ಓದುಗರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುತ್ತದೆ. ದೇವರ ಮೇಲಿನ ನಂಬಿಕೆಗೆ ಸಂಬಂಧಿಸಿದಂತೆ ಲೇಖಕರು ಅನೇಕ ವೈಚಾರಿಕ ಅಂಶಗಳನ್ನು ಚರ್ಚಿಸಿದ್ದಾರೆ. ಇಂಗ್ಲೆಂಡ್ ಕ್ರೈಸ್ತ ಸಂಸ್ಕೃತಿಯನ್ನು ಪಾಲಿಸುವ ದೇಶ. ಪ್ರತಿ ಹಳ್ಳಿಯಲ್ಲೂ ಒಂದು ಚರ್ಚು ಇದ್ದೇ ಇರುತ್ತದೆ. ಚರ್ಚು ದೇವರ ಆರಾದನೆಯ ಸ್ಥಳ. ಈ ಆರಾದನೆಯ ಸ್ಥಳದ ಆವರಣದೊಳಗೆಯೇ ಪ್ರಮುಖ ವ್ಯಕ್ತಿಗಳ ಸಮಾಧಿಯನ್ನು ಮಾಡಲಾಗಿರುತ್ತದೆ. ಲೇಖಕರು ಷೇಕ್ಸ್‌ಪಿಯರ್‌ನ ಸಮಾಧಿಯನ್ನು ನೋಡಲು 'ಹೋಲಿ ಟ್ರನಿಟಿ ಚರ್ಚ್'ಗೆ ಭೇಟಿ ನೀಡಿದ್ದಾರೆ. ಇಲ್ಲಿ ಒಂದು ಫಲಕವನ್ನು ಹಾಕಲಾಗಿರುತ್ತದೆ. "ಭಗವಂತನ ಮನೆಗೆ ಸ್ವಾಗತ".(ವೆಲ್‌ಕಂ ಟು ದ ಹೌಸ್ ಆಫ್ ಗಾಡ್) ಈ ಫಲಕವನ್ನು ಕಂಡು ಲೇಖಕರು ಭಾರತದ ದೇವಾಲಯಗಳಲ್ಲಿನ ಪದ್ಧತಿಗಳೊಂದಿಗೆ ಹೋಲಿಸಿದ್ದಾರೆ. ಇಂಗ್ಲೆಂಡಿನಲ್ಲಿ ಚರ್ಚಿಗೆ ಯಾರೇ ಬಂದರೂ ಯಾವುದೇ ಭೇದಭಾವ ಇಲ್ಲದೆ ಮುಕ್ತವಾಗಿ ಸ್ವಾಗತ ಮಾಡುತ್ತಾರೆ. ಅದೇ ನಮ್ಮ ಭಾರತದ ಬಹುತೇಕ ದೇವಾಲಯಗಳಲ್ಲಿ 'ವಿದೇಶಿಯರಿಗೆ ಪ್ರವೇಶವಿಲ್ಲ' ಎಂಬ ಫಲಕವನ್ನು ತೂಗುಹಾಕಿರುವುದನ್ನು ನೆನಪಿಸಿಕೊಂಡಿದ್ದಾರೆ. ಲೇಖಕರು ಈ ಅಂಶವನ್ನು ಗಮನಿಸಿ "ದೇವರೆಂದರೆ ಯಾರೋ ಕೆಲವರಿಗೆ, ಅದೂ ಯಾವುದೋ ಒಂದು ಧರ್ಮಕ್ಕೆ ಸೇರಿದವರಿಗೆ ಮೀಸಲಾದದ್ದು ಎಂಬ ಮಡಿವಂತ ಪುರೋಹಿತ ಷಾಹಿಯ ಈ ಧೋರಣೆ ದೇವರ ಕಲ್ಪನೆಯನ್ನು ಅವಮಾನಗೊಳಿಸುವಷ್ಟು ವಿಕೃತವೂ ಅನುದಾರವೂ ಆಗಿದೆ"(ಜಿ.ಎಸ್. ಶಿವರುದ್ರಪ್ಪ., ಇಂಗ್ಲೆಂಡಿನಲ್ಲಿ ಚತುರ್ಮಾಸ., ಪು–೩೬)ಎಂದಿದ್ದಾರೆ. ಭಾರತೀಯರು ಮಡಿವಂತಿಕೆಯನ್ನು ತಮಗೆ ಬೇಕಾದ ರೀತಿಯಲ್ಲಿ, ದೇವರ ಹೆಸರಿನಲ್ಲಿ ಆಚರಿಸುತ್ತಾರೆ ಎಂದಿದ್ದಾರೆ. ಲೇಖಕರ ಅಭಿಪ್ರಾಯವು 'ದೇವರು ತಾರತಮ್ಯ ಮಾಡುತ್ತಿದ್ದಾನೆಯೋ? ಅಥವಾ ಜನರು ತಾರತಮ್ಯ ಮಾಡುತ್ತಿದ್ದಾರೋ' ಎಂದು ಓದುಗರು ಪ್ರಶ್ನಿಸಿಕೊಳ್ಳುವಂತಿದೆ. ಅದರ ಮೂಲಕ ಆಸ್ತಿಕ ಓದುಗರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದ್ದಾರೆ. ಸಾಹಿತ್ಯ ವಿಮರ್ಶಕರು ಕಥೆ, ಕಾದಂಬರಿಗಳನ್ನು ಮಾತ್ರ 'ವೈಚಾರಿಕ ಪ್ರಜ್ಞೆಯುಳ್ಳ ಕೃತಿ' ಎಂದು ಪರಿಗಣಿಸುತ್ತಾರೆ. ಪ್ರವಾಸ ಕೃತಿಗಳಲ್ಲಿಯೂ ಓದುಗರಿಗೆ ವೈಚಾರಿಕ ಪ್ರಜ್ಞೆಯನ್ನು ಬೆಳೆಸುವ ಮತ್ತು ವಿದೇಶಿ ಸಂಸ್ಕೃತಿಗಳ ಬಗ್ಗೆ ವಿವಿಧ ಆಯಾಮಗಳನ್ನು ನೀಡುವ ಅಂಶಗಳಿರುತ್ತವೆ ಎಂಬುದಕ್ಕೆ ಈ ಪ್ರವಾಸ ಕೃತಿಯು ನಿದರ್ಶನವಾಗಿದೆ.

ನಮ್ಮ ದೇಶ, ನಮ್ಮ ಭಾಷೆ, ನಮ್ಮ ಸಂಸ್ಕೃತಿಯನ್ನು ವಿವಿಧ ಕಲಾ ಮಾಧ್ಯಮಗಳ ಮೂಲಕ ಜನರಿಗೆ ತಲುಪಿಸುವ ಕಲಾವಿದರನ್ನು ಗೌರವಿಸುವುದು ನಮ್ಮ ಆದ್ಯ ಕರ್ತವ್ಯ. ಷೇಕ್ಸ್‌ಪಿಯರ್ ಜಗತ್ತಿನ ಶ್ರೇಷ್ಠ ಲೇಖಕ.

ಅವರು ತಮ್ಮ ಕೃತಿಗಳ ಮೂಲಕ ಜಗತ್ತಿಗೆ ಇಂಗ್ಲೆಂಡಿನ ಪ್ರಾಚೀನ ಸಂಸ್ಕೃತಿಯ ವೈವಿಧ್ಯತೆಯನ್ನು ಪರಿಚಯಿಸಿದ್ದಾರೆ. ಆದಕಾರಣ ಆಸಕ್ತರೆಲ್ಲಾ ಸೇರಿ ಸರಕಾರದ ಅನುದಾನದ ಹಂಗಿಲ್ಲದೆ 'ಷೇಕ್ಸ್‌ಪಿಯರ್ ಬರ್ತ್ ಪ್ಲೇಸ್ ಟ್ರಸ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮೂಲಕ ಷೇಕ್ಸ್‌ಪಿಯರ್‌ನ ಜೀವನ ಮತ್ತು ಸಾಧನೆಗಳನ್ನು ಪ್ರಪಂಚದ ವಿವಿಧ ದೇಶಗಳ ಜನರಿಗೆ ಪರಿಚಯಿಸುವ ಕೆಲಸವನ್ನು ಆಸ್ಥೆಯಿಂದ ನಿರ್ವಹಿಸುತ್ತಿದ್ದಾರೆ. ಇದನ್ನು ಗಮನಿಸಿದ ಜಿ.ಎಸ್.ಎಸ್ ಅವರು 'ನಾವು ನಮ್ಮ ಸಾಹಿತಿಗಳನ್ನು, ಕಲಾವಿದರನ್ನು ಎಷ್ಟರಮಟ್ಟಿಗೆ ಆದರಿಸಿದ್ದೇವೆ? ಗೌರವಿಸಿದ್ದೇವೆ?. ಅವರಿಗೆ ಸಲ್ಲಬೇಕಾದ ಕನಿಷ್ಠ ಗೌರವವನ್ನಾದರೂ ಸಲ್ಲಿಸಬೇಕು' ಎಂದು ಹೇಳಿದ್ದಾರೆ. ನಮ್ಮ ಸಾಹಿತಿಗಳನ್ನು ಜನರಿಗೆ ಪರಿಚಯಿಸುವಲ್ಲಿ, ಅವರ ತತ್ವಾದರ್ಶಗಳನ್ನು ಜನತೆಗೆ ಮುಟ್ಟಿಸುವಲ್ಲಿ ಮಾಡುತ್ತಿರುವ ಪ್ರಯತ್ನ ಸಾಲದು ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಲೇಖಕರ ಅಭಿಪ್ರಾಯವನ್ನು ಒಪ್ಪುತ್ತಾ ಭಾರತೀಯ ಸಂದರ್ಭದಲ್ಲಿ ಕಲಾವಿದರನ್ನು ಗುರುತಿಸುವಾಗ ನಡೆಯುತ್ತಿರುವ ಜಾತಿ ರಾಜಕಾರಣವನ್ನು ಪರಿಗಣಿಸಬೇಕಾಗುತ್ತದೆ. ಸಂಸ್ಕೃತಿಯ ವಾಹಕರಾದ ಸಾಹಿತಿ, ಕಲಾವಿದರನ್ನು ಜಾತಿ ಧರ್ಮಗಳ ಹಿನ್ನೆಲೆಯಲ್ಲಿ ನೋಡುವ ಪರಿಪಾಠ ಬೆಳೆದಿರುವುದು ಆತಂಕಕಾರಿಯಾದುದಾಗಿದೆ. ರಾಜಕೀಯ ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ಸಾಹಿತಿ, ಕಲಾವಿದರ ಹೆಸರನ್ನು ಬಳಸಿಕೊಳ್ಳುವ ಪರಿಪಾಠವು ಶೋಭೆ ತರುವ ವಿಚಾರವಲ್ಲ. ಸಾಹಿತಿ, ಕಲಾವಿದರನ್ನು ಜಾತ್ಯಾತೀತ, ಧರ್ಮಾತೀತ, ಲಿಂಗಾತೀತವಾಗಿ ಕಂಡು ಗೌರವವನ್ನು ಸಲ್ಲಿಸುವ ಕಾರ್ಯವಾಗಬೇಕಿದೆ.

ಇಪ್ಪತ್ತನೆಯ ಶತಮಾನದ ಕೊನೆಯ ದಶಕದ ಅಂತಿಮ ವರ್ಷದಲ್ಲಿ ಎರಡು ಪ್ರಮುಖ ಮಹಿಳಾ ಪ್ರವಾಸ ಕೃತಿಗಳು ಪ್ರಕಟಗೊಂಡವು. ಅವುಗಳೆಂದರೆ ನೇಮಿಚಂದ್ರರವರ 'ಒಂದು ಕನಸಿನ ಪಯಣ' ಮತ್ತು ಹೇಮಲತಾ ಮಹಿಷಿಯವರ 'ಯೂರೋ-ದರ್ಶನ'. ೩೫ ದಿನಗಳಲ್ಲಿ ಆರು ದೇಶಗಳಿಗೆ, ಭಾಷೆ ತಿಳಿಯದ ನಾಡಿನಲ್ಲಿ, ಇಬ್ಬರೇ ಹೆಣ್ಣುಮಕ್ಕಳು ಪ್ರವಾಸ ಹೋಗಿ ಬಂದಿದ್ದಾರೆ. ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿಯೂ ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ತ್ರೀಯರನ್ನು ವಿದೇಶಗಳಿಗೆ ಕಳುಹಿಸುವ ಮುಕ್ತ ವಾತಾವರಣ ಇರಲಿಲ್ಲ. ಆದರೂ ಇಬ್ಬರೇ ಸ್ತ್ರೀಯರು ದಿಟ್ಟತನದಿಂದ ಯುರೋಪ್ ಪ್ರವಾಸ ಮಾಡಿರುವುದು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿದೆ.

ಹೇಮಲತಾ ಮಹಿಷಿ ಅವರು 'ಯೂರೋ-ದರ್ಶನ' ಕೃತಿಯಲ್ಲಿ ಯುರೋಪಿನ ಪ್ರವಾಸದ ಅನುಭವಗಳನ್ನು ವಿವರವಾಗಿ ದಾಖಲಿಸಿದ್ದಾರೆ. ಇವರ ಪ್ರವಾಸದ ವಿಶಿಷ್ಟತೆ ಎಂದರೆ 'ನಿಯೋಜಿತವಲ್ಲದ ಸ್ವತಂತ್ರ ಸುತ್ತಾಟ'. ಇಲ್ಲಿ ಲೇಖಕಿಗೆ ಸಂಪೂರ್ಣ ಸ್ವಾತಂತ್ರ್ಯ ಇತ್ತು. ತಮಗೆ ಬೇಕು ಎನಿಸಿದ ಸ್ಥಳಗಳಿಗೆ ಹೋಗಬಹುದಿತ್ತು. ತಮ್ಮ ಅಗತ್ಯಕ್ಕೆ ತಕ್ಕಂತೆ ಸುತ್ತಬಹುದಿತ್ತು. ಎಲ್ಲಿ ತಮಗೆ ಸೂಕ್ತ ಎನಿಸುತ್ತದೆಯೋ ಆ ಸ್ಥಳದಲ್ಲಿ ಉಳಿದುಕೊಳ್ಳಬಹುದಿತ್ತು. ತಮಗೆ ಆಪ್ತವೆನಿಸಿದ ಸ್ಥಳದಲ್ಲಿ ಎಷ್ಟು ಹೊತ್ತು ಬೇಕಾದರೂ ಇರಬಹುದಿತ್ತು. ಯಾರ ಹಂಗೂ ಇಲ್ಲದೆ, ತಮ್ಮದೇ ಯೋಜನೆಯಂತೆ ಪ್ರವಾಸದ ಆನಂದವನ್ನು ಅನುಭವಿಸಬಹುದಿತ್ತು. ಆದರೆ ಅಷ್ಟೇ ಅಪಾಯವೂ ಇತ್ತು. ಸುರಕ್ಷತೆಯ ಬಗ್ಗೆ ಯಾವುದೇ ಸೌಕರ್ಯಗಳಿರಲಿಲ್ಲ. ತೊಂದರೆ ಆದರೆ ಯಾರೂ ಸಹಾಯಕ್ಕೆ ಬರುವಂತಿರಲಿಲ್ಲ. ಈ ಬಗೆಯ ಪ್ರವಾಸಗಳಲ್ಲಿ ಜವಾಬ್ದಾರಿ ಹೆಚ್ಚಿರುತ್ತದೆ. ದೊಡ್ಡೇರಿ ವೆಂಕಟಗಿರಿರಾವ್ ಅವರು ಏಕಾಂಗಿಯಾಗಿ ಯುರೋಪಿನ ಹಲವು ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಇವರು 'ಏಕಾಕಿ ಪ್ರವಾಸಿಗಳಿಗೆ ಜವಾಬ್ದಾರಿ ಹೆಚ್ಚು ಎಂದಿದ್ದಾರೆ. ಅವರು ಬರೆದಿರುವ 'ಏಕಾಕಿ ಪ್ರವಾಸಿ' ಪುಸ್ತಕವು ಏಕಾಂಗಿಯಾಗಿ ಪ್ರವಾಸ ಹೋಗುವವರಿಗೆ ಬಹಳ

ಉಪಯುಕ್ತವಾಗಿದೆ. ಮಾರ್ಗದರ್ಶಿ ಕೈಪಿಡಿಯ ಮಾದರಿಯಲ್ಲಿದೆ. ಈ ಕೃತಿಯ ಸಹಾಯದಿಂದ ಹಾಗೂ ತಮಗೆ ಪರಿಚಯವಿರುವ ವಿದೇಶಿ ಸ್ನೇಹಿತರ ಸಹಕಾರದಿಂದ ಯುರೋಪ್ ಪ್ರವಾಸ ಮಾಡಿದ್ದಾಗಿ ಲೇಖಕಿ ಹೇಳಿಕೊಂಡಿದ್ದಾರೆ.

ಹೇಮಲತಾ ಮಹಿಷಿ ಅವರು ಸಂದರ್ಶಿಸಿದ ದೇಶಗಳ ನಡುವಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಗುರುತಿಸಿದ್ದಾರೆ. ಭಾರತೀಯ ಸಂಸ್ಕೃತಿಯ ಒಂದು ಧಾರೆ ಯುರೋಪಿನಲ್ಲಿಯೂ ಪ್ರವಹಿಸುತ್ತಿದೆ ಎಂದಿದ್ದಾರೆ. ಸಂಸ್ಕೃತಿಯ ಸಂಬಂಧವಾಗಿ ವೈವಿಧ್ಯಮಯ ಅನುಭವಗಳನ್ನು ಪಡೆದಿದ್ದಾರೆ. ಅವುಗಳಲ್ಲಿ ಒಂದು ಘಟನೆಯನ್ನು ಉಲ್ಲೇಖಿಸುವುದು ಸೂಕ್ತವಾಗಿದೆ. ಫ್ರಾನ್ಸ್‌ನಲ್ಲಿ ಒಮ್ಮೆ ಭೂಗತ ರೈಲಿನ ಸ್ಟೇಷನ್‌ನಿಂದ ಸಿಟಿ ಯೂನಿವರ್ಸಿಟಿಗೆ ಹೋಗಬೇಕಾಗಿರುತ್ತದೆ. ಸಮಯ ರಾತ್ರಿ ಹತ್ತು ಗಂಟೆ ದಾಟಿರುತ್ತದೆ. ಅದೇ ಸಂದರ್ಭದಲ್ಲಿ ಟಿಕೇಟ್ ನೀಡುವ ಯಂತ್ರ ಕೆಟ್ಟು ಇವರಿಗೆ ಟಿಕೇಟ್ ಸಿಗುವುದಿಲ್ಲ. ಒಂದು ಕೌಂಟರಿನಲ್ಲಿ ಫ್ರೆಂಚ್ ಮನುಷ್ಯ ಕುಳಿತಿರುತ್ತಾನೆ. ಆತನಿಗೆ ಟಿಕೇಟ್ ನೀಡುವಂತೆಯೂ, ಸಹಾಯ ಮಾಡುವಂತೆಯೂ ಎಷ್ಟೇ ಅಂಗಲಾಚಿ ಬೇಡಿಕೊಂಡರೂ ಆತ ಇವರ ಮಾತನ್ನು ಕೇಳಿಸಿಕೊಳ್ಳದವನಂತೆ ನಟಿಸುತ್ತಾ ಕೌಂಟರಿನಲ್ಲಿಯೇ ಕುಳಿತಿರುತ್ತಾನೆ. ಆಗ ಲೇಖಕಿ "ಫ್ರೆಂಚರ ಬಗ್ಗೆ ಸ್ವಲ್ಪ ಅಭಿಪ್ರಾಯ ಕೆಟ್ಟಿತು"(ಹೇಮಲತಾ ಮಹಿಷಿ., ಯೂರೋ-ದರ್ಶನ., ಪು-೯೭)ಎನ್ನುತ್ತಾರೆ. ಸಂಕಷ್ಟದಲ್ಲಿರುವ ಸ್ತ್ರೀಯರನ್ನು ಸಹಾಯ ಮಾಡುವಲ್ಲಿ ತೋರುವ ಅನಾದರ ಮನೋಭಾವವನ್ನು ಒಂದು ದೇಶದ ಸಂಸ್ಕೃತಿಯ ಭಾಗವಾಗಿ ಪರಿಗಣಿಸಬೇಕಿಲ್ಲ. ಆದರೆ ಸ್ಥಳೀಯವಾಗಿ ಅಲ್ಲಿನ ಜನರಲ್ಲಿ ವಿದೇಶದವರ ಬಗ್ಗೆ ಅಥವಾ ಸ್ತ್ರಿಯರ ಬಗೆಗಿರುವ ನಿರ್ಲಕ್ಷ್ಯ ಧೋರಣೆಯನ್ನು ಇದು ಪ್ರತಿನಿಧಿಸುತ್ತದೆ. ಹೇಮಲತಾ ಮತ್ತು ನೇಮಿಚಂದ್ರ ಇಬ್ಬರೂ ಈ ಘಟನೆಯನ್ನು ಎದುರಿಸಿದ್ದರೂ ನೇಮಿಚಂದ್ರ ಅವರು ಉಲ್ಲೇಖಿಸಿಲ್ಲ. ಪ್ರವಾಸ ಕೃತಿಗಳನ್ನು ಬರೆಯುವಾಗ ಎಲ್ಲಾ ಘಟನೆಗಳನ್ನು ನಮೂದಿಸಬೇಕಿಲ್ಲ. ಘಟನೆಗಳ ಆಯ್ಕೆಯಲ್ಲಿ ಲೇಖಕರ ಮನೋಧರ್ಮಗಳು ಪ್ರಭಾವ ಬೀರುತ್ತವೆ ಎಂಬುದನ್ನು ಈ ಮೇಲಿನ ಉದಾಹರಣೆಯಿಂದ ತಿಳಿಯಬಹುದು.

ಪ್ಯಾರಿಸ್ ನಗರ ಸ್ವಚ್ಛವಾಗಿದೆ ಎಂದು ಅನೇಕ ಲೇಖಕರು ಹೇಳಿದ್ದಾರೆ. ಹೇಮಲತಾ ಮಹಿಷಿ ಅವರು ಪ್ಯಾರಿಸ್ಸನ್ನು ಕುರಿತು "ಪ್ಯಾರಿಸ್ಸಿನಲ್ಲಿ ಕುಡಿದು-ತಿಂದು ಎಸೆದ ಬಾಟಲ್‌ಗಳು, ಡಬ್ಬಿಗಳು, ಕಾಗದಗಳು, ರಸ್ತೆಯ ಮಗ್ಗುಲಲ್ಲಿ ಬಿದ್ದಿರುತ್ತವೆ" (ಹೇಮಲತಾ ಮಹಿಷಿ., ಯೂರೋ-ದರ್ಶನ., ಪು-೯೯)ಎಂದಿದ್ದಾರೆ. ಒಬ್ಬರಿಗೆ ಆಗುವ ಅನುಭವಗಳೇ ಮತ್ತೊಬ್ಬರಿಗೆ ಆಗುವುದಿಲ್ಲ. ಇದಕ್ಕೆ ಮತ್ತೊಂದು ಉದಾಹರಣೆ ಎಂದರೆ ದೇವಕಿ ಮೂರ್ತಿಯವರು ಟ್ರಾಫಿಕ್ ರೂಲ್ಸ್‌ಗಳು ಸುವ್ಯವಸ್ಥಿತವಾಗಿದೆ. ಎಲ್ಲರೂ ಚಾಚುತಪ್ಪದೆ ಪಾಲಿಸುತ್ತಾರೆ' ಎಂದು ಹೇಳಿದ್ದಾರೆ. ಅದೇ ಹೇಮಲತಾ ಮಹಿಷಿ ಅವರು "ನಿಲ್ಲುವ ರಸ್ತೆ ಸಿಗ್ನಲ್ ಇದ್ದರೂ ನಿಲ್ಲಿಸದೆ ವಾಹನಗಳು ಹೋಗುತ್ತಿರುತ್ತವೆ. ಪ್ಯಾರಿಸ್ಸಿನಲ್ಲಿ ಕಾರಿನ ವೇಗವೂ ಜಾಸ್ತಿ. ಮೋಟಾರ್ ಬೈಕ್ ಸವಾರರಂತು ಯಾರನ್ನೂ ಲಕ್ಷಿಸದೇ ವೇಗವಾಗಿ ಹೋಗುತ್ತಿರುತ್ತಾರೆ. ಕೆಲವೊಮ್ಮೆ ಪಾದಾಚಾರಿ ರಸ್ತೆಯ ಮೇಲೂ ಹೋಗುತ್ತಿರುತ್ತಾರೆ" (ಹೇಮಲತಾ ಮಹಿಷಿ., ಯೂರೋ-ದರ್ಶನ., ಪು-೯೯)ಎಂದಿದ್ದಾರೆ. ಅನುಭವಗಳು ದೃಷ್ಟಿಕೋನವನ್ನು ರೂಪಿಸುತ್ತದೆ.

ಪ್ಯಾರಿಸ್ ನಗರದ ಬಗೆಗೆ ಈ ಇಬ್ಬರು ಲೇಖಕಿಯರ ಅನುಭವಗಳನ್ನು ಗಮನಿಸಿದಾಗ 'ಭಾರತದ ನಗರಗಳಲ್ಲಿನ ದೃಶ್ಯಕ್ಕಿಂತ ಭಿನ್ನವೆಂದು ಅನಿಸುವುದಿಲ್ಲ'. ರಸ್ತೆ ಸಂಚಾರ ನಿಯಮಗಳನ್ನು ಮುರಿಯುವ ಬಗ್ಗೆ ಆಗಲೀ, ಸ್ವಚ್ಛತೆಯ ಬಗ್ಗೆ ಆಗಲೀ, ಅಥವಾ ಪ್ಯಾರಿಸ್ ನಗರದಲ್ಲಿ ಒಬ್ಬ ಟ್ಯಾಕ್ಸಿಯವನಿಂದ ಮೋಸ

ಹೋಗುವ ಸಂದರ್ಭವಾಗಲಿ, ಈ ಘಟನೆಗಳು ಭಾರತದ ನಗರಗಳಲ್ಲಿ ನಡೆಯುವ ಘಟನೆಗಳಿಗಿಂತ ಭಿನ್ನವೆಂದು ಅನಿಸುವುದಿಲ್ಲ. ಯಾವುದೇ ದೇಶ ತಮ್ಮ ಪ್ರಜೆಗಳ ಮೇಲೆ ನಿಯಮಗಳನ್ನು ಕಟ್ಟುನಿಟ್ಟಾಗಿ ಹೇರಿದ ಮಾತ್ರಕ್ಕೆ ಪಾಲನೆ ಮಾಡುತ್ತಾರೆ ಎನ್ನುವಂತಿಲ್ಲ. ಆದರೆ ಕೆಲವು ಪ್ರವಾಸಿ ಲೇಖಕರಿಗೆ ಪ್ಯಾರಿಸ್ ನಗರವು ಕಲಾ ವೈಭವದ ನೆಲೆಯಾಗಿದೆ. ದೇವಕಿ ಮೂರ್ತಿ, ಪಿ. ಆರ್. ತಿಪ್ಪೇಸ್ವಾಮಿ ಮೊದಲಾದವರಿಗೆ ಪ್ಯಾರಿಸ್ ನಗರವು ರಮ್ಯವಾದ ಸುಂದರವಾದ ಕಲಾತ್ಮಕತೆಯಿಂದ ಕೂಡಿದ, ಅಂತೆಯೇ ಅಲ್ಲಿನ ಜನರು, ಸರಕಾರದ ವ್ಯವಸ್ಥೆ ಎಲ್ಲವೂ ಅಚ್ಚುಕಟ್ಟು ಎಂಬಂತೆ ಕಾಣುತ್ತದೆ. ದೃಷ್ಟಿಕೋನದಲ್ಲಿನ ವ್ಯತ್ಯಾಸವು ಇದಕ್ಕೆ ಕಾರಣವಾಗಿರುವ ಸಾಧ್ಯತೆ ಇದೆ. ಸ್ಥಳ ಕಾಲಗಳು ಬದಲಾದಂತೆ ಪ್ರವಾಸಿಗರಿಗೆ ದೊರೆಯುವ ಅನುಭವಗಳಲ್ಲಿಯೂ ವ್ಯತ್ಯಾಸಗಳಾಗುತ್ತದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

ಇಂಗ್ಲೆಂಡ್ ದೇಶಕ್ಕೆ ಪ್ರವಾಸ ಹೋದವರೆಲ್ಲರೂ ಇಂಗ್ಲೆಂಡಿನ ಥೇಮ್ಸ್ ನದಿಯನ್ನು, ಬಕಿಂಗ್ ಹ್ಯಾಮ್ ಪ್ಯಾಲೇಸ್‌ನ್ನು ಹೆಚ್ಚಿನವರು ಹೊಗಳಿದ್ದಾರೆ. ಆದರೆ ಹೇಮಲತಾ ಮಹಿಷಿ ಅವರು ಇಂಗ್ಲೆಂಡಿನ ಬಕಿಂಗ್‌ಹ್ಯಾಂ ಪ್ಯಾಲೇಸ್‌ನ್ನು ಕಂಡು "ನಮ್ಮ ಮೈಸೂರಿನ, ರಾಜಾಸ್ತಾನದ ಅರಮನೆಗಳನ್ನು ನೋಡಿದರೆ ಬಕ್ಕಿಂಗ್ ಹ್ಯಾಂ ಸಾಧಾರಣವಾದುದು. ನಿರಾಶೆಗೊಳಿಸುವಂತಹುದು" (ಹೇಮಲತಾ ಮಹಿಷಿ., ಯೂರೋ-ದರ್ಶನ., ಪು-೬೧) ಥೇಮ್ಸ್ ನದಿಯನ್ನು ನೋಡಿ "ಅಯ್ಯೋ, ಇದೇನಾ ಥೇಮ್ಸ್ ! ಇದೆಂತಹಾ ನದಿ ಎನಿಸಿದ್ದು ಸುಳ್ಳಲ್ಲ" (ಹೇಮಲತಾ ಮಹಿಷಿ., ಯೂರೋ-ದರ್ಶನ., ಪು-೩೧)ಎಂದಿದ್ದಾರೆ. ನೋಡಿದ ವಸ್ತು ಒಂದೇ ಆಗಿದ್ದರೂ, ವ್ಯಕ್ತಿ ಬದಲಾದ ಹಾಗೆ ಅಭಿಪ್ರಾಯಗಳು ಬದಲಾಗುತ್ತವೆ. ನೋಡುವವನ ದೃಷ್ಟಿಕೋನ ಮತ್ತು ಆತ ಹೊಂದಿರುವ ಸಾಂಸ್ಕೃತಿಕ ಪ್ರಜ್ಞೆಯ ಕಾರಣದಿಂದ ಅಭಿಪ್ರಾಯಗಳಲ್ಲಿ ಈ ಬಗೆಯ ಭಿನ್ನತೆ ಕಂಡುಬರುತ್ತದೆ. ಹೇಮಲತಾ ಮಹಿಷಿ ಅವರು ಭಾರತದ ದೇಶದ ಅಭಿವೃದ್ಧಿಯ ಕಾರ್ಯಗಳನ್ನು ಯುರೋಪಿನ ದೇಶಗಳಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳೊಂದಿಗೆ ಹೋಲಿಸಿರುವುದಿಲ್ಲ. ಹಾಗೂ ಎಲ್ಲಿಯೂ ಭಾರತದ ಬಗ್ಗೆ ಋಣಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಬದಲಿಗೆ ತಾನು ಸಂದರ್ಶಿಸಿದ ದೇಶಗಳಲ್ಲಿ ತಾನು ನೋಡಿದ, ಅನುಭವಿಸಿದ ಅನುಭವಗಳನ್ನು ವಿವರಿಸುವಾಗ ನನ್ನ ದೇಶವೇ ಶ್ರೇಷ್ಠ ಎಂಬ ಭಾವನೆಗಳು ವ್ಯಕ್ತವಾಗಿರುವುದನ್ನು ಗುರುತಿಸಲಾಗಿದೆ.

ಹೇಮಲತಾ ಮಹಿಷಿ ಅವರ ಜೊತೆಗಾರ್ತಿಯಾಗಿ ನೇಮಿಚಂದ್ರ ಅವರು ಪ್ರವಾಸ ಮಾಡಿದ್ದಾರೆ. ನೇಮಿಚಂದ್ರ ಅವರು 'ಒಂದು ಕನಸಿನ ಪಯಣ' ಕೃತಿ ರಚಿಸಿದ್ದಾರೆ. ಇಬ್ಬರೇ ಮಹಿಳೆಯರು ಭಾಷೆ, ಸಂಸ್ಕೃತಿ ತಿಳಿಯದ ನಾಡಿನಲ್ಲಿ ಸುತ್ತಾಡಿ ಬಂದು ಅನುಭವಗಳನ್ನು ಕೃತಿಗಳ ಮೂಲಕ ವ್ಯಕ್ತಪಡಿಸಿದ್ದಾರೆ. ನೇಮಿಚಂದ್ರ ಅವರು ಪ್ರವಾಸಕ್ಕೆ ಯುರೋಪ್ ದೇಶಗಳನ್ನೇ ಆಯ್ಕೆ ಮಾಡಿಕೊಳ್ಳಲು ಒಂದು ಕಾರಣವಿದೆ. ಜಗತ್ತಿನ ಪ್ರಮುಖ ಮಹಿಳಾ ವಿಜ್ಞಾನಿಗಳ ಜೀವನ ಚರಿತ್ರೆಯನ್ನು ಬರೆಯುವ ಯೋಜನೆಯನ್ನು ಹಾಕಿಕೊಂಡಿದ್ದರು. ಜಗತ್ತಿನ ಪ್ರಮುಖ ಮಹಿಳಾ ವಿಜ್ಞಾನಿಗಳಲ್ಲಿ ಹೆಚ್ಚು ಜನ ಯುರೋಪಿನ ಭಾಗದಲ್ಲಿದ್ದರು. ಅವರ ಜನ್ಮಸ್ಥಳಕ್ಕೆ ಭೇಟಿನೀಡಿ, ಅವರ ಪ್ರಯೋಗಾಲಯ, ಅವರು ಉಪಯೋಗಿಸುತ್ತಿದ್ದ ಪುಸ್ತಕಗಳು, ವಸ್ತುಗಳು ಹೀಗೆ ವಿವಿಧ ಕೋನಗಳಲ್ಲಿ ಅವರ ಬದುಕನ್ನು ಪ್ರತ್ಯಕ್ಷವಾಗಿ ಕಂಡು ಅದನ್ನು ಜೀವನ ಚರಿತ್ರೆಯಾಗಿ ಬರೆಯುವ ಉದ್ದೇಶದೊಂದಿಗೆ ಪ್ರವಾಸ ಮಾಡಿದ್ದಾರೆ.

ಭಾರತೀಯ ಸಂಸ್ಕೃತಿಯನ್ನು ಅಭಿಮಾನದಿಂದ ಮೆಚ್ಚಿಕೊಳ್ಳುವ ನೇಮಿಚಂದ್ರ ಅವರು, ಭಾರತೀಯ ಸಂಸ್ಕೃತಿಯಲ್ಲಿರುವ ಮೂಢ ಆಚರಣೆಗಳನ್ನು ಅಷ್ಟೇ ಕಟುವಾಗಿ ತಿರಸ್ಕರಿಸಿದ್ದಾರೆ. ಇವರು ಬೆಂಗಳೂರಿನಿಂದ

ಹೊರಟ ದಿನದಂದು ಆಕಾಶದಲ್ಲಿ ಧೂಮಕೇತು ಕಾಣಿಸುತ್ತದೆ. ಅದನ್ನು ಅಪಶಕುನ ಎಂದು ಅದನ್ನು ನೋಡಬಾರದಾಗಿ ಹೇಳಿದಾಗ 'ಅವರವರ ನಂಬಿಕೆಗೆ ಸುಮ್ಮನೆ ನಕ್ಕಿದ್ದೆ' ಎನ್ನುತ್ತಾರೆ. ದೂರ ಪ್ರಯಾಣ ಹೋಗುವಾಗ ಹೆಣ ಅಡ್ಡ ಬಂದರೆ ಶುಭ ಎಂದು ಯಾರೋ ಹೇಳಿದಾಗ "ಇವರ ಶುಭ ಶಕುನಕ್ಕೆ ಯಾರದೋ ಹೆಣ ಬೀಳಬೇಕೆ?"(ನೇಮಿಚಂದ್ರ., ಒಂದು ಕನಸಿನ ಪಯಣ., ಪು-೪,೫)ಎಂದು ಪ್ರಶ್ನಿಸಿದ್ದಾರೆ. ನೇಮಿಚಂದ್ರ ಅವರು ವೈಚಾರಿಕ ಬರೆಹಗಾರ್ತಿಯಾಗಿ ಗುರುತಿಸಿಕೊಳ್ಳುತ್ತಾರೆ. ಇವು ಲೇಖಕಿಯ ವ್ಯಕ್ತಿಗತ ವಿಚಾರಗಳಾದರೂ ಪ್ರವಾಸ ಕೃತಿಯ ಸ್ವರೂಪವನ್ನು ವಿಮರ್ಶಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಲೇಖಕಿಯ ವೈಜ್ಞಾನಿಕ ಮನೋಭಾವವು ಮೂಢನಂಬಿಕೆಗಳ ವಿರುದ್ಧದ ದನಿ ವ್ಯಕ್ತವಾಗಲು ಕಾರಣವಾಗಿದೆ.

ಲೇಖಕಿ ನೇಮಿಚಂದ್ರ ಅವರು ಯುರೋಪಿನ ದೇಶಗಳಲ್ಲಿ ಕಂಡ ವಸ್ತು ವಿಷಯಗಳಲ್ಲಿ ದೇಶದ ಬಗೆಗಿನ ಅಭಿಮಾನ, ಸ್ವಸಂಸ್ಕೃತಿಯ ಸಮರ್ಥನೆ ಇದೆ. ಯುರೋಪಿಯನ್ ಸಂಸ್ಕೃತಿಯಲ್ಲಿನ ದ್ವಂದ್ವತೆ ಮತ್ತು ಅಸಭ್ಯತೆಯ ಬಗ್ಗೆ ಅಸಹನೆಯೂ ಇದೆ. ಯಾವುದೇ ಹೋಟೆಲ್‌ಗಳಿಗೆ ಹೋದರೆ ಅಲ್ಲಿ ತಿಂಡಿಯನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ನೀಡುತ್ತಿದ್ದರು. ಇದನ್ನು ನೋಡಿದ ಲೇಖಕಿ 'ಹೋಟೆಲಲ್ಲಿ ಕಾಗದ/ಪ್ಲಾಸ್ಟಿಕ್ ಬಳಕೆ ಜಾಸ್ತಿ, ಬಳಸಿ ಪುನರ್ಬಳಸು ಸಂಸ್ಕೃತಿ ಕಾಣೆಯಾಗುತ್ತ, ಬಳಸು ಬಿಸಾಕು ಎಂಬ ಕೊಳ್ಳುಬಾಕ ಸಂಸ್ಕೃತಿ ಬಂದಿದೆ. ಇದೇ ಸಂಸ್ಕೃತಿ ಭಾರತಕ್ಕೂ ಪ್ರವೇಶಿಸಿದೆ' ಎನ್ನುತ್ತಾರೆ. ಬೇರೆ ಪ್ರವಾಸಿ ಲೇಖಕರು ಕಾಣದ ಸಂಸ್ಕೃತಿಯ ವಿಕೃತಿಯನ್ನು ಲೇಖಕಿ ಹೇಳಿದ್ದಾರೆ. ಇಂಗ್ಲೆಂಡಿನಲ್ಲಾಗಲಿ ಫ್ರಾನ್ಸ್‌ನಲ್ಲಾಗಲಿ ಇನ್ನಿತರ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅತಿಯಾದ ಫ್ಯಾಶನ್ ಇತ್ತೀಚೆಗೆ ಹೆಚ್ಚಾಗುತ್ತಿದೆ. ಅದು ನಮ್ಮ ಮೂಲ ನಾಗರಿಕತೆಯ ಸಭ್ಯತೆಯ ಎಲ್ಲೆಯನ್ನು ಮೀರಿ ಬೆಳೆಯುತ್ತಿದೆ. ಅದರ ಬಗ್ಗೆ ಲೇಖಕಿಯ ಸಾತ್ವಿಕ ವಿಮರ್ಶೆ ಇದೆ. ಫ್ರಾನ್ಸ್ ನಗರದ ಫ್ಯಾಷನ್‌ನ ಪರಾಕಾಷ್ಠೆಯನ್ನು ಲೇಖಕಿಯು ಅಸಹನೆಯಿಂದಲೇ ತಿರಸ್ಕರಿಸಿದ್ದಾರೆ. ಲೇಖಕಿ ಇಂದಿನ ಯುವಜನತೆಯಲ್ಲಿ ಸಭ್ಯ ಸಂಸ್ಕೃತಿಯು ಮರೆಯಾಗಿ ಅಸಭ್ಯ ವರ್ತನೆಗಳೇ ಹೆಚ್ಚಾಗುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಫ್ಯಾಷನ್ ಲೋಕವು ಸಭ್ಯ ನಾಗರಿಕತೆಯ ಎಲ್ಲೆಯನ್ನು ಮೀರಬಾರದು ಎಂಬ ಕಳಕಳಿಯನ್ನು ಲೇಖಕಿಯ ಅಭಿಪ್ರಾಯಗಳಲ್ಲಿ ಗುರುತಿಸಲಾಗಿದೆ.

ಪ್ರವಾಸಿ ಲೇಖಕರಿಗೆ ತಮ್ಮ ದೇಶದ ಬಗ್ಗೆ ಅಭಿಮಾನ, ದೇಶಪ್ರೇಮ ಇದ್ದು, ತಮ್ಮ ದೇಶದ ಮೇಲಿನ ಅಭಿಮಾನದ ಕಾರಣದಿಂದ ತಮ್ಮ ದೇಶದ ತಪ್ಪುಗಳನ್ನು ಸರಿ ಎಂದು ಒಪ್ಪಿಕೊಳ್ಳುವುದು ಉಚಿತವೇ ಎಂಬ ಜಿಜ್ಞಾಸೆ ಇದೆ. ನಾಗತಿಹಳ್ಳಿ ಚಂದ್ರ ಶೇಖರ ಅವರು ವಿದೇಶದಲ್ಲಿನ ಕೆಲವು ಅನುಕೂಲಗಳನ್ನು ಭಾರತದ ವ್ಯವಸ್ಥೆಯೊಂದಿಗೆ ಹೋಲಿಸಿ ಭಾರತದ ಭ್ರಷ್ಟ ವ್ಯವಸ್ಥೆಯ ಬಗ್ಗೆ ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ. ನೇಮಿಚಂದ್ರ ಅವರು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ಪರಿಗಣಿಸಿದಂತಿಲ್ಲ. ಆದ್ದರಿಂದ 'ಭಾರತವನ್ನು ಬೇರೆ ದೇಶಗಳೊಂದಿಗೆ ಹೋಲಿಸುವುದಿಲ್ಲ. ನಮ್ಮ ದೇಶದ ನೋವುಗಳೇ ಬೇರೆ' ಎಂಬ ಉತ್ತರವನ್ನು ನೀಡಿ ಸಮರ್ಥನೆಗೆ ನಿಲ್ಲುತ್ತಾರೆ. ಇದರಿಂದ ಕೆಲವೊಮ್ಮೆ ಲೇಖಕಿ ಭಾರತದ ಲೋಪದೋಷಗಳನ್ನು ಗಣನೆಗೆ ತೆಗೆದುಕೊಳ್ಳದೆ ವಾಸ್ತವವನ್ನು ಒಪ್ಪಿಕೊಳ್ಳದ ಮನಸ್ಥಿತಿಯವರಾಗಿ ಕಾಣುತ್ತಾರೆ. ಇಂತಹ ಸಂದರ್ಭಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಆಕ್ಸ್‌ಫರ್ಡ್‌ನಲ್ಲಿ ಒಂದು ರಾತ್ರಿ ಉಳಿದುಕೊಂಡಿದ್ದರು. ಅಲ್ಲಿದ್ದ ಭಾರತೀಯ ಸ್ನೇಹಿತರೊಂದಿಗೆ ಯುರೋಪ್ ಮತ್ತು ಭಾರತದ ಮನೆಗಳ ಅನುಕೂಲತೆಗಳ ಬಗ್ಗೆ ಚರ್ಚಿಸಿದ್ದಾರೆ. ಯುರೋಪಿನ ದೇಶಗಳಲ್ಲಿ ಮನೆಗಳು ನಿರ್ಮಾಣ ಹಂತದಲ್ಲೆ ಕರೆಂಟ್, ಗ್ಯಾಸ್, ನೀರಿನ ಸೌಲಭ್ಯಗಳನ್ನು ಪಡೆದುಕೊಂಡಿರುತ್ತವೆ. ಭಾರತದಲ್ಲಿ ಅಥವಾ ಬೆಂಗಳೂರಿನಂತಹ ಮಹಾನಗರಗಳಲ್ಲಿ ಪ್ಲಾನ್

ಇಲ್ಲದೆ ಮನೆ ಕಟ್ಟುತ್ತಾರೆ. ಆಮೇಲೆ ಕರೆಂಟ್,ಗ್ಯಾಸ್, ನೀರೆಂದು ಒದ್ದಾಡುತ್ತಾರೆ. ಇಲ್ಲಿ ಈ ಸಮಸ್ಯೆಗಳಿಲ್ಲ' ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಅದಕ್ಕೆ ಲೇಖಕಿಯು 'ಇರಬಹುದು, ನಮ್ಮ ದೇಶವನ್ನು ಜರೆಯುವ ಅಧಿಕಾರ ಇಲ್ಲ' ಎಂದು ಸಮರ್ಥಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಇಡೀ ಜಗತ್ತೇ ಬೆರಗಾಗಿ ನೋಡುವ ಕೆಲವು ಸ್ಥಳಗಳನ್ನು ಲೇಖಕಿಯು "ಬಕಿಂಗ್‌ಹ್ಯಾಮ್ ಪ್ಯಾಲೇಸ್ ಏನೂ ಆಕರ್ಷಿಸಲಿಲ್ಲ" (ನೇಮಿಚಂದ್ರ., ಒಂದು ಕನಸಿನ ಪಯಣ., ಪು-೯೧) "ಭೂಸ್ವರ್ಗವೆಂದೇ ಪ್ರಸಿದ್ಧವಾದ ಸ್ವಿಟ್ಜರ್‌ಲ್ಯಾಡಿನ ನೆಲವು ಸಪ್ಪೆ ಎನಿಸಿತು" (ನೇಮಿಚಂದ್ರ., ಒಂದು ಕನಸಿನ ಪಯಣ., ಪು-೨೦೦) "ಒಂದಿಷ್ಟೂ ಆಕರ್ಷಿಸದ ನಗರ ಮ್ಯಾಂಚೆಸ್ಟರ್" (ನೇಮಿಚಂದ್ರ., ಒಂದು ಕನಸಿನ ಪಯಣ., ಪು-೬೮) ಐಫೆಲ್ ಟವರ್‌ನ್ನು ನೋಡಿ "ಮಂಕು ಬಡಿದ ಕಬ್ಬಿಣ, ನೋಡಿ ಕೊಂಚ ನಿರಾಸೆ" (ನೇಮಿಚಂದ್ರ., ಒಂದು ಕನಸಿನ ಪಯಣ., ಪು-೧೧೩) "ಮೋನಾಲಿಸಾ ತೀರಾ ಸಪ್ಪೆಯಾಗಿ ಕಂಡಿತು"(ನೇಮಿಚಂದ್ರ., ಒಂದು ಕನಸಿನ ಪಯಣ., ಪು-೧೨೫,೧೨೬) ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರಪಂಚವೇ ಕೊಂಡಾಡುವ ಪ್ರಸಿದ್ಧ ಸ್ಥಳ/ಚಿತ್ರಕೃತಿಗಳನ್ನು ಲೇಖಕಿಯು ಋಣಾತ್ಮಕ ದೃಷ್ಟಿಕೋನದ ಮೂಲಕ ಗ್ರಹಿಸಿರುವುದನ್ನು ನೋಡಿದರೆ ಲೇಖಕಿಯ ಮನಸ್ಥಿತಿಯು ದೇಶಭಕ್ತಿಯಿಂದ ಪ್ರೇರಿತವಾದುದು ಎನಿಸುತ್ತದೆ. ಹೇಮಲತಾ ಮಹಿಷಿಯವರ ಅಭಿಪ್ರಾಯಗಳು ಇದೇ ರೀತಿಯಲ್ಲಿದೆ. ಜೊತೆಗಾರರಾಗಿ ಹೋಗಿರುವುದರಿಂದ ಒಬ್ಬರ ಚಿಂತನೆಗಳು ಮತ್ತೊಬ್ಬರ ಮೇಲೆ ಪ್ರಭಾವ ಬೀರಿದೆ.

ಈ ಅಭಿಪ್ರಾಯಗಳಿಗೆ ಹಿನ್ನೆಲೆಗಳಿವೆ. ಈ ಹಿಂದೆ ಪ್ರವಾಸ ಮಾಡಿದವರೆಲ್ಲಾ ಪ್ರವಾಸ ಕೃತಿಗಳಲ್ಲಿ ವಿದೇಶಗಳನ್ನು ಹೊಗಳಿ ಭಾರತೀಯ ವ್ಯವಸ್ಥೆಯ ಬಗ್ಗೆ ಅಸಹನೆಯನ್ನು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಗಮನಿಸಿದ ಹೇಮಲತಾ ಮತ್ತು ನೇಮಿಚಂದ್ರ ಅವರು ಪ್ರವಾಸ ಕೃತಿಯನ್ನು ಬರೆಯುವ ಪೂರ್ವದಲ್ಲಿಯೇ ತಾವು ಭಾರತದ ಬಗ್ಗೆ ಋಣಾತ್ಮಕ ಅಭಿಪ್ರಾಯ ವ್ಯಕ್ತಪಡಿಸಬಾರದು ಎಂದು ಮೊದಲೇ ನಿರ್ಧರಿಸಿದ್ದಾರೆ ಎನಿಸುತ್ತದೆ. ಇತರ ಯುರೋಪ್ ಪ್ರವಾಸ ಕೃತಿಗಳಿಗಿಂತ ಭಿನ್ನವಾಗಿ ಬರೆಯುವ ಬಗ್ಗೆ ಮೊದಲೇ ಯೋಜನೆಯನ್ನು ರೂಪಿಸಿಕೊಂಡಂತಿದೆ.

೨೦೦೦ದ ನಂತರ ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳು

ಇಪ್ಪತ್ತೊಂದನೆಯ ಶತಮಾನ ಯುರೋಪ್ ಪ್ರವಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಗ್ಗಿಯ ಕಾಲ. ಜಾಗತೀಕರಣ, ಉದಾರೀಕರಣ, ಮತ್ತು ಖಾಸಗೀಕರಣದ ಕಾರಣದಿಂದ ದೇಶ-ದೇಶಗಳ ನಡುವೆ ಇದ್ದ ಬಿಗುವಿನ ನಿಯಮಗಳು ಸಡಿಲಗೊಂಡವು. ವ್ಯಾಪಾರಕ್ಕೆ ಮುಕ್ತವಾದಂತೆ ಪ್ರವಾಸಕ್ಕೂ ಮುಕ್ತವಾದ ಹಾದಿ ತೆರೆದುಕೊಂಡಿತು. ಇಪ್ಪತ್ತನೆಯ ಶತಮಾನದ ಕೊನೆಯ ಮತ್ತು ಇಪ್ಪತ್ತೊಂದನೆಯ ಶತಮಾನದ ಆರಂಭದ ದಶಕಗಳಲ್ಲಿ ಪ್ರವಾಸ ಕ್ಷೇತ್ರವು ಲಾಭದಾಯಕ ಉದ್ಯಮವಾಗಿ ಮಾರ್ಪಾಡಾಯಿತು. ಎಲ್ಲಾ ದೇಶಗಳೂ 'ಪ್ರವಾಸಿಗಳಿಂದ ದೇಶಕ್ಕೆ ಆರ್ಥಿಕ ಲಾಭವಾಗುತ್ತದೆ' ಎಂದು ಅರಿಯತೊಡಗಿದ್ದರು. ತಮ್ಮ ತಮ್ಮ ದೇಶಗಳಲ್ಲಿ ಪ್ರವಾಸಿಗರನ್ನು ಸೆಳೆಯಲು; ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ತೊಡಗಿದರು. ಪ್ರವಾಸಿಗಳಿಗೆ ಅನುಕೂಲಕರವಾಗುವಂತಹ ವ್ಯವಸ್ಥೆಗಳನ್ನು ಸರಕಾರವೇ ಮುಂದಾಳತ್ವ ವಹಿಸಿಕೊಂಡು ನಿರ್ವಹಿಸತೊಡಗಿತು. ಪ್ರವಾಸಿಗರನ್ನು ತಮ್ಮ ದೇಶದತ್ತ ಸೆಳೆಯಲು ಯುರೋಪ್ ರಾಷ್ಟ್ರಗಳು

ಪೈಪೋಟಿಯಲ್ಲಿ ಇನಾಮುಗಳನ್ನು ಘೋಷಣೆ ಮಾಡತೊಡಗಿದವು. ವಿಮಾನಗಳಲ್ಲಿ ರಿಯಾಯಿತಿ ದರಗಳನ್ನು ಘೋಷಿಸಲಾಯಿತು. ಇದರ ಫಲವಾಗಿ ವಿದೇಶ ಪ್ರವಾಸಗಳಿಗೆ ಹೋಗುವವರ ಸಂಖ್ಯೆ ದ್ವಿಗುಣವಾಗತೊಡಗಿತು. ಇದರ ಫಲವಾಗಿ ಇಪ್ಪತ್ತೊಂದನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿ ೩೪ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ.

ಡಿ. ಎನ್. ಶಂಕರಭಟ್ ಅವರ ಪತ್ನಿಯಾದ 'ಭಾರತಿ ಭಟ್' ಅವರು 'ನನ್ನ ಬೆಲ್ಜಿಯಂ ಪ್ರವಾಸ' ಎಂಬ ಕೃತಿಯನ್ನು ಬರೆದಿದ್ದಾರೆ. ಇದು ಬೆಲ್ಜಿಯಂ, ಜರ್ಮನಿ, ನೆದರ್ಲ್ಯಾಂಡ್ ದೇಶಗಳ ಪ್ರವಾಸದ ವಿವರಗಳನ್ನು ಹೊಂದಿದೆ. ಗಂಡನ ಪರಿಶ್ರಮದ ಕಾರಣದಿಂದ ಹೆಂಡತಿಗೂ ವಿದೇಶಕ್ಕೆ ತೆರಳುವ ಯೋಗ ಒಲಿದುಬಂದಿತ್ತು. ಬೆಲ್ಜಿಯಂನ ಅಂಟ್‌ವರ್ಪ್ ಪಟ್ಟಣದಲ್ಲಿ ಅನೇಕ ಮಂದಿ ಗುಜರಾತ್‌ನ ಕಡೆಯ ವಜ್ರದ ವ್ಯಾಪಾರಿಗಳು ನೆಲೆಸಿದ್ದಾರೆ. ಇವರೆಲ್ಲರೂ ಸೇರಿ ಭಾರತದ ಭಾಷೆ, ಸಂಸ್ಕೃತಿ ಅದ್ಯಯನಕ್ಕಾಗಿ "ಇಂಡಿಯಾ ಸ್ಟಡಿ ಸೆಂಟರ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮೂಲಕ ಭಾರತದ ವಿದ್ವಾಂಸರುಗಳನ್ನು, ಸಂಶೋಧಕರನ್ನು ಆಹ್ವಾನಿಸುತ್ತಾರೆ. ಡಿ. ಎನ್. ಶಂಕರಭಟ್ ಅವರನ್ನು ಈ ಸಂಸ್ಥೆಯ ಸಲಹೆಯ ಮೇರೆಗೆ ಅಂಟ್‌ವರ್ಪ್ ಯುನಿರ್ವಸಿಟಿಯ ಪ್ರಾಧ್ಯಾಪಕರಾದ ಪ್ರೊ. ವಾನ್ ಡೇರ್ ಅವ್ವೇರಾ ಅವರು ಆಮಂತ್ರಣ ಕಳುಹಿಸಿದ್ದರು. ಇದರಿಂದ ಭಾರತಿ ಭಟ್ ಅವರಿಗೆ ವಿದೇಶ ನೋಡುವ ಅವಕಾಶ ಒಲಿದು ಬಂದಿತ್ತು. ಡಿ. ಎನ್. ಶಂಕರಭಟ್ ಅವರು ಮೊದಲು ವಿದೇಶಕ್ಕೆ ಒಬ್ಬರೆ ಹೋಗಿ ತದನಂತರದಲ್ಲಿ ತಮ್ಮ ಪತ್ನಿಯು ಬರುವಂತೆ ವ್ಯವಸ್ಥೆಗೊಳಿಸಿದ್ದಾರೆ. ಆದ್ದರಿಂದ ಇಲ್ಲಿ ಲೇಖಕಿ ಏಕಾಂಗಿಯಾಗಿ ವಿದೇಶಕ್ಕೆ ಪ್ರಯಾಣಿಸಿದ್ದಾರೆ.

ಲೇಖಕಿಯು ಈ ಕೃತಿಯಲ್ಲಿ ವಿಮರ್ಶನ ದೃಷ್ಟಿಕೋನದ ಪ್ರವಾಸಿಯಾಗಿ ಕಂಡುಬರದೆ, ಒಬ್ಬ ಸಾಮಾನ್ಯ ಗೃಹಿಣಿಯಾಗಿ ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರವಾಸದ ಅನುಭವಗಳ ವಿವರಕ್ಕಿಂತ ಮನೆಯ ನಿರ್ವಹಣೆಯ ಕರ್ತವ್ಯಗಳೇ ಹೆಚ್ಚು ಗಮನ ಸೆಳೆಯುತ್ತದೆ. ಒಂದು ಪ್ರವಾಸ ಕೃತಿಯು ಗೃಹಿಣಿಯ ಕೈಯಲ್ಲಿ ಹೊಸ ಸ್ವರೂಪವನ್ನು ತಾಳಿದ ಸಂದರ್ಭವಿದು. ಒಬ್ಬ ಗೃಹಿಣಿಗೆ ಇರಬೇಕಾದ ಜವಾಬ್ದಾರಿಗಳೇನು? ಅದನ್ನು ನಿರ್ವಹಿಸುವ ಬಗೆ ಹೇಗೆ? ಎಂಬುದರ ಬಗ್ಗೆ ಹೇಳುತ್ತಲೇ ಕೃತಿಯು ಆತ್ಮೀಯತೆಯನ್ನು ಗಳಿಸುತ್ತದೆ. ಹಣ್ಣು ತರಕಾರಿ ಅಂಗಡಿಗಳ ಬಗ್ಗೆ, ಬಟ್ಟೆ ಒಗೆಯುವ ಯಂತ್ರದ ವಾಶೂಲಿನ್‌ನ ಬಗ್ಗೆ, ಕಸದ ವಿಲೇವಾರಿಯ ಬಗ್ಗೆ, ಹೂವಿನ ಮಾರಾಟ, ಬಿಸ್ಟನ್ ಸಂತೆ, ಸಿಟಿಬಸ್ಸುಗಳ ಬಗ್ಗೆ, ಬ್ಯಾಂಕಿನ ವ್ಯವಸ್ಥೆ ಹೀಗೆ ಒಂದು ಮನೆ ನಿರ್ವಹಣೆಯ ಸಂದರ್ಭದ ಅಷ್ಟೂ ಅಂಶಗಳನ್ನು ವಿವರವಾಗಿ ಬರೆದಿದ್ದಾರೆ. ಆದ್ದರಿಂದ ಈ ಕೃತಿಯು ಪ್ರವಾಸ ಕೃತಿಗಳಲ್ಲಿ ಒಂದು ವಿಶೇಷ ಬರಹವಾಗಿದೆ. ಪುತ್ತೂರಿನಲ್ಲಿನ ತಮ್ಮ ಮನೆಯ ಖರ್ಚುವೆಚ್ಚಗಳಿಗೂ, ಅಂಟ್‌ವರ್ಪ್‌ನಲ್ಲಿ ತಾವು ಬಾಡಿಗೆ ಮನೆಯಲ್ಲಿ ನೆಲೆಸಿದ್ದಾಗ ಆಗುತ್ತಿದ್ದ ಖರ್ಚುವೆಚ್ಚಗಳ ಲೆಕ್ಕಗಳನ್ನು ಹೋಲಿಸಿ ಬೆರಗಾಗುತ್ತಾರೆ. ಪುತ್ತೂರಿನಲ್ಲಿದ್ದಾಗ ಡಿ.ಎನ್. ಶಂಕರ್‌ಭಟ್ ಅವರು ಕ್ಷೌರಕ್ಕೆ ೧೫ ರೂ ವಿನಿಯೋಗಿಸುತ್ತಿದ್ದರು. ಆದರೆ ಅಂಟ್‌ವರ್ಪ್‌ನಲ್ಲಿ ೪೦೦ ರೂ ತೆರಬೇಕಾಗುತ್ತಿತ್ತು. ಅಲ್ಲದೇ ತಿಂಗಳ ಟಿ.ವಿ. ಬಾಡಿಗೆ ೫೦೦ ಫ್ರಾಂಕ್, ಕೇಬಲ್‌ಗೆ ೬೦೦ ಫ್ರಾಂಕ್ ಆಗುತ್ತದೆ ಎಂದು ಲೆಕ್ಕ ಹೇಳಿದ್ದಾರೆ. ಹೀಗೆ ಲೇಖಕಿ ತಮ್ಮ ದಿನನಿತ್ಯದ ಖರ್ಚುವೆಚ್ಚಗಳ ಲೆಕ್ಕಗಳನ್ನು ಪ್ರವಾಸ ಕೃತಿಯೊಳಗೆ ತರುವ ಮೂಲಕ ವಿದೇಶದಲ್ಲಿ ನೆಲೆಸಬೇಕೆಂಬ ಕನಸು ಕಾಣುವ ವ್ಯಕ್ತಿಗಳಿಗೆ ಸಂದೇಶವನ್ನು, ಪ್ರವಾಸ ಹೋಗಲು ಬಯಸುವವರಿಗೆ ಮುಂಜಾಗ್ರತೆಯನ್ನು ನೀಡಿದ್ದಾರೆ.

ಲೇಖಕಿ ಗೃಹಿಣಿಯ ಕರ್ತವ್ಯಗಳ ಜೊತೆಗೆ ಅಲ್ಲಿನ ಜನರ ಬದುಕನ್ನು, ಸಂಸ್ಕೃತಿಯ ವೈವಿಧ್ಯತೆಯನ್ನು ಹೇಳುವ ಪ್ರಯತ್ನ ಮಾಡಿದ್ದಾರೆ. ಅಂಟ್‌ವರ್ಪ್ ರೈಲ್ವೇ ನಿಲ್ದಾಣಕ್ಕೆ ಟಿಕೇಟ್ ಕಾಯ್ದಿರಿಸಲು ಹೋಗಿದ್ದಾಗ "ರೈಲ್ವೇ ಸ್ಟೇಶನ್‌ನ ಒಳಗಡೆ ಬಹಳ ಗಲೀಜಾಗಿತ್ತು. ಅಲ್ಲಲ್ಲಿ ಸಿಗರೇಟು ತುಂಡು, ತಿಂಡಿಯ ಕಾಗದ ಮೊದಲಾದುವನ್ನು ಎಸೆದಿದ್ದರು. ಹೆಂಗಸರು ಮತ್ತು ಗಂಡಸರು ಅಲ್ಲಲ್ಲಿ ನಿಂತು ಸಿಗರೇಟು ಸೇದುತ್ತಿದ್ದರು"(ಭಾರತಿ ಭಟ್., ನನ್ನ ಬೆಲ್ಜಿಯಂ ಪ್ರವಾಸ., ಪು-೯೨) ಎಂದು ಬರೆಯುತ್ತಾರೆ. ವಿದೇಶಗಳೆಲ್ಲಾ ತುಂಬಾ ಸ್ವಚ್ಛವಾಗಿರುತ್ತವೆ, ರಸ್ತೆಯಲ್ಲಿ ಒಂದು ತುಂಡು ಕಾಗದವೂ ಬಿದ್ದಿರುವುದಿಲ್ಲ ಎಂಬ ಮಾತನ್ನು ಈ ಹಿಂದಿನ ಲೇಖಕರು ಹೇಳುವ ಮೂಲಕ ವಿದೇಶಗಳೆಂದರೆ ಸ್ವಚ್ಛದಿಂದಲೇ ಇರುತ್ತದೆ ಎನ್ನುವಂತೆ ನಂಬಿಸಲಾಗಿತ್ತು. ಪ್ರವಾಸ ಸ್ಥಳಗಳನ್ನು ಭೇಟಿ ಮಾಡುವ ಸಂದರ್ಭಗಳು ಸನ್ನಿವೇಶಗಳು ಇವುಗಳನ್ನು ನಿರ್ಧರಿಸುತ್ತದೆಯಾದರೂ, ಹಳ್ಳಿ ಮತ್ತು ನಗರಗಳ ಮಧ್ಯೆ ಕೆಲವು ವ್ಯತ್ಯಾಸಗಳು ಇರುತ್ತವೆ. ದೊಡ್ಡ ದೊಡ್ಡ ನಗರಗಳಲ್ಲಿ ಸ್ವಚ್ಛತೆಯ ವ್ಯವಸ್ಥೆ ಅಚ್ಚುಕಟ್ಟಾಗಿ ನಿರ್ವಹಿಸಲಾಗಿರುತ್ತದೆ. ಪ್ರವಾಸಿ ಸಂಸ್ಥೆಗಳ ಮೂಲಕ ಪ್ರವಾಸಕ್ಕೆ ಹೋಗುವ ವ್ಯಕ್ತಿಗಳು ಇಂತಹ ದೊಡ್ಡ ನಗರಗಳಿಗೆ ಹೋಗುತ್ತಾರೆ. ಮತ್ತು ಅವುಗಳನ್ನು ನೋಡಿದ ಲೇಖಕರು ವಿದೇಶಗಳೆಲ್ಲವೂ ಸ್ವಚ್ಛವಾದ, ಸುಂದರವಾದ ದೇಶಗಳು ಎಂದು ವರ್ಣಿಸುತ್ತಾರೆ. ಇವರು ವಿದೇಶಗಳಲ್ಲಿರುವ ಹಳ್ಳಿ ಪ್ರದೇಶಗಳಿಗೆ ಪ್ರವಾಸ ಹೋಗುವುದಿಲ್ಲ. ಆದ್ದರಿಂದ ವಿದೇಶದ ಹಳ್ಳಿಗಳ ಸ್ಥಿತಿಯು, ಹಳ್ಳಿಯೇ ಪ್ರಮುಖವಾಗಿರುವ ಭಾರತದ ಹಳ್ಳಿಗಳಂತೆಯೇ ಇರುತ್ತದೆ ಎಂಬ ವಾಸ್ತವವನ್ನು ಅರಿಯಲು ಸಾಧ್ಯವಾಗುವುದಿಲ್ಲ.

ಇಂದಿರಾ ಶಿವಣ್ಣ ಅವರು 'ಹಾಲೆಂಡ್‌ನಿಂದ ಲಂಡನ್‌ವರೆಗೆ' ಎಂಬ ಪ್ರವಾಸ ಕೃತಿಯನ್ನು ಬರೆದಿದ್ದಾರೆ. ಪ್ರವಾಸಿ ಸಂಸ್ಥೆಯ ಮೂಲಕ ಸ್ವಂತ ಖರ್ಚಿನಲ್ಲಿ ಹದಿನೆಂಟು ದಿನಗಳ ಯುರೋಪ್ ಪ್ರವಾಸ ಕೈಗೊಂಡಿದ್ದಾರೆ. ಈ ಕೃತಿಯಲ್ಲಿ ಮಹಿಳಾ ಸಂವೇದನಾ ಭಾವ ಪ್ರಧಾನವಾಗಿದೆ. ಪ್ರವಾಸಕ್ಕೆ ಮೊದಲು ಲೇಖಕಿಯು ತಾವು ಭೇಟಿ ಮಾಡಲಿರುವ ಸ್ಥಳಗಳ ಐತಿಹಾಸಿಕ ಮಾಹಿತಿಗಳನ್ನು ಸವಿಸ್ತಾರವಾಗಿ ಓದಿಕೊಂಡಿದ್ದಾರೆ. ಆದ್ದರಿಂದ ಆಯಾ ಸ್ಥಳಗಳ ಚಾರಿತ್ರಿಕ ಮಾಹಿತಿಗಳನ್ನು ವಿವರವಾಗಿ ಬರೆದಿದ್ದಾರೆ. ತೌಲನಿಕ ದೃಷ್ಟಿಕೋನದಿಂದ ವಿಮರ್ಶಿಸುವ ಪ್ರಯತ್ನ ಮಾಡಿದ್ದಾರೆ. ನಿಯೋಜಿತ ಪ್ರವಾಸದ ಮೂಲಕ ಯುರೋಪಿನ ದೇಶಗಳಿಗೆ ಭೇಟಿ ನೀಡಿರುವುದರಿಂದ ಇವರ ಜೊತೆ ಭಾರತೀಯ ಪ್ರವಾಸಿಗರ ದೊಡ್ಡ ತಂಡವೇ ಇರುತ್ತದೆ. ಸ್ವಚ್ಛತೆಯ ವಿಚಾರದಲ್ಲಿ ಭಾರತೀಯರು ಉದಾಸೀನರು, ವಿದೇಶದಲ್ಲಿಯೂ ನಮ್ಮವರ ನಡೆವಳಿಕೆ ಮೆಚ್ಚುವಂತಹದ್ದಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ನೆದರ್‌ಲ್ಯಾಂಡ್‌ನ ರಾಜಧಾನಿ ಆಮ್‌ಸ್ಟರ್‌ಡಾಂನ ವಿಮಾನ ನಿಲ್ದಾಣದಲ್ಲಿ ಭಾರತೀಯರು ನಡೆದುಕೊಂಡ ಬಗ್ಗೆ ಅಸಮಧಾನವನ್ನು ವ್ಯಕ್ತಪಡಿಸುತ್ತಾ "ಅಲ್ಲಿಯ ಟಾಯ್ಲೆಟ್‌ಗಳು ಭಾರತೀಯರಿಂದ ತುಂಬಿ ಮೀನು ಮಾರುಕಟ್ಟೆಯಂತಾಗಿ ಹೋದವು. ಗದ್ದಲ ಮಾತುಕತೆಗಳ ನಡುವೆ ವಿರೂಪಗೊಂಡವು"(ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು-೨೮)ಎಂದಿದ್ದಾರೆ. ಇಲ್ಲಿ ಲೇಖಕಿಯು ವಿದೇಶದವರಲ್ಲಿರುವ ಸ್ವಚ್ಛತೆಯ ಬಗೆಗಿನ ಕಾಳಜಿ ಭಾರತೀಯರಲ್ಲಿ ಇಲ್ಲ ಎಂತಲೂ, ಅವರಲ್ಲಿನ ಸ್ವಚ್ಛತೆಯ ಪ್ರಜ್ಞೆ ನಮಗೂ ಬೇಕು ಎಂಬ ಧೋರಣೆಯನ್ನು ಪ್ರಕಟಿಸಿದ್ದಾರೆ. ಒಂದು ಸಂದರ್ಭವನ್ನು ಆಧರಿಸಿ ಇಡೀ ದೇಶದ ಬಗ್ಗೆ ಅಭಿಪ್ರಾಯನ್ನು ತಳೆಯುವುದು ಸೂಕ್ತವಲ್ಲ ಎನಿಸುತ್ತದೆ.

ನಮ್ಮ ದೇಶದಲ್ಲಿ ಬಹಿರ್ದೆಸೆಗೆ ಹೋಗುವಾಗ ನೀರನ್ನು ಬಳಸುವುದು ವಾಡಿಕೆ. ವಿದೇಶದಲ್ಲಿ ಅಲ್ಲಿನ ಹವಾಗುಣಕ್ಕೆ ತಕ್ಕನಾಗಿ ನೀರನ್ನು ಬಳಸದೆ ಕಾಗದವನ್ನು ಬಳಸುತ್ತಾರೆ. ಲೇಖಕಿಯು ಇದರ ಬಗ್ಗೆ "ಅಲ್ಲಿಯ ಟಾಯ್ಲೆಟ್‌ಗಳ ಶುಚಿತ್ವದ ವ್ಯವಸ್ಥೆ ನಮಗೆ ಗಾಬರಿ ಹುಟ್ಟಿಸಿತ್ತು. ನೀರನ್ನು ಉಪಯೋಗಿಸದೆ ಬಹಿರ್ದೆಸೆಗೆ ಹೋಗಿ ಬಂದಾಗ ವಾಕರಿಕೆ ಬರುವಂತಾಗಿತ್ತು" (ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು-೨೮)ಎಂದಿದ್ದಾರೆ. ಇಲ್ಲಿ ಸಂಪ್ರದಾಯದ ವೈರುಧ್ಯವನ್ನು, ಅದಕ್ಕೆ ಹೊಂದಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು, ಅದರೊಂದಿಗೆ ಅನುಭವಿಸಬೇಕಾದ ಮಾನಸಿಕ ತಾಕಲಾಟಗಳನ್ನು ಗುರುತಿಸಲಾಗಿದೆ. ಇಂದಿರಾ ಶಿವಣ್ಣ ಅವರ ಈ ಮೇಲಿನ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಿಸುವುದಾದರೆ ಬಹಿರ್ದೆಸೆಗೆ ಹೋಗುವ ಸಂಸ್ಕೃತಿಯು ಅಲ್ಲಿನ ಪ್ರಾಕೃತಿಕ ಲಕ್ಷಣಗಳ ಹಿನ್ನೆಲೆಯಲ್ಲಿ ರೂಪಿತವಾಗಿದೆ. ಭಾರತೀಯರಲ್ಲಿ ಶೌಚಾಲಯದ ಪರಿಕಲ್ಪನೆಯು ಪೂರ್ಣ ಪ್ರಮಾಣದಲ್ಲಿ ತಿಳಿವಳಿಕೆಗೆ ಬಂದಿರುವುದಿಲ್ಲ. ಆದ್ದರಿಂದಲೇ ಲೇಖಕಿಯು 'ಬಹಿರ್ದೆಸೆ' ಎಂಬ ಪದವನ್ನೆ ಬಳಿಸಿದ್ದಾರೆ. ಇಂಗ್ಲೆಂಡಿನ ಶೀತಲ ವಾತಾವರಣಕ್ಕೆ ನೀರನ್ನು ಬಳಸಿದರೆ ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಲ್ಲಿನ ಪ್ರಾಕೃತಿಕ ಲಕ್ಷಣಗಳ ಅನುಸಾರ ಶೌಚಾಲಯವನ್ನು ಬಳಸುವ ಪದ್ಧತಿ ಚಾಲ್ತಿಯಲ್ಲಿರುತ್ತದೆ. ಪ್ರಾಕೃತಿಕ ಅಂಶಗಳು ಸಾಮಾಜಿಕ ಪದ್ಧತಿಗಳನ್ನು, ಸಂಪ್ರದಾಯಗಳನ್ನು, ಆಚರಣೆಗಳನ್ನು ರೂಪಿಸುತ್ತದೆ. ಭಾರತದ ಹವಾಮಾನಕ್ಕೆ ಅನುಗುಣವಾದ ಪದ್ಧತಿಯನ್ನು ಅನುಸರಿಸುತ್ತಾ ಬಹಿರ್ದೆಸೆಗೆ ಒಗ್ಗಿಕೊಂಡಿರುವ ಲೇಖಕಿಗೆ ವಿದೇಶದಲ್ಲಿನ ಶೌಚಾಲಯ ಬಳಕೆ ಪದ್ಧತಿಯು ಮುಜುಗರವನ್ನು ಉಂಟುಮಾಡಿರುವುದು ನೂತನ ಪದ್ಧತಿಗೆ ಒಗ್ಗಿಕೊಳ್ಳದ ಮನಸ್ಥಿತಿಯನ್ನು ಸೂಚಿಸುತ್ತದೆ.

ಇಂದಿರಾ ಶಿವಣ್ಣ ಅವರು ಯುರೋಪಿಯನ್ನರ ಪ್ರಣಯ ಸ್ವೇಚ್ಛಾಚಾರದ ಬದುಕು ಮುಜುಗರವನ್ನು ಸೃಷ್ಟಿಸುತ್ತದೆ ಎಂದಿದ್ದಾರೆ. ಲೇಖಕಿ ಸಾರ್ವಜನಿಕ ರಸ್ತೆಗಳಲ್ಲಿ ತಬ್ಬಿ ನಡೆಯುವ ಹುಡುಗ ಹುಡುಗಿಯರನ್ನು ಕಂಡು "ನಮ್ಮದು ಮುಸುಕಿನೊಳಗಿನ ರಸಿಕತೆ" (ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು-೪೫)ಎಂದಿದ್ದಾರೆ. ಬಹಿರಂಗವಾಗಿ ಪ್ರಣಯ ಕ್ರೀಡೆಗಳಲ್ಲಿ ತೊಡಗಿಕೊಳ್ಳುವುದು ನಮ್ಮ ಸಂಸ್ಕೃತಿಯಲ್ಲ. ಯುರೋಪಿಯನ್ನರ ಬಹುತೇಕ ದೇಶಗಳಲ್ಲಿ ಪ್ರಣಯ ಪ್ರಸಂಗಗಳಿಗೆ ಮುಕ್ತವಾದ ವಾತಾವರಣವಿದೆ. ಲೇಖಕಿಗೆ ಈ ಬಗೆಯ ಮುಕ್ತ ಪ್ರಣಯತೆಯು ಒಪ್ಪಿತವಾಗುವುದಿಲ್ಲ. ಈ ಅಭಿಪ್ರಾಯಕ್ಕೆ ಅನುಗುಣವಾಗಿ ವಿದೇಶಗಳಲ್ಲಿ ನೆಲೆಸಿದ "ಭಾರತೀಯ ಯುವಕರು ಸಹ ಇಬ್ಬರು ಮೂವರು ಹುಡುಗಿಯರೊಂದಿಗೆ ಚೆಲ್ಲಾಟವಾಡುವುದನ್ನು ಕಾಣಬಹುದು. ಹೆಂಡತಿಯನ್ನು ಇಲ್ಲಿ ಬಿಟ್ಟು ಹೋದ ಅವರ ಕಥೆಗಳೇ ಬೇರೆ"(ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು-೪೭) ಎನ್ನುವ ಮೂಲಕ ವಿದೇಶದಲ್ಲಿ ನಾವು ನಮ್ಮ ಸಂಸ್ಕೃತಿಯನ್ನು ಮರೆಯಬಾರದು. ಮತ್ತು ವಿದೇಶ ಸಂಸ್ಕೃತಿಗೆ ಮಾರು ಹೋಗಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯುವಕ-ಯುವತಿಯರು ಸಾರ್ವಜನಿಕವಾಗಿ ಪ್ರಣಯ ಕ್ರೀಡೆಗಳಲ್ಲಿ ತೊಡಗಿಕೊಳ್ಳುವುದನ್ನು ನೋಡಿದಾಗ ಲೇಖಕಿಯಲ್ಲಿ ವಿರೋಧಿಸುವ ಭಾವ ವ್ಯಕ್ತವಾಗಿದೆ. ಲೇಖಕಿಯ ಮನಸ್ಥಿತಿಯು ಭಾರತೀಯ ಪಾರಂಪರಿಕ ಆಚರಣೆಗಳಿಂದ ಸಂಸ್ಕಾರಯುತವಾದುದು ಎಂಬುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಲೇಖಕಿಯು ತಮ್ಮ ಕೃತಿಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ರೋಂ ಸಂಸ್ಕೃತಿಯ ನಡುವೆ ಇರುವ ಸಾಂಸ್ಕೃತಿಕ ಜನಜೀವನದ ನಡುವಿನ ವ್ಯತ್ಯಾಸಗಳನ್ನು ವಿಮರ್ಶಿಸಿದ್ದಾರೆ. ಕಾಲ ಬದಲಾದಂತೆ, ಜನರ ಬೌದ್ಧಿಕ

ಮಟ್ಟ ಬೆಳೆದಂತೆ ಸಂಸ್ಕೃತಿಯು ಬದಲಾವಣೆಗೆ ಒಳಗಾಗುತ್ತದೆ. ಲೇಖಕಿಯು 'ಒಂದು ಕಾಲದಲ್ಲಿ ರೋಂನಲ್ಲಿ ಹೆಣ್ಣು ಮಕ್ಕಳು ಮದುವೆಗೆ ಮೊದಲು ಬಸಿರಾದರೆ ಅದು ಸಮಾಜದಲ್ಲಿ ದೊಡ್ಡ ಮಾತಾಗುತ್ತಿತ್ತು. ಅದೇ ಈಗ ಅದು ಸಾಮಾನ್ಯ ಸಂಗತಿಯಾಗಿದೆ' ಎಂಬ ಮಾಹಿತಿಯನ್ನು ಅಲ್ಲಿನ ಮಾರ್ಗದರ್ಶಕಿಯಿಂದ ಪಡೆದಿದ್ದಾರೆ. ಅದಕ್ಕೆ ಭಾರತೀಯ ಸಂಸ್ಕೃತಿಯಲ್ಲಿಯೂ ಸಡಿಲತೆ ಬಂದಿದೆ. ಇತ್ತೀಚೆಗೆ ಮದುವೆಗೆ ಮೊದಲೇ ಶಾರೀರಿಕ ಸಂಬಂಧಗಳನ್ನು ಹೊಂದುವ ಸಂಸ್ಕೃತಿ ನಗರ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಸಂಖ್ಯೆಯಲ್ಲಿ ವಿರಳವಾಗಿದೆ ಎಂದು ಲೇಖಕಿಯು ಮಾರ್ಗದರ್ಶಕಿಗೆ ವಿವರಿಸಿದ್ದಾರೆ. ಕಾಲ ಬದಲಾದಂತೆ ಮೂಲ ಸಂಸ್ಕೃತಿಯಲ್ಲಿಯೂ ಬದಲಾವಣೆ ಆಗುತ್ತಿದೆ. ವಿಶ್ವ ಸಂಸ್ಕೃತಿಗಳು ವೈವಿಧ್ಯಮಯವಾಗಿದೆ. ಆದರೆ ಇಂದಿನ ಆಧುನಿಕ ತಂತ್ರಜ್ಞಾನದ ಕಾರಣದಿಂದ ವೈವಿಧ್ಯತೆಗಳು ಮರೆಯಾಗುತ್ತಾ, ಏಕೀಕೃತ ಸಂಸ್ಕೃತಿ ನಿರ್ಮಾಣವಾಗುತ್ತಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ವೆನ್ನಿಸ್‌ನ ಹೋಟೆಲ್‌ನಲ್ಲಿ ಗಣೇಶನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುವ ಸಂಗತಿಯನ್ನು ಲೇಖಕಿ ತಿಳಿಸಿದ್ದಾರೆ. ವಿದೇಶಗಳಲ್ಲಿ ಭಾರತೀಯರು ಹೋಟೆಲ್ ಉದ್ಯಮಗಳನ್ನು ನಡೆಸುತ್ತಿದ್ದಾರೆ. ಅವರ ಹೋಟೆಲ್‌ಗಳಲ್ಲಿ ಭಾರತೀಯ ದೇವರುಗಳನ್ನು ಪೂಜಿಸಲಾಗುತ್ತದೆ. ವಿದೇಶಿಯರು ನಡೆಸುವ ಹೋಟೆಲ್‌ಗಳಲ್ಲಿಯೂ ಭಾರತೀಯ ದೇವರಗಳ ಚಿತ್ರಗಳನ್ನು, ಮೂರ್ತಿಗಳನ್ನು ಪ್ರದರ್ಶಿಸಲಾಗಿರುತ್ತದೆ. ಭಾರತೀಯ ಪ್ರವಾಸಿಗಳನ್ನು ಸೆಳೆಯಲು ಈ ತಂತ್ರವನ್ನು ಉಪಯೋಗಿಸುತ್ತಾರೆ. ವ್ಯಾವಹಾರಿಕ ಲಾಭಕ್ಕಾಗಿ ಜನರನ್ನು ತಮ್ಮೆಡೆಗೆ ಸೆಳೆಯಲು ಜನರ ಧಾರ್ಮಿಕ ನಂಬಿಕೆಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಪರಿಕ್ರಮ ಇಂದು ವಿಶ್ವವ್ಯಾಪಕತೆ ಪಡೆದುಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ.

ಪ್ರಭಾಕರ ಶಿಶಿಲ ಅವರು ರೋಟರಿ ಸಂಸ್ಥೆಯ ನೆರವಿನಿಂದ ಫ್ರಾನ್ಸ್‌ಗೆ ಒಂದು ತಿಂಗಳ ಪ್ರವಾಸ ಮಾಡಿದ್ದಾರೆ. ಅಲ್ಲಿನ ಅನುಭವಗಳನ್ನು ಶೋಧನಾ ಪ್ರವೃತ್ತಿಯ ನೆಲೆಯಲ್ಲಿ 'ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ' ಎಂಬ ಪ್ರವಾಸ ಕೃತಿಯನ್ನು ಬರೆದಿದ್ದಾರೆ. ಈ ಕೃತಿಯು ನಿರೂಪಿಸುವ ಪ್ರಮುಖ ಅಂಶಗಳೆಂದರೆ 'ಫ್ರೆಂಚರಿಂದ ಒಬ್ಬ ಭಾರತೀಯ ಪ್ರಜೆ ಕಲಿಯಬೇಕಾದ ಅಂಶಗಳಾವುವು? ಭಾರತ ಇಂದಿಗೂ ಮುಂದುವರೆಯುತ್ತಿರುವ ದೇಶವಾಗಿಯೇ ಇರುವ ಇಂದಿನ ಪರಿಸ್ಥಿತಿಗೆ ನಾವು ಎಷ್ಟು ಕಾರಣರು? ಮತ್ತು ನಮ್ಮ ನ್ಯೂನತೆಗಳೇನು?'. ಫ್ರೆಂಚ್ ದೇಶಕ್ಕೂ ಭಾರತೀಯರ ಸಾಂಸ್ಕೃತಿಕ ಬದುಕಿಗೂ ನಡುವಿನ ವ್ಯತ್ಯಾಸಗಳೇನು? ಮೊದಲಾದವು. ಶಿಶಿಲ ಅವರು ಮುನ್ನುಡಿಯಲ್ಲಿ "ಫ್ರೆಂಚರಿಂದ ನಾವು ನೈರ್ಮಲ್ಯ, ಪ್ರಾಮಾಣಿಕತೆ, ಪುಸ್ತಕ ಪ್ರೀತಿ ಮತ್ತು ರಾಷ್ಟ್ರಭಕ್ತಿಯನ್ನು ಕಲಿಯಬೇಕಾಗಿದೆ. ನಮ್ಮ ನಂಬಿಕೆಗಳನ್ನು, ನಡವಳಿಕೆಗಳನ್ನು ನಾವು ಮರು ಪರಿಶೀಲಿಸಬೇಕಾದ ಅಗತ್ಯವನ್ನು ಫ್ರಾನ್ಸ್ ಪ್ರವಾಸ ತಿಳಿಸುತ್ತದೆ. ಜಾತೀಯತೆ ಮತ್ತು ಕೋಮುವಾದದಿಂದ ಹೊರಬರಲಾಗದಿದ್ದರೆ ಬಲಿಷ್ಠ ಭಾರತವನ್ನು ನಿರ್ಮಾಣ ಮಾಡಲು ಖಂಡಿತಾ ಸಾಧ್ಯವಿಲ್ಲ ಎನ್ನುವುದು ಫ್ರಾನ್ಸಿನಲ್ಲಿ ನಾನು ಕಂಡುಕೊಂಡ ಸತ್ಯ"(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು–ಮುನ್ನುಡಿ–೧೦)ಎಂಬ ಮಾತು ಪ್ರವಾಸದ ಬಗೆಗಿನ ಸಂಕ್ಷಿಪ್ತ ವಿವರವನ್ನು ನೀಡಿದೆ. ಜೊತೆಗೆ ಭಾರತವು ಅಭಿವೃದ್ಧಿಯ ಪಥದಲ್ಲಿ ಸಾಗಲು ತೊಡಕಾಗಿರುವ ಅಂಶಗಳ ಬಗ್ಗೆ ಅರಿವನ್ನು ಮೂಡಿಸುತ್ತದೆ. ನಮ್ಮ ಕರ್ತವ್ಯಗಳನ್ನು ನೆನಪಿಸಿಕೊಡುತ್ತದೆ. ಇಂದಿನ ಭಾರತೀಯ ಸ್ಥಿತಿಗತಿಗಳಿಗೆ ನಾವೆಷ್ಟು ಜವಾಬ್ದಾರರು ಎಂಬ ಅರಿವನ್ನು ಉಂಟುಮಾಡುತ್ತದೆ. ಪ್ರಭಾಕರ ಶಿಶಿಲ ಅವರು ಅರ್ಥಶಾಸ್ತ್ರದ ಲೇಖಕರು.

ಸುಮಾರು ೫೦ಕ್ಕೂ ಹೆಚ್ಚು ಅರ್ಥಶಾಸ್ತ್ರ ಕೃತಿಗಳನ್ನು ಬರೆದಿದ್ದಾರೆ. ಆದ್ದರಿಂದ ಲೇಖಕರ ಪ್ರವಾಸದ ವಿವರಗಳಲ್ಲಿ ಅರ್ಥಶಾಸ್ತ್ರೀಯ ನೆಲೆಯಲ್ಲಿ ಅಭಿವೃದ್ಧಿಯ ದೃಷ್ಟಿಕೋನ ವ್ಯಕ್ತವಾಗಿರುವುದನ್ನು ಗುರುತಿಸಲಾಗಿದೆ

ಶಿಶಿಲ ಅವರು ಫ್ರಾನ್ಸ್ ಅಭಿವೃದ್ಧಿಯನ್ನು ಹೊಂದಿದ್ದರೂ ಅಲ್ಲಿಯೂ ಅನೇಕ ಬಗೆಯ ಆಂತರಿಕ ಸಮಸ್ಯೆಗಳು ಇರುವುದನ್ನು ಹೇಳಿದ್ದಾರೆ. ಫ್ರೆಂಚ್ ವಸಾಹತುವಾಗಿದ್ದ ಅಲ್ಜೀರಿಯ ಪ್ರಾಂತ್ಯದ ಜನರು ಅಧಿಕ ಸಂಖ್ಯೆಯಲ್ಲಿ ಪ್ಯಾರಿಸ್‌ನಲ್ಲಿ ನೆಲೆಸಿದ್ದಾರೆ. ಇವರಲ್ಲಿ ಕೆಲವರು ಭಿಕ್ಷೆ ಬೇಡುತ್ತಾರೆ. ಕೆಲವರು ರೌಡಿಗಳಾಗಿದ್ದಾರೆ. ಮತ್ತೆ ಕೆಲವು ಯುವಕರು ಭಯೋತ್ಪಾದನೆಗೆ ಸೇರಿರುವ ಬಗ್ಗೆ ತಿಳಿಸಿದ್ದಾರೆ. ಇದಕ್ಕೆ ಪೂರಕವಾಗಿ ಲೇಖಕರು ಉಲ್ಲೇಖಿಸಿದ ಒಂದು ಘಟನೆ ಹೀಗಿದೆ. ಶಿಶಿಲ ಅವರು ಒಂದು ದಿನ ಥಾಯಿ ಹೋಟೆಲ್‌ಗೆ ಹೋಗಿದ್ದಾಗ ಒಬ್ಬ ಅಲ್ಜೀರಿಯಾದ ವ್ಯಕ್ತಿ ಅ ಥಾಯಿಯವನೊಂದಿಗೆ ಜಗಳ ಮಾಡುತ್ತಾನೆ. ಆ ಥಾಯಿಯವನು ಆತನಿಂದ ಹಣವನ್ನು ಪಡೆಯದೇ ನಯವಾಗಿ ಸಾಗಹಾಕುತ್ತಾನೆ. ಶಿಶಿಲ ಅವರು ಏಕೆ ಹಣ ಪಡೆಯದೇ ಬಿಟ್ಟೆ ಎಂದು ಕೇಳಿದಾಗ "ಅಲ್ಜೀರಿಯನ್ ನಿರ್ವಸಿತರಲ್ಲಿ ಕೆಲವರು ಭಿಕ್ಷೆ ಬೇಡುತ್ತಾರೆ. ಕೆಲವರದು ಮಾಂಸದ ದಂಧೆ. ಇವನಂತಹ ಯುವಕರು ಭಯೋತ್ಪಾದಕರಾಗಿ ಬಾಂಬು, ರೈಫಲ್ಲುಗಳಿಂದ ಆತಂಕ ಉಂಟು ಮಾಡುತ್ತಾರೆ. ಇವನಿಗೆರಡು ಬಾರಿಸಿ ನಾನು ಕಳುಹಿಸಬಹುದಿತ್ತು. ಆದರೆ ನಾಳೆ ಇವನು ನನ್ನ ರೆಸ್ಟುರಾಕ್ಕೇ ಬಾಂಬು ಹಾಕುತ್ತಿದ್ದ."(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೧೯)ಎನ್ನುತ್ತಾರೆ. ಫ್ರಾನ್ಸ್ ದೇಶ ಹೊರಗಿನವರಿಗೆ ಅಪ್ಯಾಯಮಾನವಾಗಿ ಕಾಣುತ್ತದೆ. ಪ್ರವಾಸಕ್ಕೆ ಹೋದವರೆಲ್ಲರಿಗೂ ಆ ದೇಶದ ಆಂತರಿಕ ಸಮಸ್ಯೆಗಳು ತಿಳಿಯುವುದಿಲ್ಲ. ಒಬ್ಬರಿಗಾದ ಅನುಭವವೇ ಮತ್ತೊಬ್ಬರಿಗೆ ಆಗುವುದಿಲ್ಲ. ಶಿಶಿಲ ಅವರು ರೋಟರಿ ಸಂಸ್ಥೆಯ ವತಿಯಿಂದ ಹಳ್ಳಿಗಾಡಿನ ಪ್ರದೇಶಗಳಿಗೆ ಪ್ರವಾಸ ಹೋಗಿರುವುದರಿಂದ ಅಲ್ಲಿನ ವಾಸ್ತವ ಪರಿಸ್ಥಿತಿಗಳ ಬಗ್ಗೆ ಅರಿವನ್ನು ಮೂಡಿಸಿದ್ದಾರೆ.

ಲೇಖಕರಿಗೆ ಸ್ನೇಹಿತರಾದ ಎಲಾಯಿನ್ ಮತ್ತು ಹೆಬ್ಬಾರರ ಹಣ ಮತ್ತು ಇತರ ವಸ್ತುಗಳು ಅವರು ಉಳಿದುಕೊಂಡಿದ್ದ ಹೋಟೆಲ್‌ಲ್ಲಿ ದರೋಡೆಯಾಗಿರುವ ಬಗ್ಗೆ ಗಮನಕ್ಕೆ ಬರುತ್ತದೆ. ಹೆಬ್ಬಾರರು ಪೋಲೀಸು ಸ್ಟೇಷನ್ನಿಗೆ ಹೋಗಿ ದೂರು ಸಲ್ಲಿಸಿ, ದೂರಿನ ಸ್ವೀಕೃತಿ ಪತ್ರ ಹಿಡಿದುಕೊಂಡು ಬರುತ್ತಾರೆ. ಈ ಘಟನೆಯನ್ನು ಕೇಳಿ ಲೇಖಕರಿಗೆ ಆಶ್ಚರ್ಯವಾಗುತ್ತದೆ. ಇದರ ಬಗ್ಗೆ ವಿವರಿಸುತ್ತಾ "ಕಳವಾದ ಹಣವಾಗಲಿ, ವಸ್ತುಗಳಾಗಲೀ ಮರಳಿ ಸಿಗಲಿಲ್ಲ.....ನಮ್ಮ ಕಂಪ್ಲೆಂಟುಗಳ ಕತೆ ಏನಾಯಿತೆಂದು ಕೊನೆಗೂ ನಮಗೆ ತಿಳಿಯಲಿಲ್ಲ."(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೨೩)ಎನ್ನುತ್ತಾರೆ. ಎಲ್ಲಾ ದೇಶದಲ್ಲೂ ಸಮಾಜ ವಿದ್ರೋಹಿ ಶಕ್ತಿಗಳು ಇದ್ದೇ ಇರುತ್ತದೆ. ಸಾಮಾಜಿಕ ಸಮಸ್ಯೆಗಳು ಪ್ರತಿಯೊಂದು ದೇಶದಲ್ಲಿಯೂ ಸಾಮಾನ್ಯವಾದುದು. ರೋಮ್‌ನಲ್ಲಿ ಕಳ್ಳತನವಾದ ಬಗ್ಗೆ ದೇವಕಿ ಮೂರ್ತಿ ಅವರು ಹೇಳಿದ್ದಾರೆ. ಹೇಮಲತಾ ಮಹಿಷಿ ಅವರು ಇಂಗ್ಲೆಂಡಿನಲ್ಲಿ 'ಕಳ್ಳರಿದ್ದಾರೆ ಎಚ್ಚರಿಕೆ'ಎಂಬ ಫಲಕವನ್ನು ನೋಡಿದ್ದಾಗಿ ಹೇಳಿದ್ದಾರೆ. ಕಳ್ಳತನ, ಭ್ರಷ್ಟತೆಗಳಿಂದ ಯಾವ ದೇಶವೂ ಮುಕ್ತವಾಗಿಲ್ಲ. ಲೇಖಕರು ಫ್ರಾನ್ಸ್‌ನಲ್ಲಿ ತಲೆಕೂದಲನ್ನು ಕಳ್ಳತನ ಮಾಡುವ ಬಗ್ಗೆಯೂ ಉಲ್ಲೇಖಿಸಿದ್ದಾರೆ.

ಶಿಶಿಲ ಅವರು ಎನ್‌ಕಲ್ಕದ ಸನ್ಯಾಸಿಮಠಕ್ಕೆ ಭೇಟಿ ನೀಡಿದ್ದಾಗ ಅಲ್ಲಿನ ಫಾದರ್ ಅವರು ಲೇಖಕರನ್ನು ತುಂಬು ಮನಸ್ಸಿನಿಂದ ಆಶೀರ್ವದಿಸುತ್ತಾರೆ. ಆಲಂಗಿಸಿ, ಸೇವರಿಸಿ ಬೀಳ್ಕೊಡುತ್ತಾರೆ. ಇದೇ ಸಂದರ್ಭವನ್ನು ಭಾರತದ ಮಠಾಧೀಶರ ನಡೆವಳಿಕೆಯೊಂದಿಗೆ ಹೋಲಿಸಿ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಭಾರತದಲ್ಲಿ ನಾನು ಅನೇಕ ಮಂದಿ ಮಠಾಧೀಶರುಗಳನ್ನು ನೋಡಿದ್ದೇನೆ. ಅವರು ನಮ್ಮಿಂದ ಪಾದನಮಸ್ಕಾರ ಮಾತ್ರ

ಅಪೇಕ್ಷಿಸುತ್ತಾರೆ. ನಾವು ಕೈಮುಗಿದರೆ ಪ್ರತಿ ನಮಸ್ಕರಿಸುವುದಿಲ್ಲ. ಪಾದ ನಮಸ್ಕಾರ ಮಾಡಿದರೆ ತಲೆಸವರಿ ಆಶೀರ್ವಾದ ಮಾಡುವುದಿಲ್ಲ. ಜೀವ ವಿರೋಧಿ ಮಡಿಮೈಲಿಗೆ ಪರಿಕಲ್ಪನೆ ನಮ್ಮ ಸಾರ್ವಜನಿಕ ಜೀವನವನ್ನು ಅಸಹ್ಯವನ್ನಾಗಿ ಮಾಡಿಬಿಟ್ಟಿದೆ."(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೮೮)ಎಂದಿದ್ದಾರೆ. ಲೇಖಕರ ಈ ಅಭಿಪ್ರಾಯವು ಭಾರತದಲ್ಲಿ ಆಚರಣೆಯಲ್ಲಿರುವ ಜಾತಿ ವ್ಯವಸ್ಥೆ ಮತ್ತು ಪುರೋಹಿತಶಾಹಿಯನ್ನು ವಿರೋಧಿಸುವ ಮನಸ್ಥಿತಿಯನ್ನು ತಿಳಿಸುತ್ತದೆ. ಯಾವುದೇ ಧರ್ಮವು ಬೋಧಿಸುವುದು 'ಮನುಷ್ಯ ಮನುಷ್ಯರನ್ನು ಮಾನವತ್ವದಿಂದ ನೋಡಬೇಕು' ಎಂಬ ಪ್ರಜ್ಞೆಯನ್ನು ಜನರಲ್ಲಿ ಮೂಡಿಸುವುದಾಗಿದೆ. ಶಿಶಿಲರವರು ಕ್ರೈಸ್ತ ಧರ್ಮದ ಪಾದ್ರಿಗಳಲ್ಲಿ (ಆ ಸಂದರ್ಭಕ್ಕೆ ಸೀಮಿತವಾಗಿ) ಮಾನವತ್ವದ ಗುಣಗಳನ್ನು ಕಂಡು ಈ ಮೇಲಿನಂತೆ ಅಭಿಪ್ರಾಯ ಪಟ್ಟಿದ್ದಾರೆ.

ಪ್ರತಿಯೊಂದು ದೇಶದಲ್ಲೂ ಆಯಾ ದೇಶದ ಜಾನಪದ ಮೂಲ ಸಂಸ್ಕೃತಿಯನ್ನು ಜಾಗತಿಕ ಪ್ರೇರಿತ ಸಂಸ್ಕೃತಿಯು ನಾಶಗೊಳಿಸಿದೆ. ಇದು ಕೇವಲ ಭಾರತಕ್ಕೆ ಸೀಮಿತವಲ್ಲ. ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಎಲ್ಲಾ ದೇಶಗಳು ಪ್ರಯತ್ನಿಸಿವೆ. ಫ್ರಾನ್ಸ್ ದೇಶವು ಅನೇಕ ಮೂಲ ನಿವಾಸಿಗಳ ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿದ ದೇಶ. 'ಪರ್ಪಿನ್ಯಾ' ಫ್ರಾನ್ಸ್‌ನ ನಗರಗಳಲ್ಲಿ ಒಂದು. ಇದು ಪೂರ್ವದಲ್ಲಿ ಕ್ಯಾಟಲನ್ ಜನಾಂಗದವರಿಂದ ಆಳ್ವಿಕೆಗೆ ಒಳಪಟ್ಟ ಪ್ರದೇಶ. ಇಲ್ಲಿ ಕ್ಯಾಟಲನ್ ಸಂಸ್ಕೃತಿಯು ಪ್ರಚಲಿತದಲ್ಲಿತ್ತು. ಕ್ಯಾಥೋಲಿಕ್ ಜನಾಂಗದವರಿಂದ ಆಕ್ರಮಣಕ್ಕೆ ಒಳಗಾದ ಬಳಿಕ ಕ್ಯಾಥೋಲಿಕ್ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಇಂದು ಕ್ಯಾಟಲನ್ನರ ಸಂಸ್ಕೃತಿಯು ಅಳಿವಿನಂಚಿನಲ್ಲಿದೆ. ಪಕ್ಕದ ಬ್ಯಾಬಿಲೋನಿಯನ್ ನಗರದಲ್ಲಿ ಪೂರ್ವ ಸಂಸ್ಕೃತಿಯ ಉಳಿವಿಗಾಗಿ ಪ್ರಯತ್ನಗಳು ನಡೆದಾಗ ಪರ್ಪಿನ್ಯಾ ನಗರದಲ್ಲಿಯೂ ತಮ್ಮ ಮೂಲ ಸಂಸ್ಕೃತಿಯ ಉಳಿಯುವಿಕೆಗೆ ಪ್ರಯತ್ನ ಮಾಡಲಾಯಿತು. ಇಂದು ಕ್ಯಾಟಲನ್ ಸಂಸ್ಕೃತಿಯನ್ನು ಉಳಿಸಿಕೊಳ್ಳಲಾಗಿದೆ. ಪರ್ಪಿನ್ಯಾವೇ ಕ್ಯಾಟಲನ್ ಸಂಸ್ಕೃತಿಯನ್ನು ಹೊಂದಿದ ಅತಿದೊಡ್ಡ ನಗರವಾಗಿದೆ. ಪ್ರಭಾಕರ ಶಿಶಿಲ ಅವರು ಈ ವಿಷಯಗಳನ್ನು ಮೆಲುಕು ಹಾಕುತ್ತಾ ಇಂದು ನಮ್ಮ ಜಾನಪದ ಸಂಸ್ಕೃತಿಯ ಉಳಿಯುವಿಕೆಗೆ ನಮ್ಮ ಪ್ರಯತ್ನಗಳು ಯಾವ ಪ್ರಮಾಣದಲ್ಲಿದೆ ಎನ್ನುವ ಪ್ರಶ್ನಾರ್ಥಕ ದೃಷ್ಟಿಕೋನದಿಂದ ಈ ಘಟನೆಯನ್ನು ವಿವರಿಸಿದ್ದಾರೆ. ಇಂದು ನಾವು ನಮ್ಮ ಜಾನಪದ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು ಸಾಲದು, ಇನ್ನೂ ಪ್ರಯತ್ನಗಳಾಗಬೇಕಿದೆ ಎನಿಸುತ್ತದೆ. ಸಮುದಾಯದಲ್ಲಿ ಜಾನಪದ ಆಚರಣೆಗಳ ಬಗ್ಗೆ ಜಾಗೃತಿ ಮೂಡಿಸಲು ನೂತನ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬೇಕಿದೆ.

ಟಿ. ಆರ್. ಅನಂತರಾಮು ಅವರು ಬರೆದಿರುವ 'ಪಶ್ಚಿಮ ಮುಖಿ' ಎಂಬ ಯುರೋಪ್ ಪ್ರವಾಸ ಕೃತಿಯು ವೈಜ್ಞಾನಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ರಚಿತವಾಗಿದೆ. ಲೇಖಕರು ಭೂ ವಿಜ್ಞಾನಿಯಾಗಿದ್ದು ಪ್ರವಾಸಿ ಸ್ಥಳಗಳನ್ನು ವೈಜ್ಞಾನಿಕ ನೆಲೆಯಲ್ಲಿ ವಿವರಿಸಿದ್ದಾರೆ. ಇಟಲಿಯ ಪೀಸಾ ವಾಲುಗೋಪುರಕ್ಕೆ ಭೇಟಿ ನೀಡಿದಾಗ ಅದರ ವಾಲುವಿಕೆಗೆ ವೈಜ್ಞಾನಿಕ ಕಾರಣಗಳನ್ನು ಚರ್ಚಿಸಿದ್ದಾರೆ. 'ಅಲ್ಲಿನ ಭೂಮಿಯ ಮಣ್ಣು, ಮತ್ತು ಮಣ್ಣಿನಲ್ಲಿರುವ ಖನಿಜಗಳು ವಾಲುವಿಕೆಗೆ ಕಾರಣವಾಗಿದೆ' ಎಂದಿದ್ದಾರೆ. ಹಾಗೆಯೇ ಇದುವರೆಗೂ ಅದು ಬೀಳದಂತೆ ನಿರ್ವಹಿಸಿಕೊಂಡು ಹೋಗಿರುವ ಬಗ್ಗೆ ವೈಜ್ಞಾನಿಕವಾಗಿ ವಿವರಗಳನ್ನು ನೀಡುತ್ತಾರೆ. ಆಲ್ಪ್ಸ್ ಮತ್ತು ಪೈರನೀಸ್ ಪರ್ವತ ಪ್ರದೇಶಗಳ ವೈಶಿಷ್ಟ್ಯತೆಗಳನ್ನು ವೈಜ್ಞಾನಿಕ ಮನೋಧರ್ಮಕ್ಕೆ ಅನುಗುಣವಾಗಿ ವಿವರಣೆ ನೀಡಿದ್ದಾರೆ. ಇತರ ಯಾವ ಯುರೋಪ್ ಪ್ರವಾಸ ಕೃತಿಗಳೂ ಈ ರೀತಿ ವೈಜ್ಞಾನಿಕ ಹಿನ್ನೆಲೆಯಲ್ಲಿ

ರಚಿತವಾಗಿಲ್ಲ. ಇಲ್ಲಿ ಸ್ಪಷ್ಟವಾಗುವ ಅಂಶವೆಂದರೆ ಲೇಖಕರು ತಾವು ಪ್ರವಾಸದ ವಿವರಗಳನ್ನು ದಾಖಲಿಸುವಾಗ ಆ ವಿವರಗಳ ಮೇಲೆ ಅವರು ತಿಳಿದಿರುವ ಜ್ಞಾನದ ಪ್ರಭಾವ ಬೀರುತ್ತದೆ. ಪ್ರವಾಸ ಸಾಹಿತ್ಯವು ಇಂದು ವೈವಿಧ್ಯಮಯವಾದ ವಿಷಯಗಳನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡಿದೆ.

ಇಂದಿರಾ ಶಿವಣ್ಣ ಅವರ ಮತ್ತೊಂದು ಯುರೋಪ್ ಪ್ರವಾಸ ಕೃತಿಯ ಹೆಸರು 'ಬದುಕಿಗೆ ಬಂಗಾರದ ಲೇಪನ'. ಲೇಖಕಿಯು ವೈದ್ಯ ವೃತ್ತಿಯಲ್ಲಿರುವ ಮಗ ಮತ್ತು ಸೊಸೆಯನ್ನು ಕಾಣಲು ಲಂಡನ್‌ಗೆ ಹೋಗಿದ್ದಾರೆ. ಆ ಸಂದರ್ಭದಲ್ಲಿ ತಾವು ವೀಕ್ಷಿಸಿದ ಸ್ಥಳಗಳ ಬಗ್ಗೆ ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಪ್ರವಾಸ ಕೃತಿಗಳು ಪ್ರವಾಸದ ವಿವರಗಳಿಗೆ ಸೀಮಿತವಾಗಬಾರದು. ಪ್ರವಾಸದ ವಿವರಗಳ ಜೊತೆಯಲ್ಲಿ ವ್ಯಕ್ತಿಗತ ಸಂಬಂಧಗಳ ಭಾವನಾತ್ಮಕ ಅಂಶಗಳನ್ನು ಹಂಚಿಕೊಳ್ಳಲು ಅವಕಾಶವಿದೆ. ಬದುಕಿಗೆ ಬಂಗಾರದ ಲೇಪನ ಕೃತಿಯು ಈ ನಿಟ್ಟಿನಲ್ಲಿ ಹೆಚ್ಚು ಆತ್ಮೀಯವಾಗುತ್ತದೆ. ಇಂದಿರಾ ಶಿವಣ್ಣ ಅವರು ಲಂಡನ್‌ನಲ್ಲಿ ನೆಲೆಸಿರುವ ತನ್ನ ಮಗ ಮತ್ತು ಸೊಸೆಯೊಂದಿಗಿನ ಭಾವನಾತ್ಮಕ ಅಂಶಗಳನ್ನು ಹಂಚಿಕೊಂಡಿದ್ದಾರೆ. ವಿದೇಶಕ್ಕೆ ತೆರಳಿರುವ ವೈದ್ಯ ಕುಟುಂಬಗಳಲ್ಲಿನ ಬದುಕು-ಬವಣೆಗಳ ಕುರಿತು ಗಮನಸೆಳೆಯುತ್ತದೆ.

ಭಾರತೀಯ ಸಮಾಜದಲ್ಲಿ ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವ ವ್ಯಕ್ತಿಗಳಿಗೆ ಹೆಚ್ಚಿನ ಗೌರವವಿರುತ್ತದೆ. ಅವರನ್ನು 'ಫಾರೀನ್ ರಿಟರ್ನ್ಡ್' ಎಂದು ಸಂಬೋಧಿಸಿ ಉಚ್ಚಮಟ್ಟದಲ್ಲಿ ನಡೆಸಿಕೊಳ್ಳಲಾಗುತ್ತದೆ. ಕೆಲವರಿಗೆ ತಮ್ಮ ಶಾಲೆ/ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿ ಎಂದು, ತಮ್ಮ ಜನಾಂಗದವನೆಂದು ಅವರನ್ನು ಕರೆಯಿಸಿ ಸನ್ಮಾನಗಳನ್ನು ಮಾಡಲಾಗುತ್ತದೆ. ಆದ್ದರಿಂದ ಇಂದಿನ ಯುವಕರು ವಿದೇಶಗಳಲ್ಲಿ ಶಿಕ್ಷಣ ಪಡೆಯಬೇಕು, ಉದ್ಯೋಗ ಪಡೆದು ಅಲ್ಲಿಯೇ ನೆಲೆಸಬೇಕು ಎಂದು ಇಚ್ಚೆ ಪಡುತ್ತಾರೆ. ಲೇಖಕಿ ಇಂದಿರಾ ಶಿವಣ್ಣ ಅವರು ಈ ರೀತಿ ಪ್ರತಿಭಾ ಪಲಾಯನ ಮಾಡಿ ವಿದೇಶದಲ್ಲಿ ನೆಲೆಸಿರುವ ವ್ಯಕ್ತಿಗಳ ಮಾನಸಿಕ ತೊಳಲಾಟಗಳೇನು? ಎಂಬ ವಿಷಯಗಳ ಕುರಿತು ಚರ್ಚಿಸಿದ್ದಾರೆ. ಈ ಬಗೆಯ ಚರ್ಚೆಗೆ ಪೂರಕವಾಗಿ ಲೇಖಕಿಯ ಮಗ ಮತ್ತು ಸೊಸೆ ಲಂಡನ್‌ನಲ್ಲಿ ನೆಲೆಸಿದ್ದು ಅವರ ಮಾನಸಿಕ ತೊಳಲಾಟವನ್ನು ಈ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಒಂದು ಬಗೆಯಲ್ಲಿ ಆತ್ಮ ವೃತ್ತಾಂತವನ್ನು ಹೇಳಿಕೊಂಡಂತಿದೆ. 'ವಿದೇಶಕ್ಕೆ ಮಕ್ಕಳನ್ನು ಕಳುಹಿಸಿದ ಪೋಷಕರು ಅವರನ್ನು ನೋಡಲು ವಿದೇಶಕ್ಕೆ ಹೋಗಲೂ ಆಗದೇ, ಮಕ್ಕಳನ್ನು ಬಿಟ್ಟು ಸ್ವದೇಶದಲ್ಲಿ ಇರಲು ಆಗದೇ ಚಡಪಡಿಸಬೇಕಾದ ಅನಿವಾರ್ಯತೆಯನ್ನು ಹೇಳಿಕೊಂಡಿದ್ದಾರೆ. ವಿದೇಶದಲ್ಲಿ ನೆಲೆಸಿದ ಮೇಲೆ ಮೊಮ್ಮಕ್ಕಳು ಅಲ್ಲಿನ ಸಂಸ್ಕೃತಿಯಲ್ಲಿ ಬೆಳೆಯುತ್ತಾರೆ. ಹಾಗೂ ಅವರಿಗೆ ಭಾರತೀಯ ಸಂಸ್ಕೃತಿಯ ಅರಿವು ಇಲ್ಲದೆಯೇ ಬೆಳೆಯಬೇಕಾಗುತ್ತದೆ. ಅಲ್ಲಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಭಾರತಕ್ಕೆ ಬಂದ ಮೊಮ್ಮಕ್ಕಳನ್ನು ಸ್ವೀಕರಿಸುವಲ್ಲಿ ಮನಸ್ಸು ವ್ಯಥೆ ಪಡುವ ಬಗೆಯನ್ನು ಹೇಳಿಕೊಂಡಿದ್ದಾರೆ. ಈ ಬಗೆಯ ಪರಿಸ್ಥಿತಿಯನ್ನು ವಯೋಸಹಜ ದುಃಖಮಿಳಿತಗಳೊಂದಿಗೆ ಲೇಖಕಿ ವ್ಯಕ್ತಪಡಿಸಿದ್ದಾರೆ. ಈ ಕೃತಿಯಲ್ಲಿ ಸಾಮಾಜಿಕ ಮತ್ತು ಕೌಟುಂಬಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾವನಾತ್ಮಕ ಶೈಲಿಯ ಬರೆವಣಿಗೆ ಇರುವುದು ಕಂಡುಬರುತ್ತದೆ.

ಈ ಸಂಶೋಧನಾ ಪ್ರಬಂಧದ ಮೂರನೇ ಅಧ್ಯಾಯದ ಮೊದಲ ಉಪಶೀರ್ಷಿಕೆ 'ಸಂಸ್ಕೃತಿ : ದೃಶ್ಯ ಮತ್ತು ದೃಷ್ಟಿಕೋನ'ದಲ್ಲಿ, ಆಯ್ಕೆ ಮಾಡಿಕೊಂಡಿದ್ದ ಯುರೋಪ್ ಪ್ರವಾಸ ಕೃತಿಗಳನ್ನು ಸಂಕ್ಷಿಪ್ತ ಪರಿಚಯದೊಂದಿಗೆ ಸಾಂಸ್ಕೃತಿಕ ಸಂವೇದನೆಗಳನ್ನು ವಿಶ್ಲೇಷಿಸಲಾಗಿದೆ.

೩.೧.೧ ಆಚರಣೆಗಳು: ತೌಲನಿಕ ಚಿಂತನೆ

ಯುರೋಪ್ ಪ್ರವಾಸ ಕೃತಿಗಳಲ್ಲಿ ಚರ್ಚಿಸಲಾಗಿರುವ ಸಾಂಸ್ಕೃತಿಕ ಆಚರಣೆಗಳ ಕುರಿತು ಈ ಶೀರ್ಷಿಕೆಯಡಿಯಲ್ಲಿ ವಿಶ್ಲೇಷಿಸಲಾಗಿದೆ. ಭಾರತೀಯ ಲೇಖಕರು ಯುರೋಪ್ ದೇಶಗಳಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಗ್ರಹಿಸಿರುವ ಬಗೆಯನ್ನು ತೌಲನಿಕ ದೃಷ್ಟಿಕೋನದ ಮೂಲಕ ವಿವರಿಸಲಾಗಿದೆ. ಲೇಖಕರ ದೃಷ್ಟಿಕೋನವು ಮನೆಯ ವಾತಾವರಣದಿಂದಲೂ, ಕಲಿತ ಸಂಸ್ಕಾರದಿಂದಲೂ, ಭಾರತೀಯ ಸಮಾಜವು ಲೇಖಕನ ಮೇಲೆ ಬೀರಿರುವ ಸಾಂಸ್ಕೃತಿಕ ಪ್ರಭಾವದಿಂದಲೂ ರೂಪಿತವಾಗಿರುತ್ತದೆ. ಇವುಗಳಿಂದ ಪ್ರೇರಿತರಾದ ಲೇಖಕರು ಯುರೋಪಿನಲ್ಲಿನ ಆಚರಣೆಗಳನ್ನು ಕಂಡು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ವಿಶ್ಲೇಷಿಸಲಾಗುತ್ತದೆ. ಲೇಖಕರು ಭಾರತದಲ್ಲಿ ಆಚರಿಸಲಾಗುವ ಸಾಂಸ್ಕೃತಿಕ ಆಚರಣೆಗಳಿಗೂ ಯುರೋಪಿನ ಸಾಂಸ್ಕೃತಿಕ ಆಚರಣೆಗಳಿಗೂ ಇರುವ ಸಾಮ್ಯ ಅಂಶಗಳನ್ನು ನೋಡುವ ಬಗೆ ಹೇಗೆ ಎಂಬ ಜಿಜ್ಞಾಸೆಯನ್ನು ಇಲ್ಲಿ ವಿಮರ್ಶಿಸಲಾಗಿದೆ.

ವಿ.ಕೃ. ಗೋಕಾಕ್ ಅವರು 'ಸಮುದ್ರದಾಚೆಯಿಂದ' ಕೃತಿಯಲ್ಲಿ ಇಂಗ್ಲೆಂಡಿನಲ್ಲಿ ಆಚರಿಸಲಾಗುವ 'Guy Fox Day' ಎಂಬ ಹಬ್ಬದ ಆಚರಣೆಯ ವಿಧಿವಿಧಾನಗಳನ್ನು ಹೇಳಿದ್ದಾರೆ. ಈ ಹಬ್ಬದಲ್ಲಿ Guy Fox ನ ಪ್ರತಿಮೆಯನ್ನು ನಿರ್ಮಿಸಿ ಅದಕ್ಕೆ ಬಿರುಸು ಬಾಣಗಳನ್ನು ಹಾರಿಸಿ ಸುಡುತ್ತಾರೆ. ಅದನ್ನು ನೋಡಿದ ಲೇಖಕರು ಭಾರತೀಯ ಸಂಪ್ರದಾಯದಲ್ಲಿ ಆಚರಿಸಲಾಗುವ 'ಹೋಳಿ ಹುಣ್ಣಿಮೆ' ಹಬ್ಬದೊಂದಿಗೆ ಹೋಲಿಸಿದ್ದಾರೆ. 'ಈ ಹಬ್ಬದಂದು ಕಾಮನ ಪ್ರತಿಮೆಯನ್ನು ನಿರ್ಮಿಸಿ ಬಿರುಸು ಬಾಣಗಳ ಪಟಾಕಿಗಳನ್ನು ಹಾರಿಸಿ ಸುಡಲಾಗುತ್ತದೆ' ಎಂದು ಗೋಕಾಕರು ಸಾಂಸ್ಕೃತಿಕ ಆಚರಣೆಗಳ ನಡುವೆ ಇರುವ ಸಾಮ್ಯತೆಯನ್ನು ಹೋಲಿಕೆ ಮಾಡಿದ್ದಾರೆ. ಇದೇ ರೀತಿಯಲ್ಲಿ ಭಾರತದ ಹಲವು ಹಳ್ಳಿಗಳಲ್ಲಿ ರಾಮನವಮಿ ಹಬ್ಬದಂದು ರಾವಣನ ಪ್ರತಿಮೆಯನ್ನು ಸುಡುವ ಆಚರಣೆಯೂ ಇದೆ. ಭಾರತದಲ್ಲಿ ನಡೆಯುವ ಈ ಆಚರಣೆಗಳನ್ನು ಪುರಾತನ ಕಾಲದಿಂದ ಆಚರಿಸಿಕೊಂಡು ಬರಲಾಗಿದೆ. ವಾಸ್ಕೋಡಗಾಮ ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿಯುವ ಮೊದಲೇ ಈ ಆಚರಣೆಗಳು ಪ್ರಚಲಿತದಲ್ಲಿದ್ದವು ಎಂಬುದಕ್ಕೆ ಜನಪದದಲ್ಲಿ ಪುರಾವೆಗಳಿವೆ. ಹಾಗಾದರೆ ಇಂಗ್ಲೆಂಡಿನಲ್ಲಿ ನಡೆಯುವ 'Guy Fox Day' ಹಬ್ಬದೊಂದಿಗೆ ಹೊಂದಿಕೆಯಾಗಲು ಕಾರಣಗಳೇನು?. ಈ ಜಿಜ್ಞಾಸೆಯನ್ನು ವಿಶ್ಲೇಷಣೆ ಮಾಡಿದಾಗ 'ಆಚರಣೆಗಳು ಕಾಲ ದೇಶವನ್ನು ಮೀರಿ ಒಂದಕ್ಕೊಂದು ಹೊಂದಿಕೆಯಾಗುವುದಕ್ಕೆ ಮನುಷ್ಯನ ಸ್ವಭಾವ ಒಂದೇ ರೀತಿಯಲ್ಲಿ ವರ್ತಿಸುವುದೇ ಕಾರಣವಾಗಿದೆ'

ವಿಲ್ ಡ್ಯುರಾಂಟ ಎಂಬ ತತ್ವಶಾಸ್ತ್ರಜ್ಞ ತನ್ನ "Mansion of philosphy" ಕೃತಿಯಲ್ಲಿ 'God means a dead person'(ಜಿ.ಎಸ್. ಶಿವರುದ್ರಪ್ಪ., ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ., ಪು-೯೪)ಎಂದು ಹೇಳಿರುವುದನ್ನು ಜಿ.ಎಸ್. ಶಿವರುದ್ರಪ್ಪ ಅವರು ಉಲ್ಲೇಖಿಸಿದ್ದಾರೆ. ನಾಸ್ತಿಕತನವನ್ನು ಪ್ರದರ್ಶಿಸಲು ಈ ಹೇಳಿಕೆಯನ್ನು ಉಲ್ಲೇಖಿಸಿಲ್ಲ. ಬದಲಿಗೆ ಸಮಾಜದ ಏಳ್ಗೆಗಾಗಿ ತ್ಯಾಗ ಬಲಿದಾನಗಳನ್ನು ಮಾಡಿದ ವ್ಯಕ್ತಿಗಳನ್ನು ಪೂಜ್ಯನೀಯ ದೃಷ್ಟಿಯಿಂದ ನೋಡುವ ಬಗೆಯನ್ನು ಕುರಿತು ಹೇಳಿದುದಾಗಿದೆ. ಮಾಸ್ಕೋ ನಗರದ ಬೀದಿ ಬೀದಿಗಳಲ್ಲಿ ಲೆನಿನ್ ಭಾವಚಿತ್ರವನ್ನು ಹಾಕಲಾಗಿದೆ. ಲೆನಿನ್ ಭಾವಚಿತ್ರಕ್ಕೆ ಪೂಜಿಸದ ಮನೆಗಳಿಲ್ಲ. ಪ್ರತಿಯೊಬ್ಬರೂ ಲೆನಿನ್ ಬಗ್ಗೆ ಗೌರವ ಆದರಗಳನ್ನು ಪ್ರಕಟಿಸುತ್ತಾರೆ. ವ್ಯಕ್ತಿ ದೈವತ್ವಕ್ಕೆ ಏರಿದ ಉದಾಹರಣೆಯಿದು. ಆದ್ದರಿಂದಲೇ ಲೆನಿನ್‌ರ ಮೃತ ದೇಹವನ್ನು ಇಂದಿಗೂ ಕೆಡದಂತೆ ಸಂರಕ್ಷಿಸಿ ಗಾಜಿನ ಕಪಾಟಿನಲ್ಲಿ ಇಡಲಾಗಿದೆ.

ಆಚರಣೆಗಳು ದೈವತ್ವದ ಚೌಕಟ್ಟನ್ನು ಮೀರಿ ಮಾನವತ್ವದ ಚೌಕಟ್ಟಿಗೆ ಬಂದ ಸಂದರ್ಭ ಇದಾಗಿದೆ. ಬಸವಣ್ಣ, ಅಂಬೇಡ್ಕರ್, ಶಂಕರಾಚಾರ್ಯ, ಜೀಸಸ್, ಗುರುನಾನಕ್ ಮೊದಲಾದ ಧರ್ಮಸ್ಥಾಪಕರನ್ನು ಮಾನವತ್ವದಿಂದ ದೈವತ್ವಕ್ಕೆ ಏರಿಸಲಾಗಿದೆ. ಆದರೆ ನಿಜವಾಗಿ ಮಾನವನಲ್ಲಿ ಮಾನವತ್ವವನ್ನು ಕಾಣುವ ಪ್ರಜ್ಞೆ ಜಾಗೃತವಾಗಬೇಕಿದೆ. ಲೆನಿನ್‌ನ್ನು ಇಂದಿಗೂ ಒಬ್ಬ ಮನುಷ್ಯನಾಗಿಯೇ ಕಾಣುವ ಸ್ಥಿತಪ್ರಜ್ಞತೆ ರಷ್ಯನ್ ಜನರಲ್ಲಿರುವುದನ್ನು ಶಿವರುದ್ರಪ್ಪ ಅವರು ಗುರುತಿಸಿದ್ದಾರೆ.

ಕೆ. ಶಿವರಾಮ ಕಾರಂತರು ಅಪೂರ್ವ ಪಶ್ಚಿಮ ಕೃತಿಯಲ್ಲಿ ಸಾಂಪ್ರದಾಯಿಕ ಆಚರಣೆಗಳಾದ ಹಬ್ಬ ಉತ್ಸವಗಳನ್ನು ಆಚರಿಸುವುದರ ಬಗ್ಗೆ ಚರ್ಚಿಸಿದ್ದಾರೆ. 'ನಮ್ಮ ಸಂಪ್ರದಾಯ ಆಚರಣೆಯಲ್ಲಿ ಕೈಗೊಳ್ಳುವ ಹಬ್ಬ, ಜಾತ್ರೆ, ಉತ್ಸವಗಳು ದುಂದುಗಾರಿಕೆ ಅಲ್ಲವೆ' ಎಂದು ಕೆಲವು ಸಂಪ್ರದಾಯ ವಿರೋಧಿಗಳು ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಉಲ್ಲೇಖಿಸುತ್ತಾ, ಈ ವಿಷಯದ ಬಗ್ಗೆ ಕಾರಂತರು ಹೀಗೆ ಹೇಳಿದ್ದಾರೆ. "ಸಾಂಪ್ರದಾಯಿಕತೆ ಎಂಬುದು ಗೊಡ್ಡೂ, ಅರ್ಥಶೂನ್ಯವೂ ಎಂದೆಣಿಸಬೇಕಾಗಿಲ್ಲ. ಹಣಕಾಸಿನ ದೃಷ್ಟಿಯಿಂದ ಕೆಲವೊಮ್ಮೆ ಸಾರ್ವಜನಿಕ, ಸಾಂಪ್ರದಾಯಿಕ ಉತ್ಸವಗಳು ವ್ಯರ್ಥದುಂದುಗಾರಿಕೆಯಾಗಿ ಕಾಣಿಸಬಹುದು. ಆದರೆ ಸಂಸ್ಕೃತಿಬದ್ಧವಾದ ಜೀವನದಲ್ಲಿ ಅವಕ್ಕೆ ಒಂದು ಸ್ಥಾನವಿದೆ. ಅವು ಕಣ್ಣಿಗೆ ಹಬ್ಬ ಮಾತ್ರವಲ್ಲ; ತಮ್ಮ ಸಾರ್ವಜನಿಕ ಜೀವನದ ಬೇರು ಎಷ್ಟು ಹಿಂದಿನದು, ಹೇಗೆ ಬೆಳೆದು ಬಂದಿತು ಎಂದು ಲಾವಣ್ಯಪೂರ್ವಕವಾಗಿ ತೋರಿಸಬಲ್ಲ ಒಂದು ಅವಕಾಶವಾಗುತ್ತದೆ. ಯಾವೊಂದು ಜನಾಂಗದ ಸಂಸ್ಕೃತಿಯೂ ತನ್ನ ಪೂರ್ವದ ಬೇರುಗಳನ್ನು ಸಂಪೂರ್ಣವಾಗಿ ಕಡಿದುಕೊಂಡು ಬಾಳಲಾರದಷ್ಟೆ" (ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು–೪೪) ಎಂದು ಹೇಳಿದ್ದಾರೆ. ನಮ್ಮ ಸಂಸ್ಕೃತಿಯ ಮೂಲ ಬೇರುಗಳನ್ನು ಮುಂದಿನ ಜನಾಂಗಕ್ಕೆ ತಿಳಿಯಪಡಿಸುವ ಮಾಧ್ಯಮಗಳೇ ಆಚರಣೆಗಳು. ಈ ಸಂಪ್ರದಾಯಗಳನ್ನು ಆಚರಿಸುವುದು ಅಗತ್ಯ ಎಂಬ ಕಾರಂತರ ಅಭಿಪ್ರಾಯ ಭಾಗಶಃ ಒಪ್ಪುವಂತದ್ದು. ಏಕೆಂದರೆ ಹಿಂದಿನ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುವುದು, ಮುಂದಿನ ಪೀಳಿಗೆಗೆ ಅದರ ಪ್ರಾಮುಖ್ಯತೆಯನ್ನು ತಿಳಿಸುವುದು ವ್ಯರ್ಥ, ದುಂದುಗಾರಿಕೆ ಎಂದು ಹೇಳಲಾಗುವುದಿಲ್ಲ. ಆದರೆ ಆಚರಣೆಗಳ ನೆಪದಲ್ಲಿ ಮೂಢನಂಬಿಕೆಗಳನ್ನು ಬಿತ್ತಬಾರದು. ಸಾಮಾಜಿಕ ಅಸಮಾನತೆಯನ್ನು ಹೇರಬಾರದು. ಲಿಂಗ ತಾರತಮ್ಯ ಮಾಡಬಾರದು. ಸಂಪತ್ತಿನ ಕ್ರೋಢೀಕರಣ ಆಗಬಾರದು. ಯಾವುದೇ ರೀತಿಯ ಅಂಧ ಪದ್ಧತಿಗಳನ್ನು ಆಚರಣೆಗಳ ನೆಪದಲ್ಲಿ ಮುಂದುವರೆಸಬಾರದು. ಆಚರಣೆಗಳು ಮುಂದಿನ ಜನಾಂಗಕ್ಕೆ ಸಹಕಾರಕ್ಕೆ, ಸಹಬಾಳ್ವೆಗೆ, ಮಾನವೋನ್ನತಿಗೆ ಪ್ರೇರಕವಾಗಿರಬೇಕು. ಇಂತಹ ಆಚರಣೆಗಳನ್ನು ಇಂದಿನ ಸಮಾಜವು ನಿರೀಕ್ಷಿಸುತ್ತದೆ.

ಪೌರಾಣಿಕ ಪಾತ್ರಗಳು ಕಾಲ ದೇಶವನ್ನು ಮೀರಿ ಸಾರ್ವಕಾಲಿಕ, ಸಾರ್ವತ್ರಿಕ ಕಲ್ಪನೆಗಳಾಗಿವೆ. ಭಾರತದ ಪರಂಪರೆಯೊಳಗೆ ಪ್ರಾಚೀನಕಾಲದಿಂದ ಬೆಳೆದುಬಂದಿರುವ ಪೌರಾಣಿಕ ಕಲ್ಪನೆಗಳಿಗೂ, ಯುರೋಪ್ ಖಂಡದಲ್ಲಿ ಪ್ರಚಲಿತವಾಗಿರುವ ಪೌರಾಣಿಕ ಕಲ್ಪನೆಗಳಿಗೂ ಸಾಮ್ಯತೆಗಳಿರುವುದನ್ನು ಅನೇಕ ಲೇಖಕರು ಗುರುತಿಸಿದ್ದಾರೆ. ಯುರೋಪಿನಲ್ಲಿ ಅತಿ ಪ್ರಾಚೀನ ಸಂಸ್ಕೃತಿಯನ್ನು ಹೊಂದಿದ ಗ್ರೀಕ್ ಮತ್ತು ರೋಮ್ ನಾಗರಿಕತೆಗಳಿವೆ. ಗ್ರೀಕ್ ಪುರಾಣದಲ್ಲಿ ಭಾರತೀಯ ಪುರಾಣಗಳಲ್ಲಿರುವಂತೆ ಅನೇಕ ದೈವೀ ಕಲ್ಪನೆಗಳಿವೆ. ಚಿತ್ರಕಾರರು ಕಾಲ್ಪನಿಕ ದೇವತೆಗಳ ಚಿತ್ರಗಳಿಗೆ ಭಾರತೀಯ ದೇವತೆಗಳಿಗೆ ಇರುವ ರೀತಿಯಲ್ಲಿ ರೂಪ, ಲಕ್ಷಣಗಳನ್ನು ಬಿಡಿಸಿದ್ದಾರೆ. ಕಾರಂತರು ಪ್ಯಾರಿಸ್ಸಿನಲ್ಲಿರುವ ಲೌವ್ರೆ ಮ್ಯೂಸಿಯಂನಲ್ಲಿ ಸಾಮ್ಯತೆ

ಹೊಂದಿರುವ ಕಲಾಚಿತ್ರಗಳನ್ನು ವಿವರಿಸುವಾಗ ಈ ಅಂಶವನ್ನು ಗುರುತಿಸಿದ್ದಾರೆ. 'ಟೊಸಿಪಿ' ಎಂಬ ಕಲಾಕಾರನು ಬಿಡಿಸಿದ ಚಿತ್ರ 'ವೀನಸ್ ಮತ್ತು ಕ್ಯುಪಿಡ್'. ಕಾರಂತರು 'ಈ ಚಿತ್ರವು ಭಾರತೀಯ ಪೌರಾಣಿಕ ಪಾತ್ರಗಳಾದ ರತಿ–ಮನ್ಮಥರಿಗೆ ಹೊಂದಿಕೆ ಆಗುವ ಲಕ್ಷಣಗಳಿವೆ' ಎಂದಿದ್ದಾರೆ. ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲಿ ಶೃಂಗಾರ ಪಾತ್ರ ಚಿತ್ರಣಕ್ಕೆ 'ವೀನಸ್ ಮತ್ತು ಕ್ಯುಪಿಡ್' ದೇವತೆಗಳ ಕಲ್ಪನೆಯನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಭಾರತೀಯ ಸಾಹಿತ್ಯದಲ್ಲಿ ರತಿ–ಮನ್ಮಥರಿಗೂ ಅಷ್ಟೇ ಪ್ರಧಾನವಾದ ಸ್ಥಾನವಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಕಾಲ ದೇಶ ಮೀರಿದ ಮನುಷ್ಯನ ಕಲ್ಪನೆಯಲ್ಲಿ ಸಾಮ್ಯತೆಯುಳ್ಳ ಪೌರಾಣಿಕ ಪಾತ್ರಗಳು ಕಂಡುಬಂದಿರುವುದು. ಹೆಸರುಗಳು ಬೇರೆ ಬೇರೆ ಆದರೂ ನಾವು ಪರಿಭಾವಿಸುವ ಚಿಂತನೆಗಳಲ್ಲಿ, ಕಲ್ಪನೆಗಳಲ್ಲಿ ಸಾಮ್ಯತೆ ಇದೆ. ಆ ಮೂಲಕ 'ಮಾನವನ ಅಂತರ್ಗತ ಎಲ್ಲೆ ಆದರೂ ಒಂದೇ ರೀತಿಯಲ್ಲಿ ತುಡಿಯುತ್ತದೆ' ಎಂಬ ನಿಯಮಕ್ಕೆ ಪುಷ್ಟಿ ದೊರೆಯುತ್ತದೆ.

'ಹೆನ್ರಿ ರೋಸೂ' ಬರೆದ 'ಹಾವಾಡಿಗ' ಎಂಬ ಚಿತ್ರ ಇದೆ. ಆ ಚಿತ್ರದಲ್ಲಿ 'ಹಸಿರಿನಿಂದ ತುಂಬಿದ ಕಗ್ಗಾಡು. ಕಪ್ಪು ಹೆಂಗಸೊಬ್ಬಳು ಒಂದು ನದಿ ದಂಡೆ ಮೇಲೆ ನಿಂತು ಕೊಳಲೂದುತ್ತಿದ್ದಾಳೆ. ಅವಳ ಭುಜದ ಮೇಲೆ ಹಾವು ಆಡುತ್ತಿದೆ. ಸುತ್ತಲಿಂದ ಅವಳ ಕೊಳಲ ಗಾನವನ್ನು ಕೇಳಿ ಹಾವುಗಳು ಒಂದೊಂದಾಗಿ ಬರುತ್ತಿರುವಂತೆ ಚಿತ್ರಿತವಾಗಿದೆ. ಈ ಚಿತ್ರವು ಭಾರತೀಯ ಹಿಂದೂ ಕಲ್ಪನೆಗಿಂತ ಭಿನ್ನವಾಗಿಲ್ಲ. ಈ ಕಲ್ಪನೆಯು ಭಾರತೀಯ ಪುರಾಣ ಪುರುಷರಲ್ಲಿ ಕೊಳನೂದುವ ಕೃಷ್ಣನನ್ನು ಮತ್ತು ನಾಗರಾಜ ಶಿವನ ಕಲ್ಪನೆಯನ್ನು ಬೆಸೆದು ಹೆಣ್ಣಿನ ಆಕೃತಿಯನ್ನು ಮೂಡಿಸಿದಂತಿದೆ. ಭಾರತೀಯ ಪುರಾಣ ಕಲ್ಪನೆಗೂ ಯುರೋಪಿನ ಚಿತ್ರಕಾರರ ಕಲ್ಪನೆಗೂ ಸಾಮ್ಯತೆ ಇದೆ ಎಂಬುದಕ್ಕೆ ಈ ಚಿತ್ರ ಮತ್ತೊಂದು ಉದಾಹರಣೆಯಾಗಿದೆ. ಇಲ್ಲಿ ಗಮನ ಸೆಳೆಯುವ ಮತ್ತೊಂದು ಅಂಶವೆಂದರೆ ಕೊಳಲನ್ನು ಊದುವುರಿಂದ ಹಾವುಗಳು ಆಕರ್ಷಣೆಗೆ ಒಳಗಾಗುವುದು. ನಮ್ಮಲ್ಲಿ ಕೊಳಲಿಗೆ ಹಾವು ಸ್ಪಂದನೆಗೆ ಒಳಗಾಗುವುದಿಲ್ಲ ಎಂಬುದು ವೈಜ್ಞಾನಿಕ ವಿಶ್ಲೇಷಣೆಯಾಗಿದೆ. ಹಾವುಗಳು ಹೆಚ್ಚು ತರಂಗಗಳನ್ನು ಉಂಟು ಮಾಡುವ 'ಪುಂಗಿ'ಗೆ ಆಕರ್ಷಿತವಾಗುತ್ತದೆ. ಇಲ್ಲಿನ ವೈಜ್ಞಾನಿಕ ಕಾರಣಗಳನ್ನು ಇಟ್ಟುಕೊಂಡು ಪೂರ್ಣಚಂದ್ರ ತೇಜಸ್ವಿಯವರು 'ಎಂಟನ ಪುಂಗಿ' ಎಂಬ ಕಥೆ ಬರೆದಿದ್ದಾರೆ. ಈ ಕಥೆಯಲ್ಲಿ ಕಿವಿಗಳೇ ಇಲ್ಲದ ಹಾವಿಗೆ ಎಂಟ ಹೇಗೆ ಪುಂಗಿ ಊದಿ ಆಡಿಸುತ್ತಾನೆ ಎಂಬ ಜಿಜ್ಞಾಸೆಯನ್ನು ಇಟ್ಟುಕೊಂಡು ನಿರೂಪಿಸಲಾಗಿದೆ. ಕಥೆಯ ಕೊನೆಯಲ್ಲಿ ಓದುಗರಲ್ಲಿ ಪ್ರಶ್ನೆಯನ್ನು ಹುಟ್ಟು ಹಾಕುವ ಮೂಲಕ ಕಥೆ ಮುಗಿಯುತ್ತದೆ. ಪುರಾಣ ಕಲ್ಪನೆಗೆ ಬಂದರೆ 'ಹಾವಾಡಿಗ' ಚಿತ್ರದ ಪ್ರಕಾರ ಭಾರತೀಯ ಪುರಾಣದ ಕಲ್ಪನೆಗೆ ಹತ್ತಿರವೆನಿಸುವಂತೆ ಈ ಚಿತ್ರ ಬರೆಯಲಾಗಿದೆ. ಮೊದಲನೆಯದಾಗಿ ಕೊಳಲು ಕೃಷ್ಣನ ಕೈಯಲ್ಲಿರುತ್ತದೆ. ಅವನು ಕಾಳಿಂಗ ಮರ್ಧನ ಮಾಡಿದವನು. ಆತ ಕೊಳಲನ್ನು ಊದುವುದು ಗೋವುಗಳ ಕರೆಯುವಿಕೆಗೆ. ಈ ಚಿತ್ರದಲ್ಲಿನ ಕಪ್ಪು ಹೆಂಗಸು (ಶಿವ ಮತ್ತು ಕೃಷ್ಣನ ಮೈಬಣ್ಣವೂ ಕಪ್ಪು ಎಂದು ಕಲ್ಪಿಸಲಾಗಿದೆ) ನದಿ ದಂಡೆಯ ಮೇಲೆ ಕೊಳಲನ್ನು ಊದುವುದು ಹಾವುಗಳನ್ನು ಆಕರ್ಷಿಸಲು. ಎರಡನೆಯದಾಗಿ ಅವಳ ದೇಹದ ಮೇಲೆ ಹಾವು ಓಡಾಡುತ್ತಿರುತ್ತದೆ. ಈ ಕಲ್ಪನೆ ನಾಗರಾಜನಾದ ಶಿವನ ಚಿತ್ರಕ್ಕೆ ಸಮೀಪದ ಕಲ್ಪನೆಯಾಗಿದೆ. ಹೀಗೆ ಕೆಲವು ವೈಷಮ್ಯ ಗುಣಗಳು ಮತ್ತು ಸಾಮ್ಯ ಗುಣಗಳು ಆ ಚಿತ್ರದಲ್ಲಿರುವುದನ್ನು ಗಮನಿಸಬಹುದು. ಕಾರಂತರು ಈ ಚಿತ್ರವನ್ನು ಕಂಡು "ಫ್ರೆಂಚ್ ಕ್ರಾಂತಿ ಶೈಲಿಯುಸ್ನೇ ತಪ್ಪಿಸಿ, ಪೌರ್ವಾತ್ಯ ಶೈಲಿಯೋ ಎಂಬ ಭ್ರಮೆ ಹುಟ್ಟಿಸುವಂತೆ ಬರೆದ ಈ ಚಿತ್ರ"(ಕೆ. ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು–೨೪೪)ಎಂದಿದ್ದಾರೆ. ಹೆನ್ರಿ ರೋಸೂ ಬರೆದ 'ಹಾವಾಡಿಗ' ಚಿತ್ರಕ್ಕೆ

ಪೌರ್ವಾತ್ಯದ ಕಲ್ಪನೆ ಹೇಗೆ ಬಂತು ಎಂಬ ಜಿಜ್ಞಾಸೆಯನ್ನು ತಾಳಿದಾಗ ಕೆಲವು ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಅವಕಾಶವಿದೆ.

ಈ ಮೇಲೆ ಹೇಳಿದ ಪೌರಾಣಿಕ ಕಲ್ಪನೆಯಲ್ಲಿನ ಸಾಮ್ಯತೆವುಳ್ಳ ಅಂಶಗಳನ್ನು ಗಮನಿಸಿ ಪ್ರಮುಖವಾಗಿ ಮೂರು ಸೈದ್ಧಾಂತಿಕ ವಾದಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೧. ಐತಿಹಾಸಿಕ ದಾಖಲೆಗಳ ಆಧಾರದ ಮೇಲೆ ವಿಶ್ಲೇಷಣೆ.

೨. ಆಲ್ಫ್ರೆಡ್ ವೆಗ್‌ನರ್‌ನ 'ಭೂಖಂಡಗಳ ಅಲೆತ' ಸಿದ್ಧಾಂತದ ಆಧಾರದ ಮೇಲೆ ವಿಶ್ಲೇಷಣೆ.

೩. ಜೇಮ್ಸ್ ಜಾರ್ಜ್ ಫ್ರೇಜರ್‌ನ 'ದೈವೀ ಶಾಸ್ತ್ರೀಯ' ಸಿದ್ಧಾಂತದ ಆಧಾರದ ಮೇಲೆ ವಿಶ್ಲೇಷಣೆ.

೧.ಐತಿಹಾಸಿಕ ದಾಖಲೆಗಳ ಆಧಾರದ ಮೇಲೆ ವಿಶ್ಲೇಷಣೆ :

ಭಾರತ ಮತ್ತು ಯುರೋಪ್ ದೇಶಗಳ ನಡುವೆ ಸಿಂಧೂ ನಾಗರಿಕತೆಯ ಸಂದರ್ಭದಲ್ಲಿ ರೋಮ್ ಅಥವಾ ಗ್ರೀಕ್ ನಾಗರಿಕತೆಯ ಜೊತೆ ಯಾವುದೇ ಸಂಪರ್ಕ ಇರಲಿಲ್ಲ. ಆ ಕಾಲಘಟ್ಟದಲ್ಲಿ ಸಂಪರ್ಕ ಇರುವ ಬಗ್ಗೆ ಯಾವುದೇ ಆಧಾರಗಳು ದೊರೆತಿಲ್ಲ. ಸಿಂಧೂ ನಾಗರಿಕತೆಯ ಅಳಿವಿನ ನಂತರ ಭಾರತಕ್ಕೂ ಗ್ರೀಕರಿಗೂ ಸಾಂಸ್ಕೃತಿಕ ಕೊಡುಕೊಳ್ಳುಗೆಯ ಸಂಬಂಧ ಇರಬಹುದು ಎಂದು ಊಹಿಸಲು ಅನೇಕ ಆಧಾರಗಳಿವೆ. ತಮಿಳುನಾಡಿನ 'ಅರಿಕಮೇಡು' ಎಂಬ ಸ್ಥಳದಲ್ಲಿ ರೋಮನ್ ನಾಣ್ಯಗಳು ಸಿಕ್ಕಿರುವುದು ಇದಕ್ಕೆ ಪುಷ್ಟಿಯನ್ನು ನೀಡುತ್ತದೆ. ವ್ಯಾಪಾರ–ವ್ಯವಹಾರಗಳು ರೋಮ್ ಸಂಸ್ಕೃತಿಯೊಂದಿಗೆ ನಡೆಯುತ್ತಿತ್ತು ಎಂದು ಈ ಆಧಾರದಿಂದ ತಿಳಿಯಬಹುದು. ಗೋವಿಂದ ಪೈ ಅವರು ಗ್ರೀಕ್ ಪುರಾಣಗಳಲ್ಲಿ ಕನ್ನಡದ ಪದಗಳಿರುವುದನ್ನು ಪತ್ತೆ ಹಚ್ಚಿದ್ದಾರೆ. ಈ ಐತಿಹಾಸಿಕ ಆಧಾರದ ಮೇಲೆ ವಿಶ್ಲೇಷಿಸುವುದಾದರೆ ಭಾರತಕ್ಕೆ ರೋಮ್ ನಾಗರಿಕತೆಯೊಂದಿಗೆ ವ್ಯಾಪಾರ ಸಂಪರ್ಕವಿತ್ತು ಎಂದು ತಿಳಿದುಬರುತ್ತದೆ. ಸಂಪರ್ಕ ಇರುವಾಗ ಸಹಜವಾಗಿ ಸಂಸ್ಕೃತಿಗಳ ವಿನಿಮಯ ಆಗಿರುತ್ತದೆ. ಆದ್ದರಿಂದ ಪೌರಾಣಿಕ ಪಾತ್ರಗಳ ಚಿತ್ರಣದಲ್ಲಿ ಸಾಮ್ಯತೆ ಕಂಡು ಬಂದಿರುವ ಸಾಧ್ಯತೆಗಳಿವೆ ಎಂದು ಹೇಳಬಹುದು.

೨.ಆಲ್ಫ್ರೆಡ್ ವೆಗ್‌ನರ್‌ನ 'ಭೂಖಂಡಗಳ ಅಲೆತ' ಸಿದ್ಧಾಂತದ ಆಧಾರದ ಮೇಲೆ ವಿಶ್ಲೇಷಣೆ :

ಭೂಮಿಯು ಶೇ.೭೧% ಭಾಗ ನೀರಿನಿಂದ ಕೂಡಿದೆ. ಉಳಿದ ಭಾಗದಲ್ಲಿ ಮನುಷ್ಯ ವಾಸ ಮಾಡಲು ಬೇಕಾಗುವ ಯೋಗ್ಯವಾದ ಭೂಮಿ ಇದೆ. ಆಲ್ಫ್ರೆಡ್ ವೆಗ್‌ನರ್ ಎಂಬ ಭೂ ಶಾಸ್ತ್ರಜ್ಞನು 'ಮನುಷ್ಯ ವಾಸ ಮಾಡಲು ಯೋಗ್ಯವಾದ ಭೂಭಾಗವು ಸಾವಿರಾರು ವರ್ಷಗಳ ಹಿಂದೆ ಒಂದೇ ಕಡೆ ಇತ್ತು. ತದನಂತರ ಇಡಿಯಾದ ಭೂಭಾಗವು ಏಳು ಖಂಡಗಳಾಗಿ ಒಡೆದು ಚದುರಿ ಅವು ವರ್ಷದಿಂದ ವರ್ಷಕ್ಕೆ ತೇಲುತ್ತಾ ದೂರ ದೂರ ಹೋಗುತ್ತಿವೆ' ಎಂಬ ವಾದವನ್ನು ಮಂಡಿಸಿದ. ಅದಕ್ಕೆ ಸಾಕಷ್ಟು ಪುರಾವೆಗಳು ದೊರೆತು ಸಧ್ಯಕ್ಕೆ ಈ ಸಿದ್ಧಾಂತವನ್ನು ಮಾನ್ಯ ಮಾಡಲಾಗಿದೆ. ಈ ಸಿದ್ಧಾಂತದ ಪ್ರಕಾರ ಭಾರತ ಮತ್ತು ಯುರೋಪಿನ ಪೌರಾಣಿಕ ಕಲ್ಪನೆಯಲ್ಲಿ ಸಾಮ್ಯತೆ ಕಂಡುಬರಲು ಕಾರಣ ಭೂ ಖಂಡಗಳು ದೂರ ಸರಿಯುವ ಮೊದಲು ಭಾರತ ಮತ್ತು ಯುರೋಪಿನ ದೇಶಗಳು ಒಂದೇ ಕಡೆ ಇದ್ದವು. ಆಗ ಭಾರತದಲ್ಲಿನ ಪೌರಾಣಿಕ ದೈವೀ ಪಾತ್ರಗಳ ರಚನೆಗಳು ಯುರೋಪಿನ ಭೂಭಾಗಕ್ಕೂ ಪಸರಿಸಿದೆ. ಹೀಗೆ ಪೌರಾಣಿಕ ದೇವತೆಗಳ ಕಲ್ಪನೆಯಲ್ಲಿ ಹೋಲಿಕೆ ಇರುವುದಕ್ಕೆ ಕಾರಣವನ್ನು ಗ್ರಹಿಸಲು ಸಾಧ್ಯವಿದೆ. ಅಖಂಡ ಭೂಭಾಗ ಒಂದೇ ಇದ್ದಾಗ ಅವರ

ನಡುವೆ ಸಾಂಸ್ಕೃತಿಕ ವಿನಿಮಯ ಇರುವುದು ಸಾಧ್ಯ. ಆ ಭೂಭಾಗದ ಎಲ್ಲಾ ಪ್ರದೇಶಗಳಲ್ಲಿಯೂ ಒಂದೇ ಬಗೆಯ ಪೌರಾಣಿಕ ಕಲ್ಪನೆ ಚಾಲ್ತಿಯಲ್ಲಿರುತ್ತದೆ. ಆದ್ದರಿಂದ ಪೌರಾಣಿಕ ಕಲ್ಪನೆಯಲ್ಲಿ ಸಾಮ್ಯತೆ ಕಂಡು ಬಂದಿದೆ. ವೀನಸ್ ದೇವತೆಗೂ ಮನ್ಮಥನಿಗೂ ಹೋಲಿಕೆ ಇದೆ. ಕ್ಯುಪಿಡ್ ದೇವತೆಗೂ ರತಿಗೂ ಹೋಲಿಕೆ ಇದೆ. ನೆಫ್ಚೂನ್ ಕಡಲದೇವತೆಗೆ ಸಮುದ್ರರಾಜನಿಗೂ, ಮಿನರ್ವ ಜಲದೇವತೆಗೂ ಗಂಗಾಮಾತೆಗೂ ಹೋಲಿಕೆ ಇದೆ. ಭೂಖಂಡಗಳು ದೂರ ಸರಿಯುತ್ತಾ ಹೋದಂತೆ ಏಳು ಖಂಡಗಳಾಗಿ ವಿಭಾಗವಾದ ಭೂಮಿಯು ಕಾಲಾನಂತರದಲ್ಲಿ ಸಾಂಸ್ಕೃತಿಕ ವಿಸ್ಮೃತಿಗೆ ಒಳಗಾಗಿದೆ. ಆದ್ದರಿಂದ ಪ್ರತಿಯೊಂದು ಖಂಡದಲ್ಲಿಯೂ ಬೇರೆ ಬೇರೆ ರೀತಿಯ ಹೊಸ ಸಂಸ್ಕೃತಿಯು ಹುಟ್ಟಲು ಕಾರಣವಾಗಿರಬಹುದು. ಆದರೆ ಪಾರಂಪರಿಕವಾದ ಮೂಲ ಕಲ್ಪನೆಗಳು ಇಂದು ಉಳಿದು ಬಂದಿರುವುದರಿಂದ ಪೌರಾಣಿಕ ಪಾತ್ರಗಳ ಚಿತ್ರದಲ್ಲಿಯೂ ಸಾಮ್ಯ ಅಂಶಗಳು ಮೂಡಿವೆ ಎಂಬುದನ್ನು ಈ ಸಿದ್ಧಾಂತದ ಆಧಾರದ ಮೇಲೆ ಗ್ರಹಿಸಲಾಗಿದೆ.

೩.ಜೇಮ್ಸ್ ಜಾರ್ಜ್ ಫ್ರೇಜರ್‌ನ 'ದೈವೀ ಶಾಸ್ತ್ರೀಯ' ಸಿದ್ಧಾಂತದ ಆಧಾರದ ಮೇಲೆ ವಿಶ್ಲೇಷಣೆ :

ಈ ಸಿದ್ಧಾಂತದ ಪ್ರತಿಪಾದಕ ಮಾನವಶಾಸ್ತ್ರಜ್ಞನಾದ 'ಜೇಮ್ಸ್ ಜಾರ್ಜ್ ಫ್ರೇಜರ್'. 'ಮನುಷ್ಯನಲ್ಲಿ ಮೂಲ ಆಲೋಚನಾ ಶಕ್ತಿ ಒಂದೇ ರೀತಿಯಲ್ಲಿದೆ ಎಂಬುದು ಈತನ ದೈವೀ ಶಾಸ್ತ್ರೀಯ ಸಿದ್ಧಾಂತದ ತಿರುಳಾಗಿದೆ. ಮಾನವನ ಮನಸ್ಸು ಕಾಲ ದೇಶಗಳನ್ನು ಮೀರಿ ಒಂದೇ ರೀತಿಯಲ್ಲಿ ವರ್ತಿಸುತ್ತದೆ' ಎಂದಿದ್ದಾನೆ. ಮನುಷ್ಯನ ಯೋಚನಾ ಲಹರಿಯು ದೈವೀ ಮೂಲಗಳಿಂದ ಪ್ರೇರಿತವಾಗಿದೆ. ಆತ ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಯೋಚಿಸುವ ಮನಸ್ಸು ಒಂದೇ ಆಗಿರುತ್ತದೆ. ಮಾನವನ ಮನಸ್ಸು ದೈವೀ ಶಾಸ್ತ್ರೀಯ ಮೂಲದಿಂದ ಸಿದ್ಧವಾಗಿದೆ[5] ಎಂದು ಪ್ರತಿಪಾದಿಸಿದ್ದಾನೆ. ಮಾನವ ಪ್ರಕೃತಿಯ ಆರಾಧಕನಾಗಿದ್ದ. ಭೂಮಿ, ಆಕಾಶ, ನೀರು, ಅಗ್ನಿ, ಸೂರ್ಯ ಹೀಗೆ ಪಂಚಭೂತಗಳಲ್ಲಿಯೂ ದೇವರನ್ನು ಕಾಣುತ್ತಿದ್ದ. ಭೂಮಿಯ ಮೇಲೆ ಮಾನವ ಎಲ್ಲೇ ಇದ್ದರೂ ಅತನಿಗೆ ಈ ಪಂಚಭೂತಗಳ ಮೇಲೆ ದೈವೀ ಭಾವನೆ ಇದ್ದುದರಿಂದ ಸಾಮ್ಯತೆಯುಳ್ಳ ಪೌರಾಣಿಕ ಪಾತ್ರಗಳು ಚಿತ್ರಿತವಾಗಿವೆ. ಆದ್ದರಿಂದ ಯುರೋಪಿನಲ್ಲಿಯೂ ಭಾರತೀಯ ಪುರಾಣಗಳಲ್ಲಿರುವ ಪೌರಾಣಿಕ ಪಾತ್ರಗಳನ್ನು ಕಾಣಲು ಸಾಧ್ಯವಾಗುತ್ತದೆ ಎಂಬುದು ಈತನ ಸಿದ್ಧಾಂತದಿಂದ ತಿಳಿದುಬರುವ ಅಂಶ.

ಈ ಮೇಲಿನ ಸಿದ್ಧಾಂತಗಳ ಆಧಾರದ ಮೇಲೆ ನಮಗೆ ತಿಳಿದುಬರುವ ಅಂಶಗಳೆಂದರೆ ಯುರೋಪಿನ ಪೌರಾಣಿಕ ದೇವತೆಗಳಾದ ಕ್ಯುಪಿಡ್ ಮತ್ತು ವೀನಸ್ ಭಾರತೀಯ ಪೌರಾಣಿಕ ಚಿತ್ರಗಳಾದ ರಥಿ-ಮನ್ಮಥರಿಗೆ ಹೋಲಿಕೆಯಾಗಲು, ಮತ್ತು ಕಪ್ಪು ಹೆಂಗಸಿನ ಚಿತ್ರವು ಕೃಷ್ಣ ಮತ್ತು ಶಿವನ ಪರಿಕಲ್ಪನೆಗೆ ಹೋಲಿಕೆ ಆಗಲು ಈ ಮೇಲಿನ ಸಿದ್ಧಾಂತಗಳಿಂದ ಕಾರಣಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ಮದುವೆ ಸಂಬಂಧಿತ ಆಚರಣೆಗಳು: ಭಾರತೀಯ ಸಂಸ್ಕೃತಿಯಲ್ಲಿ ಮದುವೆಗೆ ಸಂಬಂಧಿಕಸಿದಂತೆ ಪಾರಂಪರಿಕ ಆಚರಣೆಗಳಿವೆ. ಒಂದು ಮದುವೆ ಮಾಡಿ ಮುಗಿಸುವುದಕ್ಕೆ ಹರಸಾಹಸ ಮಾಡಬೇಕು. 'ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು' ಎಂಬ ಗಾದೆಯೇ ಇದೆ. ಭಾರತೀಯ ಸಂಸ್ಕೃತಿಯ ಮದುವೆಗಳಲ್ಲಿ ಅನೇಕ ಪ್ರಕಾರದ ಆಚರಣೆಗಳ ಜೊತೆಗೆ ಸಮಯ ಮತ್ತು ಹಣದ ಅಪವ್ಯಯ ಸಾಕಷ್ಟು ಆಗುತ್ತದೆ. ಜಿ.ಎಸ್.ಶಿವರುದ್ರಪ್ಪ ಅವರು ಯುರೋಪಿನಲ್ಲಿ ನಡೆಯುವ ಮದುವೆಗಳ ಕುರಿತು

'ಯುರೋಪಿಯನ್ನರು ನಮ್ಮಂತೆ ಮುಹೂರ್ತ ನಿಗದಿ ಮಾಡಿ ಆಚರಣೆಗಳೊಂದಿಗೆ ವೈಭವಯುತವಾಗಿ ಮದುವೆ ಆಗುವುದಿಲ್ಲ. ಕೆಲಸಕ್ಕೆ ರಜಾ ಇರುವ ದಿನ ಚರ್ಚಿಗೆ ಬಂದು ಸರಳವಾಗಿ ಮದುವೆ ಆಗಿಬಿಡುತ್ತಾರೆ. ಗದ್ದಲ, ಗಲಾಟೆ ಇಲ್ಲದೆ ಯಾವುದೇ ಅನಗತ್ಯ ಆಚರಣೆಗಳಿಲ್ಲದೆ ಕೇವಲ ಉಂಗುರ ಬದಲಾವಣೆಯೊಂದಿಗೆ ಮದುವೆ ನೆರವೇರುತ್ತದೆ' ಎಂದಿದ್ದಾರೆ. ಯುರೋಪಿನಲ್ಲಿ ನಡೆಯುವ ಮದುವೆಗಳು ಕುವೆಂಪು ಅವರ 'ಮಂತ್ರಮಾಂಗಲ್ಯ ಪದ್ಧತಿ'ಯನ್ನು ಹೋಲುತ್ತದೆ. ಸರಳವಾಗಿ, ದುಂದುಗಾರಿಕೆ ಇಲ್ಲದೆ, ಅನಗತ್ಯ ವೆಚ್ಚಗಳಿಲ್ಲದೆ ಮದುವೆಗಳು ನಡೆಯಬೇಕೆಂಬುದು ಕುವೆಂಪು ಅವರ ಚಿಂತನೆಯಾಗಿತ್ತು. ಯುರೋಪ್ ದೇಶಗಳಲ್ಲಿನ ಬಹುಪಾಲು ಮದುವೆಗಳು ಇದೇ ಪ್ರಕಾರವಾಗಿ ನಡೆಯುವುದನ್ನು ಕಂಡು ಜಿ. ಎಸ್. ಶಿವರುದ್ರಪ್ಪ ಅವರು ಮೆಚ್ಚಿಕೊಳ್ಳುತ್ತಾರೆ. ಹಾಗೆಯೇ ಭಾರತೀಯ ವಿವಾಹ ಪದ್ಧತಿಗಳಲ್ಲಿರುವ ಕೆಲವು ಅನಗತ್ಯ ಆಚರಣೆಗಳನ್ನು ಪಾಲಿಸಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಲೇಖಕರ ಅಭಿಪ್ರಾಯವನ್ನು ಒಪ್ಪುತ್ತಾ ಮದುವೆಗೆ ಸಂಬಂಧಿಸಿದಂತೆ ಪಾಲಿಸಲಾಗುವ ಆಚರಣೆಗಳು ತರ್ಕರಹಿತವಾಗಿದ್ದು, ಏಕರೂಪತೆಯಿಲ್ಲ. ಮದುವೆಯಲ್ಲಿ ಆಚರಿಸಲಾಗುವ ಆಚರಣೆಗಳಲ್ಲಿ ಕೆಲವೆಡೆ ದುರುದ್ದೇಶಗಳಿರುವುದು ಕಂಡುಬರುತ್ತದೆ. ಆದ್ದರಿಂದ ಸರಳ ವಿವಾಹ ಹಾಗೂ ಸಾಮೂಹಿಕ ವಿವಾಹ ಪದ್ಧತಿಯ ಆಚರಣೆಗಳು ಸೂಕ್ತವಾದುದು ಎನಿಸುತ್ತದೆ.

ಯುರೋಪ್ ಮತ್ತು ಭಾರತೀಯ ವಿವಾಹ ಪದ್ಧತಿಯಲ್ಲಿನ ಆಚರಣೆಗಳಲ್ಲಿನ ಭಿನ್ನತೆಯನ್ನು ಗಮನಿಸಿದಾಗ 'ಸಮಾಜದ ಒತ್ತಡಗಳು ಆಚರಣೆಗಳನ್ನು ರೂಪಿಸುತ್ತದೆ' ಎನಿಸುತ್ತದೆ. ಮದುವೆಯ ಸಂಪ್ರದಾಯಗಳು ಮತ್ತು ಆಚರಣೆಗಳು ಕೂಡ ಸಮಾಜದ ಆಂತರಿಕ ಒತ್ತಡಗಳ ಕಾರಣದಿಂದಾಗಿರುತ್ತದೆ. ಕುಟುಂಬ ಸಮಾಜದ ಒಂದು ಅಂಗವಾಗಿದೆ. ಯುರೋಪಿನ ಸಮಾಜದಲ್ಲಿ ವಿಭಕ್ತ ಕುಟುಂಬ ವ್ಯವಸ್ಥೆಯು ಸರಳ ವಿವಾಹ ಪದ್ಧತಿಯನ್ನು ರೂಪಿಸಿದೆ. ಭಾರತೀಯ ಸಮಾಜದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯು ಸಂಪ್ರದಾಯಬದ್ಧ ಮದುವೆ ಪದ್ಧತಿಯನ್ನು ರೂಪಿಸಿದೆ. ಭಾರತದ ಸಂಪ್ರದಾಯಗಳಿಂದ ರೂಪಿತವಾದ ವಿವಾಹ ಪದ್ಧತಿ ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಬದಲಾಗುತ್ತಾ ಬಂದಿದೆ. ಕಾಲ ಬದಲಾದಂತೆ ಸಮಾಜದ ಅಂಗ ಸಂಸ್ಥೆಗಳು ಬದಲಾಗುತ್ತಿರುತ್ತವೆ. ಭಾರತದ ಅವಿಭಕ್ತ ಕುಟುಂಬ ವ್ಯವಸ್ಥೆಯು ಅಣು ಕುಟುಂಬ ವ್ಯವಸ್ಥೆಯ ಕಡೆಗೆ ವಾಲುತ್ತಿದೆ. ಅಂತೆಯೇ ವಿವಾಹ ಪದ್ಧತಿಗಳೂ ಕೂಡ ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಗ್ಗಿಕೊಳ್ಳುತ್ತಿದೆ. ಈ ಕಾರಣದಿಂದಾಗಿ ಭಾರತದಲ್ಲಿ ಸರಳ ವಿವಾಹ ಪದ್ಧತಿಗಳನ್ನು ಮತ್ತು ಸಾಮೂಹಿಕ ವಿವಾಹ ಪದ್ಧತಿಗಳನ್ನು ಆಚರಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ.

ನಂಬಿಕೆಗಳು : ಪ್ರಪಂಚದ ಯಾವುದೇ ದೇಶ ಮೂಢನಂಬಿಕೆಗಳಿಂದ ಮುಕ್ತವಾಗಿಲ್ಲ. ಯುರೋಪ್ ಖಂಡದಲ್ಲಿ ಅಭಿವೃದ್ಧಿ ಹೊಂದಿದ ಅನೇಕ ದೇಶಗಳಿವೆ. ಅವುಗಳಲ್ಲಿ ಇಂಗ್ಲೆಂಡ್ ಕೂಡ ಒಂದು. ಇಂಗ್ಲೆಂಡ್ 'ಸೂರ್ಯ ಮುಳುಗದ ನಾಡು' ಎಂಬ ಹೆಗ್ಗಳಿಕೆಗೆ ಪಾತ್ರವಾದ ದೇಶ. ಆಂಗ್ಲರು ಭಾರತೀಯರನ್ನು 'ಹಾವಾಡಿಗರ ದೇಶ' 'ಮೂಢನಂಬಿಕೆಗಳ ದೇಶ' ಎಂದೆಲ್ಲಾ ಬಿಂಬಿಸಿದ್ದಾರೆ. ಆದರೆ ಇಂಗ್ಲೆಂಡ್ ದೇಶದಲ್ಲಿಯೂ ಇಂದಿಗೂ ಪ್ರಚಲಿತವಿರುವ ಅನೇಕ ಮೂಢನಂಬಿಕೆಗಳಿವೆ. 'ಲಂಡನ್ ಆಫ್ ಟವರ್'ನಲ್ಲಿ 'ರೇವನ್ ಕಾಗೆಗಳಿವೆ'. ಈ ಕಾಗೆಗಳನ್ನು ಪ್ರಭುತ್ವದ ಹದ್ದುಬಸ್ತಿನಲ್ಲಿ ಸಾಕಲಾಗುತ್ತಿದೆ. ಈ ಕಾಗೆಗಳು ದೇಶದ 'ಭಾಗ್ಯದ ಪಕ್ಷಿಗಳು' ಎಂಬುದು ಅಲ್ಲಿನ ಜನರ ನಂಬಿಕೆ. ಆ ಕಾಗೆಗಳು ಕಣ್ಮರೆಯಾದ ದಿನ ಇಂಗ್ಲೆಂಡಿಗೆ

ದುರ್ಭಿಕ್ಷ ಪ್ರಾಪ್ತಿಯಾಗುತ್ತದೆ ಎಂಬ ಮೂಢನಂಬಿಕೆ ಇಂದಿಗೂ ಚಾಲ್ತಿಯಲ್ಲಿದೆ. ದೊಡ್ಡೇರಿ ವೆಂಕಟಗಿರಿರಾವ್ ಅವರು ತಮ್ಮ 'ಏಕಾಕಿ ಪ್ರವಾಸಿ' ಕೃತಿಯಲ್ಲಿ ಈ ವಿಷಯದ ಬಗ್ಗೆ ಉಲ್ಲೇಖಿಸಿದ್ದಾರೆ. "ಹೊರಗಡೆ ಅಂಗಳದಲ್ಲಿ ಕೆಲವು "ರೇವನ್" ಜಾತಿಯ ಕಾಗೆಗಳು ಕುಪ್ಪಳಿಸುತ್ತಿರುತ್ತವೆ.......ಈ ಪಕ್ಷಿಗಳು ಲಂಡನ್ ನಗರದ ಭಾಗ್ಯ ರಕ್ಷಕರೆಂದು ನಂಬಿಕೆ. ಅವು ಎಂದು ಟವರ್ ಆಫ್ ಲಂಡನಿನಿಂದ ಹಾರಿ ಹೋಗುತ್ತವೋ ಅಂದಿನಿಂದ ಲಂಡನಿಗೆ ದುರ್ದೆಶೆ ಎಂದು ಸಾಮಾನ್ಯ ಜನತೆಯಲ್ಲಿ ನಂಬಿಕೆ."(ಏಕಾಕಿ ಪ್ರವಾಸಿ., ದೊಡ್ಡೇರಿ ವೆಂಕಟಗಿರಿರಾವ್., ಪು-೧೪೬)ಎಂದಿದ್ದಾರೆ. ಹೇಮಲತಾ ಮಹಿಷಿ, ಕೆ. ಶಿವರಾಮ ಕಾರಂತ, ಇಂದಿರಾ ಶಿವಣ್ಣ, ದೇವಕಿ ಮೂರ್ತಿ ಮೊದಲಾದವರು ಲಂಡನ್ನಿನಲ್ಲಿರುವ ಈ ಮೂಢನಂಬಿಕೆಯ ಬಗ್ಗೆ ಉಲ್ಲೇಖಿಸಿದ್ದಾರೆ.

ಇಂಗ್ಲೆಂಡಿನ ವೆಬ್‌ಮಿನಿಸ್ಟರ್ ಅಬೆಯಲ್ಲಿ 'ಸ್ಟೋನ್ ಆಫ್ ಸ್ಕೋನ್' ಎಂಬ ಕಲ್ಲಿದೆ. ಈ ಕಲ್ಲನ್ನು ಇಂಗ್ಲೆಂಡಿನ ದೊರೆ ಮೂರನೇ ಎಡ್ವರ್ಡ್ ಸ್ಕಾಂಟ್ಲೆಂಡಿನ ಅರಸನಿಂದ ಕಿತ್ತುಕೊಂಡು ಬಂದುದಾಗಿದೆ. ಈ ಕಲ್ಲು 'ಅದೃಷ್ಟವಂತದ ಕಲ್ಲು' ಎಂಬುದು ಪ್ರಭುತ್ವದ ನಂಬಿಕೆ. ಇಂಗ್ಲೆಂಡಿನ ರಾಜನಾಗಿ ಯಾರೇ ಅಧಿಕಾರ ವಹಿಸಿಕೊಂಡರೂ ಪಟ್ಟಾಭಿಷೇಕವಾಗುವಾಗ ಇದೇ ಕಲ್ಲಿನ ಮೇಲೆ ಕೂರಬೇಕು. ಇದು ಕೂಡ ಇಂಗ್ಲೆಂಡಿನಲ್ಲಿರುವ ಮೂಢನಂಬಿಕೆಗಳಲ್ಲಿ ಒಂದಾಗಿದೆ ಎಂದು ಅನುಪಮಾ ನಿರಂಜನ ಅವರು ಹೇಳಿದ್ದಾರೆ. ಆದ್ದರಿಂದಲೇ ಅನುಪಮಾ ನಿರಂಜನರವರು "ಬ್ರಿಟಿಷರು ಇಷ್ಟು ವಿದ್ಯಾವಂತರಾದ್ರೂ ಕುರುಡು ನಂಬಿಕೆಗಳು ಮಾತ್ರ ಜಾಸ್ತಿ"(ಅಂಗೈಯಲ್ಲಿ ಯೂರೊ-ಅಮೆರಿಕ., ಅನುಪಮಾ ನಿರಂಜನ., ಪು-೮೪)ಎಂದಿದ್ದಾರೆ.

ಟಿ. ಕೆ. ರಾಮರಾವ್‌ರವರು ತಮ್ಮ 'ಗೋಳದ ಮೇಲೊಂದು ಸುತ್ತು' ಕೃತಿಯಲ್ಲಿ "ಲಂಡನ್ ಕಂದಾಚಾರಗಳಿಗೆ ಜೋತುಬಿದ್ದಿರುವ ನಾಡು"(ವಿದ್ಯಾಶಂಕರ., ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ., ಪು-೧೦೦)ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ವಿದ್ಯಾಶಂಕರ ಅವರು ಉಲ್ಲೇಖಿಸಿದ್ದಾರೆ. ಅಭಿವೃದ್ಧಿ ಹೊಂದಿದ ದೇಶ ಎನಿಸಿರುವ ಇಂಗ್ಲೆಂಡಿನಲ್ಲಿ ಇಂದಿಗೂ ಕುರುಡಾಗಿ ಪಾಲನೆಯಾಗುತ್ತಿರುವ ಸಂಪ್ರದಾಯದ ಆಚರಣೆಗಳನ್ನು ಗುರುತಿಸಲಾಗಿದೆ.

ಇಂಗ್ಲೆಂಡಿನಲ್ಲಿ ಪ್ರಚಲಿತವಿರುವ ಮೂಢನಂಬಿಕೆಗಳ ಬಗ್ಗೆ ಅನೇಕ ಲೇಖಕರು ಉಲ್ಲೇಖಿಸಿರುವುದನ್ನು ಗಮನಿಸಿದಾಗ, ಪ್ರಪಂಚದ ಯಾವ ದೇಶವೂ ಕಂದಾಚಾರ, ಕುರುಡು ನಂಬಿಕೆಗಳಿಂದ ಮುಕ್ತವಾಗಿಲ್ಲ ಎನಿಸುತ್ತದೆ. ಕೇವಲ ಇಂಗ್ಲೆಂಡಿನಲ್ಲಿ ಮಾತ್ರವಲ್ಲದೆ ಯುರೋಪಿನ ಇತರ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿಯೂ ಕೆಲವು ಮೂಢ ಆಚರಣೆಗಳು, ಕುರುಡು ನಂಬಿಕೆಗಳು ಪ್ರಚಲಿತದಲ್ಲಿವೆ.

ದೊಡ್ಡೇರಿ ವೆಂಕಟಗಿರಿರಾವ್ ಅವರು ರೋಮ್‌ನಲ್ಲಿ ಪ್ರಚಲಿತವಿರುವ ಮೂಢನಂಬಿಕೆಯ ಬಗ್ಗೆ ಹೇಳುತ್ತಾ "ಟ್ರೇವಿ ಕಾರಂಜಿಯ ಕೊಳದಲ್ಲಿ ನಾಣ್ಯವನ್ನು ಹಾಕಿದವರು ತಪ್ಪದೆ ಮರಳಿ ರೋಮಿಗೆ ಬರುತ್ತಾರೆಂದು ನಂಬಿಕೆ ಇದೆ"(ಏಕಾಕಿ ಪ್ರವಾಸಿ., ದೊಡ್ಡೇರಿ ವೆಂಕಟಗಿರಿರಾವ್., ಪು-೨೨)ಎಂದಿದ್ದಾರೆ. ಇಟಲಿ ಕ್ರೈಸ್ತ ಧರ್ಮೀಯರ ನಾಡು. ಇಲ್ಲಿಯೂ ಮೂಢನಂಬಿಕೆಗಳಿವೆ. ದೊಡ್ಡೇರಿ ವೆಂಕಟಗಿರಿರಾವ್ ಮತ್ತು ಹೋ. ಶ್ರೀನಿವಾಸಯ್ಯ ಅವರು ಈ ಟ್ರವಿ ಫೌಂಟೇನ್‌ಗೆ ನಾಣ್ಯವನ್ನು ಹಾಕಿದೆ ಎಂದು ಹೇಳಿಕೊಂಡಿದ್ದಾರೆ. ಹೇಮಲತಾ ಮಹಿಷಿ ಮತ್ತು ಅನುಪಮಾ ನಿರಂಜನ ಅವರು ನಾಣ್ಯವನ್ನು ಹಾಕಲಿಲ್ಲ ಎಂದು ಹೇಳಿಕೊಂಡಿದ್ದಾರೆ. ಲೇಖಕರಲ್ಲಿಯೂ ಮೂಢನಂಬಿಕೆಗಳ ಆಚರಣೆಗಳಿಗೆ ಸಂಬಂಧಿಸಿದಂತೆ ವಿಭಿನ್ನ ನಿಲುವುಗಳಿವೆ. ಪ್ರವಾಸಿ ಲೇಖಕರು ವಿದೇಶಗಳಿಗೆ ಹೋದಾಗ ಅಲ್ಲಿ ಪಾಲನೆಯಾಗುವ ಕುರುಡು

ನಂಬಿಕೆಗಳನ್ನು ಕೆಲವರು ಒಪ್ಪಿ ಪಾಲಿಸಿದ್ದಾರೆ. ಕೆಲವು ಲೇಖಕರು ತಿರಸ್ಕರಿಸಿದ್ದಾರೆ. ವೈಯಕ್ತಿಕ ಮನೋಧೋರಣೆಗಳು ನಂಬಿಕೆಗಳ ಮೇಲೆ ಪ್ರಭಾವ ಬೀರುವುದನ್ನು ಗುರುತಿಸಲಾಗಿದೆ.

ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ಪೂಜಾ ಮಂದಿರಗಳನ್ನು ಪವಿತ್ರ ಸ್ಥಳಗಳೆಂದು ಪರಿಗಣಿಸಲಾಗುತ್ತದೆ. ದೇವಸ್ಥಾನಗಳಲ್ಲಿ ಸಮಾಧಿ ಮಾಡುವುದಿಲ್ಲ. ದೇವಾಲಯದ ಪ್ರಧಾನ ಅರ್ಚಕರು ಅಥವಾ ಮಠದ ಸ್ವಾಮಿಗಳಾಗಿದ್ದರೆ ದೇವಾಲಯದ ಪವಿತ್ರ ಆವರಣದ ಹೊರಗಡೆ ಸಮಾಧಿ ಮಾಡಲಾಗುತ್ತದೆ. ಅವುಗಳನ್ನು 'ಗದ್ದಿಗೆ'ಗಳೆಂದು ಕರೆಯಲಾಗುತ್ತದೆ. ಇನ್ನೂ ಅನೇಕ ಸಮಾಧಿ ಸ್ಥಳಗಳು ಪೂಜ್ಯನೀಯ ಸ್ಥಳಗಳಾಗಿ ಮಾರ್ಪಾಡಾಗಿವೆ. ಮಂತ್ರಾಲಯದ ಗುರು ರಾಘವೇಂದ್ರರಾಯರ ಸನ್ನಿಧಿಯು ಸಮಾಧಿ ಸ್ಥಳವಾಗಿದೆ. ಅಲ್ಲಿ ಸಮಾಧಿ ಸ್ಥಳವನ್ನೇ ಪೂಜ್ಯನೀಯ ಸ್ಥಳವನ್ನಾಗಿಸಿದ್ದಾರೆ. ನಿತ್ಯವೂ ಆರಾಧನೆ ಮಾಡಲಾಗುತ್ತಿದೆ. ಕೂಡಲ ಸಂಗಮದ ಬಸವಣ್ಣನ ಐಕ್ಯ ಸ್ಥಳದಲ್ಲಿ ಇಂದಿಗೂ ಪೂಜೆ ನಡೆಯುತ್ತಿದೆ. ಆದರೆ ಫ್ರಾನ್ಸ್ ದೇಶದಲ್ಲಿ ದೇವಸ್ಥಾನ ಸಮಾಧಿಸ್ಥಳವಾಗಿ ಪರಿವರ್ತನೆಯಾದ ಸಾಂಸ್ಕೃತಿಕ ಬದಲಾವಣೆಯನ್ನು ದೊಡ್ಡೇರಿ ವೆಂಕಟಗಿರಿರಾವ್ ಅವರು ಉಲ್ಲೇಖಿಸಿದ್ದಾರೆ. "ಪ್ಯಾಂಥಿಯಾನ್ ಗ್ರೀಕ್ ಶೈಲಿಯ ನಿರ್ಮಾಣ...... ನಿರ್ಮಾಣವಾದಾಗ ಅದು ಪೂಜಾ ಮಂದಿರ. ಆದರೆ ಕ್ರಾಂತಿಯ ಅನಂತರ ಅದು ಸಮಾಧಿ ಮಂದಿರ".(ದೊಡ್ಡೇರಿ ವೆಂಕಟಗಿರಿರಾವ್., ಏಕಾಕಿ ಪ್ರವಾಸಿ., ಪು-೧೧೨,೧೧೩) ಫ್ರಾನ್ಸ್ ದೇಶದಲ್ಲಿ ಕ್ರಿ.ಶ. ೧೭೮೯ರಲ್ಲಿ 'ಪ್ಯಾಂಥಿಯಾನ್' ಎಂಬ ಗ್ರೀಕ್ ಶೈಲಿಯ ಪೂಜಾ ಮಂದಿರವನ್ನು ಸ್ಥಾಪಿಸಲಾಗಿತ್ತು. ಅದೇ ವರ್ಷ ಫ್ರಾನ್ಸ್ ಕ್ರಾಂತಿ ಜರುಗಿತು. ಕ್ರಾಂತಿಯ ನಂತರ ಈ ಪೂಜಾಮಂದಿರವು ಸಮಾಧಿ ಸ್ಥಳವಾಗಿ ಪರಿವರ್ತನೆಯಾಯಿತು. ಈ ಸಾಂಸ್ಕೃತಿಕ ಬದಲಾವಣೆಗೆ ಕ್ರಾಂತಿಕಾರರ ವೈಚಾರಿಕ ಚಿಂತನೆಗಳು ಕಾರಣವಾಗಿದೆ. ಕ್ರಾಂತಿಯ ಪರಿಣಾಮವಾಗಿ ಜನರಲ್ಲಿ ದೇವರ ಮೇಲಿನ ನಂಬಿಕೆ ಕಡಿಮೆಯಾಗಿ ನಾಸ್ತಿಕ ಭಾವವನ್ನು ತಾಳಿರುವ ಕಾರಣದಿಂದ ಪೂಜಾ ಮಂದಿರಗಳಲ್ಲಿ ಸಮಾಧಿ ಮಾಡುವ ನಿರ್ಧಾರಕ್ಕೆ ಬಂದಿರುವಂತೆ ತೋರುತ್ತದೆ. ಫ್ರಾನ್ಸ್‌ನ ಪ್ರಸಿದ್ಧ ಲೇಖಕರು, ಕಲಾವಿದರ ಸಮಾಧಿಗಳಿವೆ. ಒಂದು ಪೂಜಾ ಮಂದಿರ ಸಮಾಧಿ ಸ್ಥಳವಾಗಿ ಪರಿವರ್ತಿತವಾಗುವ ಸಂಸ್ಕೃತಿಯಲ್ಲಿನ ಆಂತರಿಕ ಬದಲಾವಣೆಯನ್ನು ಇಲ್ಲಿ ಗುರುತಿಸಲಾಗಿದೆ. ಮುಂದುವರೆದು ಇಂಗ್ಲೆಂಡಿನ 'ವೆಬ್ ಮಿನಿಸ್ಟರ್ ಅಬೆ'ಯು ರಾಜವಂಶಸ್ಥರು ಪ್ರಾರ್ಥನೆ ಸಲ್ಲಿಸುವ ಚರ್ಚು. ಇದೇ ಚರ್ಚಿನಲ್ಲಿ ಮದುವೆಯಂತಹ ಮಂಗಳ ಕಾರ್ಯಗಳು ಮತ್ತು ಶವ ಸಂಸ್ಕಾರ ಕಾರ್ಯಗಳು ಒಂದೇ ಸ್ಥಳದಲ್ಲಿ ನಡೆಯುವುದನ್ನು ಉಲ್ಲೇಖಿಸಲಾಗಿದೆ. ಅದನ್ನು ಕುರಿತು ಲತಾಗುತ್ತಿ ಅವರು "ಪವಿತ್ರ ಮಂಗಳಕರವೆನ್ನುವ ಮದುವೆ, ದುಃಖತ್ರಸ್ತವೆನ್ನುವ ಸತ್ತವರ ಶವ ಸಂಸ್ಕಾರ, ಒಂದೇ ನೆಲದಲ್ಲಿ, ಇದೊಂದು ವಿಚಿತ್ರವಾದರೂ ಸತ್ಯವಾಗಿಯೂ ಮಹಾನ್ ಸಂಸ್ಕೃತಿ"(ಲತಾ ಎಂ. ಗುತ್ತಿಪಾಟೀಲ., ಪ್ರವಾಸ ಸಾಹಿತ್ಯ : ಅನ್ಯ ಸಂಸ್ಕೃತಿಗಳ ಅಧ್ಯಯನ., ಪು-೫೨)ಎನ್ನುತ್ತಾರೆ. ಇತರ ಲೇಖಕರ ದೃಷ್ಟಿಕೋನದಲ್ಲಿ ವಿಚಿತ್ರವಾಗಿ ಕಾಣುವ ಇಂಗ್ಲೆಂಡಿನ ಈ ಸಂಸ್ಕೃತಿಯು ಲತಾಗುತ್ತಿ ಅವರಿಗೆ ಮಹಾನ್ ಸಂಸ್ಕೃತಿಯಾಗಿ ಕಂಡಿದೆ. ಪ್ಯಾಂಥಿಯಾನ್‌ನ ಸಂಸ್ಕೃತಿಯಲ್ಲಿನ ಆಂತರಿಕ ಬದಲಾವಣೆಯು ಕಾಲದ ಮಿತಿಗೆ ಒಳಪಟ್ಟಿದೆ. ಇಂಗ್ಲೆಂಡಿನಲ್ಲಿನ ಆಚರಣೆಯು ರಚನಾತ್ಮಕ ಧೋರಣೆಗಳನ್ನು ತಿಳಿಸುತ್ತದೆ.

ಜಿ. ಗೋಪಾಲ್ ಅವರ 'ಬೆಂಗಳೂರಿಂದ ಬಾರ್ಸಲೋನಕ್ಕೆ' ಕೃತಿಯಲ್ಲಿ ಉಲ್ಲೇಖಿಸಿರುವಂತೆ 'ಲೇಖಕರು ಬಾರ್ಸಲೋನಾದ 'ಲಾ ರ್‍ಯಾಂಬ್ಲ'ದಲ್ಲಿನ ಅತ್ಯಂತ ಜನಸಂದಣೀಯ ವಿಹಾರಸ್ಥಳಕ್ಕೆ ಭೇಟಿ ನೀಡಿದ್ದರು. ಅಲ್ಲಿ ಭಾರತದಲ್ಲಿ ಇರುವಂತೆ 'ಹಕ್ಕಿ ಶಾಸ್ತ್ರ'ದ ಮೂಲಕ ಭವಿಷ್ಯ ಹೇಳುವ ಸ್ತ್ರೀಯರನ್ನು ನೋಡಿ

"ಹಕ್ಕಿಶಾಸ್ತ್ರ ಹೇಳಿ ಭವಿಷ್ಯ ನುಡಿಯುವ ಸ್ತ್ರೀಯರಿಗೇನೂ ಕಡಿಮೆಯಿಲ್ಲ."(ಜಿ. ಗೋಪಾಲ್., ಬೆಂಗಳೂರಿಂದ ಬಾರ್ಸಿಲೋನಕ್ಕೆ., ಪು-೭೧)ಎಂದಿದ್ದಾರೆ. ಹಕ್ಕಿ-ಪಿಕ್ಕಿ ಜನಾಂಗದವರ 'ಗಿಣಿಶಾಸ್ತ್ರ' ಹೇಳುವ ಸಂಪ್ರದಾಯವನ್ನು ದೂರದ ಬಾರ್ಸಿಲೋನಾದಲ್ಲಿ ನೋಡಿದ್ದಾರೆ. 'ಹಾಲಕ್ಕಿ ಸಂಪ್ರದಾಯ'ದವರು ಹಾಡಿನ ಮೂಲಕ ಭವಿಷ್ಯ ನುಡಿಯುವ 'ಶಕುನದ ಹಕ್ಕಿ' ಸಂಪ್ರದಾಯದೊಂದಿಗೆ ಹೋಲಿಕೆಯಾಗುತ್ತದೆ. ಭವಿಷ್ಯ ತಿಳಿಯಬೇಕೆಂಬ ಹಂಬಲ ಅಥವಾ ಕುತೂಹಲ ಮಾನವನಿಗೆ ಸಹಜವಾದ ಆಕಾಂಕ್ಷೆ. ಅದು ಕಾಲಾತೀತವಾದುದು ಮತ್ತು ದೇಶಾತೀತಾವಾದುದು. ಭಾರತದಲ್ಲಿ ಪ್ರಚಲಿತವಿರುವ ಆಚರಣೆ, ಸಂಪ್ರದಾಯ, ಪದ್ಧತಿ, ನಂಬಿಕೆಗಳು ಯುರೋಪ್ ಖಂಡದ ಬಹುತೇಕ ದೇಶಗಳಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣಲಾಗಿದೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ಅಥೆನ್ಸ್‌ನ ಸ್ಮಾರಕಗಳನ್ನು ವೀಕ್ಷಿಸಿ ಹಿಂದೂ ಧರ್ಮದ ಆಚರಣೆಗಳನ್ನು ಹೋಲುವ ಸಂಪ್ರಾದಾಯಗಳ ಕುರಿತು "ಗ್ರೀಸ್ ಇಂದು ಕ್ರೈಸ್ತ ಧರ್ಮೀಯರ ನಾಡು. ಆದರೆ, ಹಿಂದೆ ಗ್ರೀಕರು ತಮ್ಮದೇ ಆದಂತಹ ವಿಶಿಷ್ಟ ಧರ್ಮವೊಂದನ್ನವಲಂಬಿಸಿದ್ದರು. ಆಚಾರ, ಆರಾಧನೆಗಳಲ್ಲಿ ಹಿಂದೂಧರ್ಮವನ್ನೇ ಬಹುಮಟ್ಟಿಗೆ ಹೋಲುವ ಪ್ರಾಚೀನ ಗ್ರೀಕ್ ಧರ್ಮದಲ್ಲೂ ಅಸಂಖ್ಯಾತ ದೇವತೆಗಳ ಆರಾಧನೆ ರೂಢಿಯಲ್ಲಿತ್ತು" (ಪುಂಡಿಕಾಯ್ ಗಣಪಯ್ಯ ಭಟ್., ಯುರೋಪ್ ನೆನಪುಗಳು., ಪು-೨೨)ಎಂದಿದ್ದಾರೆ. ಈ ಹೇಳಿಕೆಯ ಆಧಾರದ ಮೇಲೆ ಗ್ರೀಕ್ 'ಬಹುದೇವತಾರಾದನೆಯ ದೇಶವಾಗಿತ್ತು' ಎಂಬ ಮಾಹಿತಿ ತಿಳೀಯುತ್ತದೆ. ಪ್ರಸ್ತುತ ಗ್ರೀಕ್‌ನಲ್ಲಿ ಕ್ರೈಸ್ತ ದರ್ಮೀಯರೇ ಹೆಚ್ಚಿದ್ದಾರೆ. ಕ್ರೈಸ್ತ ಧರ್ಮವು ಈ ಹಿಂದೆ ಇದ್ದ ಧಾರ್ಮಿಕ ವಿಧಿವಿಧಾನಗಳನ್ನು ಅತಿಕ್ರಮಿಸಿ ಏಕದೇವೋಪಾಸನೆಯ ಸಂಸ್ಕೃತಿಯನ್ನು ಹೇರಿದೆ ಎಂಬುದು ವಿಧಿತವಾಗುತ್ತದೆ. ಪ್ರಪಂಚದ ಬಹುತೇಕ ದೇಶಗಳಲ್ಲಿ ಇಂತಹ ಸಾಂಸ್ಕೃತಿಕ ಅತಿಕ್ರಮಣವನ್ನು ಗುರುತಿಸಬಹುದಾಗಿದೆ.

ಭಾರತೀಯರಿಗೆ ಗಂಗಾನದಿ ದೇವ ಸಮಾನಳು. ಗಂಗಾನದಿಯಲ್ಲಿ ಮಿಂದರೆ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಭಾರತೀಯರಲ್ಲಿದೆ. ಇದೇ ತರಹದ ನಂಬಿಕೆಗಳು ಪ್ರಾಚೀನ ನಾಗರಿಕತೆ ರೋಮಿನಲ್ಲಿ ಇಂದಿಗೂ ಆಚರಣೆಯಲ್ಲಿರುವುದನ್ನು ಕಾಣಬಹುದು. ಜಿ.ಎಸ್. ಶಿವರುದ್ರಪ್ಪ ಅವರು ಇಂಗ್ಲೆಂಡಿನಲ್ಲಿರುವ ರೋಮನ್ನರ ಆಳ್ವಿಕೆಗೆ ಒಳಪಟ್ಟಿದ್ದ 'ಬಾತ್' ನಗರಕ್ಕೆ ಹೋಗಿದ್ದಾರೆ. ಬ್ರಿಸ್ಟಲ್‌ನಿಂದ ಸುಮಾರು ಹದಿನೈದು- ಇಪ್ಪತ್ತು ಮೈಲಿ ಬಸ್ಸಿನಲ್ಲಿ ಪ್ರಯಾಣ ಮಾಡಿದ ಬಳಿಕ 'ರೋಮನ್ ಬಾತ್' ಎಂಬ ನೈಸರ್ಗಿಕ ಬಿಸಿನೀರಿನ ಬುಗ್ಗೆಗಳಿರುವ ಸ್ಥಳ ಸಿಗುತ್ತದೆ. ಸುಲಿಸ್ ದೇವತೆಯ ಪೂಜಾಸ್ಥಳವಾದ ಈ ಬಿಸಿ ನೀರಿನ ಬುಗ್ಗೆಗಳು ಪಾಪ ಪರಿಹಾರಕವೆಂದು, ರೋಗವನ್ನು ವಾಸಿ ಮಾಡುವ ಶಕ್ತಿ ಇದೆ ಎಂಬ ನಂಬಿಕೆ ಇಂದಿಗೂ ಆಚರಣೆಯಲ್ಲಿರುವುದನ್ನು ಉಲ್ಲೇಖಿಸಿದ್ದಾರೆ. "ಕೆಲ್ಟಿಕ್ ಜನಾಂಗದ ದೇವತೆಯಾದ ಸುಲಿಸ್‌ಳ ಆರಾಧನೆಯ ಸ್ಥಳವಾಗಿತ್ತು. ಅಷ್ಟೇ ಅಲ್ಲ ಈ ನೀರು ಅತ್ಯಂತ ಪವಿತ್ರವಾದುದೆಂದೂ, ಪಾಪ ಪರಿಹಾರಕವಾದುದೆಂದೂ ನಂಬಿಕೆ ಬೆಳೆದು, ದೂರ ಬಹುದೂರಗಳಿಂದ ಈ ಪವಿತ್ರವಾದ ನೀರಿನ ಸ್ನಾನಕ್ಕೆ ಹಾಗೂ ಸುಲಿಸ್ ದೇವತೆಯ ಆರಾಧನೆಗೆ ಜನ ಬರತೊಡಗಿದರು" (ಜಿ.ಎಸ್. ಶಿವರುದ್ರಪ್ಪ., ಇಂಗ್ಲೆಂಡಿನಲ್ಲಿ ಚತುರ್ಮಾಸ., ಪು-೯೯)ಎಂದಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿನ ನಂಬಿಕೆಗಳಿಗೆ ಸಾಮ್ಯತೆಯನ್ನು ಹೊಂದಿರುವ ಈ ಆಚರಣೆಗಳು ಇಂಗ್ಲೆಂಡಿನಲ್ಲಿಯೂ ಪ್ರಚಲಿತದಲ್ಲಿರುವುದನ್ನು ಗುರುತಿಸಲಾಗಿದೆ. ಹಿಮಾಚಲ ಪ್ರದೇಶದಲ್ಲಿ 'ಮಣಿಕರ್ಣಿಕ' ಎಂಬ ಬಿಸಿ ನೀರಿನ ಬುಗ್ಗೆ ಚಿಮ್ಮುವ ಸ್ಥಳವಿದೆ. ಇದು ಸಿಖ್ಖರ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿಯ ನಿರಿನಲ್ಲಿ ಸ್ನಾನ ಮಾಡಿದರೆ ಚರ್ಮದ ರೋಗಗಳು ವಾಸಿ ಆಗುತ್ತದೆ ಎಂಬ ನಂಬಿಕೆ

ಇದೆ. ರೋಮನ್ ಬಾತ್ ಸ್ಥಳದಲ್ಲಿನ ನಂಬಿಕೆಗಳು ಮಣಿಕರ್ಣಿಕ ಸ್ಥಳದಲ್ಲಿರುವ ನಂಬಿಕೆಗಳೊಂದಿಗೆ ಸಾಮ್ಯತೆ ಇರುವುದು ಕಂಡುಬರುತ್ತದೆ. ಭಾರತದ ಅನೇಕ ತೀರ್ಥಯಾತ್ರಾ ಸ್ಥಳಗಳಲ್ಲಿ ಇದೇ ಬಗೆಯ ನಂಬಿಕೆಗಳಿವೆ

ರೋಮನ್ ಬಾತ್ ಸ್ಥಳದಲ್ಲಿ ಉತ್ಖನನ ನಡೆಸಿದಾಗ "ಪ್ರಾಣಿಗಳನ್ನು ದೇವತೆಗೆ ಬಲಿಕೊಡುವ ಶಿಲಾಪೀಠವೂ, ಹದಿಮೂರು ಸಾವಿರ ರೋಮನ್ ನಾಣ್ಯಗಳೂ, ಅಂದಿನ ಪೂಜಾ ಸಾಮಾಗ್ರಿಗಳೂ ಹಾಗೂ ಕೆಲವು ಲಿಖಿತಗಳೂ ದೊರೆತವು"(ಜಿ.ಎಸ್. ಶಿವರುದ್ರಪ್ಪ., ಇಂಗ್ಲೆಂಡಿನಲ್ಲಿ ಚತುರ್ಮಾಸ., ಪು-೧೦೧) ರೋಮನ್ನರು ಇಂಗ್ಲೆಂಡಿನ ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ರೋಮನ್ ಸಂಸ್ಕೃತಿಯ ಆಚರಣೆಗಳು ಪಾಲನೆಯಾಗುತ್ತಿತ್ತು ಎಂಬುದನ್ನು ಗ್ರಹಿಸಲಾಗಿದೆ. ರೋಮ್ ಸಂಸ್ಕೃತಿಯಲ್ಲಿ ಭಾರತದಲ್ಲಿ ವೇದಕಾಲದಲ್ಲಿದ್ದ ಪ್ರಾಣಿಬಲಿ ಆಚರಣೆಗಳಂತೆ ಪೂಜೆ ಮಾಡುವ ಸಂಪ್ರದಾಯ ಪದ್ಧತಿಗಳು ಚಾಲ್ತಿಯಲ್ಲಿತ್ತು ಎಂಬುದು ವಿಧಿತವಾಗುತ್ತದೆ.

ರಕಮದೋರಿನ ಕೊಂಡಲವಾಡ : ಪ್ರಭಾಕರ ಶಿಶಿಲ ಅವರು ರಕಮದೋರಿನ ಕೊಂಡಲವಾಡ ಸ್ಥಳದ ಬಗ್ಗೆ 'ಫ್ರಾನ್ಸ್ ದೇಶದ ರಕಮದೋರು ಹನ್ನೆರಡನೇ ಶತಮಾನದ ಪ್ರಖ್ಯಾತ ಪವಾಡ ಕ್ಷೇತ್ರ. ಪ್ರಾಟಸ್ಟಂಟರ ಪುಣ್ಯಕ್ಷೇತ್ರ. ಇಲ್ಲಿನ ಏಳು ಬೆಟ್ಟಗಳಲ್ಲಿ ಏಳು ದೇವಾಲಯಗಳಿವೆ. ಇಲ್ಲಿಯೂ ಹರಕೆ ಕಟ್ಟಿಕೊಳ್ಳುವ, ಇಷ್ಟಾರ್ಥ ಸಿದ್ಧಿಯಾದ ಬಳಿಕ ಹರಕೆಯನ್ನು ಕಾಣಿಕೆ ಸಲ್ಲಿಸುವ ಪದ್ಧತಿ ಆಚರಣೆಯಲ್ಲಿದೆ. ಇಲ್ಲಿನ ಗುಹೆಗಳಲ್ಲಿ ಹಳೆಯ ಒಡಂಬಡಿಕೆ ಕಾಲಕ್ಕೆ ಸೇರಿದ 'ಸೇಂಟ್ ಜಾಕ್ವಿಸ್' ಎಂಬ ಸನ್ಯಾಸಿಯು ತಪಸ್ಸು ಮಾಡಿದ್ದರು ಎಂಬ ಐತಿಹ್ಯವಿದೆ. ೧೧೬೬ರಲ್ಲಿ ಸೇಂಟ್ ಅಮಾಡರನ ಮಮ್ಮಿ(ಶವ) ಇಲ್ಲಿನ ಗುಹೆಯಲ್ಲಿ ಕಾಣಸಿಕ್ಕಿದೆ. ಅಂದಿನಿಂದ ಇಲ್ಲಿ ಪವಾಡಗಳು ನಡೆಯುವುದನ್ನು ಜನರು ನಂಬಿ ಬರುತ್ತಾರೆ'(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೬೩,೬೪)ಎಂದಿದ್ದಾರೆ.

ರಕಮದೋರಿನ ಬಗೆಗಿನ ಈ ವಿವರಗಳಲ್ಲಿ ಕೆಲವು ಚರ್ಚಾತ್ಮಕ ಅಂಶಗಳನ್ನು ಗುರುತಿಸಲಾಗಿದೆ. ಫ್ರಾನ್ಸ್ ಕ್ರಾಂತಿಗೆ ಮೊದಲು ಫ್ರಾನ್ಸ್‌ನ ಜನರು ಭಾರತ ದೇಶದಲ್ಲಿರುವಂತೆ ಪವಾಡಗಳಲ್ಲಿ, ದೇವರಲ್ಲಿ ನಂಬಿಕೆಯನ್ನು ಹೊಂದಿದ್ದರು. ಹರಕೆ ಪದ್ಧತಿಯು ಪ್ರಚಲಿತದಲ್ಲಿತ್ತು. ಐತಿಹ್ಯಗಳು ಹುಟ್ಟಿಕೊಂಡಿತ್ತು ಎಂಬ ಅಂಶಗಳು ತಿಳಿದುಬರುತ್ತದೆ. ಭಾರತದಲ್ಲಿ ಇಂದಿಗೂ ಹರಕೆ ಪದ್ಧತಿ ಇದೆ, ಐತಿಹ್ಯಗಳಿವೆ, ಪವಾಡಗಳನ್ನು ನಂಬಲಾಗುತ್ತದೆ. ಸಾಂಸ್ಕೃತಿಕ ಆಚರಣೆಗಳ ನೆಲೆಯಲ್ಲಿ ರಕಮದೋರಿನ ವಿವರಗಳನ್ನು ಗಮನಿಸಿದಾಗ ಭಾರತೀಯ ಆಚರಣೆಗಳಿಗೂ ಇಲ್ಲಿನ ಆಚರಣೆಗಳಿಗೂ ಸಾಮ್ಯತೆಗಳಿರುವುದನ್ನು ಕಾಣಲಾಗಿದೆ.

ಲೂರ್ದ್ಸ್ ಎಂಬ ಪವಾಡ ಕ್ಷೇತ್ರ : ಶಿಶಿಲ ಅವರು ಲೂರ್ದ್ಸ್ ಎಂಬ ಕ್ರೈಸ್ತರ ಪವಿತ್ರ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿ ಪ್ರಚಲಿತವಿರುವ ಐತಿಹ್ಯಗಳನ್ನು ಪರಿಚಯಿಸಿದ್ದಾರೆ. ರಕಮದೋರಿನಂತೆ ಲೂರ್ದ್ಸ್ ಕೂಡ ಪವಾಡ ಕ್ಷೇತ್ರವಾಗಿದೆ. 'ಲೂರ್ದ್ಸ್' ಗಾವ್ ಎಂಬ ನದಿಯ ದಂಡೆಯ ಮೇಲಿನ ಪ್ರದೇಶ. ಈ ಪ್ರದೇಶದಲ್ಲಿ ಒಂದು ಐತಿಹ್ಯ ಪ್ರಚಲಿತವಿದೆ. 'ಮಸ್ಸೇಬಿಲ್ ಎಂಬ ಪ್ರದೇಶಕ್ಕೆ ಹದಿನೈದರ ಹರೆಯದ ಬಾಲೆ 'ಬೆರ್ನಡಿಟ್ಟ್' ಎಂಬುವವಳು ಸೌದೆಯನ್ನು ತರಲು ಹೋಗಿರುತ್ತಾಳೆ. ಅಲ್ಲಿನ ಗವಿಯಲ್ಲಿ ಬೆರ್ನಡಿಟ್ಟಳಿಗೆ ದಿವ್ಯವಾದ ಸ್ತ್ರೀಯ ದರ್ಶನವಾಗುತ್ತದೆ. ಜನರು ಆ ದಿವ್ಯ ಸ್ತ್ರೀಯು ಯೇಸುವಿನ ತಾಯಿ ಮೇರಿ ಎಂದು ಭಾವಿಸಿ ಒಂದು ದೇಗುಲವನ್ನು ನಿರ್ಮಿಸುತ್ತಾರೆ. ಬೆರ್ನಡಿಟ್ಟ್ ಸನ್ಯಾಸಿನಿಯಾಗಿ ಜನರ ಸೇವೆಗೆ ತೊಡಗುತ್ತಾಳೆ'. ಫ್ರಾನ್ಸ್ ದೇಶದ

ಈ ಐತಿಹ್ಯಕ್ಕೂ, ಭಾರತೀಯ ಪರಂಪರೆಯಲ್ಲಿ ದೇವಸ್ಥಾನಗಳ ನಿರ್ಮಾಣಗಳಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಐತಿಹ್ಯಗಳಿಗೂ ಸಾಮ್ಯತೆಗಳಿವೆ. ಬೆರ್ನಡಿಟ್ಟಳಿಗೆ ದರ್ಶನ ನೀಡಿದ ಗವಿಯಲ್ಲಿ ಮೇರಿ ತೋರಿಸಿಕೊಟ್ಟದ್ದು ಎಂದು ನಂಬಲಾದ ನೀರಿನ ಚಿಲುಮೆ ಇದೆ. ಈ ಚಿಲುಮೆಯ ನೀರನ್ನು ಅಲ್ಲಿನ ಭಕ್ತರು ಪವಿತ್ರ ತೀರ್ಥವೆಂದು ಪ್ಲಾಸ್ಟಿಕ್ ಬಾಟಲಿಗಳಲ್ಲಿ ಒಯ್ಯುತ್ತಾರೆ. ಈ ನೀರಲ್ಲಿ ಸ್ನಾನ ಮಾಡಿದರೆ ಯಾವುದೇ ಬಗೆಯ ವ್ಯಾಧಿಯು ಗುಣವಾಗುತ್ತದೆ ಎಂಬ ನಂಬಿಕೆ ಇದೆ. ಸಾವಿರಾರು ರೋಗಿಗಳು ತಮ್ಮ ವ್ಯಾಧಿಯ ನಿವಾರಣೆಗಾಗಿ ಪ್ರತಿನಿತ್ಯ ಬರುತ್ತಾರೆ. ಭಾರತದಲ್ಲಿ ಅಲಹಾಬಾದ್‌ನ ತ್ರಿವೇಣಿ ಸಂಗಮದಲ್ಲಿ (ಗಂಗಾ,ಯಮುನಾ,ಸರಸ್ವತಿ ನದಿಗಳು) ಇದೇ ರೀತಿಯ ನಂಬಿಕೆಗಳಿವೆ.

ಮುಂದುವರಿದ ರಾಷ್ಟ್ರ ಎನಿಸಿರುವ ಫ್ರಾನ್ಸ್ ದೇಶದಲ್ಲಿ ಇಂದಿಗೂ ಇಂತಹ ಮೂಢನಂಬಿಕೆಗಳನ್ನು ನಂಬುತ್ತಾರೆಯೇ?. ಲೇಖಕರೇ ಈ ಗೊಂದಲವನ್ನು ನಿವಾರಿಸಿದ್ದಾರೆ. ಲೂರ್ದ್ಸ್‌ನಲ್ಲಿನ ಪವಾಡಗಳ ಬಗ್ಗೆ ಅಧ್ಯಯನ ಮಾಡಲು ೧೮೮೨ರಲ್ಲಿ ಮೆಡಿಕಲ್ ಬ್ಯೂರೋ ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಅದ್ಯಯನದ ಪ್ರಕಾರ 'ಪವಿತ್ರ ನೀರಿನಲ್ಲಿ ಸ್ನಾನ ಮಾಡಿ ಗುಣಮುಖರಾದವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಗುಣವಾಗಲು ಕಾರಣವಾದ ಅಂಶಗಳನ್ನು ವಿವರಿಸಿದ್ದಾರೆ. ವೈದ್ಯಕೀಯ ಪರೀಕ್ಷೆಗೆ ನಿಲುಕದ, ವಿವರಿಸಲಾಗದ ಘಟನೆಗಳನ್ನು ಮಾತ್ರ ಪವಾಡವೆಂದು ಈ ಮೆಡಿಕಲ್ ಬ್ಯುರೋ ತೀರ್ಮಾನಿಸುತ್ತದೆ. ಲೇಖಕರು ಭೇಟಿ ನೀಡಿ ವಿವರ ಪಡೆದ ಪ್ರಕಾರ ಅಲ್ಲಿಯವರೆಗೆ ಅರುವತ್ತೈದು ಪವಾಡಗಳನ್ನು ದಾಖಲಿಸಲಾಗಿದೆ. ಜನರನ್ನು ಮೂಢನಂಬಿಕೆಗಳಿಂದ ದೂರ ಮಾಡಲು ಈ ರೀತಿಯ ಕ್ರಮಗಳು ಉಪಯುಕ್ತಕಾರಿಯಾಗಿವೆ. ಭಾರತದಲ್ಲಿ ಜನರನ್ನು ಪವಾಡವೆಂದು ನಂಬಿಸಿ ಮೋಸಗೊಳಿಸುವವರ ಸಂಖ್ಯೆ ಕಡಿಮೆಯೇನಿಲ್ಲ. ಅವರ ಪವಾಡಗಳ ಪರಿಶೀಲನೆಗೆ ಈ ರೀತಿ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿ ಪವಾಡಗಳ ಸತ್ಯಾಸತ್ಯತೆಯನ್ನು ಜನರಿಗೆ ತಿಳಿಸುವ ಕಾರ್ಯವಾಗಬೇಕಿದೆ. ಆದರೆ ಭಾರತದಲ್ಲಿ ಮನುಷ್ಯರೇ ದೇವರಾಗಿಬಿಡುತ್ತಾರೆ. ಅದನ್ನು ಲೇಖಕರು "ನಮ್ಮ ದೇಶದಲ್ಲಿ ದೇವರು ಮೈಮೇಲೆ ಬರುತ್ತಾರೆ ಎನ್ನುವವರ, ತಾವೇ ದೇವರು ಎಂದು ಹೇಳಿಕೊಳ್ಳುವವರ ಮತ್ತು ಅದನ್ನು ನಂಬಿ ನಡೆದುಕೊಳ್ಳುವ ಅಸಂಖ್ಯಾತ ಜನರ ನೆನಪಾಯಿತು" (ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೧೫೭) ಎಂದಿದ್ದಾರೆ. ನಮ್ಮಲ್ಲಿ ಪವಾಡಗಳನ್ನು ಬಯಲು ಮಾಡುವ, ಪವಾಡಗಳಿಗೆ ವೈಜ್ಞಾನಿಕ ಕಾರಣಗಳನ್ನು ವಿವರಿಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಹುಲಿಕಲ್ ನಟರಾಜ್ ಅವರು ಪವಾಡ ಬಯಲು ಮಾಡಲು ಅನೇಕ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ನಡೆಸಿದ್ದಾರೆ. 'ಪವಾಡ ರಹಸ್ಯ ಬಯಲು' ಎಂಬ ಕೃತಿಗಳನ್ನು ಬರೆದಿದ್ದಾರೆ. ಅನೇಕ ವಿಡಿಯೋಗಳನ್ನು ತಯಾರಿಸಿ 'ಮಿರ್‍ಯಾಕಲ್ ಬಸ್ಟರ್' ಎಂಬ ಯೂಟ್ಯೂಬ್ ಚಾನಲ್ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಆದರೆ ಇಂತಹ ಜಾಗೃತಿ ಕಾರ್ಯಕ್ರಮಗಳು ಮೂಢನಂಬಿಕೆಗೆ ಒಳಗಾದ ಜನರಿಗೆ ತಲುಪುತ್ತಿಲ್ಲ. ಈ ದಿಸೆಯಲ್ಲಿ ಸಂಶೋಧನೆಗೆ ವಿಪುಲ ಅವಕಾಶಗಳಿರುವುದನ್ನು ಗಮನಿಸಬಹುದಾಗಿದೆ.

ಹೋ. ಶ್ರೀನಿವಾಸಯ್ಯ ಅವರು 'ಶಶಿ ಕಂಡ ಜರ್ಮನಿ' ಕೃತಿಯಲ್ಲಿ ಶಶಿ ಬರೆದ ಆರನೇ ಪತ್ರದಲ್ಲಿ ಜರ್ಮನಿಯಲ್ಲಿ ಆಚರಿಸುವ ಕೆಲವು ಹಬ್ಬ-ಉತ್ಸವಗಳನ್ನು ವಿವರಿಸುತ್ತಾ ನಮ್ಮ ಸಂಸ್ಕೃತಿಯಲ್ಲಿರುವ ಹಬ್ಬ-ಉತ್ಸವಗಳೊಂದಿಗೆ ಹೋಲಿಸಿದ್ದಾರೆ. ಜರ್ಮನಿಯಲ್ಲಿ "ನಮ್ಮಲ್ಲಿ ಸಂಕ್ರಾಂತಿ ಮಾಡುವ ಹಾಗೆ ಇಲ್ಲಿ ಒಂದು ಹಬ್ಬ ಆಚರಿಸುತ್ತಾರೆ. ಅದರಲ್ಲೂ ವಿಶೇಷವಾಗಿ ಹಳ್ಳಿಗಳಲ್ಲಿ ದವಸ ಬೆಳೆಸಿದ ದೇವರಿಗೆ ವಂದನೆಗಳನ್ನು ಅರ್ಪಿಸುವ ದಿನ. ರೈತರು ಒಳ್ಳೆ ಬಟ್ಟೆ ಹಾಕಿಕೊಂಡು ಚರ್ಚಿಗೆ ಹೋಗುತ್ತಾರೆ. ಹಸುಗಳನ್ನು ಅಲಂಕರಿಸಿ

ಮೆರವಣಿಗೆ ಮಾಡುತ್ತಾರೆ. ನವಂಬರ್ ತಿಂಗಳಿನಲ್ಲಿ 'ಆಲ್ ಸೋಲ್ಸ್ ಡೇ' ಮಾಡುತ್ತಾರೆ. ನಮ್ಮಲ್ಲಿ ಪಿತೃಪಕ್ಷ, ಮಹಾಲಯ ಅಮಾವಾಸ್ಯೆ ಮಾಡುತ್ತೇವಲ್ಲಾ ಹಾಗೆ. ಹಿರಿಯರನ್ನೆಲ್ಲಾ ಜ್ಞಾಪಿಸಿಕೊಳ್ಳುವ ದಿನ. ಆಯುಧ ಪೂಜೆಯನ್ನು ಮಾಡುತ್ತಾರೆ. ಬಂದೂಕು ಹೊಡೆಯುವ ಮೂಲಕ......ನಮ್ಮ ದೇಶದಲ್ಲಿ ಇದ್ದ ಹಾಗೇನೇ ಹಬ್ಬಗಳು ಸಾಲುಸಾಲಾಗಿ ಬರುತ್ತವೆ."(ಹೊ. ಶ್ರೀನಿವಾಸಯ್ಯ., ಶಶಿ ಕಂಡ ಜರ್ಮನಿ., ಪು-೨೮)ಎಂದಿದ್ದಾರೆ. ಒಂದು ಪ್ರದೇಶದ ಸಂಪ್ರದಾಯ ಮತ್ತೊಂದು ಪ್ರದೇಶದಲ್ಲಿ ಆಚರಣೆಯಲ್ಲಿರುವುದು ಸೋಜಿಗವನ್ನು ಉಂಟುಮಾಡುತ್ತದೆ. ಜರ್ಮನಿ ದೇಶದಲ್ಲಿನ ಹಬ್ಬ ಆಚರಣೆಗಳು ಭಾರತದ ಹಬ್ಬ ಉತ್ಸವಗಳ ಆಚರಣೆಗಳೊಂದಿಗೆ ಹೋಲಿಕೆ ಆಗುವುದನ್ನು ಲೇಖಕರು ಗುರುತಿಸಿರುವುದು ಮಾನವನ ಮನಸ್ಸು ಎಲ್ಲೇ ಇದ್ದರೂ ಏಕರೀತಿಯಾಗಿ ವರ್ತಿಸುತ್ತದೆ, ಚಿಂತಿಸುತ್ತದೆ ಎಂಬ ತತ್ವಕ್ಕೆ ಪೂರಕವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಈಗಾಗಲೇ ಕೆಲವು ಸಿದ್ಧಾಂತಗಳ ಆಧಾರದ ಮೇಲೆ ಈ ರೀತಿಯ ಸಾಮ್ಯತೆಗೆ ಕಾರಣಗಳೇನು ಎಂಬುವುದರ ಬಗ್ಗೆ ಚರ್ಚೆ ಮಾಡಲಾಗಿದೆ.

ದೇವಸ್ಥಾನಗಳ ಆಚರಣೆಗಳಿಗೂ, ದೇವರ ದರ್ಶನಕ್ಕೆ ಹೋದಾಗ ನಾವು ತೊಡಬೇಕಾದ ಉಡುಪಿಗೂ ಅಂತರ್‌ಸಂಬಂಧವಿದೆಯೇ?. ದೇವರು-ದೇವಿಯರಿಗೆ ನಾವು ಸಭ್ಯ ಉಡುಪನ್ನು ಧರಿಸಿ ದರ್ಶನ ಪಡೆಯಬೇಕು. ಕೆಲವು ದೇವ-ದೇವಿಯರ ದರ್ಶನಕ್ಕೆ ಪುರುಷರು ಮೇಲುಡುಗೆ (ಅಂಗಿ, ಬನಿಯನ್, ಟೀಶರ್ಟ್) ಧರಿಸಿ ಹೋಗುವಂತಿಲ್ಲ. ಸ್ತ್ರೀಯರಿಗೆ ಈ ನಿಯಮ ಅನ್ವಯಿಸುವುದಿಲ್ಲ. ರಾಜ್ಯದ ಪ್ರತಿಷ್ಠಿತ ದೇವಸ್ಥಾನಗಳಲ್ಲಿ ಈ ನಿಯಮಗಳು ಜಾರಿಯಲ್ಲಿವೆ. ದೇವರಿಗೆ ರೇಷ್ಮೆ ಬಟ್ಟೆಗಳನ್ನು ಹರಕೆಯೆಂದು ಒಪ್ಪಿಸಲಾಗುತ್ತದೆ. ಆ ಬಟ್ಟೆಗಳಿಂದ ಅಲಂಕಾರ ಮಾಡಲಾಗಿರುತ್ತದೆ. ಬಟ್ಟೆಗಳನ್ನು ತೊಡುವ ದೇವರುಗಳ ದರ್ಶನ ಮಾಡಬೇಕಾದರೆ ಬಟ್ಟೆ ತೊಟ್ಟು ಹೋಗುವಂತಿಲ್ಲ. ಇದು ಭಾರತೀಯರ ಧಾರ್ಮಿಕ ವಿಧಿವಿಧಾನಗಳಿಗೆ ಸಂಬಂಧಿಸಿದ ವಿಪರ್ಯಾಸ ಎಂದರೆ ತಪ್ಪಾಗಲಾರದು. ಯುರೋಪಿನ ಕೆಲವು ದೇಶಗಳಲ್ಲಿಯೂ ಇದೇ ಬಗೆಯ ಸಂಪ್ರದಾಯವನ್ನು ಹೋಲುವ ಆಚರಣೆಗಳಿವೆ. ಪುಂಡಿಕಾಯ್ ಗಣಪಯ್ಯ ಭಟ್ ಅವರ ಸ್ನೇಹಿತೆ ಬೀನಾ ಅವರು ಭಾರತೀಯ ಉಡುಗೆಯಾದ ಸೀರೆಯನ್ನು ಉಟ್ಟು ಚರ್ಚಿಗೆ ಹೋದಾಗ ಅಲ್ಲಿನ ಚರ್ಚ್ ಸಿಬ್ಬಂದಿ ಪ್ರವೇಶವನ್ನು ನಿರಾಕರಿಸಿದ್ದಾರೆ. "ಈ ಚರ್ಚಿನಲ್ಲಿ ಪ್ರವೇಶಕ್ಕೆ ಉಡುಪಿನ ಕಟ್ಟುನಿಟ್ಟಿದೆ. ಪ್ಯಾಂಟ್‌ಶರ್ಟ್‌ಧಾರೀ ಪುರುಷರು ಹಾಗೂ ಸ್ಕರ್ಟ್‌ಧಾರೀ ಸ್ತ್ರೀಯರಿಗೆ ಮಾತ್ರ ಇಲ್ಲಿ ಪ್ರವೇಶಾನುಮತಿ. ಸ್ಕರ್ಟೇತರ ಮಹಿಳೆಯರಿಗೆ ಪ್ರವೇಶವಿಲ್ಲ."(ಪುಂಡಿಕಾಯ್ ಗಣಪಯ್ಯ ಭಟ್ಟ., ಯುರೋಪ್ ನೆನಪುಗಳು., ಪು-೪೩)ಎನ್ನುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಗ್ರೀಕ್ ದೇಶದಲ್ಲಿ ಭಾರತೀಯರಂತೆ ಬಹುದೇವತಾರಾದನೆ ಇದ್ದಿತು. ಕ್ರೈಸ್ತ ಧರ್ಮ ಪ್ರವೇಶಿಸದ ಮೇಲೆ ನಶಿಸಿಹೋದ ಬಹುದೇವತಾರಾಧನೆ ಆಚರಣೆಯಲ್ಲಿನ ಕೆಲವು ಪದ್ಧತಿಗಳು, ಏಕದೇವತಾರಾಧನೆಯಲ್ಲಿಯೂ ಮುಂದುವರೆದಿದೆ ಎಂಬುದನ್ನು ಮೇಲಿನ ಪ್ರಮಾಣಗಳ ಮೂಲಕ ಕಂಡುಕೊಳ್ಳಲಾಗಿದೆ.

ಪಿಥಿಯಾ ಪರಂಪರೆ : ಕ್ರಿಸ್ತ ಪೂರ್ವದಲ್ಲಿಯೇ ರೋಮ್ ಮತ್ತು ಗ್ರೀಕ್‌ನಲ್ಲಿದ್ದ ಬುಡಕಟ್ಟು ಜನರಲ್ಲಿ 'ಪಿಥಿಯಾ' ಪರಂಪರೆಯ ಬಗ್ಗೆ ಕೃಷ್ಣಾನಂದ ಹೆಗ್ಡೆ ಅವರು ಉಲ್ಲೇಖಿಸಿದ್ದಾರೆ. ಪಿಥಿಯಾ ಎಂದು 'ನುಡಿ ಹೇಳುವ ಸಂಪ್ರದಾಯ'ದ ದರ್ಶನ ಪಾತ್ರಿಯನ್ನು ಕರೆಯುತ್ತಿದ್ದರು. ಲೇಖಕರು 'ಡೆಲ್ಫಿ' ಎಂಬ ಹಳ್ಳಿಗೆ ಹೋಗಿದ್ದಾಗ ಈ ಸಂಪ್ರದಾಯದ ಬಗ್ಗೆ ವಿಚಾರಿಸಿ ಐತಿಹಾಸಿಕ ವಸ್ತುವಿಷಯಗಳನ್ನು ಸಂಗ್ರಹಿಸಿ ಬರೆದಿದ್ದಾರೆ.

ಅವರು ಸಂಗ್ರಹಿಸಿದ ಮಾಹಿತಿಯಂತೆ ಎರಡುವರೆ ಸಾವಿರ ವರ್ಷಗಳ ಹಿಂದೆ ಅಪೋಲೋ ದೇವಾಲಯದ ಪ್ರಾಂಗಣದಲ್ಲಿ 'ಪಿಥಿಯಾ' ಎನ್ನುವವಳು ಭೂತ ಮತ್ತು ಭವಿಷ್ಯಗಳ ನುಡಿ ಹೇಳುತ್ತಿದ್ದಳು. ಪಿಥಿಯಾ ಆದವರು ಸಾಮಾನ್ಯವಾಗಿ ಎಳೆ ವಯಸ್ಸಿನ ಹೆಣ್ಣು ಮಕ್ಕಳು ಇರುತ್ತಿದ್ದರು. ಡೆಲ್ಫಿ ಹಳ್ಳಿಯಲ್ಲಿ ಹುಟ್ಟಿದವರಿಗೆ ಮಾತ್ರ ಪಿಥಿಯಾ ಆಗಲು ಅವಕಾಶ ಇತ್ತು. ಅಪೋಲೋ ದೇವಾಲಯದ ಪೂಜಾರಿ ಈ ಪಿಥಿಯಾಗಳನ್ನು ಆಯ್ಕೆ ಮಾಡುತ್ತಿದ್ದ. ಮೊದಮೊದಲು ಎಳೆ ವಯಸ್ಸಿನ ಹೆಣ್ಣು ಮಕ್ಕಳನ್ನು ಆರಿಸುತ್ತಿದ್ದ ಸಂಪ್ರದಾಯವು ಬದಲಾಗಿ ಐವತ್ತು ವರ್ಷಕ್ಕೂ ಮಿಕ್ಕಿದ ಮಹಿಳೆಯರನ್ನು ಪಿಥಿಯಾ ಆಗಿ ಆಯ್ಕೆ ಮಾಡಲು ಪ್ರಾರಂಭಿಸಲಾಯಿತು. ಆಚರಣೆಗಳಲ್ಲಿ ನೂತನ ಪದ್ಧತಿಗಳ ಸೇರ್ಪಡೆಗೆ ಅವಕಾಶ ಇರುವುದನ್ನು ಇದು ಸೂಚಿಸುತ್ತದೆ. ಕಾಲಕ್ಕೆ ಅನುಗುಣವಾಗಿ ಪದ್ಧತಿಗಳು ಬದಲಾಗುತ್ತವೆ. ಪಿಥಿಯಾ ಬಳಿ ನುಡಿ ಕೇಳಲು ಸಾವಿರಾರು ಬುಡಕಟ್ಟು ಜನರು ಬರುತ್ತಿದ್ದರು. ಪಿಥಿಯಾ ನುಡಿ ಹೇಳಲು ಪ್ರಾರಂಭಿಸುವ ಮೊದಲು ಆಕೆಗೆ ಯಾವುದೋ ಗಿಡದ ಎಲೆಗಳನ್ನು ಮೂಸಿಸಿ ಅವಳ ಮೈಮೇಲೆ ಆವೇಶ ಬರುವಂತೆ ಮಾಡುತ್ತಿದ್ದರು. ನುಡಿ ಕೇಳಲು ಬರುವ ಜನರು ಪೂಜಾರಿಗೆ ಕಾಣಿಕೆ ಸಲ್ಲಿಸಿದ ಬಳಿಕವೇ ನುಡಿ ಕೇಳಲು ಅವಕಾಶ ಇತ್ತು. ಪಿಥಿಯಾ ಏನನ್ನೋ ಗೊಣಗುತ್ತಿದ್ದರೆ ಅದರ ಅರ್ಥವನ್ನು ಪೂಜಾರಿ ವಿವರಿಸುತ್ತಿದ್ದ. ಸಾಮಾನ್ಯವಾಗಿ ನುಡಿ ಕೇಳುವವರು ಸಮಸ್ಯೆಗಳನ್ನು ಹೇಳುವಾಗ ಪೂಜಾರಿ ಅವುಗಳಿಗೆ ಪರಿಹಾರ ರೂಪದ ಉತ್ತರಗಳನ್ನು ಹೇಳುತ್ತಿದ್ದ. ವಿಲಿಯಂ ಗೋಲ್ಡಿಂಗ್[೩] ಬರೆದ "ದಿ ಡಬಲ್ ಟಂಗ್" ಕೃತಿಯು ಪಿಥಿಯಾಳೊಬ್ಬಳ ಜೀವನಗಾಥೆಯನ್ನು ಆಧರಿಸಿ ಬರೆದುದಾಗಿದೆ.

ರೋಮಿನ ಈ ಸಂಪ್ರದಾಯವನ್ನು ಗಮನಿಸಿದರೆ ಭಾರತದಲ್ಲಿ ನಡೆಯುವ ಹಲವು ಸಾಂಪ್ರದಾಯಿಕ ಆಚರಣೆಗಳಿಗೆ ಹೋಲಿಕೆ ಆಗುತ್ತದೆ. ಪಿಥಿಯಾ ದರ್ಶನ ಪಾತ್ರಿ ಹೇಳುವ ಸಂಪ್ರದಾಯ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದಿಗೂ ಪ್ರಚಲಿತವಿದೆ. ಭೂತ, ಕೋಲ, ನೇಮ ನಾಗಾರಾಧನೆಗಳಲ್ಲಿ ದೈವಗಳು ಮೈಮೇಲೆ ಬಂದು ಭವಿಷ್ಯವನ್ನು ನುಡಿಯುವ ಪಾತ್ರಿಗಳಿಗೆ ಹೋಲಿಕೆ ಆಗುತ್ತದೆ. ಡೆಲ್ಫಿಯಲ್ಲಿ ಪಿಥಿಯಾಗೆ ನುಡಿ ಕೇಳುವ ಮೊದಲು ಯಾವುದೋ ಎಲೆಯನ್ನು ಮೂಸಿಸಿ ಕೇಳುತ್ತಿದ್ದರಂತೆ. ಎಲೆಯನ್ನು ಮೂಸಿಸುವುದರಿಂದ ಆಕೆಗೆ ಮತ್ತೇರಿ ಬಾಯಿಗೆ ಬಂದಂತೆ ತೊದಲು ನುಡಿಯಲು ಅದಕ್ಕೆ ಪೂಜಾರಿ ಅರ್ಥವನ್ನು ಕಲ್ಪಿಸಿ ಹೇಳುತ್ತಿದ್ದ. ಕಣಿ ಹೇಳುವ ಪರಂಪರೆಗೆ ಇದು ಹೋಲಿಕೆ ಆಗುತ್ತದೆ. ಕಣಿ ಹೇಳುವವರು ತಮ್ಮ ಮೇಲೆ ಏನೋ ಬಂದಂತೆ ವರ್ತಿಸುತ್ತಾ ಭೂತ ಭವಿಷ್ಯತ್‌ಗಳನ್ನು ಒಗಟುಗಳ ರೂಪದಲ್ಲಿ ಹೇಳುತ್ತಾರೆ. ಅದನ್ನು ನಮಗೆ ಬೇಕಂತೆ ಕಲ್ಪಿಸಿಕೊಳ್ಳಲು ಅವಕಾಶ ಇರುತ್ತದೆ. ಹಾಲಕ್ಕಿ ಸಂಪ್ರದಾಯವದವರು ಶುಭಶಕುನ ಎಂದು ಹೇಳುತ್ತಾ ಭವಿಷ್ಯವನ್ನು ನುಡಿಯುತ್ತಾರೆ. ಮಂಟೆಸ್ವಾಮಿ, ಮಾದೇಶ್ವರರ ಸಂಪ್ರದಾಯಗಳಲ್ಲೂ ಈ ನುಡಿ ಕೇಳುವ ಮತ್ತು ತಮ್ಮ ಸಮಸ್ಯೆಗಳಿಗೆ ಉತ್ತರ ಸೂಚಿಸುವ ಗುಡ್ಡರು, ನೀಲಗಾರರು ರೋಮಿನ ಪಿಥಿಯಾ ಪರಂಪರೆಗೆ ಹೋಲಿಕೆ ಆಗುತ್ತಾರೆ.

೩.೧.೨. ಆಹಾರ ಸಂಸ್ಕೃತಿ : ಸಂಪ್ರದಾಯವಾದಿಗಳು ಮತ್ತು ಸಾಮಾಜಿಕ ಸ್ಥಿತಿಗತಿ

ಭಾರತ ದೇಶವು ಪ್ರಾದೇಶಿಕವಾಗಿ ಹಲವು ವೈವಿಧ್ಯ ಸಂಸ್ಕೃತಿಯನ್ನು ಹೊಂದಿದೆ. ಹಲವು ಧರ್ಮ, ಜಾತಿ, ಮತಗಳನ್ನು ಹೊಂದಿದೆ. ಆಯಾ ಧರ್ಮಗಳು, ಜಾತಿಗಳು ತಮ್ಮದೇ ಆದ ಆಹಾರ ಪದ್ಧತಿಯನ್ನು

ಹೊಂದಿದ್ದಾರೆ. ಪ್ರಾದೇಶಿಕವಾಗಿಯೂ ಆಹಾರ ಪದ್ಧತಿಯಲ್ಲಿ ಭಿನ್ನತೆ ಇರುವುದನ್ನು ಕಾಣಬಹುದಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಆಹಾರಕ್ರಮ ಇರುತ್ತದೆ. ಅದನ್ನು ತಮಗೆ ಇಷ್ಟವಾಗುವ ರೀತಿಯ ಕ್ರಮವನ್ನು ರೂಢಿಸಿಕೊಂಡಿರುತ್ತಾರೆ. ಅಥವಾ ಮನೆಯ ಪರಿಸರವು ಆಹಾರಕ್ರಮವನ್ನು ಬೆಳೆಸಿರುತ್ತದೆ. ಮನೆಯಲ್ಲಿ ಅವರವರ ಆಹಾರ ಕ್ರಮವನ್ನು ತಪ್ಪದೆ ಪಾಲಿಸುತ್ತಾರೆ. ಯುರೋಪ್ ಪ್ರವಾಸ ಮಾಡಿದ ಲೇಖಕರ ಆಹಾರ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಪ್ರವಾಸ ಮಾಡಿದ ಲೇಖಕರಲ್ಲಿ ಸಸ್ಯಾಹಾರಿ ಲೇಖಕರುಗಳ ಸಂಖ್ಯೆಯೇ ಅಧಿಕವಾಗಿದೆ. ಮಾಂಸಾಹಾರ ಸೇವಿಸುವ ಲೇಖಕರು ಬೆರಳೆಣಿಕೆಯಷ್ಟು. (ಅನುಬಂಧ-೧ರಲ್ಲಿ ಕೃತಿಗಳ ವಿವರಗಳನ್ನು ಒಳಗೊಂಡ ಪಟ್ಟಿಯಲ್ಲಿ ನಮೂದಿಸಲಾಗಿದೆ) ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ ವಿದೇಶ ಪ್ರವಾಸಕ್ಕೆ ಸಸ್ಯಾಹಾರಿ ಲೇಖಕರುಗಳೆ ಅಧಿಕ ಪ್ರಮಾಣದಲ್ಲಿ ಹೋಗಲು ಕಾರಣವೇನು?.

ವಿದೇಶ ಪ್ರವಾಸ ಎಂದರೆ ಅದು ಹಣವಂತರಿಗೆ ಮಾತ್ರ ಎಂಬ ಧೋರಣೆ ಈಗಲೂ ಇದೆ. ಆದ್ದರಿಂದ ಆಹಾರ ಪದ್ಧತಿಗೂ ಶ್ರೀಮಂತಿಕೆಗೂ ಅಂತರಸಂಬಂಧವಿದ್ದಂತೆ ತೋರುತ್ತದೆ. ಯುರೋಪ್ ಪ್ರವಾಸಕ್ಕೆ ಹೆಚ್ಚು ಜನರು ಸರಕಾರದ, ಸಂಘ ಸಂಸ್ಥೆಗಳ ಖರ್ಚಿನಲ್ಲಿ ಹೋದವರೇ ಇದ್ದಾರೆ. ಇವರೆಲ್ಲಾ ಹೆಚ್ಚಿನವರು ಸಸ್ಯಾಹಾರಿಗಳು. ಮತ್ತು ಸರಕಾರದ ಮಟ್ಟದಲ್ಲಿ ಶಿಫಾರಸ್ಸು ಪಡೆಯುವ ಶಕ್ತಿಯುಳ್ಳವರು. ಇವೆಲ್ಲಾ ಪ್ರಮಾಣಗಳನ್ನು ಆಧರಿಸಿ ನಿರ್ವಚಿಸಬಹುದಾದ ಉಲ್ಲೇಖಿತ ಅಂಶವೆಂದರೆ 'ಯುರೋಪ್ ಪ್ರವಾಸ ಮಾಡಿದವರಲ್ಲಿ ಅತಿ ಹೆಚ್ಚು ಜನರು ಸರಕಾರದ ಶಿಫಾರಸ್ಸುಗಳನ್ನು ಪಡೆಯಲು ಶಕ್ತಿಯುಳ್ಳವರೆ ಇದ್ದು ಅವರು ಉನ್ನತ ವರ್ಗಕ್ಕೆ ಸೇರಿದವರಾಗಿದ್ದಾರೆ. ಸಾಮಾನ್ಯವಾಗಿ ಅವರೆಲ್ಲರು ಸಸ್ಯಹಾರಿಗಳಾಗಿದ್ದಾರೆ. ಕೆಳವರ್ಗದ ಜನರು ಈ ಅವಕಾಶಗಳಿಂದ ವಂಚಿತರಾಗಿದ್ದಾರೆ. ಕೆಳವರ್ಗದ ಜನರು ಸಾಮಾನ್ಯವಾಗಿ ಮಾಂಸಾಹಾರಿಗಳೆ ಆಗಿದ್ದಾರೆ. ಈ ರೀತಿಯಾಗಿ ಆಹಾರ ಕ್ರಮಕ್ಕೂ ಯುರೋಪ್ ಪ್ರವಾಸಕ್ಕೂ ಅಂತರ್‌ಸಂಬಂಧ ಇರುವುದನ್ನು ಗುರುತಿಸಬಹುದು. ಸಮಾಜದ ವರ್ಗಪದ್ಧತಿಯು ಪ್ರವಾಸಗಳಿಗೆ ಸಿಗುವ ಅವಕಾಶಗಳ ಮೇಲೆ ನೇರ ಪರಿಣಾಮ ಬೀರಿದೆ'. ಸಿದ್ಧಲಿಂಗಯ್ಯ ಅವರು ತಮ್ಮ ಆತ್ಮಕಥೆ 'ಊರುಕೇರಿ-೧'ರಲ್ಲಿ ವಿವರಿಸಿರುವ 'ಎಕ್ಸ್‌ಪೋ-೭೦' ಚಳುವಳಿಯನ್ನು ಇದಕ್ಕೆ ಪೂರಕವಾಗಿ ಉಲ್ಲೇಖಿಸಬಹುದು. ಎಕ್ಸ್‌ಪೋ-೭೦ ವಿದೇಶಕ್ಕೆ ತೆರಳುವ ಒಂದು ಯೋಜನೆ. ವಿದೇಶಕ್ಕೆ ತೆರಳಲು ಕೆಳವರ್ಗದವರಿಗೆ ಅವಕಾಶ ಸಿಗುತ್ತಿಲ್ಲವೆಂದು, ಮೇಲ್ವರ್ಗದ ಮಂತ್ರಿ ಮಹೋದಯರ ಸಂಬಂಧಿಕರಿಗೆ ಮಾತ್ರ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದಾರೆ ಎಂದು ಪ್ರತಿಭಟನೆ ಮಾಡಿರುವುದನ್ನು ಆತ್ಮಕಥೆಯಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಸರಕಾರದ ವೆಚ್ಚದಲ್ಲಿ ತೆರಳುವ ವಿದೇಶ ಪ್ರವಾಸಗಳಲ್ಲಿ ವರ್ಗಾಧಾರಿತ ತಾರತಮ್ಯ ಇತ್ತೆಂಬುದನ್ನು ಗುರುತಿಸಬಹುದಾಗಿದೆ. ಆಯ್ಕೆ ಮಾಡಲಾದ ಯುರೋಪ್ ಪ್ರವಾಸ ಕೃತಿಗಳನ್ನು ಆಧರಿಸಿ ಈ ವಿಶ್ಲೇಷಣೆ ಮಾಡಲಾಗಿದೆ.

ಸಸ್ಯಹಾರಿಗಳಾದ ಲೇಖಕರು ವಿದೇಶ ಪ್ರವಾಸಗಳಿಗೆ ಹೋಗುವಾಗ ತಮಗೆ ರೂಢಿಯಾದ ಆಹಾರಪದ್ಧತಿಯನ್ನೆ ಬಯಸಿದರೂ ಅದೇ ಪದ್ಧತಿಯನ್ನು ಪಾಲಿಸುವುದು ಕಷ್ಟಸಾಧ್ಯ. ಅವರಿಗೆ ಬೇಕಾಗುವ ಊಟ ಉಪಹಾರಾದಿಗಳು ಎಲ್ಲಾ ಕಡೆ ಸಿಗದೆ ಇರಬಹುದು. ಕೆಲವು ಪ್ರವಾಸಿ ಲೇಖಕರಿಗೆ ಊಟ ಉಪಹಾರಗಳದ್ದೇ ಹೆಚ್ಚು ಸಮಸ್ಯೆಯಾಗಿದೆ. ಪಿ.ಆರ್ ತಿಪ್ಪೇಸ್ವಾಮಿ ಅವರು ಸಸ್ಯಹಾರಿಗಳು. ಹೋಟೆಲಿನಲ್ಲಿ ಮಾಂಸಾಹಾರ ಮತ್ತು ಸಸ್ಯಾಹಾರಗಳನ್ನು ಒಂದೇ ಕಡೆ ಇಟ್ಟಿರುವುದನ್ನು ಕಂಡು ಬೇಸರ ವ್ಯಕ್ತಪಡಿಸಿದ್ದಾರೆ. ಇದು ಓದುಗರಲ್ಲಿ ಕೆಲವರಿಗೆ ಅಸಹನೆ ಉಂಟುಮಾಡುತ್ತದೆ. ಮತ್ತೆ ಕೆಲವರಿಗೆ ಲೇಖಕರ ಬಗ್ಗೆ ಅಭಿಮಾನ

ಮೂಡಿಸುತ್ತದೆ. ಸಂಪ್ರದಾಯವಾದಿಗಳಿಗೆ ಧನಾತ್ಮಕವಾದ ಭಾವನೆಯನ್ನು ಉಂಟುಮಾಡುತ್ತದೆ. ಸಾಮಾಜಿಕ ಸ್ಥಿತಿಗತಿಗಳು ಆಹಾರ ಕ್ರಮವನ್ನು ಪೋಷಿಸಿದೆ. ಈ ಆಹಾರಕ್ರಮವೇ ಸಮಾಜದಲ್ಲಿ ಒಳ ಪಂಗಡಗಳಾಗಿ ಒಡೆಯಲು ಕಾರಣವಾಗಿದೆ. ಇದಕ್ಕೆ ಪೂರಕವಾಗಿ ಜಿ.ಎಸ್. ಶಿವರುದ್ರಪ್ಪ ಅವರ ಅಭಿಪ್ರಾಯವನ್ನು ಉಲ್ಲೇಖಿಸಬಹುದು. "ನಾನು ಮಾಂಸ ತಿನ್ನುವುದಿಲ್ಲ ಎನ್ನುವುದಕ್ಕೆ ನಿಜವಾದ ಕಾರಣ ನಾನು ಹುಟ್ಟಿ ಬೆಳೆದ ಧಾರ್ಮಿಕ ಪರಂಪರೆಯೆ ಇರಬೇಕು. ನಾನು ಬುದ್ಧಿಪೂರ್ವಕವಾಗಿ ಅದನ್ನು ನಿರಾಕರಿಸಿದರೂ, ನಾನು ಮಾಂಸ ತಿನ್ನದೆ ಇರಲು ಮುಖ್ಯ ಕಾರಣ, ಈ ಧಾರ್ಮಿಕ ಸಂಸ್ಕಾರವಲ್ಲದೆ ಬೇರೇನೂ ಇರಲಾರದು"(ಜಿ. ಎಸ್. ಶಿವರುದ್ರಪ್ಪ., ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ., ಪು-೩೮)ಎಂದಿದ್ದಾರೆ. ಇದರಿಂದ ತಿಳಿದುಬರುವ ಅಂಶವೆಂದರೆ ಆಹಾರ ಕ್ರಮ ಎಂಬುದು ವೈಯಕ್ತಿಕ ಆಸಕ್ತಿಯನ್ನು ಅವಲಂಬಿಸಿರುತ್ತದೆ. ವೈಯಕ್ತಿಕ ಆಸಕ್ತಿಯನ್ನು ಮನೆಯ ಪರಿಸರದ ವಾತಾವರಣ ರೂಪಿಸಿರುತ್ತದೆ. ಆದ್ದರಿಂದ ಮಾಂಸಾಹಾರ ಸೇವಿಸುವವರು ವರ್ಜಿತರು, ಸಸ್ಯಾಹಾರಿಗಳು ಶ್ರೇಷ್ಠರು ಎಂಬ ಸಾಮಾಜಿಕ ಅಸಮಾನತೆಯನ್ನು ಆಹಾರಕ್ರಮದ ಮೂಲಕವಾಗಲಿ ಅಥವಾ ಇತರ ಯಾವುದೇ ವಿಧದಲ್ಲಾಗಲಿ ಆಚರಿಸಬಾರದು ಎಂಬ ನಿಲುವಿಗೆ ಬರಲಾಗಿದೆ. ಆದರೆ ಲೇಖಕರು ಈ ಆಹಾರ ಕ್ರಮದ ವಿಚಾರವನ್ನು ಅಸಮಾನತೆಯ ನೆಲೆಯಲ್ಲಿ ನೋಡಿರುವ ಉದಾಹರಣೆಗಳಿವೆ. ಅವುಗಳೆಂದರೆ

ರಾ.ಶಿ ಅವರ ಪ್ರವಾಸ ಕೃತಿಯಲ್ಲಿ ಆಹಾರ ಮೀಮಾಂಸೆಗೆ ಸಂಬಂಧಿಸಿದಂತೆ ಬಲಪಂಥೀಯ ಧೋರಣೆಗಳನ್ನು ವ್ಯಕ್ತಪಡಿಸಿದ್ದಾರೆ. ಇವರು ಆಹಾರ ಸಂಸ್ಕೃತಿಯನ್ನು ವೈಯಕ್ತಿಕ ನೆಲೆಯಲ್ಲಿ ನೋಡಿದ್ದಾರೆ ಎಂಬುದಕ್ಕೆ ಕೆಲವು ಉದಾಹರಣೆಗಳಿವೆ. "ಮಾಂಸಾಹಾರಿಗಳೆಲ್ಲಾ ತಂತಮ್ಮ ತಟ್ಟೆಗಳನ್ನು ಪೂರ್ಣವಾಗಿ ಹೀರಿಬಿಡುತ್ತಿದ್ದರು. ಹೆಣ ತಿನ್ನುವವರಿಗೆ ರುಚಿಯ ಪ್ರಾಮುಖ್ಯತೆ ಅಷ್ಟಾಗಿ ಇರುಲ್ಲವೇನೋ?"(ರಾ.ಶಿ., ಕೊರವಂಜಿಯ, ಪಡುವಣ ಯಾತ್ರೆ., ಪು-೨೮) "ಮಾಂಸಾಹಾರಿಗಳಿಗೆ ಮಾಂಸ ಕಂಡರೆ ಹರಿದು ಮುಕ್ಕುತ್ತಾರೆ. ಆಗ ಮೆದುಳಿಗೆ ರಜಾ ಕೊಡುತ್ತಾರೆ"(ರಾ.ಶಿ., ಕೊರವಂಜಿಯ ಪಡುವಣ ಯಾತ್ರೆ., ಪು-೩೦) ಎಂದಿದ್ದಾರೆ. ಈ ಮೇಲಿನ ಅಭಿಪ್ರಾಯಗಳನ್ನು ಸಾಮಾಜಿಕವಾಗಿ ಅಸಮಾನತೆಯಿಂದ ನೋಡುವ ಲೇಖಕರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಮಾಂಸಾಹಾರಿಗಳನ್ನು ವ್ಯಂಗ್ಯ ನುಡಿಗಳ ಮೂಲಕ ಟೀಕಿಸಿರುವುದು ಲೇಖಕರ ಮನೋಧೋರಣೆಗಳನ್ನು ವ್ಯಕ್ತಪಡಿಸಿದೆ. ೧೯೬೦-೭೦ರ ದಶಕದಲ್ಲಿ ಆಚರಣೆಯಲ್ಲಿದ್ದ ಸಮಾಜದಲ್ಲಿನ ವರ್ಗ ತಾರತಮ್ಯಗಳನ್ನು ಗುರುತಿಸಲಾಗಿದೆ. ಸಮಾಜಶಾಸ್ತ್ರೀಯ ನೆಲೆಯಲ್ಲಿ ವರ್ಗಪದ್ಧತಿಯನ್ನು ಅಧ್ಯಯನ ಮಾಡಲು ಈ ಅಭಿಪ್ರಾಯಗಳು ನೆರವಾಗುತ್ತವೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ಮಾಂಸಾಹಾರಿಗಳನ್ನು 'ಪ್ರಾಣಿಭಕ್ಷಕರು' ಎಂದು ಸಂಬೋಧಿಸಿದ್ದಾರೆ. "ನಾನಾದರೋ ನೂರಕ್ಕೆ ನೂರು ಶಾಖಾಹಾರಿ. ಸಹ ಪ್ರಯಾಣಿಕರೆಲ್ಲ ಪ್ರಾಣಿಭಕ್ಷಕರು" (ಪುಂಡಿಕಾಯ್ ಗಣಪಯ್ಯ ಭಟ್ಟ., ಯುರೋಪ್ ನೆನಪುಗಳು., ಪು-೨)ಎಂದಿದ್ದಾರೆ. ಪ್ರಾಣಿಭಕ್ಷಕರು ಎಂಬ ಪದ ಬಳಕೆಯಲ್ಲಿ ಮಾಂಸಾಹಾರವನ್ನು ತಿನ್ನುವವರು ಹೀನರು ಎಂತಲೂ, ಆ ಮಾಂಸಾಹಾರವನ್ನು ತಿನ್ನದವರು ಪರಿಶುದ್ಧ ಉಚ್ಚಜಾತಿಯವರು ಎಂಬ ಭಾವನೆ ವ್ಯಕ್ತವಾಗಿದೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ಗ್ರೀಕ್‌ನಲ್ಲಿ ತನಗೆ ಬಾಡಿಗೆ ನೀಡಿದ ಮನೆಯ ಮಾಲಿಕರು 'ಈಸ್ಟರ್' ಹಬ್ಬದ ದಿನದಂದು ಮಾಂಸದ ಊಟವನ್ನು ನೀಡಿದ್ದಾರೆ. ಆಗ ಲೇಖಕರ ವಿವರ ಈ ರೀತಿ ಇದೆ. "ಆಡಿನ ಮಾಂಸದೆದುರು ಕೂರುವ ಕೆಟ್ಟ ಘಳಿಗೆಯನ್ನು ನೆನೆದಾಗ ಮೈಯಲ್ಲಿ ಬೆವರೊಡೆಯಿತು.

ಸೊಪ್ಪುಸದೆಗಳಿಂದಷ್ಟೆ ಹೊಟ್ಟೆ ಹೊರೆಯುವ ಅಹಿಂಸಾವಾದಿ ನಾನೆಂದು ಕಥಕ್ಕಳಿ ನಾಟ್ಯದ ಮೂಲಕ ಆಕೆಗೆ ವಿವರಿಸುವ ನನ್ನ ಪ್ರಯತ್ನ ವಿಫಲವಾಯಿತು"(ಪುಂಡಿಕಾಯ್ ಗಣಪಯ್ಯ ಭಟ್., ಯುರೋಪ್ ನೆನಪುಗಳು., ಪು–೪೫)ಎಂದಿದ್ದಾರೆ. ಈ ವಿವರಣೆಯಲ್ಲಿಯೂ ಲೇಖಕರು ಮಾಂಸಾಹಾರಿಗಳನ್ನು ಹಿಂಸಾವಾದಿಗಳು ಎಂದು ಹೇಳಿದ್ದಾರೆ. ಲೇಖಕರ ಪ್ರಕಾರ ಮಾಂಸದ ಊಟದ ಮುಂದೆ ಕುಳಿತುಕೊಳ್ಳುವುದೇ ಕೆಟ್ಟ ಘಳಿಗೆ ಎಂಬ ಭಾವ ಇದೆ. ಇದು ಅವರ ಸಂಸ್ಕೃತಿ ಪಾಲನೆಯ ಮನೋಧೋರಣೆಗಳನ್ನು ತೋರಿಸಿದೆ. ಮತ್ತು ಅದನ್ನು ಓದುಗರಿಗೆ ಒಪ್ಪಿಸಲಾಗುತ್ತಿದೆ.

ಈ ಮೇಲಿನ ಉಲ್ಲೇಖಗಳಿಂದ ತಿಳಿಯಬರುವುದೇನೆಂದರೆ ಸಮಾಜದಲ್ಲಿ ವರ್ಗ ಪದ್ಧತಿಯ ಸೃಷ್ಟಿಗೆ ಅವರವರ ವೈಯಕ್ತಿಕ ಹಿತಾಸಕ್ತಿ, ಸಂಪ್ರದಾಯ, ಧೋರಣೆಗಳ ಹಿನ್ನೆಲೆಯಲ್ಲಿ ಸಮಾಜವನ್ನು ನೋಡಿದಾಗ ಮೇಲ್ವರ್ಗ ಕೆಳವರ್ಗ ನಿರ್ಮಾಣವಾಗಲು ಆಹಾರ ಕ್ರಮವೂ ಪರೋಕ್ಷವಾಗಿ ಕಾರಣವಾಗಿದೆ. ಇದರ ಪರಿಣಾಮವಾಗಿ ಭಾರತದಲ್ಲಿ ಆಹಾರ ಸಮಸ್ಯೆ ಉಂಟಾಗಿದೆ.

ಜಿ. ಗೋಪಾಲ್ ಅವರು ಕೆಳವರ್ಗದ ಸಾಮಾನ್ಯ ಜಾತಿಗೆ ಸೇರಿದವರಾಗಿದ್ದು ವೈದ್ಯ ವೃತ್ತಿಯಲ್ಲಿ ಉನ್ನತ ಶಿಕ್ಷಣವನ್ನು ಗಳಿಸಲು ವಿದೇಶಕ್ಕೆ ತೆರಳಿದ್ದಾರೆ. ಅವರು ಭಾರತದ ಆಹಾರ ಸಮಸ್ಯೆಗೆ ಮೇಲ್ವರ್ಗದವರ ಆಹಾರ ರಾಜಕಾರಣವೇ ಕಾರಣ ಎಂದಿದ್ದಾರೆ. "ನಮ್ಮ ದೇಶದಲ್ಲಿ ಗೋವಧೆ ಪಾಪದ ಕೆಲಸ, ಗೋಮಾಂಸ ನಿಶಿದ್ದ ..... ಗೋಮಾಂಸ ಬುಂಜಿಸುವ ಅಮೆರಿಕಾ, ಯೂರೋಪ್ ಮತ್ತು ರಷ್ಯ ದೇಶಗಳು ಇಂದು ಜಗತ್ತಿನಲ್ಲಿ ಮುಂದುವರಿದ ಬಲಿಷ್ಟ ರಾಷ್ಟ್ರಗಳು. ಆ ದೇಶದಲ್ಲಿ ಬಡತನವಿಲ್ಲ..... ಆಹಾರಕ್ಕೆ ಕೊರತೆಯಿಲ್ಲ"(ಜಿ. ಗೋಪಾಲ್., ವೈದ್ಯನ ವಿದೇಶ ಪ್ರವಾಸ., ಪು–೧೭,೧೮)ಎಂದಿದ್ದಾರೆ. ದೇ. ಜವರೇ ಗೌಡರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೪] ಏಕೆಂದರೆ ಈ ದೇಶಗಳಲ್ಲಿ ಗೋಮಾಂಸವನ್ನು ಸೇವಿಸುವುದು ಅವರ ಆಹಾರ ಸಂಸ್ಕೃತಿಯ ಒಂದು ಭಾಗವಾಗಿದೆ. ನಮಗಿಂತ ಹೆಚ್ಚು ಜನಸಂಖ್ಯೆ ಇರುವ ಚೀನಾ ದೇಶದಲ್ಲಿಯೂ ಆಹಾರ ಸಮಸ್ಯೆ ಇಲ್ಲ. ಮೇಲ್ವರ್ಗದವರ ಆಹಾರ ರಾಜಕಾರಣದ ಪ್ರಭಾವದಿಂದ ಭಾರತದಲ್ಲಿ ಆಹಾರದ ಸಮಸ್ಯೆ ಉಂಟಾಗಿದೆ ಎಂಬ ಧೋರಣೆಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿ ೧೯೭೦–೮೦ರ ದಶಕದಲ್ಲಿ ಆಹಾರದ ಸಮಸ್ಯೆ ವಿಪರೀತವಾಗಿ ಉಲ್ಬಣಿಸಿತ್ತು. ಚೀನಾ ಹಾಗೂ ಪಾಕ್ ದೇಶಗಳೊಂದಿಗಿನ ಯುದ್ಧದ ಪರಿಣಾಮವಾಗಿ ಹಸಿವಿನ ಸಮಸ್ಯೆ ಮತ್ತಷ್ಟು ತೀವ್ರವಾಗಿ ಭಾರತವನ್ನು ಕಾಡತೊಡಗಿತ್ತು. ಭಾರತದ ಆಗಿನ ಆರ್ಥಿಕ ಸ್ಥಿತಿ ಹೇಗಿತ್ತೆಂದರೆ 'ಸತ್ತ ಹತ್ತು ಜನರಲ್ಲಿ ಒಂಭತ್ತು ಮಂದಿ ಹಸಿವಿನಿಂದ ಸತ್ತರೆ ಒಬ್ಬ ಅಜೀರ್ಣದಿಂದ ಸತ್ತ' ಎನ್ನುವಂತಿತ್ತು. ಆರ್ಥಿಕ ಅಸಮಾನತೆ ನಿಚ್ಚಳವಾಗಿ ಕಾಣುತ್ತಿತ್ತು. ಆದರೆ ಇಂತಹ ಸಂದರ್ಭದಲ್ಲಿ ಮೇಲ್ವರ್ಗದವರ ಸಾಮಾಜಿಕ ನೀತಿಗಳು ಬಡವರನ್ನು ಮತ್ತಷ್ಟು ಹಸಿವೆಯಿಂದ ಕಂಗೆಡುವಂತೆ ಮಾಡಿತ್ತು. ಸಸ್ಯಾಹಾರಿಗಳು ಶ್ರೇಷ್ಠರು ಎಂದು ಮಾಂಸಾಹಾರಿಗಳನ್ನು ಕೀಳಾಗಿ ನೋಡಲಾಗುತ್ತಿತ್ತು. ಆದಕಾರಣ ಸಮಾಜದಲ್ಲಿ ಗೌರವಯುತ ಸ್ಥಾನ ಸಿಗುವ ಸಸ್ಯಾಹಾರಿ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಅನೇಕರು ಹವಣಿಸಿದರು. ಇದಕ್ಕೆ ಉದಾಹರಣೆಯಾಗಿ 'ಚಮ್ಮಾರರಾದ ಛತ್ತೀಸ್‌ಘರ್‌ನ ಸತ್ನಾಮಿಗಳು ಗುರು ಘಾಸೀದಾಸನ ಪ್ರಭಾವದಿಂದ ಪ್ರೇರಿತರಾಗಿ ಜನಿವಾರವನ್ನು ಧರಿಸಿದ್ದರು. ಮಾಂಸಾಹಾರವನ್ನು ತ್ಯಜಿಸಿದ್ದರು. ಉಚ್ಚ ಸಂಸ್ಕೃತಿಯ ಅನುಕರಣೆಯಿಂದ ತಾವೂ ಕೂಡ ಸಮಾಜದಲ್ಲಿ ಮೇಲ್ವರ್ಗದವರಂತೆ ಗೌರವಯುತ ಸ್ಥಾನಮಾನ ಪಡೆಯಬಹುದು ಎಂಬ ಉದ್ದೇಶದಿಂದ ಛತ್ತೀಸ್‌ಘರ್‌ನ ಸತ್ನಾಮಿಗಳು ತಮ್ಮ ಆಹಾರ ಕ್ರಮವನ್ನೇ ಬದಲಾಯಿಸಿದ್ದರು.[೫]

ಪ್ರವಾಸ ಕೃತಿಗಳಲ್ಲಿ ಲೇಖಕರು ತಾವು ಅನುಸರಿಸುವ ಸಿದ್ಧಾಂತಗಳನ್ನು, ಅಥವಾ ತಾವು ನಂಬುವ ಧೋರಣೆಗಳನ್ನು ಪ್ರವಾಸದ ಸಂದರ್ಭಗಳನ್ನು ವಿವರಿಸುವಾಗ ಬರೆವಣಿಗೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಆಗ ತಮಗರಿವಿಲ್ಲದೇ ಅಥವಾ ಪ್ರಜ್ಞಾಪೂರ್ವಕವಾಗಿ ತಮ್ಮ ಸಿದ್ಧಾಂತಗಳಿಗೆ ಅಥವಾ ನಂಬಿದ ಧೋರಣೆಗಳಿಗೆ ಅನುಗುಣವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೩.೧.೩.ಸಾಂಸ್ಕೃತಿಕ ರಾಜಕಾರಣ : ಸೋವಿಯತ್ ದೇಶದ ವೈಯಕ್ತಿಕ ಹಿತಾಸಕ್ತಿ ಕುರಿತ ಚಿಂತನೆ

ಸೋವಿಯತ್ ದೇಶವು ಹದಿನಾಲ್ಕು ಭಾಗಗಳಾಗಿ ವಿಭಜನೆಯಾಗುವ ಮೊದಲು ತಮ್ಮ ಸರಕಾರದ ವತಿಯಿಂದ ಪ್ರಪಂಚದ ವಿವಿಧ ರಾಷ್ಟ್ರಗಳ ಬರೆಹಗಾರರನ್ನು, ಲೇಖಕರನ್ನು, ಪತ್ರಕರ್ತರನ್ನು, ಸಾಧಕರನ್ನು ಕರೆಯಿಸಿ ಆತಿಥ್ಯವನ್ನು ನೀಡುತ್ತಿತ್ತು. ಕಾರಣ ಅವರ ದೇಶ ಅಭಿವೃದ್ಧಿ ಹೊಂದಿದೆ ಎಂಬುದನ್ನು ವಿಶ್ವದಾದ್ಯಂತ ಪ್ರಚುರಪಡಿಸುವ ಉದ್ದೇಶವನ್ನು ಹೊಂದಿತ್ತು. ಇದರ ಪ್ರತಿಫಲವಾಗಿ ಸೋವಿಯತ್ ಸರಕಾರದ ಅತಿಥಿಗಳಾಗಿ ಹೋದವರಿಗೆ ಅನೇಕ ಸವಲತ್ತುಗಳನ್ನು ಕಲ್ಪಿಸಿಕೊಡುತ್ತಿತ್ತು. ದ್ವಿಭಾಷಿಯನ್ನು ಜೊತೆಗೆ ನೀಡುವುದಲ್ಲದೆ ತಾವು ನಿಗದಿ ಪಡಿಸಿದ ಸ್ಥಳಗಳಿಗೆ ಕರೆದೊಯ್ಯಲು ಬೇಕಾಗುವ ವಾಹನ ಸೌಕರ್ಯ, ಟಿಕೆಟಿನ ವ್ಯವಸ್ಥೆ ಮಾಡಿಕೊಡುತ್ತಿತ್ತು. ಮತ್ತು ಅವರು ನಿಗದಿಪಡಿಸಿದ ಸ್ಥಳಗಳಿಗೆ ಹೋಗಬೇಕಾಗಿತ್ತು. ಈ ರೀತಿ ಪ್ರವಾಸ ಹೋಗುವವರಿಗೆ ಸಾಮಾನ್ಯ ಜನರ ಜೊತೆ ಬೆರೆಯಲು ಅವಕಾಶ ಸಿಗುತ್ತಿರಲಿಲ್ಲ. ಶ್ರೀರಂಗ ಅವರು "ಜನರೊಡನೆಯೂ ವಿಚಾರ ವಿನಿಮಯ ಮಾಡಲು ಅವಕಾಶ ದೊರೆಯಲಿಲ್ಲ"(ಶ್ರೀರಂಗ., ಶ್ರೀರಂಗ ಯಾತ್ರೆ., ಪು–೧೭)ಎಂದಿದ್ದಾರೆ. ಲೇಖಕರಿಗೆ ಭಾಷೆಯ ತೊಡಕು ಕೂಡ ಮುಕ್ತವಾಗಿ ಜನರೊಂದಿಗೆ ವ್ಯವಹರಿಸಲು ಅಡ್ಡಿಯಾಗುತ್ತಿತ್ತು. ಇಂಗ್ಲೀಷ್ ಭಾಷೆಯನ್ನು ಬಲ್ಲವರೂ ಫ್ರೆಂಚ್ ಭಾಷೆಯಲ್ಲಿಯೇ ವ್ಯವಹರಿಸುತ್ತಿದ್ದರೆಂದು ಲೇಖಕರು ಹೇಳಿದ್ದಾರೆ. ಆಗ ದ್ವಿಭಾಷಿ ಏನು ಹೇಳುತ್ತಾನೋ ಅದನ್ನೇ ಸತ್ಯವೆಂದು ನಂಬಬೇಕಾಗಿತ್ತು. ಯಾವುದೇ ದೇಶದ ಮೂಲ ಸತ್ವವನ್ನು ತಿಳಿಯ ಬೇಕಾದರೆ ಆ ದೇಶದ ಮೂಲ ನಿವಾಸಿಗಳೊಂದಿಗೆ ನೇರವಾಗಿ ವ್ಯವಹರಿಸಬೇಕು. ಅದಕ್ಕೆ ಅವಕಾಶವಿರಲಿಲ್ಲ. ಆ ದೇಶದ ಪ್ರಮುಖ ಪ್ರವಾಸಿ ತಾಣಗಳಿಗೆ, ಎಲ್ಲಾ ರೀತಿಯ ಸೌಲಭ್ಯ ಇರುವ ಕಡೆ ಮಾತ್ರ ಕರೆದು ಕೊಂಡು ಹೋಗಲಾಗುತ್ತಿತ್ತು ಎಂದು ಲೇಖಕರು ಉಲ್ಲೇಖಿಸಿದ್ದಾರೆ. ಇದು ಸೋವಿಯತ್ ದೇಶವು ತಾನು ಅಭಿವೃದ್ಧಿ ಹೊಂದಿದ ದೇಶವೆಂದು ವಿಶ್ವದ ಜನತೆಗೆ ತೋರಿಸಲು ರೂಪಿಸಿದ ರಾಜಕಾರಣ.

ಸೋವಿಯತ್ ಸರಕಾರವು ತಮ್ಮ ದೇಶದ ಉತ್ತಮ ಸಂಗತಿಗಳನ್ನು ಬೇರೆಯವರಿಗೆ ತಿಳಿಸುವ ಮಾಧ್ಯಮವಾಗಿ ಲೇಖಕರನ್ನು ಬಳಸಿಕೊಳ್ಳುತ್ತಿರುವ ಅಂಶವನ್ನು ಅನೇಕ ಲೇಖಕರು ಉಲ್ಲೇಖಿಸಿದ್ದಾರೆ. ಸೋವಿಯತ್ ಸರಕಾರವು ಅಲ್ಲಿನ ಜನರಿಗೆ ಯಾವ ವಿಷಯವನ್ನು ತಲುಪಿಸಬೇಕೋ ಅದನ್ನು ಮಾತ್ರ ತಲುಪುವಂತೆ ಪತ್ರಿಕೆ, ದೂರದರ್ಶನ, ನಾಟಕ, ಮೊದಲಾದ ಸಾರ್ವಜನಿಕ ಸಂಗತಿಗಳನ್ನು ಕಂಟ್ರೋಲ್ ಮಾಡುತ್ತದೆ. ಆ ಮೂಲಕ ಸೋವಿಯತ್ ಸರಕಾರವು ಸ್ವಾಯತ್ತ ಸಂಸ್ಥೆಗಳ ಮೇಲೆ ನಿಗಾ ಇಟ್ಟಿರುತ್ತದೆ. ಆದ್ದರಿಂದಲೇ ಶ್ರೀರಂಗರಾಜ್ ಅವರು "ನಿರಾಳವಾಗಿ ಮಾತನಾಡಲು ಈ ದೇಶದಲ್ಲಿ ಅವಕಾಶವಿಲ್ಲ. ಏನೋ ಒಂದು ಹೆದರಿಕೆ ಆವರಿಸಿಕೊಳ್ಳುತ್ತದೆ"(ಶ್ರೀರಂಗರಾಜ್., ಸೋವಿಯತ್ ದಿನಚರಿ., ಪು–೩೬.೩೭)ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಅಂಶಗಳು ನಿರೂಪಿಸುವ ಅಂಶಗಳೆಂದರೆ 'ಸೋವಿಯತ್ ಸರಕಾರವು

ಜನರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ದುಡಿಸಿಕೊಳ್ಳುತ್ತಿದ್ದರು. ಸರಕಾರದ ವಿರುದ್ಧವಾಗಿ ಯಾರೂ ಮಾತನಾಡುವಂತಿರಲಿಲ್ಲ. ಗುಂಪುಗೂಡುವಂತಿರಲಿಲ್ಲ. ಮುಂಜಾಗ್ರತೆಗಾಗಿ ಜನರಿಗೆ ಬೇರೆ ದೇಶದ ಸಂಗತಿಗಳು ತಿಳಿಯದ ರೀತಿಯಲ್ಲಿ ಮಾಡುತ್ತಿದ್ದರು' ಎಂಬುದು ಸೋಪಿಯತ್ ದೇಶದ ಸಾಂಸ್ಕೃತಿಕ ರಾಜಕಾರಣವಾಗಿದೆ.

೩.೧.೪ ಭೌಗೋಳಿಕ ಪರಿಸರ: ಪ್ರಭಾವ ಮತ್ತು ಪರಿಣಾಮ

ಭೌಗೋಳಿಕ ಸಂಗತಿಗಳನ್ನು ಹೊರತುಪಡಿಸಿ ಪ್ರವಾಸದ ಪರಿಕಲ್ಪನೆಯನ್ನು ನಿರ್ವಚಿಸಲು ಬರುವುದಿಲ್ಲ. ಪ್ರವಾಸ ಎಂದ ಕೂಡಲೇ ಅದರೊಟ್ಟಿಗೆ 'ತಾನು ಬದುಕಿರುವ ಭೌಗೋಳಿಕ ಪ್ರದೇಶದಿಂದ ಭಿನ್ನವಾದ ಬೇರೊಂದು ಭೌಗೋಳಿಕ ಪರಿಸರಕ್ಕೆ ಪಯಣ' ಎಂಬ ಅರ್ಥ ಜೊತೆಯಲ್ಲಿಯೇ ಮೂಡುತ್ತದೆ. ಹಾಗಾಗಿ ಭೌಗೋಳಿಕ ಸಂಗತಿಗಳನ್ನು ಪರಿಗಣಿಸದೇ ಪ್ರವಾಸದ ವಿವರಗಳನ್ನು ಚರ್ಚಿಸುವುದು ಒಂದು ಪ್ರಧಾನ ಧಾರೆಯನ್ನು ಉಳಿದು ಅದರ ರೂಪ ಲಕ್ಷಣಗಳನ್ನು ಚಿತ್ರಿಸಿಕೊಂಡಂತಾಗುತ್ತದೆ. ಪ್ರವಾಸ ಮತ್ತು ಭೌಗೋಳಿಕ ಸಂಗತಿಗಳು ಒಂದಕ್ಕೊಂದು ಪೂರಕವಾದ ಅಭಿನ್ನ ಪರಿಕಲ್ಪನೆಗಳಾಗಿವೆ.

ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ವಿಶ್ಲೇಷಿಸುವಾಗ ಅದಕ್ಕೆ ಹಿನ್ನೆಲೆಯಾಗಿ ಭೌಗೋಳಿಕ ಸಂಗತಿಗಳು ಪ್ರಭಾವ ಬೀರಿರುವ ಅಂಶಗಳನ್ನು ಎಲ್ಲಾ ಅಧ್ಯಾಯಗಳಲ್ಲೂ ಚರ್ಚಿಸಲಾಗಿದೆ. ಏಕೆಂದರೆ ಭೌಗೋಳಿಕ ಸಂಗತಿಗಳು ಸಮಾಜ ಮತ್ತು ಸಂಸ್ಕೃತಿಯ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಶೈಕ್ಷಣಿಕ ಚಟುವಟಿಕೆಗಳು ಭೌಗೋಳಿಕ ಪರಿಸರ ರಚನೆಯ ಆಧಾರದ ಮೇಲೆಯೇ ರೂಪಿತವಾಗುತ್ತದೆ. ಚಾರಿತ್ರಿಕ ಸಂಗತಿಗಳನ್ನು ನಿರ್ವಚಿಸುವಾಗ ಭೌಗೋಳಿಕ ವಸ್ತು ವಿಷಯಗಳು ಮುನ್ನೆಲೆಗೆ ಬರುತ್ತದೆ. ಹೀಗಿರುವಾಗ ಪ್ರವಾಸದಲ್ಲಿ ಭೌಗೋಳಿಕ ಪರಿಸರದ ಪ್ರಭಾವವನ್ನು ಪ್ರತ್ಯೇಕ ಅಧ್ಯಾಯವಾಗಿ ಪರಿಗಣಿಸಿ ನೋಡಿದರೆ ಪ್ರವಾಸದ ವ್ಯಾಪ್ತಿಗೆ ಒಂದು ಮಿತಿಯನ್ನು ಹಾಕಿದಂತಾಗುತ್ತದೆ. ಆದ್ದರಿಂದ ಈ ಉಪ ಶೀರ್ಷಿಕೆಯಡಿಯಲ್ಲಿ ಪ್ರವಾಸದಲ್ಲಿ ಭೌಗೋಳಿಕ ಪರಿಸರದ ಪ್ರಭಾವ ಮತ್ತು ಪರಿಣಾಮವನ್ನು ಇಡಿಯಾದ ಪರಿಕಲ್ಪನೆಯಲ್ಲಿ ವಿಶ್ಲೇಷಿಸಲಾಗಿದೆ.

ಇಂದಿರಾ ಶಿವಣ್ಣ ಅವರು ತಮ್ಮ 'ಹಾಲೆಂಡ್‌ನಿಂದ ಲಂಡನ್‌ವರೆಗೆ' ಕೃತಿಯಲ್ಲಿ ಶೌಚಾಲಯದಲ್ಲಿ ಕಾಗದವನ್ನು ಬಳಸುವ ಪದ್ಧತಿಗೆ ಸಂಬಂಧಿಸಿದಂತೆ 'ಇದು ನಮಗೆ ಒಲ್ಲದ ಸಂಸ್ಕೃತಿ' ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಭಾರತೀಯರಿಗೆ ಕಾಗದವು ಸರಸ್ವತಿಯ ಸ್ವರೂಪದಲ್ಲಿ ಪೂಜ್ಯನೀಯವೆನಿಸುತ್ತದೆ. ಅಲ್ಲದೆ ಶೌಚಾಲಯದಲ್ಲಿ ನೀರನ್ನು ಉಪಯೋಗಿಸುವುದು ರೂಢಿಗತವಾಗಿರುವಾಗ ಕಾಗದವನ್ನು ಬಳಸುವುದು ಅಸಹ್ಯಕರವಾಗಿ ಕಾಣಿಸುತ್ತದೆ. ಯುರೋಪಿನ ಸಂಸ್ಕೃತಿಯಲ್ಲಿ ಒಪ್ಪಿತವಾದ ಶೌಚಾಲಯದಲ್ಲಿ ಕಾಗದದ ಬಳಕೆ ಸಂಸ್ಕೃತಿಯು ಅಲ್ಲಿನ ಭೌಗೋಳಿಕ ಪರಿಸರಕ್ಕೆ ತಕ್ಕನಾಗಿ ರೂಢಿಗತವಾಗಿದೆ. ಅತಿ ಶೀತಲ ಪ್ರದೇಶಗಳಲ್ಲಿ ನೀರನ್ನು ಬಳಕೆ ಮಾಡುವುದರಿಂದ ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಹೆಚ್ಚಿರುತ್ತದೆ. ಅದ್ದರಿಂದ ಅಲ್ಲಿನ ಜನರು ಪ್ರತಿನಿತ್ಯ ಸ್ನಾನ ಮಾಡುವುದಿಲ್ಲ. ಅಲ್ಲಿನ ಹೆಚ್ಚಿನ ಮನೆಗಳಲ್ಲಿ ಸ್ನಾನದ ಕೋಣೆಯೇ ಇರುವುದಿಲ್ಲ. ಅಲ್ಲಿನ ಹೆಚ್ಚಿನ ಜನರು ಸರಕಾರದಿಂದ ನಿರ್ಮಾಣಗೊಂಡ ಸಾರ್ವಜನಿಕ ಸ್ನಾನದ ಮನೆಗಳನ್ನು ಆಶ್ರಯಿಸಿರುತ್ತಾರೆ. ಶೀತಲವಾದ ಹವೆಯು ಒಳಬರದಂತೆ ಸೀಲ್ ಮಾಡಲಾದ ಸ್ನಾನದ ಕೋಣೆಯನ್ನು ನಿರ್ಮಿಸಲು ಮತ್ತು

ನೀರನ್ನು ಬಿಸಿ ಮಾಡಲು ತಗಲುವ ವೆಚ್ಚವು ದುಬಾರಿಯಾಗಿರುತ್ತದೆ. ಭಾರತವು ಉಷ್ಣವಲಯ ಪ್ರದೇಶದಲ್ಲಿ ಇರುವುದರಿಂದ ಇಲ್ಲಿನ ಹವಾಗುಣಕ್ಕೆ ಅನುಗುಣವಾಗಿ ಪ್ರತಿನಿತ್ಯದ ಸ್ನಾನ ಮಾಡುವುದು ಮತ್ತು ಶೌಚಾಲಯದಲ್ಲಿ ನೀರನ್ನು ಬಳಸುವದು ರೂಢಿಗತವಾಗಿದೆ. ಯುರೋಪ್ ಖಂಡದ ಉತ್ತರ ಭಾಗದಲ್ಲಿರುವ ಶೀತಲ ಪ್ರದೇಶಗಳಲ್ಲಿ ಮನೆ ನಿರ್ಮಾಣ ಮಾಡುವ ಹಂತದಲ್ಲಿಯೇ ನಡುಮನೆಯಲ್ಲಿ ಒಲೆಗೂಡುಗಳನ್ನು ನಿರ್ಮಿಸಿ ಅದರ ಬಿಸಿಯಾದ ಹವೆಯು ಮನೆಯ ಮೂಲೆ ಮೂಲೆಗೆ ತಲುಪುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಮನೆಯ ಮಾಡನ್ನು ಮಂಜುಗೆಡ್ಡೆ ಜಾರಿ ಹೋಗುವಂತೆ ಸಾಧ್ಯವಾಗಲು ಓರೆಯಾಗಿ ನಿರ್ಮಿಸಿರುತ್ತಾರೆ. ಮನೆಯ ರಚನೆಯು ಆಯಾ ಪ್ರದೇಶದ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ನಿರ್ಮಿಸಲಾಗಿರುತ್ತದೆ. ಈ ಮೇಲಿನ ಅಂಶಗಳು ಸಾಂಸ್ಕೃತಿಕವಾಗಿ ಪ್ರಾದೇಶಿಕ ಭಿನ್ನತೆಗೆ ಆಯಾ ಪ್ರದೇಶದ ಭೌಗೋಳಿಕ ವಾತಾವರಣ ಕಾರಣವಾಗಿರುವುದನ್ನು ಸೂಚಿಸುತ್ತವೆ.

ಪ್ರವಾಸ ಕೈಗೊಳ್ಳುವ ಮೊದಲು ಸ್ಥಳವನ್ನು ಮತ್ತು ದಿನಾಂಕವನ್ನು ಗುರುತಿಸುವಾಗ ಭೌಗೋಳಿಕ ಪರಿಸರವನ್ನು ಪರಿಗಣಿಸಿ ನಿರ್ಧರಿಸಲಾಗುತ್ತದೆ. ಯುರೋಪಿಗೆ ಪ್ರವಾಸ ಹೋಗುವವರು ಹೆಚ್ಚಾಗಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳ ಅವಧಿಯ ಒಳಗೆ ಯೋಜಿಸುತ್ತಾರೆ. ನವೆಂಬರ್ ತಿಂಗಳಿನ ಬಳಿಕ ಮೂರ್ನಾಲ್ಕು ತಿಂಗಳು ಅತಿ ಶೀತಲ ಗಾಳಿ ಬೀಸುವುದರಿಂದ ಮತ್ತು ಶೀತಲ ಹವಾಗುಣವು ಪ್ರವಾಸಕ್ಕೆ ಅಡಚಣೆಗಳಾಗುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಈ ಅವಧಿಯಲ್ಲಿ ಯುರೋಪಿಗೆ ಪ್ರವಾಸ ಹೋಗುವವರ ಸಂಖ್ಯೆ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ಅವಲೋಕಿಸಿದಾಗ ಅತಿ ಶೀತಲ ಪ್ರದೇಶಗಳೆನಿಸುವ ಉತ್ತರ ಧೃವ ಪ್ರದೇಶಕ್ಕೆ ಸಮೀಪವಿರುವ ದೇಶಗಳಿಗೆ ಪ್ರವಾಸ ಹೋಗುವವರ ಪ್ರಮಾಣ ಕಡಿಮೆ ಇದೆ. ಕಾರಂತರು ನಾರ್ವೆ ದೇಶಕ್ಕೆ ಭೇಟಿ ನೀಡಿದ ಏಕೈಕ ಲೇಖಕರಾಗಿದ್ದಾರೆ. ಹವಾಗುಣ ಮತ್ತು ಭೌಗೋಳಿಕವಾಗಿ ಪ್ರವಾಸಕ್ಕೆ ಅನುಕೂಲವೆನಿಸುವ ಸ್ಥಳಗಳಿಗೆ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ಪ್ರವಾಸ ಸ್ಥಳಗಳ ಭೌಗೋಳಿಕ ಏರುಪೇರುಗಳು ಪ್ರವಾಸದ ಸಮಯ ಮತ್ತು ಸ್ಥಳದ ಆಯ್ಕೆಯ ಮೇಲೆ ನೇರವಾದ ಪ್ರಭಾವವನ್ನು ಬೀರುವುದನ್ನು ಕಂಡುಕೊಳ್ಳಲಾಗಿದೆ.

ಪ್ರಾಕೃತಿಕವಾಗಿ ಸೌಂದರ್ಯವಿರುವ ಸ್ಥಳಗಳು ಹೆಚ್ಚು ಪ್ರವಾಸಿಗರನ್ನು ತಮ್ಮತ್ತ ಸೆಳೆಯುತ್ತವೆ. ಝುರಿ, ನದಿ, ಕಾನನ, ಸರೋವರ ಮತ್ತು ಸಮುದ್ರದ ತಡಿಗಳಿಗೆ ಪ್ರವಾಸ ಹೋಗುವವರ ಸಂಖ್ಯೆ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಸ್ವಿಟ್ಜರ್‌ಲ್ಯಾಂಡ್ ದೇಶಕ್ಕೆ ಪ್ರವಾಸ ಹೋಗುವವರ ಪ್ರಮಾಣ ಅಧಿಕವಾಗಿರಲು ಅಲ್ಲಿನ ಪ್ರಾಕೃತಿಕ ಸೌಂದರ್ಯದ ಸೆಳೆತವೇ ಕಾರಣವಾಗಿದೆ. ಪ್ರವಾಸಿ ಸ್ಥಳಗಳು ಆಕರ್ಷಣೀಯವಾಗಿದ್ದರೆ ಮಾತ್ರವಲ್ಲ, ಬದಲಿಗೆ ಆ ಸ್ಥಳವು ಪ್ರವಾಸಿಗಳಿಗೆ ಸರ್ವರೀತಿಯಲ್ಲಿಯೂ ಅನುಕೂಲವನ್ನು ಒದಗಿಸುವಂತಿರಬೇಕು. ಸ್ಥಳಕ್ಕೆ ಹೋಗಲು ಸಾರಿಗೆ ವ್ಯವಸ್ಥೆ, ನಗರದಿಂದ ಪ್ರವಾಸಿ ಸ್ಥಳವಿರುವ ದೂರ, ಹೋಟೆಲುಗಳ ವ್ಯವಸ್ಥೆಯು ಪ್ರವಾಸಿಗರು ಪ್ರವಾಸಿ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುವುದರ ಮೇಲೆ ಪ್ರಭಾವ ಬೀರುವುದನ್ನು ಕಾಣಲಾಗಿದೆ. ಈ ಅಂಶಗಳೆಲ್ಲವೂ ಭೌಗೋಳಿಕ ಸಂಗತಿಗಳ ಹಿನ್ನೆಲೆಯಲ್ಲಿಯೇ ನಿರ್ಧಾರವಾಗುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಮದ್ಯಸೇವನೆ ಮಾಡುವವರನ್ನು ವ್ಯಸನಿಗಳೆಂದು ಕರೆಯುತ್ತಾರೆ. ಸಮಾಜದಲ್ಲಿ ಮದ್ಯ ವ್ಯಸನಿಗಳನ್ನು ಕೀಳಾಗಿ ನೋಡಲಾಗುತ್ತದೆ. ಆದ್ದರಿಂದ ಕುಡಿತದ ಚಟದಿಂದ ಮುಕ್ತರನ್ನಾಗಿಸಲು ಅನೇಕ ಮದ್ಯವ್ಯಸನ ಮುಕ್ತಿ ಕೇಂದ್ರಗಳಿವೆ. ಅದೇ ಯುರೋಪ್ ದೇಶಗಳಲ್ಲಿ ವೈನ್(ಮದ್ಯ) ಕುಡಿಯುವುದು ಉಚ್ಚ ಸಂಸ್ಕೃತಿಯ ಪ್ರತೀಕ ಎನ್ನಲಾಗುತ್ತದೆ. ಏಕೆ ಈ ವೈರುಧ್ಯಗಳಿವೆ

ಎಂಬುದನ್ನು ಪರಿಶೀಲಿಸಿದಾಗ ಪ್ರಾಕೃತಿಕ ವೈಲಕ್ಷಣಗಳು ಕಾರಣವಾಗಿರುವುದು ತಿಳಿದುಬರುತ್ತದೆ. ಯುರೋಪಿನ ದೇಶಗಳಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಕುಡಿಯುತ್ತಾರೆ. ಅತಿ ಶೀತಲ ಪ್ರದೇಶಗಳಲ್ಲಿ ಮದ್ಯವನ್ನು ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಒಳಿತು ಎನ್ನಲಾಗುತ್ತದೆ. ಆದ್ದರಿಂದಲೇ ಯುರೋಪಿನ ದೇಶಗಳಲ್ಲಿ ಮದ್ಯವನ್ನು ಸೇವಿಸುವುದಕ್ಕೆ ಆಕ್ಷೇಪಗಳಿಲ್ಲ. ಸಂಸ್ಕೃತಿಯು ಆಯಾ ಪ್ರದೇಶಗಳಲ್ಲಿನ ಪ್ರಾಕೃತಿಕ ಲಕ್ಷಣಗಳನ್ನು ಆಧರಿಸಿರುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಈ ಮೇಲಿನ ಅಂಶಗಳು ಭೌಗೋಳಿಕ ಸಂಗತಿಗಳು ಸಾಮಾಜಿಕ ಬದುಕು ಮತ್ತು ಸಂಸ್ಕೃತಿಯ ಆಚರಣೆಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂಬುದನ್ನು ತಿಳಿಸುತ್ತದೆ. ಈ ಭೌಗೋಳಿಕ ಸಂಗತಿಗಳನ್ನು ಆಧರಿಸಿ ಪ್ರವಾಸದ ಯೋಜನೆಯ ರೂಪುರೇಷೆಗಳು ರಚಿತವಾಗುವುದನ್ನು ಕಾಣಲಾಗಿದೆ.

೩.೨. ಸಾಮಾಜಿಕ ಸಂಸ್ಕೃತಿ: ತೌಲನಿಕ ದೃಷ್ಟಿಕೋನ

ಯುರೋಪಿನ ದೇಶಗಳ ಸಾಮಾಜಿಕ ಬದುಕಿನ ಚಿತ್ರಣವನ್ನು ಅನೇಕ ಯುರೋಪ್ ಪ್ರವಾಸ ಕೃತಿಗಳು ವ್ಯಕ್ತಪಡಿಸಿವೆ. ಅವುಗಳ ದೃಷ್ಟಿಕೋನಗಳು ವೈವಿಧ್ಯತೆಯಿಂದ ಕೂಡಿದೆ. ಕೆಲವು ಕೃತಿಗಳು ಯುರೋಪಿನ ಸಮಾಜದಲ್ಲಿ ಭಾರತೀಯತ್ವವನ್ನು ಹುಡುಕುತ್ತವೆ. ಕೆಲವು ಕೃತಿಗಳು ಯುರೋಪಿನ ಸಮಾಜದೊಂದಿಗೆ ಹೋಲಿಸಿ ಭಾರತೀಯ ಸಮಾಜವನ್ನು ತೆಗಳಲು ತೊಡಗಿದರೆ, ಕೆಲವು ಕೃತಿಗಳು ಭಾರತದ ಸಮಾಜದ ಪದ್ಧತಿಗಳೇ ಸರಿ ಎಂಬ ಧೋರಣೆಯನ್ನು ವ್ಯಕ್ತಪಡಿಸುತ್ತವೆ. ಮತ್ತೆ ಕೆಲವು ಕೃತಿಗಳು ಯುರೋಪಿನ ದೇಶಗಳನ್ನು ಆರಾಧನಾ ಮನೋಭಾವದಿಂದ ಕಾಣುತ್ತವೆ. ಈ ಅಭಿಪ್ರಾಯಭೇದಗಳಿಗೆ ಲೇಖಕರ ಮನೋಧೋರಣೆಗಳು ಮತ್ತು ಜ್ಞಾನ ಸಂಸ್ಕಾರ ಕಾರಣ ಎನಿಸುತ್ತದೆ. ಈ ಅಧ್ಯಾಯದ ಉದ್ದೇಶ ಕೃತಿಗಳಲ್ಲಿನ ಸಾಮಾಜಿಕ ವಿಶ್ಲೇಷಣೆಗಳನ್ನು ಗ್ರಹಿಸುವುದು ಹಾಗೂ ಕೃತಿಗಳು ಬೇರೆ ಸಮಾಜದೊಂದಿಗೆ ಮುಖಾಮುಖಿಯಾದ ಸಂದರ್ಭದಲ್ಲಿ ವ್ಯಕ್ತಪಡಿಸುವ ದಂದ್ವತೆ, ತಾಕಲಾಟ, ಆರಾಧನಾ ಗುಣಗಳನ್ನು ವಿಶ್ಲೇಷಿಸುವುದಾಗಿದೆ.

ಯುರೋಪ್ ಪ್ರವಾಸ ಕೃತಿಗಳು ಸಮಾಜದ ವಿಶ್ಲೇಷಣೆಗೆ ಹೇಗೆ ಸಹಕಾರಿಯಾಗಿದೆ?. ಯುರೋಪ್ ಸಮಾಜದ ಪದ್ಧತಿಗಳಿಗೂ ಭಾರತೀಯ ಸಮಾಜದ ಪದ್ಧತಿಗಳಿಗೂ ಇರುವ ಪ್ರಮುಖ ವ್ಯತ್ಯಾಸಗಳನ್ನು ಕೃತಿಗಳು ಗ್ರಹಿಸಿರುವ ಬಗೆ ಹೇಗೆ? ಸಾಮಾಜಿಕ ಪದ್ಧತಿಗಳ ವ್ಯತ್ಯಾಸಗಳಿಗೆ ಪ್ರಾಕೃತಿಕ ವೈವಿಧ್ಯತೆಗಳು ಕಾರಣವಾಗಿದೆಯೇ? ಎಂಬ ಅಂಶಗಳನ್ನು ಚರ್ಚಿಸಲಾಗಿದೆ.

ಯುರೋಪಿನ ಸಮಾಜವನ್ನು ಕೃತಿಗಳ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಿಸುವಾಗ, ಯುರೋಪಿನ ಅನೇಕ ದೇಶಗಳಲ್ಲಿ ಅಸಮಾನತೆ, ವರ್ಗಸಂಘರ್ಷ, ಭ್ರಷ್ಟತೆ, ವಿರೋಧಾಭಾಸಗಳು, ಮೂಢನಂಬಿಕೆಗಳು ಇರುವುದು ಕಂಡುಬರುತ್ತದೆ. ಭಾರತೀಯ ಸಮಾಜದಲ್ಲಿ ಮನುಷ್ಯರ ನಡುವೆ ಧರ್ಮ, ಜಾತಿ, ಭಾಷೆ, ಆರ್ಥಿಕ ಸಂಪತ್ತುಗಳನ್ನು ಆಧರಿಸಿ ಮೇಲು–ಕೀಳು ಎಂಬ ಭಾವನೆ ಬೆಳೆದುಕೊಂಡಿರುವಂತೆ ಯುರೋಪಿನ ಬಹುತೇಕ ರಾಷ್ಟ್ರಗಳಲ್ಲಿಯೂ ವರ್ಗ ಸಂಘರ್ಷ, ವರ್ಣಭೇದ, ಮೂಢನಂಬಿಕೆ, ಹಾಗೂ ಸಾಮಾಜಿಕ ಸಮಸ್ಯೆಗಳು ಇರುವುದನ್ನು ಕೃತಿಗಳು ಉಲ್ಲೇಖಿಸಿವೆ. ಯುರೋಪಿನ ದೇಶಗಳಲ್ಲಿ ಜಾತಿಗಳಿಲ್ಲ, ನಿಜ ಆದರೆ ಅಲ್ಲಿಯೂ ವರ್ಗಸಂಘರ್ಷಗಳಿವೆ. ಯುರೋಪಿನ ದೇಶಗಳಲ್ಲಿ ಕ್ರೈಸ್ತ ಧರ್ಮೀಯರ ಸಂಖ್ಯೆ ಹೆಚ್ಚಿದೆ. ಕ್ರೈಸ್ತ

ಧರ್ಮದೊಳಗೆ ಒಳ ಪಂಗಡಗಳಿವೆ. ಈ ಧಾರ್ಮಿಕ ಪಂಗಡಗಳ ನಡುವೆ ಸಂಘರ್ಷಗಳಿವೆ, ದ್ವೇಷಭಾವಗಳಿವೆ ಅವುಗಳನ್ನು ಪ್ರವಾಸ ಕೃತಿಗಳು ಗ್ರಹಿಸುವ, ವಿವರಿಸುವ ಬಗೆ ಹೇಗೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಯುರೋಪಿನ ದೇಶಗಳಲ್ಲಿ ನಗರ ಸಮಾಜದ ಬದುಕಿಗೂ ಗ್ರಾಮೀಣ ಸಮಾಜದ ಬದುಕಿಗೂ ವ್ಯತ್ಯಾಸಗಳಿರುವುದನ್ನು ಕೃತಿಗಳು ಗುರುತಿಸಿವೆ. ಭಾರತದ ಗ್ರಾಮೀಣ ಸಮಾಜವು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಿಗೂ, ಯುರೋಪಿನ ಗ್ರಾಮೀಣ ಸಮಾಜವು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಿಗೂ ಸಾಮ್ಯತೆಗಳಿವೆ. ಆದರೆ ಸಮಸ್ಯೆಗಳ ರೀತಿಯಲ್ಲಿ ವೈವಿಧ್ಯತೆಗಳಿವೆ. ಭಾರತೀಯ ಗ್ರಾಮೀಣ ಸಮಾಜದಲ್ಲಿ ಸಮಸ್ಯೆಗಳು ಯುರೋಪಿನ ಗ್ರಾಮೀಣ ಸಮಾಜಕ್ಕಿಂತ ಹೆಚ್ಚಿದೆ. ಭಾರತದಲ್ಲಿ ಭ್ರಷ್ಟಾಚಾರ, ಕಳ್ಳತನ, ವೇಶ್ಯಾವಾಟಿಕೆ ಮೊದಲಾದ ಸಾಮಾಜಿಕ ಸಮಸ್ಯೆಗಳು ಹೆಚ್ಚಿದೆ. ಯುರೋಪಿನ ದೇಶಗಳಲ್ಲಿ ಈ ಸಮಸ್ಯೆಗಳಿರುವುದನ್ನು ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ವ್ಯತ್ಯಾಸವೆಂದರೆ ಯುರೋಪಿನ ದೇಶಗಳಲ್ಲಿರುವ ಸಾಮಾಜಿಕ ಸಮಸ್ಯೆಗಳು ಕಡಿಮೆ ಪ್ರಮಾಣದಲ್ಲಿದ್ದು ಸುಧಾರಿಸಲು ಸಾಧ್ಯ ಎಂಬಂತಿದೆ. ಇದೇ ಸಮಸ್ಯೆಗಳು ಭಾರತದಲ್ಲಿ ಸುಧಾರಣೆಗೆ ಪ್ರಯತ್ನಿಸುವ ಮನೋಭಾವಕ್ಕಿಂತ ಅದರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗುವ ಸ್ವಭಾವವೆ ಅಧಿಕವಾಗಿರುವುದನ್ನು ಪ್ರವಾಸ ಕೃತಿಗಳು ಗುರುತಿಸಿವೆ.

ಕೌಟುಂಬಿಕ ವ್ಯವಸ್ಥೆಯನ್ನು ಕೇಂದ್ರೀಕರಿಸಿ ವಿಶ್ಲೇಷಿಸಿದಾಗ ಭಾರತದ ಕುಟುಂಬದ ವ್ಯವಸ್ಥೆಯೇ ಉತ್ತಮ ಎಂಬ ಅಭಿಪ್ರಾಯ ಅನೇಕ ಪ್ರವಾಸ ಕೃತಿಗಳಲ್ಲಿ ವ್ಯಕ್ತವಾಗಿದೆ. ಯುರೋಪಿಯನ್ನರಲ್ಲಿಯೂ ಕೂಡ ಭಾರತೀಯ ಕುಟುಂಬದ ವ್ಯವಸ್ಥೆಯ ಬಗ್ಗೆ ಮೆಚ್ಚುಗೆಯ ಭಾವನೆಗಳು ಇರುವುದನ್ನು ಉಲ್ಲೇಖಿಸಿವೆ. ಕೌಟುಂಬಿಕ ವ್ಯವಸ್ಥೆಯು ಯುರೋಪಿನ ಎಲ್ಲಾ ದೇಶಗಳಲ್ಲಿಯೂ ಏಕಪ್ರಕಾರವಾಗಿಲ್ಲ. ದೇಶದಿಂದ ದೇಶಕ್ಕೆ ಭಿನ್ನವಾಗಿದೆ. ಆಯಾ ದೇಶದ ಆಡಳಿತಾತ್ಮಕ ನಿಯಮಗಳು ಕುಟುಂಬ ವ್ಯವಸ್ಥೆಯಲ್ಲಿನ ವೈವಿಧ್ಯತೆಗೆ ಕಾರಣವಾಗಿರಬಹುದು. ಯುರೋಪಿನ ದೇಶಗಳ ಸಾಮಾಜಿಕ ಜೀವನದ ಮೇಲೆ ಆಯಾ ದೇಶದ ಆಡಳಿತ ಕ್ರಮವು ಹೇಗೆ ಪ್ರಭಾವ ಬೀರಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಪ್ರವಾಸ ಕೃತಿಗಳು ಕೌಟುಂಬಿಕ ವ್ಯವಸ್ಥೆಯಲ್ಲಿನ ವಿವಾಹ ಪದ್ಧತಿಯ ಬಗ್ಗೆ ಚರ್ಚಿಸಿವೆ. ಭಾರತದಲ್ಲಿನ ಸಾಂಪ್ರದಾಯಿಕ ವಿವಾಹ ಪದ್ಧತಿಗಳಿಗೂ ಯುರೋಪಿನ ಸರಳ ವಿವಾಹ ಪದ್ಧತಿಗಳಿಗೂ ತುಂಬಾ ಅಂತರವಿದೆ. ಈ ವಿವಾಹ ಪದ್ಧತಿಗಳನ್ನು ಅನುಸರಿಸಿ ತೌಲನಿಕ ವಿಶ್ಲೇಷಣೆ ಮಾಡಲಾಗಿದೆ.

ನಂಬಿಕೆಗಳು ಸಾರ್ವಕಾಲಿಕ ಮತ್ತು ಸಾರ್ವತ್ರಿಕವಾದುದು. ಯುರೋಪಿನಲ್ಲಿಯೂ ಕೆಲವು ನಂಬಿಕೆಗಳಿವೆ, ಜೊತೆಗೆ ಮೂಢನಂಬಿಕೆಗಳೂ ಇವೆ. ಯುರೋಪಿಗೆ ಹೋಲಿಸಿದರೆ ಭಾರತದಲ್ಲಿ ಮೂಢನಂಬಿಕೆಗಳನ್ನು ನಂಬುವವರ ಪ್ರಮಾಣ ಅಧಿಕವಾಗಿದೆ. ಯುರೋಪಿನ ದೇಶಗಳಲ್ಲಿರುವ ಮೂಡನಂಬಿಕೆಗಳಿಗೂ ಭಾರತದಲ್ಲಿ ಆಚರಣೆಯಲ್ಲಿರುವ ಮೂಢನಂಬಿಕೆಗಳಿಗೂ ಹೋಲಿಕೆಗಳಿರುವುದನ್ನು ಕೃತಿಗಳಲ್ಲಿ ಗುರುತಿಸಲಾಗಿದ್ದು, ಅವುಗಳ ಬಗ್ಗೆ ವಿಶ್ಲೇಷಣಾ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.

ಸಮಾಜವು ವ್ಯಕ್ತಿಗಳ ವ್ಯಕ್ತಿತ್ವವನ್ನು ರೂಪಿಸುವ ತಾಣ. ಇಲ್ಲಿ ಸಾಮೂಹಿಕವಾಗಿ ಆಚರಿಸುವ ಪದ್ಧತಿಗಳು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತದೆ. ಆಚರಣೆಗಳು, ನಂಬಿಕೆಗಳು ಸಮಾಜದ ಅಂಗಗಳಾಗಿವೆ. ವ್ಯಕ್ತಿ ಇದರಲ್ಲಿ ಅರಿವಿಲ್ಲದೆ ಒಳಗಾಗುತ್ತಾನೆ, ನಂಬುತ್ತಾನೆ ಮತ್ತು ಪಾಲಿಸುತ್ತಾನೆ. ಇದು ಎಲ್ಲಾ ಸಮಾಜಗಳಲ್ಲಿಯೂ ನಡೆಯುವ ಸಾಮಾನ್ಯ ಪ್ರಕ್ರಿಯೆಯಾಗಿದೆ. ಪ್ರತಿಯೊಂದು ಸಮಾಜವು ತನ್ನದೇ ಆದ

ವಿಶಿಷ್ಟ ಆಚರಣೆಗಳನ್ನು ಹೊಂದಿರುತ್ತದೆ. ಒಂದು ಸಮಾಜದ ಜೀವನಕ್ರಮಕ್ಕೂ ಮತ್ತೊಂದು ಸಮಾಜದ ಜೀವನಕ್ರಮಕ್ಕೂ ಸಾಮ್ಯ ಅಂಶಗಳು ಇರುತ್ತವೆ, ಅಂತೆಯೇ ವೈವಿಧ್ಯತೆಗಳೂ ಇರುತ್ತವೆ. ಆದ್ದರಿಂದ ಭಾರತೀಯ ಸಮಾಜದ ಜೀವನಕ್ರಮದೊಂದಿಗೆ ಯುರೋಪಿನ ಸಮಾಜದ ಜೀವನಕ್ರಮವನ್ನು ತೌಲನಿಕ ದೃಷ್ಟಿಯಿಂದ ವಿಶ್ಲೇಷಿಸಿರುವ ಕೃತಿಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಜೊತೆಗೆ ಲೇಖಕರು ಪ್ರವಾಸ ಕೃತಿಗಳಲ್ಲಿ ವ್ಯಕ್ತಪಡಿಸಿರುವ ಸಾಮಾಜಿಕ ದೃಷ್ಟಿಕೋನಗಳನ್ನು ಆಧರಿಸಿ, ಆತನನ್ನು ಪ್ರಭಾವಿಸಿದ ಸಾಮಾಜಿಕ ಸಂವೇದನೆಗಳನ್ನು ವಿಶ್ಲೇಷಿಸಲಾಗಿದೆ.

ಯುರೋಪಿನ ಸಮಾಜವು ಕೃತಿಗಳಲ್ಲಿ ವ್ಯಕ್ತವಾಗಿರುವ ಬಗೆ ಹೇಗೆ? ಎಂಬುದನ್ನು ಹಲವು ಆಯಾಮಗಳ ಮೂಲಕ ಅರ್ಥೈಸುವ ಮತ್ತು ವಿವರಿಸುವ ಕಾರ್ಯವನ್ನು ಮಾಡಲಾಗಿದೆ. ಅವುಗಳನ್ನು ಕೌಟುಂಬಿಕ ಮತ್ತು ಸಾಮುದಾಯಿಕ : ತೌಲನಿಕ ದೃಷ್ಟಿಕೋನ, ಗ್ರಾಮೀಣ ಮತ್ತು ನಗರ : ತೌಲನಿಕ ದೃಷ್ಟಿಕೋನ, ಸಾಮಾಜಿಕ ಅಸಮಾನತೆ : ತೌಲನಿಕ ದೃಷ್ಟಿಕೋನ, ಎಂದು ಉಪಶೀರ್ಷಿಕೆಗಳನ್ನಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಸಾಮಾಜಿಕ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಯುರೋಪಿನ ಕೃಷಿ ಪದ್ಧತಿ, ಗ್ರಾಮೀಣ ಮಾರುಕಟ್ಟೆ, ನಗರದ ಜನರ ಜೀವನ ಶೈಲಿ ಮತ್ತು ಪದ್ಧತಿಗಳು, ವಿವಾಹ ಪದ್ಧತಿಗಳು, ಕೌಟುಂಬಿಕ ವ್ಯವಸ್ಥೆ ಹೀಗೆ ಸಮಾಜದ ವಿವಿಧ ಅಂಗಗಳನ್ನು ಉಪಶೀರ್ಷಿಕೆಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

೩.೨.೧ ಕೌಟುಂಬಿಕ ಮತ್ತು ಸಾಮುದಾಯಿಕ : ತೌಲನಿಕ ದೃಷ್ಟಿಕೋನ

ಕನ್ನಡದಲ್ಲಿ ಪ್ರಕಟವಾಗಿರುವ ಯುರೋಪ್ ಪ್ರವಾಸ ಕೃತಿಗಳು ಯುರೋಪಿನ ಸಾಮಾಜಿಕ ಆಚರಣೆ, ಪದ್ಧತಿಗಳನ್ನು ತಮ್ಮ ದೃಷ್ಟಿಕೋನಕ್ಕೆ ಅನುಗುಣವಾಗಿ ವಿವರಿಸಿವೆ. ಈ ವಿವರಗಳನ್ನು ಕೌಟುಂಬಿಕ ಪದ್ಧತಿಗಳು ಮತ್ತು ಸಾಮುದಾಯಿಕ ಪದ್ಧತಿಗಳೆಂದು ಸ್ಥೂಲವಾಗಿ ವಿಂಗಡಿಸಿಕೊಳ್ಳಲಾಗಿದೆ. ಯುರೋಪಿನ ಸಾಮಾಜಿಕ ವ್ಯವಸ್ಥೆಯನ್ನು ಭಾರತೀಯ ಸಾಮಾಜಿಕ ಪದ್ಧತಿಗಳೊಂದಿಗೆ ಹೋಲಿಸಲಾಗಿದೆ. ಅಂತೆಯೇ ಅಭಿಪ್ರಾಯಗಳನ್ನು ತೌಲನಿಕವಾದ ದೃಷ್ಟಿಕೋನದಲ್ಲಿ ವಿಶ್ಲೇಷಿಸಲಾಗಿದೆ. ಅಭಿಪ್ರಾಯಗಳ ನಡುವೆ ಭಿನ್ನತೆಗಳಿರುವುದನ್ನು ಕಂಡುಕೊಳ್ಳಲಾಗಿದೆ. ವೈವಿಧ್ಯ ಮನೋಧೋರಣೆಗಳು ಸಮಾಜವನ್ನು ನೋಡುವಾಗ ವ್ಯತ್ಯಾಸಾತ್ಮಕವಾದ ವಿವರಣೆ ಸಹಜವಾಗಿದೆ. ಮತ್ತು ಅವುಗಳನ್ನು ಒಪ್ಪಿಕೊಳ್ಳಲಾಗಿದೆ. ಈ ವೈವಿಧ್ಯತೆಗಳಿಗೆ ಕೃತಿಯ ರಚನೆಯ ಕಾಲ ಮತ್ತು ಮನಸ್ಥಿತಿಗಳು ಕಾರಣವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

'ಕೌಟುಂಬಿಕ' ಎಂಬ ಪರಿಕಲ್ಪನೆಯು ಸಮಾಜದ ಒಂದು ಅಂಗವಾಗಿ ಕುಟುಂಬದ ಗತಿವಿಧಾನಗಳನ್ನು ಪ್ರತಿನಿಧಿಸುತ್ತದೆ. ಕುಟುಂಬದವರೆಲ್ಲರೂ ಸೇರಿ ಆಚರಣೆ ಮಾಡುವ ಕಾರ್ಯಕ್ರಮಗಳು, ಪದ್ಧತಿಗಳನ್ನು, ಕೌಟುಂಬಿಕ ಬಾಂಧವ್ಯಗಳನ್ನು ಹಾಗೂ ಸಂಬಂಧಗಳ ಕುರಿತು ಕೃತಿಗಳು ಉಲ್ಲೇಖಿಸಿರುವ ಬಗೆಯನ್ನು ವಿಶ್ಲೇಷಿಸಲಾಗುತ್ತದೆ.

ಅ) ಕೌಟುಂಬಿಕ ಸಂಸ್ಕೃತಿ : ತೌಲನಿಕ ದೃಷ್ಟಿಕೋನ

ಯುರೋಪಿನಲ್ಲಿ ಕುಟುಂಬದ ಪರಿಕಲ್ಪನೆಯು ಸಂಕುಚಿತಾರ್ಥವನ್ನು ಪಡೆದುಕೊಂಡಿರುವ ಬಗ್ಗೆ ಕೃತಿಗಳು ನಿರೂಪಿಸಿವೆ. ಯುರೋಪ್ ಪ್ರವಾಸ ಕೃತಿಗಳಲ್ಲಿ ವ್ಯಕ್ತವಾದ ಯುರೋಪ್ ದೇಶಗಳ ಕುಟುಂಬ

ವ್ಯವಸ್ಥೆಯನ್ನು ಸಮಗ್ರವಾಗಿ ನೋಡಿದಾಗ ವಿಘಟಿತ ಕುಟುಂಬಗಳು ಹೆಚ್ಚು ಎಂಬುದು ಮೇಲ್ನೋಟಕ್ಕೆ ತಿಳಿದುಬರುತ್ತದೆ. ಆದರೆ ಕೆಲವು ಕೃತಿಗಳ ಅಭಿಪ್ರಾಯಗಳು ಈ ಪ್ರಜ್ಞೆಯನ್ನು ಒಡೆಯುತ್ತವೆ. ಪ್ರವಾಸದ ಮಿತಿಗಳ ಕಾರಣದಿಂದಲೋ ಅಥವಾ ಅವರಿಗೆ ದಕ್ಕಿದ ಅನುಭವಗಳ ಹಿನ್ನೆಲೆಯಲ್ಲೋ ಅಥವಾ ಕೃತಿಯ ಸೈದ್ಧಾಂತಿಕ ನೆಲೆಗಟ್ಟಿನ ಕಾರಣದಿಂದಲೋ ಯುರೋಪಿನ ಕುಟುಂಬಗಳು ಅವಿಭಕ್ತ ಕುಟುಂಬಗಳಂತೆಯೂ, ಏಕೀಕರಣಗೊಂಡ ಕುಟುಂಬಗಳಂತೆಯೂ ಕಾಣುತ್ತವೆ. ಈ ನೆಲೆಯಲ್ಲಿ ಕೃತಿಗಳಲ್ಲಿ ಉಲ್ಲೇಖಿಸಲಾದ ಕುಟುಂಬ, ವಿವಾಹ, ವೃದ್ಧಾಶ್ರಮ ಮೊದಲಾದ ಪರಿಕಲ್ಪನೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಕುಟುಂಬ : ಯುರೋಪಿನ ದೇಶಗಳಲ್ಲಿ ಕುಟುಂಬ ಪದ್ಧತಿಯನ್ನು ಯುರೋಪ್ ಪ್ರವಾಸ ಕೃತಿಗಳು ಚಿತ್ರಿಸಿರುವ ಬಗೆ ಹೇಗೆ ಎಂಬ ಬಗ್ಗೆ ಇಲ್ಲಿ ಚರ್ಚಿಸಲಾಗುತ್ತದೆ. ಕುಟುಂಬದ ಬಗ್ಗೆ ಚರ್ಚಿಸುವಾಗ ಅದಕ್ಕೊಂದು ಸಾಮಾಜಿಕ ಹಿನ್ನೆಲೆಯನ್ನು ಆಧರಿಸಿಯೇ ನೋಡಬೇಕಾಗುತ್ತದೆ. 'ಯುರೋಪಿನ ಕುಟುಂಬಗಳು ಭಾರತೀಯ ಕುಟುಂಬಗಳಷ್ಟು ಸುಭದ್ರವಾಗಿರುವುದಿಲ್ಲ' ಎಂಬ ಅಭಿಪ್ರಾಯ 'ಅಪೂರ್ವ ಪಶ್ಚಿಮ' ಕೃತಿಯಲ್ಲಿ ವ್ಯಕ್ತವಾಗಿದೆ. ಕೃತಿಯು ರಚಿತವಾದ ಕಾಲಘಟ್ಟವು ಈ ಅಭಿಪ್ರಾಯಕ್ಕೆ ಕಾರಣವಾಗಿದೆ ಎನಿಸುತ್ತದೆ. ೧೯೫೦ರ ದಶಕದಲ್ಲಿ ಈ ಕೃತಿ ಪ್ರಕಟವಾಗಿದೆ. ೧೯೫೦ ದಶಕದಲ್ಲಿ ಭಾರತೀಯ ಕುಟುಂಬಗಳು ಹೆಚ್ಚು ಸುಭದ್ರವಾಗಿದ್ದು ಅವಿಭಕ್ತ ಕುಟುಂಬಗಳಾಗಿದ್ದವು. ಯುರೋಪಿನ ಕುಟುಂಬಗಳೆಲ್ಲಾ ಬಹುತೇಕ ಅಣು ಕುಟುಂಬಗಳಾಗಿದ್ದವು. ಆದ್ದರಿಂದಲೇ ಕೃತಿಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ. 'ಅಂದಿನ ಭಾರತೀಯ ಸಮಾಜವು ಕೌಟುಂಬಿಕವಾಗಿ ಏಕತೆಯನ್ನು ಹೊಂದಿತ್ತು ಮತ್ತು ಯುರೋಪಿನ ಕುಟುಂಬಗಳಲ್ಲಿ ಸುಭದ್ರತೆ ಕಡಿಮೆ' ಎಂಬ ಕೃತಿಯ ಅಭಿಪ್ರಾಯವನ್ನು ಒಪ್ಪಲಾಗಿದೆ. "ಇಲ್ಲಿನ ಸ್ತ್ರೀಯರು ಸ್ವತಂತ್ರರೆಂದೂ, ದಾಂಪತ್ಯ ವಿಚ್ಛೇದನ ಇಲ್ಲಿ(ಸ್ವಿಟ್ಜರ್‌ಲ್ಯಾಂಡ್) ಬಹು ಹೆಚ್ಚೆಂಬುದಾಗಿಯೂ ಕೇಳಿದ್ದೆ"(ಶಿವರಾಮ ಕಾರಂತ, ಅಪೂರ್ವ ಪಶ್ಚಿಮ, ಪು-೨೬೧)ಎನ್ನುತ್ತಾರೆ. ಕೃತಿಯು ಪ್ರಾದೇಶಿಕತ್ವದ ನೆಲೆಯಲ್ಲಿ ಯುರೋಪಿನ ಕುಟುಂಬಗಳನ್ನು ನೋಡಿರುವುದು ಈ ಅಭಿಪ್ರಾಯಕ್ಕೆ ಕಾರಣವಾಗಿದೆ. ಮತ್ತು ಕಾಲಧರ್ಮಕ್ಕೆ ನಿಷ್ಠವಾದ ಅಭಿಪ್ರಾಯವಾಗಿದ್ದು ಕುಟುಂಬದ ಅಸ್ಥಿರತೆಯಲ್ಲಿ ಸ್ತ್ರೀಯರ ಪಾತ್ರವೇ ಅಧಿಕ ಎಂದು ಹೇಳಿದ್ದಾರೆ.

'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯಲ್ಲಿಯೂ ಇದೇ ತೆರನಾದ ಅಭಿಪ್ರಾಯ ವ್ಯಕ್ತವಾಗಿದೆ. 'ರಷ್ಯಾ ದೇಶದ ಕುಟುಂಬ ಪದ್ಧತಿಗಳಲ್ಲಿ ಗಟ್ಟಿಯಾದ ಬಂಧಗಳಿಲ್ಲ ಎಂದಿದೆ. ಅದರ ಜೊತೆಗೆ ಕುಟುಂಬಗಳ ವಿಘಟನೆಗೆ ಕಾರಣವನ್ನು ಕೂಡ ವಿವರಿಸಿದೆ. 'ಹೆಣ್ಣು ಕೂಡ ಗಂಡಿನಂತೆ ದುಡಿಯುವುದರಿಂದ ಹೆಣ್ಣು ಗಂಡಿನ ಕೈ ಕಾಯಬೇಕಿಲ್ಲ. ಗಂಡನಿಗೆ ತಾವು ಅಧೀನಳೆಂಬ ದೈನ್ಯತೆ ಇಲ್ಲ. 'ನೀನಲ್ಲದಿದ್ದರೆ ಇನ್ನೊಬ್ಬ' ಎಂಬ ನಿರ್ಲಕ್ಷತೆ ಹೆಚ್ಚು. ಇದರಿಂದ ಸಾಂಸಾರಿಕ ಜೀವನದ ಮೇಲೆ ಕೊಂಚ ಕೆಟ್ಟ ಪರಿಣಾಮವಾಗಿ ವಿವಾಹ ವಿಚ್ಛೇಧನಗಳು ಹೆಚ್ಚಾಗಿದೆ' ಎಂದು ವಿವರಣೆ ನೀಡಿದೆ. 'ಅಪೂರ್ವ ಪಶ್ಚಿಮ' ಮತ್ತು 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಎರಡೂ ಕೃತಿಗಳು ಕುಟುಂಬದಲ್ಲಿನ ಅಭದ್ರತೆಗೆ ಕಾರಣಗಳನ್ನು ಸ್ತ್ರೀಕೇಂದ್ರಿತ ನೆಲೆಯಲ್ಲಿ

ಗ್ರಹಿಸಿರುವುದು ಕಂಡುಬರುತ್ತದೆ. ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯ ಲಭಿಸಿದ ಬಳಿಕ ಕುಟುಂಬಗಳು ವಿಘಟನೆಯಾಗುತ್ತಿವೆ ಎಂಬುದು ಈ ಕೃತಿಗಳ ಗ್ರಹಿಕೆಯಾಗಿದೆ. ಮೇಲಿನ ಎರಡೂ ಕೃತಿಗಳು 'ಸಾಮಾಜಿಕ ಸ್ವಾಸ್ಥ್ಯ ಉಂಟಾಗಬೇಕಾದರೆ ಮತ್ತು ಕುಟುಂಬಗಳು ಬಂಧುರವಾಗಿ ಉಳಿಯಬೇಕಾದರೆ ಸ್ತ್ರೀಯರ ಪಾತ್ರ ಪ್ರಧಾನ' ಎಂಬ ಆಶಯವನ್ನು ವ್ಯಕ್ತಪಡಿಸಿವೆ.

೧೯೭೩ರಲ್ಲಿ ಪ್ರಕಟವಾದ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವು ೧೯೮೮ರಲ್ಲಿ ಪ್ರಕಟವಾದ 'ಸೋವಿಯತ್ ದೇಶ ಕಂಡೆ' ಕೃತಿಯಲ್ಲಿ ವ್ಯಕ್ತವಾಗಿದೆ. 'ಸೋವಿಯತ್ ದೇಶ ಕಂಡೆ' ಕೃತಿಯು 'ಸೋವಿಯತ್‌ನಲ್ಲಿ ಕೌಟುಂಬಿಕ ಏಕತೆ ಉಳಿದಿದೆ' ಎಂದಿದೆ. ಈ ಎರಡೂ ಕೃತಿಗಳು ಪ್ರಕಟವಾದ ಕಾಲದ ಅಂತರ ಹದಿನೈದು ವರ್ಷಗಳಾಗಿವೆ. ಹಾಗಾದರೆ ಹದಿನೈದು ವರ್ಷದ ಹಿಂದೆ ಇಲ್ಲದ ಕೌಟುಂಬಿಕ ಬಂಧುರತೆ ೧೯೮೮ರಲ್ಲಿ ಪುನಃ ಸ್ಥಾಪಿತವಾಗಿದೆಯೇ? ಈ ಅಂಶಗಳನ್ನು ವಿಶ್ಲೇಷಿಸಿದಾಗ ತಿಳಿದುಬರುವ ಸಂಗತಿಯೆಂದರೆ 'ಸೋವಿಯತ್ ದೇಶ ಕಂಡೆ' ಕೃತಿಯು ಸೋವಿಯತ್ ಸರಕಾರದ ಆಮಂತ್ರಣದ ಮೇರೆಗೆ ಕೈಗೊಂಡ ಹದಿನೈದು ದಿನಗಳ ಪ್ರವಾಸದ ವಿವರವಾಗಿದೆ. ಋಣ ಸಂದಾಯದ ನೆಲೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿರುವ ಸಾಧ್ಯತೆ ಇದೆ ಎನಿಸುತ್ತದೆ. ಸೋವಿಯತ್ ದೇಶ ಕಂಡೆ ಕೃತಿಯಲ್ಲಿಯೇ ಈ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯವೂ ವ್ಯಕ್ತವಾಗಿದೆ. ಸೋವಿಯತ್ ದೇಶದ ಬಗ್ಗೆ ವಿವರಿಸುತ್ತಾ "ಅಲ್ಲಿಯ ನ್ಯಾಯಲಯಗಳಲ್ಲಿ ಕಳವಿನ ಪ್ರಕರಣಗಳು ಬರುವುದು ಇಲ್ಲವೆನ್ನುವಷ್ಟು ಕಡಿಮೆ. ಅಲ್ಲಿ ಬಂದರೆ ಹೆಚ್ಚಾಗಿ ವಿವಾಹ ವಿಚ್ಛೇದನೆಯ ಪ್ರಕರಣಗಳು ಬರುತ್ತವೆ"(ಪಾಟೀಲ ಪುಟ್ಟಪ್ಪ, ಸೋವಿಯತ್ ದೇಶ ಕಂಡೆ, ಪು-೨೪)ಎಂದಿದ್ದಾರೆ. ಈ ಉಲ್ಲೇಖದಲ್ಲಿ 'ಹೆಚ್ಚಾಗಿ' ಎಂಬ ಪದ ಮತ್ತು 'ವಿಚ್ಛೇದನ ಪ್ರಕರಣ' ಪದಗಳನ್ನು ಗಮನಿಸಿದರೆ ಕೌಟುಂಬಿಕವಾಗಿ ಸೋವಿಯತ್ ದೇಶ ಎಷ್ಟು ಬಂಧುರವಾಗಿದೆ ಎಂಬುದನ್ನು ಮನಗಾಣಬಹುದು. ಕೃತಿಯೇ ದ್ವಂದ್ವ ನಿಲುವುಗಳನ್ನು ಪ್ರಕಟಿಸಿದೆ. ಇದರಿಂದ ತಿಳಿದುಬರುವ ಸಂಗತಿಯೆಂದರೆ ಲೇಖಕರಿಗೆ ವಾಸ್ತವವನ್ನು ಮುಕ್ತವಾಗಿ ಪ್ರಕಟಿಸಲು ಸಾಧ್ಯವಾಗದಿರುವ ಪರಿಸ್ಥಿತಿಯಲ್ಲಿ ನಿರೂಪಿಸಿದ್ದಾರೆ ಎನಿಸುತ್ತದೆ.

ಭಾರತದಂತಹ ಪುರುಷ ಪ್ರಧಾನ ಸಮಾಜದಲ್ಲಿ ಮದುವೆಯಾದ ಬಳಿಕ ಹೆಂಡತಿ ಗಂಡನ ಮನೆಗೆ ಹೋಗುವುದು ಸಂಪ್ರದಾಯ. ಆದರೆ ಭಾರತದ ಕೆಲವು ಪ್ರದೇಶಗಳಲ್ಲಿ ಈ ಸಂಪ್ರದಾಯಕ್ಕೆ ಅಪವಾದಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿ ಇದೆ. ಮಾತೃಪಧಾನ ಕುಟುಂಬಗಳಲ್ಲಿ ಗಂಡಸರು ಮದುವೆಯ ನಂತರ ಮನೆ ಅಳಿಯನಾಗಿ ಹೆಂಡತಿಯ ತವರು ಮನೆಯಲ್ಲಿ ನೆಲೆಸುವ ವಾಡಿಕೆ ಇದೆ. ಕರಾವಳಿಯ ಅನೇಕ ಸಮುದಾಯಗಳಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪಾಲಿಸಲಾಗುತ್ತಿದೆ. ಬಂಟರ ಸಮುದಾಯದಲ್ಲಿ ಹೆಚ್ಚಾಗಿ ಈ ಸಂಪ್ರದಾಯ ಚಾಲ್ತಿಯಲ್ಲಿದೆ. ಕೇರಳದ 'ನಾಯರ್' ಪಂಗಡದಲ್ಲಿ ಇಂದಿಗೂ ಮಾತೃ ಪ್ರಧಾನ ವ್ಯವಸ್ಥೆಯಿರುವುದನ್ನು ಕಾಣಬಹುದು. ಅಂಡಮಾನ್, ನಿಕೋಬಾರ್, ಲಕ್ಷದ್ವೀಪಗಳಲ್ಲಿ ವಾಸಿಸುವ ಬುಡಕಟ್ಟು ಜನಾಂಗಗಳಲ್ಲಿ ಮಾತೃಪ್ರಧಾನ ವ್ಯವಸ್ಥೆಯೆ ಜಾರಿಯಲ್ಲಿದೆ. ಅಸ್ಸಾಂನ ಖಾಸಿ ಮತ್ತು ಬುಡೋ ಜನಾಂಗಗಲ್ಲಿಯೂ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ ಎಂದು ಸಮಾಜಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ ಯುರೋಪಿನ ದೇಶಗಳಲ್ಲಿ ಕುಟುಂಬದ ಪ್ರಧಾನ ವ್ಯಕ್ತಿ ತಂದೆ ಆಗಿರಬೇಕು ಎಂದಾಗಲಿ, ತಾಯಿ ಆಗಿರಬೇಕು ಎಂದಾಗಲಿ ಇರುವುದಿಲ್ಲ. ಈ ಬಗೆಯ ಕುಟುಂಬ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಯಾವ ಲೇಖಕರು ಉಲ್ಲೇಖಿಸಿಲ್ಲ. ಯುರೋಪಿನ ದೇಶಗಳಲ್ಲಿ ಸಾಮಾಜಿಕವಾಗಿ

ಅಣು ಕುಟುಂಬ ಪದ್ಧತಿಗಳಿದ್ದು, ಮದುವೆಯಾದ ವಧು-ವರರು ಪ್ರತ್ಯೇಕವಾದ ಮನೆಗಳಲ್ಲಿ ವಾಸವಾಗಿರುತ್ತಾರೆ. ಪಾಟೀಲ ಪುಟ್ಟಪ್ಪ ಅವರು ಕೃಷಿ ವಸ್ತುಗಳ ಮಾರಾಟದ ಒಂದು ಖಾಸಗಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿದ್ದ ಹೆಂಗಸಿಗೆ ಅವರ ಕುಟುಂಬದ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ "ತಮ್ಮ ಮಗ ಮದುವೆಯಾಗಿ ಸೊಸೆಯೊಂದಿಗೆ ಬೇರೆ ಕಡೆಯಲ್ಲಿ ಕೆಲಸ ಮಾಡುತ್ತಿರುವನೆಂದು..... ಮಗಳು ಮದುವೆಯಾಗಿ ಗಂಡನೊಂದಿಗೆ ಇದ್ದಾಳೆಂದೂ ಮಕ್ಕಳನ್ನು ಕರೆದುಕೊಂಡು ಬಂದು ತನ್ನನ್ನೂ ಇಲ್ಲವೆ ತಮ್ಮನ್ನು ಕಂಡು ಹೋಗುತ್ತಿರುವಳೆಂದೂ ತಿಳಿಸುತ್ತಿದ್ದರು"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪು-೧೧೩)ಎಂದಿದ್ದಾರೆ. ಇದರಿಂದ ತಿಳಿದುಬರುವ ಸಂಗತಿಯೇನೆಂದರೆ ಸೋವಿಯತ್ ದೇಶದ ಕುಟುಂಬಗಳಲ್ಲಿ ಬಂಧುರತೆ ಇಲ್ಲ. ಆದರೆ ಭಾವನಾತ್ಮಕವಾಗಿ ಕುಟುಂಬದ ಸದಸ್ಯರೊಂದಿಗೆ ಅನ್ಯೋನ್ಯತೆಯನ್ನು ಉಳಿಸಿಕೊಂಡಿದ್ದಾರೆ. 'ಅಮೆರಿಕದಲ್ಲಿ ಮಗನನ್ನು ಅಪರಿಚಿತನಂತೆ ಕಾಣುವ ಸ್ಥಿತಿ ಇದೆ' ಎಂದು ಜಿ. ಎಸ್. ಶಿವರುದ್ರಪ್ಪ ಅವರು ಹೇಳಿದ್ದಾರೆ. ಭಾರತೀಯ ಕುಟುಂಬ ವ್ಯವಸ್ಥೆಗಳಿಗೆ ಹೋಲಿಸಿದರೆ ಯುರೋಪ್ ದೇಶಗಳಲ್ಲಿ ಪಿತೃಪ್ರಧಾನ ಅಥವಾ ಮಾತೃಪ್ರಧಾನ ಎಂಬ ವ್ಯವಸ್ಥೆ ಇಲ್ಲ. ಇಲ್ಲಿ ಕುಟುಂಬ ಎಂದರೆ ಆ ದಿನದ ಮಟ್ಟಿಗೆ ಇರುವ ಗಂಡ-ಹೆಂಡತಿ ಹಾಗೂ ಇದ್ದರೆ ಮಕ್ಕಳು ಅಷ್ಟೆ. ಜಿ. ಎಸ್. ಶಿವರುದ್ರಪ್ಪ ಅವರು ಹೇಳುವಂತೆ 'ಗಂಡ ಹೆಂಡತಿಯ ಸಂಬಂಧವು ಮನೆಯಿಂದ ನೂರು ಮೀಟರ್ ದೂರ ಹೋದ ಬಳಿಕ ಆಕೆ ಕನ್ಯೆ, ಈತ ಅವಿವಾಹಿತ' ಎನ್ನುವಷ್ಟು ಸಂಬಂಧಗಳು ಶಿಥಿಲಗೊಂಡಿವೆ. ಯುರೋಪಿನ ಸಮಾಜದಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗಲು ಈ ಕುಟುಂಬ ವ್ಯವಸ್ಥೆಯಲ್ಲಿನ ದುರ್ಬಲ ಕೌಟುಂಬಿಕ ವ್ಯವಸ್ಥೆಯೇ ಕಾರಣವಾಗಿದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

'ಒಂದು ಕನಸಿನ ಪಯಣ' ಕೃತಿಯು ಯುರೋಪಿನ ಸಮಾಜದ ಕೌಟುಂಬಿಕ ಸಂಬಂಧಗಳನ್ನು 'ಔಪಚಾರಿಕ ಸಂಬಂಧಗಳು' ಎಂದಿದೆ. ಅಂದರೆ ಕಾನೂನಿನ ಚೌಕಟ್ಟಿಗೆ ಕಟ್ಟುಬಿದ್ದ ಸಂಬಂಧಗಳಾಗಿವೆ. ಈ ಕೃತಿಯ ಅಭಿಪ್ರಾಯಕ್ಕೆ ಪೂರಕವಾಗಿ 'ಯೂರೋ ಅಮೆರಿಕದ ಇಣುಕು ನೋಟ' ಕೃತಿಯಲ್ಲಿ ವ್ಯಕ್ತವಾಗಿರುವ ಒಂದು ಸನ್ನಿವೇಶವನ್ನು ಇಲ್ಲಿ ಪ್ರಸ್ತಾಪಿಸಬಹುದು. ದೇವಕಿ ಮೂರ್ತಿ ಅವರು ಪ್ಯಾರಿಸ್ ನಗರದ ಪ್ರದಕ್ಷಿಣೆಗೆ ಹೊರಟಾಗ ಅಲ್ಲಿ ಪ್ರತಿಯೊಬ್ಬರೂ ಹೂಗುಚ್ಛಗಳನ್ನು ಕೊಂಡು ಹೋಗುತ್ತಿರುವ ದೃಶ್ಯವನ್ನು ನೋಡುತ್ತಾರೆ. ಕುತೂಹಲ ತಡೆಯಲಾರದೆ ಅಂಗಡಿಯವರ ಬಳಿ ವಿಚಾರಿಸಿದಾಗ ಆತ "ಇಂದು ನಾವು 'ಮದರ್ಸ್ ಡೇ' ಆಚರಿಸುತ್ತಿದ್ದೇವೆ. ಈ ದಿನ ನಮ್ಮ ತಾಯಿಯನ್ನು ಭೇಟಿ ಮಾಡಿ ವಾತ್ಸಲ್ಯದ ಕುರುಹಾಗಿ ಹೂಗುಚ್ಛದೊಂದಿಗೆ ಏನಾದರೂ ಉಡುಗೊರೆಯನ್ನು ಕೊಡುತ್ತೇವೆ. ಒಂದು ವೇಳೆ ತಾಯಿ ಈ ಊರಿನಲ್ಲಿ ಇಲ್ಲದಿದ್ದರೆ ಫೋನ್ ಮೂಲಕವಾದರೂ ಒಲವಿನ ಮಾತುಗಳನ್ನು ಆಡುತ್ತೇವೆ" (ದೇವಕಿ ಮೂರ್ತಿ, ಯೂರೋ ಅಮೆರಿಕದ ಇಣುಕು ನೋಟ, ಪು-೪೮,೪೯)ಎಂದು ಅಂದಿನ ದಿನದ ವಿಶೇಷತೆಯನ್ನು ಹೇಳುತ್ತಾನೆ. ಈ ಘಟನೆಯು ಯಾರೂ ತಮ್ಮ ತಂದೆ-ತಾಯಿಯರೊಂದಿಗೆ ಒಂದೇ ಕುಟುಂಬದಲ್ಲಿ ಇರುವುದಿಲ್ಲ; ತಮ್ಮ ಪ್ರಿಯಕರ, ಮಕ್ಕಳೊಂದಿಗಿನ ಚಿಕ್ಕ ಕುಟುಂಬದಲ್ಲಿ ಇರುವುದನ್ನು ಸೂಚಿಸುತ್ತದೆ. ಮಕ್ಕಳೊಂದಿಗೆ ಇರುವುದು ಕೂಡ ಅವರು ಪ್ರೌಢಾವಸ್ಥೆಗೆ ಬರುವವರೆಗೆ ಮಾತ್ರ. ಆ ನಂತರ ಮಕ್ಕಳು ಅವರ ದಾರಿಯನ್ನು ಅವರೇ ನೋಡಿಕೊಳ್ಳಬೇಕು. ಇಲ್ಲಿ ಪ್ರಾಕೃತಿಕ ತತ್ವಕ್ಕೆ ಅನುಗುಣವಾದ ಸಾಮಾಜಿಕ ಪದ್ಧತಿಯ ಅನುಸರಣೆಯನ್ನು ಗುರುತಿಸಬಹುದು. ತಂದೆ-ತಾಯಿಯನ್ನು ಭೇಟಿ ಮಾಡಲು ಒಂದು ದಿನವನ್ನು ಗೊತ್ತು ಮಾಡಿ 'ಮದರ್ಸ್ ಡೇ' ಎಂದು ಹೆಸರಿಸಿದ್ದಾರೆ. ಅಂದು ತಮ್ಮ ತಾಯಿಯನ್ನು ಸಾಕಿ ಬೆಳೆಸಿದಕ್ಕಾಗಿ ವಂದನೆಗಳನ್ನು ಸಲ್ಲಿಸುವ

ದಿನವಾಗಿ ಆಚರಿಸಲಾಗುತ್ತಿದೆ. ಈ ಬಗೆಯ ಆಚರಣೆಗಳು ಅಲ್ಲಿನ ಕೌಟುಂಬಿಕ ಸಂಬಂಧಗಳು ತುಂಬಾ ಫಾರ್ಮಲ್ ಆಗಿರುತ್ತದೆ ಎಂಬ ಅಭಿಪ್ರಾಯವನ್ನು ಪುರಸ್ಕರಿಸುತ್ತವೆ. ಹಾಗಾದರೆ ಸೋವಿಯತ್ ದೇಶದಲ್ಲಿ ಕೌಟುಂಬಿಕ ಸಂಬಂಧಗಳು ಔಪಚಾರಿಕವಾಗಿರಲು ಕಾರಣವೇನು? ಹಾಗೂ 'ಒಂದು ಕನಸಿನ ಪಯಣ' ಕೃತಿಯು ಆ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕಾರಣವೇನು? ಎಂಬುದನ್ನು ವಿಶ್ಲೇಷಿಸಿದಾಗ ಕೃತಿಯು ಸೋವಿಯತ್ ದೇಶದ ಸಮಾಜವಾದಿ ಆಡಳಿತದ ಬಗ್ಗೆ ಹೊಂದಿರುವ ನಕಾರಾತ್ಮಕ ಧೋರಣೆಯ ಕಾರಣದಿಂದ ಈ ಅಭಿಪ್ರಾಯ ವ್ಯಕ್ತವಾಗಿರುವ ಸಾಧ್ಯತೆಯಿರುವುದನ್ನು ಕಂಡುಕೊಳ್ಳಲಾಗಿದೆ.

ಸೋವಿಯತ್ ದೇಶಕ್ಕೂ ಫ್ರಾನ್ಸ್ ದೇಶಕ್ಕೂ ಸಾಮಾಜಿಕ ಪದ್ಧತಿಗಳಲ್ಲಿ ವ್ಯತ್ಯಾಸಗಳಿರುವುದನ್ನು ಕಾಣಲಾಗಿದೆ. ಸೋವಿಯತ್ ದೇಶದ ಕುಟುಂಬಗಳಲ್ಲಿ ಗಂಡ-ಹೆಂಡತಿಯ ಸಂಬಂಧವು ಕಾನೂನಿನ ಚೌಕಟ್ಟಿನಲ್ಲಿದೆ. ಫ್ರಾನ್ಸ್ ದೇಶದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಮಹತ್ವ ಇರುವುದರಿಂದ ಕುಟುಂಬದ ಪರಿಕಲ್ಪನೆಯೇ ಭಿನ್ನವಾಗಿರುವುದನ್ನು ಗುರುತಿಸಬಹುದು. ಆಯಾ ದೇಶದ ಆಡಳಿತ ಕ್ರಮಗಳು ಕುಟುಂಬದ ರಚನೆಯ ಮೇಲೆ ಪ್ರಭಾವ ಬೀರಿದೆ. ಯುರೋ-ದರ್ಶನ ಕೃತಿಯಲ್ಲಿಯೂ ಫ್ರಾನ್ಸ್ ದೇಶದ ಕುಟುಂಬ ವ್ಯವಸ್ಥೆಯ ಸಂಬಂಧಗಳಲ್ಲಿ ಅನಿಶ್ಚಿತತೆಗಳಿರುವುದನ್ನು ಉಲ್ಲೇಖಿಸಲಾಗಿದೆ. ಯುರೋ-ದರ್ಶನ ಕೃತಿಯು ವಿವರಿಸುವಂತೆ 'ಇಲ್ಲಿನ ಬಹುತೇಕ ದೇಶಗಳಲ್ಲಿ ಕುಟುಂಬಗಳು ಎಂದರೆ ಆ ಸಂದರ್ಭದಲ್ಲಿ ಕಣ್ಣಿಗೆ ಕಾಣುವ ಜೋಡಿಗಳಷ್ಟೆ. ಆ ಹೆಂಡತಿಗೆ ಈ ಗಂಡ ಎಷ್ಟನೇಯವನೋ ಆಗಿರುತ್ತಾನೆ, ಆ ಗಂಡನಿಗೆ ಈ ಹೆಂಡತಿ ಎಷ್ಟನೇಯವಳೋ ಆಗಿರುತ್ತಾಳೆ' ಎಂಬ ಅಭಿಪ್ರಾಯವು ಅನಿಶ್ಚಿತತೆಯನ್ನು, ಸುಸಂಸ್ಕೃತ ಸಂಬಂಧಗಳಿಲ್ಲ ಎಂಬ ಭಾವವನ್ನು ವ್ಯಕ್ತಪಡಿಸಿದೆ. ಇದು ಇಲ್ಲಿನ ಕುಟುಂಬಗಳ ವಾಸ್ತವ ಪರಿಸ್ಥಿತಿ. ಸ್ತ್ರೀಯರಿಂದ ರಚಿತವಾಗಿರುವ ಪ್ರವಾಸ ಕೃತಿಗಳಲ್ಲಿ ಗಂಡ-ಹೆಂಡತಿಯ ಸಂಬಂಧ ಪವಿತ್ರವಾದುದು, ಭಾರತೀಯ ಸಂಸ್ಕೃತಿಯು ಸಂಸ್ಕಾರಯುತವಾದುದು, ಸಾಂಪ್ರದಾಯಿಕ ಚೌಕಟ್ಟು ಉಳ್ಳದ್ದು ಎಂಬ ಸಾಂಪ್ರದಾಯಿಕ ಮನೋಧೋರಣೆ ವ್ಯಕ್ತವಾಗಿದೆ. ಈ ಅಭಿಪ್ರಾಯಗಳಿಗೆ ರಾಷ್ಟ್ರೀಯ ಪ್ರಜ್ಞೆ ಮತ್ತು ಭಾರತೀಯ ಸಂಸ್ಕೃತಿಯ ಬಗೆಗಿರುವ ಅಭಿಮಾನ ಕಾರಣವಾಗಿರುವುದನ್ನು ಗುರುತಿಸಲಾಗಿದೆ.

ಗ್ರೀಕ್ ದೇಶದ ಕೌಟುಂಬಿಕ ವ್ಯವಸ್ಥೆಯು ಯುರೋಪಿನ ಇತರ ದೇಶಗಳಂತೆ ಕೌಟುಂಬಿಕ ಬಂಧುರತೆ ಇಲ್ಲದಿರುವುದನ್ನು ಗುರುತಿಸಬಹುದು. 'ಯುರೋಪ್ ನೆನಪುಗಳು' ಕೃತಿಯಲ್ಲಿ ಗ್ರೀಕ್ ಸಮಾಜದ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿದೆ. ಲೇಖಕರು ಐತಿಹಾಸಿಕ ಸ್ಥಳದ ಉತ್ಖನನ ಕಾರ್ಯದಲ್ಲಿ ತೊಡಗಿದ್ದಾಗ ಮಾರ್ಗದರ್ಶಕರು ತಾಯಿಗೆ ಕೂಡಲೇ ಪತ್ರ ಬರೆಯುವಂತೆ ಆಗ್ರಹಿಸುತ್ತಾರೆ. ಮಾರ್ಗದರ್ಶಕರು ಅವರ ತಾಯಿಯನ್ನು ನೋಡಿ ಎರಡು ವರ್ಷಗಳೇ ಕಳೆದಿರುತ್ತವೆ. ಭಾರತದ ಕುಟುಂಬದಲ್ಲಿನ ಬಂಧುರತೆಯನ್ನು ಅರಿತ ಮಾರ್ಗದರ್ಶಕರು ತಾಯಿಗೆ ಪತ್ರ ಬರೆಯುವಂತೆ ಆಗ್ರಹಿಸಿದ್ದಾರೆ. ಈ ಘಟನೆಯಲ್ಲಿ ಲೇಖಕರಿಗೆ ತಮ್ಮ ಮಾರ್ಗದರ್ಶಕರು ಕುಟುಂಬದಲ್ಲಿನ ಬಂಧತೆ, ಏಕತೆ, ಪ್ರೀತಿಯನ್ನು ಬಯಸುವ ವ್ಯಕ್ತಿಯಾಗಿ ಗೋಚರಿಸಿದ್ದಾರೆ. ಕೃತಿಯು ಭಾರತೀಯ ಸಮಾಜದಲ್ಲಿನ ಅವಿಭಕ್ತ ಕುಟುಂಬಗಳ ಬಗ್ಗೆ ವಿದೇಶದಲ್ಲಿರುವವರಿಗೂ ತಿಳಿದಿರುವುದನ್ನು ಉಲ್ಲೇಖಿಸುವ ಇರಾದೆಯನ್ನು ಹೊಂದಿದೆ.

ಅಯನ ಕೃತಿಯು ಫ್ರಾನ್ಸ್ ದೇಶದ ಕುಟುಂಬದ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಒಂದು ದೃಶ್ಯವನ್ನು ಉಲ್ಲೇಖಿಸಿದೆ. ಲೇಖಕರು ಫ್ರಾನ್ಸಿನ ಸ್ನೇಹಿತರೊಂದಿಗೆ ಕಡಲತಡಿಯಲ್ಲಿ ವಾಯುವಿಹಾರ ಮಾಡುತ್ತಿದ್ದಾಗ "ಮುಸ್ಸಂಜೆಯಲ್ಲಿ ಮರಳಿನ ಮೇಲೆ ವೃದ್ಧನೊಬ್ಬ ಎಳೆ ಹುಡುಗಿಯನ್ನು ಭೋಗಿಸುತ್ತಿದ್ದ. ಜಾನ್-ಮೇರಿ

ಕಂಡು ಕಾಣದಂತೆ ನಡೆದರು. ನನಗೂ ಮುಜುಗರವಾಯಿತು. ಸದ್ದಿಲ್ಲದೆ ಕಾಲುಕಿತ್ತೆವು"(ನಾಗತಿಹಳ್ಳಿ ಚಂದ್ರಶೇಖರ್, ಅಯನ, ಪು-೭೦)ಎಂದಿದ್ದಾರೆ. ಯುರೋಪಿನ ದೇಶಗಳಲ್ಲಿ ಈ ಬಗೆಯ ಘಟನೆಗಳು ಸಾಮಾನ್ಯವಾಗಿದೆ. ಈ ಘಟನೆಯು ಯುರೋಪಿನ ಸಮಾಜದ ಕೌಟುಂಬಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಈ ಕಾರಣಕ್ಕಾಗಿ ಯುರೋಪಿನ ದೇಶಗಳಲ್ಲಿ ಕುಟುಂಬದ ಪರಿಕಲ್ಪನೆಯು ಸಂಕುಚಿತತೆಯನ್ನು ಪಡೆದುಕೊಳ್ಳುತ್ತವೆ. ಸಂಸಾರವೆಂಬುದು ಪ್ರಾಕೃತಿಕ ಅಗತ್ಯ ಅದನ್ನು ಹೇಗಾದರೂ ಪೂರೈಸಿಕೊಂಡರೆ ಆಯಿತು ಎನ್ನುವ ಧೋರಣೆ ಬೆಳೆದಿರುವಂತೆ ತೋರುತ್ತದೆ. ತಂದೆ-ತಾಯಿಯ ಆಶ್ರಯದಲ್ಲಿ ಇಲ್ಲದ ಯುವಕ-ಯುವತಿಯರು ಸ್ವೇಚ್ಛಾಚಾರದಿಂದ ಬದುಕುವುದನ್ನು ಕಾಣಲಾಗಿದೆ. ಹಣಕ್ಕಾಗಿ ಯಾವ ಕೀಳು ಕೆಲಸಕ್ಕೂ ಇಳಿಯುವ ಸಂಭವ ಇರುವುದನ್ನು ಗುರುತಿಸಲಾಗಿದೆ. ಈ ಬಗೆಯ ಬೆಳವಣಿಗೆಯಿಂದ ಯುರೋಪ್ ಸುಸ್ಥಿರವಲ್ಲದ ಸಮಾಜದ ಕಡೆಗೆ ಸಾಗುತ್ತಿದೆ ಎಂಬುದು ಹಲವು ಕೃತಿಗಳ ಅಭಿಪ್ರಾಯವಾಗಿದೆ.

ಮೇಲಿನ ಕೃತಿಗಳಲ್ಲಿ ಉಲ್ಲೇಖಿತಗೊಂಡಿರುವ ಅಭಿಪ್ರಾಯಗಳನ್ನು ತೌಲನಿಕ ದೃಷ್ಟಿಯಿಂದ ಗಮನಿಸಿದಾಗ ಸಾಮಾನ್ಯ ನಿಯಮವೊಂದು ಪಾಲಿತವಾಗಿರುವುದನ್ನು ಗುರುತಿಸಬಹುದು. ಸಮಾಜವು ಕುಟುಂಬಗಳೆಲ್ಲವೂ ಸೇರಿ ರೂಪಿತವಾಗಿದ್ದರೂ ಕೆಲವು ಒತ್ತಡಗಳಿಗೆ ಒಳಗಾಗಿ ಸ್ವತಃ ತಾನೆ ರಚನೆಯನ್ನು ಕಂಡುಕೊಂಡಿರುತ್ತದೆ. ಪ್ರಭುತ್ವದ ಪ್ರಭಾವವು ಪ್ರಾದೇಶಿಕವಾಗಿ ವೈವಿಧ್ಯತೆಗೆ ಕಾರಣವಾಗಿದೆ. ಲೇಖಕರು ತಮ್ಮ ವೈಯಕ್ತಿಕ ನಿಲುವುಗಳ ಅನುಸಾರ ಸಮಾಜವನ್ನು ಚಿತ್ರಿಸಿದ್ದಾರೆ.

ವಿವಾಹ : ಯುರೋಪಿನ ದೇಶಗಳಲ್ಲಿ ವಿವಾಹಗಳು ಸಾಮೂಹಿಕ ಆಚರಣೆಯಾಗಿ ಪರಿಗಣಿತವಾಗಿಲ್ಲ ಎಂಬುದು ಪ್ರವಾಸ ಕೃತಿಗಳ ಧೋರಣೆಯಾಗಿದೆ. ಕೌಟುಂಬಿಕ ನೆಲೆಯಲ್ಲಿಯೇ ಸರಳ ಆಚರಣೆಗಳನ್ನು ಹೊಂದಿದ್ದರೂ ಹೆಚ್ಚು ವೈಯಕ್ತಿಕ ನೆಲೆಯಿಂದಲೇ ಕೂಡಿರುತ್ತದೆ. ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿನಿಧಿಸುತ್ತವೆ. ಭಾರತೀಯ ವಿವಾಹ ಪದ್ಧತಿಗಳು ಸಾಮೂಹಿಕ ಆಚರಣೆಗಳಿವೆ. ಸಮುದಾಯದ ಪಾಲ್ಗೊಳ್ಳುವಿಕೆಯನ್ನು ನಿರೀಕ್ಷಿಸುತ್ತವೆ. ಕುಟುಂಬದ ಯಜಮಾನರು ಅಥವಾ ಆಯಾ ಜಾತಿಯ ಹಿರಿಯರು ವಿವಾಹ ಸಂಬಂಧಗಳನ್ನು ರೂಪಿಸುವಲ್ಲಿ ನಿರ್ಣಾಯಕರಾಗಿರುತ್ತಾರೆ. ಇಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅವಕಾಶ ಕಡಿಮೆ. ಭಾರತೀಯ ಸಮಾಜದಲ್ಲಿ ಸಾಂಪ್ರದಾಯಿಕ ವಿವಾಹ ಕಾರ್ಯಕ್ರಮಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಭಾರತದ ವಿವಿಧ ಪಂಗಡಗಳಲ್ಲಿ ವಿವಾಹ ಕ್ರಮಗಳು ಭಿನ್ನ ಭಿನ್ನವಾಗಿದ್ದರೂ ಅವುಗಳ ನಡುವೆ ಸಾಮ್ಯತೆಯ ಅಂಶಗಳಿವೆ. ಯುರೋಪಿನ ವಿವಾಹ ಪದ್ಧತಿಯನ್ನು ಭಾರತದ ವಿವಾಹ ಪದ್ಧತಿಯೊಂದಿಗೆ ಹೋಲಿಸಿ ನೋಡಿದಾಗ ಅನೇಕ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಯುರೋಪಿನಲ್ಲಿ ಮದುವೆ ಆಗಲು ಗಂಡು-ಹೆಣ್ಣಿಗೆ ಮುಕ್ತ ಸ್ವಾತಂತ್ರ್ಯ ಇರುತ್ತದೆ. ಭಾರತದ ಗಂಡು-ಹೆಣ್ಣಿಗೆ ತನ್ನ ಜೀವನದ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಪೂರ್ಣ ಸ್ವಾತಂತ್ರ್ಯ ಇರುವುದಿಲ್ಲ. ತಂದೆ- ತಾಯಿ ಬಂಧು-ಬಳಗಗಳು ಸಂಬಂಧವನ್ನು ಅನೇಕ ಮಾನದಂಡಗಳ ಮೂಲಕ ತೂಗಿ ನೋಡಿ ಎಲ್ಲಾ ಬಗೆಯಲ್ಲೂ ಸರಿ ಬಂದರೆ ಮದುವೆ ನಿಶ್ಚಯವಾಗುತ್ತದೆ. ವಿವಿಧ ಬಗೆಯ ಆಚರಣೆಗಳನ್ನು ಪಾಲನೆ ಮಾಡಲಾಗುತ್ತದೆ. ಕುಟುಂಬದ ನಿರ್ಣಯಗಳಿಗೆ ವಿರುದ್ಧವಾಗಿಯೂ ವಿವಾಹಗಳು ಜರುಗುತ್ತವೆ, ಆದರೆ ಆ ರೀತಿಯ ವಿವಾಹಗಳು ಸಮಾಜದಲ್ಲಿ ಮಾನ್ಯತೆಯನ್ನು ಪಡೆದುಕೊಳ್ಳುವುದಿಲ್ಲ.

ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ ಕೃತಿಯಲ್ಲಿ ಸೋವಿಯತ್ ದೇಶದ ವಿವಾಹ ಪದ್ಧತಿಗಳನ್ನು ವಿವರಿಸುತ್ತಾ 'ಹುಡುಗ ಹುಡುಗಿಯರು ಹದಿನೆಂಟು ವರ್ಷದ ನಂತರ ಸ್ವತಂತ್ರರು. ಇಲ್ಲಿ ವಿವಾಹಪೂರ್ವ ಲೈಂಗಿಕ ಸಂಬಂಧಗಳು ತೀರಾ ಸಾಮಾನ್ಯ. ಮದುವೆಗೆ ಮೊದಲು ಮಗುವಾದರೆ ಅಪರಾಧವಲ್ಲ, ಗರ್ಭಪಾತಕ್ಕೆ ಕಾನೂನು ಸಮ್ಮತವಿದೆ. ಮದುವೆಗೆ ಮೊದಲು ಮಗುವಾದರೆ ಆ ಮಗುವಿನ ಜವಾಬ್ದಾರಿ ಸರಕಾರದ್ದು. ಅದಕ್ಕಾಗಿ ಸಂರಕ್ಷಣಾಲಯಗಳಿವೆ' ಎಂದು ಉಲ್ಲೇಖಿಸಲಾಗಿದೆ. ಯುರೋಪಿನ ದೇಶದ ಈ ಜಗೆಯ ಸಾಮಾಜಿಕ ಒಪ್ಪಿತಗಳು ಮದುವೆ ಪದ್ಧತಿಯನ್ನು ತುಂಬಾ ಸರಳಗೊಳಿಸಿದೆ. ಭಾರತೀಯ ವಿವಾಹ ಕ್ರಮಗಳು ಇದಕ್ಕೆ ವ್ಯತಿರಿಕ್ತವಾಗಿವೆ. ಮದುವೆಗಳು ಹೆಣ್ಣು ಹೆತ್ತವರನ್ನು ಹೈರಾಣಾಗಿಸುವ ಕಾರ್ಯಕ್ರಮಗಳಾಗಿವೆ. ಸಮಾಜವು ಮದುವೆಗೆ ಮೊದಲು ಮಗುವಾಗುವುದನ್ನು ವಿರೋಧಿಸುತ್ತದೆ. ಮದುವೆಗೆ ಮೊದಲು ಮಗುವಾದರೆ ಆ ಮಗುವನ್ನು ಮತ್ತು ತಾಯಿಯನ್ನು ಭಾರತೀಯ ಸಮಾಜವು ನಿಕೃಷ್ಟವಾಗಿ ನೋಡುತ್ತದೆ. ವಿವಾಹಪೂರ್ವ ಲೈಂಗಿಕ ಸಂಬಂಧಗಳನ್ನು ಭಾರತೀಯ ಸಮಾಜವು ಅನೈತಿಕವೆಂದು ಪರಿಗಣಿಸುತ್ತದೆ. ಹೆಣ್ಣಿನ ಮೇಲಿನ ಶೀಲದ ಹೊರೆ, ಆರ್ಥಿಕ ಹೊರೆ ಹೆಚ್ಚಾಗಿರುವ ಕಾರಣದಿಂದಲೇ ತಂದೆ ತಾಯಿಯರು ಹೆಣ್ಣು ಮಗುವೇ ಬೇಡ ಎಂಬ ತೀರ್ಮಾನಕ್ಕೆ ಬರುವುದು ಸಾಮಾನ್ಯವಾಗಿದೆ. ಇದರಿಂದ ಹೆಣ್ಣು ಶಿಶು ಭ್ರೂಣ ಹತ್ಯೆಯ ಪ್ರಮಾಣ ಅಧಿಕವಾಗಿದೆ. ಹೆಣ್ಣು ಭ್ರೂಣ ಹತ್ಯೆಯ ಸಮಸ್ಯೆಯು ಮತ್ತೊಂದು ಸಮಸ್ಯೆಯ ಸೃಷ್ಟಿಗೆ ಕಾರಣವಾಗಿದೆ. ಗಂಡು ಮಗುವಿಗೆ ಬೇಡಿಕೆ ಹೆಚ್ಚಾದಂತೆ, ಹೆಣ್ಣು ಶಿಶು ಜನನದ ಪ್ರಮಾಣ ಕಡಿಮೆಯಾಗುತ್ತದೆ. ಸಮಾಜದಲ್ಲಿ ಲಿಂಗಾನುಪಾತದ ವ್ಯತ್ಯಯಕ್ಕೆ ಕಾರಣವಾಗಿದೆ. ಇದರಿಂದ ಸಮಾಜದಲ್ಲಿ ಪುರುಷರ ಸಂಖ್ಯೆಗೆ ಅನುಗುಣವಾಗಿ ಸ್ತ್ರೀಯರ ಸಂಖ್ಯೆ ಇರುವುದಿಲ್ಲ. ಸಮಾಜದಲ್ಲಿ ಸ್ತ್ರೀಯರ ಸಂಖ್ಯೆ ಗಣನೀಯವಾಗಿ ಇಳಿಮುಖವಾದಾಗ ಸಾಮಾಜಿಕ ಸಮತೋಲನವನ್ನು ಕಳೆದುಕೊಳ್ಳುತ್ತದೆ. ಭಾರತದಲ್ಲಿ ಸಾಮಾಜಿಕ ಸಮಸ್ಯೆಯ ಸೃಷ್ಟಿಗೆ ವಿವಾಹ ಪದ್ಧತಿಗಳು ಕಾರಣವಾಗಿರುವುದನ್ನು ಗುರುತಿಸಲಾಗಿದೆ. ಯುರೋಪಿನ ದೇಶಗಳಲ್ಲಿ ಈ ಸಮಸ್ಯೆಗಳು ಇಲ್ಲ ಎನ್ನುವಷ್ಟು ಕಡಿಮೆ ಇದೆ. ವಿವಾಹದ ಪದ್ಧತಿಗಳು ಸಮಾಜದ ರಚನೆಯಲ್ಲಿ ಮುಖ್ಯ ಪಾತ್ರ ವಹಿಸಿರುವುದನ್ನು ಗುರುತಿಸಲಾಗಿದೆ.

ಯುರೋಪಿನಲ್ಲಿ ಜಾತಿಯೇ ಇಲ್ಲ. ನಡೆಯುವ ಮದುವೆಗಳೆಲ್ಲಾ ಪ್ರೇಮ ವಿವಾಹಗಳೇ ಆಗಿರುತ್ತವೆ. ಭಾರತೀಯ ಸಮಾಜದಲ್ಲಿ ಸಜಾತಿ/ಸಧರ್ಮದಲ್ಲಿಯೇ ಮದುವೆ ನಡೆಯಬೇಕೆಂಬ ಸಾಮಾಜಿಕ ಕಟ್ಟುಪಾಡುಗಳಿವೆ. ಅಂತರ್‌ಜಾತಿಯ/ಅಂತರ್‌ಧರ್ಮೀಯ ವಿವಾಹಗಳು ಭಾರತೀಯ ಸಮಾಜದಲ್ಲಿ ಒಪ್ಪಿತವಾಗುವುದಿಲ್ಲ. ಸಮಾಜದ ಕಟ್ಟುಪಾಡುಗಳನ್ನು ಮೀರಿ ಅಂತರ್ಜಾತಿ/ಅಂತರ್‌ಧರ್ಮೀಯ ಮದುವೆಗಳು ನಡೆದಿದ್ದರೂ ಹೆಚ್ಚಿನ ಸಂದರ್ಭಗಳಲ್ಲಿ ಅವು ಬಹಿಷ್ಕೃತವಾಗಿರುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಗಂಡು–ಹೆಣ್ಣಿನ ಕಟುಂಬ ವರ್ಗದವರೇ ಜಾತಿಯಿಂದ ಬಹಿಷ್ಕಾರ ಹಾಕುವಂತೆ ಒತ್ತಾಯಿಸಿರುವುದು ಕಂಡುಬರುತ್ತದೆ. ಮತ್ತು ಅಂತಹ ಜೋಡಿಗಳು ಕುಟುಂಬದ ವಿರೋಧವಿಲ್ಲದೆ ಒಪ್ಪಿಗೆ ಪಡೆದಿರುವುದು ಅಪರೂಪವಾಗಿದೆ. ಕೆಲವು ಸಮಾಜದ ಮುಖಂಡರು ನಮ್ಮ ಜಾತಿಯ ಮಾನ ಹರಾಜಾಯಿತು ಎಂದು ಅವರನ್ನು ಸಾರ್ವಜನಿಕವಾಗಿ ಜರೆಯುತ್ತಾರೆ. ಅಂತರಜಾತಿ ವಿವಾಹ ಮಾಡಿಕೊಂಡ ಜೋಡಿಗಳನ್ನು ಕೊಂದು ಹಾಕುವ ಮಟ್ಟಕ್ಕೆ ನಮ್ಮ ಸಮಾಜದ ಕಟ್ಟುಪಾಡುಗಳು ಇಂದು ಜಾತಿಪ್ರೇರಿತವಾಗಿವೆ. ಉಚ್ಚ ಜಾತಿಯ ಹೆಣ್ಣನ್ನು ಕೆಳ ಜಾತಿಯವನು

ವರಿಸುವಂತಿಲ್ಲ. ಇದೇ ಮೊದಲಾದ ಸಾಮಾಜಿಕ ಅಲಿಖಿತ ಕಾನೂನುಗಳು ಭಾರತದಲ್ಲಿ ವಿವಾಹ ಪದ್ಧತಿಯನ್ನು ದುಬಾರಿಗೊಳಿಸಿದೆ.

ವಿವಾಹಗಳ ಆಚರಣೆಯ ಕ್ರಮಗಳಿಗೂ ಸಾಮಾಜಿಕ ಸಮಸ್ಯೆಗಳಿಗೂ ನೇರ ಸಂಬಂಧವಿದೆ. ಯುರೋಪಿನ ದೇಶಗಳಲ್ಲಿ ವರದಕ್ಷಿಣೆ ಪದ್ಧತಿ, ಬಾಲ್ಯ ವಿವಾಹ, ವಿಧವಾ ಪದ್ಧತಿ, ಮೊದಲಾದ ಪಿಡುಗುಗಳು ಇಲ್ಲದಿರಲು ಅಲ್ಲಿನ ಸರಳ ವಿವಾಹ ಪದ್ಧತಿಗಳೇ ಕಾರಣವಾಗಿದೆ.

ಸರಳ ವಿವಾಹ ಪದ್ಧತಿ : ಬಹುತೇಕ ಯುರೋಪಿನ ಎಲ್ಲಾ ದೇಶಗಳಲ್ಲೂ ಮದುವೆ ನಡೆಯುವ ಕ್ರಮಗಳಿಗೆ ಸಂಬಂಧಿಸಿದಂತೆ ಸರಳವಾಗಿರುತ್ತದೆ. ಭಾರತದಲ್ಲಿ ಮದುವೆಗಳು ನಡೆಯುವುದೆಂದರೆ ಅದು ಸಮಯ ಮತ್ತು ಹಣದ ಅಪವ್ಯಯ ಎಂದು ಸರಳವಾಗಿ ಅರ್ಥೈಸಬಹುದು. 'ಇಂಗ್ಲೆಂಡಿನಲ್ಲಿ ಚತುರ್ಮಾಸ' ಕೃತಿಯಲ್ಲಿ 'ಇಂಗ್ಲೆಂಡಿನವರು ಮದುವೆ ಮಾಡಲು ಜಾತಕ ಫಲಗಳನ್ನು ನೋಡುವುದಿಲ್ಲ. ದಿನ, ವಾರ, ತಿಥಿ, ನಕ್ಷತ್ರಗಳ ಗೋಜಲುಗಳು ಇರುವುದಿಲ್ಲ. ಒಂದು ಭಾನುವಾರ ಚರ್ಚಿನಲ್ಲಿ ಮುಂದಾಗಿ ತಿಳಿಸಿದರೆ ಆಯಿತು. ಗಂಡು-ಹೆಣ್ಣಿನ ಕಡೆಯವರು ಚರ್ಚಿಗೆ ಹೋಗಿ ಉಂಗುರವನ್ನು ಬದಲಾಯಿಸಿಕೊಂಡರೆ ಮದುವೆ ಆಗಿ ಬಿಡುತ್ತದೆ. ತಮಗೆ ಇಷ್ಟವಾದ ಹುಡುಗನನ್ನು ಆರಿಸಿಕೊಳ್ಳಲು ಇಲ್ಲಿ ಹೆಣ್ಣಿಗೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಕೌಟುಂಬಿಕ ನೆಲೆಯಲ್ಲಿ ದುರ್ಬಲ ಎನಿಸುವ ಯುರೋಪಿನ ಸಾಮಾಜಿಕ ಪದ್ಧತಿಗಳು ವ್ಯಕ್ತಿ ಸ್ವಾತಂತ್ರಕ್ಕೆ ಮುಕ್ತವಾದ ಅವಕಾಶವನ್ನು ಕಲ್ಪಿಸಿದೆ' ಎಂದು ವಿವರಿಸಲಾಗಿದೆ. ಇದಕ್ಕೆ ಉದಾಹರಣೆಯಾಗಿ ಷೇಕ್ಸ್‌ಪಿಯರ್ ಹದಿನೆಂಟನೇ ವಯಸ್ಸಿನಲ್ಲಿ ತನಗಿಂತ ಎಂಟು ವರ್ಷ ಹಿರಿಯವಳಾಗಿದ್ದ ಅನ್ನೆ ಹಾಥ್‌ವೇಯನ್ನು ಮದುವೆಯಾಗಿದ್ದು, ಆಗ ಅನ್ನೆ ಹಾಥ್‌ವೇ ಮೂರು ತಿಂಗಳ ಗರ್ಭಿಣಿಯಾಗಿದ್ದ ಘಟನೆಯನ್ನು ಉಲ್ಲೇಖಿಸಿದೆ. ಇಂಗ್ಲೆಂಡ್ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಇದೊಂದು ಸಾಮಾನ್ಯ ಘಟನೆಯಾಗಿದೆ.

ಸೋವಿಯತ್ ದೇಶ ಕಂಡೆ ಕೃತಿಯಲ್ಲಿ ಮದುವೆಯ ಕ್ರಮಗಳ ಬಗ್ಗೆ ಹೀಗೆ ದಾಖಲಿಸಲಾಗಿದೆ. 'ಸೋವಿಯತ್ ದೇಶದಲ್ಲಿ ಸರಳ ವಿವಾಹ ಪದ್ಧತಿ ಇದೆ. ಗಂಡು-ಹೆಣ್ಣು ಮೆರೆವಣಿಗೆ ಮೂಲಕ ಸಾಂಸ್ಕೃತಿಕ ಭವನಕ್ಕೆ ತೆರಳುತ್ತಾರೆ. ಅಲ್ಲಿ ಮದುವೆಯ ರಿಜಿಸ್ಟರ್‌ನಲ್ಲಿ ಸಹಿ ಮಾಡುವ ಮೂಲಕ ಇಬ್ಬರೂ ಸತಿ-ಪತಿಗಳಾಗುತ್ತಾರೆ' ಎಂದಿದ್ದಾರೆ. ಇಲ್ಲಿನ ಮದುವೆ ಪದ್ಧತಿಯ ಪ್ರಕಾರ ಮದುವೆಯಾದ ಬಳಿಕ ಆ ಊರಿನ ವೀರನ ಸಮಾಧಿಯ ಬಳಿ ಹೋಗಿ ಅಲ್ಲಿ ಪುಷ್ಪಗುಚ್ಚ ಇರಿಸಿ ನಮನ ಸಲ್ಲಿಸಲಾಗುತ್ತದೆ. ಯುರೋಪಿನ ಸಂಪ್ರದಾಯದಲ್ಲಿ ಮದುವೆಯ ತರುವಾಯ ವೀರನ ಸಮಾಧಿಗೆ ನಮಸ್ಕರಿಸುವ ಆಚರಣೆಯ ಹಿನ್ನೆಲೆಯನ್ನು ಗಮನಿಸಿದರೆ ಭಾರತೀಯ ಸಂಪ್ರದಾಯದ ಕೆಲವು ಪದ್ಧತಿಗಳೊಂದಿಗೆ ಹೋಲಿಕೆಯಾಗುತ್ತದೆ. ಹಿಂದೂ ಪದ್ಧತಿಯಲ್ಲಿ ಮದುವೆಯಾದ ಬಳಿಕ ಸಮಾಧಿಗೆ ಹೋಗುವುದು ನಿಷಿದ್ಧ. ನಮ್ಮಲ್ಲಿ ಹಿರಿಯರ ಆಶೀರ್ವಾದವನ್ನು ಪಡೆಯಲಾಗುತ್ತದೆ. ಅವರ ಕಾಲಿಗೆ ನಮಸ್ಕರಿಸುವ ಮೂಲಕ ಆಶೀರ್ವಾದವನ್ನು ಪಡೆಯುವ ಸಂಪ್ರದಾಯ ಆಚರಣೆಯಲ್ಲಿದೆ. ಕೆಲವು ಹಿಂದೂ ಧರ್ಮದ ಪಂಗಡಗಳಲ್ಲಿ ತಮ್ಮ ಮನೆಯ ದಿವಂಗತರಾದ ವ್ಯಕ್ತಿಗಳ ಭಾವಚಿತ್ರಕ್ಕೆ ನಮಸ್ಕರಿಸುವ ಪದ್ಧತಿ ಇದೆ. ಮುಸ್ಲಿಂ ಮತ್ತು ಸಿಖ್ ಧರ್ಮದಲ್ಲಿ ತಮ್ಮ ಧರ್ಮ ಗುರುಗಳ ಸಮಾಧಿಗಳ ಮುಂದೆಯೇ ವಿವಾಹ ಕಾರ್ಯಕ್ರಮ ಜರುಗುವ ಸಂಪ್ರದಾಯವಿದೆ. ಅಥವಾ ಮದುವೆಯ ತರುವಾಯ ಧರ್ಮ ಗುರುಗಳ ಸಮಾಧಿಗಳ ಬಳಿಗೆ ಹೋಗಿ ಆಶೀರ್ವಾದ ಪಡೆಯಲಾಗುತ್ತದೆ.

ಈ ನೆಲೆಯಲ್ಲಿ ಮದುವೆಯ ಕ್ರಮಗಳಲ್ಲಿ ವೈವಿಧ್ಯತೆಗಳಿರುವುದನ್ನು ಕಾಣಬಹುದು. ಭಾರತದಲ್ಲಿ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ, ಧರ್ಮದಿಂದ ಧರ್ಮಕ್ಕೆ ವಿವಾಹ ಪದ್ಧತಿಗಳ ಆಚರಣೆಗಳಲ್ಲಿ ಭಿನ್ನತೆಗಳಿವೆ. ಯುರೋಪಿನ ದೇಶಗಳಲ್ಲಿನ ವಿವಾಹ ಪದ್ಧತಿಗಳಲ್ಲಿ ಹೆಚ್ಚು ಭಿನ್ನತೆಗಳಿಲ್ಲದಿರುವುದನ್ನು ಪ್ರವಾಸ ಕೃತಿಗಳು ಉಲ್ಲೇಖಿಸಿವೆ.

ಅಯನ ಕೃತಿಯು ಭಾರತದಲ್ಲಿ ಕೆಲವೊಮ್ಮೆ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಮದುವೆ ನಡೆಯುವಂತೆ ಫ್ರಾನ್ಸ್ ದೇಶದಲ್ಲಿ ನಡೆಯುವ ಒಂದು ಸರಳ ವಿವಾಹ ಪದ್ಧತಿಯ ಬಗ್ಗೆ ಉಲ್ಲೇಖಿಸಿದೆ. ಪ್ಯಾರಿಸ್ ನಗರದ ನಗರಸಭೆಯ ಪ್ರಥಮ ಪ್ರಜೆ ಮೇಯರ್ ಮದುವೆ ಮಾಡಿಸುವ ವಿಶೇಷ ಹಕ್ಕನ್ನು ಹೊಂದಿರುತ್ತಾನೆ. ಯಾರಿಗೆ ಧಾರ್ಮಿಕವಾಗಿ ಚರ್ಚಿನಲ್ಲಿ ಮದುವೆ ಆಗಲು ಇಚ್ಛೆಪಡುವುದಿಲ್ಲವೋ ಅವರಿಗೆ ಮೇಯರ್ ಸರಳವಾಗಿ ನಗರಸಭೆಯ ವಿಶೇಷ ಕೊಠಡಿಯಲ್ಲಿ ಮದುವೆ ಮಾಡಿಸುವ ಅಧಿಕಾರವನ್ನು ಹೊಂದಿದ್ದಾನೆ. ಮೇಯರ್ ಮದುವೆಗೆ ಮೊದಲು ಅವರಿಬ್ಬರ ಒಪ್ಪಿಗೆ ಪಡೆದ ಬಳಿಕ ನಗರಸಭೆಯ ಲಾಂಛನ ಉಳ್ಳ ಒಂದು ಪದಕವನ್ನು ತಮ್ಮ ಕೊರಳಿಗೆ ಹಾಕಿಕೊಂಡು ಮದುವೆ ಮಾಡಿಸಿ ಪ್ರಮಾಣಪತ್ರವನ್ನು ನೀಡುತ್ತಾನೆ. ಮೇಯರ್ ಇಲ್ಲಿ ಪುರೋಹಿತನಾಗುವುದು ವಿಶೇಷವಾಗಿದೆ.

ಈ ಘಟನೆಯು ಯುರೋಪಿನ ಜನರು ದೇವರ ಮೇಲಿನ ನಂಬಿಕೆಯಿಂದ ವಿಮುಖರಾಗುತ್ತಿರುವ ಸಂಗತಿಯನ್ನು ಸೂಚಿಸುತ್ತದೆ. ಹೆಣ್ಣು–ಗಂಡಿನ ಸಂಬಂಧ ಶಾಶ್ವತವಲ್ಲ, ಅದು ಬದಲಾಗುತ್ತಿರುತ್ತದೆ ಎಂಬ ಧೋರಣೆಯು ಹೊಸ ಮದುವೆ ಪದ್ಧತಿಗಳಿಗೆ ಕಾರಣವಾಗಿದೆ. ಸಾಮಾಜಿಕ ಬದುಕು ಸರಳತೆಯ ಕಡೆಗೆ ಸಾಗುತ್ತಿರುವುದು, ಕೌಟುಂಬಿಕ ವಿಘಟನೆಗಳು ಹೆಚ್ಚಾಗುತ್ತಿರುವುದು ಮತ್ತು ಮದುವೆಯನ್ನು ಧಾರ್ಮಿಕ ಚೌಕಟ್ಟಿನ ಆಚೆ ನೋಡುವ ಪ್ರವೃತ್ತಿಗಳು ಆಧುನಿಕತೆಯ ಪರಿಣಾಮವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

'ಪಶ್ಚಿಮ ಮುಖಿ' ಕೃತಿಯಲ್ಲಿ ಸ್ಪೈನ್ ದೇಶದ ಬಾರ್ಸಿಲೋನಾದಲ್ಲಿ ನಡೆದ ವಿವಾಹ ಪದ್ಧತಿಯ ಕ್ರಮಗಳ ಕುರಿತು 'ಒಂದು ಮದುವೆಗೆ ಹೋಗುವುದೆಂದರೆ ಕನಿಷ್ಟ ಇನ್ನೂರು ಯುರೋ ಖರ್ಚು ಆಗುತ್ತದೆ. ಏಕೆಂದರೆ ಮದುವೆಗೆ ಹೋದವರೇ ಭೋಜನದ ಖರ್ಚನ್ನು ಭರಿಸಬೇಕು. ಜೊತೆಗೆ ಗಂಡು–ಹೆಣ್ಣಿಗೆ ಕಡ್ಡಾಯವಾಗಿ ಉಡುಗೊರೆಯನ್ನು ನೀಡಬೇಕು. ಆದ್ದರಿಂದ ಮದುವೆಗೆ ತೆರಳುವವರ ಸಂಖ್ಯೆ ಕಡಿಮೆ' ಎಂದು ಉಲ್ಲೇಖಿಸಲಾಗಿದೆ. ಯುರೋಪಿನ ಇತರ ದೇಶಗಳಿಗೆ ಹೋಲಿಸಿದರೆ ಸ್ವಲ್ಪ ಭಿನ್ನವಾಗಿದೆ. ವಿವಾಹ ಪದ್ಧತಿಗಳಲ್ಲಿ ವ್ಯತ್ಯಾಸಗಳಿಲ್ಲ. ವಿವಾಹ ನಡೆಯುವ ಕ್ರಮದಲ್ಲಿ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಪ್ರಾದೇಶಿಕವಾಗಿ ವಿವಾಹದ ಕ್ರಮಗಳಲ್ಲಿ ಭಿನ್ನತೆಗಳಿರುವುದು ಸಾಮಾನ್ಯವಾಗಿದೆ. ಮುಂದುವರೆದು 'ಮದುವೆಯಾದ ಬಳಿಕ ವಿಚ್ಛೇದನ ತೆಗೆದುಕೊಳ್ಳಬೇಕಾದರೆ ಅವರ ಒಟ್ಟು ಆಸ್ತಿಯನ್ನು ಎರಡು ಪಾಲು ಮಾಡಿ ತಲಾ ಅರ್ಧ ಹಂಚಲಾಗುತ್ತದೆ. ಮದುವೆಯಾಗಲು ಹೆಚ್ಚು ವೆಚ್ಚಗಳಿಲ್ಲದಿದ್ದರೂ, ವಿಚ್ಛೇಧನೆ ತೆಗೆದುಕೊಳ್ಳುವ ಸಂದರ್ಭ ಒದಗಿದಾಗ ಹೆಚ್ಚು ನಷ್ಟವನ್ನು ಅನುಭವಿಸಬೇಕಾಗಬಹುದು. ಆದ್ದರಿಂದ ಹಲವು ಜೋಡಿಗಳು ಮದುವೆಯೇ ಆಗದೆ ಜೊತೆಯಾಗಿ ಇರುತ್ತಾರೆ. ಇದು ಕಾನೂನು ಚೌಕಟ್ಟಿನ ಆಚೆಯ ಸಂಬಂಧಗಳು ಹೆಚ್ಚಾಗುವುದಕ್ಕೆ ಕಾರಣವಾಗಿದೆ' ಎಂದು ಉಲ್ಲೇಖಿಸಿದೆ. ವಿವಾಹ ಕ್ರಮಗಳು ಯುರೋಪಿನಲ್ಲಿ ಅನುಕೂಲಗಳ ನೆಲೆಯಲ್ಲಿ, ಒಪ್ಪಿತವಾದ ಕ್ರಮದಲ್ಲಿ ನಡೆಯುತ್ತಿದೆ. ಹೀಗೆಯೇ ನಡೆಯಬೇಕೆಂಬ ಜಿದ್ದುತನ ಕಂಡುಬರುವುದಿಲ್ಲ. ಪ್ರಮುಖವಾಗಿ ವಿವಾಹಗಳು ಯಾರಿಗೂ ಸಮಾಜಕ್ಕೆ ಒಪ್ಪಿತವಾಗಿ ನಡೆಯಬೇಕೆಂಬ ಇರಾದೆ ಕಂಡುಬರುವುದಿಲ್ಲ. ವಿವಾಹ ಕ್ರಮಗಳು ಪ್ರದೇಶದಿಂದ ಪ್ರದೇಶಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ

ಬದಲಾಗುತ್ತಿದೆ. ವೈವಾಹಿಕ ಸಂಬಂಧಗಳಲ್ಲಿ ಅನುಸರಿಸಲಾಗುವ ಸಾಮಾಜಿಕವಾಗಿ ನಿಯಮಗಳಲ್ಲಿ ಮುಕ್ತತೆಯನ್ನು ಗುರುತಿಸಬಹುದಾಗಿದೆ.

ಯುರೋಪಿನ ಸರಳ ವಿವಾಹ ಪದ್ಧತಿಯು ಕುವೆಂಪು ಅವರ 'ಮಂತ್ರ ಮಾಂಗಲ್ಯ' ಪರಿಕಲ್ಪನೆಯೊಂದಿಗೆ ಹೋಲುತ್ತದೆ. ಭಾರತದಲ್ಲಿ ಮದುವೆಗಳು ತುಂಬಾ ದುಬಾರಿ ಖರ್ಚನ್ನು ನಿಭಾಯಿಬೇಕಾದ ಮಟ್ಟಕ್ಕೆ ಬೆಳೆಯುತ್ತಿದೆ. ಸಾಮಾಜಿಕ ಸ್ಥಾನಮಾನ, ಗೌರವಕ್ಕಾಗಿ, ಪ್ರೆಸ್ಟೀಜ್‌ಗಾಗಿ ಇಂದು ಮದುವೆಗಳು ಲಕ್ಷ/ಕೋಟಿಯ ಲೆಕ್ಕದಲ್ಲಿ ನಡೆಯುತ್ತಿದೆ. ಇದರಿಂದ ತೊಂದರೆಗೆ ಒಳಗಾದವರೆಂದರೆ ಮಧ್ಯಮ ವರ್ಗದ ಜನರು. ತಮ್ಮ ಶಕ್ತಿ ಮೀರಿ ಖರ್ಚು ಮಾಡಿ ಸಾಲದ ಶೂಲಕ್ಕೆ ಸಿಲುಕಿ ಜೀವವನ್ನೆ ಕಳೆದುಕೊಳ್ಳುವ ಪರಿಸ್ಥಿತಿಗೆ ಬರುವಂತಾಗಿದೆ. ಮದುವೆಗಳು ತಮ್ಮ ಸ್ಟೇಟಸ್‌ನ್ನು ತಮ್ಮ ಬಂಧುಗಳಿಗೆ ತೋರಿಸುವ ವೇದಿಕೆ ಎಂಬಂತೆ ಬದಲಾಗಿರುವುದೇ ಈ ದುಬಾರಿ ಮದುವೆಗಳಿಗೆ ಕಾರಣವಾಗಿದೆ. ಆದ್ದರಿಂದ ಕುವೆಂಪು ಅವರ ಆಶಯದಂತೆ ಸರಳ ಮತ್ತು ಸಾಮೂಹಿಕ ವಿವಾಹ ಪದ್ಧತಿಗಳನ್ನು ಪ್ರಚುರಗೊಳಿಸುವ ಇರಾದೆಯನ್ನು ಪ್ರವಾಸ ಕೃತಿಯಲ್ಲಿ ಕಾಣಲಾಗಿದೆ.

ವೃದ್ಧಾಶ್ರಮಗಳು : ಸಮಾಜದ ಭಾಗವಾಗಿ ಕುಟುಂಬವನ್ನು ವಿಶ್ಲೇಷಿಸುವಾಗ ವೃದ್ಧರು ಮತ್ತು ವೃದ್ಧಾಶ್ರಮಗಳ ಚರ್ಚೆ ಮುನ್ನೆಲೆಗೆ ಬರುತ್ತದೆ. ಯುರೋಪಿನ ಕುಟುಂಬಗಳಲ್ಲಿ ಭಾರತೀಯ ಕುಟುಂಬಗಳಂತೆ ಬಂಧವಿಲ್ಲ. ಅಣು ಕುಟುಂಬಗಳೇ ಹೆಚ್ಚು ಎಂಬುದು ಅನೇಕ ಕೃತಿಗಳ ಅಭಿಪ್ರಾಯವಾಗಿದೆ. ಹಾಗಾಗಿ ಯುರೋಪಿನ ಕುಟುಂಬಗಳಲ್ಲಿ ವೃದ್ಧರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೆಚ್ಚಿನ ಸಂದರ್ಭಗಳಲ್ಲಿ ಕುಟುಂಬದ ಇತರ ಸದಸ್ಯರು ವಹಿಸಿಕೊಳ್ಳುವುದಿಲ್ಲ. ಹಾಗಾಗಿ ವೃದ್ಧರು ತಮ್ಮ ಜೀವನದ ಅಂತಿಮ ದಿನಗಳನ್ನು ಅನಿವಾರ್ಯವಾಗಿ ವೃದ್ಧಾಶ್ರಮಗಳಲ್ಲಿ ಕಳೆಯಬೇಕಾಗುತ್ತದೆ' ಯುರೋಪ್ ಪ್ರವಾಸ ಕೃತಿಗಳೂ ವೃದ್ಧರ ಬಗ್ಗೆ ವೃದ್ಧಾಶ್ರಮಗಳ ಬಗ್ಗೆ ಚರ್ಚಿಸಿ ಇದೇ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ. ಅವುಗಳನ್ನು ಆಧರಿಸಿ ಅವುಗಳಲ್ಲಿ ವ್ಯಕ್ತವಾದ ಸಂವೇದನೆಗಳ ನೆಲೆಯಲ್ಲಿ ಸಾಮಾಜಿಕ ಜೀವನದ ಚಿತ್ರಣವನ್ನು ವಿಮರ್ಶಿಸಲಾಗಿದೆ.

ಯುರೋ-ದರ್ಶನ ಕೃತಿಯಲ್ಲಿ 'ಕುಟುಂಬಗಳಲ್ಲಿ ಏಕತೆ ಇರದ ಕಾರಣದಿಂದ ಯುರೋಪಿನಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗಿದೆ' ಎಂದು ಉಲ್ಲೇಖಿಸಲಾಗಿದೆ. ಭಾರತೀಯ ಕುಟುಂಬಗಳಲ್ಲಿ ಹಿರಿಯರನ್ನು ನೋಡಿಕೊಳ್ಳುವ ಪರಿಪಾಠವಿದೆ ಎಂಬುದನ್ನು ಒಪ್ಪುತ್ತಾ, ಈ ದೃಷ್ಟಿಯಲ್ಲಿ ಯುರೋಪಿನ ಕುಟುಂಬಗಳಿಗಿಂತ ಭಾರತೀಯ ಕುಟುಂಬಗಳು ಉತ್ತಮ ಎಂತಲೂ, ಸಂಬಂಧಗಳಿಗೆ ಹೆಚ್ಚು ಬೆಲೆ ನೀಡುವ ಭಾವನಾ ಜೀವಿಗಳೆಂದು ಕೃತಿಯು ನಿರೂಪಿಸುವ ಇರಾದೆಯನ್ನು ಹೊಂದಿದೆ.

ಅಯನ ಕೃತಿಯಲ್ಲಿ ವೃದ್ಧಾಶ್ರಮಗಳ ಬಗ್ಗೆ ವಿವೇಚಿಸುತ್ತಾ 'ಎಲ್ಲಾ ದೇಶಗಳಲ್ಲಿಯೂ ವೃದ್ಧರ ಪಾಡು ಒಂದೇ, ವೃದ್ಧಾಪ್ಯದ ಬದುಕಿನ ಸಂಕಟ, ಹೋರಾಟಗಳು ಎಲ್ಲೆಡೆಯೂ ಸಮಾನ' ಎಂಬ ಧೋರಣೆಯನ್ನು ವ್ಯಕ್ತಪಡಿಸಿದೆ. ಇದು ವಿಚಾರಪರವಾದ ಅಭಿಪ್ರಾಯವಾಗಿದೆ. ದುಡಿಮೆಯು ಗೌರವವನ್ನು ಗಳಿಸಿಕೊಡುತ್ತದೆ. ದುಡಿಮೆಯಿಲ್ಲದ ಅವಲಂಬಿತ ಬದುಕು ಪ್ರಪಂಚದ ಯಾವುದೇ ದೇಶಕ್ಕೆ ಹೋದರೂ ಕನಿಷ್ಟ ಪ್ರೀತಿಗೂ ಪಾತ್ರವಾಗುವುದಿಲ್ಲ ಎಂಬ ವಿಚಾರ ಪ್ರಚೋದಕ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಅಯನ ಕೃತಿಯು ಪ್ರಪಂಚದ ಎಲ್ಲಾ ವೃದ್ಧರ ಪಾಡು ಒಂದೇ ಎಂದು ಹೇಳಿದ್ದರೂ ಫ್ರಾನ್ಸಿನ ಮತ್ತು ಭಾರತೀಯ ವೃದ್ಧರ ನಡುವೆ ವ್ಯತ್ಯಾಗಳನ್ನು ಗುರುತಿಸುತ್ತದೆ. ಇಳಿವಯಸ್ಸಿನಲ್ಲಿಯೂ ಲಿಪ್ಸ್ಟಿಕ್ ಹಚ್ಚಿಕೊಂಡು ಶುಭ್ರವಾದ ಬಟ್ಟೆತೊಟ್ಟು ಬಂದ ಮುದುಕಿಯನ್ನು ಕಂಡು ಭಾರತೀಯ ವೃದ್ಧರೊಂದಿಗೆ ಹೋಲಿಸಿ ಮುದಿತನದ ವಯಸ್ಸಿನಲ್ಲಿಯೂ ಸುಂದರವಾಗಿ ಕಾಣಬೇಕೆಂಬ ಜೀವನ ಪ್ರೀತಿಯನ್ನು ಇಟ್ಟುಕೊಂಡಿರುವ ಸಂಗತಿಯನ್ನು ಆಧರಿಸಿ ಭಾರತೀಯ ವೃದ್ಧರಲ್ಲಿ 'ಜೀವನ ಪ್ರೀತಿ' ಕಡಿಮೆ, ಯುರೋಪಿನ ವೃದ್ಧರಲ್ಲಿ ಹೆಚ್ಚು ಎಂದು ವಿಶ್ಲೇಷಿಸಿದೆ. ಕೃತಿಯಲ್ಲಿ ಲೇಖಕರು ವೃದ್ಧಾಶ್ರಮದಲ್ಲಿದ್ದ ಮುದುಕಿಯನ್ನು ಪ್ರಶ್ನಿಸಿ ಪಡೆದ ಉತ್ತರಗಳು ವಿಷಾದವನ್ನು ಪ್ರಕಟಿಸಿದರೂ, ಆಶಾದಾಯಕ ಕನವರಿಕೆಯಿಂದ ಕೂಡಿರುವುದನ್ನು ಉಲ್ಲೇಖಿಸಿದೆ. ಭಾರತೀಯ ವೃದ್ಧರಲ್ಲಿ ಕಾಣದ 'ಆಶಾಭಾವ'ವನ್ನು ಫ್ರಾನ್ಸಿನ ವೃದ್ಧರಲ್ಲಿ ಕಾಣಬಹುದು ಎಂದು ಅಭಿಪ್ರಾಯಿಸಿದೆ. ಕೃತಿಯು ಹೋಲಿಕೆ ಮಾಡದಿದ್ದರೂ ಓದುಗರಿಗೆ ಭಾರತೀಯ ವೃದ್ಧರಲ್ಲಿರುವ 'ಹತಾಶ ಭಾವ', ಕಳೆದುಕೊಂಡಿರುವ ಜೀವನೋತ್ಸಾಹವನ್ನು ಸೂಚಿಸುತ್ತದೆ. ಕೃತಿಯು ಸೂಚಿಸುವ ಅಂಶಗಳು ಓದುಗರಿಗೆ ಪರೋಕ್ಷವಾಗಿ ವೃದ್ಧಾಪ್ಯದ ಬದುಕಿನ ಸಂದರ್ಭದಲ್ಲಿನ ಸ್ಥಿತಿಯನ್ನು ಕಲ್ಪಿಸಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತದೆ. ಕೃತಿಕಾರ ತಾನು ವೃದ್ಧನಾದಾಗ ಇರಬೇಕಾದ ಮಾನಸಿಕ ಸಿದ್ಧತೆಯನ್ನು ವೃದ್ಧಾಶ್ರಮದ ದರ್ಶನದಲ್ಲಿ ಕಂಡುಕೊಳ್ಳುವಂತಿದೆ. ಓದುಗರಿಗೆ ಜೀವನ ಪ್ರೀತಿಯನ್ನು ಎಂದೂ ಕಳೆದುಕೊಳ್ಳಬಾರದು ಎಂಬ ಸಂದೇಶ ನೀಡುತ್ತದೆ. ಜೊತೆಗೆ ಕೃತಿಕಾರರು 'ಎಂದು ಜೀವನ ಪ್ರೀತಿಯನ್ನು ಕಳೆದುಕೊಳ್ಳಬಾರದು' ಎಂಬ ನಿರ್ಧಾರಕ ಮನಸ್ಥಿತಿಯನ್ನು ಗಟ್ಟಿ ಮಾಡಿಕೊಳ್ಳುತ್ತಿರುವುದನ್ನು ಗುರುತಿಸಬಹುದಾಗಿದೆ.

ವೈದ್ಯನ ವಿದೇಶ ಪ್ರವಾಸ ಕೃತಿಯು ಯುರೋಪಿನಲ್ಲಿ ವೃದ್ಧರಿಗೆ ಇರುವ ವೈದ್ಯಕೀಯ ಸವಲತ್ತುಗಳ ಬಗ್ಗೆ ಹೇಳುತ್ತದೆ. ವೃದ್ಧಾಶ್ರಮಗಳು ಹೆಚ್ಚಾಗಿರುವ ಇಂಗ್ಲೆಂಡಿನಲ್ಲಿ ವೃದ್ಧರಿಗೆ ಪ್ರತ್ಯೇಕವಾದ ಆಸ್ಪತ್ರೆ ಇದೆ. ಇದರಲ್ಲಿ ವ್ಯವಸ್ಥಿತವಾದ ವೈದ್ಯಕೀಯ ಸವಲತ್ತುಗಳಿರುವುದನ್ನು ಉಲ್ಲೇಖಿಸಿದೆ. ಭಾರತದಲ್ಲಿನ ವೈದ್ಯಕೀಯ ಸವಲತ್ತುಗಳು ಶ್ರೀಮಂತರಿಗೆ ಮಾತ್ರ ಎಟುಕುವಂತಿದೆ. ಇಂಗ್ಲೆಂಡಿನ ವೃದ್ಧರಿಗೆ ಸರಕಾರವು ಒದಗಿಸಿರುವ ಸೌಲಭ್ಯಗಳಂತೆ, ಭಾರತದ ಬಡ ವೃದ್ಧರಿಗೂ ಸರಕಾರ ಪ್ರತ್ಯೇಕ ಸವಲತ್ತುಗಳನ್ನು ಕಲ್ಪಿಸಬೇಕು ಎಂಬ ಆಶಾಭಾವವನ್ನು ವ್ಯಕ್ತಪಡಿಸಿದೆ. ವೃತ್ತಿಧರ್ಮವು ವೃದ್ಧಾಶ್ರಮಗಳನ್ನು ಕಾಣುವ ದೃಷ್ಟಿಕೋನದ ಮೇಲೆ ಪರಿಣಾಮ ಬೀರಿರುವುದನ್ನು ಗಮನಿಸಬಹುದು. ಲೇಖಕರಿಗೆ ವೃದ್ಧಾಶ್ರಮಗಳು ಸಾಮಾಜಿಕ ಸಮಸ್ಯೆಯಾಗಿ ಕಾಣದೆ, ವೈದ್ಯಕೀಯ ಸವಲತ್ತುಗಳ ನೆಲೆಯಲ್ಲಿ ನೋಡಿರುವುದು 'ವೃತ್ತಿಯು ಸಮಾಜವನ್ನು ಕಾಣುವ ದೃಷ್ಟಿಕೋನದ ಮೇಲೆ ಪ್ರಭಾವ ಬೀರುತ್ತದೆ' ಎಂಬ ತಾತ್ವಿಕ ಅಂಶವನ್ನು ರೂಪಿಸಿದೆ. ಭಾರತದ ವೈದ್ಯಕೀಯ ಸವಲತ್ತುಗಳಲ್ಲಿನ ಕೊರತೆಗಳು ಮತ್ತು ಲೋಪದೋಷಗಳ ಮೂಲಕ ವೃದ್ಧಾಶ್ರಮಗಳನ್ನು ವಿಶ್ಲೇಷಿಸಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

'ಕಲಾವಿದ ಕಂಡ ಫ್ರಾನ್ಸ್' ಕೃತಿಯಲ್ಲಿ ಕೃತಿಕಾರರು ಫ್ರಾನ್ಸ್‌ನ 'ಪೆರಿನೀಸ್' ಎಂಬ ಹಳ್ಳಿಯ ವೃದ್ಧಾಶ್ರಮಕ್ಕೆ ಭೇಟಿ ನೀಡಿದ ಸಂಗತಿಯನ್ನು ವಿವರಿಸಲಾಗಿದೆ. ಅಲ್ಲಿನ ಅನುಭವಗಳ ಬಗ್ಗೆ "ವೃದ್ಧರ ಸಮಸ್ಯೆ ಅತ್ಯಂತ ಶೋಚನೀಯ. ಇಲ್ಲಿ ಅವರಿಗೆ ಎಲ್ಲಾ ಸೌಲತ್ತು ದೊರೆತರೂ ಮಕ್ಕಳ-ಬಂಧುಗಳ ಪ್ರೀತಿ ವಿಶ್ವಾಸದ ಕೊರತೆ ಇದೆ ಎನಿಸಿತು"(ಪಿ. ಆರ್. ತಿಪ್ಪೇಸ್ವಾಮಿ., ಕಲಾವಿದ ಕಂಡ ಫ್ರಾನ್ಸ್., ಪು-೩೩)ಎಂದಿದ್ದಾರೆ. ಈ ಕೃತಿಯಲ್ಲಿ ಭಾವನಾತ್ಮಕ ಅಂಶಗಳಿಗೆ ಹೆಚ್ಚು ಒತ್ತನ್ನು ನೀಡಿರುವುದು ಕಂಡುಬರುತ್ತದೆ. ಕಲಾವಿದರು ಹೆಚ್ಚು ಭಾವನಾಪರರು ಎಂಬುದು ಸಾಮಾನ್ಯ ಅಭಿಪ್ರಾಯವಾಗಿದೆ. ಕೃತಿಯ ನಿರೂಪಕರು ಕಲಾವಿದರಾಗಿದ್ದು,

ಕೃತಿಯಲ್ಲಿ ಭಾವನಾತ್ಮಕ ಅಂಶಗಳು ಹೆಚ್ಚು ಪುನರಾವರ್ತನೆಯಾಗಿವೆ. ಕೃತಿಯು ವ್ಯಕ್ತಪಡಿಸಿರುವ ಅಭಿಪ್ರಾಯಗಳಲ್ಲಿ ಈ ಅಂಶಗಳನ್ನು ಕಾಣಲಾಗಿದೆ. ಕುಟುಂಬದ ಏಕತೆಯನ್ನು ಬಯಸುವ ಹಾಗೂ ವೃದ್ಧ ತಂದೆ ತಾಯಿಗಳನ್ನು ಮಕ್ಕಳಾಗಲಿ, ಬಂಧುಗಳಾಗಲಿ ನೋಡಿಕೊಳ್ಳಬೇಕು ಎಂಬ ಮನೋಧರ್ಮದ ಹಿಂದೆ ಭಾರತೀಯತೆಯ ಪ್ರಜ್ಞೆಯು ಕಾರಣವಾಗಿರುವುದು ತಿಳಿಯುತ್ತದೆ.

ಈ ಮೇಲಿನ ವಿವರಗಳಿಂದ ತಿಳಿದುಬರುವ ಸಂಗತಿಗಳನ್ನು ಹೀಗೆ ನಿರ್ವಚಿಸಬಹುದಾಗಿದೆ. ಯುರೋಪಿನ ದೇಶಗಳ ವೃದ್ಧಾಶ್ರಮಗಳು ಲೇಖಕರ ವಿಭಿನ್ನ ಮನೋಧೋರಣೆಗಳ ಅನಾವರಣಕ್ಕೆ ಕಾರಣವಾಗಿದೆ. ಲೇಖಕರ ವಿವರಗಳಲ್ಲಿ ಭಾರತೀಯ ಪ್ರಜ್ಞೆ ಜಾಗೃತವಾಗಿರುವುದನ್ನು ಗುರುತಿಸಲಾಗಿದೆ. ವೈಯಕ್ತಿಕ ನೆಲೆಯಿಂದ ಸಾಮಾಜಿಕ ನೆಲೆಯ ಕಡೆಗೆ ವಿಚಾರಗಳು ಹರಿಯುವುದನ್ನು ಗುರುತಿಸಲಾಗಿದೆ.

ಆ) ಸಾಮುದಾಯಿಕ ಸಂಸ್ಕೃತಿ : ತೌಲನಿಕ ದೃಷ್ಟಿಕೋನ.

ಯುರೋಪಿನ ದೇಶಗಳಲ್ಲಿ ಸಾಮೂಹಿಕವಾಗಿ ಆಚರಿಸಲ್ಪಡುವ ಧಾರ್ಮಿಕ ನಂಬಿಕೆ, ಆಚರಣೆ, ಸಂಪ್ರದಾಯಗಳ ಬಗ್ಗೆ ಯುರೋಪ್ ಪ್ರವಾಸ ಕೃತಿಗಳಲ್ಲಿ ಚರ್ಚಿತವಾಗಿದೆ. ಯುರೋಪಿನ ಧಾರ್ಮಿಕ ಆಚರಣೆಗಳನ್ನು, ಸಂಪ್ರದಾಯಗಳನ್ನು ಕೃತಿಗಳು ವಿವಿಧ ದೃಷ್ಟಿಕೋನಕ್ಕೆ ಅನುಗುಣವಾಗಿ ವಿವರಿಸಿವೆ. ಯುರೋಪಿನ ವಿವಿಧ ದೇಶಗಳಲ್ಲಿ ಆಚರಿಸಲಾಗುವ ಸಾಮುದಾಯಿಕ ಆಚರಣೆಗಳ ನಡುವಿನ ವ್ಯತ್ಯಾಸಗಳನ್ನು ತೌಲನಿಕ ದೃಷ್ಟಿಕೋನದೊಂದಿಗೆ ಹೋಲಿಸಲಾಗಿದ್ದು, ಅವುಗಳನ್ನು ಕ್ರಮವಾಗಿ ವಿಶ್ಲೇಷಿಸಲಾಗಿದೆ.

ಮೂಢ ನಂಬಿಕೆಗಳು : ದೇವರನ್ನು ಪೂಜ್ಯಭಾವದಿಂದ ನಂಬುವುದಕ್ಕೂ , ದೇವರನ್ನೇ ನಂಬಿ ಬದುಕುವುದಕ್ಕೂ ವ್ಯತ್ಯಾಸವಿದೆ. ಯುರೋಪಿಯನ್ನರಲ್ಲಿನ ದೈವಿಕ ನಂಬಿಕೆಯು 'ಸಾಮಾನ್ಯ ದೂರ' ತತ್ವಕ್ಕೆ ಅನುಗುಣವಾಗಿ ಇರುತ್ತದೆ. ಭಾರತೀಯರಲ್ಲಿನ ದೈವೀ ನಂಬಿಕೆಗೆ ಆಧ್ಯಾತ್ಮದ ಪರಿಭಾವಗಳು ಒಳಗೊಳ್ಳುತ್ತವೆ. ಜೊತೆಗೆ ಜನರ ನಂಬಿಕೆಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಆರ್ಥಿಕ ಗಳಿಕೆ ಮಾಡಿಕೊಳ್ಳುವ ಗುಂಪೂ ಕೂಡ ಅಷ್ಟೇ ಸಶಕ್ತವಾಗಿ, ಸಕ್ರಿಯವಾಗಿ ಒಳಗೊಳ್ಳುತ್ತದೆ. ಭಾರತೀಯರಲ್ಲಿ ಮೂಢನಂಬಿಕೆಗಳು ಅನಕ್ಷರತೆಯ ಕಾರಣದಿಂದ ಬೇರೂರಿವೆ. ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವದ ಕೊರತೆಯು ದೇವರ ಹೆಸರಲ್ಲಿ ಸುಲಿಗೆ ಮಾಡುವವರ ಪ್ರಮಾಣವನ್ನು ಅಧಿಕಗೊಳಿಸಿದೆ. ಯುರೋಪಿನಲ್ಲಿಯೂ ಮೂಢನಂಬಿಕೆಗಳು ಇವೆ. ಅವುಗಳ ಮೇಲೆ ಸರಕಾರದ ಕಟ್ಟುನಿಟ್ಟಿನ ಕ್ರಮದ ಜೊತೆಗೆ ಸುಶಿಕ್ಷಿತ ಸಮಾಜ ಇರುವ ಕಾರಣ ಪ್ರಮಾಣದಲ್ಲಿ ಹೆಚ್ಚಳವಾಗಿಲ್ಲ.

ಜಿ.ಎಸ್. ಶಿವರುದ್ರಪ್ಪ ಮತ್ತು ಬೀಚಿ ಅವರಿಗೆ ಸೋವಿಯತ್ ನಾಸ್ತಿಕ ದೇಶವಾಗಿ ಕಂಡಿವೆ. ಆದ್ದರಿಂದಲೇ ಚರ್ಚುಗಳೆಲ್ಲ ವಸ್ತು ಸಂಗ್ರಹಾಲಯಗಳಾಗಿರುವ ಉದಾಹರಣೆಯನ್ನು ನೀಡಿದ್ದಾರೆ. ಪಾಟೀಲ ಪುಟ್ಟಪ್ಪ ಅವರಿಗೆ ಸೋವಿಯತ್ ದೇಶವು ದೇವರ ಮೇಲೆ ನಂಬಿಕೆ ಹೊಂದಿರುವ ದೇಶವಾಗಿ ಕಾಣುತ್ತದೆ.[೮]

'ಸೋವಿಯತ್ ದೇಶ ಕಂಡೆ' ಕೃತಿಯ ವಿವರಗಳನ್ನು ಗಮನಿಸಿದಾಗ ಲೇಖಕರು ಸೋವಿಯತ್ ದೇಶಕ್ಕೆ ಪ್ರವಾಸ ಹೋಗುವ ಪೂರ್ವದಲ್ಲಿಯೇ ಸೋವಿಯತ್ ದೇಶದ ಪ್ರವಾಸ ಕೃತಿಗಳನ್ನು ಅಧ್ಯಯನ ಮಾಡಿಕೊಂಡು ಪೂರ್ವ ತಯಾರಿಯೊಂದಿಗೆ ಪ್ರವಾಸಕ್ಕೆ ತೆರಳಿರುವುದು ತಿಳಿದು ಬರುತ್ತದೆ. ಪೂರ್ವ ತಯಾರಿಯ ಪ್ರವಾಸ ಕೃತಿಗಳಿಗೆ ಕೆಲವು ಮಿತಿಗಳು ಇರುತ್ತವೆ. ಪ್ರವಾಸದ ಅವಧಿಯಲ್ಲಿ ತಾವು ಯಾವುದೇ

ಪ್ರದೇಶಕ್ಕೆ ತೆರಳುವಾಗ ಪೂರ್ವಗ್ರಹದೊಂದಿಗೆ ತಮ್ಮ ಹಿಂದಿನ ತಯಾರಿಗೆ ಅನುಗುಣವಾಗಿಯೇ ಇದೆಯೇ? ಇಲ್ಲವೇ? ಎಂದು ಬುದ್ಧಿಯು ಎಚ್ಚರಿಸುತ್ತಲೇ, ಹೋಲಿಸುತ್ತಲೇ ಇರುತ್ತದೆ. ಇದರಿಂದ ಪ್ರವಾಸದಲ್ಲಿ ಕಂಡ ದೃಶ್ಯಗಳೊಂದಿಗೆ ಮುಕ್ತವಾಗಿ, ವಸ್ತುನಿಷ್ಠವಾಗಿ ಸಂವೇದಿಸಲು ಸಾದ್ಯವಾಗುವುದಿಲ್ಲ. ವಾಸ್ತವ ಪರಿಸ್ಥಿತಿಯನ್ನು ವಿಚಾರ ಮಂಥನ ಮಾಡುವಲ್ಲಿ ಎಡವುತ್ತವೆ. ಈ ಕೃತಿಯು ಅಂತಹ ಕೆಲವು ಮಿತಿಗಳಿಗೆ ಒಳಪಟ್ಟಿರುವಂತಿದೆ.

'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯು ದೇವರಲ್ಲಿನ ನಂಬಿಕೆಗೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡಿರುವುದನ್ನು ಗಮನಿಸಿದರೆ ದ್ವೈತ ತತ್ವದಲ್ಲಿ ನಂಬಿಕೆ ಇರುವಂತೆ ಕಾಣುತ್ತಾರೆ. ಕುವೆಂಪು ಅವರ ವೈಚಾರಿಕ ತತ್ವಗಳಿಗೆ ಅನುಗುಣವಾದ ಚಿಂಥನಾ ಕ್ರಮವು ಈ ಕೃತಿಯಲ್ಲಿ ಕಂಡುಬರುತ್ತದೆ. ಸೋವಿಯತ್ ದೇಶದ ಜನರಿಗೆ ದೇವರಲ್ಲಿ ನಂಬಿಕೆ ಇಲ್ಲ. ವಿಧಿ, ಕರ್ಮ, ದೈವ ಇತ್ಯಾದಿಗಳನ್ನು ಒಪ್ಪುವುದಿಲ್ಲ, ಪಾಪ–ಪುಣ್ಯ, ಸ್ವರ್ಗ–ನರಕಗಳ ಕಲ್ಪನೆಯಿಲ್ಲ. ವಾಸ್ತವ ಬದುಕನ್ನು ಒಪ್ಪಿ ಬದುಕಿದ್ದಾರೆ ಎಂದು ಕೃತಿಯು ವಿವರಿಸಿದೆ. ಸೋವಿಯತ್ ದೇಶವನ್ನು ಈ ರೀತಿಯಾಗಿ ವಿಶ್ಲೇಷಣೆಯನ್ನು ಮಾಡಿದ್ದಲ್ಲದೆ ಅವರಿಗೆ ದೇವರ ಮೇಲಿನ ನಂಬಿಕೆಯ ಮಹತ್ವ ತಿಳಿದಿಲ್ಲ ಎಂದೂ, ದೇವರನ್ನು ನಂಬದೆ ಬದುಕಲು ಸಾಧ್ಯವಿಲ್ಲವೆಂದೂ ಓದುಗರನ್ನು ಒಪ್ಪಿಸಲು ತೊಡಗುತ್ತದೆ. ಮಾಸ್ಕೋ ಜನರು ದೇವರನ್ನು ನಂಬದೆ ಇರುವುದಕ್ಕೆ 'ಯಾಂತ್ರಿಕ ಜೀವನಕ್ಕೆ ಮೊರೆ ಹೋಗಿರುವುದೇ ಕಾರಣ ಎಂದು ನಿರೂಪಿಸಿದೆ. "ಯಾವುದೋ ಒಂದು ನಂಬಿಕೆಯ ಬಲವಿಲ್ಲದೆ, ಜಗತ್ತಿನ ಯಾವ ಜನವೂ ಬದುಕುವುದು ಕಷ್ಟ. ಅದಕ್ಕಾಗಿ ಧರ್ಮ, ದೇವರು ಇಂಥ ಯಾವುದಾದರೂ ಒಂದು ಅವಲಂಬನೆ ಬೇಕು– ಎಂಬ ಮಾತೊಂದಿದೆ"(ಜಿ. ಎಸ್. ಶಿವರುದ್ರಪ್ಪ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಪು–೬೭) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಭಾರತೀಯರ ವೈಚಾರಿಕವಾದ ಧಾರ್ಮಿಕ ದೃಷ್ಟಿಕೋನವೇ ಸರಿಯಾದುದು ಎಂಬುದನ್ನು ಕೃತಿಯು ಪರೋಕ್ಷವಾಗಿ ನಿರೂಪಿಸುತ್ತದೆ. ಆದರೆ ಭಾರತೀಯರ ದೈವನಿಷ್ಠೆಯಲ್ಲಿನ ಅಂಧಶ್ರದ್ಧೆಯನ್ನು ಹಾಗೂ ಮೂಢ ಆಚರಣೆಗಳನ್ನು ತಿರಸ್ಕರಿಸಿದೆ.

ಪ್ರಪಂಚದ ಯಾವುದೇ ದೇಶ ಮೂಢನಂಬಿಕೆಗಳಿಂದ ಮುಕ್ತವಾಗಿಲ್ಲ. ಯುರೋಪ್ ಖಂಡದಲ್ಲಿ ಅಭಿವೃದ್ಧಿ ಹೊಂದಿದ ಅನೇಕ ದೇಶಗಳಿವೆ. ಅವುಗಳಲ್ಲಿ ಇಂಗ್ಲೆಂಡ್ ಕೂಡ ಒಂದು. ಇಂಗ್ಲೆಂಡ್ 'ಸೂರ್ಯ ಮುಳುಗದ ನಾಡು' ಎಂಬ ಹೆಗ್ಗಳಿಕೆಗೆ ಪಾತ್ರವಾದ ದೇಶ. ಆಂಗ್ಲರು ಭಾರತೀಯರನ್ನು 'ಹಾವಾಡಿಗರ ದೇಶ' 'ಮೂಢನಂಬಿಕೆಗಳ ದೇಶ' ಎಂದೆಲ್ಲಾ ಬಿಂಬಿಸಿದ್ದಾರೆ. ಆದರೆ ಇಂಗ್ಲೆಂಡ್ ದೇಶದಲ್ಲಿಯೂ ಇಂದಿಗೂ ಪ್ರಚಲಿತವಿರುವ ಅನೇಕ ಮೂಢನಂಬಿಕೆಗಳಿವೆ. 'ಲಂಡನ್ ಆಫ್ ಟವರ್'ನಲ್ಲಿ 'ರೇವನ್ ಕಾಗೆಗಳಿವೆ'. ಈ ಕಾಗೆಗಳನ್ನು ಪ್ರಭುತ್ವದ ಹದ್ದುಬಸ್ತಿನಲ್ಲಿ ಸಾಕಲಾಗುತ್ತಿದೆ. ಈ ಕಾಗೆಗಳು ದೇಶದ 'ಭಾಗ್ಯದ ಪಕ್ಷಿಗಳು' ಎಂಬುದು ಅಲ್ಲಿನ ಜನರ ನಂಬಿಕೆ. ಆ ಕಾಗೆಗಳು ಕಣ್ಮರೆಯಾದ ದಿನ ಇಂಗ್ಲೆಂಡಿಗೆ ದುರ್ಭಿಕ್ಷ ಪ್ರಾಪ್ತಿಯಾಗುತ್ತದೆ ಎಂಬ ಮೂಢನಂಬಿಕೆ ಇಂದಿಗೂ ಚಾಲ್ತಿಯಲ್ಲಿದೆ. ದೊಡ್ಡೇರಿ ವೆಂಕಟಗಿರಿರಾವ್ ಅವರು ತಮ್ಮ 'ಏಕಾಕಿ ಪ್ರವಾಸಿ' ಕೃತಿಯಲ್ಲಿ ಈ ವಿಷಯದ ಬಗ್ಗೆ ಉಲ್ಲೇಖಿಸಿದ್ದಾರೆ. "ಹೊರಗಡೆ ಅಂಗಳದಲ್ಲಿ ಕೆಲವು "ರೇವನ್" ಜಾತಿಯ ಕಾಗೆಗಳು ಕುಪ್ಪಳಿಸುತ್ತಿರುತ್ತವೆ.......ಈ ಪಕ್ಷಿಗಳು ಲಂಡನ್ ನಗರದ ಭಾಗ್ಯ ರಕ್ಷಕರೆಂದು ನಂಬಿಕೆ. ಅವು ಎಂದು ಟವರ್ ಆಫ್ ಲಂಡನಿನಿಂದ ಹಾರಿ ಹೋಗುತ್ತವೋ ಅಂದಿನಿಂದ ಲಂಡನಿಗೆ ದುರ್ದೆಶೆ ಎಂದು ಸಾಮಾನ್ಯ ಜನತೆಯಲ್ಲಿ ನಂಬಿಕೆ."(ಏಕಾಕಿ ಪ್ರವಾಸಿ., ದೊಡ್ಡೇರಿ ವೆಂಕಟಗಿರಿರಾವ್., ಪು–೧೪೬)ಎಂದಿದ್ದಾರೆ. ಹೇಮಲತಾ ಮಹಿಷಿ, ಕೆ. ಶಿವರಾಮ ಕಾರಂತ, ಇಂದಿರಾ ಶಿವಣ್ಣ, ದೇವಕಿ ಮೂರ್ತಿ ಮೊದಲಾದವರು ಲಂಡನ್ನಿನಲ್ಲಿರುವ ಈ ಮೂಢನಂಬಿಕೆಯ ಬಗ್ಗೆ ಉಲ್ಲೇಖಿಸಿದ್ದಾರೆ.

ಇಂಗ್ಲೆಂಡಿನ ವೆಬ್‌ಮಿನಿಸ್ಟರ್ ಅಬೆಯಲ್ಲಿ 'ಸ್ಟೋನ್ ಆಫ್ ಸ್ಕೋನ್' ಎಂಬ ಕಲ್ಲಿದೆ. ಈ ಕಲ್ಲನ್ನು ಇಂಗ್ಲೆಂಡಿನ ದೊರೆ ಮೂರನೇ ಎಡ್ವರ್ಡ್ ಸ್ಕಾಂಟ್ಲೆಂಡಿನ ಅರಸನಿಂದ ಕಿತ್ತುಕೊಂಡು ಬಂದುದಾಗಿದೆ. ಈ ಕಲ್ಲು 'ಅದೃಷ್ಟವಂತದ ಕಲ್ಲು' ಎಂಬುದು ಪ್ರಭುತ್ವದ ನಂಬಿಕೆ. ಇಂಗ್ಲೆಂಡಿನ ರಾಜನಾಗಿ ಯಾರೇ ಅಧಿಕಾರ ವಹಿಸಿಕೊಂಡರೂ ಪಟ್ಟಾಭಿಷೇಕವಾಗುವಾಗ ಇದೇ ಕಲ್ಲಿನ ಮೇಲೆ ಕೂರಬೇಕು. ಇದು ಕೂಡ ಇಂಗ್ಲೆಂಡಿನಲ್ಲಿರುವ ಮೂಢನಂಬಿಕೆಗಳಲ್ಲಿ ಒಂದಾಗಿದೆ ಎಂದು ಅನುಪಮಾ ನಿರಂಜನ ಅವರು ಹೇಳಿದ್ದಾರೆ. ಆದ್ದರಿಂದಲೇ ಅನುಪಮಾ ನಿರಂಜನರವರು "ಬ್ರಿಟಿಷರು ಇಷ್ಟು ವಿದ್ಯಾವಂತರಾದ್ರೂ ಕುರುಡು ನಂಬಿಕೆಗಳು ಮಾತ್ರ ಜಾಸ್ತಿ"(ಅಂಗೈಯಲ್ಲಿ ಯೂರೊ–ಅಮೆರಿಕ., ಅನುಪಮಾ ನಿರಂಜನ., ಪು–೮೪)ಎಂದಿದ್ದಾರೆ.

ಟಿ. ಕೆ. ರಾಮರಾವ್‌ರವರು ತಮ್ಮ 'ಗೋಳದ ಮೇಲೊಂದು ಸುತ್ತು' ಕೃತಿಯಲ್ಲಿ "ಲಂಡನ್ ಕಂದಾಚಾರಗಳಿಗೆ ಜೋತುಬಿದ್ದಿರುವ ನಾಡು"(ವಿದ್ಯಾಶಂಕರ., ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ., ಪು–೧೦೦)ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ವಿದ್ಯಾಶಂಕರ ಅವರು ಉಲ್ಲೇಖಿಸಿದ್ದಾರೆ. ಅಭಿವೃದ್ಧಿ ಹೊಂದಿದ ದೇಶ ಎನಿಸಿರುವ ಇಂಗ್ಲೆಂಡಿನಲ್ಲಿ ಇಂದಿಗೂ ಕುರುಡಾಗಿ ಪಾಲನೆಯಾಗುತ್ತಿರುವ ಸಂಪ್ರದಾಯದ ಆಚರಣೆಗಳನ್ನು ಗುರುತಿಸಲಾಗಿದೆ. ಇಂಗ್ಲೆಂಡಿನಲ್ಲಿ ಪ್ರಚಲಿತವಿರುವ ಮೂಢನಂಬಿಕೆಗಳ ಬಗ್ಗೆ ಅನೇಕ ಲೇಖಕರು ಉಲ್ಲೇಖಿಸಿರುವುದನ್ನು ಗಮನಿಸಿದಾಗ, ಪ್ರಪಂಚದ ಯಾವ ದೇಶವೂ ಕಂದಾಚಾರ, ಕುರುಡು ನಂಬಿಕೆಗಳಿಂದ ಮುಕ್ತವಾಗಿಲ್ಲ ಎನಿಸುತ್ತದೆ. ಕೇವಲ ಇಂಗ್ಲೆಂಡಿನಲ್ಲಿ ಮಾತ್ರವಲ್ಲದೆ ಯುರೋಪಿನ ಇತರ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿಯೂ ಕೆಲವು ಮೂಢ ಆಚರಣೆಗಳು, ಕುರುಡು ನಂಬಿಕೆಗಳು ಪ್ರಚಲಿತದಲ್ಲಿವೆ.

ಆಚರಣೆಗಳು ಮತ್ತು ಕುರುಡು ನಂಬಿಕೆಗಳು ದೇಶದ ಅಭಿವೃದ್ಧಿ ಸೂಚ್ಯಂಕದ ನಿರ್ಧಾರಕ ಅಂಶವಲ್ಲ. ನಂಬಿಕೆಗಳು ಎಲ್ಲಾ ಕಾಲದಲ್ಲಿಯೂ ಇರುತ್ತದೆ. ಅದು ಅಭಿವೃದ್ಧಿಗೆ ಅಡ್ಡಿಯಾಗಿದೆ ಎಂದು ಭಾವಿಸುವುದು, ಜನರು ಮೂಢನಂಬಿಕೆಗಳಿಗೆ ಒಳಗಾಗಿದ್ದಾರೆ ಹಾಗಾಗಿ ದೇಶದ ಅಭಿವೃದ್ಧಿ ಸಾಧ್ಯವಾಗಿಲ್ಲ ಎಂದು ಹೇಳುವುದು ನಿರ್ಧಾರಕ ಪ್ರಮಾಣವಾಗುವುದಿಲ್ಲ.

ದೊಡ್ಡೇರಿ ವೆಂಕಟಗಿರಿರಾವ್ ಅವರು ರೋಮ್‌ನಲ್ಲಿ ಪ್ರಚಲಿತವಿರುವ ಮೂಢನಂಬಿಕೆಯ ಬಗ್ಗೆ ಹೇಳುತ್ತಾ "ಟ್ರೇವಿ ಕಾರಂಜಿಯ ಕೊಳದಲ್ಲಿ ನಾಣ್ಯವನ್ನು ಹಾಕಿದವರು ತಪ್ಪದೆ ಮರಳಿ ರೋಮಿಗೆ ಬರುತ್ತಾರೆಂದು ನಂಬಿಕೆ ಇದೆ"(ಏಕಾಕಿ ಪ್ರವಾಸಿ., ದೊಡ್ಡೇರಿ ವೆಂಕಟಗಿರಿರಾವ್., ಪು–೨೨)ಎಂದಿದ್ದಾರೆ. ಇಟಲಿ ಕ್ರೈಸ್ತ ಧರ್ಮೀಯರ ನಾಡು. ಇಲ್ಲಿಯೂ ಮೂಢನಂಬಿಕೆಗಳಿವೆ. ದೊಡ್ಡೇರಿ ವೆಂಕಟಗಿರಿರಾವ್ ಮತ್ತು ಹೋ. ಶ್ರೀನಿವಾಸಯ್ಯ ಅವರು ಈ ಟ್ರಿವಿ ಫೌಂಟೇನ್‌ಗೆ ನಾಣ್ಯವನ್ನು ಹಾಕಿದೆ ಎಂದು ಹೇಳಿಕೊಂಡಿದ್ದಾರೆ. ಹೇಮಲತಾ ಮಹಿಷಿ ಮತ್ತು ಅನುಪಮಾ ನಿರಂಜನ ಅವರು ನಾಣ್ಯವನ್ನು ಹಾಕಲಿಲ್ಲ ಎಂದು ಹೇಳಿಕೊಂಡಿದ್ದಾರೆ. ಲೇಖಕರಲ್ಲಿಯೂ ಮೂಢನಂಬಿಕೆಗಳ ಆಚರಣೆಗಳಿಗೆ ಸಂಬಂಧಿಸಿದಂತೆ ವಿಭಿನ್ನ ನಿಲುವುಗಳಿವೆ. ಪ್ರವಾಸಿ ಲೇಖಕರು ವಿದೇಶಗಳಿಗೆ ಹೋದಾಗ ಅಲ್ಲಿ ಪಾಲನೆಯಾಗುವ ಕುರುಡು ನಂಬಿಕೆಗಳನ್ನು ಕೆಲವರು ಒಪ್ಪಿ ಪಾಲಿಸಿದ್ದಾರೆ. ಕೆಲವು ಲೇಖಕರು ತಿರಸ್ಕರಿಸಿದ್ದಾರೆ. ವೈಯಕ್ತಿಕ ಮನೋಧೋರಣೆಗಳು ನಂಬಿಕೆಗಳ ಮೇಲೆ ಪ್ರಭಾವ ಬೀರುವುದನ್ನು ಗುರುತಿಸಲಾಗಿದೆ.

ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ಪೂಜಾ ಮಂದಿರಗಳನ್ನು ಪವಿತ್ರ ಸ್ಥಳಗಳೆಂದು ಪರಿಗಣಿಸಲಾಗುತ್ತದೆ. ದೇವಸ್ಥಾನಗಳಲ್ಲಿ ಸಮಾಧಿ ಮಾಡುವುದಿಲ್ಲ. ದೇವಾಲಯದ ಪ್ರಧಾನ ಅರ್ಚಕರು

ಅಥವಾ ಮಠದ ಸ್ವಾಮಿಗಳಾಗಿದ್ದರೆ ದೇವಾಲಯದ ಪವಿತ್ರ ಆವರಣದ ಹೊರಗಡೆ ಸಮಾಧಿ ಮಾಡಲಾಗುತ್ತದೆ. ಅವುಗಳನ್ನು 'ಗದ್ದಿಗೆ'ಗಳೆಂದು ಕರೆಯಲಾಗುತ್ತದೆ. ಇನ್ನೂ ಅನೇಕ ಸಮಾಧಿ ಸ್ಥಳಗಳು ಪೂಜ್ಯನೀಯ ಸ್ಥಳಗಳಾಗಿ ಮಾರ್ಪಾಡಾಗಿವೆ. ಮಂತ್ರಾಲಯದ ಗುರು ರಾಘವೇಂದ್ರರಾಯರ ಸನ್ನಿಧಿಯು ಸಮಾಧಿ ಸ್ಥಳವಾಗಿದೆ. ಅಲ್ಲಿ ಸಮಾಧಿ ಸ್ಥಳವನ್ನೇ ಪೂಜ್ಯನೀಯ ಸ್ಥಳವನ್ನಾಗಿಸಿದ್ದಾರೆ. ನಿತ್ಯವೂ ಆರಾಧನೆ ಮಾಡಲಾಗುತ್ತಿದೆ. ಕೂಡಲ ಸಂಗಮದ ಬಸವಣ್ಣನ ಐಕ್ಯ ಸ್ಥಳದಲ್ಲಿ ಇಂದಿಗೂ ಪೂಜೆ ನಡೆಯುತ್ತಿದೆ. ಆದರೆ ಫ್ರಾನ್ಸ್ ದೇಶದಲ್ಲಿ ದೇವಸ್ಥಾನ ಸಮಾಧಿಸ್ಥಳವಾಗಿ ಪರಿವರ್ತನೆಯಾದ ಸಾಂಸ್ಕೃತಿಕ ಬದಲಾವಣೆಯನ್ನು ದೊಡ್ಡೇರಿ ವೆಂಕಟಗಿರಿರಾವ್ ಅವರು ಉಲ್ಲೇಖಿಸಿದ್ದಾರೆ. "ಪ್ಯಾಂಥಿಯಾನ್ ಗ್ರೀಕ್ ಶೈಲಿಯ ನಿರ್ಮಾಣ...... ನಿರ್ಮಾಣವಾದಾಗ ಅದು ಪೂಜಾ ಮಂದಿರ. ಆದರೆ ಕ್ರಾಂತಿಯ ಅನಂತರ ಅದು ಸಮಾಧಿ ಮಂದಿರ".(ದೊಡ್ಡೇರಿ ವೆಂಕಟಗಿರಿರಾವ್., ಏಕಾಕಿ ಪ್ರವಾಸಿ., ಪು-೧೧೨,೧೧೩) ಫ್ರಾನ್ಸ್ ದೇಶದಲ್ಲಿ ಕ್ರಿ.ಶ. ೧೭೮೯ರಲ್ಲಿ 'ಪ್ಯಾಂಥಿಯಾನ್' ಎಂಬ ಗ್ರೀಕ್ ಶೈಲಿಯ ಪೂಜಾ ಮಂದಿರವನ್ನು ಸ್ಥಾಪಿಸಲಾಗಿತ್ತು. ಅದೇ ವರ್ಷ ಫ್ರಾನ್ಸ್ ಕ್ರಾಂತಿ ಜರುಗಿತು. ಕ್ರಾಂತಿಯ ನಂತರ ಈ ಪೂಜಾಮಂದಿರವು ಸಮಾಧಿ ಸ್ಥಳವಾಗಿ ಪರಿವರ್ತನೆಯಾಯಿತು. ಈ ಸಾಂಸ್ಕೃತಿಕ ಬದಲಾವಣೆಗೆ ಕ್ರಾಂತಿಕಾರರ ವೈಚಾರಿಕ ಚಿಂತನೆಗಳು ಕಾರಣವಾಗಿದೆ. ಕ್ರಾಂತಿಯ ಪರಿಣಾಮವಾಗಿ ಜನರಲ್ಲಿ ದೇವರ ಮೇಲಿನ ನಂಬಿಕೆ ಕಡಿಮೆಯಾಗಿ ನಾಸ್ತಿಕ ಭಾವವನ್ನು ತಾಳಿರುವ ಕಾರಣದಿಂದ ಪೂಜಾ ಮಂದಿರಗಳಲ್ಲಿ ಸಮಾಧಿ ಮಾಡುವ ನಿರ್ಧಾರಕ್ಕೆ ಬಂದಿರುವಂತೆ ತೋರುತ್ತದೆ. ಇಲ್ಲಿ ಫ್ರಾನ್ಸ್‌ನ ಪ್ರಸಿದ್ಧ ಲೇಖಕರು, ಕಲಾವಿದರ ಸಮಾಧಿಗಳಿವೆ. ಒಂದು ಪೂಜಾ ಮಂದಿರ ಸಮಾಧಿ ಸ್ಥಳವಾಗಿ ಪರಿವರ್ತಿತವಾಗುವ ಸಂಸ್ಕೃತಿಯಲ್ಲಿನ ಆಂತರಿಕ ಬದಲಾವಣೆಯನ್ನು ಗುರುತಿಸಲಾಗಿದೆ. ಮುಂದುವರೆದು ಇಂಗ್ಲೆಂಡಿನ 'ವೆಬ್ ಮಿನಿಸ್ಟರ್ ಅಬೆ'ಯು ರಾಜವಂಶಸ್ಥರು ಪ್ರಾರ್ಥನೆ ಸಲ್ಲಿಸುವ ಚರ್ಚು. ಇದೇ ಚರ್ಚಿನಲ್ಲಿ ಮದುವೆಯಂತಹ ಮಂಗಳ ಕಾರ್ಯಗಳು ಮತ್ತು ಶವ ಸಂಸ್ಕಾರ ಕಾರ್ಯಗಳು ಒಂದೇ ಸ್ಥಳದಲ್ಲಿ ನಡೆಯುವುದನ್ನು ಉಲ್ಲೇಖಿಸಲಾಗಿದೆ. ಅದನ್ನು ಕುರಿತು ಲತಾಗುತ್ತಿ ಅವರು "ಪವಿತ್ರ ಮಂಗಳಕರವೆನ್ನುವ ಮದುವೆ, ದುಃಖತ್ರಸ್ತವೆನ್ನುವ ಸತ್ತವರ ಶವ ಸಂಸ್ಕಾರ, ಒಂದೇ ನೆಲದಲ್ಲಿ, ಇದೊಂದು ವಿಚಿತ್ರವಾದರೂ ಸತ್ಯವಾಗಿಯೂ ಮಹಾನ್ ಸಂಸ್ಕೃತಿ"(ಲತಾ ಎಂ. ಗುತ್ತಿಪಾಟೀಲ., ಪ್ರವಾಸ ಸಾಹಿತ್ಯ : ಅನ್ಯ ಸಂಸ್ಕೃತಿಗಳ ಅಧ್ಯಯನ., ಪು-೫೨)ಎನ್ನುತ್ತಾರೆ. ಇತರ ಲೇಖಕರ ದೃಷ್ಟಿಕೋನದಲ್ಲಿ ವಿಚಿತ್ರವಾಗಿ ಕಾಣುವ ಇಂಗ್ಲೆಂಡಿನ ಈ ಸಂಸ್ಕೃತಿಯು ಲತಾಗುತ್ತಿ ಅವರಿಗೆ ಮಹಾನ್ ಸಂಸ್ಕೃತಿಯಾಗಿ ಕಂಡಿದೆ. ಪ್ಯಾಂಥಿಯಾನ್‌ನ ಸಂಸ್ಕೃತಿಯಲ್ಲಿನ ಆಂತರಿಕ ಬದಲಾವಣೆಯು ಕಾಲದ ಮಿತಿಗೆ ಒಳಪಟ್ಟಿದೆ. ಇಂಗ್ಲೆಂಡಿನಲ್ಲಿನ ಆಚರಣೆಯು ರಚನಾತ್ಮಕ ಧೋರಣೆಗಳನ್ನು ತಿಳಿಸುತ್ತದೆ.

ಜಿ. ಗೋಪಾಲ್ ಅವರ 'ಬೆಂಗಳೂರಿಂದ ಬಾರ್ಸೆಲೋನಕ್ಕೆ' ಕೃತಿಯಲ್ಲಿ ಉಲ್ಲೇಖಿಸಿರುವಂತೆ 'ಲೇಖಕರು ಬಾರ್ಸೆಲೋನಾದ 'ಲಾ ರ್‍ಯಾಂಬ್ಲ'ದಲ್ಲಿನ ಅತ್ಯಂತ ಜನಸಂದಣೀಯ ವಿಹಾರಸ್ಥಳಕ್ಕೆ ಭೇಟಿ ನೀಡಿದ್ದರು. ಅಲ್ಲಿ ಭಾರತದಲ್ಲಿ ಇರುವಂತೆ 'ಹಕ್ಕಿ ಶಾಸ್ತ್ರ'ದ ಮೂಲಕ ಭವಿಷ್ಯ ಹೇಳುವ ಸ್ತ್ರೀಯರನ್ನು ನೋಡಿ "ಹಕ್ಕಿಶಾಸ್ತ್ರ ಹೇಳಿ ಭವಿಷ್ಯ ನುಡಿಯುವ ಸ್ತ್ರೀಯರಿಗೇನೂ ಕಡಿಮೆಯಿಲ್ಲ."(ಜಿ. ಗೋಪಾಲ್., ಬೆಂಗಳೂರಿಂದ ಬಾರ್ಸೆಲೋನಕ್ಕೆ., ಪು-೭೧)ಎಂದಿದ್ದಾರೆ. ಹಕ್ಕಿ-ಪಿಕ್ಕಿ ಜನಾಂಗದವರ 'ಗಿಣಿಶಾಸ್ತ್ರ' ಹೇಳುವ ಸಂಪ್ರದಾಯವನ್ನು ದೂರದ ಬಾರ್ಸೆಲೋನಾದಲ್ಲಿ ನೋಡಿದ್ದಾರೆ. 'ಹಾಲಕ್ಕಿ ಸಂಪ್ರದಾಯ'ದವರು ಹಾಡಿನ ಮೂಲಕ ಭವಿಷ್ಯ ನುಡಿಯುವ 'ಶಕುನದ ಹಕ್ಕಿ' ಸಂಪ್ರದಾಯದೊಂದಿಗೆ ಹೋಲಿಕೆಯಾಗುತ್ತದೆ. ಭವಿಷ್ಯ ತಿಳಿಯಬೇಕೆಂಬ

ಹಂಬಲ ಅಥವಾ ಕುತೂಹಲ ಮಾನವನಿಗೆ ಸಹಜವಾದ ಆಕಾಂಕ್ಷೆ. ಅದು ಕಾಲಾತೀತವಾದುದು ಮತ್ತು ದೇಶಾತೀತಾವಾದುದು. ಭಾರತದಲ್ಲಿ ಪ್ರಚಲಿತವಿರುವ ಆಚರಣೆ, ಸಂಪ್ರದಾಯ, ಪದ್ಧತಿ, ನಂಬಿಕೆಗಳು ಯುರೋಪ್ ಖಂಡದ ಬಹುತೇಕ ದೇಶಗಳಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣಲಾಗಿದೆ.

ಭಾರತೀಯರಿಗೆ ಗಂಗಾನದಿ ದೇವ ಸಮಾನಳು. ಗಂಗಾನದಿಯಲ್ಲಿ ಮಿಂದರೆ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಭಾರತೀಯರಲ್ಲಿದೆ. ಇದೇ ತರಹದ ನಂಬಿಕೆಗಳು ಪ್ರಾಚೀನ ನಾಗರಿಕತೆ ರೋಮಿನಲ್ಲಿ ಇಂದಿಗೂ ಆಚರಣೆಯಲ್ಲಿರುವುದನ್ನು ಕಾಣಬಹುದು. ಜಿ.ಎಸ್. ಶಿವರುದ್ರಪ್ಪ ಅವರು ಇಂಗ್ಲೆಂಡಿನಲ್ಲಿರುವ ರೋಮನ್ನರ ಆಳ್ವಿಕೆಗೆ ಒಳಪಟ್ಟಿದ್ದ 'ಬಾತ್' ನಗರಕ್ಕೆ ಹೋಗಿದ್ದಾರೆ. ಬ್ರಿಸ್ಟಲ್‌ನಿಂದ ಸುಮಾರು ಹದಿನೈದು- ಇಪ್ಪತ್ತು ಮೈಲಿ ಬಸ್ಸಿನಲ್ಲಿ ಪ್ರಯಾಣ ಮಾಡಿದ ಬಳಿಕ 'ರೋಮನ್ ಬಾತ್' ಎಂಬ ನೈಸರ್ಗಿಕ ಬಿಸಿನೀರಿನ ಬುಗ್ಗೆಗಳಿರುವ ಸ್ಥಳ ಸಿಗುತ್ತದೆ. ಸುಲಿಸ್ ದೇವತೆಯ ಪೂಜಾಸ್ಥಳವಾದ ಈ ಬಿಸಿ ನೀರಿನ ಬುಗ್ಗೆಗಳು ಪಾಪ ಪರಿಹಾರಕವೆಂದು, ರೋಗವನ್ನು ವಾಸಿ ಮಾಡುವ ಶಕ್ತಿ ಇದೆ ಎಂಬ ನಂಬಿಕೆ ಇಂದಿಗೂ ಆಚರಣೆಯಲ್ಲಿರುವುದನ್ನು ಉಲ್ಲೇಖಿಸಿದ್ದಾರೆ. "ಕೆಲ್ಟಿಕ್ ಜನಾಂಗದ ದೇವತೆಯಾದ ಸುಲಿಸ್‌ಳ ಆರಾಧನೆಯ ಸ್ಥಳವಾಗಿತ್ತು. ಅಷ್ಟೇ ಅಲ್ಲ ಈ ನೀರು ಅತ್ಯಂತ ಪವಿತ್ರವಾದುದೆಂದೂ, ಪಾಪ ಪರಿಹಾರಕವಾದುದೆಂದೂ ನಂಬಿಕೆ ಬೆಳೆದು, ದೂರ ಬಹುದೂರಗಳಿಂದ ಈ ಪವಿತ್ರವಾದ ನೀರಿನ ಸ್ನಾನಕ್ಕೆ ಹಾಗೂ ಸುಲಿಸ್ ದೇವತೆಯ ಆರಾಧನೆಗೆ ಜನ ಬರತೊಡಗಿದರು" (ಜಿ.ಎಸ್. ಶಿವರುದ್ರಪ್ಪ., ಇಂಗ್ಲೆಂಡಿನಲ್ಲಿ ಚತುರ್ಮಾಸ., ಪು-೯೯)ಎಂದಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿನ ನಂಬಿಕೆಗಳಿಗೆ ಸಾಮ್ಯತೆಯನ್ನು ಹೊಂದಿರುವ ಈ ಆಚರಣೆಗಳು ಇಂಗ್ಲೆಂಡಿನಲ್ಲಿಯೂ ಪ್ರಚಲಿತದಲ್ಲಿರುವುದನ್ನು ಗುರುತಿಸಲಾಗಿದೆ. ಹಿಮಾಚಲ ಪ್ರದೇಶದಲ್ಲಿ 'ಮಣಿಕರ್ಣಿಕ' ಎಂಬ ಬಿಸಿ ನೀರಿನ ಬುಗ್ಗೆ ಚಿಮ್ಮುವ ಸ್ಥಳವಿದೆ. ಇದು ಸಿಖ್ಖರ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿಯ ನಿರಿನಲ್ಲಿ ಸ್ನಾನ ಮಾಡಿದರೆ ಚರ್ಮದ ರೋಗಗಳು ವಾಸಿ ಆಗುತ್ತದೆ ಎಂಬ ನಂಬಿಕೆ ಇದೆ. ರೋಮನ್ ಬಾತ್ ಸ್ಥಳದಲ್ಲಿನ ನಂಬಿಕೆಗಳು ಮಣಿಕರ್ಣಿಕ ಸ್ಥಳದಲ್ಲಿರುವ ನಂಬಿಕೆಗಳೊಂದಿಗೆ ಸಾಮ್ಯತೆ ಇರುವುದು ಕಂಡುಬರುತ್ತದೆ. ಭಾರತದ ಅನೇಕ ತೀರ್ಥಯಾತ್ರಾ ಸ್ಥಳಗಳಲ್ಲಿ ಇದೇ ಬಗೆಯ ನಂಬಿಕೆಗಳಿವೆ

ಜಿ.ಎಸ್. ಶಿವರುದ್ರಪ್ಪ ಅವರು ರೋಮನ್ ಬಾತ್ ಸ್ಥಳದಲ್ಲಿ ಉತ್ಖನನ ನಡೆಸಿದ ಸಂದರ್ಭವನ್ನು ಕುರಿತು "ಪ್ರಾಣಿಗಳನ್ನು ದೇವತೆಗೆ ಬಲಿಕೊಡುವ ಶಿಲಾಪೀಠವೂ, ಹದಿಮೂರು ಸಾವಿರ ರೋಮನ್ ನಾಣ್ಯಗಳೂ, ಅಂದಿನ ಪೂಜಾ ಸಾಮಾಗ್ರಿಗಳೂ ಹಾಗೂ ಕೆಲವು ಲಿಖಿತಗಳೂ ದೊರೆತವು"(ಜಿ.ಎಸ್. ಶಿವರುದ್ರಪ್ಪ., ಇಂಗ್ಲೆಂಡಿನಲ್ಲಿ ಚತುರ್ಮಾಸ., ಪು-೧೦೧)ಎಂದು ಉಲ್ಲೇಖಿಸಿದ್ದಾರೆ. ರೋಮನ್ನರು ಇಂಗ್ಲೆಂಡಿನ ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ರೋಮನ್ ಸಂಸ್ಕೃತಿಯ ಆಚರಣೆಗಳು ಪಾಲನೆಯಾಗುತ್ತಿತ್ತು ಎಂಬುದನ್ನು ಗ್ರಹಿಸಲಾಗಿದೆ. ರೋಮ್ ಸಂಸ್ಕೃತಿಯಲ್ಲಿ ಭಾರತದಲ್ಲಿ ವೇದಕಾಲದಲ್ಲಿದ್ದ ಪ್ರಾಣಿಬಲಿ ಆಚರಣೆಗಳಂತೆ ಪೂಜೆ ಮಾಡುವ ಸಂಪ್ರದಾಯ ಪದ್ಧತಿಗಳು ಚಾಲ್ತಿಯಲ್ಲಿತ್ತು ಎಂಬುದು ವಿಧಿತವಾಗುತ್ತದೆ.

ರಕಮದೋರಿನ ಕೊಂಡಲವಾಡ : ಪ್ರಭಾಕರ ಶಿಶಿಲ ಅವರು ರಕಮದೋರಿನ ಕೊಂಡಲವಾಡ ಸ್ಥಳದ ಬಗ್ಗೆ "ಫ್ರಾನ್ಸ್ ದೇಶದ ರಕಮದೋರು ಹನ್ನೆರಡನೇ ಶತಮಾನದ ಪ್ರಖ್ಯಾತ ಪವಾಡ ಕ್ಷೇತ್ರ. ಪ್ರಾಟಸ್ಟಂಟರ ಪುಣ್ಯಕ್ಷೇತ್ರ. ಇಲ್ಲಿನ ಏಳು ಬೆಟ್ಟಗಳಲ್ಲಿ ಏಳು ದೇವಾಲಯಗಳಿವೆ. ಇಲ್ಲಿಯೂ ಹರಕೆ ಕಟ್ಟಿಕೊಳ್ಳುವ, ಇಷ್ಟಾರ್ಥ

ಸಿದ್ಧಿಯಾದ ಬಳಿಕ ಹರಕೆಯನ್ನು ಕಾಣಿಕೆ ಸಲ್ಲಿಸುವ ಪದ್ಧತಿ ಆಚರಣೆಯಲ್ಲಿದೆ. ಇಲ್ಲಿನ ಗುಹೆಗಳಲ್ಲಿ ಹಳೆಯ ಒಡಂಬಡಿಕೆ ಕಾಲಕ್ಕೆ ಸೇರಿದ 'ಸೇಂಟ್ ಜಾಕ್ವಿಸ್' ಎಂಬ ಸನ್ಯಾಸಿಯು ತಪಸ್ಸು ಮಾಡಿದ್ದರು ಎಂಬ ಐತಿಹ್ಯವಿದೆ. ೧೧೬೬ರಲ್ಲಿ ಸೇಂಟ್ ಅಮಾಡರನ ಮಮ್ಮಿ(ಶವ) ಇಲ್ಲಿನ ಗುಹೆಯಲ್ಲಿ ಕಾಣಸಿಕ್ಕಿದೆ. ಅಂದಿನಿಂದ ಇಲ್ಲಿ ಪವಾಡಗಳು ನಡೆಯುವುದನ್ನು ಜನರು ನಂಬಿ ಬರುತ್ತಾರೆ"(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೬೩,೬೪)ಎಂದಿದ್ದಾರೆ.

ರಕಮದೋರಿನ ಬಗೆಗಿನ ಈ ವಿವರಗಳಲ್ಲಿ ಕೆಲವು ಚರ್ಚಾತ್ಮಕ ಅಂಶಗಳನ್ನು ಗುರುತಿಸಲಾಗಿದೆ. ಫ್ರಾನ್ಸ್ ಕ್ರಾಂತಿಗೆ ಮೊದಲು ಫ್ರಾನ್ಸ್‌ನ ಜನರು ಭಾರತ ದೇಶದಲ್ಲಿರುವಂತೆ ಪವಾಡಗಳಲ್ಲಿ, ದೇವರಲ್ಲಿ ನಂಬಿಕೆಯನ್ನು ಹೊಂದಿದ್ದರು. ಹರಕೆ ಪದ್ಧತಿಯು ಪ್ರಚಲಿತದಲ್ಲಿತ್ತು. ಐತಿಹ್ಯಗಳು ಹುಟ್ಟಿಕೊಂಡಿತ್ತು ಎಂಬ ಅಂಶಗಳು ತಿಳಿದುಬರುತ್ತದೆ. ಭಾರತದಲ್ಲಿ ಇಂದಿಗೂ ಹರಕೆ ಪದ್ಧತಿ ಇದೆ, ಐತಿಹ್ಯಗಳಿವೆ, ಪವಾಡಗಳನ್ನು ನಂಬಲಾಗುತ್ತದೆ. ಸಾಂಸ್ಕೃತಿಕ ಆಚರಣೆಗಳ ನೆಲೆಯಲ್ಲಿ ರಕಮದೋರಿನ ವಿವರಗಳನ್ನು ಗಮನಿಸಿದಾಗ ಭಾರತೀಯ ಆಚರಣೆಗಳಿಗೂ ಇಲ್ಲಿನ ಆಚರಣೆಗಳಿಗೂ ಸಾಮ್ಯತೆಗಳಿರುವುದನ್ನು ಕಾಣಲಾಗಿದೆ.

ಲೂರ್ದ್ಸ್ ಎಂಬ ಪವಾಡ ಕ್ಷೇತ್ರ : ಶಿಶಿಲ ಅವರು ಲೂರ್ದ್ಸ್ ಎಂಬ ಕ್ರೈಸ್ತರ ಪವಿತ್ರ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿ ಪ್ರಚಲಿತವಿರುವ ಐತಿಹ್ಯಗಳನ್ನು ಉಲ್ಲೇಖಿಸಿದ್ದಾರೆ. ರಕಮದೋರಿನಂತೆ ಲೂರ್ದ್ಸ್ ಕೂಡ ಪವಾಡ ಕ್ಷೇತ್ರವಾಗಿದೆ. 'ಲೂರ್ದ್ಸ್' ಗಾವ್ ಎಂಬ ನದಿಯ ದಂಡೆಯ ಮೇಲಿನ ಪ್ರದೇಶ. ಈ ಪ್ರದೇಶದಲ್ಲಿ ಒಂದು ಐತಿಹ್ಯ ಪ್ರಚಲಿತವಿದೆ. 'ಮಸ್ಸೇಬಿಲ್ ಎಂಬ ಪ್ರದೇಶಕ್ಕೆ ಹದಿನೈದರ ಹರೆಯದ ಬಾಲೆ 'ಬೆರ್ನಡಿಟ್ಟ್' ಎಂಬುವವಳು ಸೌದೆಯನ್ನು ತರಲು ಹೋಗಿರುತ್ತಾಳೆ. ಅಲ್ಲಿನ ಗವಿಯಲ್ಲಿ ಬೆರ್ನಡಿಟ್ಟಳಿಗೆ ದಿವ್ಯವಾದ ಸ್ತ್ರೀಯ ದರ್ಶನವಾಗುತ್ತದೆ. ಜನರು ಆ ದಿವ್ಯ ಸ್ತ್ರೀಯು ಯೇಸುವಿನ ತಾಯಿ ಮೇರಿ ಎಂದು ಭಾವಿಸಿ ಒಂದು ದೇಗುಲವನ್ನು ನಿರ್ಮಿಸುತ್ತಾರೆ. ಬೆರ್ನಡಿಟ್ಟ್ ಸನ್ಯಾಸಿನಿಯಾಗಿ ಜನರ ಸೇವೆಗೆ ತೊಡಗುತ್ತಾಳೆ'. ಫ್ರಾನ್ಸ್ ದೇಶದ ಈ ಐತಿಹ್ಯಕ್ಕೂ, ಭಾರತೀಯ ಪರಂಪರೆಯಲ್ಲಿ ದೇವಸ್ಥಾನಗಳ ನಿರ್ಮಾಣಗಳಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಐತಿಹ್ಯಗಳಿಗೂ ಸಾಮ್ಯತೆಗಳಿವೆ. ಬೆರ್ನಡಿಟ್ಟಳಿಗೆ ದರ್ಶನ ನೀಡಿದ ಗವಿಯಲ್ಲಿ ಮೇರಿ ತೋರಿಸಿಕೊಟ್ಟದ್ದು ಎಂದು ನಂಬಲಾದ ನೀರಿನ ಚಿಲುಮೆ ಇದೆ. ಈ ಚಿಲುಮೆಯ ನೀರನ್ನು ಅಲ್ಲಿನ ಭಕ್ತರು ಪವಿತ್ರ ತೀರ್ಥವೆಂದು ಪ್ಲಾಸ್ಟಿಕ್ ಬಾಟಲಿಗಳಲ್ಲಿ ಒಯ್ಯುತ್ತಾರೆ. ಈ ನೀರಲ್ಲಿ ಸ್ನಾನ ಮಾಡಿದರೆ ಯಾವುದೇ ಬಗೆಯ ವ್ಯಾಧಿಯು ಗುಣವಾಗುತ್ತದೆ ಎಂಬ ನಂಬಿಕೆ ಇದೆ. ಸಾವಿರಾರು ರೋಗಿಗಳು ತಮ್ಮ ವ್ಯಾಧಿಯ ನಿವಾರಣೆಗಾಗಿ ಪ್ರತಿನಿತ್ಯ ಬರುತ್ತಾರೆ. ಭಾರತದಲ್ಲಿ ಅಲಹಾಬಾದ್‌ನ ತ್ರಿವೇಣಿ ಸಂಗಮದಲ್ಲಿ (ಗಂಗಾ,ಯಮುನಾ,ಸರಸ್ವತಿ ನದಿಗಳು) ಇದೇ ರೀತಿಯ ನಂಬಿಕೆಗಳಿವೆ.

ಮುಂದುವರಿದ ರಾಷ್ಟ್ರ ಎನಿಸಿರುವ ಫ್ರಾನ್ಸ್ ದೇಶದಲ್ಲಿ ಇಂದಿಗೂ ಇಂತಹ ಮೂಢನಂಬಿಕೆಗಳನ್ನು ನಂಬುತ್ತಾರೆಯೇ?. ಲೇಖಕರೇ ಈ ಗೊಂದಲವನ್ನು ನಿವಾರಿಸಿದ್ದಾರೆ. ಲೂರ್ದ್ಸ್‌ನಲ್ಲಿನ ಪವಾಡಗಳ ಬಗ್ಗೆ ಅಧ್ಯಯನ ಮಾಡಲು ೧೮೮೨ರಲ್ಲಿ ಮೆಡಿಕಲ್ ಬ್ಯೂರೋ ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಅಧ್ಯಯನದ ಪ್ರಕಾರ 'ಪವಿತ್ರ ನೀರಿನಲ್ಲಿ ಸ್ನಾನ ಮಾಡಿ ಗುಣಮುಖರಾದವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಗುಣವಾಗಲು ಕಾರಣವಾದ ಅಂಶಗಳನ್ನು ವಿವರಿಸಿದ್ದಾರೆ. ವೈದ್ಯಕೀಯ ಪರೀಕ್ಷೆಗೆ ನಿಲುಕದ, ವಿವರಿಸಲಾಗದ ಘಟನೆಗಳನ್ನು ಮಾತ್ರ ಪವಾಡವೆಂದು ಈ ಮೆಡಿಕಲ್ ಬ್ಯುರೋ ತೀರ್ಮಾನಿಸುತ್ತದೆ. ಲೇಖಕರು ಭೇಟಿ ನೀಡಿ

ವಿವರ ಪಡೆದ ಪ್ರಕಾರ ಅಲ್ಲಿಯವರೆಗೆ ಅರುವತ್ತೈದು ಪವಾಡಗಳನ್ನು ದಾಖಲಿಸಲಾಗಿದೆ. ಜನರನ್ನು ಮೂಢನಂಬಿಕೆಗಳಿಂದ ದೂರ ಮಾಡಲು ಈ ರೀತಿಯ ಕ್ರಮಗಳು ಉಪಯುಕ್ತಕಾರಿಯಾಗಿವೆ. ಭಾರತದಲ್ಲಿ ಜನರನ್ನು ಪವಾಡವೆಂದು ನಂಬಿಸಿ ಮೋಸಗೊಳಿಸುವವರ ಸಂಖ್ಯೆ ಕಡಿಮೆಯೇನಿಲ್ಲ. ಅವರ ಪವಾಡಗಳ ಪರಿಶೀಲನೆಗೆ ಈ ರೀತಿ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿ ಪವಾಡಗಳ ಸತ್ಯಾಸತ್ಯತೆಯನ್ನು ಜನರಿಗೆ ತಿಳಿಸುವ ಕಾರ್ಯವಾಗಬೇಕಿದೆ. ಆದರೆ ಭಾರತದಲ್ಲಿ ಮನುಷ್ಯರೇ ದೇವರಾಗಿಬಿಡುತ್ತಾರೆ. ಅದನ್ನು ಲೇಖಕರು "ನಮ್ಮ ದೇಶದಲ್ಲಿ ದೇವರು ಮೈಮೇಲೆ ಬರುತ್ತಾರೆ ಎನ್ನುವವರ, ತಾವೇ ದೇವರು ಎಂದು ಹೇಳಿಕೊಳ್ಳುವವರ ಮತ್ತು ಅದನ್ನು ನಂಬಿ ನಡೆದುಕೊಳ್ಳುವ ಅಸಂಖ್ಯಾತ ಜನರ ನೆನಪಾಯಿತು" (ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೧೫೭) ಎಂದಿದ್ದಾರೆ. ನಮ್ಮಲ್ಲಿ ಪವಾಡಗಳನ್ನು ಬಯಲು ಮಾಡುವ, ಪವಾಡಗಳಿಗೆ ವೈಜ್ಞಾನಿಕ ಕಾರಣಗಳನ್ನು ವಿವರಿಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಹುಲಿಕಲ್ ನಟರಾಜ್ ಅವರು ಪವಾಡ ಬಯಲು ಮಾಡಲು ಅನೇಕ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ನಡೆಸಿದ್ದಾರೆ. 'ಪವಾಡ ರಹಸ್ಯ ಬಯಲು' ಎಂಬ ಕೃತಿಗಳನ್ನು ಬರೆದಿದ್ದಾರೆ. ಅನೇಕ ವಿಡಿಯೋಗಳನ್ನು ತಯಾರಿಸಿ 'ಮಿರ್‍ಯಾಕಲ್ ಬಸ್ಟರ್' ಎಂಬ ಯೂಟ್ಯೂಬ್ ಚಾನಲ್ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಆದರೆ ಇಂತಹ ಜಾಗೃತಿ ಕಾರ್ಯಕ್ರಮಗಳು ಮೂಢನಂಬಿಕೆಗೆ ಒಳಗಾದ ಜನರಿಗೆ ತಲುಪುತ್ತಿಲ್ಲ. ಈ ದಿಸೆಯಲ್ಲಿ ಸಂಶೋಧನೆಗೆ ವಿಪುಲ ಅವಕಾಶಗಳಿರುವುದನ್ನು ಗಮನಿಸಬಹುದಾಗಿದೆ.

'ಕಲಾವಿದ ಕಂಡ ಫ್ರಾನ್ಸ್' ಕೃತಿಯಲ್ಲಿ ಆವಗಾನ್ ನಗರದಲ್ಲಿ ಭಾರತೀಯ ಸಂಪ್ರದಾಯದ ಭಜನಾ ತಂಡವನ್ನು ಹೋಲುವ ಜನರ ಗುಂಪಿನ ಬಗ್ಗೆ ವಿವರಿಸಲಾಗಿದೆ. ಅವರು ಕಾವಿಯನ್ನು ಧರಿಸಿ ಭಜನೆಯನ್ನು ಹೋಲುವ ಗೀತೆಯನ್ನು ಹಾಡುತ್ತಾ ಸಾಗುತ್ತಿದ್ದುದನ್ನು ಉಲ್ಲೇಖಿಸಲಾಗಿದೆ. ಭಜನಾ ಸಂಪ್ರದಾಯವು ಭಾರತದಲ್ಲಿ ಅನಾದಿಕಾಲದಿಂದ ಅನೂಚಾನವಾಗಿ ಸಾಗುತ್ತಾ ಬಂದಿದೆ. ಈ ಸಂಪ್ರದಾಯಗಳ ಆಚರಣೆಯನ್ನು ದೂರದ ಫ್ರಾನ್ಸಿನಲ್ಲೂ ಕಂಡಾಗ ಸಹಜವಾಗಿ ಆಶ್ಚರ್ಯವಾಗುತ್ತದೆ. ಭಜನಾ ಸಂಪ್ರದಾಯವು ಫ್ರಾನ್ಸಿನಲ್ಲಿ ಕಂಡುಬರಲು ಕಾರಣವೇನಿರಬಹುದು? ಎಂಬುದನ್ನು ವಿವೇಚಿಸಿದಾಗ 'ಮಾನವನ ಸುಪ್ತ ಮನಸ್ಸು ಮನೋಲ್ಲಾಸಕ್ಕಾಗಿ ಕಂಡುಕೊಂಡ ಸರಳ ಮಾರ್ಗವೇ ಭಜನಾ ಪರಂಪರೆಯಾಗಿದ್ದು ಅದು ದೇಶ-ಕಾಲವನ್ನು ಮೀರಿ ಎಲ್ಲಾ ದೇಶಗಳಲ್ಲಿಯೂ ಆಚರಣೆಯಲ್ಲಿದೆ' ಎಂಬ ತಾತ್ವಿಕ ಅಂಶವನ್ನು ಕಂಡುಕೊಳ್ಳಲಾಗಿದೆ. ಭಜನೆ ಮತ್ತು ಧ್ಯಾನ ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವ ಸಾಧನಗಳಾಗಿದ್ದು ಎಲ್ಲಾ ಧರ್ಮಗಳಲ್ಲಿಯೂ ಕಂಡುಬರುತ್ತದೆ. ಸಂಗೀತ ವಾದ್ಯದೊಡನೆ ಸಾಗುವ ಕಾವಿಧಾರಿಗಳನ್ನು ಗಮನಿಸಿದಾಗ ಭಾರತೀಯ ಭಜನಾ ಸಂಪ್ರದಾಯವು ಫ್ರಾನ್ಸಿಗೆ ಯಾವುದಾದರೂ ಒಂದು ಮೂಲದಿಂದ ಹೋಗಿರಬಹುದೇ ಎಂಬ ಅನುಮಾನವನ್ನು ಕೃತಿಯು ವ್ಯಕ್ತಪಡಿಸಿದೆ.

'ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ' ಕೃತಿಯಲ್ಲಿ ವೈಚಾರಿಕ ಮನೋಧರ್ಮವುಳ್ಳ ಚಿಂತನಶೀಲ ವಿಚಾರಗಳು ವ್ಯಕ್ತವಾಗಿವೆ. ಈ ಕೃತಿಯು ಧಾರ್ಮಿಕ ನಂಬಿಕೆಯನ್ನು ವಿರೋಧಿಸುವುದಿಲ್ಲ, ನಾಸ್ತಿಕ ಭಾವವನ್ನು ಪ್ರದರ್ಶಿಸಿಲ್ಲ. ಧರ್ಮ, ದೇವರ ಹೆಸರಿನಲ್ಲಿ ಹೇಳಿದ ಎಲ್ಲಾ ವಿಷಯಗಳನ್ನು ತರ್ಕಿಸದೆ ನಂಬಿರುವುದಿಲ್ಲ. ಆದ್ದರಿಂದಲೇ ಧಾರ್ಮಿಕ ಆಚರಣೆಗಳಲ್ಲಿರುವ ಮೂಢನಂಬಿಕೆಗಳನ್ನು ವಿರೋಧಿಸಿರುವುದನ್ನು ಗುರುತಿಸಲಾಗಿದೆ. ಕೃತಿಕಾರರ ಸ್ನೇಹಿತ 'ಜುವಾನ್ ಸ್ಪೆಲ್ಲ್' ಎಂಬಾತ "ಫ್ರಾನ್ಸಿನಲ್ಲಿ ಮಹಾಕ್ರಾಂತಿ ಸಂಭವಿಸಿತು. ಆ ಬಳಿಕ ಜನರಿಗೆ ದೇವರು ಮತ್ತು ಧರ್ಮದಲ್ಲಿ ವಿಶ್ವಾಸ ಉಳಿಯಲಿಲ್ಲ" ಎಂದು ಹೇಳಿದಾಗ ಅದಕ್ಕೆ

ಪ್ರತಿಕ್ರಿಯೆ ನೀಡುತ್ತಾ "ನಿಮ್ಮಲ್ಲಿ ಕ್ರಾಂತಿ ಸಂಭವಿಸಿ ದೇಶ ಮುಂದುವರೆಯಿತು. ನಮ್ಮಲ್ಲಿ ಕ್ರಾಂತಿ ಸಂಭವಿಸಲಿಲ್ಲ. ಈಗಲೂ ಆಳುವವರು ಮತ್ತು ಪುರೋಹಿತರು ಒಂದಾಗಿ ಜನಸಾಮಾನ್ಯರನ್ನು ಸುಲಿಯತ್ತಲೇ ಇದ್ದಾರೆ"(ಪ್ರಭಾಕರ ಶಿಶಿಲ, ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ, ಪು-೫೭)ಎಂದಿದ್ದಾರೆ. ರಾಷ್ಟ್ರಮಟ್ಟದಲ್ಲಿ ಜರುಗುವ ಪ್ರಭಾವಿ ಕ್ರಾಂತಿಗಳು ದೇಶದ ಜನರನ್ನು ಒಗ್ಗೂಡಿಸುವಲ್ಲಿ, ರಾಷ್ಟ್ರಿಯ ಪ್ರಜ್ಞೆ, ದೇಶಪ್ರೇಮವನ್ನು ಮೂಡಿಸುವುದರಲ್ಲಿ ಸಹಕಾರಿಯಾಗುತ್ತದೆ ಎಂಬ ಸಂಗತಿಯನ್ನು ಒಪ್ಪಲಾಗಿದೆ. ಹಾಗೆಂದು ಎಲ್ಲಾ ಕ್ರಾಂತಿಗಳು, ಚಳುವಳಿಗಳು ದೇಶದ ಸಮಸ್ತ ಸಮುದಾಯವನ್ನು ಏಕತ್ರಗೊಳಿಸುವುದಿಲ್ಲ. ಪ್ರಭುತ್ವದ ವಿರುದ್ಧ ನಡೆದ ಕ್ರಾಂತಿಗಳು ಮಾತ್ರ ಬದಲಾವಣೆಗೆ ಕಾರಣವಾಗಿವೆ. ದೇಶವನ್ನು ಅಭಿವೃದ್ಧಿಯ ಕಡೆಗೆ ಸಾಗುವಂತೆ ಪ್ರೇರೇಪಿಸಿವೆ. ಕ್ರಾಂತಿಯ ಉದ್ದೇಶಗಳು ವೈಯಕ್ತಿಕ ಹಿತಾಸಕ್ತಿಯನ್ನು ಮೀರಿ ಅಭಿವೃದ್ಧಿ ಕೇಂದ್ರಿತ ನೆಲೆಯಲ್ಲಿ ಇದ್ದಾಗ ಬದಲಾವಣೆ ಸಾಧ್ಯವಾಗುತ್ತದೆ ಎಂಬುದು ಕೃತಿಯ ನಿಲುವಾಗಿದೆ. ಆದ್ದರಿಂದಲೇ ಭಾರತ ದೇಶವು ಮುಂದುವರೆದ ದೇಶವಾಗಿ ಬೆಳೆದಿಲ್ಲ, ಜನರಲ್ಲಿರುವ ಮೂಢನಂಬಿಕೆ ಅಳಿಯಲಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ರೋಮನ್ನರಲ್ಲಿ ಮೂಢನಂಬಿಕೆ : ಅತಿಯಾದ ಧರ್ಮಪೇಕ್ಷ ಮನಸ್ಥಿತಿಯು ಮೂಢನಂಬಿಕೆಗಳ ಸೃಷ್ಟಿಗೆ ಕಾರಣವಾಗುತ್ತದೆ. ಮನುಷ್ಯನ ಆಲೋಚನೆಗೆ, ಕಲ್ಪನೆಗೆ ನಿಲುಕದ ಘಟನಾವಳಿಗಳ ಕಾರಣದಿಂದ ದೇವರು ಅಸ್ತಿತ್ವವನ್ನು ಪಡೆದುಕೊಳ್ಳುತ್ತಾನೆ. ಭಯ ಮತ್ತು ಭವಿಷ್ಯದ ಆತಂಕಗಳು ಮನಸ್ಸಿನಲ್ಲಿ ದೇವರ ಅಸ್ತಿತ್ವವನ್ನು ಒಪ್ಪುವಂತೆಯೂ, ನಂಬಿಕೆಯಲ್ಲಿ ನಡೆಯುವಂತೆಯೂ ಮಾಡುತ್ತವೆ. ಇದು ಸಾರ್ವತ್ರಿಕವೂ ಸಾರ್ವಕಾಲಿಕವೂ ಆಗಿದೆ. ಆದ್ದರಿಂದ ಯುರೋಪಿನಲ್ಲಿಯೇ ಮುಂದುವರೆದ ದೇಶಗಳೆನಿಸಿದ ಲಂಡನ್, ಫ್ರಾನ್ಸ್, ರೋಮ್ ದೇಶಗಳಲ್ಲಿ ಮೂಢನಂಬಿಕೆಗಳು ಇಂದಿಗೂ ಪಾಲನೆಯಾಗುತ್ತಿರುವುದನ್ನು ಪ್ರವಾಸ ಕೃತಿಗಳು ಉಲ್ಲೇಖಿಸಿವೆ. ರೋಮನ್ನರಲ್ಲಿ ಅನೇಕ ಮೂಢನಂಬಿಕೆಗಳು ಪ್ರಚಲಿತದಲ್ಲಿರುವುದನ್ನು ಕೃತಿಗಳು ಉದಾಹರಿಸಿವೆ. ರೋಮನ್ ಜನರು ಕಲೋಸಿಯಮ್‌ನ ಕಟ್ಟಡದ ಬಗ್ಗೆ ಮೂಢನಂಬಿಕೆಯನ್ನು ಹೊಂದಿದ್ದಾರೆ. 'ಕಲೋಸಿಯಂ ನಾಶವಾದ ದಿನ ರೋಂ ನಗರಕ್ಕೆ ವಿಪತ್ತು ಎಂಬ ಮೂಢನಂಬಿಕೆ ರೋಮಾದ ಜನರಲ್ಲಿದೆ' ಎಂದು 'ಪಶ್ಚಿಮ ಮುಖಿ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಹಾಗೆಯೇ ರೋಮ್ ನಗರದಲ್ಲಿ 'ಟ್ರೇವಿ ಫೌಂಟೇನ್' ಎಂಬ ಸ್ಥಳವಿದೆ. ಅಲ್ಲಿ ನೀರಿನ ಕಾರಂಜಿ ಇದೆ. 'ಈ ಫೌಂಟೇನ್‌ಗೆ ಹಿಮ್ಮುಖವಾಗಿ ತಿರುಗಿ ನಾಣ್ಯವನ್ನು ಎಸೆದರೆ ಪುನಃ ರೊಮ್‌ಗೆ ಬರುತ್ತೇವೆ' ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಈ ವಿಷಯವನ್ನು ದೊಡ್ಡೇರಿ ವೆಂಕಟಗಿರಿರಾವ್, ಹೇಮಲತಾ ಮಹಿಷಿ, ಅನುಪಮಾ ನಿರಂಜನ, ಹೋ ಶ್ರೀನಿವಾಸಯ್ಯ ಮೊದಲಾದ ಲೇಖಕರು ಉಲ್ಲೇಖಿಸಿದ್ದಾರೆ. ಇದರಿಂದ ಮೂಢನಂಬಿಕೆಗಳು ಸಾರ್ವಕಾಲಿಕ ಮತ್ತು ಸಾರ್ವಜನಿಕ ಎಂಬ ನಿಲುವಿಗೆ ಬರಲಾಗಿದೆ. ದೇಶ-ಕಾಲವನ್ನು ಮೀರಿ ಎಲ್ಲಾ ಕಡೆಯೂ ಆಚರಣೆಯಲ್ಲಿರುವುದನ್ನು ಗುರುತಿಸಲಾಗಿದೆ. ಮೂಢನಂಬಿಕೆಗಳು ಪ್ರಾದೇಶಿಕ ಗುಣಧರ್ಮವನ್ನು ಹೊಂದಿವೆ. ಒಂದು ಪ್ರದೇಶ (ದೇಶ)ದಲ್ಲಿ ಪ್ರಚಲಿತವಿರುವ ಮೂಢನಂಬಿಕೆಗಳು ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿ ಆಚರಣೆಯಲ್ಲಿರುತ್ತದೆ. ಕೆಲವು ಮೂಢನಂಬಿಕೆಗಳಲ್ಲಿ ಪ್ರಾದೇಶಿಕತೆಯ ವ್ಯಾಪ್ತಿಯನ್ನು ಮೀರಿ ಸಾರ್ವತ್ರಿಕ ಗುಣಧರ್ಮಗಳನ್ನು ಪಡೆದುಕೊಂಡಿರುತ್ತವೆ. ಉದಾಹರಣೆಗೆ ನೀರಿಗೆ ನಾಣ್ಯವನ್ನು ಚಿಮ್ಮುವ ನಂಬಿಕೆಗಳು ಭಾರತದಾದ್ಯಂತ ಪ್ರಚಲಿತದಲ್ಲಿರುವುದನ್ನು ಕಾಣಬಹುದು.

ದೇವರನ್ನು ನಂಬದ ಸೋವಿಯತ್ ದೇಶದಲ್ಲಿ ಮನುಷ್ಯನನ್ನೇ ದೇವರನ್ನಾಗಿ ಆರಾಧಿಸುತ್ತಾರೆ. ಮನುಷ್ಯನನ್ನು ದೇವರನ್ನಾಗಿ ಪರಿಭಾವಿಸುವುದು ಧಾರ್ಮಿಕ ನಂಬಿಕೆ ಆಗುವುದಿಲ್ಲ. ವ್ಯಕ್ತಿ ಆರಾಧನೆ ಅಥವಾ ಅಭಿಮಾನದ ನೆಲೆಯಲ್ಲಿ ಬರುತ್ತದೆ. ಸೋವಿಯತ್ ದೇಶದ ಜನರಿಗೆ 'ಲೆನಿನ್' ಅಕ್ಷರಶಃ ದೇವರ ಪ್ರತಿರೂಪ. ಆದರೆ ದೇವರೆಂದು ಭಾವಿಸುವುದಿಲ್ಲ. ಪೌರಾಣಿಕ ವ್ಯಕ್ತಿಯೆಂದಾಗಲಿ, ಕಾರಣಿಕ ಪುರುಷನೆಂದಾಗಲಿ ಭ್ರಮಿಸುವುದಿಲ್ಲ. ಆತನ ಬಗ್ಗೆ ಸುಳ್ಳು ಕಥೆಗಳನ್ನು ಕಟ್ಟುವುದಿಲ್ಲ. ಆತನನ್ನು ದೇಶವನ್ನು ನಿರ್ಮಿಸಿದ ಒಬ್ಬ ಅಪ್ರತಿಮ ದೇಶಭಕ್ತನಾಗಿ ನೋಡಲಾಗಿದೆ. ಆತನಿಂದ ಪ್ರೇರಣೆಯನ್ನು ಹೊಂದಲು ಪ್ರತಿಯೊಬ್ಬನ ಮನೆಯಲ್ಲೂ, ಅಂಗಡಿಗಳಲ್ಲೂ, ರಸ್ತೆಗಳಲ್ಲೂ, ಚೌಕಗಳಲ್ಲೂ ಲೆನಿನ್ ಭಾವಚಿತ್ರಗಳನ್ನು, ಮೂರ್ತಿಗಳನ್ನೂ ಇಟ್ಟಿರುತ್ತಾರೆ. ಸೋವಿಯತ್ ದೇಶವು ಸಮಾಜವಾದ ಮತ್ತು ಸಮತಾವಾದದ ನೆಲೆಯಲ್ಲಿ ಆಡಳಿತ ನಿರ್ವಹಿಸುತ್ತಿರುವುದರಿಂದ ದೇಶದ ಹಿತಕ್ಕಾಗಿ ದುಡಿದ ವ್ಯಕ್ತಿಗಳನ್ನು ಪೂಜ್ಯಭಾವದಿಂದ ಕಾಣುವುದನ್ನು ಗ್ರಹಿಸಲಾಗಿದೆ.

ಅಲೌಕಿಕ ಜಗತ್ತಿನ ಬಗ್ಗೆ ಮನುಷ್ಯನಿಗಿರುವ ನಂಬಿಕೆ ಮತ್ತು ದೈವತ್ವದ ಬಗೆಗಿನ ಭಯವೇ ದೈವಭಕ್ತಿಗೆ ಮೂಲ ಕಾರಣವಾಗಿದೆ. ಒಂದೇ ಬಗೆಯ ಆಚರಣೆಗಳನ್ನು ಅನುಸರಿಸುವ, ನಿರ್ಧಿಷ್ಟ ವ್ಯಕ್ತಿ ಅಥವಾ ವಸ್ತುವನ್ನು ದೇವರೆಂದು ನಂಬುವ ಜನರ ನಿರ್ಧಿಷ್ಟ ಸಮುದಾಯವನ್ನು 'ಧರ್ಮ' ಎಂದು ಹೆಸರಿಸಲಾಗಿದೆ. ಧರ್ಮಾಚರಣೆಯಲ್ಲಿ ನಿರ್ಧಿಷ್ಟ ಸಮುದಾಯಕ್ಕೆ ಒಬ್ಬ ಅಥವಾ ಹಲವು ದೇವರುಗಳನ್ನು ಪೂಜಿಸಲಾಗುತ್ತದೆ. ಧರ್ಮದ ಒಳಗೆ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಲ್ಲಿನ ವ್ಯತ್ಯಾಸಗಳ ಕಾರಣದಿಂದ ಒಳಪಂಗಡಗಳು ನಿರ್ಮಾಣವಾಗಿವೆ. ಯುರೋಪ್ ಪ್ರವಾಸ ಕೃತಿಗಳಲ್ಲಿ ಈ ಬಗೆಯ ವಿಭಿನ್ನ ಧಾರ್ಮಿಕ ಆಚರಣೆಗಳನ್ನು ಉಲ್ಲೇಖಿಸಲಾಗಿದೆ. ಪಂಥಭೇದಗಳು ವಿವಿಧ ಮೂಢನಂಬಿಕೆಗಳ ಆಚರಣೆಗೆ ಕಾರಣವಾಗಿರುವುದು ಕಂಡುಬರುತ್ತದೆ. ದೇವರ ಮೇಲಿನ ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡವರು ತಮ್ಮ ಅನುಕೂಲಕ್ಕೆ ಮೂಢನಂಬಿಕೆಗಳನ್ನು ಬಳಸಿಕೊಳ್ಳುವುದು ಎಲ್ಲಾ ಧರ್ಮಗಳಲ್ಲಿರುವ ಸಾಮಾನ್ಯ ಸಮಸ್ಯೆಯಾಗಿದೆ.

ವಿದೇಶಿಯರಿಗೆ ಪ್ರವೇಶವಿಲ್ಲ : ಲಂಡನ್ ನಗರದ ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ವಿದೇಶಿಯರ ಪ್ರವೇಶಕ್ಕೆ ಯಾವುದೇ ಅಡೆತಡೆಗಳಿಲ್ಲ. ಲಂಡನ್ನಿನ ಧಾರ್ಮಿಕ ಸ್ಥಳಗಳಾದ ಚರ್ಚುಗಳಲ್ಲೂ ಸದಾ ತೆರೆದ ಸ್ವಾಗತ ಇರುತ್ತದೆ. ಆದರೆ ಹಿಂದೂ ದೇವಸ್ಥಾನಗಳಲ್ಲಿ ಪ್ರವೇಶಕ್ಕೆ ನಿರ್ಬಂಧಗಳಿರುವುದನ್ನು ಇಂಗ್ಲೆಂಡಿನಲ್ಲಿ ಚತುರ್ಮಾಸ ಕೃತಿಯು ಗುರುತಿಸಿದೆ. ಭಾರತದಲ್ಲಿನ ದೊಡ್ಡ ಹಿಂದೂ ದೇವಸ್ಥಾನಗಳ ಬಾಗಿಲುಗಳ ಮೇಲೆ "ವಿದೇಶಿಯರಿಗೆ ಪ್ರವೇಶವಿಲ್ಲ"(ಜಿ. ಎಸ್. ಶಿವರುದ್ರಪ್ಪ, ಇಂಗ್ಲೆಂಡಿನಲ್ಲಿ ಚತುರ್ಮಾಸ, ಪು-೩೬) ಎಂಬ ಫಲಕಗಳನ್ನು ತೂಗು ಹಾಕಿರುವುದನ್ನು ಉಲ್ಲೇಖಿಸಲಾಗಿದೆ. ಮುಕ್ತ ಸ್ವಾಗತವನ್ನು ಕೋರುವ ಇಂಗ್ಲೆಂಡಿಗರ ಮನೋಭಾವಕ್ಕೂ, ಮಡಿ ಮೈಲಿಗೆಯನ್ನು ಆಚರಿಸಿಕೊಳ್ಳುತ್ತಾ ಸಂಕುಚಿತ ಮನೋಧರ್ಮದವರಾದ ಹಿಂದೂ ದೇವಾಲಯಗಳ ಆಡಳಿತ ಮಂಡಳಿಗಳಿಗೂ ಹೋಲಿಸುತ್ತಾ, ಇವರಲ್ಲಿ ಯಾರೂ ನಿಜವಾದ ಮಾನವೀಯ ದೃಷ್ಟಿಯುಳ್ಳವರು ಎಂದು ಪ್ರಶ್ನಿಸಿಕೊಳ್ಳುವಂತೆ, ಚಿಂತಿಸುವಂತೆ ಮಾಡಿದೆ. ಕೃತಿಕಾರರು ಧಾರ್ಮಿಕ ಮನೋಭಾವ ಉಳ್ಳ ಆಸ್ತಿಕರು; ಆದರೆ ವೈಚಾರಿಕ ಪ್ರಜ್ಞೆ ಉಳ್ಳವರು ಎಂಬುದನ್ನು ಈ ಮೇಲಿನ ಘಟನೆಯಿಂದ ತಿಳಿದುಬರುತ್ತದೆ.

ಧಾರ್ಮಿಕ ಸ್ಥಳಗಳಲ್ಲಿ ವಂಚನೆ : ಫ್ರಾನ್ಸ್‌ನ 'ಲೂರ್ದ್ಸ್' ಎಂಬ ಧಾರ್ಮಿಕ ಸ್ಥಳದಲ್ಲಿ ವಂಚನೆ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ 'ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಸ್ವತಃ ಕೃತಿಕಾರರೇ ವಂಚನೆಗೆ ಒಳಗಾದ ಸಂದರ್ಭವನ್ನು ಹೇಳಿಕೊಂಡಿದ್ದಾರೆ. ಲೂರ್ದ್ಸ್ ಎಂಬ ಧಾರ್ಮಿಕ ಸ್ಥಳಕ್ಕೆ ಯುರೋಪ್ ಪ್ರವಾಸ ಮಾಡಿದ ಲೇಖಕರಲ್ಲಿ ಹೆಚ್ಚಿನವರು ಭೇಟಿ ನೀಡಿಲ್ಲ.

ಭಾರತದಿಂದ ಯುರೋಪ್ ದೇಶಗಳಿಗೆ ಹೋಗಿ ನೆಲೆಸಿರುವ ಹಿಂದೂ ಸನ್ಯಾಸಿಗಳು ತಮ್ಮದೇ ಆದ ಆಶ್ರಮಗಳನ್ನು ಸ್ಥಾಪಿಸಿಕೊಂಡು ಅಲ್ಲಿನ ಜನರಿಗೆ ವಂಚನೆ ಮಾಡುತ್ತಿದ್ದಾರೆ ಎಂದು 'ಯುರೋಪ್ ನೆನಪುಗಳು' ಕೃತಿಯಲ್ಲಿ ಆರೋಪಿಸಲಾಗಿದೆ. ಯುರೋಪಿನ ಜನರನ್ನು ಯೋಗ ಮಾಡಿಸುತ್ತೇನೆ ಎಂದೂ; ಪಾದಪೂಜೆಗೆ ನಿಮ್ಮ ಮನೆಗಳಿಗೆ ಬರುತ್ತೇನೆ ಎಂದು ಹೇಳಿ ವಿದೇಶದ ಜನರಿಗೆ ವಂಚನೆ ಮಾಡುತ್ತಿದ್ದಾರೆ ಎಂದು ಕೃತಿಯಲ್ಲಿ ಉಲ್ಲೇಖಿತವಾಗಿದೆ. ಇಂತಹ ಸ್ವಾಮೀಜಿಗಳನ್ನು "ಕಾವಿಧಾರಿ ರಾವಣ ಸನ್ಯಾಸಿಗಳು"(ಪುಂಡಿಕಾಯಿ ಗಣಪತಿ ಭಟ್, ಯುರೋಪ್ ನೆನಪುಗಳು, ಪು–೬೫)ಎಂದು ಸಂಬೋಧಿಸಲಾಗಿದೆ. ಅರೆಬರೆ ತಿಳಿದ ಕೆಲವು ಸನ್ಯಾಸಿಗಳು ಏನು ತಿಳಿಯದ ವಿದೇಶಿಗರನ್ನು ಸುಲಿಯಲು ಕೆಲವು ತಂತ್ರಗಳನ್ನು ಉಪಯೋಗಿಸಿ ವಿದೇಶದಲ್ಲಿಯೇ ನೆಲೆಸಿರುವುದು ಕೃತಿಯಲ್ಲಿ ಚಿತ್ರಿಸಲಾಗಿದೆ. ಕೃತಿಯ ಅಭಿಪ್ರಾಯವನ್ನು ಗಮನಿಸಿದಾಗ ವಿದೇಶಗಳಲ್ಲಿ ಭಾರತೀಯ ಹಿಂದೂ ಸನ್ಯಾಸಿಗಳು ನೆಲೆಸಿರುವುದಕ್ಕೆ ವಿರೋಧದ ಧ್ವನಿ ಇರುವುದು ಕಂಡುಬರುತ್ತದೆ. ಭಾರತೀಯ ಸಂಸ್ಕೃತಿಯನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಳ್ಳುತ್ತಿರುವ ಸನ್ಯಾಸಿಗಳ ಬಗ್ಗೆ ಅಸಹನೆ ಇದೆ. ಆದರೆ ಟೀಕೆಗೆ ಬಳಸಿದ ಉಪಮೆಯು ಬಲಪಂಥೀಯ ಧೋರಣೆಯನ್ನು ಸೂಚಿಸುತ್ತದೆ. ಪೌರಾಣಿಕ ಪಾತ್ರಗಳನ್ನು ಅಲ್ಲಲ್ಲಿ ಉಲ್ಲೇಖಿಸಿರುವುದು ಬಲಪಂಥೀಯ ಧೋರಣೆಗಳನ್ನು ಪ್ರುತಪಡಿಸುತ್ತದೆ.

'ಯುರೋಪ್ ನೆನಪುಗಳು' ಕೃತಿಯಲ್ಲಿ ಹರೇಕೃಷ್ಣ ಪಂಥದವರ 'ಬ್ರೈನ್‌ವಾಶ್ ಟೆಕ್ನಿಕ್'ನ್ನು ಉಲ್ಲೇಖಿಸಲಾಗಿದೆ. ಗ್ರೀಕ್‌ನಲ್ಲಿ ಹರೇಕೃಷ್ಣ ಪಂಥದವರು ವಿದೇಶಿಯರಿಗಾಗಿ ಮತ್ತು ಭಾರತದಿಂದ ಅಲ್ಲಿಗೆ ಹೋಗಿರುವವರಿಗಾಗಿ ಸತ್ಕಾರಕೂಟವನ್ನು ಏರ್ಪಡಿಸಲಾಗಿರುತ್ತದೆ. ಕೃತಿಕಾರರು ತಮಗೆ ಭಾರತೀಯ ಪದ್ಧತಿಯ ಊಟ ಸಿಗಬಹುದು ಎಂಬ ಆಸೆಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗುತ್ತಾರೆ. ಭಜನೆ ಮುಗಿದ ಬಳಿಕ ಪುಷ್ಕಳವಾದ ಸಸ್ಯಾಹಾರಿ ಭೋಜನ ವ್ಯವಸ್ಥೆ ಇರುತ್ತದೆ. ಊಟ ಮಾಡುವ ಸಂದರ್ಭದಲ್ಲಿ ಊಟಕ್ಕೆ ಕುಳಿತಿರುವವರಿಗೆ ಸಸ್ಯಾಹಾರವನ್ನೆ ಏಕೆ ಸೇವಿಸಬೇಕು? ಮತ್ತು ಮಾಂಸಾಹಾರವನ್ನು ಏಕೆ ಸೇವಿಸಬಾರದು? ಮಾಂಸಾಹಾರದಿಂದ ಆಗುವ ದುಷ್ಪರಿಣಾಮಗಳೇನು? ಎಂದು ವಿವರಿಸಿ ಹೇಳಲು ತೊಡಗುತ್ತಾರೆ. ಇದು ಒಂದು ಬಗೆಯ 'ಬ್ರೈನ್ ವಾಶ್ ಟೆಕ್ನಿಕ್' ಎಂಬುದು ಕೃತಿಕಾರರ ಅಭಿಪ್ರಾಯವಾಗಿದೆ. ಮಾಂಸಾಹಾರಿಗಳನ್ನೆಲ್ಲ ಸಸ್ಯಾಹಾರಿಗಳನ್ನಾಗಿ ಪರಿವರ್ತಿಸುವ ತಂತ್ರ ಎಂದು ಕೃತಿಯಲ್ಲಿ ವಿವರಿಸಲಾಗಿದೆ. ಈ ಘಟನೆಗೆ ಸಾಮಾಜಿಕವಾಗಿ ಎರಡು ಆಯಾಮಗಳಿವೆ. ಮೊದಲನೆಯದಾಗಿ ವಿದೇಶದಲ್ಲಿ ಹರೇಕೃಷ್ಣ ಪಂಥದವರು ತಮ್ಮ ಅಸ್ತಿತ್ವಕ್ಕಾಗಿ, ತಮ್ಮ ಪಂಥವನ್ನು ಬೆಳೆಸುವುದಕ್ಕಾಗಿ ಮಾಡುತ್ತಿರುವ ಪ್ರಯತ್ನ. ಎರಡನೆಯದಾಗಿ ಸಾಮಾಜಿಕವಾಗಿ ಒಂದು ಧರ್ಮದ ಜನರು ಮತ್ತೊಂದು ಧರ್ಮಕ್ಕೆ ಸೇರಿದ ಜನರನ್ನು ಸೆಳೆಯುವ ಪ್ರಯತ್ನವು ವಿಶ್ವವ್ಯಾಪಿಯಾಗಿದ್ದು, ಇಂದು ಅದು ಪ್ರಪಂಚದ ಎಲ್ಲಾ ಧರ್ಮಗಳಲ್ಲಿಯೂ ಅಗೋಚರವಾಗಿ, ಸುಪ್ತವಾಗಿ, ಕೆಲವು ಕಡೆ ಬಹಿರಂಗವಾಗಿ ನಡೆಯುತ್ತಿದೆ. ಹರೇಕೃಷ್ಣ ಪಂಥವು ಇದಕ್ಕೆ ಹೊರತಾಗಿಲ್ಲ. ಆದರೆ ಅದಕ್ಕಾಗಿ ಬಳಸಿದ ವಿಧಾನ ಮತ್ತು ತಂತ್ರಗಳ ಬಗ್ಗೆ ಕೃತಿಯು ಅಸಹನೆಯನ್ನು

ತೋರುವುದು ಕೇವಲ ಮತಾಂತರ ಧೋರಣೆಯನ್ನು ವಿರೋಧಿಸುವುದಕ್ಕಲ್ಲ; ಬದಲಿಗೆ ಹಿಂದೂ ಧರ್ಮದ ಒಳಗಿನ ಒಂದು ಪಂಥವು ತಾನು ಹುಟ್ಟಿಬಂದ ಮೂಲ ಧರ್ಮವನ್ನು ಮೀರಿ ಬೆಳೆಯಲು ಹಾತೊರೆಯುತ್ತಿರುವ ಬಗ್ಗೆ ಇರುವ ಅಸಹನೆಯನ್ನು ಸೂಚಿಸುತ್ತದೆ.

ವೇಶ್ಯಾವೃತ್ತಿ : ಯುರೋಪಿನ ಎಲ್ಲಾ ದೇಶಗಳಲ್ಲೂ ಲೈಂಗಿಕತೆಗೆ ಮುಕ್ತವಾದ ವಾತಾವರಣ ಇದೆ ಎಂಬ ಸಂಗತಿ ಕೃತಿಗಳಿಂದ ತಿಳಿದುಬರುತ್ತದೆ. ಆದರೂ ವೇಶ್ಯಾವಾಟಿಕೆ ನಡೆಯುವ ಬಗ್ಗೆ ಕೆಲವು ಕೃತಿಗಳು ಉಲ್ಲೇಖಿಸಿವೆ. 'ಒಂದು ಕನಸಿನ ಪಯಣ' ಕೃತಿಯಲ್ಲಿ ಲಂಡನ್ ನಗರದಲ್ಲಿ ಎಸ್.ಟಿ.ಡಿ ಬೂತಿಗೆ ಫೋನ್ ಮಾಡಲು ಹೋದಾಗ ವೇಶ್ಯಾವಾಟಿಕೆಯ ಜಾಹಿರಾತುಗಳಿರುವುದನ್ನು ಉಲ್ಲೇಖಿಸಲಾಗಿದೆ. ಲೈಂಗಿಕ ಮುಕ್ತ ಸಮಾಜದಲ್ಲಿಯೂ ಈ ಬಗೆಯ ಜಾಹಿರಾತುಗಳ ಅಗತ್ಯವಿದೆಯೇ ಎಂದು ಪ್ರಶ್ನಿಸಿಕೊಳ್ಳುವಂತಿದೆ. ಸ್ತ್ರೀಯರನ್ನು ಸಮಾಜವು ಭೋಗದ ವಸ್ತುವಾಗಿ ನೋಡುವ ಪರಿಪಾಠವು ವಿಶ್ವವ್ಯಾಪಕವಾಗಿದೆ. ಅದನ್ನು ವಿರೋಧಿಸುವ ಮನೋಭಾವ ಮಹಿಳಾ ಪ್ರವಾಸಿ ಕೃತಿಗಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ. ಪುರುಷರು ರಚಿಸಿರುವ ಪ್ರವಾಸ ಕೃತಿಗಳಲ್ಲಿ ವೇಶ್ಯಾವಾಟಿಕೆಯನ್ನು ವಿರೋಧಿಸುವ ಧೋರಣೆ ಕಂಡುಬರುವುದಿಲ್ಲ. ಮಹಿಳಾ ಪ್ರವಾಸ ಕೃತಿಗಳಲ್ಲಿ ಸ್ತ್ರೀವಾದಿ ಮನೋಧರ್ಮದಿಂದ ವಿಶ್ಲೇಷಣೆ ಮಾಡಿರುವುದನ್ನು ಗುರುತಿಸಲಾಗಿದೆ.

'ಹಾಲೆಂಡ್‌ನಿಂದ ಲಂಡನ್‌ವರೆಗೆ' ಕೃತಿಯಲ್ಲಿ 'ಸ್ತ್ರೀಯರನ್ನು ಸಮಾಜವು ಗೌರವದಿಂದ ನಡೆಸಿಕೊಳ್ಳಬೇಕು' ಎಂಬ ಧೋರಣೆಯು ಮಹಿಳೆ ಎಂಬ ಕಾರಣಕ್ಕಾಗಿ ವ್ಯಕ್ತಪಡಿಸಿದ ಸ್ವಾಭಾವಿಕ ಅಭಿಪ್ರಾಯವಲ್ಲ. ಸ್ತ್ರೀಯರಿಗೆ ಅವಮಾನಕರ ಎನಿಸುವ ಘಟನೆಗಳನ್ನು ಕಂಡಾಗ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಧೋರಣೆಯು ತೀರಾ ವ್ಯಕ್ತಿಗತವಾಗಿಯೂ ಕಾಣುವುದಿಲ್ಲ. ಇವುಗಳನ್ನು ಮೀರಿದ ಸೈದ್ಧಾಂತಿಕವಾದ ಪ್ರೇರಣೆಯು ಕಾರಣವಾಗಿರುವ ಸಾಧ್ಯತೆಗಳಿವೆ. ಉದಾಹರಣೆಗೆ "ಯುರೋಪಿನ ಕೇಂದ್ರಾಡಳಿತಕ್ಕೆ ಒಳಪಟ್ಟ ರಾಜ್ಯ ಹ್ಯಾಂಬರ್ಗ್ ಸನ್‌ಸಿಟಿ ಎಂದೇ ಹೆಸರಾಗಿದೆ. ನಿರ್ಲಜ್ಜ ಅತಿ ನೀಚ ಲೈಂಗಿಕ ಪ್ರದರ್ಶನಗಳ ಬೆಲೆವೆಣ್ಣುಗಳ ಮಳಿಗೆ ಪ್ರದೇಶಗಳು ರೀಪರ್ ಬಾನೆಂದು ಹೆಸರು ಪಡೆದಿದೆ. ವೈಶ್ಯೆಯರ ಸಗಟು ವ್ಯಾಪಾರಕ್ಕೆ ಹೆಸರಾದ ನಗರ ಹ್ಯಾಂಬರ್ಗ್"(ಇಂದಿರಾ ಶಿವಣ್ಣ, ಹಾಲೆಂಡ್‌ನಿಂದ ಲಂಡನ್‌ವರೆಗೆ, ಪು-೬೮)ಎಂದಿದ್ದಾರೆ. ಕೃತಿಯು ಹ್ಯಾಂಬರ್ಗ್ ನಗರದಲ್ಲಿ ನಡೆಯುವ ವೇಶ್ಯಾವೃತ್ತಿಯ ಕುರಿತು ವಿವರಿಸುವಾಗ ಬಳಸಿರುವ ಪದಗಳನ್ನು ಗಮನಿಸಿದರೆ ವೇಶ್ಯಾವೃತ್ತಿಯ ಬಗೆಗಿರುವ ತೀವ್ರ ವಿರೋಧಭಾವ ಮತ್ತು ಜಿಗುಪ್ಸಾ ಭಾವಗಳು ಹಾಗೂ ಸಮಾಜವು ಹೆಣ್ಣನ್ನು ನಡೆಸಿಕೊಳ್ಳುವ ಬಗೆಗೆ ಇರುವ ಅಸಮಾಧಾನವನ್ನು ತಿಳಿಸುತ್ತದೆ. ಇಲ್ಲಿ ಕೃತಿಕಾರನಿಗೆ ಒಂದು ಬಗೆಯ ತಳಮಳವನ್ನು ಅನುಭವಿಸುತ್ತಿರುವ, ಮಾನಸಿಕ ತಾಕಲಾಟಗಳನ್ನು ಮತ್ತು ಭಾವನೆಗಳ ಸಂಲಗ್ನ ಸ್ಥಿತಿಯನ್ನು ಕಾಣಬಹುದು. ಈ ವಿವರಣೆಯಲ್ಲಿ ಕೃತಿಕಾರರು ಸ್ತ್ರೀವಾದಿ ಧೋರಣೆಯುಳ್ಳವರಾಗಿ ಕಂಡುಬಂದರೂ ಒಳನೋಟದಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಬಯಸುವ ಸಮಾಜಮುಖಿ ಚಿಂತನೆವುಳ್ಳವರಾಗಿಯೂ ಕಂಡು ಬರುತ್ತಾರೆ. ನಮ್ಮ ಸಮಾಜದ ಸಂಸ್ಕೃತಿಯೇ ಸರಿ ಎನ್ನುವ ಮನಸ್ಥಿತಿಯು ಕಂಡುಬರುತ್ತದೆ. 'ಈಸ್ಟ್ ಈಸ್ ಈಸ್ಟ್-ವೆಸ್ಟ್ ಈಸ್ ವೆಸ್ಟ್' ನಮ್ಮದು ನಮಗೆ ಸರಿ ಅನಿಸುವುದು ಸಹಜವಾದುದು. ಆದರೆ ಬೇರೆ ದೇಶದ ಸಂಪ್ರದಾಯ ಆಚರಣೆಗಳು ಪ್ರವಾಸಿಗರಿಗೆ ಹೊಸತಾಗಿ, ರಂಜನೀಯವಾಗಿ ಕಾಣುವುದೇ ಹೆಚ್ಚು. ವಿದೇಶ ಸಂಸ್ಕೃತಿಗಳಿಗೆ ಮಾರು ಹೋಗುವವರೇ ಹೆಚ್ಚು.

ಹೀಗಿರುವಾಗ ಬೇರೆ ದೇಶಗಳ ಸಂಸ್ಕೃತಿಯ ಮುಂದೆ ನಮ್ಮ ಭಾರತೀಯ ಸಂಸ್ಕೃತಿಯೇ ಶ್ರೇಷ್ಠ ಎಂದು ವಿವರಿಸಿರುವುದು ಕೃತಿಕಾರರ ರಾಷ್ಟ್ರ ಪ್ರಜ್ಞೆಯನ್ನು ತೋರಿಸುತ್ತದೆ.

ಯುರೋಪಿನ ವಿವಿಧ ದೇಶಗಳಲ್ಲಿ ವೇಶ್ಯಾವೃತ್ತಿಗೆ ಸಂಬಂಧಿಸಿದಂತೆ ನೇಮಿಚಂದ್ರ, ಹೇಮಲತಾ ಮಹಿಷಿ, ಮತ್ತು ಇಂದಿರಾ ಶಿವಣ್ಣ ಅವರು ಮಾತ್ರ ಉಲ್ಲೇಖಿಸಿದ್ದಾರೆ. ಸ್ತ್ರೀವಾದಿ ನೆಲೆಯ ಚಿಂತನೆಯುಳ್ಳ ಲೇಖಕರು ಮಹಿಳಾ ಕೇಂದ್ರಿತ ನೆಲೆಯಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಈ ಬಗೆಯ ದೃಷ್ಟಿಕೋನದಲ್ಲಿ ವೇಶ್ಯಾವೃತ್ತಿಯ ಪಾಲನೆಗೆ ಪುರುಷನೇ ಕಾರಣ ಎನ್ನುವ ಆರೋಪಿಸುವ ಭಾವ ಇರುವುದನ್ನು ಕಾಣಲಾಗಿದೆ.

'ಏಕಾಕಿ ಪ್ರವಾಸಿ' ಕೃತಿಯಲ್ಲಿ ಪ್ಯಾರಿಸ್‌ನ ರೌಂಡ್ ಪಾಯಿಂಟ್ ವೃತ್ತದಲ್ಲಿ ನಡೆಯುತ್ತಿದ್ದ ಅನೈತಿಕ ವ್ಯವಹಾರಗಳ ಬಗ್ಗೆ "ವೇಶ್ಯಾವಾಟಿಕೆ ದಲ್ಲಾಳಿಗಳಿದ್ದಾರೆ. ಇಲ್ಲಿ ಹೇರಳವಾಗಿ ಬಹುಶಃ ಅಗ್ಗವಾಗಿಯೂ ದೊರೆಯುವ ಮಾಲು ಹೊಸ್ತಿಲು ದಾಟಿ ಬಂದ ಬೀದಿಯ ಹೆಣ್ಣು. ಪ್ಯಾರಿಸ್..... ಪಾಪಪೂರಿತ ಪಟ್ಟಣವೂ ಹೌದು."(ದೊಡ್ಡೇರಿ ವೆಂಕಟಗಿರಿರಾವ್, ಏಕಾಕಿ ಪ್ರವಾಸ, ಪು-೧೨೨)ಎಂದು ಉಲ್ಲೇಖಿಸಲಾಗಿದೆ. ಈ ಉಲ್ಲೇಖವು ಪ್ಯಾರಿಸ್ ನಗರದ ಕಲಾ ಸೌಂದರ್ಯದ ಹಿಂದಿನ ಕರಾಳಮುಖವನ್ನು ಪರಿಚಯಿಸುತ್ತದೆ. ಕೃತಿಯು ನಿರೂಪಿಸುವ 'ಹೆಣ್ಣು ಮನೆಯ ಹೊಸ್ತಿಲು ದಾಟಿ ಬರಬಾರದು' ಎಂಬ ಭಾವವು ಭಾರತೀಯ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತದೆ. ಈ ಅಭಿಪ್ರಾಯವು ಹೆಣ್ಣಿಗೆ ಸ್ವಂತಂತ್ರ ಬದುಕನ್ನು ಕಟ್ಟಿಕೊಳ್ಳಲು ಅವಕಾಶ ಕೊಡಬೇಕೆಂಬ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ವ್ಯಕ್ತವಾಗಿಲ್ಲ. ಬದಲಿಗೆ ಪುರುಷ ಪ್ರಧಾನ ಧೋರಣೆಯೇ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಪೂರ್ವಾಗ್ರಹಗಳು ಪ್ರವಾಸ ಕಥನದ ನಿರೂಪಣೆಯ ಮೇಲೆ ಪ್ರಭಾವ ಬೀರುತ್ತದೆ. ಸ್ತ್ರೀವಾದಿ ಲೇಖಕರ ಅಭಿಪ್ರಾಯಕ್ಕೂ ಪುರುಷ ಲೇಖಕರು ನಿರೂಪಿಸುವ ಅಭಿಪ್ರಾಯಕ್ಕೂ ಸ್ಪಷ್ಟ ವ್ಯತ್ಯಾಸವಿರುವುದನ್ನು ಕಾಣಲಾಗಿದೆ.

'ಕಲಾವಿದ ಕಂಡ ಫ್ರಾನ್ಸ್' ಕೃತಿಯ ನಿರೂಪಕರು ಮಾರ್ಗದರ್ಶಿನಿಯು ಪ್ಯಾರಿಸ್ ನಗರದ ಬಗ್ಗೆ "ಇಲ್ಲಿ ನೂರಾರು ರಾತ್ರಿ ಕ್ಲಬ್ಬುಗಳಿವೆ. ಸಾವಿರಾರು ವೇಶ್ಯೆಯರಿದ್ದಾರೆ. ಅದೊಂದು ಸ್ವರ್ಗ-ನರಕವೂ ಕೂಡ"(ಪಿ. ಆರ್. ತಿಪ್ಪೇಸ್ವಾಮಿ., ಕಲಾವಿದ ಕಂಡ ಫ್ರಾನ್ಸ್., ಪು-೯೭)ಎಂದು ಹೇಳಿದ್ದಾಗಿ ಉಲ್ಲೇಖಿಸಿದ್ದಾರೆ. ಈ ಉಲ್ಲೇಖದಲ್ಲಿ ನಿರೂಪಕರ ತಟಸ್ಥ ಧೋರಣೆಯನ್ನು ಕಾಣಲಾಗಿದೆ. ಏಕೆಂದರೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಹಾಗೆಯೇ ಮಾರ್ಗದರ್ಶಿನಿಯು ಪ್ಯಾರಿಸ್ಸನ್ನು ಸ್ವರ್ಗವೂ ಹೌದು, ನರಕವೂ ಹೌದು ಎಂದು ಹೇಳುವಾಗ ಆಕೆಯ ಪ್ರಾಮಾಣಿಕ ವಿವರಣೆ ಇರುವುದನ್ನು ಗುರುತಿಸಲಾಗಿದೆ. ಪ್ರಪಂಚದ ಯಾವುದೇ ದೇಶವೂ ಸಾಮಾಜಿಕ ಸಮಸ್ಯೆಗಳಿಂದ ಮುಕ್ತವಾಗಿಲ್ಲ ಎಂಬುದನ್ನು ಈ ಉಲ್ಲೇಖಗಳು ನಿರೂಪಿಸಿವೆ. ಅದರ ಮೂಲಕ ಪ್ಯಾರಿಸ್ಸಿನ ಚಿತ್ರಣವನ್ನು ಮತ್ತೊಂದು ಆಯಾಮದಿಂದ ನೋಡಲು ಸಾಧ್ಯವಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೩..೨.೨ ಗ್ರಾಮೀಣ ಮತ್ತು ನಗರ ಸಮಾಜ : ತೌಲನಿಕ ದೃಷ್ಟಿಕೋನ

ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ಸ್ಪಷ್ಟವಾಗಿ ಗ್ರಾಮೀಣ ಭಾಗದ ಜನ ಸಮುದಾಯದ ಬಗ್ಗೆ ವಿವರಿಸುವ ಮತ್ತು ನಗರ ಸಮುದಾಯದ ಬಗ್ಗೆ ವಿವರಿಸುವ ಕೃತಿಗಳು ಎಂದು ವರ್ಗೀಕರಿಸಲು

ಬರುವುದಿಲ್ಲ. ಸಾಮಾನ್ಯವಾಗಿ ಪ್ರವಾಸ ಕೃತಿಗಳು ನಗರ ಸಮುದಾಯ ಜನರ ಜೀವನದ ಆಗುಹೋಗುಗಳನ್ನೇ ಹೆಚ್ಚು ಕೇಂದ್ರೀಕರಿಸುವುದು ಕಂಡುಬರುತ್ತದೆ. ಯುರೋಪಿನ ಗ್ರಾಮೀಣ ಭಾಗದ ಜನರ ಜೀವನದ ರೀತಿ–ನೀತಿಗಳನ್ನು, ಸಾಮಾಜಿಕ ಬದುಕನ್ನು ಅಭ್ಯಸಿಸಬೇಕೆಂಬ ಉದ್ದೇಶದಿಂದ ಪ್ರವಾಸ ಮಾಡಿದವರಾರೂ ಇಲ್ಲ. ಬದಲಿಗೆ ಗ್ರಾಮೀಣ ಸಮುದಾಯದವರ ಬದುಕಿನ ಬಗ್ಗೆ ಕೆಲವೇ ಕೃತಿಗಳು ಮಾಹಿತಿ ನೀಡುತ್ತವೆ. 'ಸೋವಿಯತ್ ದೇಶ ಕಂಡೆ' 'ಅಯನ' 'ಇಂಗ್ಲೆಂಡಿನಲ್ಲಿ ಚತುರ್ಮಾಸ' ' ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ' ನನ್ನ ಬೆಲ್ಜಿಯಂ ಪ್ರವಾಸ' 'ಯುರೋಪ್ ನೆನಪುಗಳು' ಮೊದಲಾದ ಕೃತಿಗಳು ಗ್ರಾಮೀಣ ಪ್ರದೇಶದ ಹಳ್ಳಿಯ ಜನ ಜೀವನದ ಬಗ್ಗೆ ಸಾಂದರ್ಭಿಕವಾಗಿ ಚರ್ಚಿಸಿವೆ.

ಅ) ಗ್ರಾಮೀಣ ಸಮಾಜ : ತೌಲನಿಕ ದೃಷ್ಟಿಕೋನ

'ಗ್ರಾಮೀಣ ಸಮಾಜ' ಎಂಬ ಪರಿಕಲ್ಪನೆಯು ಯುರೋಪಿನ ಹಳ್ಳಿಗಳಲ್ಲಿನ ಜನರ ಬದುಕು, ಅದರೊಂದಿಗೆ ಸೇರಿಕೊಂಡಿರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ವಿಚಾರಗಳನ್ನು ಒಳಗೊಂಡ ಅಂಶವೆಂದು ಸ್ಪಷ್ಟೀಕರಿಸಿಕೊಳ್ಳಲಾಗಿದೆ. ದಿನನಿತ್ಯದ ಚಟುವಟಿಕೆಗಳು, ಹಳ್ಳಿ ಪ್ರದೇಶಗಳ ರಚನೆ, ಹಳ್ಳಿಗಳು ಒಳಗೊಂಡಿರುವ ಸವಲತ್ತುಗಳು, ಸ್ವಚ್ಚತೆ, ಜೀವನ ನಿರ್ವಹಣೆಗಾಗಿ ಜನರು ನಿರ್ವಹಿಸುವ ವಿವಿಧ ವೃತ್ತಿಗಳನ್ನು ಕುರಿತು ಚರ್ಚಿಸುವ ಕೃತಿಗಳ ಅಭಿಪ್ರಾಯಗಳನ್ನು ವಿಶ್ಲೇಷಿಸಲಾಗಿದೆ.

ಯುರೋಪ್ ಪ್ರವಾಸ ಕೃತಿಗಳಲ್ಲಿ ಹೆಚ್ಚಾಗಿ ಸುಸಜ್ಜಿತ ಹಳ್ಳಿಯ ವಿವರಗಳನ್ನು ಕಾಣಲಾಗಿದೆ. ಗ್ರಂಥಾಲಯ, ಚರ್ಚು, ಆರೋಗ್ಯ ಕೇಂದ್ರ, ಆಟದ ಮೈದಾನ, ಸಾಮೂಹಿಕ ಕೃಷಿ ಪದ್ಧತಿ, ಗ್ರಾಮೀಣ ಮಾರುಕಟ್ಟೆಯ ವ್ಯವಸ್ಥೆಯನ್ನು ತೌಲನಿಕ ದೃಷ್ಟಿಕೋನದೊಂದಿಗೆ ವಿಮರ್ಶಿಸಿರುವ ಕೃತಿಗಳೇ ಹೆಚ್ಚಿವೆ. ಯುರೋಪಿನ ಗ್ರಾಮೀಣ ಸಮುದಾಯವನ್ನು ಭಾರತದ ಇದೇ ಪ್ರಕಾರದ ಲಕ್ಷಣಗಳನ್ನು ಹೊಂದಿರುವ ಅಥವಾ ಹೊಂದಿದೆ ಎಂದು ಭಾವಿಸಲಾಗಿರುವ ಗ್ರಾಮೀಣ ಸಮುದಾಯದೊಂದಿಗೆ ಕೃತಿಗಳು ಹೋಲಿಸಿರುವ ಬಗೆ ಹೇಗೆ? ಈ ಬಗೆಯ ಹೋಲಿಕೆಗೆ ಕಾರಣಗಳೇನು? ಹೀಗೆ ಹೋಲಿಸುವಾಗ ಕೃತಿಕಾರನ ಪ್ರತಿಕ್ರಿಯೆಯು ಯಾವ ಅಂಶವನ್ನು ಪ್ರಧಾನವಾಗಿ ಪರಿಗಣಿಸಿದೆ? ಮತ್ತು ಏಕೆ? ಎಂಬ ಅಂಶಗಳನ್ನು ಆಧರಿಸಿ ವಿಶ್ಲೇಷಣೆ ಮಾಡಲಾಗಿದೆ.

ಪ್ರವಾಸ ಎಂದರೆ ನಿಗದಿ ಪಡಿಸಿದ ಸ್ಥಳಗಳಿಗೆ ನಿಗದಿತ ವೇಳೆಯ ಮಿತಿಯೊಳಗೆ ಕೆಲವೇ ದಿನಗಳ ಅಥವಾ ಗಂಟೆಗಳ ಭೇಟಿಯಾಗಿದೆ. ಅದರಲ್ಲೂ ವಿದೇಶ ಪ್ರವಾಸವು ಆಯಾ ದೇಶಗಳ ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಪಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು ಕಾಲಮಿತಿಯೊಳಗೆ ಪೂರೈಸುವ ಆತುರದ ಪ್ರಯಾಣ ಎಂದರೆ ಸತ್ಯಕ್ಕೆ ದೂರವಲ್ಲ. ಈ ಬಗೆಯ ಪ್ರಯಾಣದಲ್ಲಿ ಆಯಾ ದೇಶದ ಜನರ, ಬಾಷೆಯ, ಬದುಕಿನ ವಿವಿಧ ಆಯಾಮಗಳನ್ನು ನಿರ್ಧಿಷ್ಟವಾಗಿ, ವಿಮರ್ಶಾತ್ಮಕ ದೃಷ್ಟಿಯಿಂದ ಬರೆಯುವುದು ಕಷ್ಟಸಾಧ್ಯ. ಅದರಲ್ಲೂ ಗ್ರಾಮೀಣ ಭಾಗಗಳನ್ನು ಸಂದರ್ಶಿಸಿ ಅಲ್ಲಿನವರ ಬದುಕು, ಬವಣೆ, ರೀತಿ, ನೀತಿ, ಸಂಪ್ರದಾಯ, ಆಚರಣೆಗಳನ್ನು ಕಂಡು ಭಾರತೀಯ ಸಮಾಜದ ಬದುಕಿನೊಂದಿಗೆ ಹೋಲಿಸಿ ನವೀನ ದೃಷ್ಟಿ ಬೀರಿರುವ ಕೃತಿಗಳು ತೀರಾ ವಿರಳ. ಕೆಲವು ಕೃತಿಗಳು ಗ್ರಾಮೀಣ ಜನರ ಬದುಕಿನ ಬಗ್ಗೆ ತೌಲನಿಕ ದೃಷ್ಟಿಕೋನದಿಂದ ವಿವರಿಸಿವೆ. ಒಂದು ಕನಸಿನ ಪಯಣ, ಯುರೋ–ದರ್ಶನ, ಅಪೂರ್ವ ಪಶ್ಚಿಮ, ಅರಸಿಕರಲ್ಲ, ಮೊದಲಾದ ಕೃತಿಗಳಿಗೆ ಗ್ರಾಮೀಣ ನೆಲೆಯ ದೃಷ್ಟಿಕೋನದೊಂದಿಗೆ ವಿವರಿಸಲು ಸಾಧ್ಯವಾಗಿದೆ.

ಹಳ್ಳಿಗಳಲ್ಲಿ ಪಟ್ಟಣಗಳಲ್ಲಿರುವಂತೆ ವರ್ಣಭೇದ, ಜನಾಂಗೀಯ ಭೇದಗಳಿಲ್ಲವೆಂದೂ, ಗ್ರಾಮಗಳು ನಗರಗಳಂತೆಯೇ ಸುಸಜ್ಜಿತವಾಗಿರುತ್ತವೆ ಎಂದು ಅನೇಕ ಕೃತಿಗಳು ಉಲ್ಲೇಖಿಸಿವೆ. ಯುರೋಪಿನ ಗ್ರಾಮೀಣ ಪ್ರದೇಶವು ನಗರ ಪ್ರದೇಶಗಳು ಹೊಂದಿರುವ ಅನೇಕ ಅನುಕೂಲಗಳನ್ನು ಹೊಂದಿರುತ್ತವೆ. ನಗರ ಪ್ರದೇಶಗಳಿಗೆ ಹೋಲಿಸಿದರೆ ಯುರೋಪಿನ ಹಳ್ಳಿಗಳು ಸಣ್ಣ ಸಣ್ಣ ಪಟ್ಟಣಗಳಂತೆ ಇರುತ್ತದೆ. ಸಾಮಾಜಿಕವಾಗಿ ಆರ್ಥಿಕ ಅಸಮಾನತೆ ಇರುವುದನ್ನು ಲೇಖಕರು ಹೇಳಿದ್ದಾರೆ.

'ಅಯನ' ಕೃತಿಯಲ್ಲಿ ಫ್ರಾನ್ಸ್ ದೇಶದ 'ಬಯೋನ್' ಎಂಬ ಹಳ್ಳಿಯ ಬಗೆಗಿನ ವಿವರಗಳನ್ನು ದಾಖಲಿಸಲಾಗಿದೆ. ಕೃತಿಕಾರರು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ನಿಮಿತ್ತ ಬಯೋನ್ ಎಂಬ ಹಳ್ಳಿಗೆ ಹೋಗಿರುತ್ತಾರೆ. ಅಲ್ಲಿ ಜಾನ್ ಮತ್ತು ಮೇರಿ ಕುಟುಂಬದವರೊಂದಿಗೆ ಎರಡು ವಾರಗಳ ಕಾಲ ತಂಗಿದ್ದಾರೆ. ಪ್ರವಾಸಿ ಸ್ಥಳದ ಬಗ್ಗೆ ವ್ಯಕ್ತವಾದ ಅಭಿಪ್ರಾಯಗಳು ನಂಬಿಕೆಗೆ ಎಷ್ಟು ಅರ್ಹ ಎಂಬುದು ಆ ಸ್ಥಳದಲ್ಲಿ ತಂಗಿದ ಅವಧಿಯು ನಿರ್ಧಾರಕವಾಗಿರುತ್ತದೆ. ಎರಡು ವಾರಗಳ ಅವಧಿಯಲ್ಲಿ ಬಯೋನ್‌ನ ಸುತ್ತಮುತ್ತಲ ಪ್ರದೇಶದಲ್ಲಿಯೇ ಪ್ರವಾಸ ಮಾಡಿರುವುದರಿಂದ ಅಲ್ಲಿನ ಧನಾತ್ಮಕ ಅಂಶಗಳೇನು? ಹಾಗೆಯೇ ಋಣಾತ್ಮಕ ಅಂಶಗಳೇನು? ಎಂಬ ಅಂಶಗಳನ್ನು ಭಾರತದ ಹಳ್ಳಿಗಳೊಂದಿಗೆ ಹೋಲಿಸುತ್ತಾ ವಿವರಿಸಲಾಗಿದ್ದು ವಿಶ್ವಾಸಕ್ಕೆ ಹೆಚ್ಚು ಅರ್ಹವಾಗಿದೆ.

ಬಯೋನ್ ಹಳ್ಳಿಯಲ್ಲಿ ದೊಡ್ಡ ಗ್ರಂಥಾಲವಿದ್ದು ಆ ಗ್ರಂಥಾಲಯದಲ್ಲಿ ಜಾಗಿರ್ದಾರ್, ಗಿರೀಶ್ ಕಾರ್ನಾಡ್ ಅವರ ಕನ್ನಡ ಪುಸ್ತಕಗಳಿರುವುದನ್ನು ಉಲ್ಲೇಖಿಸಲಾಗಿದೆ. ಒಂದು ಹಳ್ಳಿಯ ಗ್ರಂಥಾಲಯದಲ್ಲಿ ಜಾಗತಿಕ ಮಟ್ಟದ ಲೇಖಕರ ಕೃತಿಗಳನ್ನು ಸಂಗ್ರಹಿಸಿರುವುದು ಅವರ ವಿಶಾಲ ದೃಷ್ಟಿಕೋನವನ್ನು ಸೂಚಿಸುತ್ತದೆ. ಗ್ರಂಥಾಲಯದಲ್ಲಿ ಪ್ರದರ್ಶಿಸಿರುವ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗಳು, ಮ್ಯಾಗ್‌ಝಿನ್‌ಗಳು ನೋಡಿ ಈ ಹಳ್ಳಿಯಲ್ಲಿಯೂ ಇಷ್ಟು ಉತ್ಕೃಷ್ಟ ಮಟ್ಟದ ಗ್ರಂಥಾಲಯವಿರುವುದನ್ನು ಕಂಡು ನಿರೂಪಕರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ತುಂಬಾ ಸುಸಜ್ಜಿತವಾಗಿ, ಸ್ವಚ್ಛವಾಗಿ ನಿರ್ವಹಿಸಲಾದ ಗ್ರಂಥಾಲಯವನ್ನು ಕಂಡು ನಿರೂಪಕರು 'ನಮ್ಮ ದೇಶದಲ್ಲಿರುವ ಕೆಲವು ಅವ್ಯವಸ್ಥಿತ ಜಿಲ್ಲಾ ಕೇಂದ್ರ ಗ್ರಂಥಾಲಯಗಳ ನೆನಪು ತರಿಸುತ್ತದೆ' ಎಂದಿದ್ದಾರೆ. ಕೃತಿಯು ಆಧುನಿಕತೆಯ ಕಂಪ್ಯೂಟರ್ ಯುಗದ ಭರಾಟೆಯಲ್ಲಿ ಪುಸ್ತಕಗಳು ನಿರ್ಲಕ್ಷಕ್ಕೆ ಒಳಗಾಗಿವೆಯೇ? ಎಂಬ ಜಿಜ್ಞಾಸೆಯನ್ನು ವ್ಯಕ್ತಪಡಿಸಿದೆ. ಇದು ಇಂದು ಜಾಗತಿಕ ಮಟ್ಟದಲ್ಲಿ ಚರ್ಚಿಸಬೇಕಾದ, ಚಿಂತಿಸಬೇಕಾದ ಅನಿವಾರ್ಯ ಸಂಗತಿ. ಅಯನ ಕೃತಿಯಲ್ಲಿ ಯುರೋಪಿನ ಹಳ್ಳಿಗಳಲ್ಲಿ ಒಂದು ಹಂತದವರೆಗಿನ ಶಾಲಾ ಶಿಕ್ಷಣ, ವೃತ್ತಿ ತರಬೇತಿ ಶಿಕ್ಷಣ ಶಾಲೆಗಳು, ಉಚಿತ ಆರೋಗ್ಯ ಸೌಲಭ್ಯ, ಪ್ರಾರ್ಥನೆಗೆ ಚರ್ಚು, ಆಟವಾಡಲು ಕ್ರೀಡಾಂಗಣ ಹೀಗೆ ನಗರದಲ್ಲಿ ಸಿಗಬಹುದಾದ ಎಲ್ಲಾ ಸವಲತ್ತುಗಳನ್ನು ಹೊಂದಿರುವ ಹಳ್ಳಿಯ ಬಗ್ಗೆ ಕೃತಿಯಲ್ಲಿ ಅಭಿಮಾನದ ನುಡಿಗಳು ವ್ಯಕ್ತವಾಗಿದೆ. ಜೊತೆಗೆ ಭಾರತದ ಹಳ್ಳಿಗಳ ದುಸ್ಥಿತಿಗಳನ್ನು ಕೂಡ ಉಲ್ಲೇಖಿಸಲಾಗಿದೆ. ಯುರೋಪಿನ ಹಳ್ಳಿಗಳೊಂದಿಗೆ ಭಾರತದ ಹಳ್ಳಿಗಳನ್ನು ಹೋಲಿಸಿ 'ಭಾರತದ ಹಳ್ಳಿಗಳಲ್ಲಿ ಸರಿಯಾದ ಸಾರಿಗೆ ವ್ಯವಸ್ಥೆಯಿಲ್ಲದೆ ಪರದಾಡಬೇಕಾದ ಸಂಕಟ, ಶಾಲೆಗಳಲ್ಲಿನ ಅವ್ಯವಸ್ಥೆ, ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವ ಹಳ್ಳಿಗಳ ಮುಗ್ಧ ಜನರ ಬಗ್ಗೆ ಕೃತಿಯು ಸಹಾನುಭೂತಿಯನ್ನು ವ್ಯಕ್ತಪಡಿಸಿದೆ. ನಿರೂಪಕರಿಗೆ ತಮ್ಮ ದೇಶದ ಹಳ್ಳಿಯ ಜನರಿಗೆ ವ್ಯವಸ್ಥಿತವಾದ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ಅತೃಪ್ತಿಯ ಭಾವನೆ ಹೆಚ್ಚು ಮರುಗುವಂತೆ ಮಾಡಿದೆ.

ನಿರೂಪಕರ ದೃಷ್ಟಿಕೋನದಲ್ಲಿ ಭಾರತದ ಹಳ್ಳಿಗಳು ಯುರೋಪಿನ ಹಳ್ಳಿಗಳಂತೆ ಮುಂದುವರೆಯಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿರುವುದನ್ನು ಕಾಣಲಾಗಿದೆ.

'ಅಯನ' ಕೃತಿಯು ನಿರೂಪಿಸುವ ಅಂಶಗಳಿಂದ ತಿಳಿದುಬರುವ ಸಂಗತಿಗಳೆಂದರೆ ನಿರೂಪಕರು ಗ್ರಾಮೀಣ ನೆಲೆಯ ಚಿಂತಕರಾಗಿದ್ದು, ದೇಶದ ಅಭಿವೃದ್ಧಿಯು ಹಳ್ಳಿಗಳಿಂದ ಸಾಧ್ಯ ಎಂಬ ಧೋರಣೆಯುಳ್ಳವರು ಎಂಬುದು ಸ್ಪಷ್ಟವಾಗುತ್ತದೆ. ನಿರೂಪಕರ ಅಭಿಪ್ರಾಯದ ಮಿತಿ ಎಂದರೆ ಬಯೋನ್ ಹಳ್ಳಿಯನ್ನು ಆಧರಿಸಿ ಫ್ರಾನ್ಸಿನ ಎಲ್ಲಾ ಹಳ್ಳಿಗಳು ಅಷ್ಟೇ ಸುಸಜ್ಜಿತ ಇರುತ್ತವೆ ಎಂದು ಸಾರ್ವತ್ರೀಕರಿಸಲು ಬರುವುದಿಲ್ಲ. ಒಂದು ಕೃತಿಯ ಅಭಿಪ್ರಾಯವೇ ಅಂತಿಮವೂ ಅಲ್ಲ. ಆದರೆ ಇಂಗ್ಲೆಂಡ್, ಸ್ವಿಟ್ಜರ್‌ಲ್ಯಾಂಡ್, ಫ್ರಾನ್ಸ್ ದೇಶದಲ್ಲಿನ ಗ್ರಾಮೀಣ ಪ್ರದೇಶದಲ್ಲಿರುವ ಹಳ್ಳಿಗಳು ಭಾರತೀಯ ಹಳ್ಳಿಗಳಿಗೆ ಹೋಲಿಸಿದರೆ ತುಂಬಾ ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಇವೆ ಎಂಬುದು ಅನೇಕ ಕೃತಿಗಳ ಅಭಿಪ್ರಾಯವಾಗಿದೆ.

'ಇಂಗ್ಲೆಂಡಿನಲ್ಲಿ ಚತುರ್ಮಾಸ' ಕೃತಿಯಲ್ಲಿ ಇಂಗ್ಲೆಂಡಿನ 'ಲಸ್' ಎಂಬ ಹಳ್ಳಿಯ ಬಗ್ಗೆ ವಿವರಗಳನ್ನು ದಾಖಲಿಸಲಾಗಿದೆ. ಇದರಲ್ಲಿ ಭಾರತದ ಹಳ್ಳಿಗಳು ಅವ್ಯವಸ್ಥೆಯ ಆಗರವಾಗಿಯೂ, ಇಂಗ್ಲೆಂಡಿನ 'ಲಸ್' ಹಳ್ಳಿಯೂ ಸುವ್ಯವಸ್ಥಿತವಾದ, ನಗರ ಪ್ರದೇಶದಲ್ಲಿ ಸಿಗುವ ಉತ್ಕೃಷ್ಟ ಅನುಕೂಲಗಳನ್ನು ಹೊಂದಿರುವ ಹಳ್ಳಿಯಾಗಿ ಉಲ್ಲೇಖಿತವಾಗಿದೆ. ಕಾಣುವ ದೃಶ್ಯಗಳು, ದೊರೆಯುವ ಅನುಭವಗಳು ಬದಲಾದಂತೆ ಲೇಖಕರ ಅಭಿಪ್ರಾಯಗಳಲ್ಲಿಯೂ ಬದಲಾವಣೆ ಆಗುತ್ತಿರುತ್ತದೆ. 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯಲ್ಲಿ ಟಾಲ್‌ಸ್ಟಾಯ್ ಅವರ ಜನ್ಮ ಸ್ಥಳ ಯಸ್ನಾಯ ಪೋಲ್ಯಾನದ ವಿವರಗಳಿವೆ. ಇದು ಹಳ್ಳಿಯ ಪ್ರದೇಶವಾಗಿದ್ದು ಭಾರತದ ಹಳ್ಳಿಗಳಂತೆಯೇ ಕೊಳಕಾಗಿ, ಅವ್ಯವಸ್ಥಿತವಾಗಿದೆ ಎಂದು ಉಲ್ಲೇಖಿಸಲಾಗಿದೆ. 'ಇಂಗ್ಲೆಂಡಿನಲ್ಲಿ ಚತುರ್ಮಾಸ' ಮತ್ತು 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಗಳ ನಿರೂಪಕರು ಒಬ್ಬರೇ ಆಗಿದ್ದಾರೆ. ಈ ಬಗೆಯ ದೃಷ್ಟಿಕೋನದ ಭಿನ್ನತೆಗೆ ಕೆಲವು ಕಾರಕಗಳು ಪ್ರಭಾವ ಬೀರಿರುವ ಸಾಧ್ಯತೆಗಳಿವೆ. ಇಂಗ್ಲೆಂಡ್ ಬ್ರಿಟೀಷರ ನಾಡು. ಭಾರತ ಬ್ರಿಟೀಷರ ವಸಾಹತುವಾಗಿದ್ದ ಸಂದರ್ಭದಲ್ಲಿ ತಾವು ತುಂಬಾ ಶಿಸ್ತುವುಳ್ಳವರು ಎಂಬುದಾಗಿ ಬಿಂಬಿಸಿಕೊಂಡಿದೆ; ಮತ್ತು ಅದನ್ನು ಒಪ್ಪಿಸಲಾಗಿದೆ. ನಿರೂಪಕರ ಪುತ್ರ ಮತ್ತು ಸೊಸೆ ವೈದ್ಯ ವೃತ್ತಿಯನ್ನು ಇಂಗ್ಲೆಂಡಿನ ಹಳ್ಳಿ ಪ್ರದೇಶದಲ್ಲಿಯೇ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ನಿರೂಪಕರು ತನ್ನ ಪುತ್ರ ವಾಸಿಸುತ್ತಿರುವ ಪರಿಸರವನ್ನು ಉತ್ತಮವೆಂತಲೇ ಬಿಂಬಿಸಬೇಕು ಅದು ಪಿತೃಧರ್ಮ ಎನಿಸುತ್ತದೆ. ವಾಸ್ತವದಲ್ಲಿ ಇಂಗ್ಲೆಂಡಿನಲ್ಲಿ ಭಾರತದಂತೆ ಹಳ್ಳಿ ಪ್ರದೇಶ ಎಂಬುದಿಲ್ಲ. ನಗರ ಮತ್ತು ಉಪನಗರಗಳು ಇವೆ. ಕೃಷಿ ವಲಯಗಳಲ್ಲಿ ವಾಸವಿರುವ ಮನೆಗಳು 'ಫಾರ್ಮ್‌ಹೌಸ್'ಗಳಾಗಿರುತ್ತವೆ. ಈ ಫಾರ್ಮ್‌ಹೌಸ್‌ಗಳು ತಾತ್ಕಾಲಿಕ ವಾಸದ ಮನೆಗಳಾಗಿವೆ. ಕೃಷಿ ವಲಯದ ಕಾರ್ಮಿಕರಿಗೂ ಸರಕಾರವು ನಗರ ಮತ್ತು ಉಪನಗರಗಳಲ್ಲಿ ಸರ್ವ ಅನುಕೂಲತೆಗಳನ್ನು ಹೊಂದಿರುವ ಮನೆಗಳನ್ನು ನಿರ್ಮಿಸಿಕೊಟ್ಟಿರುತ್ತದೆ. ಲೇಖಕರು ಭಾರತೀಯ ಪ್ರಜ್ಞೆಯಿಂದ ಉಪನಗರಗಳನ್ನು ನೋಡಿರುವ ಕಾರಣ 'ಲಸ್' ಉತ್ಕೃಷ್ಟ ಹಳ್ಳಿಯಾಗಿ ಕಂಡಿರುವುದು ಆಶ್ಚರ್ಯವೇನಲ್ಲ ಎನಿಸುತ್ತದೆ. ಕಾಲ, ಪ್ರದೇಶಗಳು ಬದಲಾದಂತೆ ಪ್ರವಾಸಿ ಲೇಖಕರು ವ್ಯಕ್ತಪಡಿಸುವ ಅಭಿಪ್ರಾಯಗಳು ಬದಲಾಗುತ್ತದೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

'ಯುರೋಪ್ ನೆನಪುಗಳು' ಕೃತಿಯಲ್ಲಿ 'ಪೇತ್ರಾಲೋಸಾ' ಎಂಬ ಹಳ್ಳಿಯ ಜನರ ಬಗ್ಗೆ ಉಲ್ಲೇಖಿಸಲಾಗಿದೆ. ನಿರೂಪಕರು ಈ ಹಳ್ಳಿಗೆ ಪ್ರವಾಸಕ್ಕಾಗಿ ತೆರಳಿದ್ದಲ್ಲ, ಬದಲಾಗಿ ತಮ್ಮ ಅಧ್ಯಯನ ಭಾಗವಾಗಿ ಉತ್ಖನನ ಕಾರ್ಯದಲ್ಲಿ ಪಾಲ್ಗೊಳ್ಳಲು ತೆರಳಿದ್ದರು. ಈ ಹಳ್ಳಿಯಲ್ಲಿ ತಮ್ಮ ಉತ್ಖನನ ಕಾರ್ಯ

ಮುಗಿಯುವವರೆಗೆ ನೆಲೆಸಿದ್ದಾರೆ. ಆದ್ದರಿಂದ ಈ ಕೃತಿಯ ಅಭಿಪ್ರಾಯಗಳು ಒಂದು ದಿನ ಭೇಟ ನೀಡಿದ ಪ್ರವಾಸಿಯ ಅಭಿಪ್ರಾಯಕ್ಕಿಂತಲು ಹೆಚ್ಚು ನಂಬಿಕೆಗೆ ಅರ್ಹವಾದುದು ಎನ್ನಬಹುದು. ಕೃತಿಯಲ್ಲಿ ನಿರೂಪಿಸಿರುವಂತೆ ಪೇತ್ರಾಲೋನಾ ಹಳ್ಳಿಯು ಸ್ವಚ್ಚ ಮತ್ತು ಸುಂದರ ಹಳ್ಳಿಯಾಗಿದೆ. ಐನೂರು ಜನರಿರುವ ಹಳ್ಳಿಯಲ್ಲಿ ಶೇಕಡಾ ನಲವತ್ತರಷ್ಟು ಜನರಲ್ಲಿ ವಾಹನ ಸೌಕರ್ಯಗಳನ್ನು ಹೊಂದಿದವರಿದ್ದಾರೆ. ಗೃಹ ವ್ಯವಸ್ಥೆ, ಆಹಾರ, ಉಡುಪುಗಳಲ್ಲಿ ಶ್ರೀಮಂತಿಕೆ ಇರುವುದನ್ನು ಉಲ್ಲೇಖಿಸಲಾಗಿದೆ. ನಿರೂಪಕರಿಗೆ ಹಳ್ಳಿಯು ಆಧುನಿಕವಾಗಿಯೂ, ಸುಸಜ್ಜಿತವಾಗಿಯೂ, ಶ್ರೀಮಂತಿಕೆಯಿಂದ ಕೂಡಿರುವಂತೆ ಕಾಣಲು ಅವರ ಅಂದಿನ ಪರಿಸ್ಥಿತಿಗಳು ಕಾರಣವಾಗಿದೆ. ಭಾರತದಿಂದ ಗ್ರೀಕ್ ದೇಶಕ್ಕೆ ಐತಿಹಾಸಿಕ ಮತ್ತು ಪ್ರಾಗೈತಿಹಾಸಿಕ ಉತ್ಖನನದ ಜಿಜ್ಞಾಸು ವಿದ್ಯಾರ್ಥಿಯಾಗಿ ತೆರಳಿದ ನಿರೂಪಕರು ಸರಕಾರದ ವಿದ್ಯಾರ್ಥಿವೇತನದಿಂದ ಬರುವ ಅಲ್ಪ ಹಣದಲ್ಲಿಯೇ ಅಲ್ಲಿನ ಖರ್ಚುವೆಚ್ಚಗಳನ್ನು ನಿಭಾಯಿಸಬೇಕಿತ್ತು. ಯಾವುದೇ ವಾಹನ ಸೌಕರ್ಯಗಳಿಲ್ಲದೆ ಸಮಯಕ್ಕೆ ಸರಿಯಾಗಿ ಉತ್ಖನನ ಸ್ಥಳಕ್ಕೆ ಹೋಗಲಾಗದೆ ಪರದಾಡಿದ್ದರು. ನಿರೂಪಕರಿಗೆ ಭೇಟಿಯಾದ ಕೆಲವು ಭಾರತೀಯ ವಿದ್ಯಾರ್ಥಿಗಳು ಕೂಡ ನಿರೂಪಕರಲ್ಲಿ ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ಹೇಳಿಕೊಂಡಿದ್ದರು. ಆದ್ದರಿಂದಲೇ ನಿರೂಪಕರಿಗೆ ಅಲ್ಲಿನವರ ಶ್ರೀಮಂತಿಕೆಯನ್ನು ಅಳೆಯಲು ಬಳಸಿದ ಮಾನಗಳು ತಮ್ಮ ಕೊರತೆಯನ್ನು ತುಂಬುವ ವಸ್ತುಗಳೇ ಆಗಿರುವುದನ್ನು ಗುರುತಿಸಬಹುದು. ಯಾವುದೇ ನಗರವಾಗಲಿ, ಹಳ್ಳಿಯಾಗಲಿ, ಪ್ರವಾಸಿ ಸ್ಥಳವಾಗಲಿ ಲೇಖಕರು ಅದನ್ನು ವಿವರಿಸುವಾಗ ಆ ಸಂದರ್ಭದಲ್ಲಿ ಕೊರತೆ ಎನಿಸಿದ ಸವಲತ್ತುಗಳು ತಾನು ಕಾಣುತ್ತಿರುವ ದೃಶ್ಯದಲ್ಲಿ ಕಂಡರೆ ಮನಸ್ಸು ಸಹಜವಾಗಿ ಅದನ್ನು ಪ್ರಮುಖ ಎಂದು ಗ್ರಹಿಸುತ್ತದೆ.

ಈ ಮೇಲಿನ ಎಲ್ಲಾ ಕೃತಿಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಸಮಗ್ರ ದೃಷ್ಟಿಯಿಂದ ನೋಡಿದಾಗ ಹೆಚ್ಚಿನ ಅಭಿಪ್ರಾಯಗಳು ಯುರೋಪಿನ ದೇಶಗಳಲ್ಲಿನ ಹಳ್ಳಿಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತವೆ. ಭಾರತದ ಹಳ್ಳಿಗಳ ಅವ್ಯವಸ್ಥೆಯನ್ನು ಹೆಚ್ಚಿನ ಕೃತಿಗಳು ಉಲ್ಲೇಖಿಸಿವೆ. ಬೇಸರ ಭಾವವನ್ನು ವ್ಯಕ್ತಪಡಿಸಿವೆ. ಕೆಲವು ಕೃತಿಗಳು ವ್ಯಕ್ತಮಾಡಿದ ಅಭಿಪ್ರಾಯಗಳು ರಾಷ್ಟ್ರೀಯ ಪ್ರಜ್ಞೆಯಿಂದ ಪ್ರೇರಿತಗೊಂಡಿವೆ. 'ನಮ್ಮ ದೇಶವನ್ನು ನಾವು ಬೇರೆ ದೇಶದೊಂದಿಗೆ ಹೋಲಿಸುವುದಿಲ್ಲ' ಎನ್ನುವ ಪಲಾಯನ ಧೋರಣೆ ವ್ಯಕ್ತವಾಗಿರುವುದನ್ನು ಗುರುತಿಸಲಾಗಿದೆ. ನಮ್ಮ ಭಾರತದ ಪರಿಸ್ಥಿತಿಯೇ ಬೇರೆ, ನಮ್ಮ ಜನರ ನೋವುಗಳೇ ಬೇರೆ, ಆದ್ದರಿಂದ ಭಾರತೀಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಮುಂದು ಮಾಡಿ ಹೋಲಿಸುವುದಿಲ್ಲ ಎಂದು ಅಭಿಪ್ರಾಯಿಸಿದ್ದಾರೆ. ಭಾರತೀಯ ಹಳ್ಳಿಗಳಂತೆಯೇ ಕೊಳಕಾಗಿ, ಅವ್ಯವಸ್ಥಿತವಾಗಿ ಕಂಡಿತ್ತು ಎಂಬುದು ಇನ್ನು ಕೆಲವು ಕೃತಿಗಳ ಅಭಿಪ್ರಾಯವಾಗಿದೆ. ಇವರು ಭಾರತದ ಹಳ್ಳಿಗಳ ಬಡತನದ ಪರಿಸ್ಥಿತಿಯನ್ನು ದೂಷಿಸುವುದಿಲ್ಲ. ಹೀಗೆ ಪ್ರವಾಸಿ ಲೇಖಕರಲ್ಲಿಯೇ ಎರಡು ಬಗೆಯ ಮನೋಧೋರಣೆಗಳು ಇರುವುದನ್ನು ಗುರುತಿಸಲಾಗಿದೆ.

ಕೃಷಿಪದ್ಧತಿ : ಯುರೋಪ್ ಪ್ರವಾಸ ಕೃತಿಗಳಲ್ಲಿ ಹೆಚ್ಚಿನ ಕೃತಿಗಳು ನಗರ ಪ್ರದೇಶ ಮತ್ತು ಪ್ರವಾಸಿ ಸ್ಥಳಗಳ ವರ್ಣನೆಗಳಿಗೆ ಸೀಮಿತವಾಗಿದೆ. ಹಳ್ಳಿಗಳಿಗೆ ತೆರಳಿ ಅಲ್ಲಿನ ಕೃಷಿ ಪದ್ಧತಿಯ ಬಗ್ಗೆ, ಅಲ್ಲಿನ ಆಚರಣೆಗಳ ಬಗ್ಗೆ ತಿಳಿಯುವ, ಮಾಹಿತಿಯನ್ನು ಪಡೆಯುವ ಹಂಬಲ ಸಾಕಷ್ಟು ಲೇಖಕರಲ್ಲಿ ಇಲ್ಲದಿರುವುದು ಕಂಡುಬರುತ್ತದೆ. ಕೆಲವೇ ಕೃತಿಗಳು ಈ ದಿಸೆಯಲ್ಲಿ ಪ್ರಯತ್ನಿಸಿವೆ.

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ ಎಂಬುದು ಸಿದ್ಧಮಾದರಿಯ ವ್ಯಾಖ್ಯಾನವಾಗಿದೆ. ಇತ್ತೀಚೆಗೆ ಈ ವ್ಯಾಖ್ಯೆ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳಬೇಕಾದ ಅನಿವಾರ್ಯತೆಗಳು ಸೃಷ್ಟಿಯಾಗುತ್ತಿದೆ. ೨೦೧೧ ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನರು ಕೃಷಿಯಲ್ಲಿ ತೊಡಗಿಕೊಂಡಿದ್ದರು. ಅದರೆ ಸ್ವಾವಲಂಬನೆ ಸಾಧ್ಯವಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಕೃಷಿಕರ ಪ್ರಮಾಣ ಕಡಿಮೆಯಾಗುತ್ತಾ ಬರುತ್ತಿದೆ. ಯುವಕರೆಲ್ಲ ನಗರದೆಡೆಗೆ ಆಕರ್ಷಿತರಾಗಿ ವಲಸೆ ಹೋಗುತ್ತಿದ್ದಾರೆ. ಭಾರತದಲ್ಲಿ ಇಂದು ಕೈಗಾರಿಕಾ ವಲಯ ಹೆಚ್ಚು ವಿಸ್ತರಣೆಯನ್ನು ಪಡೆದುಕೊಳ್ಳುತ್ತಿದೆ. ಯುರೋಪ್ ರಾಷ್ಟ್ರಗಳಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿ ಇದೆ. ಆದರೂ ಕೃಷಿ ಉತ್ಪನ್ನಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿರುವುದನ್ನು ಅಂಕಿಅಂಶಗಳು ತಿಳಿಸುತ್ತವೆ. ಕೃಷಿ ಅವಲಂಬಿತರ ಸಂಖ್ಯೆ ಕಡಿಮೆ ಇದ್ದರೂ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿ ಬೇರೆ ದೇಶಗಳಿಗೆ ರಫ್ತು ಮಾಡುವ ಪ್ರಮಾಣದಲ್ಲಿ ಕೃಷಿ ಬೆಳೆಗಳನ್ನು ಉತ್ಪಾದಿಸಲು ಆ ದೇಶಗಳು ಶೈಕ್ಷಣಿಕವಾಗಿ ಪ್ರಗತಿ ಹೊಂದಿರುವುದೇ ಕಾರಣ ಎಂದು ಪ್ರವಾಸ ಕೃತಿಗಳು ವಿಶ್ಲೇಷಣೆ ಮಾಡಿವೆ. ನಮ್ಮ ದೇಶದ ರೈತರಲ್ಲಿ ಹೆಚ್ಚಿನ ಸಂಖ್ಯೆಯ ಅನಕ್ಷರಸ್ಥರಿದ್ದಾರೆ. ಮಾರುಕಟ್ಟೆಯ ಜ್ಞಾನ ಇರುವುದಿಲ್ಲ. ಬೆಳೆಯನ್ನು ತೆಗೆಯುವ ವೈಜ್ಞಾನಿಕ ವಿಧಾನಗಳ ಬಗ್ಗೆ ತಿಳಿವಳಿಕೆ ಇರುವುದಿಲ್ಲ. ಆದ್ದರಿಂದ ಕೃಷಿಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ. 'ಅಯನ' ಕೃತಿಯಲ್ಲಿ ಫ್ರಾನ್ಸ್‌ನ ರೈತ ಸಹಕಾರಿ ಸಂಘಕ್ಕೆ ಭೇಟಿ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ನಿರೂಪಕರು ಕೃಷಿಗೆ ನಿರಾವರಿ ವ್ಯವಸ್ಥೆಯ ನಿರ್ವಹಣೆ ಹೇಗೆ ಎಂಬುದರ ಬಗ್ಗೆ ವಿಚಾರಿಸಿದ್ದಾರೆ. ಅಲ್ಲಲ್ಲಿ ಸಣ್ಣ ಸಣ್ಣ ಚೆಕ್ ಡ್ಯಾಂ ನಿರ್ಮಾಣ ಮಾಡಿರುವುದನ್ನು, ಕೃಷಿಯನ್ನು ಅತ್ಯಾಧುನಿಕ ಉಪಕರಣಗಳನ್ನು ಬಳಸಿ ನಿರ್ವಹಿಸುವುದನ್ನು ಉಲ್ಲೇಖಿಸಿದ್ದಾರೆ. ಅಲ್ಲಿನ ವ್ಯವಸ್ಥಿತವಾದ ಕೃಷಿಯ ಚಟುವಟಿಕೆಗಳನ್ನು ಕಂಡು ನಿರೂಪಕರು ಹೇಳುವ ಮಾತೆಂದರೆ ಭಾರತೀಯ ರೈತನು ಕೃಷಿಯಲ್ಲಿ ಯಶಸ್ಸು ಗಳಿಸಬೇಕಾದರೆ "ರೈತ ಉದ್ಯಮಿಯೂ, ವಿಜ್ಞಾನಿಯೂ ಆಗಿರಬೇಕು". (ನಾಗತಿಹಳ್ಳಿ ಚಂದ್ರಶೇಖರ್, ಅಯನ, ಪು-೫೫) ಫ್ರಾನ್ಸ್ ದೇಶದ ರೈತರು ಸುಶಿಕ್ಷಿತರಾಗಿದ್ದು ಕೃಷಿಗೆ ಪೂರಕವಾದ ಸಮಸ್ತ ಮಾಹಿತಿಗಳನ್ನು ತಿಳಿದುಕೊಂಡು ಕೃಷಿ ಮಾಡುತ್ತಾರೆ. ನೀರಾವರಿ ವ್ಯವಸ್ಥೆ, ಚೆಕ್ ಡ್ಯಾಂ ವ್ಯವಸ್ಥೆ, ರೈತ ಸಹಕಾರ ಸಂಘಗಳ ಬಗ್ಗೆ ವಿವರವಾದ ಮಾಹಿತಿಯನ್ನು ತಿಳಿದುಕೊಂಡಿರುತ್ತಾರೆ. ಭಾರತೀಯ ರೈತ ಕೂಡ ತಮ್ಮ ಕಾರ್ಯ ವ್ಯಾಪ್ತಿಯ ಜೊತೆಗೆ ವಿಜ್ಞಾನಿಯೂ, ಉದ್ಯಮಿಯೂ ಆಗಿರಬೇಕಾಗುತ್ತದೆ. ಆಗ ಸಸ್ಯ ಬೆಳವಣಿಗೆಯ ನಿಯಮಗಳನ್ನು ತಿಳಿದು ಬಿತ್ತನೆ ಮಾಡಲು, ಹವಾಮಾನ, ನೀರು ಪೂರೈಕೆ, ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಅರಿವನ್ನು ಪಡೆದು ಕೃಷಿ ಮಾಡಿದರೆ ಯಶಸ್ಸು ಸಾಧ್ಯ ಎಂದು ಸಲಹೆ ನೀಡಿದ್ದಾರೆ.

ಕೃಷಿಯನ್ನು ಆಧುನೀಕರಣಗೊಳಿಸುವುದರಿಂದ ಕೃಷಿಯಲ್ಲಿ ಸ್ವಾವಲಂಬನೆಯನ್ನು ಗಳಿಸಲು ಸಾಧ್ಯ ಎಂಬ ಅಭಿಪ್ರಾಯವು ೧೯೬೦ ರ ಕಾಲಘಟ್ಟದಲ್ಲಿತ್ತು. ಆ ಕಾಲಕ್ಕೆ ಲೇಖಕರ ಈ ಅಭಿಪ್ರಾಯವು ಮಾನ್ಯವೇ ಆಗಿದೆ. ಇಂದು ಕೃಷಿ ಪದ್ಧತಿಯು ಸಾಕಷ್ಟು ವೈಜ್ಞಾನಿಕರಣಗೊಂಡಿರುವುದನ್ನು ಕಾಣಬಹುದು. ಆದರೆ ಇತ್ತೀಚೆಗೆ ಕೃಷಿಯಲ್ಲಿ ವೈಜ್ಞಾನಿಕತೆಯ ಅಳವಡಿಕೆ ಬಗ್ಗೆ ಜನರಲ್ಲಿ ಅಸಮಾಧಾನ ಮೂಡಿದೆ. ಏಕೆಂದರೆ ಕೃಷಿಯಲ್ಲಿ ರಾಸಾಯನಿಕ ವಸ್ತುಗಳನ್ನು ಅತಿಯಾದ ಬಳಸಿ ಆಹಾರ ಸಾಮಾಗ್ರಿಗಳನ್ನು ಉತ್ಪಾದಿಸುವುದರಿಂದ ತಿನ್ನಲು ಯೋಗ್ಯವಾಗಿಲ್ಲ ಎಂದೂ, ಮೊದಲ ಸಾಂಪ್ರದಾಯಿಕ ವಿಧಾನವೇ ಸರಿಯಾದುದು ಎಂಬ ಅಭಿಪ್ರಾಯಗಳು ಹೆಚ್ಚು ಗಟ್ಟಿಗೊಳ್ಳತೊಡಗಿದೆ. ಕೃಷಿಯಲ್ಲಿ ಆಧುನೀಕರಣದ ಅಳವಡಿಕೆಗೆ ಸಂಬಂಧಿಸಿದಂತೆ

ಎರಡು ಮುಖಗಳಿವೆ. ಸಾಂಪ್ರದಾಯಿಕ ಪದ್ಧತಿಯನ್ನು ಸಂಪೂರ್ಣ ತ್ಯಾಗ ಮಾಡಿ ವೈಜ್ಞಾನಿಕತೆಯ ತಳಹದಿಯ ಮೇಲೆ ಕೃಷಿಯನ್ನು ಹೊಸದಾಗಿ ನಿರ್ಮಿಸುವುದು. ಮತ್ತೊಂದು ಆಯಾಮವೆಂದರೆ ಸಾಂಪ್ರದಾಯಿಕ ಪದ್ಧತಿಯನ್ನು ತಿರಸ್ಕರಿಸದೆ ಸಾಂಪ್ರದಾಯಿಕ ಪದ್ಧತಿಯನ್ನೇ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಬದಲಾಯಿಸಿ ಸಾಧ್ಯವಾಗುವ ಕಡೆ ವೈಜ್ಞಾನಿಕ, ತಂತ್ರಜ್ಞಾನವನ್ನು ಅಳವಡಿಸುವುದು. ಭಾರತವು ಎರಡನೇ ಬಗೆಯ ಕೃಷಿ ಪದ್ಧತಿಯ ಕಡೆಗೆ ಹೆಚ್ಚು ವಾಲುತ್ತಿರುವುದನ್ನು ಗುರುತಿಸಬಹುದಾಗಿದೆ. ಯುರೋಪಿನ ರಾಷ್ಟ್ರಗಳು ಕೃಷಿಯನ್ನು ಸಂಪೂರ್ಣವಾಗಿ ಆಧುನೀಕರಣಗೊಳಿಸಿದೆ. ಲೇಖಕರಿಗೆ ಈ ಆಧುನಿಕ ಪದ್ಧತಿಯು ಪ್ರಿಯವಾಗಲು ಆ ದೇಶಗಳನ್ನು ಅಭಿವೃದ್ಧಿಯ ಹಿನ್ನೆಲೆಯಲ್ಲಿ ನೋಡಿರುವುದೇ ಕಾರಣವಾಗಿದೆ.

ಬಿಸ್ಟನ್ ಹಳ್ಳಿಯ 'ರೈತರ ಸಂತೆ' : 'ನನ್ನ ಬೆಲ್ಜಿಯಂ ಪ್ರವಾಸ' ಕೃತಿಯಲ್ಲಿ ಬಿಸ್ಟನ್ ಎಂಬ ಹಳ್ಳಿಯಲ್ಲಿ ನಡೆಯುವ ರೈತರ ಸಂತೆಯ ಬಗ್ಗೆ ವಿವರಿಸಲಾಗಿದೆ. ಸಂತೆಯು ಬಿಸ್ಟ್ ಎಂಬ ಶಾಪಿಂಗ್ ಮಾಲ್‌ನ ಕಾರ್ ಪಾರ್ಕಿಂಗ್ ಮಾಡುವ ಸ್ಥಳದಲ್ಲಿ, ನಿಗದಿತ ದಿನಗಳಂದು ಸಂತೆ ಸೇರುತ್ತದೆ. ಈ ಸಂತೆಯಲ್ಲಿ ಸ್ಥಳಿಯ ರೈತರು ತಾವೇ ಬೆಳೆದ ತರಕಾರಿಗಳನ್ನು ವ್ಯಾನ್‌ಗಳಲ್ಲಿ ತಂದಿಟ್ಟು ಮಾರುವುದನ್ನು ಉಲ್ಲೇಖಿಸಲಾಗಿದೆ. ಅಕ್ಟೋಬರ್ ತಿಂಗಳಿನಲ್ಲಿ ಒಂದು ದಿನ ಈ ಸಂತೆಗೆ ಹಳ್ಳಿಯವರು ತಾವು ಸಾಕಿದ ದನಕರುಗಳು, ಆಡುಕುರಿಗಳು, ಹಂದಿ ಮೊದಲಾದವುಗಳನ್ನು ಮಾರಾಟಕ್ಕೆ ತರಲಾಗುತ್ತದೆ ಎಂದು ವಿವರಿಸಲಾಗಿದೆ. ಇದು ಕರ್ನಾಟಕದಲ್ಲಿದ್ದ 'ರೈತರ ಸಂತೆ' ಎಂಬ ಸಂತೆ ಪದ್ಧತಿಗೆ ಸಂವಾದಿಯಾಗಿದೆ. ಕರ್ನಾಟಕದಲ್ಲಿ ಎಸ್. ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ ರೈತರು ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದೆ, ದಲ್ಲಾಳಿಗಳ ಮೋಸಕ್ಕೆ ಒಳಗಾಗಿ ಸಾಲಗಾರರಾಗುತ್ತಿದ್ದ ರೈತರಿಗೆ ಸೂಕ್ತ ಬೆಲೆ ಸಿಗುವಂತೆ ಮಾಡಲು 'ರೈತರ ಸಂತೆ' ಎಂಬ ನೂತನ ಸಂತೆ ಪದ್ಧತಿಯನ್ನು ಅನುಷ್ಠಾನ ಮಾಡಲಾಗಿತ್ತು. ಈ ಪದ್ಧತಿಯು ಹೆಚ್ಚು ಯಶಸ್ವಿಯಾಗಲಿಲ್ಲ. ನಮ್ಮ ಭಾರತದಲ್ಲಿ ರೈತರು ಬೆಳೆಯನ್ನು ಬೆಳೆದರೂ, ಆ ವಸ್ತುಗಳನ್ನು ಸರಿಯಾದ ಬೆಲೆಗೆ ವಿಕ್ರಯ ಮಾಡುವಲ್ಲಿ ವಿಫಲರಾಗುತ್ತಾರೆ. ಮಧ್ಯವರ್ತಿಗಳು ಹೆಚ್ಚಿನ ಪಾಲಿನ ಲಾಭವನ್ನು ಕಬಳಿಸುತ್ತಾರೆ. ಆದ್ದರಿಂದ ಅಯನ ಕೃತಿಯಲ್ಲಿ 'ರೈತ ಮಾರುಕಟ್ಟೆ ತಜ್ಞನಾಗಿಯೂ' ಇರಬೇಕಾಗುತ್ತದೆ ಎಂದು ಉಲ್ಲೇಖಿಸಲಾಗಿದೆ. ಬೆಲ್ಜಿಯಂ ರೈತರು ತಾವು ಬೆಳೆದ ತರಕಾರಿ, ಹಣ್ಣುಗಳನ್ನು ಖುದ್ದಾಗಿ ತಾವೇ ಮಾರಾಟ ಮಾಡುವ ಮುಕ್ತ ವ್ಯವಸ್ಥೆಯನ್ನು ಅನುಸರಿಸಿದ್ದಾರೆ. ಇದು ಬಹಳ ಉಪಕಾರಿಯಾದ ವಹಿವಾಟಿನ ಕ್ರಮವಾಗಿದೆ. ಇದು ಒಂದು ಬಗೆಯಲ್ಲಿ ವಿನೂತನ ಸಂತೆಯಾಗಿದೆ. ರೈತರು ತಾವು ಬೆಳೆದ ಪರಿಕರಗಳನ್ನು ಖರ್ಚು ಕಳೆದು ತಮಗೆ ಲಾಭವಾಗುವಷ್ಟು ಹಣದಲ್ಲಿ ಮಾರಾಟ ಮಾಡಲು ಅನುಕೂಲವಾಗುತ್ತದೆ. ಈ ಪದ್ಧತಿಯಲ್ಲಿ ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. ಈ ಬಗೆಯ ರೈತರ ಸಂತೆಯ ಪದ್ಧತಿಯನ್ನು ಅಳವಡಿಸುವುದು ರೈತರ ಹಿತದೃಷ್ಟಿಯಿಂದ ಅನುಕೂಲಕರವಾದುದು ಎಂಬ ಅಂಶವನ್ನು ಪ್ರವಾಸ ಕೃತಿಗಳ ವಿವರಗಳಿಂದ ಕಂಡುಕೊಳ್ಳಲಾಗಿದೆ.

ಪ್ರವಾಸ ಕೃತಿಗಳಲ್ಲಿ ವ್ಯಕ್ತವಾಗಿರುವ ಯುರೋಪಿನ ಗ್ರಾಮೀಣ ಪ್ರದೇಶಗಳ ಜನಜೀವನ ಮತ್ತು ಅಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಆಧರಿಸಿ ಹೇಳುವುದಾದರೆ 'ಯುರೋಪಿನ ಹಳ್ಳಿಗಳು ಭಾರತದ ಹಳ್ಳಿಗಳಂತೆಯೇ ಸಾಮಾನ್ಯ ರೀತಿಯಲ್ಲಿ ಇದೆ. ಅಲ್ಲಿ ಶಿಕ್ಷಿತರ ಪ್ರಮಾಣ ಹೆಚ್ಚಾಗಿರುವುದರಿಂದ ಆಡಳಿತ ವ್ಯವಸ್ಥೆ ಅಚ್ಚುಕಟ್ಟಾಗಿದೆ. ನಗರ ಭಾಗದ ಅನುಕೂಲತೆಗಳಿಗೆ ಹೋಲಿಸಿ ನೋಡಿದರೆ ಹಳ್ಳಿಗಳಲ್ಲಿ ಅನುಕೂಲತೆಗಳು ಕಡಿಮೆ ಇದೆ. ಭಾರತದ ಹಳ್ಳಿಗಳಂತೆ ಮೂಲಭೂತ ಸೌಕರ್ಯಗಳ ಕೊರತೆ

ಯುರೋಪಿನ ಬಹುತೇಕ ಹಳ್ಳಿಗಳಲ್ಲಿಲ್ಲ. ಆದರೆ ಕೆಲವು ಕೃತಿಗಳು ಯುರೋಪಿನ ಹಳ್ಳಿಗಳು ಉತ್ತಮ ರೀತಿಯಲ್ಲಿ ಸುಸಜ್ಜಿತವಾಗಿವೆ ಎಂದು ಹೇಳಿದರೆ, ಕೆಲವು ಕೃತಿಗಳು ಭಾರತದ ಹಳ್ಳಿಗಳಂತೆಯೇ ಇವೆ. ಹೆಚ್ಚು ವ್ಯತ್ಯಾಸಗಳು ಕಂಡುಬರುವುದಿಲ್ಲ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ. ಈ ರೀತಿ ಹಳ್ಳಿಗಳ ಬದುಕಿನ ರೀತಿಯನ್ನು ಹೋಲಿಕೆ ಮಾಡುವುದರ ಉದ್ದೇಶವೆಂದರೆ 'ಭಾರತೀಯ ಸಮಾಜದ ಬದುಕನ್ನು ಯುರೋಪಿನ ಸಮಾಜದ ಬದುಕಿನೊಂದಿಗೆ ಹೋಲಿಸುವ ಮೂಲಕ ಉನ್ನತೀಕರಿಸುವ ಸಾಧ್ಯತೆಗಳ ಬಗ್ಗೆ ಅರಿವನ್ನು ಉಂಟುಮಾಡುವುದಾಗಿದೆ.

ಆ) ನಗರ ಸಮಾಜ : ತೌಲನಿಕ ದೃಷ್ಟಿಕೋನ

ಯುರೋಪ್ ಪ್ರವಾಸ ಕೃತಿಗಳಲ್ಲಿ 'ನಗರ ಸಮಾಜ' ಪರಿಕಲ್ಪನೆಯನ್ನು ವಿವಿಧ ಆಯಾಮಗಳ ಮೂಲಕ ಕಟ್ಟಿಕೊಡಲಾಗಿದೆ. 'ನಗರಗಳು ಹೆಚ್ಚು ಜನಸಾಂದ್ರತೆ ಇರುವ ಪ್ರದೇಶವಾಗಿದ್ದು, ದೊಡ್ಡ ದೊಡ್ಡ ಕೈಗಾರಿಕಾ ವಲಯಗಳನ್ನು ಒಳಗೊಂಡಿರುತ್ತದೆ. ಅತಿ ಹೆಚ್ಚು ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿರುವ, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಿರುವ ಪ್ರದೇಶ ಎಂಬುದು ಸಾಮಾನ್ಯ ಗ್ರಹಿಕೆಯಾಗಿದೆ. ಆದ್ದರಿಂದ ನಗರಗಳು ಗ್ರಾಮೀಣ ಭಾಗದ ಯುವಕರನ್ನು ಸೆಳೆದಿವೆ. ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿಕೊಳ್ಳಲು, ಉದ್ಯೋಗದ ಆಮಿಷವನ್ನು, ಪರಮಸುಖದ ದಾರಿಯನ್ನು ತೋರುವ ಪ್ರದೇಶ ಎಂಬ ಆಶಾವಾದವನ್ನು ಮೂಡಿಸಿವೆ. ಪರಿಣಾಮವಾಗಿ ಪ್ರಪಂಚದಲ್ಲಿ ನಗರೀಕರಣದ ಪ್ರಭಾವಕ್ಕೆ ಒಳಗಾಗದ ನಗರಗಳಿಲ್ಲ. ನಗರ ಪ್ರದೇಶದಲ್ಲಿ ವಾಸಿಸುವ ಜನ ಸಮುದಾಯವು ಇವೆಲ್ಲವುಗಳಿಂದ ಅನುಕೂಲತೆಯನ್ನು ಪಡೆದಿದ್ದಾರೆ. ಅಂತೆಯೇ ಈ ಅಭಿವೃದ್ಧಿ ಪ್ರೇರಿತ ಚಟುವಟಿಕೆಗಳಿಂದ ಅನನುಕೂಲವಾಗಿರುವುದನ್ನೂ ಅಲ್ಲಗೆಳೆಯುವಂತಿಲ್ಲ.

ಹಳ್ಳಿಯ ಬದುಕಿಗಿಂತ ನಗರದವರ ಬದುಕಿನ ಸುಸೂತ್ರತೆ, ಆಧುನಿಕತೆ, ಬೆಡಗುಗಳು ಹೆಚ್ಚಿದ್ದು, ಅಸಮಾನತೆಯಿಂದ ಕೂಡಿದೆ ಎಂಬುದನ್ನು ಒಪ್ಪಲಾಗಿದೆ. ಯುರೋಪ್ ಖಂಡದ ನಗರಗಳೆಲ್ಲಾ ಪ್ರವಾಸಿ ತಾಣಗಳಿಂದ ಕೂಡಿವೆ. ಯುರೋಪ್ ಪ್ರವಾಸ ಎಂದರೆ ಅದು ಯುರೋಪಿನ ಪ್ರಮುಖ ನಗರಗಳ ಪ್ರವಾಸ ಎಂದೇ ಆಗುತ್ತದೆ. ಪ್ರವಾಸದ ಕಾರಣದಿಂದ ನಗರಗಳಿಗೆ ಹರಿದುಬರುವ ಆದಾಯದ ಪ್ರಮಾಣವು ಹೆಚ್ಚಿರುತ್ತದೆ. ನಿಯೋಜಿತ ಪ್ರವಾಸಕ್ಕೆ ಹೋದವರು ತಮಗೆ ದೊರಕಿದ ಅವಧಿಯಲ್ಲಿ ನಗರ ಪ್ರದಕ್ಷಿಣೆಯನ್ನು ಮಾಡಿ ತಮ್ಮ ಅಭಿಪ್ರಾಯವನ್ನು ದಾಖಲಿಸಿದ್ದಾರೆ. ಈ ಅಭಿಪ್ರಾಯಗಳು ಅಲ್ಪಾವಧಿಯಲ್ಲಿ ಗ್ರಹಿಸಿದ, ಸೂಕ್ಷ್ಮವಲ್ಲದ ಹೇಳಿಕೆಗಳಾಗಿವೆ. ನಗರಗಳ ಸೂಕ್ಷ್ಮಗಳು ತಿಳಿಯಬೇಕಾದರೆ ನಗರಗಳಲ್ಲಿ ನೆಲೆಸಬೇಕು. ಪ್ರವಾಸದ ಅವಧಿಯಲ್ಲಿ ಇದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಧ್ಯಯನದ ಉದ್ದೇಶಕ್ಕಾಗಿ ತೆರಳಿ ಅಲ್ಲಿ ಅನೇಕ ತಿಂಗಳುಗಳ ಕಾಲ ನೆಲೆಸಿ ಪಡೆದ ಅನುಭವಗಳನ್ನು ದಾಖಲಿಸಿದ ಕೃತಿಗಳು ಹೆಚ್ಚು ವಿಶ್ವಾಸಾರ್ಹವಾಗಿರುತ್ತವೆ. ಸಮುದ್ರದಾಚೆಯಿಂದ, ವೈದ್ಯನ ವಿದೇಶ ಪ್ರವಾಸ, ಯುರೋಪ್ ನೆನಪುಗಳು, ಇತಾಲಿಯಾ ನಾನು ಕಂಡಂತೆ ಮೊದಲಾದ ಕೃತಿಗಳು ಅಧ್ಯಯನದ ಉದ್ದೇಶಕ್ಕಾಗಿ ವಿದೇಶಗಳಿಗೆ ತೆರಳಿದ ಅನುಭವಗಳ ವಿವರಗಳಾಗಿವೆ. ನಿಯೋಜಿತ ಪ್ರವಾಸದಲ್ಲಿ ನಗರದ ಪೂರ್ಣ ಚಿತ್ರಣ ದಕ್ಕುವುದಿಲ್ಲ. ಈ ಮಿತಿಯನ್ನು ಗಮನದಲಿಟ್ಟುಕೊಂಡು ಪ್ರವಾಸ ಮಾಡಿದ ಲೇಖಕರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಗರ ಸಮುದಾಯದ ಬದುಕಿನ ಚಿತ್ರಣಗಳನ್ನು ವಿಶ್ಲೇಷಿಸಲಾಗಿದೆ.

ಯುರೋಪಿನ ಪ್ರಮುಖ ನಗರಗಳೆಂದರೆ ಪ್ಯಾರಿಸ್, ರೋಮ್, ಲಂಡನ್, ಮಾಸ್ಕೋ, ಬರ್ನ್, ಆಮ್‌ಸ್ಟರ್‌ಡಾಮ್, ಬುಡಾಫೆಸ್ಟ್, ಮೊದಲಾದವು. ಈ ನಗರಗಳಿಗೆ ಆಗಮಿಸುವ ಪ್ರವಾಸಿ ಲೇಖಕರು ಸಾಮಾನ್ಯವಾಗಿ ನಗರದ ಸೌಂದರ್ಯವನ್ನು, ಸ್ವಚ್ಛತೆಯನ್ನು, ಅನುಕೂಲತೆಗಳನ್ನು, ಕಟ್ಟಡಗಳ ಅಗಾಧತೆಯನ್ನು, ಆಹಾರ ಕ್ರಮಗಳನ್ನು, ಹೀಗೆ ನಗರ ಸಮುದಾಯವನ್ನು ವಿವಿಧ ಆಯಾಮಗಳ ಮೂಲಕ ಕೃತಿಯಲ್ಲಿ ದಾಖಲಿಸಿದ್ದಾರೆ. ಕೆಲವು ಕೃತಿಗಳು ನಗರಗಳನ್ನು ಧನಾತ್ಮಕ ದೃಷ್ಟಿಕೋನದಿಂದ ವಿವರಿಸುವ ಜೊತೆಗೆ ನಗರದ ಮತ್ತೊಂದು ಕರಾಳ ಮುಖವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ. ಕೆಲವು ಕೃತಿಗಳು ನಗರ ಸಮುದಾಯವನ್ನು ಕೇಂದ್ರವಾಗಿರಿಸಿ ಚರ್ಚಿಸುತ್ತವೆ. ಕೆಲವು ಕೃತಿಗಳು ಚರ್ಚಿಸದೆ ಕೇವಲ ವಿವರಿಸುತ್ತವೆ. ಕೆಲವು ಅಭಿಪ್ರಾಯಗಳು ನಗರ ಕೇಂದ್ರಿತ ವಿವರಣೆಯನ್ನು ಹೊಂದಿದ್ದರೆ, ಕೆಲವು ಅಭಿಪ್ರಾಯಗಳು ಸಮುದಾಯ ಕೇಂದ್ರಿತ ವಿವರಣೆಗಳನ್ನು ಹೊಂದಿವೆ. ಪ್ರವಾಸ ಕೃತಿಗಳಲ್ಲಿ ನಗರಗಳನ್ನು ವೈಭವದ ನೆಲೆಯಲ್ಲಿಯೇ, ಏಕ ಮಾನದ ಮೂಲಕ ನೋಡಲು ಕಾರಣವೇನು? ಕೆಲವು ಪ್ರವಾಸ ಕೃತಿಗಳು ಬಹುಮುಖಿ ಆಯಾಮಗಳ ಮೂಲಕ ನಗರಗಳನ್ನು ವಿಶ್ಲೇಷಿಸುತ್ತವೆ ಏಕೆ? ಇದರ ಹಿಂದಿನ ಮಾನಸಿಕ ಮತ್ತು ಬೌದ್ಧಿಕ ಹಿನ್ನೆಲೆಗಳೇನು?. ಈ ಅಂಶಗಳನ್ನು ಆಧರಿಸಿ ನಗರ ಸಮುದಾಯದ ಬದುಕಿನ ಚಿತ್ರಣವನ್ನು ವಿಶ್ಲೇಷಿಸಲಾಗಿದೆ.

ಯುರೋಪ್ ಪ್ರವಾಸ ಕೃತಿಗಳು ನಗರ ಜನರ ಬದುಕಿನ ಬಗ್ಗೆ ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಆಧರಿಸಿ ಹೇಳುವುದಾದರೆ, ಯುರೋಪಿನ ಗ್ರಾಮೀಣ ಜನರ ಜೀವನ ಕ್ರಮಕ್ಕಿಂತ ನಗರ ಭಾಗದ ಜನರ ಜೀವನ ಕ್ರಮವು ಆಧುನಿಕತೆಯಿಂದ ಕೂಡಿದೆ. ಈ ನಗರಗಳಲ್ಲಿ ಮೂಲ ಜಾನಪದ ಸಂಸ್ಕೃತಿಗಳ ಆಚರಣೆಗಳು ಮಸುಕಾಗಿವೆ. ನೂತನ ತಂತ್ರಜ್ಞಾನಗಳ ಆವಿಷ್ಕಾರದಿಂದ ಜನರ ಪದ್ಧತಿಗಳು, ಆಹಾರ ಕ್ರಮ, ನಂಬಿಕೆ, ಸಂಪ್ರದಾಯಗಳು ಬದಲಾಗಿವೆ. ಜನರಲ್ಲಿ ನಿರೀಕ್ಷೆಗಳು ಹೆಚ್ಚಾಗಿದ್ದು ಅದನ್ನು ಪೂರೈಸಿಕೊಳ್ಳುವುದರಲ್ಲಿಯೇ ಜನರು ಮಗ್ನರಾಗಿದ್ದಾರೆ ಎಂಬ ಭಾವನೆ ವ್ಯಕ್ತವಾಗಿದೆ.

ಪ್ಯಾರಿಸ್ : ಪ್ಯಾರಿಸ್ ನಗರ ಕುರಿತಂತೆ ಹಲವು ಲೇಖಕರು ವಿವಿಧ ದೃಷ್ಟಿಕೋನದಲ್ಲಿ ನೋಡಿರುವುದನ್ನು ಕಾಣಲಾಗಿದೆ. ಪಿ. ಆರ್. ತಿಪ್ಪೇಸ್ವಾಮಿ ಅವರು ಪ್ಯಾರಿಸ್‌ನ ವೈಭವ, ಆಧುನಿಕತೆ, ಹಿರಿಮೆಗಳನ್ನು ಮೆಚ್ಚಿಕೊಂಡಿದ್ದಾರೆ. ಜೊತೆಗೆ ಪ್ಯಾರಿಸ್ಸಿನ ಮತ್ತೊಂದು ಕರಾಳ ಮುಖವನ್ನು ಪರಿಚಯಿಸಿದ್ದಾರೆ. ಪ್ಯಾರಿಸ್ ವಾಯುಮಾಲಿನ್ಯ, ಕಲಬೆರೆಕೆ, ಅಶಾಂತಿಯಿಂದ ಕೂಡಿರುವುದನ್ನು ಗುರುತಿಸಿದ್ದಾರೆ. ಯಾವುದೇ ಆಧುನಿಕ ನಗರ ಸಮುದಾಯವು ಇದೇ ಬಗೆಯ ದ್ವಿಮುಖತೆಯನ್ನು ಹೊಂದಿರುತ್ತದೆ. ಇದು ನಗರೀಕರಣದ ಪ್ರಭಾವದಿಂದ ಆಗುತ್ತಿರುವ ದುಷ್ಪರಿಣಾಮಗಳು ಎಂದು ಸರಳೀಕರಿಸಿ ಬಿಡುವಂತಿಲ್ಲ. ಪಿ. ಆರ್. ತಿಪ್ಪೇಸ್ವಾಮಿ ಅವರ ಅಭಿಪ್ರಾಯದಲ್ಲಿ ಪ್ಯಾರಿಸ್ ನಗರದಂತೆ ನಮ್ಮ ನಗರಗಳು ಬೆಳೆದಿಲ್ಲವಲ್ಲ ಎಂಬ ಅಳುಕು ಇದೆ. ಆ ಅಳುಕನ್ನು ಲೋಪಗಳನ್ನು ಗುರುತಿಸುವ ಮೂಲಕ ತಮ್ಮನ್ನು ಸಮಾಧಾನ ಪಡಿಸಿಕೊಳ್ಳುವ ಪ್ರಯತ್ನದಂತಿದೆ. ರಾಷ್ಟ್ರೀಯ ಪ್ರಜ್ಞೆಯು ಪ್ಯಾರಿಸ್ಸಿನಲ್ಲಿಯೂ ಭಾರತೀಯತೆಯನ್ನು ಕಾಣುವ ಹಂಬಲ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಭಾರತದಲ್ಲಿರುವ ಕೊರತೆಗಳ ಬಗ್ಗೆ ಅಸಹನೆಯನ್ನು ವ್ಯಕ್ತಪಡಿಸಿದ್ದರೂ; ಬದಲಾಯಿಸಲು ಸಾಧ್ಯವಿಲ್ಲ ಎಂಬ ಅಸಹಾಯಕ ಭಾವನೆಯನ್ನು ತಾಳಿರುವುದನ್ನು ಗುರುತಿಸಲಾಗಿದೆ.

ಪ್ಯಾರಿಸ್ ನಗರಕ್ಕೆ ಪ್ರವಾಸ ಹೋದವರು ನಗರದ ಕಲಾವೈಭವವನ್ನು, ಅಚ್ಚುಕಟ್ಟುತನವನ್ನು, ಸ್ವಚ್ಛತೆಯನ್ನು, ಜನರ ಸಹಕಾರ ಮನೋಭಾವವನ್ನು ಮನಸಾರೆ ಹೊಗಳಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಇದೇ ನಗರದಲ್ಲಿ ಬೇರೆ ಲೇಖಕರಿಗೆ ಬೇರೆ ರೀತಿಯ ಅನುಭವವಾಗುತ್ತದೆ. 'ರಾಷ್ಟ್ರೀಯ ಪ್ರಜ್ಞೆ'ಯೊಂದಿಗೆ ನಗರಗಳನ್ನು ವಿಮರ್ಶಿಸುವ ಮನೋಭಾವ ಇರುವ ಕೃತಿಕಾರರಿಗೆ ಪ್ಯಾರಿಸ್ ಕಾಣುವ ರೀತಿ ಬೇರೆಯೇ ಆಗಿರುತ್ತದೆ. ಯುರೋ-ದರ್ಶನ, ಏಕಾಕಿ ಪ್ರವಾಸ, ಒಂದು ಕನಸಿನ ಪಯಣ ಕೃತಿಗಳಲ್ಲಿ ಪ್ಯಾರಿಸ್, ಲಂಡನ್ ಮೊದಲಾದ ನಗರಗಳು ಮತ್ತು ಈ ನಗರಗಳಲ್ಲಿರುವ ಪ್ರವಾಸಿ ಸ್ಥಳಗಳು ಆಕರ್ಷಣೀಯ ಎನಿಸುವುದಿಲ್ಲ. ಉದಾಹರಣೆಗೆ ಯುರೋ-ದರ್ಶನ ಕೃತಿಯಲ್ಲಿ "ಪ್ಯಾರಿಸ್ಸಿನಲ್ಲಿ ಕುಡಿದು-ತಿಂದು ಎಸೆದ ಬಾಟಲ್‌ಗಳು, ಡಬ್ಬಿಗಳು, ಕಾಗದಗಳು, ರಸ್ತೆಯ ಮಗ್ಗುಲಲ್ಲಿ ಬಿದ್ದಿರುತ್ತವೆ."(ಹೇಮಲತಾ ಮಹಿಷಿ, ಯುರೋ ದರ್ಶನ, ಪು-೯೯)ಎಂದು ಉಲ್ಲೇಖಿಸಲಾಗಿದೆ. ಏಕಾಕಿ ಪ್ರವಾಸ ಕೃತಿಯಲ್ಲಿ 'ಪ್ಯಾರಿಸ್‌ನ ರೌಂಡ್ ಪಾಯಿಂಟ್ ವೃತ್ತದಲ್ಲಿ ಕಿಸೆಗಳ್ಳತನ, ರತಿಕ್ರೀಡೆ ಚಿತ್ರಗಳು, ಬ್ಲೂಫಿಲ್ಮ್ ಮಾರುವವರು, ವೇಶ್ಯಾವಾಟಿಕೆ ದಲ್ಲಾಳಿಗಳು ಹೇರಳವಾಗಿದ್ದಾರೆ ಎಂದು ಉಲ್ಲೇಖಿಸಲಾಗಿದೆ. ಈ ದೃಷ್ಟಿಕೋನವುಳ್ಳ ಕೃತಿಗಳ ಪ್ರಕಾರ 'ಆಧುನಿಕತೆಯ ಪ್ರವೇಶದಿಂದ ಇಂದು ಬದಲಾದ ಸಮಾಜವು ಅತಿರೇಕಗಳನ್ನು ಕಂಡಿದೆ' ಎಂಬುದು ಇವುಗಳ ಒಪ್ಪಿತ ವಾದವಾಗಿದೆ. ಈ ಕೃತಿಕಾರರಿಗೆ ಪ್ಯಾರಿಸ್ ನಗರವು ಅನೈತಿಕತೆಯ ಆಗರವೆಂಬಂತೆ ತೋರಲು ಕಾರಣವೇನು? ಎಂದು ಪ್ರಶ್ನಿಸಿಕೊಂಡಾಗ 'ಹೆಚ್ಚಾಗಿ ಸಾಂಪ್ರದಾಯಿಕ ದೃಷ್ಟಿಕೋನವುಳ್ಳ ಅಂದರೆ ಆಧುನೀಕರಣಕ್ಕೆ ವಿರೋಧವನ್ನು ವ್ಯಕ್ತಪಡಿಸುವ ಕೃತಿಗಳು ಹಾಗೂ ಆಧುನೀಕರಣ ಪ್ರಕ್ರಿಯೆಯ ಕಾರಣದಿಂದ ಬದಲಾದ ಸಮಾಜವು ಮಾನವೀಯ ಸಂಬಂಧಗಳನ್ನು ದೂರೀಕರಿಸಲು ಕಾರಣವಾಗುತ್ತದೆ ಎಂಬುದನ್ನು ಒಪ್ಪುತ್ತವೆ. ಬಳಸು ಬಿಸಾಕು ಎಂಬ ನವಮನೋಧರ್ಮವನ್ನು ವಿರೋಧಿಸುತ್ತವೆ. ಆದ್ದರಿಂದಲೇ ಪ್ಯಾರಿಸ್ ನಗರದ ವೈಭವ, ಆಕರ್ಷಣೆಯನ್ನು ಬಂಡವಾಳಶಾಹಿಗಳ ತಂತ್ರಗಳು ಎಂದು ಉಲ್ಲೇಖಿಸಲಾಗಿದೆ. ಈ ನೆಲೆಯಲ್ಲಿ ನೋಡಿದ ಕೃತಿಗಳಿಗೆ ಪ್ಯಾರಿಸ್ ನಗರವು ಆಧುನೀಕರಣದಿಂದ ಅವ್ಯವಸ್ಥೆಗೊಂಡ ನಗರವಾಗಿ ಕಾಣುತ್ತದೆ. ಈ ಕೃತಿಗಳು ಉಲ್ಲೇಖಿಸಿದ ಪ್ಯಾರಿಸ್ ನಗರದಲ್ಲಿನ ಅವ್ಯವಸ್ಥೆಗಳು ಭಾರತದ ನಗರಗಳಲ್ಲಿಯೂ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಉಲ್ಲೇಖಿಸುವುದಿಲ್ಲ. ಬಹುಶಃ ಪ್ಯಾರಿಸ್ ಕೂಡ ಭಾರತದ ನಗರಗಳಂತೆಯೇ ಇದೆ ಎಂಬುದನ್ನು ಒಪ್ಪಿಸುವ ಭಾವ ಇರುವುದನ್ನು ಕಾಣಲಾಗಿದೆ.

ನಗರೀಕರಣ : ಯುರೋಪಿನ ದೇಶಗಳಲ್ಲಿ ಉಪನಗರಗಳ ಕಡೆಯಿಂದ ನಗರಗಳ ಕಡೆಗೆ ಸಾವಿರಾರು ವಿದ್ಯಾವಂತರು ವಲಸೆ ಬರುತ್ತಿರುವುದನ್ನು ಅಯನ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಆಧುನಿಕತೆಗೆ ಮರುಳಾದ ಇಂದಿನ ಹೊಸ ತಲೆಮಾರು ಯಾವುದೋ ಆಕಾಂಕ್ಷೆಗಳನ್ನು ಹೊಂದಿ ನಗರಕ್ಕೆ ಬರುವುದನ್ನು ಗುರುತಿಸಿದೆ. ಈ ಸಮಸ್ಯೆ ವಿಶ್ವವ್ಯಾಪಿಯಾಗಿದೆ. ಇಂದು ಎಲ್ಲಾ ನಗರಗಳಲ್ಲೂ ಈ ವಲಸಿಗರ ಸಂಖ್ಯೆ ದಿನೇ ದಿನೇ ದ್ವಿಗುಣಗೊಳ್ಳುತ್ತಿದೆ. ನಗರೀಕರಣದಿಂದಾಗಿ ಅನೇಕ ಹೊಸ ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿರುವುದನ್ನು ಅಲ್ಲಗೆಳೆಯುವಂತಿಲ್ಲ. ಮುಂಬೈನ 'ಧಾರಾವಿ'ಯಂತಹ ದೊಡ್ಡ ಪ್ರಮಾಣದ ಸ್ಲಂ ಏರಿಯಾಗಳು ಸೃಷ್ಟಿಯಾಗಿರುವುದು ಈ ನಗರೀಕರಣದ ಒಂದು ಪರಿಣಾಮ ಎಂದರೆ ಒಪ್ಪಲೇಬೇಕಾಗುತ್ತದೆ. ಇವು ಸೃಷ್ಟಿಸುವ ಸಾಮಾಜಿಕ ಸಮಸ್ಯೆಗಳಿಗೆ ಎಣೆಯಿಲ್ಲ. ಭಾರತದಂತಹ ಮುಂದುವರೆಯುತ್ತಿರುವ ದೇಶಗಳಲ್ಲಿ ನಗರೀಕರಣ ನಿರ್ಮಿತ ಸಮಸ್ಯೆಗಳು ಸರಕಾರದ ಹತೋಟಿಗೆ ಬಾರದ ರೀತಿಯಲ್ಲಿ ಬೆಳೆದು, ಸರಕಾರಗಳನ್ನೇ ತನ್ನೊಳಗೆ ಸೆಳೆದುಕೊಳ್ಳುವಷ್ಟು ಶಕ್ತಿಯುತವಾಗಿ ರೂಪಗೊಳ್ಳುತ್ತಿರುವುದು ನಗರೀಕರಣದ ಅಡ್ಡಪರಿಣಾಮಗಳಲ್ಲಿ

ಒಂದಾಗಿದೆ. ಯುರೋಪ್ ಖಂಡದಲ್ಲಿರುವ ತೃತೀಯ ರಾಷ್ಟ್ರಗಳಿಂದ ಫ್ರಾನ್ಸ್, ರಷ್ಯಾ, ಇಂಗ್ಲೆಂಡ್, ಇಟಲಿ ದೇಶಗಳ ರಾಜಧಾನಿಗಳಿಗೆ ವಲಸೆ ಬಂದಿರುವ ನಿರ್ವಸಿತರು ಸಾಕಷ್ಟು ಪ್ರಮಾಣದಲ್ಲಿರುವುದನ್ನು ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಪ್ಯಾರಿಸ್‌ನಲ್ಲಿ ಅಲ್ಜೀರಿಯಾದ ನಿರ್ವಸಿತರು ಭಯೋತ್ಪಾದನಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರ ಬಗ್ಗೆ 'ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಇದೇ ರೀತಿ ನಾನಾ ಕಾರಣಗಳಿಗಾಗಿ ನಗರದ ಕಡೆಗೆ ವಲಸೆ ಬರುವ ಜನರಿಂದ ಸಮಸ್ಯೆಗಳಾಗಿರುವುದು ಒಂದು ಕಡೆಯಾದರೆ; ಇದೇ ವಲಸಿಗರಿಂದ ನಗರವು ಹೆಚ್ಚು ಶಕ್ತಿಯನ್ನು ಪಡೆದಿರುವುದು ಮತ್ತೊಂದು ಆಯಾಮವಾಗಿದೆ. ವಲಸಿತರಾಗಿ ಬಂದವರಲ್ಲಿ ಪ್ರತಿಭಾನ್ವಿತರು, ಕಷ್ಟ ಸಹಿಷ್ಣುಗಳು, ಕಾರ್ಮಿಕರು ನಗರ ನಿರ್ಮಾಣದಲ್ಲಿ ತಮ್ಮದೇ ಆದ ಯೋಗದಾನವನ್ನು ನೀಡಿರುವುದನ್ನು ಅಲ್ಲಗೆಳೆಯುವಂತಿಲ್ಲ. ಇದರಿಂದ ತಿಳಿದು ಬರುವ ಸಂಗತಿಯೆಂದರೆ ಸಾಮಾಜಿಕ ಬದಲಾವಣೆಯಲ್ಲಿ ರಚನಾತ್ಮಕ ಅಂಶಗಳು ಒಳಗೊಂಡಿರುತ್ತವೆ. ಪ್ರತಿಯೊಂದು ಬದಲಾವಣೆಗಳಿಗೂ ಎರಡು ಆಯಾಮಗಳು ಇದ್ದೇ ಇರುತ್ತದೆ. ಒಂದು ಧನಾತ್ಮಕ ಆಯಾಮ ಮತ್ತೊಂದು ಋಣಾತ್ಮಕ ಆಯಾಮ. ಪ್ರವಾಸಿ ಲೇಖಕರು ಸಾಮಾಜಿಕವಾದ ಸಂಗತಿಗಳನ್ನು ಎರಡೂ ಬಗೆಯ ಆಯಾಮಗಳಲ್ಲಿ ಗಮನಿಸಿರುವುದನ್ನು ಕಾಣಲಾಗಿದೆ.

ರೋಮ್ : ಯುರೋಪಿನ ದೇಶಗಳಲ್ಲೆ ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರುವ ದೇಶ ಇಟಲಿ. ಇಟಲಿಯ ರಾಜಧಾನಿ ರೋಮ್. 'ಎಲ್ಲಾ ರಸ್ತೆಗಳು ರೋಮಿಗೆ ಸೇರುತ್ತವೆ' ಎನ್ನುವ ಪ್ರಸಿದ್ಧ ಮಾತಿದೆ. ರೋಮ್ ನಗರವು ಇಂದಿಗೂ ಮೂಢನಂಬಿಕೆಗಳನ್ನು, ಸಾಮಾಜಿಕ ಭ್ರಷ್ಟತೆಗಳನ್ನು, ಧಾರ್ಮಿಕ ಪ್ರಭುತ್ವದ ಹತೋಟಿಯನ್ನು ಪೋಷಿಸುತ್ತಾ ಬಂದಿದೆ. ಪ್ರಾಚೀನ ನಾಗರಿಕತೆ ಎಂಬ ಹೆಗ್ಗಳಿಕೆ ಇದ್ದರೂ, ಹಲವಾರು ತತ್ವಜ್ಞಾನಿಗಳನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ್ದರೂ ತನ್ನ ಒಡಲಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಬೆಳೆಸಿಕೊಂಡೇ ಸಾಗಿದೆ. ಯುರೋಪಿನ ಇತರ ಎಲ್ಲಾ ದೇಶಗಳಿಗೆ ಹೋಲಿಸಿ ನೋಡಿದರೆ ಇಟಲಿಯ ನಗರಗಳಲ್ಲಿ ಸಾಮಾಜಿಕ ಸಮಸ್ಯೆಗಳ ಪ್ರಮಾಣ ಹೆಚ್ಚಾಗಿದೆ. ಕಳ್ಳತನ, ದರೋಡೆ, ಲಂಚ, ಭ್ರಷ್ಟತೆ, ವೇಶ್ಯಾವಾಟಿಕೆ ಹೀಗೆ ಅನೇಕ ಸಾಮಾಜಿಕ ಸಮಸ್ಯೆಗಳಿದೆ ಎಂದು ಅನೇಕ ಪ್ರವಾಸ ಕೃತಿಗಳು ಉಲ್ಲೇಖಿಸಿವೆ. ಯುರೋಪಿನ ಇತರ ದೇಶಗಳಿಗಿಂತ ಇಟಲಿ ದೇಶದಲ್ಲಿಯೇ ಸಾಮಾಜಿಕ ಸಮಸ್ಯೆಗಳು ಅಧಿಕವಾಗಿರಲು ಕಾರಣವೇನು? ಇಟಲಿಯು ಯುರೋಪಿನ ಸಂಸ್ಕೃತಿಯ ಪರಿಮಿತಿಯಿಂದ ಬೇರೇಯೇ ಆಗುವಂತೆ ಮಾಡುವಲ್ಲಿ ಇರುವ ನಿರ್ಧಾರಕ ಅಂಶಗಳು ಯಾವುವು? ಮತ್ತು ಏಕೆ?. ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ. ಕೃತಿಗಳ ಅಭಿಪ್ರಾಯವನ್ನು ಪರಿಗಣಿಸಿ ಹೇಳುವುದಾದರೆ ರೋಮ್ ನಗರವು ಕ್ರೈಸ್ತ ಪಂಗಡದವರಿಗೆ ಪವಿತ್ರ ಯಾತ್ರಾ ಸ್ಥಳವಾಗಿದೆ. ಯಾತ್ರಾ ಸ್ಥಳಗಳಲ್ಲಿ ಜನರ ದಂಡು ಹೆಚ್ಚಾಗಿಯೇ ಇರುತ್ತದೆ. ಅಪರಿಚಿತರ ಗುಂಪು ಹೆಚ್ಚಾಗುವ ಯಾವುದೇ ಪ್ರವಾಸಿ ಸ್ಥಳವು ಶಿಸ್ತನ್ನು, ನೈತಿಕತೆಯನ್ನು ಪಾಲಿಸುವುದು ಕಷ್ಟಕರ. ಇಂತಹ ಸ್ಥಳಗಳಲ್ಲಿ ಮೂಢನಂಬಿಕೆಗಳ ಪ್ರಮಾಣವು ಹೆಚ್ಚಾಗಿರುತ್ತದೆ. ಎಲ್ಲಾ ಧರ್ಮಗಳ ಯಾತ್ರಾ ಸ್ಥಳಗಳಲ್ಲಿಯೂ ಇದು ಸಾಮಾನ್ಯವಾದ ಸಮಸ್ಯೆಯಾಗಿದೆ. ಫ್ರಾನ್ಸಿನಲ್ಲಿಯೂ ಯಾತ್ರಾ ಸ್ಥಳಗಳಲ್ಲಿ ಇದೇ ರೀತಿಯ ಪರಿಸ್ಥಿತಿ ಇರುವುದನ್ನು 'ಫ್ರೆಂಚ್ ಸಂಸ್ಕೃತಿ ಶೋಧದಲ್ಲಿ' ಕೃತಿಯು ಉಲ್ಲೇಖಿಸಿದೆ.

ಒಂದು ಪ್ರವಾಸಿ ಸ್ಥಳದ ಬಗ್ಗೆ ಒಂದೆರಡು ಕೃತಿಗಳಲ್ಲಿ ಋಣಾತ್ಮಕ ಅಭಿಪ್ರಾಯ ವ್ಯಕ್ತವಾದರೆ ಆ ಅಭಿಪ್ರಾಯಕ್ಕೆ ಹೆಚ್ಚು ಮೌಲ್ಯ ಇರುವುದಿಲ್ಲ. ಕೆಲವೊಮ್ಮೆ ವ್ಯಕ್ತಿತ್ವ ದೋಷದಿಂದಲೂ, ಪೂರ್ವಾಗ್ರಹ ದೃಷ್ಟಿಯಿಂದಲೂ ಋಣಾತ್ಮಕ ಅಂಶಗಳನ್ನು ಸೇರಿಸುವ ಸಾಧ್ಯತೆ ಇರುತ್ತದೆ. ಆದರೆ ಒಂದು ಸ್ಥಳದ ಬಗ್ಗೆ

ಒಂದೇ ರೀತಿಯ ಅಭಿಪ್ರಾಯವನ್ನು ಹಲವು ಲೇಖಕರು ವ್ಯಕ್ತಪಡಿಸಿದಾಗ ಆ ಅಭಿಪ್ರಾಯಕ್ಕೆ ಹೆಚ್ಚು ತೂಕವಿರುತ್ತದೆ. ಪ್ರವಾಸಿಗಳಿಗೆ ಹೆಚ್ಚು ಆನಂದವನ್ನುಂಟು ಮಾಡುವ ಈ ಸ್ಥಳಗಳು ಎಚ್ಚರ ತಪ್ಪಿದರೆ ತೊಂದರೆ ಉಂಟುಮಾಡಬಹುದು ಎಂಬ ಸಂದೇಶವನ್ನು ರವಾನಿಸುತ್ತದೆ. ಕೃತಿಗಳು ಓದುಗರಿಗೆ ಈ ಬಗೆಯ ಸ್ಥಳಗಳಿಗೆ ಪ್ರವಾಸ ಹೋಗುವಾಗ ಎಚ್ಚರಿಕೆ ಮುಖ್ಯ ಎಂಬ ಮುಂಜಾಗ್ರತೆಯನ್ನು ನೀಡುತ್ತವೆ.

ಲಂಡನ್ : ಯುರೋಪ್ ಪ್ರವಾಸ ಕೃತಿಗಳಲ್ಲಿ ಶೇ ೭೦ಕ್ಕಿಂತ ಹೆಚ್ಚು ಕೃತಿಗಳು ಲಂಡನ್ ನಗರಕ್ಕೆ ಭೇಟಿ ನೀಡಿದ ವಿವರಗಳನ್ನು ಹೊಂದಿವೆ. ಯುರೋಪ್ ಪ್ರವಾಸ ಎಂದರೆ ಇಂಗ್ಲೆಂಡ್, ಪ್ರಾನ್ಸ್, ಇಟಲಿ, ರಷ್ಯಾ ದೇಶಗಳ ಪ್ರವಾಸ ಎನ್ನುವಂತಾಗಿದೆ. ಪ್ರತಿಯೊಂದು ಕೃತಿಯಲ್ಲಿಯೂ ಲಂಡನ್ ನಗರದ ಬಗ್ಗೆ ವಿಭಿನ್ನವಾದ ರೀತಿಯಲ್ಲಿ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ. ಪ್ರತಿಯೊಂದು ಕೃತಿಯು ತನ್ನದೇ ಆದ ನಿಲುವುಗಳನ್ನು ಹೊಂದಿವೆ. ಸಾಮಾಜಿಕವಾಗಿ ವಿವಿಧ ಆಯಾಮಗಳ ಮೂಲಕ ವಿಶ್ಲೇಷಿಸಿವೆ. ಅವುಗಳನ್ನು ಪರಾಮರ್ಶನ ದೃಷ್ಟಿಯಿಂದ ವಿಮರ್ಶಿಸಲಾಗಿದೆ. ಯುರೋ-ದರ್ಶನ ಕೃತಿಯಲ್ಲಿ ಲಂಡನ್ ನಗರದ ಬಗ್ಗೆ ಅಭಿಪ್ರಾಯಗಳನ್ನು ದಾಖಲಿಸುವಾಗ 'ಸಿಹಿ-ಕಹಿ ಲಂಡನ್' ಎಂದು ಶೀರ್ಷಿಕೆ ನೀಡಲಾಗಿದೆ. ಇದು ಕೃತಿಕಾರರ ದೃಷ್ಟಿಕೋನವು ಸ್ತ್ರೀ ಮನೋಧರ್ಮದಿಂದ ಪ್ರೇರಿತವಾಗಿದ್ದು ಮಹಿಳೆಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಧೋರಣೆಯು ಕಹಿ ಎಂಬುದನ್ನು ಸೂಚಿಸುತ್ತದೆ.

ಏಕಾಕಿ ಪ್ರವಾಸಿ, ಯೂರೋ ಅಮೆರಿಕದ ಇಣುಕು ನೋಟ, ವೈದ್ಯನ ವಿದೇಶ ಪ್ರವಾಸ, ಸಮುದ್ರದಾಚೆಯಿಂದ, ಯುರೋ ನಾಡಿನಲ್ಲಿ, ಪ್ರವಾಸಿಯ ದಿನಚರಿ, ವಿದೇಶದಲ್ಲಿ ನಾಲ್ಕು ವಾರ, ಸ್ನೇಹಯಾತ್ರೆ, ಅಂಗೈಯಲ್ಲಿ ಯೂರೊ ಅಮೆರಿಕ ಕೃತಿಗಳಲ್ಲಿ ಲಂಡನ್ ನಗರವನ್ನು ಮೂಢನಂಬಿಕೆಗಳ ನಗರ, ಕಂದಾಚಾರಗಳಿಗೆ ಜೋತುಬಿದ್ದಿರುವ ನಗರ, ಕಳ್ಳರು, ಭ್ರಷ್ಟರು, ಭಿಕ್ಷುಕರು ಇರುವ, ವಿಧಿ, ಹಣೆ ಬರಹಗಳನ್ನು ನಂಬುವ, ಜನ್ಮಾಂತರಗಳಲ್ಲಿ ನಂಬಿಕೆ ಇರುವ ನಗರ ಎಂದು ಉಲ್ಲೇಖಿಸಲಾಗಿದೆ. ಆದರೆ ಇಂಗ್ಲೆಂಡಿನಲ್ಲಿ ಚತುರ್ಮಾಸ, ಒಂದು ಕನಸಿನ ಪಯಣ, ಹಾಲೆಂಡ್‌ನಿಂದ ಲಂಡನ್‌ವರೆಗೆ, ನಮ್ಮ ವಿದೇಶ ಪ್ರವಾಶ, ಸೋವಿಯತ್ ದಿನಚರಿ ಕೃತಿಗಳಲ್ಲಿ ಲಂಡನ್ ನಗರವನ್ನು ಸ್ವಚ್ಛ, ಸುಂದರ, ನಿಶ್ಚಿಂತೆಯ ನಗರವಾಗಿ, ಸೌಂದರ್ಯ ದೇವತೆಯಾಗಿ, ಕಣ್ಣಿಗೆ ಹಬ್ಬವಾಗಿ ಉಲ್ಲೇಖಿಸಲಾಗಿದೆ.

ಲಂಡನ್ ನಗರ ಎಷ್ಟು ವೈವಿಧ್ಯವೋ, ಅಭಿಪ್ರಾಯಗಳು ಅಷ್ಟೇ ವರ್ಣಮಯವಾಗಿದೆ. ಕೆಲವು ಅಭಿಪ್ರಾಯಗಳು ಲಂಡನ್ ನಗರದ ಪರವಾಗಿದ್ದರೆ, ಹೆಚ್ಚಿನ ಅಭಿಪ್ರಾಯಗಳು ವಿರುದ್ಧವಾಗಿದೆ. ಲಂಡನ್‌ನಂತಹ ದೊಡ್ಡ ನಗರಗಳಲ್ಲಿ ಈ ಸಮಸ್ಯೆಗಳು ಸಾಮಾನ್ಯ ಎಂಬ ತೀರ್ಮಾನಕ್ಕೆ ಬರಬಹುದು. ಆದರೆ ಈ ಅಭಿಪ್ರಾಯಗಳು ವ್ಯಕ್ತಪಡಿಸುವ ಸಂವೇದನೆಗಳು ಭಾರತೀಯ ಸಮಾಜದ ಲಕ್ಷಣಗಳನ್ನು ಲಂಡನ್ ನಗರದೊಂದಿಗೆ ತೌಲನಿಕ ದೃಷ್ಟಿಯಿಂದಲೇ ಹೋಲಿಕೆ ಮಾಡಿರುವುದು ಕಂಡುಬರುತ್ತದೆ. ಭಾರತವು ಬ್ರಿಟೀಷರ ವಸಾಹತು ಆಗಿದ್ದಾಗ ನಗರಗಳನ್ನು ನಿರ್ಮಿಸಿದ ಬಗೆಗೂ, ಇಂಗ್ಲೆಂಡಿನ ನಗರಗಳನ್ನು ನಿರ್ಮಿಸಿರುವ ಬಗೆಗೂ ಇರುವ ವ್ಯತ್ಯಾಸಗಳನ್ನು ಗುರುತಿಸಿ ಇಂಗ್ಲೆಂಡನ್ನು ಅಪರಾಧಿ ಸ್ಥಾನದಿಂದಲೇ ನೋಡುವ ದೃಷ್ಟಿಕೋನವಿದೆ. ಭಾರತದ ಸಂಪತ್ತನ್ನು ಲೂಟಿ ಮಾಡಿ ಕಟ್ಟಿದ ನಗರ ಎಂಬ ಹಣೆಪಟ್ಟಿ ಲಂಡನ್ ನಗರವನ್ನು ಬಿಟ್ಟಿಲ್ಲ. ಅನೇಕ ಕೃತಿಗಳ ದೃಷ್ಟಿಕೋನಗಳು ಈ ಬಗೆಯ ಅಭಿಪ್ರಾಯಗಳ ಹಿನ್ನೆಲೆಯಲ್ಲಿಯೇ ವ್ಯಕ್ತವಾಗಿದೆ.

ಲಂಡನ್ ನಗರದ ಬಗ್ಗೆ ವ್ಯಕ್ತವಾಗಿರುವ ಅಭಿಪ್ರಾಯಗಳ ಮೇಲೆ ಕೃತಿಕಾರರು ಲಂಡನ್‌ನಲ್ಲಿ ತಂಗುವ ಸಮಯ ಮತ್ತು ಸಂದರ್ಭ, ಸನ್ನಿವೇಶಗಳು ಪ್ರಭಾವಿಸಿರುವುದನ್ನು ಗುರುತಿಸಲಾಗಿದೆ. ಉನ್ನತ ಶಿಕ್ಷಣಕ್ಕಾಗಿ ಧೀರ್ಘ ಅವಧಿಗೆ ತೆರಳಿದವರ ಕೃತಿಗಳಲ್ಲಿ (ಸಮುದ್ರದಾಚೆಯಿಂದ(೧೯೩೭), ವೈದ್ಯನ ವಿದೇಶ ಪ್ರವಾಸ(೧೯೮೦) ಆಳವಾದ ಸಾಮಾಜಿಕ ವಿಮರ್ಶೆಯನ್ನು ಕಾಣಬಹುದು. ಆದರೆ ಈ ಕೃತಿಗಳ ನಡುವೆ ಸೈದ್ಧಾಂತಿಕ ನಿಲುವುಗಳಲ್ಲಿ ವ್ಯತ್ಯಾಸಗಳಿದೆ. ಕೃತಿಕಾರರು ಇಂಗ್ಲೆಂಡಿಗೆ ತೆರಳಿರುವ ಕಾಲಘಟ್ಟದಲ್ಲಿನ ವ್ಯತ್ಯಾಸವು ನಿಲುವುಗಳಲ್ಲಿನ ವ್ಯತ್ಯಾಸಕ್ಕೆ ಖಚಿತವಾಗಿ ಕಾರಣವಾಗಿದೆ. ಈ ಎರಡು ಪ್ರವಾಸ ಕೃತಿಗಳು ನಡುವೆ ಸುಮಾರು ಐವತ್ತು ವರ್ಷಗಳ ಅಂತರವಿದೆ. ಈ ಅಂತರವು ಕೂಡ ಭಿನ್ನ ಧೋರಣೆಗಳಿಗೆ ಕಾರಣವಾಗಿದೆ. ಸಮುದ್ರದಾಚೆಯಿಂದ ಕೃತಿಯಲ್ಲಿ ಇಂಗ್ಲೆಂಡ್‌ನ್ನು ಮುಂದುವರಿದ, ಉನ್ನತ ಮಟ್ಟದ ಜೀವನ ಶೈಲಿಯನ್ನು ಹೊಂದಿದ ದೇಶವಾಗಿ ಕಾಣಲಾಗಿದೆ. ಬೌದ್ಧಿಕವಾಗಿ ಮತ್ತು ಶೈಕ್ಷಣಿಕವಾಗಿ ಇಂಗ್ಲೆಂಡಿಗೆ ಸಮನಾದ ದೇಶ ಮತ್ತೊಂದಿಲ್ಲ ಎಂಬ ನಿಲುವಿದೆ. ಅದೇ ವೈದ್ಯನ ವಿದೇಶ ಪ್ರವಾಸ ಕೃತಿಯಲ್ಲಿ ಭಾರತದ ಇಂದಿನ ದುಸ್ಥಿತಿಗೆ ಇಂಗ್ಲೆಂಡ್ ದೇಶ ಮತ್ತು ಅವರ ಸಂಪತ್ತಿನ ಲೂಟಿಕೋರತನವೇ ಕಾರಣ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಅದರ ಜೊತೆಗೆ ಜಾತ್ಯತೀತ ಮತ್ತು ಸರ್ವರನ್ನು ಸಮನಾಗಿ ಕಾಣುವ ಇಂಗ್ಲೆಂಡಿಗರ ಮನೋಧೋರಣೆಯನ್ನು ಶ್ಲಾಘಿಸಿದೆ. ಸಮುದ್ರದಾಚೆಯಿಂದ ಕೃತಿಯ ನಿರೂಪಣೆಯ ಮೇಲೆ ಆರ್ಯ ಸಂಸ್ಕೃತಿಯ ಪ್ರಭಾವವಿದೆ. ವೈದ್ಯನ ವಿದೇಶ ಪ್ರವಾಸ ಕೃತಿಯಲ್ಲಿ ದಲಿತ ಸಂವೇದನೆ ಮತ್ತು ಬಂಡಾಯದ ಧೋರಣೆ ಇದೆ.

ಮಾಸ್ಕೋ : ೧೯೯೧ಕ್ಕಿಂತ ಮೊದಲು ಸೋವಿಯತ್ ಒಕ್ಕೂಟವಾಗಿದ್ದ ಸಂದರ್ಭದಲ್ಲಿ ಸೋವಿಯತ್ ದೇಶಕ್ಕೆ ಭೇಟಿ ನೀಡಿದ ಕೃತಿಗಳ ವಿವರಗಳ ಅಧಿಕೃತತೆಯ ಬಗ್ಗೆ ಅನುಮಾನಗಳು ಮೂಡುತ್ತದೆ. ಏಕೆಂದರೆ ೧೯೩೦ರಿಂದ ೧೯೯೦ರ ಅವಧಿಯಲ್ಲಿ ಸೋವಿಯತ್ ರಷ್ಯಾ ದೇಶವು ಹಲವು ದೇಶಗಳಿಂದ ವಿದ್ವಾಂಸರನ್ನು ಬರಮಾಡಿಕೊಳ್ಳುತ್ತಿತ್ತು. ಹೀಗೆ ಬರಮಾಡಿಕೊಂಡ ಅತಿಥಿಗಳಿಗೆ ಸಕಲ ಸವಲತ್ತುಗಳನ್ನು ಸರಕಾರದ ವತಿಯಿಂದ ನೀಡಲಾಗುತ್ತಿತ್ತು. ಯುರೋಪ್ ಪ್ರವಾಸ ಕೃತಿಗಳಲ್ಲಿ ಹನ್ನೆರಡಕ್ಕೂ ಹೆಚ್ಚು ಕೃತಿಗಳು ಸರಕಾರದ ವೆಚ್ಚದಲ್ಲಿ ಸೋವಿಯತ್ ದೇಶಕ್ಕೆ ತೆರಳಿರುವುದನ್ನು ಗುರುತಿಸಲಾಗಿದೆ. ತಮ್ಮ ದೇಶದ ಅಭಿವೃದ್ಧಿಯನ್ನು ಪ್ರಚಾರ ಪಡಿಸುವ ಉದ್ದೇಶದಿಂದ ವಿದೇಶ ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸಿದೆ ಎಂಬ ಅಭಿಪ್ರಾಯ ಕೃತಿಗಳಲ್ಲಿಯೇ ವ್ಯಕ್ತವಾಗಿದೆ.

ರಷ್ಯಾದ ನಗರ ಸಮುದಾಯದ ಬಗ್ಗೆ ವಿವರಿಸುವ ಕೃತಿಗಳು ಹೆಚ್ಚಾಗಿ ಕೃತಜ್ಞತಾಭಾವದಿಂದ ಧನಾತ್ಮಕ ಧೋರಣೆಯನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಆ ಮೂಲಕ ಋಣಮುಕ್ತರಾಗಬೇಕೆಂಬ ಭಾವ ಅಭಿಪ್ರಾಯಗಳಲ್ಲಿದೆ. ಸೋವಿಯೆತ್ ದೇಶ ಕಂಡೆ, ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು, ಮತ್ತು ನವರಷ್ಯದ ನೋಟ ಕೃತಿಗಳಲ್ಲಿ ಈ ಅಂಶವನ್ನು ಗುರುತಿಸಲಾಗಿದೆ. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ ಮತ್ತು ಸೋವಿಯತ್ ದಿನಚರಿ ಕೃತಿಗಳಲ್ಲಿ ಸಮಚಿತ್ತದಿಂದ ವಿಶ್ಲೇಷಿಸಲಾಗಿದೆ. ಸರಿಯಾದುದನ್ನು ಸರಿ ಎಂತಲೂ ತಮಗೆ ತಪ್ಪು ಎನಿಸಿದ ಅಂಶಗಳನ್ನು ಯಾವ ಮುಲಾಜಿಗೂ ಒಳಗಾಗದೆ ತಪ್ಪು ಎಂತಲೂ ಉಲ್ಲೇಖಿಸಲಾಗಿದೆ.

ಕೃತಿಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿದಾಗ ಸೋವಿಯತ್ ದೇಶದ ನಗರ ಸಮುದಾಯದ ಬಗ್ಗೆ ಒಟ್ಟಂದದ ದೃಷ್ಟಿಕೋನವನ್ನು ನೀಡುತ್ತದೆ. ಸೋವಿಯತ್ ದೇಶದಲ್ಲಿನ ಸಾಮಾಜಿಕ ನಿರ್ಬಂಧಗಳು ೧೯೮೦ರ

ದಶಕದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಪೂರಕವಾಗಿಯೇ ಇತ್ತು ಎನಿಸುತ್ತದೆ. ಕೃತಿಗಳಲ್ಲಿ ವ್ಯಕ್ತವಾಗಿರುವ ಸೋವಿಯತ್ ದೇಶದ ಸಾಮಾಜಿಕ ವ್ಯವಸ್ಥೆಯ ರಚನೆ ಭಾರತೀಯ ದೃಷ್ಟಿಕೋನದಿಂದ ನೋಡಿದಾಗ ಅದು ಹೆಚ್ಚು ಅಮಾನವೀಯ ಕಾನೂನುಗಳಾಗಿ ಗೋಚರಿಸಿದೆ. ಏನೇ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿ ತಂದಿದ್ದರೂ ಬಡತನವನ್ನು ಹೋಗಲಾಡಿಸಲಾಗಿಲ್ಲ, ಸಮಾನತೆಯನ್ನು ಸಾಧಿಸಿಲ್ಲ ಎಂಬ ಭಾವಗಳು ವ್ಯಕ್ತವಾಗಿವೆ. ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಂಡಿರುವ ಸರಕಾರದ ಬಗ್ಗೆ ಅಸಹನೆ ಇರುವುದು ಕಂಡುಬರುತ್ತದೆ. ಆದ್ದರಿಂದ ಸೋವಿಯತ್‌ನ ಸಮಾಜವಾದಿ ಆಡಳಿತಕ್ಕಿಂತ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯೇ ಸರಿ ಎಂಬುದು ಕೆಲವು ಕೃತಿಗಳ ಅಭಿಪ್ರಾಯವಾಗಿದೆ. ಮತ್ತೆ ಕೆಲವರು ಸೋವಿಯತ್‌ನ ಸಮಾಜವಾದಿ ಆಡಳಿತವೇ ಸರಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯಗಳ ಬೇಧಕ್ಕೆ ಕೃತಿಕಾರರನ್ನು ಪ್ರಭಾವಿಸಿದ ಸಾಮಾಜಿಕ ಧೋರಣೆಗಳು ಕಾರಣವಾಗಿದೆ.

ಗ್ರಾಮೀಣ ಮತ್ತು ನಗರ ಸಮುದಾಯದ ಬಗ್ಗೆ ಲೇಖಕರ ತೌಲನಿಕ ದೃಷ್ಟಿಕೋನವನ್ನು ಒಂದು ಚೌಕಟ್ಟಿಗೆ ಒಳಪಡಿಸಿ ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ.

೧) ತಮ್ಮ ದೇಶವನ್ನು ತೆಗಳಿ ಬೇರೆ ದೇಶಗಳನ್ನು ಹೊಗಳುವ ಅಭಿಪ್ರಾಯಗಳನ್ನು ಹೊಂದಿದವರು : ವಿದೇಶದಲ್ಲಿ ತಮಗೆ ಕಂಡದ್ದೆಲ್ಲವೂ ಒಳ್ಳೆಯದು, ಸರಿಯಾದುದು, ಇಂತಹದ್ದು ಬೇರೆ ಎಲ್ಲಿಯೂ ಇಲ್ಲ ಎನ್ನುವಷ್ಟು ಹೊಗಳುವವರು.

೨) ಸ್ವಂತ ದೇಶದ ಸಮರ್ಥನೆಗೆ ನಿಲ್ಲುವ ಅಭಿಪ್ರಾಯ ಹೊಂದಿದವರು: ಇವರಿಗೆ ತಮ್ಮ ದೇಶವೆ ಶ್ರೇಷ್ಠ. ಬೇರೆ ದೇಶದಲ್ಲಿ ಅದೆಷ್ಟೇ ಚೆನ್ನಾಗಿದ್ದರೂ ನಮ್ಮ ದೇಶವೇ ಮೇಲು. ಆ ಕಾರಣದಿಂದ ಪ್ರಪಂಚದ ಅದ್ಭುತ ಎಂದು ತೀರ್ಮಾನಿಸಿರುವ ವಸ್ತುಗಳೂ ಕೂಡ ಇವರಿಗೆ ರುಚಿಸುವುದಿಲ್ಲ.

೩) ತಟಸ್ಥ ಧೋರಣೆಯನ್ನು ಹೊಂದಿದವರು: ಇವರು ತಮ್ಮ ದೇಶವನ್ನು ತೆಗಳುವುದೂ ಇಲ್ಲ, ಹೊಗಳುವುದೂ ಇಲ್ಲ. ಅಂತೆಯೇ ಬೇರೆ ದೇಶಗಳನ್ನು ಅತಿಯಾಗಿ ಹೊಗಳುವುದಾಗಲೀ, ತೆಗಳುವುದಾಗಲೀ ಮಾಡುವುದಿಲ್ಲ. ಇವರ ಬರಹ ಕೇವಲ ವರದಿ ರೂಪದಲ್ಲಿ ಇರುತ್ತದೆ.

೪) ಸಮತೂಕದ, ವಾಸ್ತವ ಪ್ರಜ್ಞೆಯುಳ್ಳವರು : ಈ ಬಗೆಯ ಲೇಖಕರು ಆಯಾ ದೇಶದ ಸಂಸ್ಕೃತಿಯನ್ನು, ಪರಿಸ್ಥಿತಿಯನ್ನು ಇರುವಂತೆಯೇ ಒಪ್ಪಿಕೊಂಡವರು. ಅದು ಅಲ್ಲಿಗೆ ಸರಿ, ಇದು ಇಲ್ಲಿಗೆ ಸರಿ ಎನ್ನುವ ಮನಸ್ಸಿನವರು. ತಪ್ಪಿದ್ದರೆ ಯಾವುದೇ ದೇಶವಾಗಿರಲಿ ನೇರವಾಗಿ ಖಂಡಿಸುವವರು.

೩.೨.೩ ಸಾಮಾಜಿಕ ಅಸಮಾನತೆ : ತೌಲನಿಕ ದೃಷ್ಟಿಕೋನ

'ಸಾಮಾಜಿಕ ಅಸಮಾನತೆ' ಎಂಬುದು ಮನುಷ್ಯರ ಒಳಗೆ ಜಾತಿ, ಧರ್ಮ, ವೃತ್ತಿ, ವರ್ಗ, ವರ್ಣ, ಪ್ರದೇಶ, ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ಸೂಚಿಸುತ್ತದೆ. ಇದರ ಅಧ್ಯಯನಕ್ಕಾಗಿ ಸಮಾಜಶಾಸ್ತ್ರಜ್ಞರು 'ಸಾಮಾಜಿಕ ಅಸಮಾನತೆ' ಎಂಬ ಪರಿಕಲ್ಪನೆಯನ್ನು ರಚಿಸಿದ್ದಾರೆ. ಯುರೋಪ್ ಖಂಡದ ದೇಶಗಳಲ್ಲಿ ಫ್ರಾನ್ಸ್, ಇಂಗ್ಲೆಂಡ್, ರಷ್ಯಾ, ಸ್ವಿಟ್ಜರ್‌ಲ್ಯಾಂಡ್‌ಗಳು ಮುಂದುವರೆದ ದೇಶಗಳ ಸಾಲಿಗೆ ಸೇರಿವೆ. ಮುಂದುವರೆದ ದೇಶಗಳಲ್ಲಿಯೂ ಈ ಬಗೆಯ ಅಸಮಾನತೆಗಳಿರುವುದನ್ನು

ಪ್ರವಾಸ ಕೃತಿಗಳಲ್ಲಿ ಗುರುತಿಸಲಾಗಿದೆ. ತೃತೀಯ ಜಗತ್ತಿನ ದೇಶಗಳು 'ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ 'ಸಾಮಾಜಿಕ ನ್ಯಾಯ'ದ ಮೂಲಕ ಆಡಳಿತ ನಡೆಸಲಾಗುತ್ತದೆ' ಎಂದು ಭಾವಿಸಿವೆ. ವಾಸ್ತವದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸುತ್ತಿರುತ್ತವೆ. ಕಟ್ಟುನಿಟ್ಟಾದ ಕಾನೂನುಗಳ ಮೂಲಕ ಜನರನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿರುತ್ತದೆ. ವೈಯಕ್ತಿಕ ಸ್ವಾತಂತ್ರ್ಯದ ಹರಣ ಕಾನೂನಿನ ಅಡಿಯಲ್ಲಿಯೇ ನಡೆಯುತ್ತದೆ. ರಷ್ಯಾದಂತಹ ಸಮಾಜವಾದಿ ರಾಷ್ಟ್ರಗಳಲ್ಲಿ ಪತ್ರಿಕಾ ಮಾಧ್ಯಮಗಳು ಸರಕಾರದ ನಿರ್ದೇಶನದಂತೆ ನಡೆಯುತ್ತವೆ. ಆ ದೇಶದ ಜನರಿಗೆ ವಿಶ್ವದ ಯಾವುದೇ ಮಾಹಿತಿ ತಿಳಿಯದಂತೆ ಮಾಡಲಾಗಿದೆ ಎಂದು ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಸಮಾಜವಾದಿ ರಾಷ್ಟ್ರಗಳು ಸಾಮಾಜಿಕ ನ್ಯಾಯ ಪಾಲನೆಯ ಉದ್ದೇಶವನ್ನು ಹೊಂದಿದ್ದರೂ ಅದರ ಆಳದಲ್ಲಿಯೇ ಬಂಡವಾಳಶಾಹಿ ಧೋರಣೆಗಳಿಗೆ ಇಂಬುಕೊಡುವ ಕಾನೂನುಗಳು ಇರುತ್ತವೆ. ಇದು ಸಾಮಾಜಿಕ ಅಸಮಾನತೆಯ ಪರಿಷ್ಕಾರ ರೂಪವಾಗಿದೆ.

ಹಾಗಾದರೆ ಸೋವಿಯತ್ ದೇಶದಲ್ಲಿ ಸಾಮಾಜಿಕ ಅಸಮಾನತೆ ಯಾವ ರೂಪದಲ್ಲಿ ಇದೆ ಎಂಬುದನ್ನು ಪ್ರಶ್ನಿಸಿಕೊಂಡಾಗ ಕೃತಿಗಳಲ್ಲಿ ಉಲ್ಲೇಖಿಸಲಾಗಿರುವ ಸಂಗತಿಗಳು ಇಂತಿವೆ. ೧೯೮೯ರಲ್ಲಿ ಪ್ರಕಟವಾದ 'ಸೋವಿಯತ್ ದೇಶ ಕಂಡೆ' ಕೃತಿಯಲ್ಲಿ ಕೃತಿಕಾರರು ಕಾರ್ ಓಡಿಸುತ್ತಿದ್ದ ಡ್ರೈವರ್‌ಗೆ ಪ್ರಶ್ನಿಸುತ್ತಾರೆ. ನಿಮ್ಮ ದೇಶದಲ್ಲಿ ದೇವರನ್ನು ಏಕೆ ನಂಬುವುದಿಲ್ಲ? ಅದಕ್ಕೆ ಆ ಡ್ರೈವರ್ "ದೇವರು ಇದ್ದಿದ್ದರೆ ಈ ಸುಲಿಗೆ ಶೋಷಣೆಗಳಿಗೆ ನಮ್ಮ ಜನರು ಏಕೆ ಒಳಗಾಗಬೇಕಿತ್ತು?"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ, ಪು-೮೨)ಎನ್ನುತ್ತಾನೆ. ಸೋವಿಯತ್ ದೇಶದಲ್ಲಿಯೂ ಉನ್ನತ ವರ್ಗದವರಿಂದ ಕೆಳವರ್ಗದವರು ಸುಲಿಗೆಗೆ, ಶೋಷಣೆಗೆ ಒಳಗಾಗುತ್ತಿದ್ದರೆ? ಒಬ್ಬ ವ್ಯಕ್ತಿಯ ಅಭಿಪ್ರಾಯವನ್ನು ಆಧರಿಸಿ ಇಡೀ ದೇಶದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಬರುವುದಿಲ್ಲ. ಆದರೆ ಸಾಮಾಜಿಕವಾಗಿ ಕೆಲವು ಜನರಲ್ಲಿಯಾದರೂ ಅಸಹನೆ ಇತ್ತು ಎಂಬುದು ವಿಧಿತವಾಗುತ್ತದೆ. ಈ ಅಭಿಪ್ರಾಯದಿಂದ ಇತರ ಕೃತಿಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ವಿಶ್ಲೇಷಿಸಲು ನೆರವಾಗುತ್ತದೆ. ಸೋವಿಯತ್ ದಿನಚರಿ ಕೃತಿಯಲ್ಲಿ 'ಮಾಸ್ಕೋದಲ್ಲಿ ನಾಲ್ಕಾರು ಬಡ ಹುಡುಗರನ್ನು ನೋಡಿದೆ' ಎಂದು ಉಲ್ಲೇಖಿಸಲಾಗಿದೆ. ಸಂಪತ್ತಿನ ಅಸಮಾನ ಹಂಚಿಕೆಯು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮತ್ತಷ್ಟು ಅಧಿಕವಾಗುತ್ತಿರುವುದನ್ನು ಸೂಚಿಸುತ್ತದೆ.

೧೯೯೯ರಲ್ಲಿ ಪ್ರಕಟವಾದ ಯುರೋ-ದರ್ಶನ ಕೃತಿಯಲ್ಲಿ 'ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವ ವರ್ಣಚಿತ್ರಗಳನ್ನು ಬಿಡಿಸಿದ್ದನ್ನು ಕಂಡು ಆರ್ಥಿಕ ಅಸಮಾನತೆಯ ಕುರುಹು' ಎಂದು ವಿಶ್ಲೇಷಿಸಲಾಗಿದೆ. ಪ್ರಾಚೀನ ರೋಮ್ ನಾಗರಿಕತೆ ಕಾಲದಿಂದಲೇ ಸಾಮಾಜಿಕ ಅಸಮಾನತೆ ಪ್ರಚಲಿತದಲ್ಲಿತ್ತು ಎಂಬ ಸಂಗತಿ ಈ ಉಲ್ಲೇಖದಿಂದ ತಿಳಿಯುತ್ತದೆ. ಇದೇ ಕೃತಿಯಲ್ಲಿ ರೋಮ್‌ನ ಕಲೋಸಿಯಂನ ಬಗ್ಗೆ 'ಕಲೋಸಿಯಂ ಆಟದ ಮೈದಾನ ಸುತ್ತಲೂ ಶ್ರೀಮಂತರು, ರಾಜರು, ವ್ಯಾಪಾರಿಗಳು ಕುಳಿತು ಗುಲಾಮರನ್ನು ಉಗ್ರಮೃಗಗಳೊಂದಿಗೆ ಸೆಣಸಾಡಲು ಬಿಡುತ್ತಿದ್ದರು' ಎಂದು ಉಲ್ಲೇಖಿಸಲಾಗಿದೆ. ಕಲೋಸಿಯಂ ಕೃತಿಕಾರರಿಗೆ ಸಮಾಜದಲ್ಲಿನ ಮೇಲು-ಕೀಳು ಎಂಬ ಅಸಮಾನತೆಯ ಸಮಾಜ ಇರುವುದನ್ನು ಬಿಂಬಿಸುವ ಸ್ಥಳವಾಗಿ ಕಾಣುತ್ತದೆ. ಈ ಅಭಿಪ್ರಾಯಗಳನ್ನು ಆಧರಿಸಿ ಯುರೋಪಿನ ಸಮಾಜವನ್ನು ವಿಶ್ಲೇಷಿಸಿದಾಗ ಇಟಲಿ ದೇಶದಲ್ಲಿಯೂ ಸಾಮಾಜಿಕ ಅಸಮಾನತೆಗಳು ಇದ್ದವು ಎಂಬುದು ತಿಳಿಯುತ್ತದೆ. ಸಮಾಜದಲ್ಲಿ ಕೆಳವರ್ಗದ ಜನರಿದ್ದು, ಮೇಲ್ವರ್ಗದವರು ಕೆಳವರ್ಗದ ಜನರನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದ ಬಗ್ಗೆ ತಿಳಿಯಲಾಗಿದೆ. ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಮೇಲ್ವರ್ಗ-ಕೆಳವರ್ಗ ಎಂಬ ಶೋಷಕರ ಮತ್ತು

ಶೋಷಿತರ ಎರಡು ಪಂಗಡಗಳು ಎಲ್ಲಾ ಕಾಲದಲ್ಲಿಯೂ ಇದ್ದಿತು. ಕಾಲ ಬದಲಾದ ಹಾಗೆ ಶೋಷಣೆಯ ಸ್ವರೂಪಗಳು ಬದಲಾಗುತ್ತಿರುವುದನ್ನು ಪ್ರವಾಸ ಕೃತಿಗಳಲ್ಲಿ ಕಾಣಲಾಗಿದೆ.

ಜರ್ಮನಿಯಲ್ಲಿ ಹಿಟ್ಲರ್ ಸರ್ವಾಧಿಕಾರಿಯಾಗಿ ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಜನಾಂಗೀಯ ದ್ವೇಷದ ಕಾರಣದಿಂದ ಯಹೂದ್ಯರನ್ನು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದ ವಿಚಾರದ ಬಗ್ಗೆ ಹಾಲೆಂಡ್‌ನಿಂದ ಲಂಡನ್‌ವರಗೆ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಕೃತಿಯು ಉಲ್ಲೇಖಿಸಿರುವ ಅಸಮಾನತೆಯ ಸ್ವರೂಪವು ಇಂತಿದೆ. 'ಯಹೂದಿಗಳಿಗೆ ಸರಕಾರದ ನೌಕರಿ ಮಾಡುವಂತಿಲ್ಲ. ಯಹೂದಿಗಳು ಓಡಾಡಬೇಕಾದರೆ ಹಳದಿ ನಕ್ಷತ್ರ ಧರಿಸಿಯೇ ಓಡಾಡಬೇಕು. ಸಾರ್ವಜನಿಕ ವಾಹನಗಳಲ್ಲಿ ಜರ್ಮನರೊಂದಿಗೆ ಓಡಾಡುವಂತಿಲ್ಲ' ಹೀಗೆ ಅನೇಕ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಈ ನಿರ್ಬಂಧಗಳಿಗೂ ಭಾರತದಲ್ಲಿ ದಲಿತರನ್ನು ನಡೆಸಿಕೊಳ್ಳುತ್ತಿದ್ದ ಬಗೆಗೂ ಸಾಮ್ಯತೆಗಳಿರುವುದನ್ನು ಗುರುತಿಸಬಹುದಾಗಿದೆ. ಸಮಾಜದಲ್ಲಿನ ಅಸಮಾನತೆ ಎಂಬುದು ಸಾರ್ವಕಾಲಿಕವಾದುದು ಮತ್ತು ಸಾರ್ವತ್ರಿಕವಾದುದು ಎಂಬುದು ಈ ಮೇಲಿನ ಉಲ್ಲೇಖಗಳಿಂದ ತಿಳಿದುಬರುತ್ತದೆ. ಆದರೆ ಅದು ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಜೀವಂತವಿರುತ್ತದೆ. ಇಂದಿಗೂ ಅಸಮಾನತೆಯ ಅಂಶಗಳು ಪ್ರಪಂಚದ ಎಲ್ಲಾ ಸಮಾಜಗಳಲ್ಲೂ ವಿವಿಧ ರೂಪಗಳಲ್ಲಿ ಅಸ್ತಿತ್ವದಲ್ಲಿದೆ.

ವರ್ಗಸಂಘರ್ಷ : ಜರ್ಮನಿಯಲ್ಲಿ ಕ್ರೈಸ್ತರಿಗೂ ಯಹೂದಿಗಳಿಗೂ ಸಂಘರ್ಷ ನಡೆಯುತ್ತಿತ್ತು. ಹಿಟ್ಲರ್ ಸರ್ವಾಧಿಕಾರಿಯಾದ ಬಳಿಕ ಜನಾಂಗೀಯ ದ್ವೇಷದ ಕಾರಣದಿಂದ ಯಹೂದಿಗಳನ್ನು ಕೊಲ್ಲಿಸಿದ. ಈತ ತಾನು ಆಳ್ವಿಕೆ ಮಾಡುತ್ತಿದ್ದ ಜರ್ಮನಿಯಲ್ಲಿ ಮಾತ್ರವಲ್ಲದೆ ಬೇರೆ ದೇಶಗಳ ಮೇಲೆ ದಾಳಿ ಮಾಡಿ ಆ ದೇಶಗಳಲ್ಲಿದ್ದ ಯಹೂದಿಗಳನ್ನು ಹುಡುಕಿಸಿ ಕೊಲ್ಲಿಸುತ್ತಿದ್ದನೆಂಬುದರ ಬಗ್ಗೆ ವಿವಿಧ ಪ್ರವಾಸ ಕೃತಿಗಳು ಉಲ್ಲೇಖಿಸಿವೆ. ಜನಾಂಗೀಯ ಸಂಘರ್ಷಗಳು ಹೊಸ ಮತಗಳ ಉದಯಕ್ಕೆ ಕಾರಣವಾಗಿದೆ. ಹೊಸ ಮತಗಳ ಉದಯವು ವರ್ಗಸಂಘರ್ಷಗಳು ಮುಂದುವರೆಯುವಂತೆ ಮಾಡಿದೆ.

ಫ್ರಾನ್ಸ್ ದೇಶದಲ್ಲಿ ವರ್ಗ ಸಂಘರ್ಷಕ್ಕೆ ತುತ್ತಾದ ಇಪ್ಪತ್ತು ಸಾವಿರ ಕಥಾರರ ನರಮೇಧದ ಬಗ್ಗೆ 'ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಸಂಘರ್ಷಗಳು ಒಂದು ಕಾಲಕ್ಕೆ ನಡೆದು ಅಲ್ಲಿಗೆ ಮುಗಿದು ಹೋಗುವುದಿಲ್ಲ. ಮತಭೇದ ಭಾವನೆಗಳು ಎಲ್ಲಿಯವರೆಗೆ ಮನುಷ್ಯನೊಳಗೆ ಮನೆಕೊಂಡಿರುತ್ತದೆಯೋ ಅಲ್ಲಿಯವರೆಗೆ ಅದು ಜೀವಂತಿಕೆಯಾಗಿರುತ್ತದೆ. ಅವಕಾಶ ಸಿಕ್ಕ ಕೂಡಲೇ ಪರಿಸ್ಥಿತಿ ಸನ್ನಿವೇಶಗಳಿಗೆ ಅನುಗುಣವಾಗಿ ಅದು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿರುತ್ತದೆ.

ವರ್ಣಭೇದ : ಅನುಭವಗಳಲ್ಲಿ ಆಗುವ ವ್ಯತ್ಯಾಸಗಳು ಅಭಿಪ್ರಾಯಗಳಲ್ಲಿನ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಯುರೋಪಿನ ಎಲ್ಲಾ ರಾಷ್ಟ್ರಗಳಲ್ಲೂ ವರ್ಣಭೇದ, ಜನಾಂಗೀಯ ಭೇದಗಳಿರುವುದನ್ನು ಕೃತಿಗಳು ಉಲ್ಲೇಖಿಸಿವೆ. 'ವೈದ್ಯನ ವಿದೇಶ ಪ್ರವಾಸ' ಕೃತಿಯಲ್ಲಿ ಕೃತಿಕಾರರು ಲಂಡನ್ ನಗರದಲ್ಲಿ ವರ್ಣಭೇದಕ್ಕೆ ಒಳಗಾದ ಒಂದು ಘಟನೆಯನ್ನು ನೆನಪಿಸಿಕೊಂಡಿದ್ದಾರೆ. ೧೯೬೯ರಲ್ಲಿ ಲಂಡನ್‌ನಲ್ಲಿ ಇದ್ದಾಗ ನಾಲ್ಕಾರು ಗೆಳೆಯರೊಂದಿಗೆ ಐದು ನಕ್ಷತ್ರಗಳ 'ಪ್ರೆಸಿಡೆಂಟ್ ಹೋಟೆಲ್'ಗೆ ಉಪಹಾರಕ್ಕಾಗಿ ಹೋಗುತ್ತಾರೆ. ಅಲ್ಲಿದ್ದ ದ್ವಾರಪಾಲಕ ಸ್ಥಳವಿಲ್ಲವೆಂದು ಸಬೂಬು ಹೇಳಿ ಅವರನ್ನು ಸಾಗಹಾಕುತ್ತಾನೆ. ಬೇರೆ ಸ್ನೇಹಿತರು

ತಮಗೂ ಇದೇ ರೀತಿಯ ಅನುಭವಗಳು ಆಗಿರುವುದನ್ನು ಮತ್ತು ಅವರು ಕಪ್ಪು ಜನಾಂಗದವರನ್ನು ಈ ರೀತಿಯಾಗಿ ವಿನಯದಿಂದಲೇ ಸಾಗಹಾಕುವುದನ್ನು ಹೇಳಿಕೊಳ್ಳುತ್ತಾರೆ. ಅಲಿಖಿತ ಸಂವಿಧಾನ ಹೊಂದಿರುವ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿಯೇ ಈ ರೀತಿ ವರ್ಣಭೇದ ಮಾಡುತ್ತಿರುವ ಕುರಿತು ಕೃತಿಯಲ್ಲಿ ಅಸಹನೆ ವ್ಯಕ್ತವಾಗಿದೆ.

'ಅಂಗೈಯಲ್ಲಿ ಯೂರೊ ಅಮೆರಿಕ' ಕೃತಿಯಲ್ಲಿ ಫ್ರಾನ್ಸ್ ದೇಶದಲ್ಲಿ ವರ್ಣಭೇದ ಇರುವುದನ್ನು ಉಲ್ಲೇಖಿಸಲಾಗಿದೆ. ಕೃತಿಕಾರರು ಪ್ಯಾರಿಸ್ ನಗರವನ್ನು ಸುತ್ತಾಡಲು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವರು ಇದ್ದ ಭೋಗಿಯಲ್ಲಿ ದಕ್ಷಿಣ ಆಫ್ರಿಕದಿಂದ ಓದುವ ಉದ್ದೇಶದಿಂದ ಬಂದಿದ್ದ ಇಬ್ಬರು ನೀಗ್ರೋ ಯುವಕರ ಭೇಟಿಯಾಗುತ್ತದೆ. ಅವರ ಬಳಿ 'ಇಲ್ಲಿನ ಜನ ನಿಮ್ಮನ್ನು ಹೇಗೆ ನೋಡಿಕೊಳ್ಳುತ್ತಾರೆ?' ಎಂದು ಪ್ರಶ್ನಿಸಿದಾಗ ಆ ನೀಗ್ರೋ ಯುವಕರು "ಎಲ್ಲಾ ಕಡೆಯೂ ಒಂದೇ ರೀತಿ! ಕರಿಯರನ್ನು ಕಂಡ್ರೆ ಬಿಳಿಯವರಿಗೆ ಯಾವಾಗ್ಲೂ ಅಷ್ಟಕ್ಕಷ್ಟೆ. ಆದ್ರೆ ನಾವೀಗ ಹೋರಾಡುವುದನ್ನು ಕಲಿತಾ ಇದೀವಿ. ಎಲ್ಲ ಮನುಷ್ಯರಿಗಿರೋ ಹಕ್ಕುಗಳು, ಸವಲತ್ತುಗಳು ನಮಗೂ ಬೇಕು ಅಂತ ಕೇಳ್ತಾ ಇದೀವಿ"(ಅನುಪಮಾ ನಿರಂಜನ., ಅಂಗೈಯಲ್ಲಿ ಯೂರೊ ಅಮೆರಿಕ., ಪು-೬೦)ಎನ್ನುತ್ತಾರೆ. ಲೇಖಕಿಯು ವರ್ಣಭೇದದ ಶೋಷಣೆಯು ಬಹಳ ಆಳವಾಗಿ ಬೇರೂರಿರುವುದನ್ನು ಕಂಡು ಮರುಗಿದ್ದಾರೆ. ಜಾತಿ, ಬಣ್ಣ, ಲಿಂಗಗಳ ಆಧಾರದ ಮೇಲೆ ಈ ಬಗೆಯ ತಾರತಮ್ಯ ನಡೆಯುವುದನ್ನು ಖಂಡಿಸಿದ್ದಾರೆ. ನೀಗ್ರೋ ಯುವಕರ ಅಭಿಪ್ರಾಯಗಳಲ್ಲಿಯೇ ತಾರತಮ್ಯ ಆಚರಣೆಯಲ್ಲಿರುವುದನ್ನು ಗುರುತಿಸಬಹುದು. ಬಿಳಿಯರಿಗೆ ಸಿಗುವ ಸವಲತ್ತುಗಳು ಕರಿಯರಿಗೆ ಸಿಗುತ್ತಿಲ್ಲವೇ? ಫ್ರಾನ್ಸ್ ದೇಶದಲ್ಲಿಯೂ ತಾರತಮ್ಯವಿರುವುದಕ್ಕೆ ಈ ಘಟನೆಯು ಸಾಕ್ಷಿಯಾಗಿದೆ.

ಸಮಾಜವು ಕಾಲಧರ್ಮಕ್ಕನುಗುಣವಾಗಿ ಬದಲಾವಣೆ ಆಗುತ್ತದೆ. ಮತ್ತು ಈ ಬದಲಾವಣೆ ನಿರಂತರವಾದುದು. ಸಾಮಾಜಿಕ ಅಸಮಾನತೆಯು ಸಮಾಜದ ಒಂದು ಭಾಗವಾಗಿ ಬದಲಾವಣೆಗೆ ಒಳಗಾಗುತ್ತದೆ. ಅದು ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ ಭಿನ್ನವಾಗಿರುತ್ತದೆ.

ಈ ಮೂರನೇ ಅಧ್ಯಾಯದಲ್ಲಿ ಯುರೋಪ್ ಪ್ರವಾಸ ಕೃತಿಗಳನ್ನು ದಶಕಗಳ ನೆಲೆಯಲ್ಲಿ ವಿಭಾಗಿಸಿಕೊಂಡು ತೌಲನಿಕ ದೃಷ್ಟಿಯ ಮೂಲಕ ದಶಕಗಳ ನಡುವಿನ ವ್ಯತ್ಯಾಸಗಳನ್ನು ವಿಶ್ಲೇಷಿಸಲಾಗಿದೆ. ಕೃತಿಗಳಲ್ಲಿ ಲೇಖಕರು ವ್ಯಕ್ತಪಡಿಸಿರುವ ಸಾಂಸ್ಕೃತಿಕ ಸಂವೇದನೆಗಳನ್ನು ದೃಶ್ಯ ಮತ್ತು ದೃಷ್ಟಿಕೋನಗಳ ಮೂಲಕ ಅಧ್ಯಯನ ಮಾಡಲಾಗಿದೆ. ಆಚರಣೆ, ನಂಬಿಕೆಗಳಲ್ಲಿ ಯುರೋಪಿನ ದೇಶಗಳೊಂದಿಗೆ, ಭಾರತದಲ್ಲಿ ಆಚರಿಸಲಾಗುವ ಆಚರಣೆಗಳನ್ನು ಮತ್ತು ನಂಬಿಕೆಗಳನ್ನು ತೌಲನಿಕ ವಿಶ್ಲೇಷಣೆ ಮಾಡಲಾಗಿದೆ. 'ಕೇಂದ್ರದಿಂದ ಪರಿಧಿಯೆಡಗೆ' ತತ್ವದ ಅನ್ವಯ ಸಾಂಸ್ಕೃತಿಕ ಅಂಶಗಳನ್ನು ಮೊದಲು ಚರ್ಚೆ ಮಾಡಿ ತದನಂತರ ಸಾಮಾಜಿಕ ಸಂಗತಿಗಳನ್ನು ಸಂಸ್ಕೃತಿಯ ಪರಿಧಿಯ ಅಡಿಯಲ್ಲಿ ಪರಿಕಲ್ಪನಾತ್ಮಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಕೊನೆ ಟಿಪ್ಪಣಿ

೧. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ)., ೨೦೦೧., ಕನ್ನಡ ಸಾಹಿತ್ಯ ಪರಿಷತ್ತು., ಪು-೧೨೩೮.

೨. ಈ ಕೃತಿಯ ಪ್ರತಿ ದೊರಕಿರುವುದಿಲ್ಲ, ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಶೋಧನಾ ಪ್ರಬಂಧ ಮಂಡಿಸಿದ ಶೇಖರ ಸಿ. ಕೆ. ಇವರ ಸಂಶೋಧನಾ ಪ್ರಬಂಧದಿಂದ ಈ ಮೇಲಿನ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

೩. ಕನ್ನಡ ಸಾಹಿತ್ಯ ಚರಿತ್ರೆ., ರಂ.ಶ್ರೀ. ಮುಗುಳಿ., ಪು-೨

೪. ದ ಗೋಲ್ಡನ್ ಬೌ., ಎ ಸ್ಟಡಿ ಇನ್ ಮ್ಯಾಜಿಕ್ ಅಂಡ್ ರಿಜಿಯನ್., ಮ್ಯಾಕ್‌ಮಿಲನ್ ಅಂಡ್ ಕಂಪನಿ., 1890

೫. ಇಂಗ್ಲೆಂಡಿನ ಸಾಹಿತಿಯಾದ 'ವಿಲಿಯಂ ಗೋಲ್ಡಿಂಗ್' ಅವರಿಗೆ ನೋಬೆಲ್ ಪ್ರಶಸ್ತಿ ಸಿಕ್ಕಿದೆ.

೬. "ಗೋವನ್ನು ಮಾತೆಯೆಂದು ಪೂಜಿಸುತ್ತೇವೆ. ನೂರಾರು ಮಂದಿ ಬಡವರು ಆಹಾರವಿಲ್ಲದೆ ಸತ್ತರೂ ಗೋಮಾಂಸವನ್ನು ತಿನ್ನುವಂತಿಲ್ಲ. ಆದರೆ ಅವುಗಳಿಗೆ ಒಳ್ಳೆಯ ಆಹಾರ ಕೊಟ್ಟು ಸಾಕುವಂತಿಲ್ಲ. ನಾವು ನಂಬಿರುವ ತತ್ವದಲ್ಲಿ ಕಂಡುಬರುವ ವಿರೋಧಾಭಾಸವೇ ಇದು."(ದೇ. ಜವರೇಗೌಡ., ಪ್ರವಾಸಿಯ ದಿನಚರಿ., ಪು-೫೯)

೭. ರಹಮತ್ ತರಿಕೆರೆಯವರ 'ಮರದೊಳಗಣ ಕಿಚ್ಚು' ಕೃತಿಯಲ್ಲಿ ಆಹಾರ ಪ್ರಮಾಣ ಎಂಬ ಭಾಗದಿಂದ ಈ ವಿಷಯವನ್ನು ಉದಾಹರಣೆಗಾಗಿ ಬಳಸಿಕೊಳ್ಳಲಾಗಿದೆ.(ಪು-4)

೮. ಪಾಟೀಲ ಪುಟ್ಟಪ್ಪ ಅವರು "ಸೋವಿಯೆತ್ ದೇಶವನ್ನು ದೇವರಿಲ್ಲದ ಗುಡಿ ಎಂದು ಹೇಳುವುದು ಸಂಪೂರ್ಣ ಸತ್ಯವಲ್ಲ"(ಪಾಟೀಲ ಪುಟ್ಟಪ್ಪ, ಸೋವಿಯತ್ ದೇಶ ಕಂಡೆ, ಪು-೮೮) 'ಇಲ್ಲೂ ಚರ್ಚುಗಳಿವೆ ಅನೇಕ ಜನರು ಚರ್ಚಿಗೆ ಹೋಗುತ್ತಾರೆ. ಶೇಕಡ ಎಂಭತ್ತರಷ್ಟು ಜನ ದೇವರನ್ನು ನಂಬುವುದಿಲ್ಲ ಆದರೆ ಕನಿಷ್ಟ ಶೇಕಡಾ ಇಪ್ಪತ್ತರಷ್ಟು ಜನರಾದರು ದೇವರನ್ನು ನಂಬುವವರು ಇದ್ದಾರೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೯. "ಜರ್ಮನಿಯ ಎಲ್ಲಾ ಸಮಸ್ಯೆಗಳಿಗೂ ಅಲ್ಲಿರುವ ಯಹೂದಿಗಳೇ ಕಾರಣವೆಂದು ನೆಪಮಾಡಿ ಅವರ ವಿರುದ್ಧ ದೇಶದ ಪ್ರಜೆಗಳಲ್ಲಿ ದ್ವೇಷ ಭಾವನೆಯನ್ನು ಭುಗಿಲೆಬ್ಬಿಸಿದ್ಧ ಯಹೂದಿಗಳ ವಿರುದ್ಧ ಶಾಸನಗಳನ್ನು ಮಾಡಿ ಅವರ ಎಲ್ಲಾ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿತ್ತು. ಅವರನ್ನು ಸರ್ಕಾರಿ ಹುದ್ದೆಗಳಿಂದ ಪದಚ್ಯುತಗೊಳಿಸಲಾಗಿತ್ತು. ಯಹೂದಿಗಳು ಹಳದಿ ನಕ್ಷತ್ರಗಳನ್ನು ಹಾಕಿಕೊಂಡು ಓಡಾಡಬೇಕಿತ್ತು. ಅವರಿಗೆ ಇತರ ಜರ್ಮನ್ನರೊಟ್ಟಿಗೆ ವಾಹನಗಳಲ್ಲಿ ಸಂಚಾರ ಮಾಡುವ ಸೌಲಭ್ಯವೂ ಇರಲಿಲ್ಲ. ರಾತ್ರಿ ಎಂಟು ಗಂಟೆಯ ನಂತರ ರಸ್ತೆಗಳಲ್ಲಿ ಸಂಚಾರ ಮಾಡುವಂತಿರಲಿಲ್ಲ".(ಇಂದಿರಾ ಶಿವಣ್ಣ, ಹಾಲೆಂಡ್‌ನಿಂದ ಲಂಡನ್‌ವರೆಗೆ, ಪು-೬೭)

ಅಧ್ಯಾಯ: ೪

ಚಾರಿತ್ರಿಕ ಸಂವೇದನೆಗಳು

೪. ೧ ಪ್ರವಾಸ ಕೃತಿಗಳಲ್ಲಿ ಲೇಖಕರ ಚಾರಿತ್ರಿಕ ದೃಷ್ಟಿಕೋನಗಳು

೪. ೨ ಸ್ಥಳ ಚರಿತ್ರೆಯ ವಿವಿಧ ಆಯಾಮಗಳು

೪. ೩ ವ್ಯಕ್ತಿಗತ ಚರಿತ್ರೆಯ ವಿವಿಧ ಆಯಾಮಗಳು

೪. ೪ ಹೋರಾಟ-ಸಂಘರ್ಷ : ಲೇಖಕರ ಚಾರಿತ್ರಿಕ ನೋಟಗಳು

ಅಧ್ಯಾಯ : ೪
ಚಾರಿತ್ರಿಕ ಸಂವೇದನೆಗಳು

'ಚಾರಿತ್ರಿಕ' ಎಂಬ ಪರಿಕಲ್ಪನೆಯು ಐತಿಹಾಸಿಕ ವಸ್ತು ವಿಚಾರಗಳಿಗೆ ಸಂಬಂಧಿಸಿದುದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ 'ಚರಿತ್ರೆಗೆ ಸಂಬಂಧಿಸಿದ' 'ಐತಿಹಾಸಿಕವಾದ' ಎಂಬ ಅರ್ಥಗಳಿವೆ. ಪ್ರವಾಸಿ ಲೇಖಕರು ತಮ್ಮ ಪ್ರವಾಸದ ಅನುಭವಗಳನ್ನು ಬರೆಯುವಾಗ ಸ್ಥಳದ/ವ್ಯಕ್ತಿಯ ಚಾರಿತ್ರಿಕ ಹಿನ್ನೆಲೆಯನ್ನು ಕೂಡ ವಿವರಿಸಿದ್ದಾರೆ. ಚಾರಿತ್ರಿಕ ಅಂಶಗಳನ್ನು ಸೇರಿಸಲು ಲೇಖಕರಿಗೆ ಪ್ರೇರಣೆ ನೀಡಿದ ಕ್ರಿಯೆಗೆ ನಿಮಿತ್ತವಾದ ಸಂಗತಿಗಳು ಯಾವುವು? ಲೇಖಕರ ಮನಸ್ಸಿನ ಮೇಲೆ ಐತಿಹಾಸಿಕ ಸ್ಥಳಗಳು ಬೀರಿದ ಪ್ರಭಾವಗಳೇನು? ಏಕೆ ಐತಿಹಾಸಿಕ ವಸ್ತು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ?. ಲೇಖಕರು ಚಾರಿತ್ರಿಕ ವಸ್ತು ವಿಷಯಗಳೊಡನೆ ಸಾಮರಸ್ಯದಿಂದ ವರ್ತಿಸುತ್ತಾರೋ? ಅಥವಾ ಸಂಘರ್ಷಕ್ಕಿಳಿಯುತ್ತಾರೋ? ಅಥವಾ ತಟಸ್ಥಭಾವವನ್ನು ತಾಳುತ್ತಾರೋ? ಯುರೋಪಿನ ಭೌಗೋಳಿಕ ರಚನೆಯು ಯುರೋಪಿನ ಚರಿತ್ರೆಯನ್ನು ರೂಪಿಸುವಲ್ಲಿ ವಹಿಸಿದ ಪಾತ್ರವೇನು? ಎಂಬ ಅಂಶಗಳನ್ನು ಚರ್ಚಿಸಲಾಗಿದೆ. ಲೇಖಕರ ಪ್ರತಿಕ್ರಿಯೆಗಳ ಆಧಾರದ ಮೇಲೆ ಚಾರಿತ್ರಿಕ ದೃಷ್ಟಿಕೋನಗಳನ್ನು ಅಧ್ಯಯನ ಮಾಡಲಾಗಿದೆ.

ಪ್ರವಾಸಿಗ ತಾನು ಭೇಟಿ ನೀಡುವ ಸ್ಥಳಗಳ ಚರಿತ್ರೆಯನ್ನು ತಿಳಿದುಕೊಳ್ಳದೆ ಭೇಟಿ ಮಾಡಿದರೆ ಆ ಪ್ರವಾಸವು ಅಪೂರ್ಣವಾಗುತ್ತದೆ ಎಂಬುದು ಸಾಮಾನ್ಯ ಸಂಗತಿಯಾಗಿದೆ. ಸ್ಥಳ ಚರಿತ್ರೆ ತಿಳಿದುಕೊಂಡಿದ್ದರೆ ಲೇಖಕ ತನ್ನೊಳಗಿನ ಚರಿತ್ರೆಯ ಜೊತೆಗೆ ಮುಖಾಮುಖಿಯಾಗುತ್ತಾನೆ. ತೌಲನಿಕ ದೃಷ್ಟಿಕೋನವು ಜಾಗೃತವಾಗುತ್ತದೆ. ಲೇಖಕರು ತಾವು ನೋಡಿದ ಚರಿತ್ರೆಯೊಂದಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಎಂಬುದು ಬರೆವಣಿಗೆಯಲ್ಲಿ ವ್ಯಕ್ತವಾಗುತ್ತದೆ. ಅವುಗಳನ್ನು ಸ್ಥೂಲವಾಗಿ ಚಾರಿತ್ರಿಕ ಸಂವೇದನೆಗಳು ಎಂದು ಪರಿಭಾಷಿಸಲಾಗಿದೆ. ಲೇಖಕರು ವ್ಯಕ್ತಪಡಿಸಿದ ಚಾರಿತ್ರಿಕ ಸಂವೇದನೆಗಳನ್ನು ಅಧ್ಯಯನ ಮಾಡಲಾಗುತ್ತದೆ. ಪ್ರವಾಸ ಕೃತಿಯೊಳಗಿನ ಚರಿತ್ರೆಗೆ ಭಿನ್ನವಾದ ಆಯಾಮವಿದೆ.

ಪ್ರವಾಸ ಕೃತಿಗಳಲ್ಲಿ ಪ್ರವಾಸಾನುಭವಗಳ ಜೊತೆ ಜೊತೆಗೆ ಲೇಖಕರ ವೈಯಕ್ತಿಕ ಸಂವೇದನೆಗಳು ಕೂಡಿಕೊಂಡಿರುತ್ತವೆ. ವೈಯಕ್ತಿಕ ಸಂವೇದನೆಗಳು ಕೆಲವೊಮ್ಮೆ ಆತ್ಮಾವಲೋಕನದ ರೂಪದಲ್ಲಿ ಪ್ರಕಟಗೊಂಡರೆ, ಮತ್ತೆ ಕೆಲವೊಮ್ಮೆ ಆಂತರಿಕ ಒಳನೋಟಗಳ ಮೂಲಕ ಪ್ರಕಟಗೊಳ್ಳುತ್ತವೆ. ಈ ಆಂತರಿಕ ಒಳನೋಟಗಳು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುತ್ತವೆ. ಆದ್ದರಿಂದ ಪ್ರವಾಸ ಕೃತಿಗಳು ಚಾರಿತ್ರಿಕ ನೋಟವುಳ್ಳ ಪಠ್ಯವಾಗಿ ಗೋಚರಿಸುತ್ತವೆ. ಲೇಖಕ ಇಲ್ಲಿ ಚರಿತ್ರೆಯನ್ನು ಸಾಂಪ್ರದಾಯಿಕ ನೋಟದಿಂದ ಕಾಣದೆ ಸಾಮಾನ್ಯ ಗ್ರಹಿಕೆಯ ಆಚೆ ನಿಂತು ವಿಶ್ಲೇಷಿಸುತ್ತಾನೆ. ಈ ಅಧ್ಯಾಯದಲ್ಲಿ ಲೇಖಕನ ಈ ಬಗೆಯ ವಿಶ್ಲೇಷಣೆಯನ್ನು ಒಳಗೊಂಡ, ಚಾರಿತ್ರಿಕ ಸಂವೇದನೆವುಳ್ಳ ಕೃತಿಗಳನ್ನು ಅಧ್ಯಯನ ಮಾಡಲಾಗುತ್ತದೆ.

ಚರಿತ್ರೆ ಅಥವಾ ಇತಿಹಾಸ ಎಂದರೆ 'ಭೂತ ಕಾಲದಲ್ಲಿ ಘಟಿಸಿದ ಘಟನಾವಳಿಗಳ ಕ್ರಮಬದ್ಧ ಅಧ್ಯಯನ.' ಯಾವುದೇ ದೇಶವನ್ನು ಕಟ್ಟುವಲ್ಲಿ ಇತಿಹಾಸದ ಜ್ಞಾನ ಮಹತ್ತರವಾದುದು. ಇತಿಹಾಸವಿಲ್ಲದೆ ಮಾನವನಿಗೆ ಅಸ್ತಿತ್ವವಿಲ್ಲ. ಭೂತಕಾಲವನ್ನು ತಿಳಿಯದೆ ವರ್ತಮಾನವನ್ನು ಅರಿಯಲಾರೆವು. ವರ್ತಮಾನವನ್ನು ಅರಿಯದೆ ಭವಿಷ್ಯವನ್ನು ನಿರ್ಮಿಸಿಕೊಳ್ಳಲಾರೆವು. ಪ್ರತಿಯೊಂದು ಜ್ಞಾನಶಾಖೆಗೂ ಅದರದ್ದೇ ಆದ ಇತಿಹಾಸ ಇರುತ್ತದೆ. ಅದರ ಆಧಾರದ ಮೇಲೆ ಜ್ಞಾನ ಶಾಖೆಗಳು ವಿಸ್ತಾರವನ್ನು

ಪಡೆಯುತ್ತಾ ಸಾಗುತ್ತದೆ. ಕೀರ್ತಿನಾಥ ಕುರ್ತುಕೋಟಿ ಅವರು "ಇತಿಹಾಸ ಗತಕಾಲಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಪ್ರತಿ ಕ್ಷಣಕ್ಕೂ ನಾವು ಇತಿಹಾಸವನ್ನು ಸೃಷ್ಟಿಸುತ್ತೇವೆ"(ಕೀರ್ತಿನಾಥ ಕುರ್ತಕೋಟಿ., ನೂರು ಮರ ನೂರು ಸ್ವರ., ಇತಿಹಾಸ ಪ್ರಜ್ಞೆ., ಪು-೭೨) ಎಂದಿದ್ದಾರೆ. ಪ್ರವಾಸ ಸಾಹಿತ್ಯವು ಪ್ರವಾಸದ ಸಂದರ್ಭದಲ್ಲಿ ಘಟಿಸಿದ ಕ್ಷಣ ಕ್ಷಣದ ಘಟನಾವಳಿಗಳಲ್ಲಿ ಆಯ್ದ ಘಟನೆಗಳನ್ನು ನಿರೂಪಿಸುವುದರಿಂದ ಪ್ರವಾಸ ಕೃತಿಗಳು ಕೂಡ ಚಾರಿತ್ರಿಕ ಮಹತ್ವವನ್ನು ಪಡೆದುಕೊಳ್ಳುತ್ತವೆ. ಪ್ರವಾಸ ಸಾಹಿತ್ಯವೂ ಕೂಡ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಇತಿಹಾಸವನ್ನು ಪ್ರಮಾಣಗಳ ಆಧಾರದ ಮೇಲೆ ರಚಿಸಲಾಗುತ್ತದೆ. ಆಧಾರಗಳಿಲ್ಲದ ಇತಿಹಾಸವು ಐತಿಹ್ಯವಾಗಿ ಬಿಡುತ್ತದೆ. ಇತಿಹಾಸವನ್ನು ನಿರ್ವಚಿಸಲು ಬಳಸುವ ಭೌತಿಕ ಮತ್ತು ಅಭೌತಿಕ ಆಧಾರ ಪ್ರಮಾಣಗಳು ನಂಬಿಕೆಗೆ ಅರ್ಹವಾಗಿರಬೇಕು. ಬಿ.ಎ. ವಿವೇಕ ರೈ ಅವರು "ಪ್ರವಾಸ ಕಥನಗಳು ಇತಿಹಾಸದ ದಾಖಲೆಗಳಾಗಿ ಮಾತ್ರ ಉಳಿದುಕೊಳ್ಳದೆ; ಸಾಂಸ್ಕೃತಿಕ ದಾಖಲೆಗಳಾಗಿಯೂ, ಮನುಷ್ಯ ಸ್ವಭಾವದ ರೂಪಣಗಳಾಗಿಯೂ ಉಳಿಯುತ್ತವೆ"(ಬಿ.ಎ. ವಿವೇಕ ರೈ., ಪ್ರವಾಸಿ ಕಂಡ ವಿಜಯನಗರ., ಕನ್ನಡ ವಿಶ್ವವಿದ್ಯಾಲಯ., ಹಂಪಿ., ಪು-೧೨)ಎಂದಿದ್ದಾರೆ. ಈ ಅಧ್ಯಾಯದಲ್ಲಿ ಯುರೋಪ್ ಪ್ರವಾಸ ಕೃತಿಗಳನ್ನು ಐತಿಹಾಸಿಕ ದಾಖಲೆಯಾಗಿಯೂ, ಸಾಂಸ್ಕೃತಿಕ ದಾಖಲೆಯಾಗಿಯೂ ಹಾಗೂ ಮನುಷ್ಯನ ಸ್ವಭಾವದ ರೂಪಣವಾಗಿ ವ್ಯಕ್ತವಾಗಿರುವ ಅಂಶಗಳನ್ನು ಪರಿಗಣಿಸಿ ಆ ಮೂಲಕ ಪ್ರವಾಸ ಸಾಹಿತ್ಯವು ಚರಿತ್ರೆಯೊಂದಿಗೆ ಹೊಂದಿರುವ ಸಂಬಂಧವನ್ನು ಕುರಿತು ವಿಶ್ಲೇಷಿಸಲಾಗಿದೆ.

೪. ೧ ಪ್ರವಾಸ ಕೃತಿಗಳಲ್ಲಿ ಲೇಖಕರ ಚಾರಿತ್ರಿಕ ದೃಷ್ಟಿಕೋನಗಳು

ಪ್ರವಾಸ ಸಾಹಿತ್ಯದಿಂದ ಚರಿತ್ರೆಗೆ ಪ್ರಮಾಣಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ಪ್ರಯೋಜನವಿದೆ. ಸಂಶೋಧನಾ ಅಧ್ಯಯನಕ್ಕೆ ಆಯ್ದ ಕನ್ನಡದ ಯುರೋಪ್ ಪ್ರವಾಸ ಕೃತಿಗಳಲ್ಲಿ ಹೆಚ್ಚಿನ ಕೃತಿಗಳು ಚಾರಿತ್ರಿಕ ದೃಷ್ಟಿಕೋನವನ್ನು ಪ್ರಕಟಿಸುವ ಧೋರಣೆಗಳಿಂದ ಕೂಡಿವೆ. ಇವು ಈ ಹಿಂದೆ ನಡೆದಿರುವ ಚರಿತ್ರೆಯನ್ನು ಪುನರ್‌ಮನನ ಮಾಡಿಕೊಳ್ಳುತ್ತವೆ. ಚರಿತ್ರೆಯನ್ನು ಪ್ರವಾಸ ಅನುಭವಗಳ ವಿವರಗಳ ಮಧ್ಯೆ ತರುವುದಕ್ಕೆ ಅದರದ್ದೆ ಆದ ಹಿನ್ನೆಲೆಗಳಿವೆ.

ಕೆ. ಶಿವರಾಮ ಕಾರಂತರು ನಾರ್ವೆ ದೇಶದ ರಾಜಧಾನಿ 'ಓಸ್ಲೋ' ನಗರದ ಐತಿಹಾಸಿಕ ಮ್ಯೂಸಿಯಂಗೆ ಭೇಟಿ ನೀಡಿ, ಇತಿಹಾಸ ಪೂರ್ವ ಯುಗದ 'ಕಾನ್‌ಟಕಿ' ಎಂಬ ಮರದ ತೆಪ್ಪದ ಬಗೆಗಿನ ಐತಿಹಾಸಿಕ ಘಟನೆಗಳನ್ನು ಪ್ರಸ್ತಾಪಿಸಿದ್ದಾರೆ. ನಾರ್ವೆಯ ಜನರು ಸಾವಿರಾರು ವರ್ಷಗಳಿಂದ ಕಡಲ ದಾರಿಯನ್ನು ತುಳಿದವರು. ಅನೇಕ ಸಾಹಸ ಸಮುದ್ರಯಾನಗಳು ಇತಿಹಾಸದ ಪುಟದಲ್ಲಿ ದಾಖಲಾಗಿರುವುದನ್ನು ನಾರ್ವೆ ದೇಶದ ಇತಿಹಾಸದಲ್ಲಿ ಕಾಣಲಾಗಿದೆ. 'ಕಾನ್‌ಟಕಿ ಮ್ಯೂಸಿಯಂ' ಇದೇ ರೀತಿಯ ಸಮುದ್ರಯಾನದ ಐತಿಹಾಸಿಕ ಕಥೆಯನ್ನು ಹೇಳುತ್ತದೆ. ಕಾರಂತರು 'ಕಾನ್‌ಟಕಿ' ಎಂಬ ಮರದ ತೆಪ್ಪದ ಇತಿಹಾಸವನ್ನು ಕುರಿತು ಹೀಗೆ ಹೇಳಿದ್ದಾರೆ. 'ಹೈರ್ಡಾಲ್ ಅವರು ಅಮೆರಿಕಾದ ದಕ್ಷಿಣ ಭಾಗದಲ್ಲಿರುವ ಪೆರುವಿನ ಸಂಸ್ಕೃತಿಗೂ ಶಾಂತಸಾಗರದಲ್ಲಿರುವ 'ಸೌತ್ ಸೀ' ದ್ವೀಪದ ಜನರ ಸಂಸ್ಕೃತಿಗೂ ಸಾಮ್ಯತೆ ಇರುವುದನ್ನು ಗುರುತಿಸಿದ. ಅವನ ಪ್ರಕಾರ ಪೆರು ದೇಶದ ಜನರು ಸಾವಿರದ ನಾನೂರು ವರ್ಷಗಳ ಹಿಂದೆ ನಾಲ್ಕು ಸಾವಿರದ ಐನೂರು ಮೈಲು ದೂರದಲ್ಲಿರುವ ಶಾಂತಸಾಗರದ 'ಸೌತ್ ಸೀ' ದ್ವೀಪಗಳಿಗೆ ಆಗಿನ

ಕಾಲದಲ್ಲಿ 'ಕಾನ್‌ಟಕಿ' ಎಂಬ ಮರದ ತೆಪ್ಪದ ಮೂಲಕ ವಲಸೆ ಹೋಗಿದ್ದಾರೆ. ಸಮುದ್ರದಲ್ಲಿ ನಿರಾಯಾಸವಾಗಿ ತೇಲಿಕೊಂಡು ಹೋಗಲು 'ಹಂಬೋಲ್ಟ್ ಸ್ಟ್ರೀಮ್' ಎಂಬ ಕಡಲಿನ ಪ್ರವಾಹ ಸಹಾಯ ಮಾಡಿದೆ ಎಂಬ ಸಿದ್ಧಾಂತವನ್ನು ಮಂಡಿಸಿದ. ಈ ಸಿದ್ಧಾಂತವನ್ನು ಸಮಕಾಲೀನ ವಿಜ್ಞಾನಿಗಳು ಒಪ್ಪಲಿಲ್ಲ. 'ಆ ರೀತಿಯ ಘಟನೆ ನಡೆಯಲು ಸಾಧ್ಯವೇ ಇಲ್ಲ, ಏಕೆಂದರೆ ಈಗಿನಂತೆ ಯಾವುದೇ ಆಧುನಿಕ ಸಲಕರಣೆಗಳಿಲ್ಲದೆ ಸಮುದ್ರ ದಾಟುವುದು ಅಸಾಧ್ಯ' ಎಂದು ವಾದಿಸಿದರು. ಅದನ್ನು ಪ್ರಾಯೋಗಿಕವಾಗಿ ತೋರಿಸಬೇಕೆಂದು ಹೈರ್ಡಾಲ್ ಒಂದು ಸ್ನೇಹಿತರ ಕೂಟವನ್ನು ಕಟ್ಟಿಕೊಂಡು ಬಾಲ್ಸಾ ಎಂಬ ಹಗುರ ಮರದ ತೆಪ್ಪವನ್ನು ಕಟ್ಟಿ ಹಿಂದಿನವರಂತೆಯೇ ಯಾವುದೇ ಆಧುನಿಕ ಸಲಕರಣೆಗಳನ್ನು ಕೊಂಡೊಯ್ಯದೆ ಉದ್ದೇಶಿತ ಹಂಬೋಲ್ಟ್ ಸ್ಟ್ರೀಮ್ ಮೂಲಕ ಸೌತ್ ಸೀ ದ್ವೀಪಗಳಿಗೆ ತಲುಪಿದ. ಕಾರಂತರು 'ಕಾನ್‌ಟಕಿ' ಮ್ಯೂಸಿಯಂನಲ್ಲಿ ಇಟ್ಟಿರುವ ಈ ಹಡಗಿನ ಇತಿಹಾಸವನ್ನು ಹಂಚಿಕೊಳ್ಳುವಾಗ ಆಶ್ಚರ್ಯದಿಂದ ಹೈರ್ಡಾಲ್ ಮತ್ತು ಆತನ ಸಂಗಡಿಗರು ಸಮುದ್ರಯಾನದಲ್ಲಿ ಅನುಭವಿಸಿರಬಹುದಾದ ನೋವು-ಸಂಕಟಗಳನ್ನು ಮನೋಜ್ಞವಾಗಿ ವಿವರಿಸಿದ್ದಾರೆ. ಐತಿಹಾಸಿಕ ಘಟನೆಗಳನ್ನು ಮೆಲುಕು ಹಾಕಲು ಕಾರಂತರಿಗೆ 'ಕಾನ್‌ಟಕಿ' ಎಂಬ ಮರದ ತೆಪ್ಪದ ಅವಶೇಷಗಳು ಸಂವೇದನೆಗೆ ಕಾರಣವಾಗಿದೆ. ಪ್ರವಾಸ ಕಥನದಲ್ಲಿ ಐತಿಹಾಸಿಕ ವಸ್ತು ವಿಷಯಗಳನ್ನು ಚರ್ಚಿಸುವ ಮೂಲಕ ಓದುಗರಲ್ಲಿ ಆಸಕ್ತಿಯನ್ನು ಮೂಡಿಸಲು ಸಾಧ್ಯ ಎಂಬುದನ್ನು ಈ ಚಾರಿತ್ರಿಕ ಘಟನೆಯ ಉಲ್ಲೇಖಗಳಿಂದ ಕಂಡುಕೊಳ್ಳಲಾಗಿದೆ.

ಕಾರಂತರು ಚಿತ್ರಕೃತಿಗಳ ವರ್ಣನೆಯಲ್ಲಿ ಸಿದ್ಧಹಸ್ತರು. ಡೆನ್ಮಾರ್ಕಿನ 'ಗ್ಲಿಪ್ಟೋಟಿಕ್' ಹೆಸರಿನ ಶಿಲ್ಪಗಳ ಮತ್ತು ಚಿತ್ರಗಳ ಸಂಗ್ರಹಾಲಯಕ್ಕೆ ಭೇಟಿ ನೀಡಿದಾಗ ಅಲ್ಲಿಯ ಒಂದು ಚಿತ್ರವನ್ನು ಕುರಿತು ಚಾರಿತ್ರಿವಾದ ವಿಶ್ಲೇಷಣೆಯನ್ನು ಮಾಡಿದ್ದಾರೆ. 'ಸಿಂಡಿಂಗ್ ಸ್ಟೀವನ್' ಎಂಬ ಚಿತ್ರಕಾರ ಡೆನ್ಮಾರ್ಕಿನ ಸ್ಥಳಿಯ ಇತಿಹಾಸದಿಂದ ಆಯ್ದು ಒಂದು ಚಿತ್ರಕೃತಿಯನ್ನು ರಚಿಸಿದ್ದಾನೆ. ಡೆನ್ಮಾರ್ಕ್ ದೇಶವು ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ಜೀವವನ್ನೆ ಪಣಕ್ಕಿಟ್ಟ ತರುಣ ಯೋಧರನ್ನು ಆ ದೇಶದ ತಾಯಿ ಆಲಂಗಿಸಿಕೊಳ್ಳುವಂತೆ ಚಿತ್ರಿಸಲಾಗಿದೆ. ದೇಶಕ್ಕಾಗಿ ಹೋರಾಡಿದ ವೀರ ಯೋಧರನ್ನು ಚಿತ್ರಕೃತಿಯ ಮೂಲಕ ಶಾಸ್ವತಗೊಳಿಸಲಾಗಿದೆ. ಡೆನ್ಮಾರ್ಕ್ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿ ಮಡಿದ ವೀರ ಯೋಧರ ಸ್ಮರಣೆಗಾಗಿ ಈ ಚಿತ್ರವನ್ನು ಬರೆದಿರುವಂತಿದೆ. ಲೇಖಕರು ಚಿತ್ರವನ್ನು ಕಂಡು ಅದರ ಐತಿಹಾಸಿಕ ಮಹತ್ವವನ್ನು ನಿರೂಪಿಸಿದ್ದು, ಅವರು ಚಾರಿತ್ರಿಕ ಸಂವೇದನೆಗೆ ಒಳಗಾಗಿರುವುದನ್ನು ಸೂಚಿಸುತ್ತದೆ. ಕಾರಂತರು ಚಾರಿತ್ರಿಕ ಘಟನೆಯೊಂದಿಗೆ ಮುಖಾಮುಖಿಯಾಗಿ ದೇಶಭಕ್ತಿಯ ಪರಾಕಾಷ್ಟೆಯನ್ನು ಶಿಲ್ಪಿ ಶಾಶ್ವತಗೊಳಿಸಿರುವ ಪರಿಗೆ ಬೆರಗಾಗಿದ್ದಾರೆ.

ಕಾರಂತರ ಈ ಎರಡು ಚಾರಿತ್ರಿಕ ಉಲ್ಲೇಖಗಳು 'ಚಾರಿತ್ರಿಕ ವಸ್ತುವಾದ'ದ ವಿಧಾನದಲ್ಲಿ ನಿರೂಪಿತವಾಗಿದೆ. ಚಾರಿತ್ರಿಕ ವಸ್ತುವಾದವನ್ನು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗೆಲ್ಸ್ ಅವರು ರೂಪಿಸಿದರು. ಇವರು ತಿಳಿಸುವಂತೆ ಚಾರಿತ್ರಿಕ ವಸ್ತುವಾದವು "ಸಮಾಜಗಳು ತಮ್ಮನ್ನು ತಾವು ಅರಿಯುವುದಕ್ಕೆ ಮತ್ತು ಪ್ರಗತಿಯನ್ನು ಸಾಧಿಸುವುದಕ್ಕೆ ಈ ವಿಧಾನ ಅತ್ಯಂತ ಹೆಚ್ಚಿನ ಸಹಾಯವನ್ನು ನೀಡಿದೆ"(ಕನ್ನಡ ಅಧ್ಯಯನ., ಚಳಿಸಂಚಿಕೆ.,ಪು-೯೪)ಎಂದಿದ್ದಾರೆ. ಕಾರಂತರು 'ಕಾನ್‌ಟಕಿ' ಹಡಗಿನ ಪೂರ್ವ ಚರಿತ್ರೆಯನ್ನು ಮತ್ತು ಡೆನ್ಮಾರ್ಕಿನ ಸ್ಥಳಿಯ ಚರಿತ್ರೆ ಆಧಾರಿತ ಚಿತ್ರದ ವಿಶ್ಲೇಷಣೆಯನ್ನು ಮಾಡಿರುವುದು ಚಾರಿತ್ರಿಕ ವಸ್ತುವಾದದ ಸಿದ್ಧಾಂತದ ನೆಲೆಯಲ್ಲಿ ಎಂಬುದು ತಿಳಿಯುತ್ತದೆ. ಈ ಉಲ್ಲೇಖಗಳು ಕಾರಂತರ ಪುರಾತತ್ವ ಶಾಸ್ತ್ರದ ಮೂಲಕ ಕಾಣುವ ವೈಜ್ಞಾನಿಕ ದೃಷ್ಟಿಕೋನವನ್ನು ಸೂಚಿಸುತ್ತದೆ. ಇವೆರಡು ಚಾರಿತ್ರಿಕ

ಘಟನೆಗಳ ಉಲ್ಲೇಖಗಳಲ್ಲಿರುವ ವಸ್ತುಗಳು (ಹಡಗು, ಚಿತ್ರಕೃತಿ)ಅಂದಿನ ಸಮಾಜದ ಬದುಕನ್ನು ಅಭ್ಯಸಿಸಲು ನೆರವಾಗುತ್ತವೆ. ಚಾರಿತ್ರಿಕ ದೃಷ್ಟಿಕೋನವು ಹೊಸ ಜ್ಞಾನದ ಅರಿವನ್ನು ಪಡೆಯಲು ಸಹಾಯಕವಾಗಿದೆ. ಕಾರಂತರು ಯುರೋಪಿನವರ ಚಾರಿತ್ರಿಕ ದೃಷ್ಟಿಕೋನವನ್ನು ಶ್ಲಾಘಿಸಿದ್ದಾರೆ. ಅದೇ ಸಮಯದಲ್ಲಿ ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆಯ ಕೊರತೆ ಇರುವುದನ್ನು ಪರೋಕ್ಷವಾಗಿ ಸೂಚಿಸಿದ್ದಾರೆ.

ದೇ. ಜವರೇಗೌಡರು ತಮ್ಮ 'ವಿದೇಶದಲ್ಲಿ ನಾಲ್ಕು ವಾರ' ಪ್ರವಾಸ ಕೃತಿಯಲ್ಲಿ ಭಾರತದ ಪ್ರಾಚೀನ ನಾಗರಿಕತೆಯಾದ ಸಿಂಧೂ ನಾಗರಿಕತೆಯ ಅವಶೇಷ ಸ್ಥಳ 'ಮಹೆಂಜೋದಾರೋ' ಬಗ್ಗೆ ಪ್ರಸ್ತಾಪಿಸಿದ್ದಾರೆ. ಮಹೆಂಜೋದಾರೋದಲ್ಲಿ ದೊರೆತ ಲಿಪಿಯ ಬಗ್ಗೆ ಭಾರತದಲ್ಲಿ ಸಾಕಷ್ಟು ಅಧ್ಯಯನ ಆಗಿರಲಿಲ್ಲ. ಆ ಸಂದರ್ಭದಲ್ಲಿ ಲೆನಿನ್‌ಗ್ರಾಡ್ ವಿಶ್ವವಿದ್ಯಾನಿಲಯದ ಎನ್. ವಿ. ಗುರೋವ್ ಅವರು ಮಹೆಂಜೋದಾರೋದಲ್ಲಿ ದೊರೆತ ಲಿಪಿಗಳ ಬಗ್ಗೆ ಅಧ್ಯಯನ ಕೈಗೊಂಡು ಮಹತ್ವದ ವಿಷಯಗಳನ್ನು ಸಂಶೋಧಿಸಿದ್ದರು. ಅವರು "ಅಲ್ಲಿಯ ಬರೆಹಗಳಲ್ಲಿ ಪೂರ್ವ ಪ್ರತ್ಯಯಗಳು ಕಾಣುವುದಿಲ್ಲ; ಇದು ದ್ರಾವಿಡ ಭಾಷೆಗಳ ಮುಖ್ಯ ಲಕ್ಷಣ". (ದೇ. ಜವರೇಗೌಡ., ವಿದೇಶದಲ್ಲಿ ನಾಲ್ಕು ವಾರ., ಪು-೮೯)ಎಂದಿರುವುದನ್ನು ಉಲ್ಲೇಖಿಸಿದ್ದಾರೆ. ತೆಲುಗು ಮತ್ತು ಹಿಂದಿ ಭಾಷೆಯ ಪ್ರಾಧ್ಯಾಪಕರಾದ ಎನ್. ವಿ. ಗುರೋವ್ ಅವರು ದ್ರಾವಿಡ ಭಾಷೆಗಳನ್ನು ಅಭ್ಯಸಿಸಿ ಮೇಲಿನ ಹೇಳಿಕೆಯನ್ನು ನೀಡಿರುವುದು ಚಿಂತನೀಯವಾಗಿದೆ. ಭಾರತದಲ್ಲಿ ಸಿಂಧೂ ಬಯಲಿನ ನಾಗರಿಕತೆಯ ಅವಶೇಷಗಳು ಉತ್ಖನನದ ಮೂಲಕ ದೊರೆತಿರುವ ಸ್ಥಳಗಳೆಲ್ಲ ಉತ್ತರ ಭಾರತದ ಭಾಗದಲ್ಲಿದೆ. ಮಹೆಂಜೋದಾರೋ ಲಿಪಿ ದೊರತಿರುವುದು ಕೂಡ ಉತ್ತರ ಭಾರತದ ಭಾಗದಲ್ಲಿಯೇ. ದ್ರಾವಿಡ ಭಾಷೆಗಳೆಲ್ಲವೂ ದಕ್ಷಿಣ ಭಾರತದ ಭಾಗದಲ್ಲಿ ಬಳಕೆಯಲ್ಲಿವೆ. ಹಾಗಾದರೆ ಉತ್ತರ ಭಾರತಕ್ಕೂ ಮತ್ತು ದ್ರಾವಿಡಭಾಷೆಗಳಿಗೂ ಇರುವ ಸಂಬಂಧವೇನು? ಸಿಂಧೂ ನಾಗರಿಕತೆಯ ಕಾಲದಲ್ಲಿ ಉತ್ತರ ಭಾರತದಲ್ಲಿ ದ್ರಾವಿಡ ಜನಾಂಗ ನೆಲೆಸಿರಬಹುದೇ? ಅಥವಾ ದಕ್ಷಿಣ ಭಾರತದಲ್ಲಿದ್ದ ದ್ರಾವಿಡ ಜನಾಂಗವು ಸಿಂಧೂ ನಾಗರಿಕತೆಯ ಜನರೊಂದಿಗೆ ವ್ಯಾವಹಾರಿಕ ಸಂಪರ್ಕವನ್ನು ಹೊಂದಿರಬಹುದೇ?. ಸಿಂಧೂ ಬಯಲಿನ ನಾಗರಿಕತೆಯಲ್ಲಿ ಬಳಕೆಯಲ್ಲಿದ್ದ ಭಾಷೆಯೇ ದ್ರಾವಿಡ ಭಾಷೆಯ ಮೂಲವಾಗಿರಲು ಸಾಧ್ಯವೇ? ಲೇಖಕರ ಹೇಳಿಕೆಯು ಈ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಅಲ್ಲದೆ ಅನೇಕ ಅನುಮಾನಗಳಿಗೆ ಕಾರಣವಾಗುತ್ತದೆ. ದೇ. ಜವರೇಗೌಡರು ಐತಿಹಾಸಿಕ ವಿಷಯವನ್ನು ಸೂಕ್ಷ್ಮವಾಗಿ ಉಲ್ಲೇಖಿಸಿ ಓದುಗರನ್ನು ಚಿಂತನೆಗೆ ಒಳಗುಮಾಡಿದ್ದಾರೆ. ಪ್ರವಾಸ ಕೃತಿಯಲ್ಲಿ ಚಾರಿತ್ರಿಕ ಉಲ್ಲೇಖಗಳು ಹೊಸ ಅಧ್ಯಯನಕ್ಕೆ ಪ್ರಚೋದಿಸುತ್ತದೆ. ದೇ. ಜವರೇಗೌಡರ ಚಾರಿತ್ರಿಕ ಪ್ರಜ್ಞೆಯು ಸಿಂಧೂಬಯಲಿನ ನಾಗರಿಕತೆಯಲ್ಲಿ ಕನ್ನಡದ ಅಸ್ಮಿತೆಯನ್ನು ಹುಡುಕುವ ತವಕವನ್ನು ಗುರುತಿಸಬಹುದಾಗಿದೆ. ನಾಡು ನುಡಿಯ ಬಗ್ಗೆ ಚಾರಿತ್ರಿಕ ಪ್ರಜ್ಞೆ ಹೊಂದಿರುವ ಲೇಖಕರು ಯುರೋಪಿನಲ್ಲಿ ತಾವು ಕಾಣುವ ವಸ್ತು ವಿಶೇಷಗಳಲ್ಲಿ ಸಾಮಾನ್ಯವಾಗಿ ಕನ್ನಡತ್ವವನ್ನೇ ಕಾಣುತ್ತಾರೆ.

ಶ್ರೀರಂಗ ಅವರು ಪ್ರವಾಸ ಕೃತಿಯಲ್ಲಿ ಪ್ರಮುಖವಾಗಿ ರಂಗಭೂಮಿಯ ಹೊಸ ಹೊಸ ಸಾಧ್ಯತೆಗಳನ್ನು ಪರಿಚಯಿಸಿದ್ದಾರೆ. ಜೊತೆಗೆ ತಾವು ಕಂಡ ಸ್ಥಳಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಹೇಳುವಲ್ಲಿಯೂ ಅಷ್ಟೇ ಆಸ್ಥೆಯನ್ನು ತೋರಿಸಿದ್ದಾರೆ. ಹಿಟ್ಲರ್‌ನ ನಾಜಿ ಪಡೆಯು ರಷ್ಯಾದ ಮೇಲೆ ಯುದ್ಧ ಸಾರಿದ ಸಂದರ್ಭದಲ್ಲಿ ಡ್ರೆಸ್‌ಡೆನ್ ನಗರದ ಮ್ಯೂಸಿಯಂನಲ್ಲಿರುವ ಅಮೂಲ್ಯ ಚಿತ್ರಪಟಗಳು ಹಾಳಾಗಬಾರದು ಎಂದು ಸ್ವತಃ ನಾಗರಿಕರೇ ಚಿತ್ರಪಟಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಿದ ಐತಿಹಾಸಿಕ ಸಂಗತಿಯನ್ನು ಉಲ್ಲೇಖಿಸಿದ್ದಾರೆ.

ಅಮೂಲ್ಯ ಕಲಾಭಂಡಾರವನ್ನು ಜನರೇ ಸ್ವತಃ ಉಳಿಸಿಕೊಂಡಿರುವುದು ಲೇಖಕರಿಗೆ ಅಭಿಮಾನವನ್ನು ಮೂಡಿಸಿದೆ. ಶ್ರೀರಂಗ ಅವರು ನಾಟಕ ಕಲಾವಿದರು. ಆದ್ದರಿಂದಲೇ ಕಲಾವಿದರ ಚಿತ್ರಗಳನ್ನು ಜನರೇ ಉಳಿಸಿಕೊಂಡ ಐತಿಹಾಸಿಕ ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ಐತಿಹಾಸಿಕ ಘಟನೆಗಳನ್ನು ಪ್ರವಾಸ ಕೃತಿಗಳಲ್ಲಿ ಉಲ್ಲೇಖಿಸಲು ಲೇಖಕನಿಗೆ ವೃತ್ತಿಪರವಾದ ಸಂಗತಿಗಳು ಪ್ರೇರಣೆಯನ್ನು ನೀಡಿದೆ. ಲೇಖಕರಿಗೆ ಹಿಟ್ಲರ್‌ನ ಬಗ್ಗೆ ಅಸಹನೆಯನ್ನು ಹಾಗೂ ಕಲಾವಿದರ ಬಗ್ಗೆ ಜನರಿಗಿರುವ ಕಾಳಜಿಯನ್ನು ಓದುಗರಿಗೆ ತಿಳಿಸುವ ಉದ್ದೇಶವಿದೆ. ಕಲಾವಿದರ ಕಲಾಕೃತಿಗಳಿಗೆ ಸಮಾಜವು ಗೌರವವನ್ನು ತೋರಬೇಕು ಎಂಬ ಭಾವವನ್ನು ವ್ಯಕ್ತಪಡಿಸಿರುವಂತಿದೆ. ಕಲಾವಿದರ ಕಲೆಗೆ ಬೆಲೆ ಸಿಗಬೇಕೆಂಬ ಅಪೇಕ್ಷೆ ಕಲಾವಿದರಿಗೆ ಸಹಜವಾಗಿರುತ್ತದೆ. ಆದ್ದರಿಂದ ಸಾಮರಸ್ಯ ಭಾವದೊಂದಿಗೆ ಐತಿಹಾಸಿಕ ಘಟನೆಯನ್ನು ನಿರೂಪಿಸಿದ್ದಾರೆ.

ದೊಡ್ಡೇರಿ ವೆಂಕಟಗಿರಿರಾವ್ ಅವರು ಫ್ರಾನ್ಸ್ ದೇಶದಲ್ಲಿ ಪಟ್ಟಕ್ಕಾಗಿ ತಂದೆ ಮತ್ತು ಮಗನ ನಡುವೆ ನಡೆದ ದುರಂತ ಐತಿಹಾಸಿಕ ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ಫ್ರಾನ್ಸ್‌ನಲ್ಲಿ 'ರುಡಾಲ್ಫ್' ಎಂಬ ಫ್ರೆಂಚ್ ರಾಜಕುಮಾರ ತಂದೆಯಾದ 'ಫ್ರಾಂಜ್‌ಜೋಸೆಫ್'ನ್ನು ಕೊಂದು ಪಟ್ಟಕ್ಕೆ ಬರುವ ವಿಫಲ ಪ್ರಯತ್ನವನ್ನು ಮಾಡಿದನು. ಇದರಿಂದ ಅವಮಾನಿತನಾದ 'ಖುಡಾಲ್ಫ್' ಪ್ರೇಯಸಿಯನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡನು. ಈ ಐತಿಹಾಸಿಕ ಘಟನೆಯನ್ನು ಲೇಖಕರು ಉಲ್ಲೇಖಿಸಲು ಕಾರಣವೇನು?. ಭಾರತೀಯ ಇತಿಹಾಸದಲ್ಲಿನ ಘಟನಾವಳಿಗೆ ಹೋಲಿಕೆಯುಳ್ಳ ಘಟನೆಯಾದ್ದರಿಂದ ಪ್ರಸ್ತಾಪಿಸಿರುವ ಸಾಧ್ಯತೆ ಇದೆ. ದೆಹಲಿಯ ಸುಲ್ತಾನರು ಸಿಂಹಾಸನಕ್ಕಾಗಿ ಕರುಳ ಸಂಬಂಧಗಳನ್ನು ಲೆಕ್ಕಿಸದೆ ಕೊಂದು ಪಟ್ಟಕ್ಕೆ ಬಂದಿರುವ ಉದಾಹರಣೆಗಳಿವೆ. ಅಧಿಕಾರಕ್ಕಾಗಿ ಕರುಳ ಸಂಬಂಧಗಳನ್ನೇ ಬಲಿ ಪಡೆಯುವ ದುರಂತ ಘಟನೆಗಳು ಲೇಖಕರ ಮನಸ್ಸನ್ನು ಸೆಳೆದಿದೆ. ಲೇಖಕರ ಚಾರಿತ್ರಿಕ ಪ್ರಜ್ಞೆಯು ತೌಲನಿಕ ದೃಷ್ಟಿಕೋನದೊಂದಿಗೆ ವ್ಯಕ್ತವಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಗೋಪಾಲ್.ಜಿ. ಅವರು 'ಬೆಂಗಳೂರಿಂದ ಬಾರ್ಸೆಲೋನಕ್ಕೆ' ಪ್ರವಾಸ ಕೃತಿಯಲ್ಲಿ ತಮ್ಮ ಮನೆತನವು ತಿರುಪತಿಯ ಒಕ್ಕಲು ಆಗುವುದಕ್ಕೆ ಕಾರಣವಾದ ಐತಿಹಾಸಿಕ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಈ ಘಟನೆಯು ಚಾರಿತ್ರಿಕ ಅಂಶಗಳಿಂದ ಕೂಡಿದ್ದು ಆತ್ಮಚರಿತ್ರೆಯ ಸ್ವರೂಪದಲ್ಲಿ ಉಲ್ಲೇಖಗೊಂಡಿದೆ. ರಾಮಾನುಜಾಚಾರ್ಯರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದಾಗ ಹೊಯ್ಸಳರ ಅರಸ ಬಿಟ್ಟಿದೇವ ದ್ವಾರಸಮುದ್ರದಲ್ಲಿ(ಹಳೇಬೀಡು) ರಾಜ್ಯಾಡಳಿತವನ್ನು ನಡೆಸುತ್ತಿದ್ದ. ರಾಮಾನುಜಾರ್ಯರು ಬೋಧಿಸಿದ ವಿಶಿಷ್ಟಾದ್ವೈತ ತತ್ವಗಳಿಗೆ ಒಳಗಾಗಿ ಬಿಟ್ಟಿದೇವನು 'ವಿಷ್ಣುವರ್ಧನ' ಎಂಬ ಹೆಸರಿನೊಂದಿಗೆ ಹೊಸ ಮತಕ್ಕೆ ಸೇರುತ್ತಾನೆ. ರಾಮಾನುಜಾಚಾರ್ಯರ ತತ್ವಗಳು ಸಾಮಾನ್ಯ ಜನರನ್ನು ಸೆಳೆಯಿತು. ಈ ಸಂದರ್ಭದಲ್ಲಿ ರಾಜನನ್ನು ಅನುಸರಿಸಿದ ಸಾವಿರಾರು ಕೆಳವರ್ಗದ ಜನರು ವಿಶಿಷ್ಟಾದ್ವೈತ ಮತಕ್ಕೆ ಸೇರಿದ್ದಾರೆ. ಆ ಸಮಯದಲ್ಲಿ ಗೋಪಾಲ್. ಜಿ ಅವರ ಪೂರ್ವಜರು ಕೂಡ ಹೊಸ ಮತಕ್ಕೆ ಸೇರ್ಪಡೆಗೊಂಡ ವಿಚಾರವನ್ನು ಲೇಖಕರು ಪ್ರಸ್ತಾಪಿಸಿದ್ಡಾರೆ. ಹೊಯ್ಸಳರ ಆಳ್ವಿಕೆಯ ಪ್ರಾಬಲ್ಯವಿದ್ದ ಪ್ರದೇಶಗಳಲ್ಲಿ ಜನರು ಈಗಲು ತಿರುಪತಿಯ ಒಕ್ಕಲಾಗಿ ನಡೆದುಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ. ವೈಯಕ್ತಿಕ ವಿಚಾರಗಳು ಚಾರಿತ್ರಿಕ ಸಂಗತಿಗಳೊಂದಿಗೆ ಉಲ್ಲೇಖಗೊಂಡಾಗ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಲೇಖಕರು ಚಾರಿತ್ರಿಕ ಸಂಗತಿಯೊಂದಿಗೆ ಸಾಮರಸ್ಯತೆಯಿಂದ ವರ್ತಿಸಿರುವುದನ್ನು ಕಂಡುಕೊಳ್ಳಲಾಗಿದೆ. ಒಂದು ಧರ್ಮದ ತತ್ವಗಳು ವ್ಯಕ್ತಿಗಳ ಕಾರಣದಿಂದಲೂ, ಪ್ರಭುತ್ವದ ಕಾರಣದಿಂದಲೂ, ಆಕರ್ಷಣೆಯ ಕಾರಣದಿಂದಲೂ ಹಾಗು

ಅನುಕೂಲದ ಕಾರಣದಿಂದಲೂ ಮತ್ತೊಂದು ಧರ್ಮದ ಮೇಲೆ ಪ್ರಭಾವ ಬೀರಿರುವುದನ್ನು ಭಾರತೀಯ ಇತಿಹಾಸದಲ್ಲಿ ಗುರುತಿಸಬಹುದು. 'ಶುದ್ಧಿ ಚಳುವಳಿ' 'ಘರ್ ವಾಪಸಿ' 'ಕ್ರೈಸ್ತಧರ್ಮಕ್ಕೆ ಕೆಳವರ್ಗದವರ ಮತಾಂತರ' 'ಮುಸ್ಲಿಂ ಧರ್ಮಕ್ಕೆ ಇತರ ಧರ್ಮೀಯರ ಮತಾಂತರ' ಮೊದಲಾದ ಘಟನೆಗಳು ಈ ಹಿನ್ನೆಲೆಯಲ್ಲಿಯೇ ನಡೆದಿರುವುದನ್ನು ಗಮನಿಸಲಾಗಿದೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ಗ್ರೀಕ್ ದೇಶದ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿ ಪ್ರಾಚ್ಯವಸ್ತು ಶಾಸ್ತ್ರದಲ್ಲಿ ಉನ್ನತ ತರಬೇತಿ ಪಡೆಯಲು ಅಥೆನ್ಸ್‌ಗೆ ಹೋಗಿದ್ದರು. ಇವರ ಪ್ರವಾಸ ಕೃತಿಯಲ್ಲಿ ಐತಿಹಾಸಿಕ ಸ್ಥಳಗಳ ಉತ್ಖನನದ ಮಾಹಿತಿ ನಿರೂಪಿತವಾಗಿದೆ. ಲೇಖಕರು ಗ್ರೀಕ್‌ನ 'ಪೇತ್ರಾಲೋನಾ' ಎಂಬ ಹಳ್ಳಿಯಲ್ಲಿ ಪುಲಿಯಾನೋಸ್‌ರ ಮಾರ್ಗದರ್ಶನದಲ್ಲಿ ಉತ್ಖನನ ಕಾರ್ಯದಲ್ಲಿ ಭಾಗವಹಿಸಿದ್ದರು. ಈ ಉತ್ಖನನ ಜಾಗದ ಬಗೆಗಿನ ಇತಿಹಾಸವನ್ನು ಹೇಳುತ್ತಾ '೧೯೫೯ರಲ್ಲಿ ಈ ಪ್ರದೇಶದಲ್ಲಿ ಹಳ್ಳಿಗರು ನೀರಿಗಾಗಿ ಭೂಮಿಯನ್ನು ಅಗೆಯುತ್ತಿದ್ದ ಸಂದರ್ಭದಲ್ಲಿ ಅಕಸ್ಮಾತ್ತಾಗಿ ಗುಹೆಯ ಸಂಶೋಧನೆಯಾಯಿತು. ಇಲ್ಲಿ ನಾಲ್ಕು ಲಕ್ಷ ವರ್ಷಗಳ ಹಿಂದಿನ ಮಾನವನ ತಲೆಬುರುಡೆ ಸಿಕ್ಕಿದೆ. ತೆಸ್ಸಲೋನಿಕ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆದ ಪುಲಿಯಾನೋಸ್ ಅವರು ಈ ಸ್ಥಳದ ಸಂಶೋಧನಾ ಹಕ್ಕನ್ನು ಪಡೆದು ಉತ್ಖನನ ಕಾರ್ಯ ಮಾಡುತ್ತಿದ್ದಾರೆ' ಎಂದಿದ್ದಾರೆ. ವೃತ್ತಿಧರ್ಮದ ಹಿನ್ನೆಲೆಯಲ್ಲಿ ಐತಿಹಾಸಿಕ ಸಂಗತಿಗಳು ಪ್ರವಾಸ ಕೃತಿಯಲ್ಲಿ ಸ್ಥಾನ ಪಡೆದುಕೊಂಡಿದೆ. ಐತಿಹಾಸಿಕ ಸಂಗತಿಗಳನ್ನು ಪ್ರವಾಸ ಕೃತಿಯಲ್ಲಿ ದಾಖಲಿಸಲು ಲೇಖಕರ ಇತ್ಯಾತ್ಮಕ ನೋಟಗಳು ಕಾರಣವಾಗುತ್ತವೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ಅಥೆನ್ಸ್ ನಗರದಲ್ಲಿ 'ಮರಥಾನ್ ಓಟ'ವು ಪ್ರಾರಂಭಗೊಂಡ ಸಂದರ್ಭದ ಇತಿಹಾಸವನ್ನು ನೆನಪಿಸಿಕೊಂಡಿದ್ದಾರೆ. ಕ್ರಿ.ಶ. ೪೯೦ರಲ್ಲಿ ಪರ್ಶಿಯನ್ನರಿಗೂ ಗ್ರೀಕರಿಗೂ 'ಮರಥಾನ್ ಎಂಬ ಸ್ಥಳದಲ್ಲಿ ಯುದ್ಧ ನಡೆದು ಗ್ರೀಕರು ಸಂಪೂರ್ಣ ಜಯಶಾಲಿಗಳಾದಾಗ ಈ ಸಂತಸದ ವಾರ್ತೆಯನ್ನು ಅಥೆನ್ಸಿಗರಿಗೆ ತಲುಪಿಸಲು 'ಫಿಡಿಪ್ಪಿಡಾಸ್' ಎಂಬೊಬ್ಬ ಗ್ರೀಕ್ ಯೋಧ ಮರಥಾನ್-ಅಥೆನ್ಸ್ ನಡುವಣ ೪೨ ಕಿ.ಮೀ. ದೂರವನ್ನು ಒಂದೇ ಉಸುರಿಗೆ ಓಡುತ್ತಾ ಗಮಿಸಿದ್ದನಂತೆ. ಈ ಐತಿಹಾಸಿಕ ಘಟನೆಯ ನೆನಪಿಗಾಗಿ ಇಂದಿಗೂ ಒಲಂಪಿಕ್ಸ್‌ನಲ್ಲಿ ೪೨ ಕಿ.ಮೀ. ಓಟದ ಮರಥಾನ್ ಸ್ಪರ್ಧೆ ನಡೆಸಲಾಗುತ್ತದೆ. ಈ ಘಟನೆಯನ್ನು ಪುನರ್ಮನನ ಮಾಡಿಕೊಳ್ಳುವ ಲೇಖಕರು ತಾವು ಭೇಟಿ ನೀಡಿದ ಸ್ಥಳದ ಚರಿತ್ರೆಯನ್ನು ವಿವರಿಸಿದ್ದಾರೆ. ಪ್ರವಾಸಿಗನಿಗೆ ತಾನು ಭೇಟಿ ನೀಡಿದ ಸ್ಥಳದ ಐತಿಹಾಸಿಕ ಮಹತ್ವವು ತಿಳಿದಾಗ ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ಪ್ರೇರಣೆ ಉಂಟಾಗುವುದು ಚಾರಿತ್ರಿಕ ದೃಷ್ಟಿಕೋನದ ಕಾರಣದಿಂದ. ಐತಿಹಾಸಿಕ ಪ್ರಾಕ್ತಾನಶಾಸ್ತ್ರದ ವಿದ್ಯಾರ್ಥಿಯಾದ ಲೇಖಕರು ತಮ್ಮ ಪೂರ್ವಜ್ಞಾನ ಮತ್ತು ಆಸಕ್ತಿಯ ವಿಷಯದ ಹಿನ್ನೆಲೆಯಲ್ಲಿಯೇ ಚಾರಿತ್ರಿಕ ಅಂಶವನ್ನು ಉಲ್ಲೇಖಿಸಿರುವುದನ್ನು ಕಂಡುಕೊಳ್ಳಲಾಗಿದೆ.

ನಾಗತಿಹಳ್ಳಿ ಚಂದ್ರಶೇಖರ ಅವರು ಇತಿಹಾಸ ಬೋಧನೆಯಲ್ಲಿ ಆಗುತ್ತಿರುವ ಕೆಲವು ಲೋಪಗಳ ಬಗ್ಗೆ ಗಮನ ಸೆಳೆದಿದ್ದಾರೆ. "ಫ್ರಾನ್ಸ್‌ಗೊಂದು ಇತಿಹಾಸವಿದೆ. ಯಾವ ನಾಡಿಗೆ ತಾನೆ ಇತಿಹಾಸ ಇರುವುದಿಲ್ಲ? ಪ್ರತಿಯೊಬ್ಬರೂ ತಂತಮ್ಮ ಐತಿಹಾಸಿಕ ತಪ್ಪುಗಳನ್ನು ಮುಚ್ಚಿಟ್ಟು ಸರಿಗಳನ್ನೇ ಮೆರೆಸುತ್ತಾರೆ. ಅಥವಾ ತಪ್ಪುಗಳನ್ನೇ ಸಮರ್ಥನೆ ಮಾಡುತ್ತಾ ಹೋಗುತ್ತಾರೆ. ತಪ್ಪು-ಸರಿಗಳನ್ನು ನಿರ್ಲಿಪ್ತವಾಗಿ ನೋಡದಿದ್ದರೆ ಇತಿಹಾಸಕ್ಕೆ ಅಪಚಾರವಾಗುತ್ತದೆ. ಭಾರತದ ಇತಿಹಾಸಕ್ಕಂತೂ ಭಾರೀ ಚಿಕಿತ್ಸೆಯೇ ಆಗಬೇಕಿದೆ. ಇವತ್ತಿಗೂ

ಇತಿಹಾಸದ ವಿದ್ಯಾರ್ಥಿಗಳು ಓದುವುದೇನು?"(ನಾಗತಿಹಳ್ಳಿ ಚಂದ್ರಶೇಖರ., ಅಯನ., ಪು-೨೨)ಎಂದು ಪ್ರಶ್ನಿಸಿದ್ದಾರೆ. ಶಾಲಾ-ಕಾಲೇಜುಗಳಲ್ಲಿ ತಪ್ಪುಗಳನ್ನು ಮರೆಮಾಚಿ ತಿರುಚಲಾಗಿರುವ ಇತಿಹಾಸವನ್ನು ಬೋಧಿಸಲಾಗುತ್ತಿದೆ ಎಂಬುದು ಲೇಖಕರ ಆರೋಪ. ಅಂದರೆ ತಿಳಿಸಬೇಕಾದ ಚಾರಿತ್ರಿಕ ಸಂಗತಿಗಳನ್ನು ಪ್ರಕಾಶಗೊಳಿಸದೆ ಗುಪ್ತವಾಗಿಡಲಾಗಿದೆ. ಇದನ್ನು ಗಮನಿಸಿದ ಲೇಖಕರು ತೇಲಿಸಿ ಬೋಧಿಸಲಾಗುವ ಐತಿಹಾಸಿಕ ವಿಷಯದ ಬದಲಿಗೆ ವಾಸ್ತವ ಇತಿಹಾಸವನ್ನು ಬೋಧಿಸಬೇಕು ಎಂಬ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಹಾಗಾದರೆ ನೈಜ ಇತಿಹಾಸವನ್ನು ಮರೆಮಾಚಲು ಕಾರಣವೇನು? ಎಂಬ ಸಂಗತಿಯನ್ನು ವಿಶ್ಲೇಷಿಸಿದಾಗ 'ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆಯನ್ನುಂಟು ಮಾಡುವ ಸತ್ಯ ಸಂಗತಿಗಳನ್ನು ಪ್ರಕಾಶಗೊಳಿಸದೆ ಗೌಪ್ಯತೆಯನ್ನು ಕಾಪಾಡುವುದು ಸಮಾಜದ ಹಿತದೃಷ್ಟಿಯಿಂದ ಒಳಿತೇ ಆಗಿದೆ'. ಈ ಸಂದರ್ಭದಲ್ಲಿ ಲೇಖಕರ ಆರೋಪವನ್ನು ಒಪ್ಪಲು ಬರುವುದಿಲ್ಲ. ಆದರೆ ಐತಿಹಾಸಿಕ ಸತ್ಯಗಳನ್ನು ತಿರುಚಿ, ತಿರುಚಲಾದ ಸಂಗತಿಗಳನ್ನೇ ನೈಜ ಇತಿಹಾಸವೆಂದು ಒಪ್ಪಿಸುವುದು ಇತಿಹಾಸಕ್ಕೆ ಮಾಡಿದ ಅಪಚಾರವಾಗುತ್ತದೆ. ಇದರಿಂದ ಮುಂದಿನ ಜನಾಂಗಕ್ಕೆ ಆಗುವ ನಷ್ಟದ ಭಾರ ದೊಡ್ಡದು. ಮತ್ತು ವಿದ್ಯಾರ್ಥಿಗಳಲ್ಲಿ ನಿರೀಕ್ಷಿತ ಬದಲಾವಣೆಯನ್ನು ಕಾಣಲು ಸಾಧ್ಯವಿಲ್ಲ. ಇತಿಹಾಸ ಭೋಧನೆಯ ಉದ್ದೇಶ ಸಫಲಗೊಳ್ಳುವುದಿಲ್ಲ.

ಇಂದಿರಾ ಶಿವಣ್ಣ ಅವರ ಎರಡೂ ಪ್ರವಾಸ ಕೃತಿಗಳಲ್ಲಿ (ಹಾಲೆಂಡ್‌ನಿಂದ ಲಂಡನ್‌ವರೆಗೆ, ಬದುಕಿಗೊಂದು ಬಂಗಾರದ ಲೇಪನ) ಅರ್ಧಕ್ಕಿಂತ ಹೆಚ್ಚಿನ ಭಾಗ ಯುರೋಪಿನ ಇತಿಹಾಸದ ಘನಾವಳಿಗಳೇ ನಿರೂಪಿತವಾಗಿದೆ. ಇದು ಪ್ರವಾಸ ಕೃತಿಯ ಮಿತಿಯೂ ಆಗಬಹುದು; ಶಕ್ತಿಯೂ ಆಗಬಹುದು. ಮಿತಿ ಏನೆಂದರೆ ಇವರ ಪ್ರವಾಸ ಕೃತಿಯನ್ನು ಓದುತ್ತಿರುವಾಗ ಕೆಲವೊಮ್ಮೆ ಇತಿಹಾಸದ ಕೃತಿ ಓದುತ್ತಿರುವಂತೆ ಭಾಸವಾಗುತ್ತದೆ. ಅವರೇ ಕೃತಿಯ ಆರಂಭದಲ್ಲಿ "ಯುರೋಪಿನ ಚರಿತ್ರೆಯ ಆರು ನೂರು ಪುಟಗಳ ಪುಸ್ತಕವನ್ನು ಮತ್ತೆ ಮತ್ತೆ ತಿರುಗಿಸಿ ಟಿಪ್ಪಣಿ ಮಾಡಿಕೊಂಡೆ........ಇದೊಂದು ಚರಿತ್ರೆಯ ಪಾಠವಾಯಿತಲ್ಲ ಎಂದು ನಿಮಗೆ ಅನಿಸಬಹುದು ಆದರೆ ಯುರೋಪಿನ ಚರಿತ್ರೆಯ ಬಗ್ಗೆ ಏನೂ ಅರಿಯದೆ ಹೊರಡುವ ಪ್ರವಾಸಿಗರಿಗೆ ನನ್ನ ಈ ಟಿಪ್ಪಣಿಯನ್ನು ಪ್ರವಾಸ ಕಥನದಲ್ಲಿ ಸೇರಿಸಿರುತ್ತೇನೆ"(ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು-೧೩,೧೪)ಎಂದಿದ್ದಾರೆ. ಅವರ ಉಲ್ಲೇಖದಲ್ಲಿನ ಎರಡನೇ ಸಂಗತಿ ಈ ಕೃತಿಯ ಶಕ್ತಿಯನ್ನು ಸೂಚಿಸುತ್ತದೆ. ಬರೆವಣಿಗೆಯ ಉದ್ದೇಶ ಮುಂದೆ ವಿದೇಶ ಪ್ರವಾಸ ತೆರಳುವವರಿಗೆ ಅನುಕೂಲ ಮಾಡಿಕೊಡುವುದು. ಲೇಖಕಿ ತಾವು ಸಂದರ್ಶಿಸಿದ ದೇಶಗಳ ಇತಿಹಾಸವನ್ನು ಪರಿಚಯಿಸುವಲ್ಲಿ ತೋರಿರುವ ಆಸ್ಥೆಯನ್ನು ಗಮನಿಸಿದಾಗ ಕೃತಿಯ ಏಕತಾನತೆಯನ್ನು ಹೋಗಲಾಡಿಸುವ ಉದ್ದೇಶ' ಹೊಂದಿರುವುದನ್ನು ಕಾಣಲಾಗಿದೆ. ಪ್ರವಾಸದ ಅನುಭವಗಳ ದೀರ್ಘ ವಿವರಣೆಗಳು ಕೆಲವೊಮ್ಮೆ ಓದುಗರಿಗೆ ಬೇಸರ ತರಿಸುತ್ತದೆ. ಆದ್ದರಿಂದ ಇಲ್ಲಿ ಲೇಖಕಿ ಐತಿಹಾಸಿಕ ಅಂಶಗಳನ್ನು ಕಥನರೂಪದಲ್ಲಿ ಪ್ರವಾಸ ಕಥನದೊಳಗೆ ಸೇರಿಸಲು ಪ್ರಯತ್ನಿಸಿದ್ದಾರೆ. ಐತಿಹಾಸಿಕ ವಿವರಗಳು ಎಲ್ಲಾ ಓದುಗರಿಗೂ ಬೇಕಾಗದಿರಬಹುದು. ಆದ್ದರಿಂದ ಪ್ರವಾಸ ಕೃತಿಯೊಳಗೆ ಐತಿಹಾಸಿಕ ವಿವರಗಳನ್ನು ಅಗತ್ಯಕ್ಕೆ ತಕ್ಕಷ್ಟು ಬಳಸಿಕೊಳ್ಳಬೇಕೇ ಹೊರತು ಕೃತಿಯ ಹೆಚ್ಚು ಭಾಗವನ್ನು ಆಕ್ರಮಿಸಿಕೊಳ್ಳಬಾರದು. ಯಾವುದೇ ದೇಶದ ಪ್ರವಾಸಿ ಸ್ಥಳಕ್ಕೆ ಹೊರಟಾಗ ಆ ಸ್ಥಳದ ಇತಿಹಾಸವನ್ನು ತಿಳಿದು ಹೋಗುವುದರಿಂದ ಆ ಸ್ಥಳದ ಬಗ್ಗೆ ಮತ್ತಷ್ಟು ಆಸಕ್ತಿ ಉಂಟಾಗಲು, ಹೆಚ್ಚಿನ ತಿಳಿವಳಿಕೆ ಪಡೆಯಲು, ಸಂಶೋಧನಾ ಮನೋಭಾವದಿಂದ ಕಾಣಲು, ಬೇರೆಯವರಿಗೆ ಸೂಕ್ತವಾಗಿ ಮಾಹಿತಿ ನೀಡಲು ಸಾಧ್ಯವಾಗುತ್ತದೆ. ಆದರೆ ಪ್ರವಾಸ ಕೃತಿಯೊಳಗೆ ಚಾರಿತ್ರಿಕ

ಅಂಶಗಳನ್ನು ವಿಪರೀತವಾಗಿ ಸೇರಿಸುವುದರಿಂದ ಕೆಲವೊಮ್ಮೆ ಕೃತಿಯ ಬಂಧಕ್ಕೆ ಧಕ್ಕೆ ಬರುವ ಸಾಧ್ಯತೆ ಹೆಚ್ಚಿರುತ್ತದೆ. ಪ್ರವಾಸ ಕೃತಿಗಳು ಓದುಗರಲ್ಲಿ ತಿಳಿವಳಿಕೆಯನ್ನು ಮೂಡಿಸಿ, ಆ ಸ್ಥಳಕ್ಕೆ ಭೇಟಿ ನೀಡಲು ಪ್ರಚೋದನೆಯನ್ನು ಉಂಟುಮಾಡುವಂತಿದ್ದರೆ ಕೃತಿಯು ಸಾರ್ಥಕತೆಯನ್ನು ಗಳಿಸುತ್ತದೆ. ಇಂದಿರಾ ಶಿವಣ್ಣ ಅವರ ಕೃತಿಯು ಈ ದಿಸೆಯಲ್ಲಿ ಪ್ರಯತ್ನಶೀಲವಾಗಿದೆ ಎನಿಸುತ್ತದೆ.

ಲತಾ ಗುತ್ತಿ ಅವರು ತಮ್ಮ ಪ್ರವಾಸ ಕೃತಿಯಲ್ಲಿ ಚಾರಿತ್ರಿಕ ದೃಷ್ಟಿಕೋನದ ನೆಲೆಯಲ್ಲಿ ಅನುಭವಗಳನ್ನು ನಿರೂಪಿಸಿದ್ದಾರೆ. ಚಾರಿತ್ರಿಕ ಘಟನೆಗಳೊಂದಿಗೆ ಮುಖಾಮುಖಿಯಾಗುವ ಲೇಖಕಿಯು ಕೆಲವು ಘಟನೆಗಳೊಂದಿಗೆ ಸಂಘರ್ಷವನ್ನು, ಕೆಲವು ಘಟನೆಗಳೊಂದಿಗೆ ಸಾಮರಸ್ಯತೆಯ ಭಾವವನ್ನು ಪ್ರಕಟಿಸಿದ್ದಾರೆ. ಹಿಟ್ಲರ್‌ನ ನಾಜಿ ಸೈನ್ಯವು ನಡೆಸಿದ ಕೃತ್ಯಗಳನ್ನು ನಿರೂಪಿಸುವಾಗ ಸಂಘರ್ಷಭಾವದೊಂದಿಗೆ ಅಭಿಪ್ರಾಯ ವ್ಯಕ್ತವಾಗಿದೆ. ಐತಿಹಾಸಿಕ ಕಟ್ಟಡಗಳನ್ನು ವಿವರಿಸುವಾಗ ವಾಸ್ತು ಶಿಲ್ಪದ ಪ್ರಜ್ಞೆ, ಶಿಲ್ಪ ಪ್ರತಿಮಾ ಶಾಸ್ತ್ರದ ಜ್ಞಾನದೊಂದಿಗೆ ಸಾಮರಸ್ಯತೆಯಿಂದ ಮುಖಾಮುಖಿಯಾಗಿದ್ದಾರೆ.

ಪ್ರವಾಸ ಕೃತಿಗಳಲ್ಲಿ ಪ್ರಚಲಿತ ಘಟನೆಗಳ ದಾಖಲು : ಪ್ರವಾಸ ಕೃತಿಗಳು ಇತಿಹಾಸವನ್ನು ನಿರ್ವಚಿಸುವಲ್ಲಿ ದಾಖಲೆಗಳಾಗಿ ಬಳಕೆಯಾಗುತ್ತವೆ. ಏಕೆಂದರೆ ಪ್ರವಾಸ ಸಾಹಿತ್ಯವು 'ಕಣ್ಣಿವರ ದಾಖಲೆ'ಯಾಗಿದೆ. ತಾವು ನೋಡಿದ್ದನ್ನು ಕೃತಿಯಲ್ಲಿ ದಾಖಲಿಸಿರುತ್ತಾರೆ. ಉದಾಹರಣೆಗೆ ಆರ್. ಎಸ್. ನಾರಾಯಣರಾವ್ ಅವರ 'ಪ್ರಭುವರ್ಯರ ಯೂರೋಪ್ ಪ್ರವಾಸ' ಕೃತಿಯಲ್ಲಿನ ಒಂದು ಘಟನೆಯನ್ನು ಉಲ್ಲೇಖಿಸಬಹುದು. ನಾಲ್ವಡಿ ಕೃಷ್ಣರಾಜ ಒಡೆಯರು ಇಂಗ್ಲೆಂಡಿನಲ್ಲಿದ್ದಾಗ, ೧೯೩೬ರ ಜುಲೈ ೧೬ರಂದು ಬ್ರಿಟನ್ನಿನ ರಾಜ ಎಡ್ವರ್ಡ್ ಅವರು ಪ್ರಾತಃಕಾಲದಲ್ಲಿ ಮೆರವಣಿಗೆ ಹೋಗುತ್ತಿದ್ದಾಗ 'ಮ್ಯಾಕ್‌ಮಹೋನ್' ಎಂಬಾತ ಅವರೆಡೆಗೆ ರಿವಾಲ್ವರನ್ನು ಎಸೆಯುತ್ತಾನೆ. ರಾಜರಿಗೆ ಏನು ಆಗುವುದಿಲ್ಲ. ಮ್ಯಾಕ್ ಮಹೋನ್‌ನನ್ನು ದಸ್ತಗಿರಿ ಮಾಡಲಾಗುತ್ತದೆ. ಈ ಘಟನೆಯನ್ನು ಪ್ರವಾಸ ಕೃತಿಯಲ್ಲಿ ದಾಖಲಿಸಲಾಗಿದೆ. ಚರಿತ್ರೆಯನ್ನು ನಿರ್ವಚಿಸುವಲ್ಲಿ ಈ ಮಾಹಿತಿಯನ್ನು ಆನುಷಂಗಿಕ ದಾಖಲೆಯಾಗಿ ಬಳಸಿಕೊಳ್ಳಬಹುದಾಗಿದೆ.

ಆರ್. ಎಸ್. ನಾರಾಯಣರಾವ್ ಅವರು ಈ ಐತಿಹಾಸಿಕ ಘಟನೆಯನ್ನು ದಾಖಲಿಸಿದ ಬಳಿಕ ಘಟನೆಯ ಬಗೆಗೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಸೆರೆಯಾದ ಮ್ಯಾಕ್ ಮಹೋನ್‌ನ ಬಗ್ಗೆಯಾಗಲಿ, ಅಲ್ಲಿನ ಜನರ ಪ್ರತಿಕ್ರಿಯೆಗಳ ಬಗ್ಗೆಯಾಗಲಿ ಅಥವಾ ರಾಜರು ವ್ಯಕ್ತಪಡಿಸಿದ ಅಭಿಪ್ರಾಯವನ್ನಾಗಲಿ ಉಲ್ಲೇಖಿಸಿರುವುದಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ತಟಸ್ಥಭಾವವನ್ನು ತಾಳಿದ್ದಾರೆ. ಈ ಭಾಗದಲ್ಲಿ ಲೇಖಕರು ಚಾರಿತ್ರಿಕ ಘಟನಾವಳಿಗಳೊಂದಿಗೆ ಮುಖಾಮುಖಿಯಾದಾಗ ವಾಸ್ತವ ಪ್ರಜ್ಞೆಯನ್ನು ಹೊಂದಿರುವ ಚಾರಿತ್ರಿಕ ಮನೋಭಾವವು ಯಾವ ರೀತಿಯಲ್ಲಿ ಸ್ಪಂದಿಸಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಕಾರಂತರು ಮಿಲಾನ್ ನಗರದಲ್ಲಿನ 'ಡುಮೋ' ಎಂಬ ಕೆಥೆಡ್ರಲ್‌ಗೆ ಸಂಬಂಧಿಸಿದ ಐತಿಹಾಸಿಕ ಸಂಗತಿಗಳನ್ನು ದಾಖಲಿಸಿದ್ದಾರೆ. ಡುಮೋ ಕೆಥೆಡ್ರಲ್‌ನ್ನು ಹದಿಮೂರನೇ ಶತಮಾನದಲ್ಲಿ ಕಟ್ಟಲು ಪ್ರಾರಂಭಿಸಿದರು. ಹತ್ತೊಂಬತ್ತನೆಯ ಶತಮಾನದವರೆಗೆ ಈ ಕೆಥೆಡ್ರಲ್‌ನ ನಿರ್ಮಾಣ ಕಾರ್ಯ ನಡೆಯುತ್ತಲೇ ಇತ್ತು. ಆರು ಶತಮಾನಗಳಿಂದ ನಿರ್ಮಾಣಗೊಳ್ಳುತ್ತಿದ್ದ ಈ ಕೆಥೆಡ್ರಲ್‌ನ ಬಗ್ಗೆ ಆಸಕ್ತಿ ಮೂಡಿದ ಕಾರಣದಿಂದ ಅದರ ಐತಿಹಾಸಿಕ ಸಂಗತಿಗಳನ್ನು ಉಲ್ಲೇಖಿಸಿದ್ದಾರೆ. ಈ ಡುಮೋ ಕೆಥೆಡ್ರಲ್‌ನ ಇತಿಹಾಸದ ಬಗ್ಗೆ ಅಂತರ್ಜಾಲದಲ್ಲಿ ಪರಿಶೀಲಿಸಿದಾಗ ೧೨೦೬ರಲ್ಲಿ ನಿರ್ಮಾಣ ಕಾರ್ಯ ಆರಂಭಗೊಂಡು, ಅದನ್ನು ೧೯೬೫

ರಲ್ಲಿ ಪೂರ್ಣಗೊಳಿಸಿದರೆಂಬ ಮಾಹಿತಿ ತಿಳಿಯಿತು. ಕಾರಂತರು ೧೯೫೩ರಲ್ಲಿ ಈ ಕೆಥೆಡ್ರಲ್‌ಗೆ ಭೇಟಿ ನೀಡಿದಾಗ ಇನ್ನೂ ನಿರ್ಮಾಣ ಹಂತದಲ್ಲಿತ್ತೆಂದು ಹೇಳಿದ್ದಾರೆ. ಪ್ರವಾಸ ಕೃತಿಯು ಅಂದಿನ ಘಟನೆಯ ದಾಖಲೆಗೆ ಸಹಕಾರಿಯಾಗಿರುವುದನ್ನು ಗುರುತಿಸಲಾಗಿದೆ. ಒಂದು ಬೃಹತ್ತಾದ ಐತಿಹಾಸಿಕ ಚರ್ಚಿನ ನಿರ್ಮಾಣಕ್ಕೆ ಪ್ರವಾಸ ಕೃತಿಯ ಉಲ್ಲೇಖವು ಪ್ರಮಾಣವಾಗಿ ನಿಲ್ಲುತ್ತದೆ. ಕಾರಂತರು ಡುಮೋ ಕೆಥೆಡ್ರಲ್‌ನ ಬಗ್ಗೆ ಐತಿಹಾಸಿಕ ವಿವರಗಳನ್ನು ದಾಖಲಿಸಲು ಬೃಹತ್ತಾದ ಕಲಾಶಿಲ್ಪವೇ ಪ್ರೇರಣೆಯಾಗಿರುವುದನ್ನು ಗುರುತಿಸಬಹುದು.

ಶ್ರೀರಂಗರಾಜು ಅವರಿಗೆ ದಿನಾಂಕ ೬-೬-೧೯೬೭ರಂದು ಇಸ್ರೇಲ್ ದೇಶವು ಈಜಿಪ್ಟ್ ದೇಶದ ಮೇಲೆ ಯುದ್ಧ ಘೋಷಣೆ ಮಾಡಿದ ಸಂಗತಿಯು ಪಕ್ಕದ ಕೊಠಡಿಯಲ್ಲಿದ್ದ ಇಬ್ಬರು ಈಜಿಪ್ಟ್ ದೇಶದ ಪ್ರಜೆಗಳಿಂದ ತಿಳಿಯುತ್ತದೆ. ಈ ಸಂಗತಿಯನ್ನು ಲೇಖಕರು ಕೃತಿಯಲ್ಲಿ ದಾಖಲಿಸಿದ್ದಾರೆ. ಐತಿಹಾಸಿಕ ನಿರ್ವಚನೆಯಲ್ಲಿ ಈ ಉಲ್ಲೇಖವು ಆನುಷಂಗಿಕ ದಾಖಲೆಯಾಗಿದೆ. ೧೯೪೫ರಲ್ಲಿ ಎರಡನೇ ವಿಶ್ವಯುದ್ಧ ಮುಗಿದ ಬಳಿಕ ವಿಶ್ವ ಸಂಸ್ಥೆ ಸ್ಥಾಪನೆಯಾಗಿದೆ. ಇದರ ಮೂಲಕ ವಿಶ್ವಶಾಂತಿಯ ಸ್ಥಾಪನೆಗೆ ಪ್ರಯತ್ನಗಳು ನಡೆಯುತ್ತಿರುತ್ತದೆ. ಆ ಸಮಯದಲ್ಲಿ ವಿಶ್ವದ ಬಹುತೇಕ ದೇಶಗಳು ಯುದ್ಧಗಳಾಗುವುದನ್ನು ವಿರೋಧಿಸುತ್ತವೆ. ಎರಡನೇ ಮಹಾಯುದ್ಧದಿಂದಾದ ದುರಂತಗಳು ಎಲ್ಲರಲ್ಲಿಯೂ ಒಂದು ಬಗೆಯ ಭಯಮಿಶ್ರಿತ ಧೋರಣೆಗಳನ್ನು ಉಂಟುಮಾಡಿರುತ್ತದೆ. ಆದಕಾರಣ ಶ್ರೀರಂಗರಾಜು ಅವರ ಉಲ್ಲೇಖದಲ್ಲಿಯೂ ಯುದ್ಧದ ಬಗ್ಗೆ ವಿರೋಧಿ ಭಾವನೆ ವ್ಯಕ್ತವಾಗಿರುವುದನ್ನು ಗುರುತಿಸಲಾಗಿದೆ. ಜಾಗತಿಕ ವಿದ್ಯಮಾನಗಳು ಪ್ರವಾಸ ಕೃತಿಯ ನಿರೂಪಣೆಯ ಮೇಲೆ ಪ್ರಭಾವ ಬೀರುವುದನ್ನು ಕಾಣಲಾಗಿದೆ.

ಲತಾ ಗುತ್ತಿ ಅವರು ಉಲ್ಲೇಖಿಸಿರುವ ಪ್ಯಾರಿಸ್ಸಿನಲ್ಲಿ ಘಟಿಸಿದ 'ಬಿರೂಟ್ ಉಗ್ರಗಾಮಿಗಳ ಬಾಂಬ್ ಬ್ಲಾಸ್ಟ್' ಪ್ರಕರಣವು ಜಾಗತಿಕ ವಿದ್ಯಮಾನಕ್ಕೆ ಪ್ರತಿಸ್ಪಂಧಿಸಿದ ಧೋರಣೆಯೇ ಆಗಿದೆ. ಲತಾ ಗುತ್ತಿ ಅವರು ದುರ್ಘಟನೆ ನಡೆದ ಸಮಯದಲ್ಲಿ ಪ್ಯಾರಿಸ್ ನಗರದಲ್ಲಿಯೇ ಇದ್ದುದರಿಂದ ಅವರ ಆತಂಕ ಇಮ್ಮಡಿಯಾಗಿತ್ತು. ಆದ್ದರಿಂದ ಪ್ರಚಲಿತ ಘಟನೆಯ ನಿರೂಪಣೆಯು ಭಯಮಿಶ್ರಿತ ಧಾಟಿಯಲ್ಲಿ ವ್ಯಕ್ತವಾಗಿದೆ. ಪ್ಯಾರಿಸ್ಸಿಗೆ ಪ್ರವಾಸ ಹೋಗಲು ಬಯಸುವವರ ಮೇಲೆ ಈ ದುರ್ಘಟನೆಯು ಋಣಾತ್ಮಕ ಪ್ರಭಾವವನ್ನು ಬೀರಿರಬಹುದೇ ಎಂಬುದನ್ನು ಪರಿಕ್ಷಿಸಲಾಗಿ, ಈ ಘಟನೆ ನಡೆದ ಬಳಿಕವು ಪ್ಯಾರಿಸ್ಸಿಗೆ ಪ್ರವಾಸ ಹೋಗುವವರ ಸಂಖ್ಯೆಯಲ್ಲಿ ಕಡಿಮೆಯಾಗಿಲ್ಲದಿರುವುದು ತಿಳಿದುಬರುತ್ತದೆ. ಉಗ್ರಗಾಮಿಗಳ ಭಯೋತ್ಪಾದನಾ ಕೃತ್ಯಗಳು ಇಡೀ ವಿಶ್ವವನ್ನೇ ಬಾಧಿಸುತ್ತಿದೆ. ಆದರೆ ಯುರೋಪ್ ಪ್ರವಾಸಕ್ಕೆ ತೆರಳುವವರ ಮೇಲೆ ಅದರ ಪರಿಣಾಮ ಕನಿಷ್ಠವಾಗಿದೆ.

ಪ್ರಭಾಕರ ಶಿಶಿಲ ಅವರು ಫ್ರಾನ್ಸ್ ಪ್ರವಾಸದಲ್ಲಿದ್ದ ಸಂದರ್ಭದಲ್ಲಿ ಭಾರತದ ಶ್ರೀನಗರದಲ್ಲಿ ಶಂಕಿತ ಉಗ್ರರಿಂದ ದಾಳಿಯಾದ ಘಟನೆಯನ್ನು ಉಲ್ಲೇಖಿಸಿದ್ದಾರೆ. ಈ ಘಟನೆಗೆ ಲತಾ ಗುತ್ತಿ ಅವರ ಅಥವಾ ಶ್ರೀರಂಗರಾಜು ಅವರ ಚಾರಿತ್ರಿಕ ಉಲ್ಲೇಖಗಳಿಗಿಂತ ಭಿನ್ನವಾದ ಆಯಾಮವಿದೆ. ಲೇಖಕರಿಗೆ ಈ ಘಟನೆಯನ್ನು ಕೃತಿಯೊಳಗೆ ಉಲ್ಲೇಖಿಸಲು ರಾಷ್ಟ್ರೀಯಪ್ರಜ್ಞೆ ಪ್ರೇರಣೆಯಾಗಿದೆ. ನಮ್ಮ ದೇಶಗಳಲ್ಲಿ ನಡೆವ ದುರ್ಘಟನೆಗಳು, ಸಾವು-ನೋವುಗಳು ನಮ್ಮ ಮನಸ್ಸನ್ನು ಹಿಡಿದಿಡುತ್ತವೆ. ಮತ್ತು ಒಂದು ಬಗೆಯ ವೇದನೆಗೆ ಎಡೆಮಾಡಿಕೊಡುತ್ತವೆ. ಅದನ್ನು ಪ್ರವಾಸ ಕೃತಿಯಲ್ಲಿ ದಾಖಲಿಸಲು ಲೇಖಕರ ರಾಷ್ಟ್ರೀಯಪ್ರಜ್ಞೆ ಕಾರಣವಾಗಿದೆ.

ಜಿ. ಗೋಪಾಲ್ ಅವರು ತಾವು ಇಂಗ್ಲೆಂಡಿನಲ್ಲಿದ್ದಾಗ ಆಗಿನ ಭಾರತದ ಪ್ರಧಾನಿ 'ಇಂದಿರಾಗಾಂಧಿ' ಅವರು ಲಂಡನ್‌ನ ವೈ.ಎಂ.ಸಿ.ಎಗೆ ಭೇಟಿ ಕೊಟ್ಟ ಬಗ್ಗೆ ದಾಖಲಿಸಿದ್ದಾರೆ. ಲೇಖಕರು ಉಲ್ಲೇಖಿಸಿರುವ ಘಟನೆಗೆ ಅಂತರಾಷ್ಟ್ರೀಯವಾಗಿ ಮತ್ತು ದೇಶಿಯವಾಗಿ ಎರಡು ಆಯಾಮಗಳಿವೆ. ಅಂದು ನಡೆದ ಈ ಐತಿಹಾಸಿಕ ಘಟನೆಯನ್ನು ಲೇಖಕರು ದಾಖಲಿಸಿದ್ದರಿಂದ ಭಾರತ–ಪಾಕಿಸ್ತಾನ ದೇಶಗಳ ನಡುವೆ ಅಂದಿನ ರಾಜಕೀಯ ಸಂಬಂಧದ ಬಗ್ಗೆ ವಿವೇಚಿಸಲು ಸಹಾಕಾರಿಯಾಗುತ್ತದೆ. ಪಾಕಿಸ್ತಾನದೊಂದಿಗಿನ ನಮ್ಮ ಭಿನ್ನಮತವು ಯುರೋಪಿನ ದೇಶಗಳಲ್ಲಿಯೂ ಧ್ವನಿಸುತ್ತಿತ್ತು ಎಂಬುದನ್ನು ತೋರಿಸಿದೆ. ಮತ್ತು ದೇಶೀಯ ನೆಲೆಯಲ್ಲಿ ಒಂದು ಕಾಲದಲ್ಲಿ ಇಂಗ್ಲೆಂಡಿನ ವಸಾಹತುವಾಗಿದ್ದ ಭಾರತದಲ್ಲಿ ಮಹಿಳೆ ಪ್ರಧಾನಿಮಂತ್ರಿಯಾಗಿರುವುದು, ಇಂಗ್ಲೆಂಡಿನಲ್ಲಿರುವ ನೆಲೆಸಿದ್ದ ಭಾರತೀಯರಿಗೆ ಗರ್ವದ ಸಂಗತಿಯಾಗಿತ್ತು. ಭಾರತದ ಬಗ್ಗೆ ಒಂದು ಬಗೆಯ ಮಹಾತ್ವಾಕಾಂಕ್ಷೆಯನ್ನು ತುಂಬುವ ಕೆಲಸವಾಗಿರುವುದು ಲೇಖಕರ ಅಭಿಪ್ರಾಯದಲ್ಲಿ ಕಂಡುಬರುತ್ತದೆ.

ಪ್ರವಾಸ ಕೃತಿಗಳಲ್ಲಿ ನೈಜ ಘಟನೆಗಳು ಪ್ರವಾಸಿ ಲೇಖಕನ ಚಾರಿತ್ರಿಕ ದೃಷ್ಟಿಕೋನದ ಕಾರಣದಿಂದ ದಾಖಲಾಗುತ್ತದೆ. ಲೇಖಕರು ತನ್ನ ಸುತ್ತಮುತ್ತಲಿನ ಸಮಾಜದಲ್ಲಿ ನಡೆಯುವ ಘಟನೆಗಳ ಪ್ರಭಾವದಿಂದ ಸಂವೇದನೆಗೆ ಒಳಗಾಗುತ್ತಾನೆ. ಈ ಬಗೆಯ ಸಂವೇದನೆಗೆ ಒಳಗಾಗುವ ಲೇಖಕ ಘಟನೆಯೊಂದಿಗೆ ಮುಖಾಮುಖಿಯಾಗುತ್ತಾನೆ. ಆ ಘಟನೆಯನ್ನು ತನ್ನ ಮಾನಸಿಕ ತಲ್ಲಣಗಳ ಹಿನ್ನೆಲೆಯಲ್ಲಿ ದಾಖಲಿಸುತ್ತಾನೆ. ಈ ಬಗೆಯ ಚಾರಿತ್ರಿಕ ವಿವರಗಳು ಆಯಾ ಕಾಲದ ಸಮಾಜದ ವಸ್ತುಸ್ಥಿತಿಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗುತ್ತದೆ.

೪. ೨. ಸ್ಥಳ ಚರಿತ್ರೆಯ ವಿವಿಧ ಆಯಾಮಗಳು

ಪ್ರತಿಯೊಬ್ಬ ಪ್ರವಾಸಿ ಲೇಖಕನಿಗೂ ಅವನದೇ ಆದ ಸಾಹಿತ್ಯಿಕ ವರ್ಚಸ್ಸು (ಸಾಮರ್ಥ್ಯ, ಪ್ರಭಾವ) ಇರುತ್ತದೆ. ಬರೆವಣಿಗೆಯಲ್ಲಿ ಬಳಸುವ ಭಾಷೆ, ಕಥನ ವಿಧಾನ, ಚಿಂತನೆಗಳ ಮೂಲಕ ಆ ವರ್ಚಸ್ಸು ವ್ಯಕ್ತವಾಗುತ್ತದೆ. ಒಂದು ಪ್ರೇಕ್ಷಣೀಯ ಸ್ಥಳ ಬೇರೆ ಬೇರೆ ಲೇಖಕರಿಗೆ ಬೇರೆ ಬೇರೆ ರೀತಿಯಲ್ಲಿ ಪ್ರಚೋದಿಸುತ್ತದೆ. ಲೇಖಕರ ವೈಯಕ್ತಿಕ ಭಿನ್ನತೆಯೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಆದ್ದರಿಂದ ಪ್ರತಿಯೊಬ್ಬ ಲೇಖಕರಿಗೂ ಕಂಡ ಸ್ಥಳಗಳು ಬೇರೆ ಬೇರೆ ರೀತಿಯಲ್ಲಿ/ಪ್ರಮಾಣದಲ್ಲಿ ಪ್ರಚೋದನೆಯನ್ನು ಉಂಟು ಮಾಡುತ್ತದೆ. ಅವುಗಳನ್ನು ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಆಯಾಮ ಎಂದರೆ 'ಹರಹು' 'ವಿಸ್ತಾರ' ಎಂಬ ಅರ್ಥದ ಮೂಲಕ ಚಾರಿತ್ರಿಕ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಪ್ರವಾಸಿ ಲೇಖಕನಿಗೆ ಆ ಸ್ಥಳವು ಕಂಡ ರೀತಿ, ಅದರ ಆಯಾಮವನ್ನು ಅವರ ವರ್ಚಸ್ಸಿನಲ್ಲಿ ಕಾಣಬಹುದು. ಪ್ರವಾಸಿ ಲೇಖಕರು ಭೇಟಿ ಮಾಡಿದ ಸ್ಥಳ ಒಂದೇ ಆಗಿದ್ದರೂ ಆ ಸ್ಥಳದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಭಿನ್ನವಾಗಿರಲು ಅವರ ದೃಷ್ಟಿಕೋನ ಕಾರಣವಾಗಿರುತ್ತದೆ. ಆದ್ದರಿಂದ ಒಂದು ಸ್ಥಳದ ಬಗ್ಗೆ ಹಲವು ಲೇಖಕರ ಅಭಿಪ್ರಾಯಗಳು ಸೇರಿ ಬಹುಮುಖಿ ಆಯಾಮಗಳ ಮೂಲಕ ಆ ಸ್ಥಳವನ್ನು ಕಾಣಲು ಸಾಧ್ಯವಾಗುತ್ತದೆ. ಈ ಉಪ ಶೀರ್ಷಿಕೆಯಡಿಯಲ್ಲಿ ಸ್ಥಳಗಳ ಚರಿತ್ರೆಯನ್ನು ಪ್ರಸ್ತಾಪಿಸುವ ಲೇಖಕರ ವಿವಿಧ ದೃಷ್ಟಿಕೋನಗಳನ್ನು ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಮೂಲಕ ಅಧ್ಯಯನ ಮಾಡಲಾಗುತ್ತದೆ.

ಬರ್ಲಿನ್ : ೧೯೬೧ರಲ್ಲಿ ಪೂರ್ವ ಬರ್ಲಿನ್ ಮತ್ತು ಪಶ್ಚಿಮ ಬರ್ಲಿನ್ ನಡುವೆ ಗೋಡೆಯನ್ನು ನಿರ್ಮಿಸಲಾಗಿತ್ತು. ಶ್ರೀರಂಗ ಅವರು 'ಬರ್ಲಿನ್ ಗೋಡೆ'ಯ ಇತಿಹಾಸವನ್ನು ನಿರೂಪಿಸುವಾಗ ಭಾವನಾತ್ಮಕವಾದ ವಿಚಾರಗಳನ್ನು ಹಂಚಿಕೊಳ್ಳಲು ಪ್ರೇರಣೆಯಾಗಿದೆ. ಗೋಡೆ ನಿರ್ಮಾಣದಿಂದ ಒಂದೇ ಕುಟುಂಬದವರು ಮತ್ತು ಅವರ ಬಂಧುಗಳು ಎರಡು ಕಡೆ ಹಂಚಿಹೋಗಿದ್ದಾರೆ. ಪೂರ್ವ ಜರ್ಮನಿಯಲ್ಲಿರುವ ತಮ್ಮ ಬಂಧುಗಳನ್ನು ಕಾಣಲಾಗದೆ ಪಶ್ಚಿಮ ಜರ್ಮನಿಯಲ್ಲಿರುವವರು ತವಕಪಡುತ್ತಿರುವ ಕುಟುಂಬಗಳ ಜನರ ಮೂಕವೇದನೆಯನ್ನು ಕಂಡು ಭಾವಪರವಶರಾಗಿ ನಿರೂಪಿಸಿದ್ದಾರೆ. ರಾಷ್ಟ್ರ ರಾಜಕಾರಣದ ನಿಲುವುಗಳಿಗೆ ಸಾಮಾನ್ಯ ಜನರು ನೋವಿಗೆ ಒಳಪಡಬೇಕಾದ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆ. ಗೋಡೆಯು ಕೇವಲ ಐತಿಹಾಸಿಕ ಘಟನೆಗೆ ಮಾತ್ರ ಸಾಕ್ಷಿಯಾಗಿ ಉಳಿದಿಲ್ಲ. ಬದಲಿಗೆ ಹೃದಯಗಳ ನಡುವೆಯೂ, ಸಂಬಂಧಗಳ ನಡುವೆಯೂ ಗೋಡೆ ನಿರ್ಮಾಣಗೊಂಡಿರುವಂತೆ ಲೇಖಕರಿಗೆ ಭಾಸವಾಗುತ್ತದೆ. ಚಾರಿತ್ರಿಕ ನಿರೂಪಣೆಯು ಭಾವನೆಗಳೊಂದಿಗೆ ಬೆಸೆದುಕೊಂಡಾಗ ಭಾವನಾತ್ಮಕ ಆಯಾಮವನ್ನು ಪಡೆದುಕೊಳ್ಳುತ್ತದೆ.

ಮೂಜಗಂ ಅವರಿಗೆ ಬರ್ಲಿನ್ 'ದುರ್ದೈವದ ನಗರ'ವಾಗಿ ಕಾಣುತ್ತದೆ. ಕಾರಣ ಬರ್ಲಿನ್ ನಗರವನ್ನು ಯುದ್ಧದ ದುಷ್ಪರಿಣಾಮಗಳ ಹಿನ್ನೆಲೆಯಲ್ಲಿ ನೋಡಿದ್ದಾರೆ. 'ತರುಣರೆಲ್ಲಾ ಮಡಿದು ಕೇವಲ ಮುದುಕರಿದ್ದಾರೆ' ಎನ್ನುವ ಮೂಲಕ ಐತಿಹಾಸಿಕ ಸ್ಥಳ ಬರ್ಲಿನ್ ಲೇಖಕರಿಗೆ ಪ್ರಪಂಚಕ್ಕೆ ಶಾಂತಿಯ ಅಗತ್ಯವನ್ನು ತೋರುವ ನಗರವಾಗಿ ಕಾಣಿಸುತ್ತದೆ. ಲೇಖಕರ ವೃತ್ತಿ ಮತ್ತು ಸ್ಥಾನಗಳು ಪ್ರವಾಸಿ ಸ್ಥಳಗಳ ಗ್ರಹಿಸುವಿಕೆಯ ಮೇಲೆ ಪ್ರಭಾವ ಬೀರುತ್ತವೆ. ಮೂಜಗಂ ಅವರು ಹುಬ್ಬಳ್ಳಿಯ ಸಾವಿರಮಠದ ಸ್ವಾಮಿಗಳಾಗಿದ್ದಾರೆ. ಅವರಿಗೆ ಬರ್ಲಿನ್ ಶಾಂತಿ ಸಂದೇಶವನ್ನು ಸಾರುವ ನಗರವಾಗಿ ಕಾಣುತ್ತದೆ. "ಮಾನವ ಮಾನವನನ್ನು ನಂಬದಿರುವಾಗ ಅಶಾಂತಿ ತಾಂಡವವಾಡುತ್ತದೆ. ನಾವು ನಮ್ಮ ಆತ್ಮವನ್ನೇ ವಂಚಿಸಿದಾಗ ಇಂಥ ಪಾಶವೀ ಕೃತ್ಯಗಳು ಜರುಗುತ್ತವೆ. ಆದ್ದರಿಂದ ಲೋಕಶಾಂತಿ ಸ್ಥಾಪಿತವಾಗಬೇಕಾದರೆ ಆತ್ಮಶಾಂತಿ ಅವಶ್ಯ"(ಮೂಜಗಂ., ನಮ್ಮ ವಿದೇಶ ಯಾತ್ರೆ., ಪು–೧೧೫)ಎಂದಿದ್ದಾರೆ. ಎರಡನೇ ಮಹಾಯುದ್ಧದ ಪರಿಣಾಮಗಳನ್ನು ಬರ್ಲಿನ್ ನಗರದಲ್ಲಿ ಕಾಣುತ್ತಾರೆ. ಬಾಂಬುಗಳ ದಾಳಿಗೆ ಸಿಲುಕಿದ ಚರ್ಚುಗಳ ಮೇಲಿನ ಗುರುತುಗಳನ್ನು ಕಂಡು ಸ್ಪಂದಿಸಿದ್ದಾರೆ.

ಶ್ರೀರಂಗ ಅವರಿಗೆ ಬರ್ಲಿನ್ ನಗರವನ್ನು ಇಬ್ಭಾಗ ಮಾಡಿದ ಗೋಡೆಯೇ ಪ್ರಮುಖವಾಗಿ ಕಂಡಿದೆ. ಮೂಜಗಂ ಅವರಿಗೆ ಯುದ್ಧಕ್ಕೆ ತುತ್ತಾದ ಇಡೀ ಬರ್ಲಿನ್ ನಗರದ ದುರ್ವ್ಯವಸ್ಥೆ ಪ್ರಮುಖವಾಗಿ ಕಂಡಿದೆ. ಇಬ್ಬರು ಲೇಖಕರು ಭೇಟಿ ಮಾಡಿದ ಸ್ಥಳ ಒಂದೇ ಆದರೂ ಇಬ್ಬರ ವಿಶ್ಲೇಷಣೆಗಳು ಬೇರೆಯಾಗಲು ವ್ಯಕ್ತಿತ್ವಗಳಲ್ಲಿನ ಭಿನ್ನತೆ ಕಾರಣವಾಗಿದೆ. ನಾಟಕಕಾರರಾದ ಶ್ರೀರಂಗರಿಗೂ, ಮಠದ ಸ್ವಾಮಿಗಳಾದ ಮೂಜಗಂ ಅವರಿಗೂ ಅವರ ಹಿನ್ನೆಲೆಗಳು ರೂಪಿಸಿದ ಸಾಂಸ್ಕೃತಿಕ ಅಂಶಗಳು ಮತ್ತು ಅವರನ್ನು ಪ್ರಭಾವಿಸಿದ ಸಾಮಾಜಿಕ ಸ್ಥಿತಿಗತಿಗಳು ಸದರಿ ದೃಷ್ಟಿಕೋನದೊಳಗಿನ ಭಿನ್ನತೆಗೆ ಕಾರಣವಾಗಿದೆ.

ಕೊಹಿನೂರು ವಜ್ರ : ಅನುಪಮಾ ನಿರಂಜನ ಅವರಿಗೆ ನಮ್ಮ ಭಾರತದ ಸಂಪತ್ತಿನ ಸಂಕೇತವಾದ ಕೊಹಿನೂರು ವಜ್ರವು ಇಂಗ್ಲೆಂಡಿನಲ್ಲಿ ಶಾಶ್ವತವಾಗಿ ನೆಲೆಸಿರುವುದು ವ್ಯಥೆಗೆ ಕಾರಣವಾಗಿದೆ. ಭಾರತ

ಸರಕಾರವು ಮರಳಿ ಪಡೆಯಲು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲವಲ್ಲ ಎಂಬ ಅಸಹನೆಯನ್ನು ಹೊರಹಾಕಿದ್ದಾರೆ. ಆದರೆ ಕೊಹಿನೂರು ವಜ್ರದ ಬಗೆಗಿನ ಐತಿಹಾಸಿಕ ವಿವರಗಳನ್ನು ಉಲ್ಲೇಖಿಸಿರುವುದಿಲ್ಲ.

ಜಿ.ಎಸ್. ಶಿವರುದ್ರಪ್ಪ ಅವರು ಲಂಡನ್‌ನಲ್ಲಿರುವ ಟವರ್ ಗ್ರೀನ್‌ನ ವಜ್ರಾಭರಣಗಳ ರತ್ನ ಭಂಡಾರವನ್ನು ಕುರಿತು ವಿವರಿಸುವಾಗ ಬ್ರಿಟೀಷರು ದರೋಡೆಕೋರರಾಗಿಯೂ, ಅಂತರಾಷ್ಟ್ರೀಯ ಮಟ್ಟದಲ್ಲಿನ ಕಾನೂನುಬದ್ಧ ಕಳ್ಳರಾಗಿಯೂ ಕಾಣಿಸಿದ್ದಾರೆ. ಇಂಗ್ಲೆಂಡ್ ದೇಶದ ಶ್ರೀಮಂತಿಕೆಗೆ ಅವರು ಬೇರೆ ದೇಶಗಳನ್ನು ದೋಚಿರುವುದೇ ಕಾರಣ ಎನ್ನುವುದು ಅವರ ಅಭಿಪ್ರಾಯದ ಸಾರವಾಗಿದೆ. ಕೊಹಿನೂರು ವಜ್ರವನ್ನು ನೋಡಿದಾಗ ಲೇಖಕರಿಗೆ ಉಂಟಾದ ಭಾವವು ಬಂಡಾಯದ ನೆಲೆಯನ್ನು ಪಡೆದುಕೊಂಡಿದೆ. ಈ ಭಾವನೆಯು ಕೇವಲ ಕೊಹಿನೂರನ್ನು ಕಂಡಾಗ ಮಾತ್ರ ಮೂಡಿರುವುದು ವಿಚಾರಣೀಯವಾಗಿದೆ. ಏಕೆಂದರೆ ಇತರ ಸಂದರ್ಭಗಳಲ್ಲಿ ಅಂದರೆ ನಗರವನ್ನು, ಶಿಲಾ ಸ್ಮಾರಕಗಳನ್ನು, ವಸ್ತು ಸಂಗ್ರಹಾಲಯಗಳನ್ನು ಕಂಡಾಗ ಅಭಿವೃದ್ಧಿಯ ಬಗ್ಗೆ, ಸ್ವಚ್ಛತೆಯ ಬಗ್ಗೆ, ಅಲ್ಲಿನ ಪ್ರಜೆಗಳಿಗೆ ಸರಕಾರವು ಮಾಡಿಕೊಟ್ಟಿರುವ ಅನುಕೂಲಗಳ ಬಗ್ಗೆ ಹಾಗೂ ಇಂಗ್ಲೆಂಡ್ ಜನರ ಉದಾತ್ತ ಮನೋಭಾವದ ಬಗ್ಗೆ ಹೊಗಳಿಕೆಯ ಧೋರಣೆಯಲ್ಲಿಯೇ ವಿವರಗಳಿವೆ. ಮಗನಿಗೆ ಆಶ್ರಯ ನೀಡಿರುವ ದೇಶದ ಬಗ್ಗೆ ಒಬ್ಬ ತಂದೆಯಾಗಿ ಅಭಿಮಾನಪೂರ್ವಕವಾಗಿಯೇ ಮನೋಧೋರಣೆಯನ್ನು ತಾಳುವುದು ಮನೋವೈಜ್ಞಾನಿಕ ನೆಲೆಯಲ್ಲಿ ಸಹಜವಾದ ಕ್ರಿಯೆಯಾಗಿದೆ.

ಕೊಹಿನೂರು ವಜ್ರದ ಕುರಿತು ಹೇಮಲತಾ ಮಹಿಷಿ ಅವರ ಅಭಿಪ್ರಾಯವು ತಕ್ಕಮಟ್ಟಿಗೆ ಅನುಪಮಾ ನಿರಂಜನ ಅವರ ಅಭಿಪ್ರಾಯವನ್ನೇ ಹೋಲುತ್ತದೆ. ವ್ಯತ್ಯಾಸವೆಂದರೆ ಹೇಮಲತಾ ಮಹಿಷಿ ಅವರು ಕೊಹಿನೂರು ವಜ್ರದ ಇತಿಹಾಸವನ್ನು ಸವಿವರವಾಗಿ ಹೇಳಿದ್ದಾರೆ. ಲೇಖಕಿಗೆ ರಾಷ್ಟ್ರೀಯ ಪ್ರಜ್ಞೆಗೆ ಕಾರಣವಾಗುವ ಐತಿಹಾಸಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿ. ಆದ್ದರಿಂದಲೇ 'ಕೊಹಿನೂರ್ ವಜ್ರ'ದ ಇತಿಹಾಸವನ್ನು ಭಾರತೀಯತೆಯ ನೆಲೆಯಲ್ಲಿ ಹೇಳಿದ್ದಾರೆ. ಕೊಹಿನೂರು ವಜ್ರವನ್ನು ಪುನಃ ಭಾರತಕ್ಕೆ ತರಬೇಕು ಎಂಬ ಮನಸ್ಥಿತಿಯು ಪ್ರತಿಯೊಬ್ಬ ಭಾರತೀಯನದು ಎನಿಸುತ್ತದೆ. ಆದ್ದರಿಂದಲೇ ಲೇಖಕಿಯು "ಕೋಹಿನೂರ್ ವಜ್ರವನ್ನು ಹಿಂತಿರುಗಿ ಕೊಡುವಂತೆ ನಮ್ಮ ಸರ್ಕಾರ ಏಕೆ ಕೇಳುತ್ತಿಲ್ಲವೋ ತಿಳಿಯದು. ಭಯವೋ, ಅಲ್ಲಿದ್ದರೇ ಆ ವಜ್ರಕ್ಕೆ ಶೋಭೆಯೆಂಬ ಭಾವನೆಯೋ?"(ಹೇಮಲತಾ ಮಹಿಷಿ., ಯುರೋ–ದರ್ಶನ., ಪು–೫೪)ಎಂದು ಪ್ರಶ್ನಾರ್ಥಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೊಹಿನೂರು ವಜ್ರದ ಬಗೆಗಿನ ಈ ಮೂವರ ಅಭಿಪ್ರಾಯಗಳಲ್ಲಿ ಲಿಂಗಬೇಧ ಇರುವುದನ್ನು ಗುರುತಿಸಬಹುದು. ಶಿವರುದ್ರಪ್ಪ ಅವರ ಅಭಿಪ್ರಾಯದಲ್ಲಿ ಪುರುಷ ದೃಷ್ಟಿಕೋನವಿದೆ. ಆರೋಪ ಮಾಡಿರುವ ಧೋರಣೆಯು ಈ ಅಂಶವನ್ನು ಸೂಚಿಸುತ್ತದೆ. ಬ್ರಿಟೀಷರ ಶ್ರೀಮಂತಿಕೆಗೆ ಕಳ್ಳತನದ ಮಾರ್ಗವು ಕಾರಣ ಎಂಬ ಆರೋಪಿತ ಧ್ವನಿಯು ಪುರುಷ ನೆಲೆಯಲ್ಲಿ ವ್ಯಕ್ತವಾಗಿದೆ. ಹೇಮಲತಾ ಮಹಿಷಿ ಮತ್ತು ಅನುಪಮಾ ನಿರಂಜನ ಅವರ ಅಭಿಪ್ರಾಯವು ಮೃದು ಧೋರಣೆಯಿಂದ ಕೂಡಿದ್ದು, ಅಸಹಾಯಕತೆಯನ್ನು ವ್ಯಕ್ತಪಡಿಸಿದೆ. ಭಾರತೀಯ ಅಸ್ಮಿತೆಯ ಪ್ರತೀಕವಾಗಿ ಕಂಡ ಕೊಹಿನೂರು ವಜ್ರವು ಭಾರತದಲ್ಲಿರಬೇಕಿತ್ತು ಎಂತಲೂ, ಇಲ್ಲದುದಕ್ಕೆ ವ್ಯಥೆಯಾಯಿತು ಎಂತಲೂ ಹೇಳಲು ಭಾರತೀಯತೆಯಿಂದ ಸಂಸ್ಕಾರಯುತವಾದ ಮಹಿಳಾ ಮನಸ್ಥಿತಿಯೇ ಕಾರಣವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಟವರ್ ಆಫ್ ಲಂಡನ್ : ಯುರೋಪ್ ಪ್ರವಾಸಕ್ಕೆ ತೆರಳಿರುವ ಲೇಖಕರಲ್ಲಿ ಹೆಚ್ಚಿನ ಲೇಖಕರು ಲಂಡನ್ ನಗರಕ್ಕೆ ಭೇಟಿ ನೀಡಿದ್ದಾರೆ. ಪ್ರವಾಸ ಮಾಡುವವರೆಲ್ಲರೂ ತಾವು ಸಂದರ್ಶಿಸುವ ಸ್ಥಳದ ಚರಿತ್ರೆಯನ್ನು ತಿಳಿದಿರುವುದಿಲ್ಲ. ಸ್ಥಳ ಚರಿತ್ರೆ ತಿಳಿಯದ ಲೇಖಕರಿಗೆ ಆ ಸ್ಥಳವು ಕೇವಲ ಸ್ಮಾರಕವಾಗಿ ಕಾಣುತ್ತದೆ. ಅಲ್ಲಿ ವಿಶೇಷವೇನೂ ಕಾಣುವುದಿಲ್ಲ. ಸುತ್ತಲ ಸೌಂದರ್ಯವನ್ನೋ, ಕಲಾವಂತಿಕೆಯನ್ನೋ, ಎಂಜಿನಿಯರಿಂಗ್ ಯಶಸ್ಸನ್ನೋ ವಿವರವಾಗಿ ಬರೆಯುತ್ತಾರೆ. ಲಂಡನ್ ಟವರ್ ಬಗ್ಗೆಯೂ ಈ ಮಾತು ಒಪ್ಪುತ್ತದೆ. ಇಲ್ಲಿ ಭೇಟಿ ನೀಡಿದ ಪ್ರವಾಸಿ ಲೇಖಕರ ಸಂಖ್ಯೆ ಹೆಚ್ಚಿದ್ದರೂ ಚಾರಿತ್ರಿಕ ನೋಟದ ಮೂಲಕ ವಿವರಿಸಿರುವ ಲೇಖಕರು ವಿರಳ.

ಜಿ.ಎಸ್. ಶಿವರುದ್ರಪ್ಪ ಅವರಿಗೆ 'ಟವರ್ ಆಫ್ ಲಂಡನ್' ಇತಿಹಾಸದ ಪುಟದಲ್ಲಿ ಕ್ರೌರ್ಯದ ಮಾದರಿಯಾಗಿ ಕಾಣುತ್ತದೆ. ಅಲ್ಲಿ ಸೌಂದರ್ಯದ ಬದಲು ರಕ್ತ ಕಲೆಯ ಅಂಟಿರುವ, ನಿರಪರಾಧಿಗಳ ನಿಟ್ಟುಸಿರು ಕೇಳುವ ತಾಣವಾಗಿ, ಲಂಡನ್ ರಾಜರುಗಳ ಅಮಾನವೀಯ ಕೃತ್ಯಗಳ ಭೂಮಿಕೆಯಾಗಿ ಕಂಡಿದೆ. ಚರಿತ್ರೆ ತಿಳಿದವರಿಗೆ ಸ್ಥಳವು ಕಾಣುವ ನೋಟಕ್ಕೂ, ತಿಳಿಯದವರಿಗೆ ಕಾಣುವ ನೋಟಕ್ಕೂ ವೈರುಧ್ಯವಾದ ವ್ಯತ್ಯಾಸವಿರುವುದನ್ನು ಕಾಣಲಾಗಿದೆ.

ಹೇಮಲತಾ ಮಹಿಷಿ ಅವರಿಗೆ 'ಲಂಡನ್ ಟವರ್' ಇಂಗ್ಲೆಂಡಿನ ರಾಜರುಗಳ ಸ್ತ್ರೀ ವಿರೋಧಿ ಧೋರಣೆಯನ್ನು ತಿಳಿಯಪಡಿಸುವ ಸ್ಥಳವಾಗಿ ಕಾಣುತ್ತದೆ. ಇಂಗ್ಲೆಂಡಿನ ರಾಜಮನೆತನದ ಅಂದಿನ ದುರಾಡಳಿತವನ್ನು ಮತ್ತು ಆ ಕಾಲದಲ್ಲಿ ಸ್ತ್ರೀಯರನ್ನು ಲಿಂಗ ತಾರತಮ್ಯದ ಮೂಲಕ ನಡೆಸಿಕೊಳ್ಳುತ್ತಿದ್ದ ರೀತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೇಮಲತಾ ಮಹಿಷಿ ಅವರಿಗೆ 'ಲಂಡನ್ ಟವರ್' ಲಂಡನ್ ರಾಜರಿಂದ ಶಿರಚ್ಛೇಧನಕ್ಕೆ ಒಳಗಾದ ರಾಣಿಯರ ವಧಾಸ್ಥಳವಾಗಿ ಕಾಣುತ್ತದೆ. ಸ್ತ್ರೀ ಶೋಷಣೆಯ ನೆಲೆಯಲ್ಲಿಯೇ ಲಂಡನ್ ಟವರ್‌ನ ಚರಿತ್ರೆಯನ್ನು ಕಾಣುತ್ತಾರೆ.

ಟವರ್ ಆಫ್ ಲಂಡನ್ ಶಿವರುದ್ರಪ್ಪ ಅವರಿಗೆ ಇದೇ ವಧಾಸ್ಥಳವು ನಿರಪರಾಧಿಗಳನ್ನು, ಅಮಾಯಕರನ್ನು ಕೊಲ್ಲುವ ಮನುಷ್ಯನ ವಿಕೃತ ಮನಸ್ಥಿತಿಯ ಸೂಚಕವಾಗಿ ಕಾಣುತ್ತದೆ. ಹೇಮಲತಾ ಮಹಿಷಿ ಅವರಿಗೆ ಸ್ತ್ರೀಧೋರಣೆಯ ನೆಲೆಯಲ್ಲಿ ಶೋಷಣೆಯ ಸ್ಥಳವಾಗಿ ಕಾಣುತ್ತದೆ. ವ್ಯಕ್ತಿ ಬದಲಾದಂತೆ ಅಭಿಪ್ರಾಯಗಳು ಬದಲಾಗಲು ಅವರವರ ದೃಷ್ಟಿಕೋನ ಮತ್ತು ಸೈದ್ಧಾಂತಿಕ ನಂಬಿಕೆಗಳು ಕಾರಣವಾಗಿದೆ.

ವೆಬ್ ಮಿನಿಸ್ಟರ್ ಅಬೆ : ಲಂಡನ್ನಿನ ವೆಬ್ ಮಿನಿಸ್ಟರ್ ಅಬೆಯು ರಾಜವಂಶಸ್ಥರು ಪ್ರಾರ್ಥಿಸುವ ಚರ್ಚಾಗಿದೆ. ರಾಜರ ಪಟ್ಟಾಭಿಷೇಕ ನಡೆಯುವ ಸ್ಥಳವೂ ಮತ್ತು ಸಮಾಧಿ ಸ್ಥಳವೂ ಆಗಿದೆ. ರಾ.ಶಿ. ಅವರಿಗೆ ಈ ಸ್ಥಳವು ಕೇವಲ ಸಮಾಧಿ ಸ್ಥಳವಾಗಿ ಮಾತ್ರ ಕಾಣುತ್ತದೆ. ಪ್ರಾರ್ಥನೆ ನಡೆಯುವ ಬಗ್ಗೆ, ಪಟ್ಟಾಭಿಷೇಕ ಕಾರ್ಯಕ್ರಮ ನಡೆಯುವ ಬಗ್ಗೆ ಏಕೆ ಉಲ್ಲೇಖಿಸಿಲ್ಲ ಎಂಬುದು ವಿಚಾರಣೀಯವಾಗಿದೆ. ರಾ.ಶಿ. ಅವರ ಅಭಿಪ್ರಾಯವೂ ಭಾರತೀಯ ಪಾರಂಪರಿಕ ಮನಸ್ಥಿತಿಯಿಂದ ಪ್ರೇರಿತವಾಗಿದೆ ಎನಿಸುತ್ತದೆ. ರಾ. ಶಿ. ಅವರಿಗೆ 'ಸಮಾಧಿಗಳನ್ನು ಕಾಲಿನಲ್ಲಿ ಮೆಟ್ಟುವುದು ಪಾಪಕರವಾದುದು' ಎಂಬ ಭಾವನೆಯನ್ನು ವ್ಯಕ್ತಪಡಿಸಲು ಕಾರಣವಾಗಿದೆ. ತಾನು ಕಾಲಿನಲ್ಲಿ ಸಮಾಧಿಗಳನ್ನು ಮೆಟ್ಟಿದ್ದಕ್ಕಾಗಿ ನರಕಲೋಕದಲ್ಲಿ ಯಾವ ಶಿಕ್ಷೆ ಕಾದಿದೆಯೋ ಎಂದು ಚಿಂತಿಸುತ್ತಾರೆ. ಆದ್ದರಿಂದ ಆ ಪಾಪದಿಂದ ಪಾರಾಗಲು ಅಲ್ಲಿಯೇ ಮಂತ್ರವನ್ನು ಉಚ್ಚರಿಸುವ ಮೂಲಕ 'ಎಳ್ಳು ನೀರಿನ ತರ್ಪಣವನ್ನಿತ್ತೆ' ಎಂದಿದ್ದಾರೆ. ವೆಬ್ ಮಿನಿಸ್ಟರ್ ಅಬೆಯು ರಾ. ಶಿ.

ಅವರಿಗೆ ಸಾಂಪ್ರದಾಯಿಕ ಆಚರಣೆಯ ಕ್ರಮಗಳು ಪಾಲಿಸುವಂತೆ ಮಾಡಿದೆ. ಊರು ಯಾವುದಾದರೇನು ತಾವು ಪಾಲಿಸುವ ಸಾಂಪ್ರದಾಯಿಕ ಆಚರಣೆಗಳು ಮನದಲ್ಲಿ ಅಚ್ಚೊತ್ತಿರುವಾಗ ಸಹಜವಾಗಿಯೇ ಆಯಾ ಸಂದರ್ಭಕ್ಕೆ ಅನುಗುಣವಾಗಿ ಆಚರಣೆಗಳು ಕಾರ್ಯರೂಪಕ್ಕೆ ಬರುತ್ತವೆ.

ಹೇಮಲತಾ ಮಹಿಷಿ ಅವರಿಗೆ 'ವೆಬ್ ಮಿನಿಸ್ಟರ್ ಅಬೆ'ಯು ಎರಡು ದ್ವಂದ್ವಗಳು ಒಟ್ಟಿಗೆ ಸೇರುವ ತಾಣವಾಗಿಯೂ, ಸಾಂಸ್ಕೃತಿಕ ಭಿನ್ನತೆಯಲ್ಲಿನ ಅಸೀಮತೆಯನ್ನು ತೋರುವ ಸಂಪ್ರದಾಯವಾಗಿಯೂ ಗೋಚರಿಸುತ್ತದೆ. ಲೇಖಕಿಗೆ ಮೃತರ ರಾಜ್ಯದಲ್ಲಿರುವಂತೆ ಭಾಸವಾಗಲು ಪ್ರಾರ್ಥನಾ ಸ್ಥಳದಲ್ಲಿಯೇ ಸಮಾಧಿಗಳಿರುವುದು ಕಾರಣವಾಗಿದೆ. ಭಾರತೀಯ ಹಿಂದೂ ಸಂಪ್ರದಾಯದ ಪ್ರಕಾರ ದೇವರ ಪ್ರಾರ್ಥನಾ ಸ್ಥಳವು ಪವಿತ್ರ ಸ್ಥಳವಾಗಿದೆ. ಆದ್ದರಿಂದ ಹಿಂದೂ ಸಾಂಪ್ರದಾಯಿಕ ಆಚರಣೆಗಳನ್ನು ಪಾಲಿಸುವ ಲೇಖಕಿಗೆ ವೈರುಧ್ಯ ಅಂಶಗಳು ಒಂದುಗೂಡಿರುವಂತೆ ಕಂಡುಬರುತ್ತದೆ.

ಇಂದಿರಾ ಶಿವಣ್ಣ ಅವರಿಗೆ 'ವೆಬ್ ಮಿನಿಸ್ಟರ್ ಅಬೆ'ಯು 'ಆಧುನಿಕತೆಯ ಲೇಪನ ಕೊಡದೆ ಸ್ವಾಭಾವಿಕವಾಗಿ ಉಳಿಸಿಕೊಂಡು ಬಂದಿರುವ ಸ್ಮಾರಕ'ವಾಗಿ ಕಾಣುತ್ತದೆ. ಈ ವೆಬ್ ಮಿನಿಸ್ಟರ್ ಅಬೆಯನ್ನು ಭಾರತೀಯ ದೇವಸ್ಥಾನಗಳ ಇತ್ತೀಚಿನ ಶೈಲಿಯೊಂದಿಗೆ ಹೋಲಿಸಿದ್ದಾರೆ. ಸಾಂಪ್ರದಾಯಿಕ ಶೈಲಿಯ ದೇವಾಲಯಗಳಲ್ಲಿ ಆಧುನಿಕತೆಯನ್ನು ತೋರುವ ಮಾರ್ಬಲ್, ಮೊಸಾಯಿಕ್ ನೆಲಹಾಸುಗಳ ಬಳಸುವುದು ಅವಲಕ್ಷಣ. ಅದು ಸಾಂಪ್ರದಾಯಿಕ ಶೈಲಿಗೆ ಮಾಡಿದ ಅಪಚಾರ ಎಂದಿದ್ದಾರೆ. ಲೇಖಕಿಯ ಪಾರಂಪರಿಕ ಪ್ರಜ್ಞೆಯು ಈ ನಿರಾಕರಣ ಧೋರಣೆಗೆ ಕಾರಣವಾಗಿದೆ.

ವೆಬ್ ಮಿನಿಸ್ಟರ್ ಅಬೆಯು ವಿವಿಧ ಲೇಖಕರಿಗೆ ಅವರವರ ಮನೋವಿಕಾಸದ ಚಿಂತನೆಯ ಪರಿಧಿಯ ಹಿನ್ನೆಲೆಯಲ್ಲಿ ಕಾಣಿಸಿದ್ದು, ಅಭಿಪ್ರಾಯಗಳು ಲೇಖಕರ ಮನೋಧೋರಣೆಗೆ ಅನುಗುಣವಾಗಿ ವ್ಯಕ್ತವಾಗಿದೆ. ರಾ. ಶಿ. ಅವರಿಗೆ ತಾನು ನಡೆಯುವಾಗ ಸಮಾಧಿಗಳನ್ನು ಮೆಟ್ಟಿರುವುದರಿಂದ ಆ ಪಾಪಾರ್ಥವಾಗಿ ಅನುಭವಿಸಬೇಕಾದ ನರಕಲೋಕದ ಶಿಕ್ಷೆಯ ನೆನಪಾಗುತ್ತದೆ. ಹೇಮಲತಾ ಮಹಿಷಿ ಅವರಿಗೆ ಭಾರತೀಯ ಸಾಂಪ್ರದಾಯಿಕ ಮನೋಧೋರಣೆಯ ಕಾರಣದಿಂದ ಇಂಗ್ಲೆಂಡಿಗರ ಆಚರಣೆಯಲ್ಲಿನ ಶುಭ-ಅಶುಭ ಸಂಗತಿಗಳು ಒಂದೇ ಕಡೆಯಲ್ಲಿರುವುದು ವಿಚಿತ್ರವಾಗಿ ತೋರುತ್ತದೆ. ಇಂದಿರಾ ಶಿವಣ್ಣ ಅವರಿಗೆ ಹಳೆಯದನ್ನು ಇದ್ದಂತೆಯೇ ಉಳಿಸಿಕೊಂಡಿರುವ ಇಂಗ್ಲೆಂಡಿಗರ ಸಾಂಪ್ರದಾಯಿಕವಾದಿ ಮನಸ್ಥಿತಿಯ ಬಗ್ಗೆ ಮೆಚ್ಚುಗೆ ಇದೆ. ಅಭಿಪ್ರಾಯಗಳು ವ್ಯಕ್ತವಾಗುವುದು ಲೇಖಕರ ವಿಕಾಸವಾದಿ ಮನೋಧೋರಣೆಯ ಹಿನ್ನೆಲೆಯಲ್ಲಿ ಎಂಬುದನ್ನು ಈ ಮೇಲಿನ ಉಲ್ಲೇಖಗಳಿಂದ ತಿಳಿಯಲಾಗಿದೆ.

ಹೈಡ್ ಪಾರ್ಕ್ : ಲಂಡನ್ನಿನ ಪ್ರತಿಷ್ಠಿತ ಉದ್ಯಾನವನ. ಈ ಪಾರ್ಕ್‌ನ ಒಂದು ಭಾಗದಲ್ಲಿ 'ಸ್ಪೀಕರ್ಸ್ ಕಾರ್ನರ್' ಇದೆ. ಇಲ್ಲಿ ಯಾರು ಬೇಕಾದರೂ ಭಾಷಣ ಮಾಡಬಹುದು. ಭಾಷಣವು ವ್ಯಕ್ತಿಯ/ವ್ಯವಸ್ಥೆಯ ವಿರುದ್ಧವಾಗಿ ಇರಬಹುದು. ಅದಕ್ಕೆ ಮುಕ್ತವಾದ ಅವಕಾಶ ಇರುವ ವಾಕ್‌ಸ್ವಾತಂತ್ರದ ಸ್ಥಳ. ತಮ್ಮ ಅಭಿಪ್ರಾಯಗಳನ್ನು ನಿರ್ಭಿಡೆಯಿಂದಲೇ ಹಂಚಿಕೊಳ್ಳುವ ತಾಣ. ಇಲ್ಲಿ ಹಗಲಿನ ಎಲ್ಲಾ ವೇಳೆಯಲ್ಲೂ ಒಬ್ಬರಲ್ಲ ಒಬ್ಬರು ಭಾಷಣ ಮಾಡುತ್ತಿರುವುದನ್ನು ಹಲವು ಲೇಖಕರು ಉಲ್ಲೇಖಿಸಿದ್ದಾರೆ.

ಹೇಮಲತಾ ಮಹಿಷಿ ಅವರು ಈ ಸ್ಥಳದ ಮಹತ್ವವನ್ನು ವಿಶ್ಲೇಷಿಸುತ್ತಾ ಈ ಬಗೆಯ ಅವಕಾಶಗಳನ್ನು ಕಲ್ಪಿಸುವ ಇಂಗ್ಲೆಂಡ್ ದೇಶದ ಬಗೆಗೆ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಭಾರತದಲ್ಲಿ ರಾಜಕಾರಣಿಗಳು

ತಮ್ಮ ಭಾಷಣಗಳನ್ನು ಕೇಳಲು ಜನರನ್ನು ಬಸ್ಸು, ಲಾರಿಗಳಲ್ಲಿ ಕರೆತರುತ್ತಾರೆ ಎಂದು ಹೋಲಿಸುತ್ತಾ ಪರೋಕ್ಷವಾಗಿ ಟೀಕಿಸಿದ್ದಾರೆ. ರಾಜಪ್ರಭುತ್ವವನ್ನು ಅಳವಡಿಸಿಕೊಂಡಿರುವ ಬ್ರಿಟೀಷ್ ಸಾಮ್ರಾಜ್ಯವು ಪ್ರಜಾಪ್ರಭುತ್ವ ಮಾದರಿಯ ಸ್ಪೀಕರ್ಸ್ ಕಾರ್ನರ್‌ಗೆ ಅವಕಾಶ ನೀಡಿರುವುದನ್ನು ಶ್ಲಾಘಿಸಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ವೈ. ಎನ್. ಕೃಷ್ಣಮೂರ್ತಿ ಅವರು ತಮ್ಮ 'ಹೈಡ್‌ಪಾರ್ಕ್' ಕೃತಿಯಲ್ಲಿ ಇಂಗ್ಲೆಂಡ್ ನೀಡಿರುವ ವಾಕ್ ಸ್ವಾತಂತ್ರ್ಯವು ಸ್ವಾತಂತ್ರ್ಯವೇ ಅಲ್ಲ ಎಂದಿದ್ದಾರೆ. ಈ ಪಾರ್ಕಿನಲ್ಲಿ ಆಡುವ ಮಾತುಗಳಿಗೆ ಯಾವುದೇ ಮಹತ್ವ ಇರುವುದಿಲ್ಲ. ಸರಕಾರವು ಆ ಮಾತುಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದಿದ್ದಾರೆ. ಆದ್ದರಿಂದ ಹೈಡ್‌ಪಾರ್ಕ್‌ನ ವಾಕ್ ಸ್ವಾತಂತ್ರ್ಯವು ಜನರ ನಗೆಪಾಟಲಿಗೆ, ತಮಾಷೆಗೆ ಸೀಮಿತ ಎಂಬ ಧೋರಣೆಯನ್ನು ವ್ಯಕ್ತಪಡಿಸಿದ್ದಾರೆ.

ಹೇಮಲತಾ ಮಹಿಷಿ ಅವರಿಗೆ ಹೈಡ್‌ಪಾರ್ಕ್ 'ವಾಕ್‌ಸ್ವಾತಂತ್ರ್ಯದ ಪ್ರತೀಕವಾಗಿಯೂ', ಬ್ರಿಟೀಷರ ರಾಜಪ್ರಭುತ್ವದೊಳಗೆ ಪ್ರಜಾಪ್ರಭುತ್ವವಾದಿ ಧೋರಣೆಯ ಪ್ರತೀಕವಾಗಿ ಕಂಡಿದೆ. ವೈ.ಎನ್.ಕೆ ಅವರಿಗೆ ಅದೊಂದು ಮನರಂಜನಾ ಸ್ಥಳವಾಗಿ ಗೋಚರಿಸಿದೆ. ಲೇಖಕಿಯ ಭಾವನಾತ್ಮಕ ಮನಸ್ಥಿತಿಗೂ, ಪತ್ರಕರ್ತರ ವಾಸ್ತವ ಪ್ರಜ್ಞೆಯ ಮನಸ್ಥಿತಿಗೂ ಇರುವ ನಡುವಿನ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ವೃತ್ತಿ ಮತ್ತು ಪ್ರವೃತ್ತಿಯು ಅಭಿಪ್ರಾಯ ಭೇದಕ್ಕೆ ಕಾರಣವಾಗುವುದನ್ನು ಕಂಡುಕೊಳ್ಳಲಾಗಿದೆ.

ಕೆಟಕೂಂಬ್: ಪ್ಯಾರಿಸ್ಸಿನ 'ಮೌಂಟ್ ಪರ್ಣಾಸ್'ನಲ್ಲಿರುವ ಕೆಟಕೂಂಬ್‌ಗಳ ಇತಿಹಾಸವನ್ನು ಹೇಮಲತಾ ಮಹಿಷಿ ಅವರು ನಿರೂಪಿಸುವಾಗ ಐತಿಹಾಸಿಕ ಸ್ಥಳಗಳೆಂದು ಬಿಂಬಿಸಿ ಪ್ರವಾಸದ ಹೆಸರಿನಲ್ಲಿ ಪ್ರವಾಸಿಗರಿಂದ ಹಣ ದೋಚುವ ಕೇಂದ್ರಗಳಾಗಿ ಮಾರ್ಪಟ್ಟಿರುವ ಬಗ್ಗೆ ಗಮನ ಸೆಳೆದಿದ್ದಾರೆ. 'ಕೆಟಕೂಂಬ್ ಅಂದರೆ ಕಲ್ಲನ್ನು ಕೊರೆದು ಗುಹೆಯ ರೀತಿಯಲ್ಲಿ ಮಾಡಿ ಅದರಲ್ಲಿ ಹೆಣಗಳನ್ನು ಇಟ್ಟು ಸಮಾಧಿ ಮಾಡಲಾಗುವ ಸ್ಥಳಗಳು. ಆದರೆ ಪ್ಯಾರಿಸ್ಸಿನ ಬಳಿಯ ಮೌಂಟ್ ಪರ್ಣಾಸ್‌ನಲ್ಲಿ ಈ ಬಗೆಯ ಕೆಟಕೂಂಬ್‌ಗಳಿಲ್ಲ. ಅಲ್ಲಿನ ಇತಿಹಾಸವೆ ಬೇರೆ. ಇಲ್ಲಿ ಮೊದಲು ಸುಣ್ಣದ ಕಲ್ಲಿನ ಗಣಿಗಾರಿಕೆ ಮಾಡಲಾಗುತ್ತಿತ್ತು. ಪ್ಯಾರಿಸ್ ನಗರವನ್ನು ವಿಸ್ತರಿಸುವ ಯೋಜನೆ ಹಾಕಿಕೊಂಡಾಗ ಸುತ್ತಮುತ್ತಲಿನ ಸ್ಮಶಾನವನ್ನು ಸ್ಥಳಾಂತರ ಮಾಡಲಾಯಿತು. ಸ್ಮಶಾನದಲ್ಲಿನ ಗೋರಿಗಳನ್ನು ಎಲುಬುಗಳ ಸಮೇತ ಕಿತ್ತು ಈ ಪಾಳುಬಿದ್ದ ಸುಣ್ಣದ ಕಲ್ಲಿನ ಗಣಿಗಳಲ್ಲಿ ತಂದು ಮುಚ್ಚಲಾಯಿತು. ಇದು ನಗರ ವಿಸ್ತರಣೆ ಯೋಜನೆಯ ಕಾರಣದಿಂದ ನಿರ್ಮಾಣಗೊಂಡ ಕೃತಕ ಕೆಟಕೂಂಬ್. ಆದರೆ ಇಲ್ಲಿ ಪ್ರವಾಸಿಗರನ್ನು ಸೆಳೆಯುವುದಕ್ಕಾಗಿ ಅದನ್ನು ಐತಿಹಾಸಿಕ ಕೆಟಕೂಂಬ್ ಎಂದು ನಂಬಿಸಿ, ಪ್ರವೇಶ ಶುಲ್ಕದ ನೆಪದಲ್ಲಿ ಹಣ ಮಾಡಲು ದಾರಿ ಮಾಡಿಕೊಂಡಿರುವ ಬಗ್ಗೆ ವಿವರಿಸಿದ್ದಾರೆ. ಲೇಖಕಿಗೆ ಈ ಸ್ಥಳವು ಮುಗ್ಧ ಪ್ರವಾಸಿಗರನ್ನು ಮೋಸಗೊಳಿಸುವ ತಾಣವಾಗಿ ಗೋಚರಿಸಿದೆ. ಲೇಖಕಿ ಅವರು ಇಲ್ಲಿನ ಕುಕೃತ್ಯಗಳ ಬಗ್ಗೆ ಹೋಲಿಸುತ್ತಾ 'ಭಾರತದಲ್ಲಿ ಆಚರಿಸಲಾಗುವ ಮಾಟ, ಮಂತ್ರ, ತಂತ್ರಗಳ ಮೂಲಕ ಜನರನ್ನು ಮೋಸಗೊಳಿಸುವಂತೆ, ಯುರೋಪಿನ ದೇಶಗಳಲ್ಲಿಯೂ ಐತಿಹಾಸಿಕ ಸ್ಥಳ ಎಂದು ಸುಳ್ಳು ಹೇಳಿ ಸತ್ಯವನ್ನು ಮರೆಮಾಡಿ ಹಣ ದೋಚುವವರ ಸಂಖ್ಯೆ ಸಾಕಷ್ಟಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬೇರೆ ಲೇಖಕರಾರು ಈ ಸ್ಥಳಕ್ಕೆ ಭೇಟಿ ನೀಡಿರುವ ಬಗ್ಗೆ ವಿವರಗಳಿಲ್ಲ. ಹೆಚ್ಚಿನ ಲಾಭಗಳಿಕೆಗೆ ಅನುವು ಮಾಡಿಕೊಡುವ ಉದ್ಯಮಗಳಲ್ಲಿ (ಪ್ರವಾಸೋದ್ಯಮವು ಒಳಗೊಂಡಂತೆ) ಮೋಸಗಾರಿಕೆ, ಅವ್ಯವಹಾರಗಳು ನಡೆಯುವುದು ಕಾಲ ದೇಶವನ್ನು

ಬೀರಿದೆ. ಹಾಗೂ ಪ್ರವಾಸ ಕೃತಿಗಳು ನಿರೂಪಿತವಾಗುವ ಸಂದರ್ಭದಲ್ಲಿ ಉಲ್ಲೇಖಿತವಾಗುವ ಘಟನೆಗಳು ರಾಜಕೀಯದ ಆಯಾಮಗಳನ್ನು ಪಡೆದುಕೊಂಡಿರುತ್ತವೆ.

ರಕಮದೋರಿನ ಇತಿಹಾಸ : ಪ್ರಭಾಕರ ಶಿಶಿಲ ಅವರು ಫ್ರಾನ್ಸ್‌ನಲ್ಲಿರುವ ಈ ಧಾರ್ಮಿಕ ಕ್ಷೇತ್ರದ ಇತಿಹಾಸವನ್ನು ದಾಖಲಿಸುತ್ತಾ ಕರ್ನಾಟಕದ ವಚನ ಚಳುವಳಿಯೊಂದಿಗೆ ಸಮೀಕರಿಸಿದ್ದಾರೆ. "ರಕಮದೋರಿನಲ್ಲಿ ಪವಾಡಗಳು ಆರಂಭವಾದಾಗ ಕರ್ನಾಟಕದಲ್ಲಿ ಬಸವಣ್ಣನವರು ಪುರೋಹಿತಶಾಹಿ ಮೌಢ್ಯಗಳನ್ನು ಹೋಗಲಾಡಿಸಿ ಜಾತಿರಹಿತ ಸಮಾಜವೊಂದನ್ನು ನಿರ್ಮಿಸಲು ಯತ್ನಿಸುತ್ತಿದ್ದರು"(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೬೪)ಎಂದಿದ್ದಾರೆ. ಈ ಹೋಲಿಕೆಯಲ್ಲಿ ಮೌಢ್ಯತೆಯ ವಿರುದ್ಧದ ಧ್ವನಿ ಇದೆ. ಮೌಢ್ಯತೆಯೇ ಜಾತಿ ಆಧಾರಿತ ಸಮಾಜಕ್ಕೆ ಕಾರಣವಾಗಿದೆ ಎಂಬ ಆರೋಪವಿದೆ. ಅಭಿವೃದ್ಧಿ ಹೊಂದಿದ ದೇಶ ಎನಿಸಿದ ಫ್ರಾನ್ಸ್‌ನ ರಕಮದೋರಿನಲ್ಲಿ ಪವಾಡಗಳು ಆರಂಭವಾಗಿತ್ತು ಎನ್ನುವ ಮೂಲಕ ವೈಚಾರಿಕವಾದ ಅರಿವನ್ನು ಮೂಡಿಸುವಲ್ಲಿ ಫ್ರಾನ್ಸ್ ದೇಶಕ್ಕಿಂತ ಮೊದಲೇ ಕರ್ನಾಟಕದಲ್ಲಿ ವಚನ ಕ್ರಾಂತಿ ಪ್ರಾರಂಭವಾಗಿತ್ತು ಎಂಬ ಬಗ್ಗೆ ಅಭಿಮಾನವಿದೆ. ಲೇಖಕರ ಚಾರಿತ್ರಿಕ ಪ್ರಜ್ಞೆಯು ಹೋಲಿಕೆಗೆ ಕಾರಣವಾಗಿದೆ. ಇತರ ದೇಶಗಳಲ್ಲಿ ಮೌಢ್ಯತೆ ಇರುವಾಗಲೇ ಕರ್ನಾಟಕದಲ್ಲಿ ಮೌಢ್ಯತೆಯ ವಿರುದ್ಧದ ಚಳುವಳಿಗಳು ನಡೆಯುತ್ತಿತ್ತು ಎಂಬ ಚಾರಿತ್ರಿಕ ಸಂಗತಿಯನ್ನು ಗುರುತಿಸಲು ಲೇಖಕರ ದೇಶಿಯ ಪ್ರಜ್ಞೆ ಕಾರಣವಾಗಿದೆ. ರಕಮದೋರು ದೇವಸ್ಥಾನವು ಧಾರ್ಮಿಕ ವೈಷಮ್ಯಕ್ಕೆ ಬಲಿಯಾಗಿ ಸುಟ್ಟು ಹೋದ ಐತಿಹಾಸಿಕ ಘಟನೆಯು ಧಾರ್ಮಿಕ ಪಂಥಗಳ ನಡುವಿನ ಕಲಹಗಳನ್ನು ಸೂಚಿಸುತ್ತದೆ. ಈ ಧಾರ್ಮಿಕ ಕಲಹಗಳು ಜನರಲ್ಲಿ ದೇವರ ಮೇಲಿದ್ದ ನಂಬಿಕೆ, ಭಕ್ತಿಭಾವಗಳ ಮೇಲೆ ಋಣಾತ್ಮಕ ಪ್ರಭಾವ ಬೀರಿದೆ ಎನಿಸುತ್ತದೆ. ಐತಿಹಾಸಿಕ ಘಟನಾವಳಿಗಳು ಅಂದಿನ ಸಾಮಾಜಿಕ ಪ್ರಜ್ಞೆಯ ಮೇಲೆ ಬೀರಿದ ಪ್ರಭಾವವನ್ನು ಆಧರಿಸಿ ಶಿಶಿಲ ಅವರು ರಕಮದೋರಿನ ಇತಿಹಾಸವನ್ನು ಉಲ್ಲೇಖಿಸಿದ್ದಾರೆ.

ಲೇಖಕರು ಈ ಐತಿಹಾಸಿಕ ಸಂಗತಿಗಳನ್ನು ದಾಖಲಿಸಲು ಮೌಢ್ಯತೆಯ ವಿರುದ್ಧದ ಮನಸ್ಥಿತಿ ಕಾರಣವಾಗಿದೆ. ಫ್ರಾನ್ಸ್ ದೇಶದಲ್ಲಿ ಹನ್ನೊಂದು-ಹನ್ನೆರಡನೇ ಶತಮಾನದಲ್ಲಿದ್ದ ಧಾರ್ಮಿಕ ಸಂಪ್ರದಾಯಗಳು ಈಗ ಬದಲಾಗಿದೆ. ಪ್ರವಾಸಿ ಕ್ಷೇತ್ರ ರಕಮದೋರು ಇಂದು ಮಧ್ಯಯುಗದ ಪವಾಡ ಕ್ಷೇತ್ರ ಎನಿಸಿದೆ. ಇದಕ್ಕೆ ಕಾರಣ ಕ್ರಾಂತಿಯ ಪ್ರಭಾವ ಎಂಬ ಅಂಶವನ್ನು ಪ್ರಚುರಗೊಳಿಸುವುದು ಲೇಖಕರ ಉದ್ದೇಶವಾಗಿದೆ. ಫ್ರಾನ್ಸ್‌ನಲ್ಲಿಯೂ ಅಂಧಾನುಚರಣೆಗಳು ಚಾಲ್ತಿಯಲ್ಲಿದ್ದವು. ಫ್ರಾನ್ಸ್ ಮಹಾ ಕ್ರಾಂತಿಯು ಮೂಢ ಆಚರಣೆಗಳನ್ನು ದಮನ ಮಾಡುವಲ್ಲಿ ಯಶಸ್ವಿಯಾಯಿತು. ವಚನ ಕ್ರಾಂತಿಯು ಸಮಾಜದಲ್ಲಿನ ಅಸಮಾನತೆಗಳನ್ನು, ಮೂಢತ್ವವನ್ನು ಹೋಗಲಾಡಿಸಲು ಪ್ರಯತ್ನಿಸಿತು. ಆದರೆ ರಾಜಕೀಯ ಪ್ರೇರಿತ ಶಕ್ತಿಗಳು ದಮನ ಮಾಡಿದವು. ಫ್ರಾನ್ಸ್ ಕ್ರಾಂತಿಯು ರಾಷ್ಟ್ರಮಟ್ಟದ ರಾಜಕೀಯ ಕ್ರಾಂತಿಯಾದರೆ, ವಚನ ಚಳುವಳಿಯು ದೇಶಿಯ ಮಟ್ಟದ ಸಾಹಿತ್ಯಕ್ರಾಂತಿಯಾಗಿದೆ. ಸಮಾಜದ ಜಡತ್ವವನ್ನು ಹೋಗಲಾಡಿಸಿ ಸ್ಥಿತಪ್ರಜ್ಞೆಯನ್ನು ಮೂಡಿಸುವಲ್ಲಿ ಸಾಹಿತ್ಯಿಕ ಕ್ರಾಂತಿಯ ಸಮಾಜದ ಎಲ್ಲಾ ವರ್ಗದವರನ್ನು ತಲುಪುವುದಿಲ್ಲ ಎನಿಸುತ್ತದೆ. ಭಾರತದಲ್ಲಿ ಇಂದಿಗೂ ಅನೇಕ ಬಗೆಯಲ್ಲಿ ಮೂಢ ಆಚರಣೆಗಳು ಚಾಲ್ತಿಯಲ್ಲಿವೆ. ಅವುಗಳನ್ನು ದಮನ ಮಾಡಲು ಕ್ರಾಂತಿಯಾಗಬೇಕೆಂಬ ಅಪೇಕ್ಷೆ ಲೇಖಕರಲ್ಲಿದೆ.

ಲೂರ್ದ್ಸ್‌ನ ಸ್ಥಳ ಚರಿತ್ರೆ : ಪ್ರಭಾಕರ ಶಿಶಿಲ ಅವರು 'ಬೆರ್ನೆಡಿಕ್ಟ್ ಸೌಬಿರೋ' ಎಂಬ ಕನ್ಯೆಯಿಂದ ಸಾಮಾನ್ಯ ಸ್ಥಳವಾಗಿದ್ದ ಲೂರ್ದ್ಸ್ ಪುಣ್ಯಕ್ಷೇತ್ರವಾಗಿ ಬದಲಾಯಿತು ಎಂದು ಸ್ಥಳಚರಿತ್ರೆಯನ್ನು ದಾಖಲಿಸಿದ್ದಾರೆ. ಸ್ಥಳ ಚರಿತ್ರೆ ಎನ್ನುವ ಬದಲು ಇದನ್ನು ಸ್ಥಳ ಪುರಾಣವೆಂದು ಹೇಳಬಹುದಾಗಿದೆ. ೧೮೫೮ರಲ್ಲಿ ಹದಿನೈದರ ಬಾಲೆಯಾಗಿದ್ದ ಬೆನೆಡಿಕ್ಟ್ ಒಮ್ಮೆ ಸೌದೆಗೆಂದು ಸ್ನೇಹಿತರೊಡನೆ ಹೋಗಿದ್ದಾಗ ಅಲ್ಲಿನ ಗುಹೆಯಲ್ಲಿ ಶುಭ್ರ ಶ್ವೇತ ವಸನಧಾರಿಯಾದ ಸ್ತ್ರೀಯೊಬ್ಬಳ ದರ್ಶನವಾಯಿತು. ಆಕೆ ಬೆರ್ನೆಡಿಕ್ಟ್‌ಗೆ ತನಗೊಂದು ಚರ್ಚು ನಿರ್ಮಿಸುವಂತೆ ಕೇಳಿಕೊಂಡಳಂತೆ. ಈ ಮಾತನ್ನು ಕೇಳಿದ ಜನರು ಆಕೆ ಕ್ರಿಸ್ತನ ತಾಯಿ ಮೇರಿ ಎಂದು ಭಾವಿಸಿ ಬೃಹತ್ ದೇಗುಲವನ್ನು ಕಟ್ಟಿಸಿಕೊಟ್ಟರಂತೆ. ಅಂದಿನಿಂದ ಬೆರ್ನೆಡಿಕ್ಟ್ ಸನ್ಯಾಸಿನಿಯಾಗಿ ತನ್ನ ಜೀವನವನ್ನು ಸೇವೆಗಾಗಿ ಮುಡುಪಾಗಿಟ್ಟಳು ಎಂದು ಲೇಖಕರು ಇಲ್ಲಿನ ಸ್ಥಳ ಪುರಾಣವನ್ನು ಪ್ರಸ್ತಾಪಿಸಿದ್ದಾರೆ. ಫ್ರಾನ್ಸಿನಲ್ಲಿನ ಚಾರಿತ್ರಿಕ ಘಟನೆಗಳೊಂದಿಗೆ ಪೌರಾಣಿಕ ಸಂಗತಿಗಳು ಬೆಸೆದುಕೊಂಡು ವಾಸ್ತವತೆಯನ್ನು ಮರೆಮಾಚಿರುವುದು ತಿಳಿಯುತ್ತದೆ. ಭೂಮಿಯ ಮೇಲಿರುವ ಎಲ್ಲಾ ಮನುಷ್ಯನ ಮನಸ್ಸು ಒಂದೇ ರೀತಿಯಲ್ಲಿ ವರ್ತಿಸುವ ಕಾರಣ ಇತಿಹಾಸ ಮತ್ತು ಪೌರಾಣಿಕ ಸಂಗತಿಗಳು ಒಂದಕ್ಕೊಂದು ಬೆಸೆದುಕೊಂಡಿರುವ ಪ್ರಕರಣಗಳು ಎಲ್ಲಾ ದೇಶದಲ್ಲಿಯೂ ಇರುವ ಸಾಮಾನ್ಯ ಸಂಗತಿಯಾಗಿದೆ.

೪. ೩ ವ್ಯಕ್ತಿಗತ ಚರಿತ್ರೆಯ ವಿವಿಧ ಆಯಾಮಗಳು

ಪ್ರವಾಸಿ ಲೇಖಕರು ತಮ್ಮ ಪ್ರವಾಸ ಕೃತಿಗಳಲ್ಲಿ ವ್ಯಕ್ತಿ ಚರಿತ್ರೆಯನ್ನು ಏಕೆ ತರುತ್ತಾರೆ? ವ್ಯಕ್ತಿಚರಿತ್ರೆಯೊಳಗಿನ ಯಾವ ವಿಶೇಷ ಅಂಶಗಳು ಚರಿತ್ರೆಯನ್ನು ಬರೆಯುವಂತೆ ಪ್ರೇರೇಪಿಸಿದೆ? ಒಬ್ಬ ವ್ಯಕ್ತಿಯ ಚರಿತ್ರೆಯನ್ನು ಲೇಖಕರು ಭಿನ್ನವಾಗಿ ನೋಡಲು ಕಾರಣವೇನು? ಕಾಲ, ದೇಶ, ಪ್ರಮಾಣಗಳು ಚರಿತ್ರೆಯ ನಿರೂಪಣೆಗೆ ಬಹುಮುಖಿ ಆಯಾಮಗಳನ್ನು ನೀಡುತ್ತವೆಯೇ? ಅಥವಾ ಏಕಮುಖಿಯಾದ ಆಯಾಮವನ್ನೇ ಪೂರ್ವಾಭಾಸದಿಂದ ನೀಡುತ್ತದೆಯೇ? ಈ ಮೊದಲಾದ ಪ್ರಶ್ನೆಗಳನ್ನು ಆಧರಿಸಿ ಆಯ್ದ ಪ್ರವಾಸ ಕೃತಿಗಳಲ್ಲಿನ ವ್ಯಕ್ತಿ ಚರಿತ್ರೆಗಳನ್ನು ವಿಶ್ಲೇಷಿಸಲಾಗಿದೆ.

ವ್ಲಾಡಿಮೀರ್ ಲೆನಿನ್: ವ್ಲಾಡಿಮೀರ್ ಲೆನಿನ್ ಸೋವಿಯತ್ ಒಕ್ಕೂಟದ ಪ್ರಥಮ ಅಧ್ಯಕ್ಷರು. ಸೋವಿಯತ್ ರಾಷ್ಟ್ರಗಳಿಗೆ ಭೇಟಿ ನೀಡಿದ ಬಹುತೇಕ ಎಲ್ಲಾ ಲೇಖಕರು ಈತನ ಬಗ್ಗೆ, ಜನರು ಇವರಿಗೆ ಸಲ್ಲಿಸುವ ಗೌರವ, ಅಭಿಮಾನಗಳ ಬಗ್ಗೆ ಬರೆದಿದ್ದಾರೆ. ಸೋವಿಯತ್ ರಷ್ಯಾದಲ್ಲಿ ಚರ್ಚಿಗೆ ಹೋಗುವವರ ಸಂಖ್ಯೆ ವಿರಳವಾಗಿದೆ. ಆದರೆ ಪ್ರತಿ ಮನೆ, ಅಂಗಡಿಗಳಲ್ಲೂ ಲೆನಿನ್‌ರ ಫೋಟೋವನ್ನು ದೇವರ ಸ್ಥಾನದಲ್ಲಿ ಇಟ್ಟು ಪೂಜ್ಯಭಾವದಿಂದ ಕಾಣುತ್ತಾರೆ ಎಂಬುದು ಅನೇಕ ಲೇಖಕರ ಅಭಿಪ್ರಾಯವಾಗಿದೆ. ಶ್ರೀರಂಗರಾಜು, ಶ್ರೀರಂಗ, ಜಿ.ಎಸ್. ಶಿವರುದ್ರಪ್ಪ, ಬೀಚಿ, ಹ.ವೆಂ. ನಾಗರಾಜು, ಉ.ಕಾ ಸುಬ್ಬಾಚಾರ್ ಮೊದಲಾದವರು ಸೋವಿಯತ್ ದೇಶಕ್ಕೆ ಭೇಟಿ ನೀಡಿದ್ದಾರೆ. ಭೇಟಿ ನೀಡಿದ ಎಲ್ಲಾ ಲೇಖಕರು ಲೆನಿನ್ ಬಗ್ಗೆ ಅಭಿಮಾನದ ನುಡಿಗಳನ್ನು ಆಡಿದ್ದಾರೆ.

ಸೋವಿಯತ್ ದೇಶದ ಜನರು ಲೆನಿನ್ ಅವರನ್ನು ಆದರಿಸುವುದನ್ನು ಕಂಡು ದೇ. ಜವರೇಗೌಡರು ನಮ್ಮ ದೇಶ ಗಾಂಧೀಜಿಯನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಗಾಂಧೀಜಿಯನ್ನು

ಹಾಗೂ ಅವರ ತತ್ವಗಳನ್ನು ಭಾರತೀಯರು ಮರೆತಿದ್ದಾರೆ ಎಂಬುದು ಲೇಖಕರ ಆರೋಪವಾಗಿದೆ. 'ಯಾವ ದೇಶ ರಾಷ್ಟ್ರವನ್ನು ನಿರ್ಮಿಸಿದ ನಾಯಕರನ್ನು ಗೌರವಿಸುತ್ತದೆಯೋ ಆ ದೇಶ ಉನ್ನತಿಯೆಡೆಗೆ ಸಾಗುತ್ತದೆ' ಎಂದಿದ್ದಾರೆ. ರಷ್ಯಾ ಜನರ ದೇಶಭಕ್ತಿ ಮತ್ತು ತಮ್ಮ ದೇಶವನ್ನು ನಿರ್ಮಿಸಿದ ನಾಯಕರುಗಳ ಮೇಲೆ ಹಾಗೂ ಕಲಾವಿದರ ಮೇಲೆ ಅಲ್ಲಿನ ಜನರು ತೋರಿಸುತ್ತಿರುವ ಪ್ರೀತಿಯು ಲೇಖಕರನ್ನು ಸೆಳೆದಿದೆ. ಜೊತೆಗೆ ನಮ್ಮ ಭಾರತೀಯರಲ್ಲಿ ದೇಶದ ಬಗ್ಗೆ ಮತ್ತು ದೇಶವನ್ನು ಕಟ್ಟಿದ ನಾಯಕರುಗಳ ಬಗೆಗಿನ ತಾತ್ಸಾರ ಭಾವನೆ ಬಗ್ಗೆ ಅಸಮಾಧಾನವೂ ವ್ಯಕ್ತಪಡಿಸಿದ್ದಾರೆ. ದೇ. ಜವರೇಗೌಡರಿಗೆ ಗಾಂಧೀಜಿಯನ್ನು ಮತ್ತು ಅವರ ತತ್ವಗಳನ್ನು ನೆನಪು ಮಾಡಿಕೊಳ್ಳಲು ಲೆನಿನ್ ಕಾರಣನಾಗಿದ್ದಾನೆ.

'ಸೋವಿಯೆತ್ ದಿನಚರಿ' ಕೃತಿಯಲ್ಲಿ ಶ್ರೀರಂಗರಾಜು ಅವರು ಲೆನಿನ್‌ನ ಸ್ಮಾರಕದ ಬಗ್ಗೆ ವಿವರಿಸುತ್ತಾ ನಮ್ಮ ದೇಶದ ನಾಯಕರುಗಳ ಸ್ಮಾರಕಗಳ ಸ್ಥಿತಿಗಳೊಂದಿಗೆ ಹೋಲಿಸಿದ್ದಾರೆ. ಆತನ ಜೀವನ ಚರಿತ್ರೆಯ ವಿವರಗಳನ್ನು ತಿಳಿಸುವ ಮ್ಯೂಸಿಯಮ್‌ನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿರುವುದು ಶೈಕ್ಷಣಿಕವಾಗಿ ಉಪಯುಕ್ತತೆಯ ನೆಲೆಯಲ್ಲಿ ಲೇಖಕರನ್ನು ಸೆಳೆದಿದೆ. ನಮ್ಮ ದೇಶದಲ್ಲಿ ಈ ಬಗೆಯ ಮ್ಯೂಸಿಯಮ್‌ಗಳು ತಕ್ಕಮಟ್ಟಿಗೆ ನಿರ್ಮಾಣವಾಗಿದ್ದರೂ ವ್ಯವಸ್ಥಿತ ರೀತಿಯಲ್ಲಿ, ಪ್ರವಾಸಿಗರನ್ನು ಆಕರ್ಷಿಸುವಂತೆ, ಅವರ ಬಗ್ಗೆ ಪರಿಪೂರ್ಣ ಜ್ಞಾನವನ್ನು ನೀಡುವಂತೆ ಮಾಡುವಲ್ಲಿ ವಿಫಲವಾಗಿವೆ ಎಂದು ಲೇಖಕರು ಹೇಳಿದ್ದಾರೆ. ಲೇಖಕರ ಅಭಿಪ್ರಾಯ ಔಚಿತ್ಯಪೂರ್ಣವಾಗಿದೆ. ಶಾಲಾ ಮಕ್ಕಳು ಇಂತಹ ಮ್ಯೂಸಿಯಂಗಳಿಗೆ ಒಮ್ಮೆ ಭೇಟಿ ನೀಡಿದರೆ ಅವರ ಜೀವನ ಚರಿತ್ರೆಯ ಸಮಗ್ರ ಮಾಹಿತಿಯನ್ನು ತಿಳಿಯುವಂತೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡುವ ಕಾರ್ಯ ಶೈಕ್ಷಣಿಕ ಹಿತದೃಷ್ಟಿಯಿಂದಲೂ, ರಾಷ್ಟ್ರೀಯ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ದೃಷ್ಟಿಯಿಂದ ಅಗತ್ಯವಾಗಿದೆ.

ಲೆನಿನ್ ಅವರ ಮ್ಯೂಸಿಯಮ್‌ಗೆ ಭೇಟಿ ನೀಡಿದ ಈ ಮೇಲಿನ ಇಬ್ಬರು ಲೇಖಕರಿಗೆ ಅವರ ಚಿಂತನಾನುಸಾರ ಅಭಿಪ್ರಾಯಿಸಲು ಉತ್ತೇಜನ ನೀಡಿದೆ. ದೇ. ಜವರೇಗೌಡ ಅವರು ಗಾಂಧೀಜಿಯನ್ನು ಮತ್ತು ಗಾಂಧೀಜಿಯ ತತ್ವಗಳನ್ನು ದೇಶದ ಜನರು ಗೌರವದಿಂದ ಕಾಣಬೇಕು ಎಂಬ ದೃಷ್ಟಿಕೋನದ ಹಿನ್ನೆಲೆಯಲ್ಲಿ ಲೆನಿನ್‌ನನ್ನು ನೋಡಿದ್ದಾರೆ. ಶ್ರೀರಂಗರಾಜು ಅವರು ಶೈಕ್ಷಣಿಕ ದೃಷ್ಟಿಕೋನದಲ್ಲಿ, ಉಪಯುಕ್ತತೆಯ ನೆಲೆಯಲ್ಲಿ ಲೆನಿನ್ ಮ್ಯೂಸಿಯಮ್‌ನ್ನು ನೋಡಿದ್ದಾರೆ. ದೇ. ಜವರೇಗೌಡರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರೂ ಶೈಕ್ಷಣಿಕ ನೆಲೆಯಲ್ಲಿ ಲೆನಿನ್ನರನ್ನು ವಿಶ್ಲೇಷಿಸಿಲ್ಲ. ಏಕೆಂದರೆ ಮನೋಧೋರಣೆಗಳು ಚಿಂತನೆಗಳಿಗೆ ಮಾರ್ಗವನ್ನು ಹಾಕಿಕೊಡುತ್ತವೆ. ಚಿಂತನೆಗಳು ದೃಷ್ಟಿಕೋನಗಳನ್ನು ರೂಪಿಸುತ್ತವೆ. ದೃಷ್ಟಿಕೋನದ ಹಿನ್ನೆಲೆಯಲ್ಲಿ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಹ.ವೆಂ. ನಾಗರಾಜರಾವ್ ಅವರಿಗೆ ಲೆನಿನ್ ಸಮಾಧಿ ಉತ್ತಮ ಸ್ಮಾರಕ ಶಿಲ್ಪವಾಗಿಯೂ, ಜನರ ಅಭಿಮಾನದ ಕುರುಹಾಗಿಯೂ ಗೋಚರಿಸುವುದು ಇದಕ್ಕೆ ಪೂರಕವಾದ ನಿದರ್ಶನವಾಗಿದೆ.

ಲೆನಿನ್ ಅವರಿಗೆ ಸಲ್ಲಿಸಲಾಗಿರುವ ಗೌರವಾರ್ಪಣೆಗೆ ಸಂಬಂಧಿಸಿದಂತೆ ಒಂದು ತಾತ್ವಿಕ ಪ್ರಶ್ನೆ ಉದ್ಭವಿಸುತ್ತದೆ. ಲೆನಿನ್‌ನ ಮೃತದೇಹವನ್ನು ಕೆಡದಂತೆ ಸಂರಕ್ಷಿಸಿ ಪೂಜ್ಯನೀಯವಾಗಿ ಕಾಣುತ್ತಿರುವ ರಷ್ಯನ್ನರ ವ್ಯಕ್ತಿಪೂಜೆಯ ಆಚರಣೆಯು ಮೌಢ್ಯತೆಯ ಪಾಲನೆಯಾಗುವುದಿಲ್ಲವೇ?. ಈ ತಾತ್ವಿಕ ಪ್ರಶ್ನೆಯನ್ನು ವಿಶ್ಲೇಷಿಸುವುದಾದರೆ ಯಾವುದೇ ದೇಶ ಅಭಿವೃದ್ಧಿ ಪಥದತ್ತ ಸಾಗಬೇಕಾದರೆ ಆ ದೇಶದ ಮುಂದಾಳು, ನಾಯಕನ ಉಪಸ್ಥಿತಿ ಬಹಳ ಮುಖ್ಯವಾಗುತ್ತದೆ. ಉಪಸ್ಥಿತಿಯು ದೈಹಿಕವಾಗಿಯೇ ಇರಬೇಕೆಂದಿಲ್ಲ.

ಮುಂದಾಳುವಾಗಿ ದೇಶವನ್ನು ಮುನ್ನಡೆಸಿದ ನಾಯಕರನ್ನು ಗೌರವದಿಂದ ಕಾಣುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿರುತ್ತದೆ. ಒಂದು ದೇಶ ಸಮರ್ಥವಾಗಿ ನಿರ್ಮಾಣವಾಗಬೇಕಾದರೆ, ಜನರೆಲ್ಲಾ ಭಾವೈಕ್ಯದಿಂದ ಇರಬೇಕಾದರೆ, ದೇಶಕ್ಕಾಗಿ ದುಡಿದವರನ್ನು ಗೌರವದಿಂದ ಕಾಣುವಂತೆ ಸಜ್ಜುಗೊಳಿಸುವುದು ಅಗತ್ಯವಾಗಿದೆ. ಅದು ಪ್ರತಿಯೊಬ್ಬರಲ್ಲಿಯೂ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಲು ಸಹಾಯಕವಾಗುತ್ತದೆ. ಆದ್ದರಿಂದ ದೇಶದ ಹಿರಿಯ ನಾಯಕರನ್ನು ಎಲ್ಲರೂ ಗೌರವದಿಂದ ಕಾಣುವಂತೆ ರೂಪಿಸಿವುದು ಇಂದಿನ ತುರ್ತಾಗಿದೆ. ಆದರೆ ವ್ಯಕ್ತಿಪೂಜೆಗಿಂತ ಅವರ ವೈಚಾರಿಕ ತತ್ವಗಳನ್ನು ಗೌರವಿಸುವುದು ಒಳಿತು ಎನಿಸುತ್ತದೆ.

ಹಿಟ್ಲರ್ : ಜರ್ಮನಿ ದೇಶಕ್ಕೆ ತೆರಳಿದ ಪ್ರವಾಸಿ ಲೇಖಕರು ಹಿಟ್ಲರ್‌ನ ಬಗ್ಗೆ ಮತ್ತು ಹಿಟ್ಲರ್‌ನ ನಾಜಿ ಪಡೆ ಮಾಡಿರುವ ಅಮಾನವೀಯ ಕೃತ್ಯಗಳ ಬಗ್ಗೆ ಸಂಕ್ಷಿಪ್ತವಾದ ಇತಿಹಾಸವನ್ನೇ ಬರೆದು, ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಉ. ಕಾ. ಸುಬ್ಬರಾಯಾಚಾರ್ ಅವರು ಹಿಟ್ಲರ್‌ನ ಸೈನಿಕರ ಕೃತ್ಯವನ್ನು ಪೈಶಾಚಿಕ ಕೃತ್ಯವೆಂದು ಹೇಳಿದ್ದಾರೆ. ಜನಾಂಗಗಳ ನಡುವೆ ಜನಾಂಗೀಯ ದ್ವೇಷದ ಹಿನ್ನೆಲೆಯಲ್ಲಿ ನಡೆಯುವ ಸಂಘರ್ಷಗಳನ್ನು ಖಂಡಿಸಿದ್ದಾರೆ. 'ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು' ಪ್ರವಾಸ ಕೃತಿಯ ಪ್ರಮುಖ ಮಿತಿಯೆಂದರೆ ಸೋವಿಯತ್ ದೇಶವನ್ನೇ ಪ್ರಧಾನವಾಗಿ ಗ್ರಹಿಸಿರುವುದು. ಆದ್ದರಿಂದಲೇ ಕೃತಿಯು ಸೋವಿಯತ್ ಪರವಾದ ನಿಲುವುಗಳನ್ನು ವ್ಯಕ್ತಪಡಿಸಿದೆ. ಜರ್ಮನಿಯ ಹಿಟ್ಲರ್‌ನ ಕೃತ್ಯಗಳನ್ನು ಖಂಡಿಸುವಾಗ ಬಳಸಿರುವ ಭಾಷೆ ಮತ್ತು ವಿವರಗಳು ಈ ಅಂಶವನ್ನು ದೃಢಪಡಿಸುತ್ತವೆ.

ದೊಡ್ಡೇರಿ ವೆಂಕಟಗಿರಿರಾವ್ ಅವರು ಏಕಾಕಿ ಪ್ರವಾಸಿಯಾಗಿದ್ದು, ಋಣಮುಕ್ತರು. ಯಾವುದೇ ವಿಷಯವನ್ನು ನಿರ್ಭೀತವಾಗಿ ವ್ಯಕ್ತಪಡಿಸಬಲ್ಲರು. ಆದ್ದರಿಂದಲೇ ಇವರ ವಿಚಾರಗಳು ಮಾನವ ಕೇಂದ್ರಿತ ನಿಲುವುಗಳಿಂದ ಕೂಡಿರುತ್ತವೆ. ಕೃತಿಯಲ್ಲಿ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸುವ ಭಾವ ಇದೆ. ಹಿಟ್ಲರ್‌ನ ಅಮಾನವೀಯ ಕೃತ್ಯಗಳನ್ನು ಖಂಡಿಸುವುದು ಮಾನವ ಕೇಂದ್ರಿತ ನೆಲೆಯಲ್ಲಿಯೇ ಎಂಬುದು ಸ್ಪಷ್ಟವಾಗುತ್ತದೆ.

ಜಿ.ಎಸ್. ಶಿವರುದ್ರಪ್ಪ ಅವರು ಹಿಟ್ಲರ್‌ನು ನಡೆಸಿದ ಅಮಾನುಷ ಕೃತ್ಯಗಳ ವಿವರಗಳನ್ನು ಅಹಿಂಸಾ ದೃಷ್ಟಿಕೋನದಲ್ಲಿ ನೋಡಿದ್ದಾರೆ. ಲೇಖಕರ ಅಹಿಂಸಾ ದೃಷ್ಟಿಕೋನದ ಮೇಲೆ ತಾವು ಬೆಳೆದ ಮನೆಯ ವಾತಾವರಣ ಪ್ರಭಾವ ಬೀರಿರುವುದು ನಿಚ್ಚಳವಾಗಿದೆ. ಆದ್ದರಿಂದ ಹಿಟ್ಲರ್‌ನ ಅಮಾನವೀಯ ಕೃತ್ಯಗಳ ಬಗ್ಗೆ ಜಿಗುಪ್ಸೆಯ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಹೇಮಲತಾ ಮಹಿಷಿ ಅವರು ಹಿಟ್ಲರ್‌ನ ಬಗ್ಗೆ ಅಲ್ಲಿನ ಜನರಲ್ಲಿ ಇರುವ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಅಲ್ಲಿನ ಕೆಲವರು ಹೇಳುವಂತೆ "ಯುರೋಪಿನ ಜ್ಯೂಗಳನ್ನೆಲ್ಲಾ ನಿರ್ಮೂಲ ಮಾಡಬೇಕೆನ್ನುವ ತೀರ್ಮಾನವನ್ನು ಹಿಟ್ಲರ್ ತೆಗೆದುಕೊಂಡಿದ್ದಲ್ಲ ಎನ್ನುತ್ತಿದ್ದಾರೆ."(ಹೇಮಲತಾ ಮಹಿಷಿ., ಯೂರೋ-ದರ್ಶನ., ಪು-೧೫೫)ಎಂಬ ಅಭಿಪ್ರಾಯವನ್ನು ದಾಖಲಿಸಿದ್ದಾರೆ. ಲೇಖಕಿ ಹಿಟ್ಲರ್‌ನ ಕೃತ್ಯಕ್ಕೆ 'ಪಾಶವೀ' ಅರ್ಥವನ್ನು ಕಲ್ಪಿಸುವ ಬದಲು ಓದುಗರಿಗೆ ಆತನ ಬಗ್ಗೆ ತಿಳಿದುಕೊಂಡು ತೀರ್ಮಾನಿಸಿಕೊಳ್ಳಲು ಅವಕಾಶ ನೀಡಿದ್ದಾರೆ. ಹಿಟ್ಲರ್‌ನನ್ನು ಅಪರಾಧಿ ಸ್ಥಾನದಲ್ಲಿಟ್ಟು ವಿಶ್ಲೇಷಿಸದೆ ತಟಸ್ಥ ನೀತಿಯನ್ನು ಅನುಸರಿಸಿರುವುದು ಕಂಡುಬರುತ್ತದೆ.

ಹಿಟ್ಲರ್‌ನ ಬಗೆಗಿನ ಈ ನಾಲ್ವರು ಪ್ರವಾಸಿ ಲೇಖಕರ ಅಭಿಪ್ರಾಯಗಳು ನಾಲ್ಕು ಆಯಾಮಗಳಲ್ಲಿರುವುದನ್ನು ಗುರುತಿಸಬಹುದಾಗಿದೆ. ಉ.ಕಾ. ಸುಬ್ಬಾಚಾರ್ ಅವರು ಹಿಟ್ಲರ್‌ನ ಪೈಶಾಚಿಕ ಕೃತ್ಯಗಳನ್ನು ಖಂಡಿಸುವುದು ಸೋವಿಯತ್ ದೇಶದ ಮೇಲೆ ಹಿಟ್ಲರ್ ಆಕ್ರಮಣ ಮಾಡಿದ್ದನೆಂಬ ಕಾರಣಕ್ಕಾಗಿ. ದೊಡ್ಡೇರಿ ವೆಂಕಟಗಿರಿರಾವ್ ಅವರು ಹಿಟ್ಲರ್‌ನ ಕೃತ್ಯಗಳನ್ನು ಮಾನವೀಯ ನೆಲೆಯಲ್ಲಿ ಖಂಡಿಸಿದ್ದಾರೆ. ಜಿ.ಎಸ್. ಶಿವರುದ್ರಪ್ಪ ಅವರ ಅಭಿಪ್ರಾಯವು ಮಾನವೀಯ ನೆಲೆಯಲ್ಲಿಯೇ ವ್ಯಕ್ತವಾಗಿದ್ದರೂ ವೈಯಕ್ತಿಕ ನೆಲೆಯನ್ನು ಪಡೆದುಕೊಂಡಿದೆ. ಹಿಂಸೆಯ ಬಗ್ಗೆ ಜಿಗುಪ್ಸೆಯನ್ನು ತಾಳುವ ಧೋರಣೆಯು ವ್ಯಕ್ತಿಗತವಾದುದಾಗಿದೆ. ಹೇಮಲತಾ ಮಹಿಷಿ ಅವರಲ್ಲಿ ಹಿಟ್ಲರ್‌ನ ಬಗೆಗೆ ತಟಸ್ಥ ಧೋರಣೆಯಿದ್ದು ಓದುಗರಿಗೆ ವಿಚಾರ ಮಂಥನ ಮಾಡಲು ಅವಕಾಶ ನೀಡಿದ್ದಾರೆ. ಇದರಿಂದ ತಿಳಿದುಬರುವ ಸಂಗತಿಯೆಂದರೆ ಇತಿಹಾಸ ಒಂದೇ ಆಗಿದ್ದರೂ ದೃಷ್ಟಿಕೋನಗಳು ಏಕರೂಪದಲ್ಲಿ ಇರುವುದಿಲ್ಲ. ದೃಷ್ಟಿಕೋನಗಳು ಐತಿಹಾಸಿಕ ಘಟನೆಗಳಿಗೆ ವಿವಿಧ ಆಯಾಮಗಳನ್ನು ನೀಡುತ್ತದೆ.

ಕೀಟ್ಸ್ : ಆಂಗ್ಲ ಸಾಹಿತ್ಯದ ಪ್ರಮುಖ ಕವಿ ಕೀಟ್ಸ್‌ನನ್ನು ಹೆಚ್ಚಿನ ಪ್ರವಾಸಿ ಲೇಖಕರು ಸ್ಮರಿಸಿಕೊಳ್ಳುವುದು ಸಾಹಿತ್ಯಕ ಧೋರಣೆಯ ಹಿನ್ನೆಲೆಯಲ್ಲಿ. ಸಾಹಿತ್ಯದ ಹಿನ್ನೆಲೆಯಿರುವ ಲೇಖಕರು ಕೀಟ್ಸ್ ಕವಿಯನ್ನು ಸಾಹಿತಿಯ ನೆಲೆಯಲ್ಲಿಯೇ ವಿಶ್ಲೇಷಿಸಿದ್ದಾರೆ. ಪ್ರಮುಖವಾಗಿ ನೇಮಿಚಂದ್ರ, ಹೇಮಲತಾ ಮಹಿಷಿ, ಜಿ.ಎಸ್. ಶಿವರುದ್ರಪ್ಪ ಮೊದಲಾದವರು ಕೀಟ್ಸ್ ಕವಿಯನ್ನು ಮತ್ತು ಆತನ ಪದ್ಯಗಳನ್ನು ನೆನಪಿಸಿಕೊಳ್ಳುವುದಲ್ಲದೆ, ಜೀವನ ವೃತ್ತಾಂತವನ್ನು ಹೇಳಿದ್ದಾರೆ. ಹೇಮಲತಾ ಮಹಿಷಿ ಅವರು ಕೀಟ್ಸ್ ಕವಿಯನ್ನು 'ಭಗ್ನಪ್ರೇಮಿ' ಎಂದು ಕರೆದಿದ್ದಾರೆ. ೨೫ನೇ ವಯಸ್ಸಿನಲ್ಲಿಯೇ ಟಿ.ಬಿ. ಕಾಯಿಲೆಗೆ ತುತ್ತಾಗಿ ತೀರಿಕೊಂಡ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ಹೇಮಲತಾ ಮಹಿಷಿ ಅವರು ಕೀಟ್ಸ್ ಕವಿಯನ್ನು ಸಾಹಿತ್ಯ ರಚನೆಗೆ ಬದುಕಿನ ಬವಣೆಗಳೇ ಪ್ರೇರಕವಾಗಿರುವ ನೆಲೆಯಲ್ಲಿ ವ್ಯಕ್ತಿ ಚರಿತ್ರೆಯನ್ನು ದಾಖಲಿಸಿದ್ದಾರೆ. ನೇಮಿಚಂದ್ರ ಅವರು ಕೀಟ್ಸ್ ಕವಿಯನ್ನು ನೆನಪಿಸಿಕೊಳ್ಳುತ್ತಾ ಆತನ ಕೃತಿಯನ್ನು 'ಮೃತ್ಯುಶೈಯ್ಯೆಯ ಪ್ರೇಮಪತ್ರಗಳು' ಎಂದು ಕನ್ನಡದಲ್ಲಿ ಅನುವಾದಿಸಿರುವ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಕೀಟ್ಸ್ ಕವಿಯಾಗಿ ಲೇಖಕರನ್ನು ಆಕರ್ಷಿಸಿದ್ದಾನೆ. ಆತನ ಬಗ್ಗೆ ಎಲ್ಲರಲ್ಲೂ ಒಂದು ಬಗೆಯ ಅನುಕಂಪೆಯ ಭಾವ ವ್ಯಕ್ತವಾಗಿದೆ.

ಸಾಹಿತ್ಯ ಕೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ವ್ಯಕ್ತಿಗಳು ಮಾತ್ರ ಯುರೋಪಿನ ಸಾಹಿತಿಗಳನ್ನು ಅವರ ಜೀವನ ಚರಿತ್ರೆಯೊಂದಿಗೆ ಸಾಹಿತ್ಯದ ಒಡನಾಟವನ್ನು ಗುರುತಿಸಿ ಹೋಲಿಸಿದ್ದಾರೆ. ಪೂರ್ಣಪ್ರಮಾಣದ ಸಾಹಿತಿಗಳಲ್ಲದ ಕೇವಲ ಪ್ರವಾಸ ಕೃತಿಯನ್ನು ಮಾತ್ರ ರಚನೆ ಮಾಡಿರುವ ಪ್ರವಾಸಿ ಲೇಖಕರು ಯುರೋಪಿನ ಸಾಹಿತಿಗಳ ಬದುಕಿನ ವಿವರಗಳನ್ನಾಗಲೀ, ಅವರ ಸಾಹಿತ್ಯದ ಬಗ್ಗೆಯಾಗಲೀ ವಿವರಿಸಿಲ್ಲ. ಶೇಕ್ಸ್‌ಪಿಯರ್‌ನ ವ್ಯಕ್ತಿ ಚರಿತ್ರೆಯನ್ನು ನಿರೂಪಿಸಿರುವ ವಿಚಾರದಲ್ಲಿಯೂ ಕೂಡ ಇದೇ ಅಂಶ ಪುನರಾವರ್ತನೆಯಾಗಿದೆ. ಪ್ರವಾಸ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಈ ಅಂಶವು ಮತ್ತೂ ಸ್ಪಷ್ಟವಾಗುತ್ತದೆ.

ಫ್ಲಾರೆನ್ಸ್ ನೈಟಿಂಗೇಲ್ : ಫ್ಲಾರೆನ್ಸ್ ನೈಟಿಂಗೇಲ್ ಕ್ರಿಮಿಯಾ ಯುದ್ಧದಲ್ಲಿ ಗಾಯಾಳು ಸೈನಿಕರನ್ನು ನಿಸ್ವಾರ್ಥದಿಂದ ಸೇವಾಕಾರ್ಯ ಸಲ್ಲಿಸಿದ ಮಹಿಳೆ. ಈಕೆಯ ಬಗೆಗಿನ ಚಾರಿತ್ರಿಕ ಸಂಗತಿಗಳನ್ನು ಹೇಮಲತಾ ಮಹಿಷಿ ಮತ್ತು ನೇಮಿಚಂದ್ರ ಉಲ್ಲೇಖಿಸಿದ್ದಾರೆ. ಇತರ ಲೇಖಕರು, ಫ್ಲಾರೆನ್ಸ್ ದೇಶಕ್ಕೆ ಹೋಗಿದ್ದರೂ

ನೈಟೀಂಗೇಲ್‌ನ ವ್ಯಕ್ತಿ ಚರಿತ್ರೆಯನ್ನು ಉಲ್ಲೇಖಿಸಿಲ್ಲ. ಪ್ರವಾಸ ಕಥನಗಳನ್ನು ನಿರೂಪಿಸುವಾಗ ಉಚಿತ ಮತ್ತು ಉಚಿತವಲ್ಲದ ವಿಷಯಗಳ ಗಮ್ಯಾಗಮನವನ್ನು ಮಾಡಬೇಕಾಗುತ್ತದೆ. ಪ್ರವಾಸದಲ್ಲಿ ಕಂಡ, ಮನಸ್ಸಿನಲ್ಲಿ ಒಡಮೂಡಿದ ಸರ್ವ ವಿಚಾರಗಳು ಪ್ರವಾಸ ಕೃತಿಯಲ್ಲಿ ಸ್ಥಾನ ಪಡೆಯುವುದಿಲ್ಲ. ಲೇಖಕರ ಔಚಿತ್ಯ ಧೋರಣೆ ಮತ್ತು ವಿವೇಕ ಪ್ರಜ್ಞೆ ವಿಷಯಗಳ ನಿರೂಪಣೆಯಲ್ಲಿ ಪ್ರಸ್ತುತವಾಗುತ್ತದೆ. ಅನುಪಮಾ ನಿರಂಜನ ಅವರು 'ಸ್ನೇಹ ಯಾತ್ರೆ' ಕೃತಿಯನ್ನು ಸ್ತ್ರೀ ಧೋರಣೆಯ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ಕೃತಿಯು ವ್ಯಕ್ತಿಯ ನೆಲೆಯಲ್ಲಿ ಸಮಾಜವನ್ನು ವಿಶ್ಲೇಷಿಸದೆ ಲೌಕಿಕ ಜೀವನದ ಆಗುಹೋಗುಗಳ ನೆಲೆಯಲ್ಲಿ ಸ್ತ್ರೀಯ ಪರಿಸ್ಥಿತಿಗಳನ್ನು ಅಭ್ಯಸಿಸುತ್ತದೆ. ಮತ್ತೊಂದು ಕೃತಿ 'ಅಂಗೈಯಲ್ಲಿ ಯೂರೊ ಅಮೆರಿಕ'ದಲ್ಲಿ ಲಿಂಗ ತಾರತಮ್ಯ ವಿಷಯವು ತಟಸ್ಥಭಾವದಿಂದ ನಿರೂಪಿತವಾಗಿದೆ. ಆದ್ದರಿಂದಲೇ ಅನುಪಮಾ ಅವರು ಫ್ಲಾರೆನ್ಸ್‌ಗೆ ಭೇಟಿ ನೀಡಿದ್ದರೂ ನೈಟೀಂಗೇಲ್‌ನ ಬಗ್ಗೆ ವಿಚಾರವನ್ನು ಕೃತಿಯಲ್ಲಿ ಪ್ರಸ್ತಾಪಿಸಿಲ್ಲ. ನೇಮಿಚಂದ್ರ ಅವರು ಫ್ಲಾರೆನ್ಸ್ ನೈಟಿಂಗೇಲ್ ಬಗ್ಗೆ ಚಾರಿತ್ರಿಕ ಅಂಶಗಳನ್ನು ಪ್ರಸ್ತಾಪಿಸುತ್ತಾ ೧೮೬೦ರಲ್ಲಿ ಸೇಂಟ್ ಥಾಮಸ್ ಆಸ್ಪತ್ರೆಯನ್ನು ಸ್ಥಾಪಿಸಿ, ಜಗತ್ತಿನ ಮೊದಲ ನರ್ಸಿಂಗ್ ಶಾಲೆಯನ್ನು ತೆರೆದ ಬಗ್ಗೆ ಉಲ್ಲೇಖಿಸಿದ್ದಾರೆ. ಚಾರಿತ್ರಿಕ ಅಂಶಗಳ ಉಲ್ಲೇಖವು ಸ್ಥಾನವನ್ನು ಪಡೆದುಕೊಳ್ಳುವುದು ಜೀವನ ಚರಿತ್ರೆಗೆ ಸಂಬಂಧಿಸಿದ ಮಾಹಿತಿಗಳ ಸಂಗ್ರಹಣೆಯ ಹಿನ್ನೆಲೆಯಲ್ಲಿ ಎಂಬುದು ಸ್ಪಷ್ಟವಾಗುತ್ತದೆ. ಹೇಮಲತಾ ಮಹಿಷಿ ಮತ್ತು ನೇಮಿಚಂದ್ರ ಅವರು ಫ್ಲಾರೆನ್ಸ್ ನೈಟಿಂಗೇಲ್‌ನ ಬಗ್ಗೆ ಪ್ರಸ್ತಾಪಿಸಿದ್ದರೂ ಇಬ್ಬರ ಉಲ್ಲೇಖಗಳ ಹಿನ್ನೆಲೆಯಲ್ಲಿರುವ ಉದ್ದೇಶವು ಭಿನ್ನವಾಗಿದೆ. ಹೇಮಲತಾ ಅವರ ದೃಷ್ಟಿಕೋನವು ನೈಟೀಂಗೇಲ್‌ನ ಬಗ್ಗೆ ಅಭಿಮಾನದ ನುಡಿಗಳಿಂದ ಕೂಡಿದ್ದರೆ, ನೇಮಿಚಂದ್ರ ಅವರ ದೃಷ್ಟಿಯು ಜೀವನ ಚರಿತ್ರೆಯ ಕೃತಿಯನ್ನು ರಚಿಸುವ ಉಪಯೋಗದ ನೆಲೆಯಲ್ಲಿ ಉಲ್ಲೇಖಿತವಾಗಿದೆ. ಈ ಇಬ್ಬರು ಲೇಖಕರನ್ನು ಹೊರತುಪಡಿಸಿ ಇತರ ಪ್ರವಾಸಿ ಲೇಖಕರು ಪ್ರಸ್ತಾಪಿಸಿಲ್ಲ. ಲೇಖಕರು ಅಭಿಪ್ರಾಯಗಳು ಸೈದ್ಧಾಂತಿಕ ನೆಲೆಯಲ್ಲಿಯೇ ನಿರೂಪಿತವಾಗಿರುವುದನ್ನು ಗುರುತಿಸಬಹುದು.

ಸೇಂಟ್ ಜಿನೀವಿ : ಈಕೆ ಹೂಣದೊರೆ 'ಅಟ್ಟಿಲಾನ್'ನ ಆಕ್ರಮಣದಿಂದ ಫ್ರೆಂಚ್ ರಾಜರನ್ನು ಮತ್ತು ರಾಷ್ಟ್ರವನ್ನು ಕಾಪಾಡಿದವಳು. ಈಕೆಯ ಹೆಸರಿನಲ್ಲಿ ಹಿಂದೆ ಮೆರವಣಿಗೆ, ಉತ್ಸವಗಳನ್ನು ಮಾಡುತ್ತಿದ್ದರಂತೆ. ಹೀಗೆ ಈಕೆಯ ಬಗ್ಗೆ ಹೇಳುವಾಗ ಹೇಮಲತಾ ಮಹಿಷಿಯವರಲ್ಲಿ ಮಹಿಳಾಪರವಾದ ಧೋರಣೆ ಇರುವುದನ್ನು ಕಾಣಬಹುದು. ಬೇರೆ ಪ್ರವಾಸಿ ಲೇಖಕರು ಸೆಂಟ್ ಜಿನೀವಿಯ ಬಗ್ಗೆ ಪ್ರಸ್ತಾಪಿಸಿಲ್ಲ. ಹೇಮಲತಾ ಮಹಿಷಿ ಅವರು ಇತಿಹಾಸದ ವಿದ್ಯಾರ್ಥಿ ಆಗಿದ್ದರಿಂದ ಯುರೋಪ್ ಇತಿಹಾಸವನ್ನು ಬಲ್ಲವರಾಗಿದ್ದಾರೆ. ಆದಕಾರಣ ಸೆಂಟ್ ಜಿನೀವಿಯ ವ್ಯಕ್ತಿ ಚರಿತ್ರೆಯನ್ನು ನಿರೂಪಿಸಿದ್ದಾರೆ. ಪ್ರವಾಸ ಕೃತಿಗಳ ನಿರೂಪಣೆಯ ಮೇಲೆ ಪ್ರವಾಸಿ ಲೇಖಕನ ಶೈಕ್ಷಣಿಕ ಜ್ಞಾನವು ಪ್ರಭಾವ ಬೀರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಸ್ತ್ರೀವಾದದ ನೆಲೆಯಲ್ಲಿ ಲೇಖಕಿ ಇದುವರೆಗೂ ಹೆಚ್ಚು ಗುರುತಿಸಲ್ಪಡದ ಐತಿಹಾಸಿಕ ಮಹಿಳಾ ಸಾಧಕಿಯರನ್ನು ಪ್ರವಾಸ ಕೃತಿಯ ಮೂಲಕ ಬೆಳಕಿಗೆ ತರುವ ಇರಾದೆಯನ್ನು ಹೊಂದಿದ್ದಾರೆ.

ಕ್ಯಾರೋಲಿನ್ ಹರ್ಷೆಲ್: ಯುರೇನಸ್ ಗ್ರಹವನ್ನು ಕಂಡುಹಿಡಿದ 'ವಿಲಿಯಂ ಹರ್ಷೆಲ್'ನ ತಂಗಿ. ಆತನ ಸಂಶೋಧನೆಯಲ್ಲಿ ಕ್ಯಾರೋಲಿನ್‌ನ ಕೊಡುಗೆ ಮಹತ್ತರವಾದುದು ಎಂದು ನೇಮಿಚಂದ್ರ ಅವರು ಹೇಳಿದ್ದಾರೆ. ಲೇಖಕಿಗೆ ಕ್ಯಾರೋಲಿನ್ ಮಾಡಿರುವ ಸಂಶೋಧನೆಗಳೇನು, ಮತ್ತು ಆಕೆಯ ಸಂಶೋಧನೆಗಳು

ಅಣ್ಣನು ಯುರೇನಸ್ ಗ್ರಹ ಕಂಡುಹಿಡಿಯಲು ಹೇಗೆ ಸಹಕಾರಿಯಾದವು ಎಂಬ ಬಗ್ಗೆ ಅಧ್ಯಯನ ಮಾಡುವ ಆಸಕ್ತಿಯನ್ನು ತೋರಿದ್ದಾರೆ. ನೇಮಿಚಂದ್ರ ಅವರು ಪ್ರಪಂಚದ ಮಹಿಳಾ ವಿಜ್ಞಾನಿಗಳ ಕುರಿತ ಪುಸ್ತಕ ರಚನೆಯಲ್ಲಿ ತೊಡಗಿದ್ದರು. ಲೇಖಕಿಯ ಯುರೋಪ್ ಪ್ರವಾಸದ ಮೂಲ ಉದ್ದೇಶವೇ ಮಹಿಳಾ ವಿಜ್ಞಾನಿಗಳ ಜನ್ಮಸ್ಥಳಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸುವುದಾಗಿತ್ತು. ಅವರ ಕಾರ್ಯ ಯೋಜನೆಯ ಪೂರ್ವ ತಯಾರಿಯ ಹಿನ್ನೆಲೆಯಲ್ಲಿ ಕ್ಯಾರೋಲಿನ್ ಹರ್ಷೆಲ್‌ಳನ್ನು ಪರಿಚಯಿಸಿದ್ದಾರೆ. ಐತಿಹಾಸಿಕ ವ್ಯಕ್ತಿಗಳು ಪ್ರವಾಸ ಕೃತಿಯಲ್ಲಿ ಉಲ್ಲೇಖಿತಗೊಳ್ಳುವುದು ಲೇಖಕರ ಯೋಜನೆ ಮತ್ತು ಆಸಕ್ತಿಯ ನೆಲೆಯಲ್ಲಿ ಎಂಬುದು ತಿಳಿದುಬರುತ್ತದೆ.

ಮಿಲೇವಾಮಾರಿ : ಈಕೆ ಐನ್‌ಸ್ಟೈನ್‌ನ ಪತ್ನಿ. ನೇಮಿಚಂದ್ರ ಅವರು 'ಐನ್‌ಸ್ಟೈನ್‌ಗಿಂತ ಆಕೆಯ ಹೆಂಡತಿ ಮಿಲೇವಾಮಾರಿ ಬಗ್ಗೆ ತಿಳಿಯಲು ಹೆಚ್ಚು ಆಸಕ್ತಿ' ಇತ್ತು ಎಂದಿದ್ದಾರೆ. ಆಕೆಯ ಬಗ್ಗೆ ಅಧ್ಯಯನ ಮಾಡಬೇಕೆಂಬ ಹಂಬಲದಿಂದ ವಿಷಯ ಸಂಗ್ರಹಣೆ ಕಾರ್ಯಕ್ಕಾಗಿ ಅಲೆದಿದ್ದಾರೆ. ಲೇಖಕಿ ಮಿಲೇವಾಮಾರಿಯನ್ನು ಪರಿಚಯಿಸುವ ಉದ್ದೇಶವೇ ಮಹಿಳಾಪರ ಧೋರಣೆಯ ಕಾರಣದಿಂದ ಎಂಬುದನ್ನು ಇಲ್ಲಿ ಗ್ರಹಿಸಬಹುದಾಗಿದೆ.

ಆನ್‌ಫ್ರಾಂಕ್ : ಈಕೆ ಡಚ್(ಆಮ್‌ಸ್ಟರ್‌ಡಾಂ) ದೇಶದ ಯಹೂದಿ ಕುಟುಂಬಕ್ಕೆ ಸೇರಿದವಳು. ಆನ್‌ಫ್ರಾಂಕ್‌ಳ ಬಗ್ಗೆ ಯುರೋಪ್ ಪ್ರವಾಸ ಮಾಡಿರುವ ಮಹಿಳಾ ಲೇಖಕಿಯರಾದ ಹೇಮಲತಾ ಮಹಿಷಿ, ನೇಮಿಚಂದ್ರ, ಇಂದಿರಾ ಶಿವಣ್ಣ, ದೇವಕೀ ರಾಣಿ ಮೊದಲಾದವರು ಉಲ್ಲೇಖಿಸಿದ್ದಾರೆ. ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ಜರ್ಮನಿಯ ಸೇನೆ ಆಮ್‌ಸ್ಟರ್‌ಡಾಮ್‌ನ್ನು ಆಕ್ರಮಿಸಿಕೊಂಡಿತು. ಆಗ ಜರ್ಮನಿಯ ಅಧ್ಯಕ್ಷ 'ಹಿಟ್ಲರ್' ನಾಜಿಪಡೆಯನ್ನು ಕಟ್ಟಿಕೊಂಡು ಯೆಹೂದಿಗಳ ಮೇಲಿನ ದ್ವೇಷದಿಂದ ಜರ್ಮನಿಯ ಸುತ್ತಮುತ್ತಲ ದೇಶದ ಮೇಲೆ ಆಕ್ರಮಣ ಮಾಡುವ ಯೋಜನೆ ರೂಪಿಸತೊಡಗಿದ. ಇದೇ ಕಾಲಘಟ್ಟದಲ್ಲಿ ೧೯೨೯ ಜೂನ್ ೧೨ರಂದು ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಯಹೂದಿ ಕುಟುಂಬದಲ್ಲಿ ಆನ್ ಫ್ರಾಂಕ್‌ಳ ಜನನವಾಯಿತು. ಈಕೆಯ ತಂದೆಯ ಹೆಸರು ಆಟೋಫ್ರಾಂಕ್. ಇವರು ಡಚ್ ದೇಶಕ್ಕೆ ವಲಸೆ ಬಂದಿದ್ದರು. ಜರ್ಮನಿಯ ನಾಜಿ ಪಡೆಯು ಹಿಟ್ಲರ್‌ನ ಆಣತಿಯಂತೆ ಡಚ್ ದೇಶದ ಮೇಲೆ ೧೯೪೨ರಿಂದ ೧೯೪೪ರವರೆಗೆ ಎರಡು ವರ್ಷಗಳ ಕಾಲ ಸತತವಾಗಿ ದಾಳಿ ಮಾಡಿತು. ಆಗ ಆನ್‌ಫ್ರಾಂಕ್‌ಳಿಗೆ ಹದಿನಾಲ್ಕು ವರ್ಷ. ಆಟವಾಡಬೇಕಾದ ವಯಸ್ಸಿನಲ್ಲಿದ್ದ ಆನ್‌ಫ್ರಾಂಕ್‌ಗೆ ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ತಮ್ಮ ಮನೆಯ ಹಿಂಬದಿಯ ಗುಪ್ತಜಾಗದಲ್ಲಿ ಅವಿತು ಕುಳಿತುಕೊಳ್ಳಬೇಕಾಯಿತು. ಆ ಎರಡು ವರ್ಷಗಳ ಕಾಲ ಸತತವಾಗಿ ದಾಳಿ ಆಗುತ್ತಿದ್ದುದರಿಂದ ಪ್ರಾಣಭಯದಿಂದ ಜೀವಿಸಬೇಕಾದ ಸಂದರ್ಭವು ಆನ್‌ಫ್ರಾಂಕ್‌ಗೆ ಡೈರಿ ಬರೆಯಲು ಪ್ರೇರೇಪಿಸಿತು. ಒಂದು ಕಡೆ ಪ್ರಾಣಭಯ, ಮತ್ತೊಂದು ಕಡೆ ಸಮಾಜದ ಸಂಪರ್ಕವೇ ಇಲ್ಲದೆ, ಭಾವನೆಗಳನ್ನೆಲ್ಲಾ ಅದುಮಿಟ್ಟುಕೊಂಡು ಬದುಕಬೇಕಾದ ಸಂದರ್ಭ ಇವೆಲ್ಲವೂ ಆಕೆಯನ್ನು ಕಾಡುತ್ತಿರುವ ಪ್ರಶ್ನೆಗಳಾಗಿದ್ದವು. ಆನ್‌ಫ್ರಾಂಕ್ ತನ್ನ ಡೈರಿಯಲ್ಲಿ ತಾನು ಅನುಭವಿಸಿದ ಯಾತನಾಮಯ ದಿನಗಳ ಬಗ್ಗೆ ಬರೆದಿದ್ದಾಳೆ. ಕೊನೆಗೆ ಇವರೆಲ್ಲರೂ ನಾಜಿಗಳ ಕೈಗೆ ಸಿಕ್ಕು ಪ್ರಾಣ ತೆತ್ತರು. ನಾಜಿ ಪಡೆಯಿಂದಾದ ಸ್ತ್ರೀಯರ ಮೇಲಿನ ದೌರ್ಜನ್ಯವು ಲೇಖಕಿಯರಿಗೆ ಆನ್‌ಫ್ರಾಂಕ್‌ಳ ಬಗ್ಗೆ ಐತಿಹಾಸಿಕ

ವಿವರಗಳನ್ನು ದಾಖಲಿಸುವಂತೆ ಮಾಡಿದ್ದವು. ಪುರುಷ ಲೇಖಕರು ಹಿಟ್ಲರ್‌ನ ಬಗ್ಗೆ ಮತ್ತು ಆತನ ಕ್ರೌರ್ಯದ ಬಗ್ಗೆ ಐತಿಹಾಸಿಕ ವಿವರಗಳನ್ನು ದಾಖಲಿಸಿದ್ದರೂ ಆನ್‌ಫ್ರಾಂಕ್‌ಳ ವಿಷಯನ್ನು ಪ್ರಸ್ತಾಪಿಸಿಲ್ಲದಿರುವುದು ಈ ವಿಶ್ಲೇಷಣೆಗೆ ಕಾರಣವಾಗಿದೆ. ಆನ್‌ಫ್ರಾಂಕ್ ಅಡಗಿ ಕುಳಿತಿದ್ದ ಗುಪ್ತಗೃಹವನ್ನು ಇಂದು ಸಾರ್ವಜನಿಕ ವೀಕ್ಷಣೆಗೆ ತೆರೆದಿದ್ದಾರೆ. ಇಂದಿರಾ ಶಿವಣ್ಣ ಅವರು ಆ ಸ್ಥಳವನ್ನು ನೋಡಲು ಕಾತರರಾಗಿದ್ದರೂ ತಮ್ಮ ನಿಯೋಜಿತ ಪ್ರವಾಸದ ದೆಸೆಯಿಂದ ನೋಡಲಾಗಲಿಲ್ಲವೆಂಬ ನೋವನ್ನು ಪ್ರಕಟಿಸಿದ್ದಾರೆ. ನೇಮಿಚಂದ್ರ ಅವರು ಆನ್‌ಫ್ರಾಂಕ್ ಅಡಗಿಕೊಂಡಿದ್ದ ಗುಪ್ತಗೃಹವನ್ನು ನೋಡಿ ಆಕೆಯ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ.

ಪ್ರವಾಸಗಳು ಪೂರ್ವಯೋಜಿತ ಉದ್ದೇಶಗಳಿಂದ ಕೂಡಿರುತ್ತವೆ. ಎಲ್ಲಾ ಸ್ಥಳಗಳು ಎಲ್ಲರನ್ನೂ ಆಕರ್ಷಿಸುವುದಿಲ್ಲ. ವ್ಯಕ್ತಿಗಳಿಗೆ ಸಂಬಂಧಿಸಿದಂತೆಯೂ ಇದೇ ಮಾತು ಅನ್ವಯಿಸುತ್ತದೆ. ಆದ್ದರಿಂದಲೇ ಆನ್‌ಫ್ರಾಂಕ್‌ಳ ಗುಪ್ತಗೃಹವು ಎಲ್ಲಾ ವರ್ಗದ ಲೇಖಕರನ್ನು ಆಕರ್ಷಿಸಲಿಲ್ಲ. ಕೇವಲ ನೇಮಿಚಂದ್ರ ಮತ್ತು ಹೇಮಲತಾ ಮಹಿಷಿ ಅವರು ಆನ್‌ಫ್ರಾಂಕ್‌ಳ ಮನೆಗೆ ಭೇಟಿ ನೀಡುತ್ತಾರೆ. ಉಳಿದ ಲೇಖಕರು ಆಸಕ್ತಿ ವಹಿಸಿಲ್ಲ. ಇಂದಿರಾ ಶಿವಣ್ಣ ಅವರು ನಿಯೋಜಿತ ಪ್ರವಾಸದ ಕಾರಣದಿಂದ ಆನ್‌ಫ್ರಾಂಕ್‌ಳ ಮನೆಯನ್ನು ಭೇಟಿ ಮಾಡಲು ಸಾಧ್ಯವಾಗುವುದಿಲ್ಲ. ಪ್ರವಾಸಗಳು ನಿಶ್ಚಿತ ಯೋಜನೆಯಲ್ಲಿ ಅನಿಶ್ಚಿತತೆಯನ್ನು ಒಳಗೊಂಡಿರುತ್ತವೆ ಹಾಗೂ ಪ್ರವಾಸಿಯ ಆಸಕ್ತಿಯನ್ನು ಆಧರಿಸಿರುತ್ತದೆ ಎಂಬುದನ್ನು ಗ್ರಹಿಸಲಾಗಿದೆ.

ಪ್ರವಾಸಿ ಲೇಖಕರ ವೈಯುಕ್ತಿಕ ನಿಲುವುಗಳು ಮತ್ತು ಪೂರ್ವಜ್ಞಾನವು ವ್ಯಕ್ತಿ ಚರಿತ್ರೆಯ ನಿರೂಪಣೆ ಮೇಲೆ ಪ್ರಭಾವ ಬೀರಿದೆ. ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿದ ನಾಯಕರುಗಳ ಪ್ರಭಾವವು ವ್ಯಕ್ತಿ ಚರಿತ್ರೆಗೆ ನಿರೂಪಣೆಗೆ ಕಾರಣವಾಗಿದೆ. ಲೇಖಕರ ಸೈದ್ಧಾಂತಿಕ ನಿಲುವುಗಳು ಪ್ರಭಾವಿ ನಾಯಕರ ಸೈದ್ಧಾಂತಿಕ ನಿಲುವುಗಳೊಂದಿಗೆ ಹೊಂದಾಣಿಕೆಯಾಗುವಂತಿದ್ದರೆ ಅಥವಾ ಆ ವ್ಯಕ್ತಿಯ ಸೈದ್ಧಾಂತಿಕ ನಿಲುವುಗಳೊಂದಿಗೆ ಪೂರ್ಣ ವಿರೋಧಭಾವವಿದ್ದರೆ ವ್ಯಕ್ತಿ ಚರಿತ್ರೆಯ ನಿರೂಪಣೆಗೆ ಪ್ರವಾಸಿ ಲೇಖಕ ಪ್ರಚೋದಿತನಾಗುತ್ತಾನೆ. ಪ್ರವಾಸಿ ಲೇಖಕರು ವ್ಯಕ್ತಿ ಚರಿತ್ರೆಯ ನಿರೂಪಣೆಯಲ್ಲಿ ಭಿನ್ನ ನೆಲೆಯನ್ನು ಕಂಡುಕೊಳ್ಳಲು ಈ ಅಂಶವೇ ಪ್ರಧಾನ ಕಾರಣವಾಗಿದೆ. ಕಾಲ, ದೇಶ ಬದಲಾದಂತೆ ವ್ಯಕ್ತಿಯ ನಿಲುವುಗಳಲ್ಲಿ ಬದಲಾವಣೆಯಾಗುವುದು ಸಹಜವಾದ ಕ್ರಿಯೆಯಾಗಿದೆ. ಅದು ಕರ್ತೃ ಮತ್ತು ವ್ಯಕ್ತಿ ಇಬ್ಬರಿಗೂ ಅನ್ವಯಿಸುತ್ತದೆ. ಕಾಲ ಮತ್ತು ದೇಶ ಐತಿಹಾಸಿಕ ಸಂಗತಿಗಳನ್ನು ನಿರ್ಧರಿಸುವ ಪ್ರಮಾಣಗಳಾಗಿವೆ.

೪.೪ ಸಂಘರ್ಷ –ಹೋರಾಟ : ಲೇಖಕರ ಚಾರಿತ್ರಿಕ ನೋಟಗಳು

ಯುರೋಪಿನ ಚರಿತ್ರೆಯನ್ನು ಹೋರಾಟ–ಸಂಘರ್ಷಗಳನ್ನು ಹೊರತುಪಡಿಸಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರಪಂಚದಲ್ಲಿ ಯುರೋಪಿನ ಪ್ರತಿಯೊಂದು ದೇಶಗಳು ಸಂಘರ್ಷಗಳ ಮೂಲಕವೇ ಗುರುತಿಸಿಕೊಂಡಿವೆ. ಕ್ರಾಂತಿ, ಹೋರಾಟ, ಯುದ್ಧಗಳು ಪ್ರಪಂಚದ ಇತರ ದೇಶಗಳಿಗಿಂತ ಯುರೋಪಿನ ದೇಶಗಳಲ್ಲಿ ನಡೆದಿರುವುದೇ ಹೆಚ್ಚು. ಎರಡನೇ ಮಹಾಯುದ್ಧದ ತರುವಾಯ ಈ ದೇಶಗಳಲ್ಲಿ ಸಂಘರ್ಷಗಳ ಪ್ರಮಾಣ ಕಡಿಮೆಯಾಗಿದೆ. ಯುರೋಪ್ ದೇಶಗಳಿಗೆ ಪ್ರವಾಸ ಹೋಗುವ ಲೇಖಕರು ತಮ್ಮ ಪ್ರವಾಸ ಕೃತಿಗಳಲ್ಲಿ ಈ ಹಿಂದೆ ನಡೆದಿರುವ ಸಂಘರ್ಷ– ಹೋರಾಟ–ಯುದ್ಧಗಳ ಚರಿತ್ರೆಯನ್ನು ಮೆಲುಕು ಹಾಕಿದ್ದಾರೆ.

ಈ ಪ್ರಕ್ರಿಯೆಯಲ್ಲಿ ಲೇಖಕರಿಗೆ ಪ್ರಚೋದಿಸಿದ ಅಂಶಗಳು ಯಾವುವು ಎಂಬುದು ಕುತೂಹಲಕಾರಿ ಅಧ್ಯಯನವಾಗಿದೆ. ಈ ಭಾಗದಲ್ಲಿ ಸಂಘರ್ಷ ಮತ್ತು ಹೋರಾಟಗಳಿಗೆ ಸಂಬಂಧಿಸಿದಂತೆ ಲೇಖಕರ ಪ್ರತಿಕ್ರಿಯೆಗಳನ್ನು ಆಧರಿಸಿ ವಿಶ್ಲೇಷಿಸಲಾಗಿದೆ.

ಅ) ಸಂಘರ್ಷ : ಲೇಖಕರ ಚಾರಿತ್ರಿಕ ನೋಟ

ಪ್ರವಾಸಿ ಲೇಖಕರು ಉಲ್ಲೇಖಿಸಿರುವ ಯುರೋಪಿನ ದೇಶಗಳಲ್ಲಿ ಘಟಿಸಿದ ಸಂಘರ್ಷಗಳ ಕುರಿತು ವಿಶ್ಲೇಷಿಸಲಾಗುವುದು. ದೇಶಗಳ ನಡುವಿನ ಸಂಘರ್ಷಗಳು, ಜನಾಂಗಗಳ ನಡುವಿನ ಸಂಘರ್ಷಗಳು, ಸಿಂಹಾಸನಕ್ಕಾಗಿ ನಡೆದಿರುವ ಸಂಘರ್ಷಗಳ ಕುರಿತು ಲೇಖಕರು ಪ್ರಕಟಿಸಿರುವ ಚಾರಿತ್ರಿಕ ಸಂಗತಿಗಳನ್ನು ವಿಶ್ಲೇಷಿಸಲಾಗುವುದು.

ಪನೋರಮಾ ಮ್ಯೂಸಿಯಂ: ಜಿ.ಎಸ್. ಶಿವರುದ್ರಪ್ಪ ಅವರು ಮಾಸ್ಕೋ ನಗರದಲ್ಲಿರುವ ಪನೋರಮಾ ಮ್ಯೂಸಿಯಂಗೆ ಭೇಟಿ ನೀಡಿದ ಸಂದರ್ಭದಲ್ಲಿ 'ಬೋರ್ಡಿಯಾ ಕದನ'ದ ಶಿಲ್ಪಕೃತಿಗಳನ್ನು ನೋಡಿದ್ದಾರೆ. ಯುದ್ಧದ ಭೀಕರತೆಯನ್ನು ಸಾರುವ ಶಿಲ್ಪಕೃತಿಗಳು ಲೇಖಕರನ್ನು ಚಿಂತನೆಗೆ ಒಳಗುಮಾಡಿವೆ. ನೆಪೋಲಿಯನ್ ರಷ್ಯನ್ನರ ಮೇಲೆ ಬೋರ್ಡಿನೋ ಎಂಬಲ್ಲಿ ಯುದ್ಧ ಮಾಡಿದ್ದಾನೆ. ಈ ಯುದ್ಧದಲ್ಲಿ ರಷ್ಯನ್ನರು ಗೆಲುವು ಪಡೆದಿದ್ದಾರೆ. ಆ ಯುದ್ಧದ ದೃಶ್ಯಗಳನ್ನು ಶಿಲ್ಪಕೃತಿಯಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ. ಅದನ್ನು ನೋಡಿದ ಲೇಖಕರು "ರಷ್ಯಾ ದೇಶದ ಜನ, ಪರಾಕ್ರಮಣವನ್ನು ಹೇಗೆ ಧೈರ್ಯದಿಂದ ಎದುರಿಸಿದರೆಂಬ ಇತಿಹಾಸದ ಪುಟವೊಂದನ್ನು ಜನತೆಯ ಮುಂದಿಡುವುದರ ಮೂಲಕ ಈ ದೇಶ ತನ್ನ ಐತಿಹಾಸಿಕ ಪ್ರಜ್ಞೆಯನ್ನು ಹೇಗೆ ಕಾಯ್ದುಕೊಂಡಿದೆ ಎಂಬುದನ್ನು ಯಾರಾದರೂ ಗುರುತಿಸಬಹುದು"(ಜಿ.ಎಸ್. ಶಿವರುದ್ರಪ್ಪ., ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ., ಪು-೪೨,೪೩)ಎಂದಿದ್ದಾರೆ. ಲೇಖಕರಿಗೆ ಅಲ್ಲಿನ ಐತಿಹಾಸಿಕ ವಿವರಗಳುಳ್ಳ ಶಿಲ್ಪಕೃತಿಗಳಿಗಿಂತ ಆ ದೇಶವು ತನ್ನ ಜನರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸುವುದರಲ್ಲಿ ಹೇಗೆ ನಿರತವಾಗಿದೆ, ಮತ್ತು ಅದನ್ನು ಜನತೆ ಎಷ್ಟು ಲಾಭದಾಯಕವಾಗಿ ಮಾಡಿಕೊಳ್ಳುತ್ತಿದೆ ಎಂಬುದನ್ನು ತಿಳಿಸುವುದೇ ಆಗಿದೆ. ಲೇಖಕರು ಈ ಅಭಿಪ್ರಾಯವನ್ನು ವ್ಯಕ್ತಪಡಿಸುವುದರ ಮೂಲಕ ಓದುಗರು ಭಾರತದೊಂದಿಗೆ ಹೋಲಿಸಿಕೊಳ್ಳುವಂತೆ ಮಾಡಿದ್ದಾರೆ. ಭಾರತ ದೇಶದಲ್ಲಿ ಇಂತಹ ಪ್ರಯತ್ನಗಳಾಗುವುದಿರಲಿ ಈಗಾಗಲೇ ಐತಿಹಾಸಿಕ ಸ್ಥಳಗಳೆಂದು ಗುರುತಿಸಲ್ಪಟ್ಟ ಸ್ಥಳಗಳನ್ನು ಕಾಯ್ದುಕೊಳ್ಳುವಲ್ಲಿಯೇ ವಿಫಲವಾಗಿರುವುದಕ್ಕೆ ಅನೇಕ ಉದಾಹರಣೆಗಳಿವೆ. ವಿಜಯನಗರ ಸಾಮ್ರಾಜ್ಯದ ಹಂಪೆಯನ್ನು 'ಹಾಳು ಹಂಪೆ' ಮಾಡಿರುವುದೇ ಇದಕ್ಕೆ ಜೀವಂತ ನಿದರ್ಶನವಾಗಿದೆ. ಲೇಖಕರ ಅಭಿಪ್ರಾಯದಲ್ಲಿ 'ಇನ್ನೂ ಜನರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಹೇಗೆ ಬೆಳೆಸುತ್ತಾರೆ?' ಎಂಬ ಅನುಮಾನ ವ್ಯಕ್ತವಾಗಿದೆ. ಲೇಖಕರಿಗೆ ಪನೋರಮಾ ಮ್ಯೂಸಿಯಂ ಎಂಬ ಸ್ಥಳವು ಯುದ್ಧದ ಭೀಕರತೆಯನ್ನು ಸಾರುವ ಬದಲು ಜನರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸುವ ಸಾಧನವಾಗಿ ಕಂಡುಬಂದಿದೆ.

ಜಿ. ಎಸ್. ಶಿವರುದ್ರಪ್ಪ ಅವರು 'ಇಂಗ್ಲೆಂಡಿನಲ್ಲಿ ಚತುರ್ಮಾಸ' ಕೃತಿಯಲ್ಲಿ ಇಂಗ್ಲೆಂಡ್ ದೇಶದ ಪೂರ್ವ ಚರಿತ್ರೆಯನ್ನು ಹೇಳಿದ್ದಾರೆ. 'ಸೂರ್ಯ ಮುಳುಗದ ಸಾಮ್ರಾಜ್ಯ'ವನ್ನು ನಿರ್ಮಾಣ ಮಾಡಿದ ಬ್ರಿಟೀಷರು ಒಂದು ಕಾಲದಲ್ಲಿ ರೋಮನ್ನರ ಆಳ್ವಿಕೆಗೆ ಒಳಪಟ್ಟಿದ್ದರು. ರೋಮನ್ನರಿಗೂ ಇಂಗ್ಲೆಂಡಿನವರಿಗೂ

ಕ್ರಿ.ಪೂ. ೨೫೦ಕ್ಕೂ ಮೊದಲಿನಿಂದಲೇ ಸಂಪರ್ಕವಿತ್ತು. ಕ್ರಿ.ಶ ೪೩ ರಲ್ಲಿ ರೋಮನ್ನಿನ ದೊರೆ 'ಕ್ಲಾಡಿಯಸ್'ನು ಇಂಗ್ಲೆಂಡ್ ಮೇಲೆ ದಾಳಿ ಮಾಡಿ ಗೆದ್ದು ಸ್ವಾಧೀನಪಡಿಸಿಕೊಂಡನು. ಆ ಸಂದರ್ಭದಲ್ಲಿ ರೋಮನ್ನರು ಹಾಗೂ ಆಂಗ್ಲೋ ಸ್ಯಾಕ್ಸನ್ನರು ಇಂಗ್ಲೆಂಡಿನಲ್ಲಿಯೇ ನೆಲೆಸಿದರು. ಇಂಗ್ಲೆಂಡಿನ ನಗರ 'ಬಾತ್'ಎಂಬಲ್ಲಿ ಇಂದಿಗೂ ರೋಮನ್ನರಿಂದ ನಿರ್ಮಾಣಗೊಂಡ ಬೃಹದಾಕಾರದ ಸ್ನಾನಗೃಹಗಳು ಇರುವುದನ್ನು ಜಿ.ಎಸ್. ಶಿವರುದ್ರಪ್ಪ ಅವರು ಉಲ್ಲೇಖಿಸಿದ್ದಾರೆ. ಹೀಗೆ ಪಶ್ಚಿಮ ಯುರೋಪಿನ ಅನೇಕ ಜನಾಂಗಗಳು ಇಂಗ್ಲೆಂಡ್ ಮೇಲೆ ಧಾಳಿ ಮಾಡಿದವರು ತಮ್ಮ ತವರು ದೇಶಕ್ಕೆ ಮರಳದೆ ಅಲ್ಲೇ ನೆಲೆ ನಿಂತರು. ಇಂದು ಇಂಗ್ಲೆಂಡಿನಲ್ಲಿ ನೆಲೆಸಿದ ಮೂಲ ನಿವಾಸಿಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಲೇಖಕರು ಈ ಚರಿತ್ರೆಯನ್ನು ಉಲ್ಲೇಖಿಸಲು ಇಂಗ್ಲೆಂಡ್ ದೇಶದ ಮೇಲಿನ ಅಭಿಮಾನ ಕಾರಣವಾಗಿದೆ. ಬ್ರಿಟೀಷರ ಮೇಲೆ ವಿದೇಶಿಯರ ದಾಳಿ ಆಗಿದೆ. ಮೂಲ ನಿವಾಸಿಗಳ ಸಂಖ್ಯೆ ಕಡಿಮೆ ಇದ್ದು ಇತರ ಜನಾಂಗದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೂ ಇಂದಿಗೂ ಇಂಗ್ಲೆಂಡ್ ದೇಶವು ಸದೃಢವಾಗಿದ್ದು ಅಭಿವೃದ್ಧಿ ಹೊಂದಿದ ದೇಶವಾಗಿದೆ. ಇದೇ ಅಂಶವನ್ನು ಭಾರತದೊಂದಿಗೆ ಹೋಲಿಸಿದಾಗ ನಮ್ಮ ದೇಶವೂ ಪರಕೀಯರ ಆಳ್ವಿಕೆಗೆ ಒಳಪಟ್ಟಿತ್ತು. ಆದರೆ ಭಾರತದಲ್ಲಿ ಮೂಲ ನಿವಾಸಿಗಳ ಸಂಖ್ಯೆ ಹೆಚ್ಚಿದೆ. ಬೇರೆ ದೇಶಗಳಿಂದ ಆಗಮಿಸಿ ನಮ್ಮ ದೇಶದಲ್ಲಿ ನೆಲೆಸಿದವರ ಸಂಖ್ಯೆಯು ಕಡಿಮೆ ಇದೆ. ಆದರೂ ನಮ್ಮ ದೇಶವು ಇಂಗ್ಲೆಂಡಿಗೆ ಹೋಲಿಸಿದರೆ ಅಭಿವೃದ್ಧಿ ಹೊಂದದಿರಲು ಕಾರಣವೇನು? ಎಂಬುದು ವಿಚಾರಣೀಯವಾಗಿದೆ. ಇದರಿಂದ ರಾಷ್ಟ್ರಪ್ರಜ್ಞೆಯುಳ್ಳ ದೇಶವಾಸಿಗಳ ಪ್ರಮಾಣ ಅಧಿಕವಾದಷ್ಟು ದೇಶವು ಸದೃಢವಾಗುತ್ತದೆ ಎಂಬುದನ್ನು ತಿಳಿಯಲಾಗಿದೆ.

ಭಾರತದಲ್ಲಿ ನಡೆದ ಐತಿಹಾಸಿಕ ಯುದ್ಧಗಳಿಂದ ಸಾಮ್ರಾಜ್ಯಗಳು ಅಳಿದಿರುವ ಉದಾಹರಣೆಗಳೇ ಹೆಚ್ಚಿವೆ. ಯುರೋಪಿನ ದೇಶಗಳಲ್ಲಿ ನಡೆದಿರುವ ಯುದ್ಧ, ಕ್ರಾಂತಿ ಮೊದಲಾದ ಸಂಘರ್ಷಗಳು ದೇಶವನ್ನು ಮತ್ತಷ್ಟು ಸಶಕ್ತಗೊಳಿಸಿವೆ, ಸದೃಢಗೊಳಿಸಿವೆ. ಇದರಿಂದ ಸಂಘರ್ಷಗಳು ಎಲ್ಲಾ ಸಮಯದಲ್ಲಿಯೂ ದೇಶಗಳ ಮೇಲೆ ಋಣಾತ್ಮಕ ಪರಿಣಾಮವನ್ನೇ ಬೀರುವುದಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

ಹೇಮಲತಾ ಮಹಿಷಿ ಅವರು ನಾಜಿಗಳು ಯಹೂದಿಗಳ ಮೇಲೆ ನಡೆಸಿದ ದೌರ್ಜನ್ಯವನ್ನು ಖಂಡಿಸುತ್ತಾ "ಇಂದಿಗೂ ಧರ್ಮ, ಭಾಷೆ, ಬಣ್ಣ, ವಿಚಾರ, ಭೇದದ ಕಾರಣದಿಂದಾಗಿ ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ, ದುರಾಚಾರವನ್ನು ನೆನಪಿಗೆ ತರುತ್ತದೆ. ಸರ್ಬಿಯಾದಂತಹ ಸ್ಥಳಗಳಲ್ಲಿ ಇಂದಿಗೂ ನಡೆದಿರುವ ಜನಾಂಗ ಹತ್ಯೆ ಆನ್‌ಫ್ರಾಂಕಳಂತಹವರನ್ನು ಇಂದಿಗೂ ಪ್ರಸ್ತುತವಾಗಿಸುತ್ತದೆ. ಅವುಗಳ ನಿರರ್ಥಕತೆಯನ್ನು ಜಗತ್ತಿಗೆ ಸಾರುತ್ತವೆ" (ಹೇಮಲತಾ ಮಹಿಷಿ., ಯುರೋ ದರ್ಶನ., ಪು-೧೭೧)ಎಂದಿದ್ದಾರೆ. ಲೇಖಕಿಗೆ ಮನುಷ್ಯ-ಮನುಷ್ಯನ ನಡುವೆ ನಡೆಯುವ ಸಂಘರ್ಷಗಳು ಅಮಾನವೀಯವಾದುದು ಎಂಬ ಅಭಿಪ್ರಾಯಕ್ಕೆ ಲಿಂಗ ತಾರತಮ್ಯದ ಹಿನ್ನೆಲೆ ಇರುವುದು ಕಂಡುಬರುತ್ತದೆ. ಮತ್ತು ಮನುಷ್ಯರ ನಡುವಿನ ಸಂಘರ್ಷಗಳು ನಿರರ್ಥಕ ಎಂದಿದ್ದಾರೆ. ಲೇಖಕಿಯ ಅಭಿಪ್ರಾಯಕ್ಕೆ ಲಿಂಗ ತಾರತಮ್ಯದ ಮಿತಿಯನ್ನು ಹಚ್ಚದೆ, ಪ್ರಸ್ತುತ ಸಮಾಜದ ಪರಿಸ್ಥಿತಿಗಳನ್ನು ಅವಲೋಕಿಸಿದಾಗ ಇಂದೂ ಕೂಡ ಭಾರತ ದೇಶದಲ್ಲಿ ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಸಂಘರ್ಷಗಳು ನಡೆಯುತ್ತಲೇ ಇರುವುದು ಕಂಡುಬರುತ್ತದೆ. 'ದತ್ತಪೀಠದಲ್ಲಿನ ಭೂ ವಿವಾದ, ಟಿಪ್ಪು ಜಯಂತಿ, ಹುಬ್ಬಳ್ಳಿಯ ಈದ್ಗಾ ಮೈದಾನ, ಅಯೋಧ್ಯಾ ಭೂ ವಿವಾದ' ಹೀಗೆ ಕಾಲಕಾಲಕ್ಕೆ ಒಂದಲ್ಲ ಒಂದು ಬಗೆಯಲ್ಲಿ ಧಾರ್ಮಿಕ ಸಂಘರ್ಷಗಳು, ರಾಜಕೀಯ ಪ್ರೇರಿತ ಜಾತಿಯಾಧಾರಿತ ಸಂಘರ್ಷಗಳು ನಡೆಯುತ್ತಲೇ ಬಂದಿದೆ. ಇವು ನಿರರ್ಥಕವಾದುದು

ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಲೇಖಕಿ ಅವರ 'ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸಿದ್ದಾರೆ' ಎಂಬ ಅಭಿಪ್ರಾಯವು ವೈಯಕ್ತಿಕ ನಿಲುವುಗಳನ್ನು ವ್ಯಕ್ತಪಡಿಸುತ್ತದೆ. ಶೋಷಣೆ, ದಬ್ಬಾಳಿಕೆ ನಡೆಯುವಲ್ಲಿ ಸಂಖ್ಯೆ ಮುಖ್ಯವಾಗಲಾರದು. ಶೋಷಿತರು ಮತ್ತು ಶೋಷಕರ ನಡುವಿನ ಸಂಘರ್ಷಕ್ಕೆ ಕಾರಣವಾಗುವ ಅಂಶಗಳು ಮತ್ತು ಹಿನ್ನೆಲೆ ಮುಖ್ಯವಾಗುತ್ತದೆ. ನಾಜಿ ಪಕ್ಷದವರ ಕೃತ್ಯಗಳನ್ನು ಆಧರಿಸಿ ನೋಡುವುದಾದರೆ ಲೇಖಕಿಯ ಅಭಿಪ್ರಾಯ ಭಾಗಶಃ ಸರಿಯಾಗಿದೆ. ಭಾರತೀಯ ಸಂದರ್ಭಕ್ಕೆ ಅಷ್ಟಾಗಿ ಅನ್ವಯಿಸುವುದಿಲ್ಲ. ಏಕೆಂದರೆ ಸಂಘರ್ಷಗಳಿಗೆ ಎರಡು ಆಯಾಮಗಳಿವೆ. ಒಂದು ಭೌತಿಕ ಸಂಘರ್ಷ, ಮತ್ತೊಂದು ಬೌದ್ಧಿಕ ಸಂಘರ್ಷ. ಭೌತಿಕ ಸಂಘರ್ಷವು ಸಮಾಜದ ಮೇಲೆ ಉಂಟುಮಾಡುವ ಪರಿಣಾಮಕ್ಕಿಂತ ಬೌದ್ಧಿಕ ಸಂಘರ್ಷದ ತೀವ್ರತೆ ಹೆಚ್ಚಿರುತ್ತದೆ. ದೈಹಿಕ ಧಾಳಿಯು ಬದಲಾವಣೆಗೆ ಪ್ರೇರಕವಾಗಬಹುದು ಅಥವಾ ಆಗದಿರಬಹುದು. ಬೌದ್ಧಿಕ ಧಾಳಿಯು ಪ್ರಸ್ತುತ ಸಮಾಜವನ್ನು ಮಾತ್ರ ಪ್ರಭಾವಿಸದೆ ಅದು ಮುಂದಿನ ಪೀಳಿಗೆಯ ಮೇಲೂ ಪ್ರಭಾವ ಬೀರುತ್ತದೆ.

ಶ್ರೀರಂಗರಾಜು ಅವರು ರಷ್ಯಾ ವಿದ್ಯಾರ್ಥಿಗಳು ಮತ್ತು ಭಾರತೀಯ ವಿದ್ಯಾರ್ಥಿಯ ನಡುವೆ ಟೆರಿಲಿನ್ ಶರ್ಟ್‌ಗಾಗಿ ನಡೆದ ಸಂಘರ್ಷವನ್ನು ಉಲ್ಲೇಖಿಸಿದ್ದಾರೆ. ಲುಮಾಂಬ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಭಾರತೀಯ ವಿದ್ಯಾರ್ಥಿಯು ತನ್ನ ಸ್ನೇಹಿತನನ್ನು ರಷ್ಯಾದ ವಿದ್ಯಾರ್ಥಿಗಳು ಟೆರಿಲಿನ್ ಶರ್ಟ್‌ಗಾಗಿ ಥಳಿಸಿದ ಘಟನೆಯನ್ನು ಲೇಖಕರಿಗೆ ಹೇಳುತ್ತಾನೆ. 'ರಾತ್ರಿಯ ವೇಳೆಯಲ್ಲಿ ನಾಟಕ ನೋಡಿ ವಾಪಾಸ್ಸಾಗುತ್ತಿದ್ದಾಗ ಎದುರಿಗೆ ಬಂದ ರಷ್ಯದ ವಿದ್ಯಾರ್ಥಿಗಳು ಭಾರತೀಯ ವಿದ್ಯಾರ್ಥಿಯನ್ನು ಅಡ್ಡಗಟ್ಟಿ ಟೆರಿಲಿನ್ ಶರ್ಟ್ ನೀಡುವಂತೆ ಆಗ್ರಹಿಸಿದ್ದಾರೆ. ನಿರಾಕರಿಸಿದಾಗ ಚೆನ್ನಾಗಿ ಥಳಿಸಿ, ಹಲ್ಲು ಮುರಿದು, ಶರ್ಟ್ ಕಿತ್ತುಕೊಂಡು ಹೋಗಿದ್ದಾರೆ. ಈ ಘಟನೆಯಲ್ಲಿ ಸಂಘರ್ಷಕ್ಕೆ ಕಾರಣವಾಗಿರುವುದು ಟೆರಿಲಿನ್ ಶರ್ಟ್. ರಷ್ಯಾದಲ್ಲಿ ಜನರಿಗೆ ಅಗತ್ಯವಾಗಿ ಬೇಕಾಗುವ ಸಾಮಾಗ್ರಿಗಳು ದೊರೆಯುತ್ತಿರಲಿಲ್ಲವೇ ಎಂಬ ವಿಚಾರ ಮುನ್ನೆಲೆಗೆ ಬರುತ್ತದೆ. ರಷ್ಯಾ ದೇಶದಲ್ಲಿ ಜನರಿಗೆ ಜನಸಾಮಾನ್ಯರ ಮೂಲಭೂತ ಅಗತ್ಯತೆಗಳನ್ನು ಪೂರೈಸುವ ವಸ್ತುಗಳನ್ನು ಉತ್ಪಾದನೆ ಮಾಡಿಲ್ಲ ಎಂಬ ಅಭಿಪ್ರಾಯವನ್ನು ಕಾರಂತರೂ ವ್ಯಕ್ತಪಡಿಸಿದ್ದಾರೆ[೧]. ರಷ್ಯಾ ದೇಶವು 'ಜನರ ಅಗತ್ಯತೆಗಳನ್ನು ಪೂರೈಸುವುದಕ್ಕಿಂತ ತನ್ನ ದೇಶದ ಅಗತ್ಯಗಳನ್ನು ಪೂರೈಸಲು ಹೆಚ್ಚು ಗಮನ ನೀಡಿತ್ತು ಎನಿಸುತ್ತದೆ. ಪ್ರವಾಸ ಕೃತಿಗಳಲ್ಲಿ ದಾಖಲಾಗುವ ಸಂಘರ್ಷದ ಸ್ವರೂಪಗಳು ಆ ದೇಶದ ಆರ್ಥಿಕ ಸ್ಥಿತಿಯನ್ನು, ಹಾಗೂ ಯಾವ ದೇಶವು ಯಾವ ವಸ್ತುಗಳ ತಯಾರಿಕೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದೆ? ಮತ್ತು ಏಕೆ? ಅದರ ಪರಿಣಾಮಗಳೇನು? ಎಂಬುದನ್ನು ವಿಶ್ಲೇಷಿಸಲು ಸಹಾಯಕವಾಗುತ್ತದೆ.

ನಾಗತಿಹಳ್ಳಿ ಚಂದ್ರಶೇಖರ್ ಅವರು ತಮ್ಮ ಯುರೋಪ್ ಪ್ರವಾಸ ಕೃತಿ 'ಅಯನ'ದಲ್ಲಿ ಕ್ರೈಸ್ತ ಪಂಗಡದ ಒಳಗೆ ನಡೆಯುತ್ತಿರುವ ಸಂಘರ್ಷವನ್ನು ದಾಖಲಿಸಿದ್ದಾರೆ. ಫ್ರಾನ್ಸ್ ದೇಶದಲ್ಲಿ ೮೦% ಜನರು ಕ್ಯಾಥೋಲಿಕ್ ಜನಾಂಗದವರು. ಆದರೆ ದೇವರಲ್ಲಿ ನಂಬಿಕೆಯಿಟ್ಟು ಚರ್ಚಿಗೆ ಹೋಗುವವರ ಪ್ರಮಾಣ ಸುಮಾರು ಶೇಕಡಾ ೧೫ ರಷ್ಟಿದೆ ಎಂದು ಉಲ್ಲೇಖಿಸಿದ್ದಾರೆ. ಫ್ರಾನ್ಸ್ ದೇಶದಲ್ಲಿ ಸರಕಾರದಿಂದ ಧಾರ್ಮಿಕ ಆಚರಣೆಗೆ ಸಂಬಂಧಿಸಿದಂತೆ ಯಾವುದೇ ಒತ್ತಡಗಳಿಲ್ಲ. ಹೀಗಿರುವಾಗ ಧಾರ್ಮಿಕ ಸಂಘರ್ಷ ಏರ್ಪಡುವ ಸಾಧ್ಯತೆಗಳು ಇಲ್ಲವೆಂದೇ ಹೇಳಬೇಕು. ಆದರೂ ಸಂಪ್ರದಾಯವಾದಿಗಳು ತಮ್ಮ ಮೂಲಭೂತ ನಿಲುವುಗಳನ್ನು ಹೊಂದಿರುವ ಕಾರಣದಿಂದ, ಸಂಪ್ರದಾಯವಾದಿ ಕ್ರೈಸ್ತರು ಮತ್ತು ಪ್ರಗತಿಪರ ಕ್ರೈಸ್ತರ ನಡುವೆ ಶೀತಲ ಸಮರ ನಡೆಯುತ್ತಿರುವುದು ಮಾನವನ ಮೂಲಧೋರಣೆಯನ್ನು ಸೂಚಿಸುತ್ತದೆ.

ಇಂದಿರಾ ಶಿವಣ್ಣ ಅವರು ಕ್ರೈಸ್ತರೊಳಗಿನ ವರ್ಗಸಂಘರ್ಷವು ಕ್ರೈಸ್ತರಲ್ಲಿಯೇ ಎರಡು ಪಂಗಡಗಳ ಉದಯಕ್ಕೆ ಕಾರಣವಾದ ಐತಿಹಾಸಿಕ ಘಟನೆಯನ್ನು ದಾಖಲಿಸಿದ್ದಾರೆ. ರೋಮ್‌ನಲ್ಲಿ ಕ್ರೈಸ್ತರ ಧಾರ್ಮಿಕ ಮುಖಂಡ ಪೋಪ್ ಆಗಿರುತ್ತಾನೆ. ಪೋಪರು ತಮಗೆ ಜನರು ನೀಡಿದ್ದ ಅಧಿಕಾರ, ಸ್ಥಾನಗಳ ದುರ್ಬಳಕೆ ಮಾಡಿಕೊಂಡಿರುವುದು ಜನತೆಗೆ ತಿಳಿಯುತ್ತದೆ. ಧಾರ್ಮಿಕ ಮುಖಂಡರು ಅನವಶ್ಯಕವಾಗಿ ರಾಜಕೀಯಗಳಲ್ಲಿ ಭಾಗವಹಿಸುವುದು ಬಹುತೇಕ ಜನರಿಗೆ ಹಿಡಿಸುವುದಿಲ್ಲ. ಆದ್ದರಿಂದ ಜನರು ಪೋಪ್‌ರ ವಿರುದ್ಧ ಪ್ರತಿಭಟಿಸಿದ್ದಾರೆ. ಈ ರೀತಿ ಪ್ರತಿಭಟಿಸಿದವರೆಲ್ಲಾ ಸೇರಿ ಹೊಸ ಪಂಥವನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಅವರನ್ನು 'ಪ್ರೊಟೆಸ್ಟೆಂಟರು' ಎಂದು ಕರೆಯಲಾಗುತ್ತದೆ ಎಂದು ಉಲ್ಲೇಖಿಸಿದ್ದಾರೆ. ಇದರಿಂದ ವಿಧಿತವಾಗುವುದೇನೆಂದರೆ ಧಾರ್ಮಿಕ ವೈಷಮ್ಯ ಪ್ರಪಂಚದ ಎಲ್ಲಾ ದೇಶಗಳಲ್ಲೂ ಇದ್ದೇ ಇರುತ್ತದೆ. ಪ್ರಗತಿಹೊಂದಿದ ಯುರೋಪ್ ದೇಶಗಳು ಇದಕ್ಕೆ ಹೊರತಲ್ಲ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

ಯುರೋಪಿನ ದೇಶಗಳಲ್ಲಿ ನಡೆದಿರುವ ಸಂಘರ್ಷಗಳಿಗೆ ಧಾರ್ಮಿಕ ಹಿನ್ನೆಲೆಯ ಜೊತೆಗೆ ಜನಾಂಗೀಯ ಹಿನ್ನೆಲೆಗಳು ಹೆಚ್ಚು ಕಾರಣೀಭೂತವಾಗಿವೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ. ಜನಾಂಗೀಯ ಹಿನ್ನೆಲೆಯಲ್ಲಿ ನಡೆಯುವ ವರ್ಣ ಸಂಘರ್ಷವು ಭಾರತದ ಜಾತಿ ವ್ಯವಸ್ಥೆಯಗಿಂತ ಭಿನ್ನವಾಗಿಲ್ಲ. ಅನುಪಮಾ ನಿರಂಜನ, ಶ್ರಿರಂಗರಾಜು, ಹೇಮಲತಾ ಮಹಿಷಿ ಮೊದಲಾದವರು ಯುರೋಪಿನಲ್ಲಿ ನಡೆಯುತ್ತಿರುವ ವರ್ಣ ಸಂಘರ್ಷಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಈ ಬಗೆಯ ಸಂಘರ್ಷಕ್ಕೆ ರಾಜಕೀಯ ಆಯಾಮವು ಸೇರಿಕೊಂಡಿರುವುದು ವ್ಯವಸ್ಥೆಯ ಅನಿವಾರ್ಯತೆಯನ್ನು ಸೂಚಿಸುತ್ತದೆ. ಪ್ರಪಂಚದ ಹಲವಾರು ದೇಶಗಳಲ್ಲಿ ಜನಾಂಗೀಯ ಸಂಘರ್ಷಗಳು ಇಂದಿಗೂ ಜರುಗುತ್ತಿರುವುದು ದುರದೃಷ್ಟಕರವಾಗಿದೆ. ಅಮೆರಿಕದಲ್ಲಿ ೨೫/೦೫/೨೦೨೦ರಂದು ನಡೆದ ಜಾರ್ಜ್ ಫ್ಲಾಯ್ಡ್‌ನ ಕೊಲೆ ಮತ್ತು ಅದಕ್ಕೆ ಹೊಂದಿಕೊಂಡಂತೆ ನಡೆದ ಸಂಘರ್ಷ ಸ್ವರೂಪದ ಚಳುವಳಿಗಳು ಈ ಅಂಶವನ್ನು ದೃಢಪಡಿಸುತ್ತದೆ. ಪ್ರವಾಸ ಕೃತಿಗಳು ವೈಯಕ್ತಿಕ ನೆಲೆಯಿಂದ ವಿಸ್ತರಿಸುತ್ತಾ ವಿಶ್ವವ್ಯಾಪಕತೆಯನ್ನು ಗಳಿಸಿಕೊಳ್ಳುವ ಮಾದರಿಯನ್ನು ಈ ಅಂಶಗಳು ಧ್ವನಿಸುತ್ತವೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ತಮ್ಮ 'ಯುರೋಪ್ ನೆನಪುಗಳು' ಕೃತಿಯಲ್ಲಿ ಗ್ರೀಕ್ ದೇಶದಲ್ಲಿನ ಸಾಂಸ್ಕೃತಿಕ ಸಂಘರ್ಷದ ಕುರಿತು ವಿವರಿಸಿದ್ದಾರೆ. ಗ್ರೀಕ್ ಸಂಸ್ಕೃತಿಯು ಹೊರಗಿನವರ ದಾಳಿಗೆ ಸಿಲುಕಿ ತನ್ನ ಮೂಲ ಜನಪದ ಸಂಸ್ಕೃತಿಯನ್ನು ಕಳೆದುಕೊಂಡಿದೆ. ಹಳ್ಳಿ ಪ್ರದೇಶಗಳಲ್ಲಿ ಈ ಸಂಸ್ಕೃತಿ ಇನ್ನೂ ಪೂರ್ಣ ಮಾಸಿಲ್ಲ. ಆಧುನಿಕ ಸಂಸ್ಕೃತಿಗೂ ಮತ್ತು ಮೂಲ ಜಾನಪದ ಸಂಸ್ಕೃತಿಗೂ ನಡುವೆ ಸಂಘರ್ಷ ಏರ್ಪಟ್ಟಿರುವುದನ್ನು ಲೇಖಕರು ಹೇಳಿದ್ದಾರೆ. ಇಂದಿನ ಆಧುನಿಕ ಸಂಸ್ಕೃತಿಯ ಎದುರಿಗೆ ನಗರಗಳಲ್ಲಿದ್ದ ಮೂಲ ಜನಪದ ಸಂಸ್ಕೃತಿಯು ಅಳಿವಿನ ಅಂಚಿಗೆ ಸರಿದಿರುವುದು ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಸಾಮಾನ್ಯವಾಗಿದೆ. ಹಳ್ಳಿಗಾಡುಗಳಲ್ಲಿ ಮಾತ್ರ ಮೂಲ ಜನಪದ ಸಂಸ್ಕೃತಿಯ ಆಚರಣೆಗಳು ಇನ್ನೂ ಉಸಿರಾಡುತ್ತಿವೆ. ಲೇಖಕರು ಗ್ರೀಕ್ ಸಂಸ್ಕೃತಿಯ ಸ್ಥಿತಿಯನ್ನು ಕಂಡು ಭಾರತದ ಸಂಸ್ಕೃತಿಯ ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ ಎಂದಿದ್ದಾರೆ. ಆಧುನಿಕ ಸಂಸ್ಕೃತಿ ಮತ್ತು ಮೂಲ ಜಾನಪದ ಸಂಸ್ಕೃತಿಯ ನಡುವೆ ಸಾಂಸ್ಕೃತಿಕ ಸಂಘರ್ಷ ನಡೆಯುತ್ತಿರುವುದನ್ನು ಗ್ರಹಿಸಲಾಗಿದೆ.

ಪ್ರಭಾಕರ ಶಿಶಿಲ ಅವರು ಫ್ರಾನ್ಸ್‌ನಲ್ಲಿ ಕ್ರೈಸ್ತ ಧರ್ಮದೊಳಗೆ ಕಥಾರರು ಮತ್ತು ರೋಮನ್ ಕ್ಯಾಥೋಲಿಕ್ ಎಂಬ ಪಂಗಡಗಳು ನಿರ್ಮಾಣಗೊಂಡು ಅವರ ನಡುವೆ ಸಾಂಸ್ಕೃತಿಕ ಸಂಘರ್ಷಗಳು ನಡೆದ

ಬಗ್ಗೆ ಉಲ್ಲೇಖಿಸಿದ್ದಾರೆ. ಹನ್ನೆರಡನೇ ಶತಮಾನದಲ್ಲಿ 'ತುಲೋಸ್'ಎಂಬ ಊರು ಫ್ರೆಂಚ್ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ತುಲೋಸಿನ ಜನರು ಪೋಪನ ಸಾರ್ವಭೌಮತೆಯನ್ನು ಪ್ರಶ್ನಿಸಿ ಮತ್ತು ಕ್ರೈಸ್ತ ಪುರೋಹಿತರ ವಿಲಾಸಿ ಜೀವನವನ್ನು ಧಿಕ್ಕರಿಸುತ್ತಾರೆ. ಪರಿಣಾಮವಾಗಿ 'ಕಥಾರ್' ಎಂಬ ಕ್ರೈಸ್ಥ ಧರ್ಮದ ಪ್ರತ್ಯೇಕ ಶಾಖೆ ಅಸ್ತಿತ್ವಕ್ಕೆ ಬರುತ್ತದೆ. ಕಥಾರ್ ಪದ್ಧತಿಯ ಪ್ರಕಾರ ಪವಿತ್ರಸ್ನಾನ ಪದ್ಧತಿಯನ್ನು ನಂಬುವುದಿಲ್ಲ. ಹಳೇ ಒಡಂಬಡಿಕೆಯಲ್ಲಿ ನಂಬಿಕೆ ಇಲ್ಲ. ಕಥಾರರು ಶುದ್ಧ ಸಸ್ಯಾಹಾರಿಗಳು. ಹೀಗೆ ಹೊಸ ಪಂಥ ನಿರ್ಮಾಣವಾದ ಮೇಲೆ ಕಥಾರರಿಗೂ ಮೂಲ ರೋಮನ್ ಕ್ಯಾಥೋಲಿಕ್‌ರಿಗೂ ಸಂಘರ್ಷಗಳು ನಡೆದವು. ಒಮ್ಮೆ ಮೂವರು ಕ್ಯಾಥೋಲಿಕ್ ಪುರೋಹಿತರು "ನಿಮಗೆ ಮೋಕ್ಷ ಬೇಕಿದ್ದರೆ ಮರಳಿ ಮಾತೃಧರ್ಮಕ್ಕೆ ಬನ್ನಿ"(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು–೬೨)ಎಂದು ಕರೆಯುತ್ತಾರೆ. ಈ ಮಾತನ್ನು ಕೇಳಿ ಕ್ರೋಧಗೊಂಡ ಕಥಾರರು ಮೂವರು ಪುರೋಹಿತರನ್ನು ಹೆಡೆಮುರಿ ಕಟ್ಟಿ ಬೆಟ್ಟದ ನೆತ್ತಿಯ ಮೇಲಿರುವ ಬಾವಿಗೆ ಎಸೆದು ಕೊಂದು ಹಾಕುತ್ತಾರೆ. ಮುಂದೆ ಇದೇ ರೀತಿ ಎರಡೂ ಪಂಗಡಗಳ ನಡುವೆ ದ್ವೇಷ ಬೆಳೆಯುತ್ತಾ ಹೋಗುತ್ತದೆ. ಈ ಘಟನೆಯ ಮುಯ್ಯನ್ನು ತೀರಿಸಿಕೊಳ್ಳಲು ಕ್ಯಾಥಲಿಕ್ಕರ ಪೋಪ್ 'ಇನ್ನೋಸೆಂಟ್' ಎಂಬಾತ ಕಥಾರರ ನರಮೇಧ ನಡೆಸಿದ್ದಾನೆ. "ಕರ್ಕಸೋನ್ ಕೋಟೆಯನ್ನು ಆಕ್ರಮಿಸಿದ ಕ್ಯಾಥಲಿಕ್ಕರು ಕೋಟೆಯೊಳಗೆ ಧಗಧಗಿಸುವ ಚಿತೆಯೊಂದನ್ನು ನಿರ್ಮಿಸಿ ಇಪ್ಪತ್ತು ಸಾವಿರ ಮಂದಿ ಕಥಾರರ ಹೆಡೆಮುರಿ ಕಟ್ಟಿ ಬೆಂಕಿಗೆಸೆದು ಜೀವಂತ ಸುಟ್ಟು ತಮ್ಮ ಧರ್ಮ ಉಳಿಸಿಕೊಂಡರು"(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ, ಪು–೧೦೮)ಎಂದಿದ್ದಾರೆ. ಈ ಬಗೆಯ ಧಾರ್ಮಿಕ ಸಂಘರ್ಷಗಳು ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆ. ಶಿಶಿಲ ಅವರು ಈ ಸಂಘರ್ಷಗಳನ್ನು ಹೇಳುವಾಗ ಭಾರತದ ಮತೀಯ ಗಲಭೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ವಿವರಿಸಿರುವುದು ಕಂಡು ಬರುತ್ತದೆ.

ಈ ಮೇಲಿನ ಎಲ್ಲಾ ಐತಿಹಾಸಿಕ ಉಲ್ಲೇಖಗಳು ಯುರೋಪಿನ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಸಂಘರ್ಷಗಳ ಸ್ವರೂಪವನ್ನು ಚಿತ್ರಿಸುತ್ತವೆ. ಐತಿಹಾಸಿಕ ಸಂಘರ್ಷಗಳು ನಡೆದಿರುವ ಕಾರಣಗಳನ್ನು ಪರಿಶೀಲಿಸಿದಾಗ ಹೆಚ್ಚಾಗಿ ಧಾರ್ಮಿಕ ಮತ್ತು ಜನಾಂಗೀಯ ಹಿನ್ನೆಲೆಯ ಸಂಘರ್ಷಗಳೇ ನಡೆದಿವೆ. ಯುರೋಪ್ ರಾಷ್ಟ್ರಗಳಲ್ಲಿ ವರ್ಣ ಮತ್ತು ವರ್ಗಭೇಧಗಳು ಇಂದಿಗೂ ಜೀವಂತವಾಗಿರುವುದನ್ನು ಸೂಚಿಸುತ್ತವೆ. ಸಾಂಸ್ಕೃತಿಕ ಸಂಘರ್ಷಗಳು ಯುರೋಪಿನಲ್ಲಿ ನಡೆಯುತ್ತಲೇ ಇದೆ. ಮೂಲ ಜಾನಪದ ಸಂಸ್ಕೃತಿ ಮತ್ತು ಇಂದಿನ ಆಧುನಿಕ ಸಂಸ್ಕೃತಿಯ ನಡುವೆ ಜಗತ್ತಿನ ಹಲವಡೆಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಾಂಸ್ಕೃತಿಕ ಸಂಘರ್ಷಗಳು ನಡೆಯುತ್ತಿರುವುದನ್ನು ಕಾಣಲಾಗಿದೆ.

ಆ) ಹೋರಾಟ : ಲೇಖಕರ ಚಾರಿತ್ರಿಕ ನೋಟಗಳು

ಯುರೋಪಿನ ಬಹುತೇಕ ದೇಶಗಳು ಸಮಾಜವಾದಿ ಆಡಳಿತವನ್ನು ಹೊಂದಿದೆ. ಸಮಾಜವಾದಿ ಆಡಳಿತದಲ್ಲಿ ಸಾರ್ವಜನಿಕರು ಯಾವುದೇ ಬಗೆಯಲ್ಲಿ ಹೋರಾಟಗಳನ್ನು ಮಾಡುವಂತಿಲ್ಲ ಎಂಬುದು ಅನೇಕ ರಾಜಕೀಯ ತಜ್ಞರ ಅಭಿಪ್ರಾಯವಾಗಿದೆ. ಆದರೆ ಜನಸಾಮಾನ್ಯರು ಸರಕಾರದ ವಿರುದ್ಧ, ವ್ಯವಸ್ಥೆಗಳ ವಿರುದ್ಧ ಹೋರಾಟ ಮಾಡಿರುವುದನ್ನು ಪ್ರವಾಸಿ ಲೇಖಕರು ಉಲ್ಲೇಖಿಸಿದ್ದಾರೆ. ಮಿಲಿಟರಿ ಮಾದರಿ, ಅಧ್ಯಕ್ಷೀಯ ಮಾದರಿ, ರಾಜಪ್ರಭುತ್ವ ಇರುವ ದೇಶಗಳಲ್ಲಿಯೂ ಜನ ಸಾಮಾನ್ಯರಿಂದ ಹೋರಾಟಗಳಾಗಿರುವುದನ್ನು ಗುರುತಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ, ಸಾರಿಗೆ ಕ್ಷೇತ್ರದಲ್ಲಿ, ಸರಕಾರದ ನೀತಿಗಳ ವಿರುದ್ಧ, ಅನ್ಯಾಯಕ್ಕೊಳಗಾದ

ಸಂದರ್ಭದಲ್ಲಿ ಹೋರಾಟ ಮಾಡಿರುವ ಉದಾಹರಣೆಗಳಿವೆ. ಈ ಶೀರ್ಷಿಕೆಯಡಿಯಲ್ಲಿ ಈ ಬಗೆಯ ಹೋರಾಟಗಳನ್ನು ಮತ್ತು ಅದಕ್ಕೆ ಲೇಖಕರು ಪ್ರತಿಕ್ರಿಯಿಸಿರುವ ಬಗೆಯನ್ನು ವಿಶ್ಲೇಷಿಸಲಾಗಿದೆ.

ಇಂಗ್ಲೆಂಡ್‌ನಲ್ಲಿ ಮೂಲ ನಿವಾಸಿಗಳಿಗಿಂತ ಹೆಚ್ಚಾಗಿ ವಲಸಿಗರೇ ಇದ್ದಾರೆ. ಪ್ರತಿವರ್ಷ ವಲಸಿಗರ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಹೊಸದಾಗಿ ಆಗಮಿಸುವ ವಲಸಿಗರಿಗೆ ಇಂಗ್ಲೆಂಡ್ ಸರಕಾರ ಪೌರತ್ವ ಮಾನ್ಯತೆಯನ್ನು ಸುಲಭವಾಗಿ ನೀಡುವುದಿಲ್ಲ. ಅನೇಕ ನಿಬಂಧನೆಗಳಿವೆ. ಆದ್ದರಿಂದ ಅನೇಕ ವರ್ಷಗಳಿಂದ ನೆಲೆಸಿರುವ ವಲಸಿಗರಾದ ನೀಗ್ರೋಗಳು ಪೌರತ್ವ ನೀಡಬೇಕೆಂದು ಇಂಗ್ಲೆಂಡ್ ಸರಕಾರದ ವಿರುದ್ಧ 'ಹೈಡ್‌ಪಾರ್ಕ್'ನಲ್ಲಿ ಹೋರಾಟ ಮಾಡಿದ ಬಗ್ಗೆ ರಾ.ಶಿ ಅವರು ಉಲ್ಲೇಖಿಸಿದ್ದಾರೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು 'ಯುರೋಪ್ ನೆನಪುಗಳು' ಕೃತಿಯಲ್ಲಿ ರೈಲ್ವೇ ಸಿಬ್ಬಂದಿ ಮುಷ್ಕರ ಮಾಡುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ಗ್ರೀಕ್ ದೇಶದಲ್ಲಿ ನೌಕರರು ಸರಕಾರದ ವಿರುದ್ಧ ಪ್ರತಿಭಟನೆ ಮಾಡಿರುವುದನ್ನು ಗಮನಿಸಬಹುದು. ಕೆಲವು ವಿಶೇಷ ಸಂದರ್ಭಗಳಲ್ಲಿ ಸರಕಾರದ ನೌಕರರೇ ಸರಕಾರದ ವಿರುದ್ಧ ಪ್ರತಿಭಟನೆಯ ಮೂಲಕ ಹೋರಾಟ ಮಾಡಿದ್ದಾರೆ.

ದೇ.ಜವರೇಗೌಡ ಅವರು 'ವಿದೇಶದಲ್ಲಿ ನಾಲ್ಕು ವಾರ' ಕೃತಿಯಲ್ಲಿ ವಿದ್ಯಾರ್ಥಿಗಳಿಂದ ಮುಷ್ಕರಗಳು ನಡೆದಿರುವ ಬಗ್ಗೆ ಉಲ್ಲೇಖಿಸಿದ್ದಾರೆ. ಅಮೆರಿಕ ಸರಕಾರದ ಸಹಾಯದಿಂದ ಸ್ಥಾಪಿಸಲ್ಪಟ್ಟ ಯೂನಿವರ್ಸಿಟಿಯನ್ನು 'ಫ್ರೀ ಯೂನಿವರ್ಸಿಟಿ' ಎಂದು ಕರೆಯುತ್ತಾರೆ. ಲೇಖಕರು 'ಫ್ರೀ ಯೂನಿವರ್ಸಿಟಿ'ಯಲ್ಲಿ ಗೋಡೆಗಳ ಮೇಲೆ "ವಿ ವಾಂಟ್ ಸೋಷಿಯಲಿಸ್ಟ್ ಯೂನಿವರ್ಸಿಟಿ" (ದೇ.ಜವರೇಗೌಡ., ವಿದೇಶದಲ್ಲಿ ನಾಲ್ಕು ವಾರ., ಪು-೧೩೧)ಎಂದು ಬರೆದಿರುವುದನ್ನು, ಅದು ಮುಷ್ಕರದ ಸಂದರ್ಭದಲ್ಲಿ ಬರೆದ ಸಾಲುಗಳು ಎಂಬುದನ್ನು ಉಲ್ಲೇಖಿಸಿದ್ದಾರೆ.

ಜಿ. ಗೋಪಾಲ್ ಅವರು 'ವೈದ್ಯನ ವಿದೇಶ ಪ್ರವಾಸ' ಕೃತಿಯಲ್ಲಿ ಲಂಡನ್ ನಗರದ ಟ್ರಫಾಲ್ಗರ್ ಸ್ಕ್ವೇರ್‌ನಲ್ಲಿ 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನ ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಿದ್ದ ಬಗ್ಗೆ ಉಲ್ಲೇಖಿಸಿದ್ದಾರೆ. ಮುಷ್ಕರಗಳು ನಡೆಯುವ ರೀತಿಯನ್ನು ಭಾರತದಲ್ಲಿ ನಡೆಯುವ ಮುಷ್ಕರಗಳೊಂದಿಗೆ ಹೋಲಿಸಿದ್ದಾರೆ. 'ಮುಷ್ಕರವು ತುಂಬಾ ಶಾಂತಿಯುತವಾಗಿ ನಡೆಯುತ್ತಿರುತ್ತದೆ. ಸುಮಾರು ಒಂದು ಫರ್ಲಾಂಗ್ ಉದ್ದದ ಮುಷ್ಕರದ ಸಾಲನ್ನು ಪೋಲೀಸರ ಬಿಗಿಭದ್ರತೆಯಲ್ಲಿ ನಡೆಸಲಾಗುತ್ತದೆ. ನಿಶಬ್ಧ, ಗಂಭೀರ, ಮೌನ ಮೆರವಣಿಗೆ ನಡೆಯುತ್ತದೆ. ಯಾವುದೇ ಕಲ್ಲು ತುರಾಟ, ಕೂಗಾಟ, ವಾಹನಗಳ ತಡೆ, ಬೆಂಕಿ ಹೊತ್ತಿಸುವುದು ಅಲ್ಲಿನ ಮುಷ್ಕರಗಳಲ್ಲಿ ಇರುವುದಿಲ್ಲ. ಶಾಂತಿಯುತ ಪ್ರತಿಭಟನೆ ನಡೆಯುತ್ತದೆ' ಎಂದಿದ್ದಾರೆ.

ಈ ಮೇಲೆ ಉಲ್ಲೇಖಿಸಲಾದ ಎಲ್ಲಾ ಲೇಖಕರ ಅಭಿಪ್ರಾಯಗಳನ್ನು ಇಡಿಯಾಗಿ ಗಮನಿಸಿದಾಗ ಯುರೋಪಿನ ಹಲವು ದೇಶಗಳಲ್ಲಿ ಪ್ರಜಾಪ್ರಭುತ್ವ ಸರಕಾರ ಇಲ್ಲದಿದ್ದರೂ ಪ್ರಜಾಪ್ರಭುತ್ವದ ಮಾದರಿಯ ಹೋರಾಟಗಳಿಗೆ ಅವಕಾಶಗಳಿರುವುದನ್ನು ಕಂಡುಕೊಳ್ಳಲಾಗಿದೆ. ಲೇಖಕರು ಉಲ್ಲೇಖಿಸಿರುವ ಘಟನಾವಳಿಗಳು ಐತಿಹಾಸಿಕವಾಗಿ ಋಜುವಾತುವಾದವುಗಳು. ಒಂದು ಆಯಾಮದ ಪ್ರಕಾರ ಪ್ರವಾಸ ಕೃತಿಗಳಲ್ಲಿನ ಉಲ್ಲೇಖಗಳಿಗೆ ಸಾಹಿತ್ಯಿಕ ಮಾನ್ಯತೆಯ ಜೊತೆಗೆ ಐತಿಹಾಸಿಕ ದಾಖಲೆಗಳ ಮಾನ್ಯತೆಯೂ ದಕ್ಕುತ್ತದೆ. ಇದರಿಂದ ಇತಿಹಾಸ ಮತ್ತು ಸಾಹಿತ್ಯದ ನಡುವೆ ಇರುವ ಅವಿನಾಭಾವ ಸಂಬಂಧವನ್ನು ಪ್ರವಾಸ ಸಾಹಿತ್ಯವು

ಮತ್ತಷ್ಟು ಗಟ್ಟಿಗೊಳಿಸುತ್ತದೆ. ಜೊತೆಗೆ ಇತಿಹಾಸವು ಒಳಗೊಳ್ಳುವ ಸಾಮಾನ್ಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸುತ್ತದೆ.

ಈ ಅಧ್ಯಾಯದಲ್ಲಿ ಯುರೋಪ್ ಪ್ರವಾಸ ಮಾಡಿದ ಲೇಖಕರು ತಾವು ದರ್ಶಿಸಿದ ಸ್ಥಳಗಳಿಗೆ ಸಂಬಂಧಿಸಿದ ಅನೇಕ ಐತಿಹಾಸಿಕ ವಸ್ತು ವಿಷಯಗಳನ್ನು ವಿವರಿಸಿದ್ದಾರೆ. ಪ್ರತಿಯೊಬ್ಬ ಲೇಖಕರೂ ಒಂದಲ್ಲ ಒಂದು ಬಗೆಯಲ್ಲಿ ಐತಿಹಾಸಿಕ ದಾಖಲುಗಳನ್ನು ಮಾಡಿದ್ದಾರೆ. ಈ ಚಾರಿತ್ರಿಕ ಸಂಗತಿಗಳನ್ನು ಪ್ರವಾಸ ಕೃತಿಯೊಳಗೆ ನಮೂದಿಸಲು ಅವರ ಮೇಲೆ ಒಂದು ಬಗೆಯ ಒತ್ತಡ ಇರುತ್ತದೆ ಎಂಬ ವಾಸ್ತವವನ್ನು ಕಂಡುಕೊಳ್ಳಲಾಗಿದೆ. ಈ ಒತ್ತಡಗಳು ಚಾರಿತ್ರಿಕ ಸಂಗತಿಗಳನ್ನು ಪ್ರವಾಸ ಕೃತಿಯೊಳಗೆ ಬರೆಯುವಂತೆ ಪ್ರೇರೇಪಿಸಿದೆ.

ಕೊನೆ ಟಿಪ್ಪಣಿ

1. "ನಮ್ಮ ಶಿವರಾಮಕಾರಂತರಂಥ ಹಿರಿಯ ವಿಚಾರವಾದಿಗಳು, ಅಲ್ಲಿ ಎಲ್ಲವನ್ನೂ ಶಸ್ತ್ರಾಸ್ತ್ರಗಳ ಮೇಲೆ ಸುರಿದಿದ್ದಾರೆ. ಜನಸಾಮಾನ್ಯರಿಗೇನೂ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಆದರೆ ಅದು ಸತ್ಯವಲ್ಲ. ಎಲ್ಲರಿಗೂ ಸಿಕ್ಕಬೇಕಾದ ವಸ್ತುಗಳು ಯಾರಿಗೂ ಸಿಗದೆ ಇರುವುದಿಲ್ಲ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪುಟ-11)

ಅಧ್ಯಾಯ: ೫

ಶೈಕ್ಷಣಿಕ ಸಂವೇದನೆಗಳು

೫. ೧ ಶೈಕ್ಷಣಿಕ ಬೋಧನಾ ವಿಧಾನಗಳು : ತೌಲನಿಕ ವಿಶ್ಲೇಷಣೆ

೫. ೨ ಬೋಧನೆ : ಸಂವಹನ ಮಾಧ್ಯಮ

೫. ೩ ಉನ್ನತ ಶಿಕ್ಷಣ : ವಿವಿಧ ಆಯಾಮಗಳ ಮೂಲಕ ವಿಶ್ಲೇಷಣೆ

೫. ೪ ಉದ್ಯೋಗಾಧಾರಿತ ವಿವಿಧ ಬಗೆಯ ಶಾಲೆಗಳು

ಅಧ್ಯಾಯ : ೫
ಶೈಕ್ಷಣಿಕ ಸಂವೇದನೆಗಳು

ಯುರೋಪ್ ಪ್ರವಾಸ ಕಥನಗಳನ್ನು ಅಧ್ಯಯನ ಮಾಡುವಾಗ ಕೃತಿಕಾರರ ಅಭಿರುಚಿಗಳಿಗೆ ತಕ್ಕ ಅನೇಕ ಕ್ಷೇತ್ರಗಳನ್ನು ಪರಿಗಣಿಸಬೇಕಾಗುತ್ತದೆ. ಈ ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರವಾಸ ಕೃತಿಗಳಲ್ಲಿ, ಹೆಚ್ಚು ಚರ್ಚಿತವಾಗಿರುವ ಕ್ಷೇತ್ರಗಳಲ್ಲಿ ಶಿಕ್ಷಣ ಕ್ಷೇತ್ರವು ಒಂದಾಗಿದೆ. ಯಾವುದೇ ದೇಶ ಅಭಿವೃದ್ಧಿಯೆಡೆಗೆ ಸಾಗಬೇಕಾದರೆ ಆ ದೇಶದ ಪ್ರಜೆಗಳ ಶಿಕ್ಷಣದ ಗುಣಮಟ್ಟ ನಿರ್ಧಾರಕವಾಗಿರುತ್ತದೆ. ಪ್ರವಾಸಿ ಲೇಖಕರು ಪ್ರವಾಸದ ಸಂದರ್ಭದಲ್ಲಿ ತಾವು ಸಂದರ್ಶಿಸಿದ ದೇಶಗಳ ಶೈಕ್ಷಣಿಕ ಪದ್ಧತಿ, ಶೈಕ್ಷಣಿಕ ವಿಧಾನಗಳನ್ನು ತಿಳಿದುಕೊಂಡು, ನಮ್ಮ ದೇಶದೊಂದಿಗೆ ಹೋಲಿಸಿ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವೇನು ಎಂಬುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಈ ಅಧ್ಯಾಯದಲ್ಲಿ ಶಿಕ್ಷಣ ಕ್ಷೇತ್ರದ ಬಗ್ಗೆ ಕೃತಿಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಣೆ ಮಾಡಲಾಗಿದೆ. ಶಿಕ್ಷಣ ಇಂದಿನ ಆಧುನಿಕ ಯುಗದ ತುರ್ತು. ಶಿಕ್ಷಣ ಕ್ಷೇತ್ರದ ಕುರಿತು ಪ್ರತಿ ದೇಶವು ತಮ್ಮದೇ ಆದ ವಿಧಾನಗಳನ್ನು ರೂಪಿಸಿಕೊಂಡಿರುತ್ತದೆ. ಆ ವಿಧಾನಗಳು ಸಾಮಾನ್ಯವಾಗಿ ಆಯಾ ದೇಶ–ಭಾಷೆಗೆ ಅನುಗುಣವಾಗಿ ಹೊಂದಿಕೆಯಾಗುವಂತಿರುತ್ತದೆ. ಒಂದು ದೇಶದ ಶೈಕ್ಷಣಿಕ ವಿಧಾನಗಳು, ಪದ್ಧತಿಗಳು ಮತ್ತೊಂದು ದೇಶಕ್ಕೆ ಯಥಾವತ್ತಾಗಿ ಅಳವಡಿಸಲು ಸಾಧ್ಯವಾಗದಿರಬಹುದು. ಆದರೆ ಶೈಕ್ಷಣಿಕ ವಿಧಾನಗಳು, ಪದ್ಧತಿಗಳು ಆಯಾ ದೇಶಕ್ಕೆ ಸೂಕ್ತವಾಗುವಂತೆ ಅಲ್ಪ–ಸ್ವಲ್ಪ ಬದಲಾಯಿಸಿಕೊಂಡು ಅಳವಡಿಸಿಕೊಳ್ಳಲು ಸಾಧ್ಯವಿರುತ್ತದೆ. ಪ್ರವಾಸಿ ಲೇಖಕರು ತಾವು ಪ್ರವಾಸ ಮಾಡಿದ ದೇಶಗಳ ಶೈಕ್ಷಣಿಕ ಪದ್ಧತಿಗಳನ್ನು ಅರ್ಥೈಸಿಕೊಂಡು ಅದನ್ನು ಭಾರತದ ಶೈಕ್ಷಣಿಕ ಪದ್ಧತಿಯೊಂದಿಗೆ ಹೋಲಿಸಿ ನೋಡಿದ್ದಾರೆ. ಹೀಗೆ ಹೋಲಿಸುವಾಗ ಬಹುತೇಕ ಲೇಖಕರು ಭಾರತೀಯ ಶಿಕ್ಷಣ ಪದ್ಧತಿಯಲ್ಲಿರುವ ನ್ಯೂನತೆಗಳನ್ನು ಗುರುತಿಸಿದ್ದಾರೆ. ಗುಣಮಟ್ಟದಲ್ಲಿ ಭಾರತೀಯ ಶಿಕ್ಷಣ ಪದ್ಧತಿಯು ಯುರೋಪಿನ ದೇಶಗಳ ಶಿಕ್ಷಣ ಪದ್ಧತಿಗಿಂತ ಕಡಿಮೆಯಿದೆ ಎಂದಿದ್ದಾರೆ. ಶಿವರಾಮ ಕಾರಂತರು ಲಂಡನ್ನಿನ ವ್ಯವಸ್ಥಿತವಾದ, ಚಟುವಟಿಕೆ ಆಧಾರಿತ ಶಿಕ್ಷಣ ಪದ್ಧತಿಯನ್ನು ಕಂಡು "ನಮ್ಮ ಕಟ್ಟಡಗಳು ವಿದ್ಯೆಯ ಗೋರಿಗಳಂತೆ ಜಡವಾಗಿವೆ" (ಕೆ.ಶಿವರಾಮ ಕಾರಂತ., ಅಪೂರ್ವ ಪಶ್ಚಿಮ., ಪು–೫೩)ಎಂದಿದ್ದಾರೆ. ಜರ್ಮನ್ ದೇಶದ ಕಿಂಡರ್‌ಗಾರ್ಡನ್ ಪ್ರಾಥಮಿಕ ಶಾಲಾ ಶಿಕ್ಷಣ ಪದ್ಧತಿಯನ್ನು ಕಂಡು ಪುತ್ತೂರಿನಲ್ಲಿ 'ಬಾಲವನ' ನಿರ್ಮಿಸಲು ಪ್ರೇರಣೆ ಆಯಿತು ಎಂದಿದ್ದಾರೆ. ಈ ರೀತಿಯಾಗಿ ಅಭಿಪ್ರಾಯಗಳು ವ್ಯಕ್ತವಾಗಲು ಕಾರಣವೇನು? ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ನೂನತೆಗಳು ಇವೆಯೇ? ಇದ್ದರೆ ಯಾವ ರೀತಿಯ ನ್ಯೂನತೆಗಳಿವೆ? ನ್ಯೂನತೆಗಳನ್ನು ಗುರುತಿಸುವ ಕೃತಿಗಳು ಪರಿಹಾರಗಳನ್ನು ಸೂಚಿಸುತ್ತವೆಯೇ? ಸೂಚಿಸಿದ್ದರೆ ಪರಿಹಾರಗಳು ಭಾರತೀಯ ಶಿಕ್ಷಣ ಪದ್ಧತಿಯಲ್ಲಿನ ರಚನಾತ್ಮಕ ಬದಲಾವಣೆಗೆ ಅನುಗುಣವಾಗಿವೆಯೇ? ಪರಿಣಾಮಕಾರಿಯೇ? ಎಂಬ ಅಂಶಗಳನ್ನು ತೌಲನಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಕೃತಿಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಶೈಕ್ಷಣಿಕ ಬೋಧನಾ ವಿಧಾನಗಳು : ತೌಲನಿಕ ವಿಶ್ಲೇಷಣೆ, ಬೋಧನೆ : ಸಂವಹನ ಮಾಧ್ಯಮ, ಉನ್ನತ ಶಿಕ್ಷಣ : ವಿವಿಧ ಆಯಾಮಗಳ ಮೂಲಕ ವಿಶ್ಲೇಷಣೆ, ಉದ್ಯೋಗಾಧಾರಿತ ವಿವಿಧ ಬಗೆಯ ಶಾಲೆಗಳು ಎಂಬ ಉಪಶೀರ್ಷಿಕೆಗಳನ್ನಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

೫.೧ ಶೈಕ್ಷಣಿಕ ಬೋಧನಾ ವಿಧಾನಗಳು : ತೌಲನಿಕ ವಿಶ್ಲೇಷಣೆ

ಶೈಕ್ಷಣಿಕ ಬೋಧನಾ ವಿಧಾನವು 'ಒಂದು ಚೌಕಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವಾಗ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸುವ ರೀತಿ ಮತ್ತು ಅನುಸರಿಸುವ ಮಾರ್ಗಗಳನ್ನು' ಸೂಚಿಸುತ್ತದೆ. ಪ್ರವಾಸಕ್ಕೆ ತೆರಳಿರುವ ಲೇಖಕರು ಶಾಲಾ, ಕಾಲೇಜುಗಳಿಗೆ ಭೇಟಿ ನೀಡಿದಾಗ ಅಲ್ಲಿನ ಶಿಕ್ಷಣ ಪದ್ಧತಿಯಲ್ಲಿ ಅನುಸರಿಸಲಾಗಿರುವ ವಿವಿಧ ಬಗೆಯ ಸೃಜನಶೀಲ ಬೋಧನಾ ಚಟುವಟಿಕೆಗಳ ಕುರಿತು ಚರ್ಚಿಸಿದ್ದಾರೆ. ಅಲ್ಲಿನ ಬೋಧನಾ ವಿಧಾನಗಳು ಭಾರತೀಯ ಶಿಕ್ಷಣ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ ಎಂದು ಚರ್ಚಿಸಿದ್ದಾರೆ. ಮತ್ತು ಭಾರತೀಯ ಶಿಕ್ಷಣ ಪದ್ಧತಿಯೊಂದಿಗೆ ಹೋಲಿಸುತ್ತಾ ತೌಲನಿಕ ನೆಲೆಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಶಾಲಾ ಹಂತದ ಮಕ್ಕಳಿಗೆ ಬೋಧಿಸುವಾಗ ಸಾಮಾನ್ಯವಾಗಿ ಕಾಲ್ಪನಿಕ ಕಥೆಗಳನ್ನು, ಪೌರಾಣಿಕ ಕಥೆಗಳನ್ನು ಬಳಸಿಕೊಂಡು ಬೋಧಿಸುತ್ತೇವೆ. ಈ ಬೋಧನಾ ವಿಧಾನದಲ್ಲಿ ತಾತ್ವಿಕ ಸಮಸ್ಯೆ ಇರುವುದು ಕಂಡುಬರುತ್ತದೆ.

ಶಾಲಾ ಮಕ್ಕಳಿಗೆ ಪೌರಾಣಿಕ, ಕಾಲ್ಪನಿಕ, ಅವಾಸ್ಥವಿಕ ಕಥೆಗಳ ಮೂಲಕ ಬೋಧಿಸುವುದು ಸರಿಯೇ?

ಕಾರಂತರು ಬರ್ಲಿನ್ ನಗರದ ಮಕ್ಕಳ ನಾಟಕ ಶಾಲೆಗೆ ಭೇಟಿ ನೀಡಿದಾಗ ಅಲ್ಲಿನ ವಿದ್ಯಾರ್ಥಿಗಳಿಗಾಗಿ ಕಾಲ್ಪನಿಕ ಕಥಾ ಹಂದರವುಳ್ಳ ನಾಟಕಗಳನ್ನು ಪ್ರಯೋಗ ಮಾಡುತ್ತಿರುವ ವಿಷಯ ತಿಳಿದುಬರುತ್ತದೆ. ಇಂದಿನ ಶಿಕ್ಷಣ ಪದ್ಧತಿಯ ಪ್ರಕಾರ ಭಾರತದಲ್ಲಾಗಲಿ, ವಿದೇಶಗಳಲ್ಲಾಗಲಿ ವಿದ್ಯಾರ್ಥಿಗಳಿಗೆ ಪೌರಾಣಿಕ ವಸ್ತುವುಳ್ಳ ಕಥೆಗಳನ್ನು, ಕಾಲ್ಪನಿಕ ಕಥೆಗಳನ್ನು ಕಟ್ಟಿ ಕಥನ ವಿಧಾನದಲ್ಲಿ ಮಕ್ಕಳಿಗೆ ಬೋಧಿಸುವುದು ಶಿಕ್ಷಣದ ವಿಧಾನವಾಗಿದೆ. ಈ ಬಗೆಯ ಶೈಕ್ಷಣಿಕ ಬೋಧನಾ ವಿಧಾನಗಳಲ್ಲಿ ಇರುವ ತಾತ್ವಿಕ ಸಮಸ್ಯೆ ಎಂದರೆ 'ಅವಾಸ್ತವಿಕ, ಕಾಲ್ಪನಿಕ ಕಥೆಗಳನ್ನು ಏನು ತಿಳಿಯದ ಮುಗ್ಧ ಮಕ್ಕಳಿಗೆ ಹೇಳುವುದು ಸರಿಯೇ?'. ಕಾರಂತರು ಈ ತಾತ್ವಿಕ ಪ್ರಶ್ನೆಗೆ ಉತ್ತರಿಸುತ್ತಾ "ಮಕ್ಕಳ ಜಗತ್ತು ಅವರ ಮಾನಸಿಕ ಬೆಳವಣಿಗೆಗಳ ಆವಶ್ಯಕತೆಯಿಂದಾಗಿ ಊಹಾಶಕ್ತಿ, ಕಲ್ಪನಾಶಕ್ತಿಗಳನ್ನು ಬೆಳೆಯಿಸಲೇ ಬೇಕಾದಂತಹ ಒಂದು ಪ್ರಪಂಚ..... ಯಾವುದು ನಿಜವಲ್ಲ ಯಾವುದು ನಿಜ-ಎಂಬ ಅರಿವು ಅವರಲ್ಲಿ ಕ್ರಮೇಣ ಮೂಡಿಯೇ ಮೂಡುತ್ತದೆ"(ಕೆ. ಶಿವರಾಮ ಕಾರಂತ., ಅರಸಿಕರಲ್ಲ., ಪು-೫೭)ಎಂದಿದ್ದಾರೆ. ಕಾರಂತರ ಅಭಿಪ್ರಾಯವನ್ನು ಒಪ್ಪುತ್ತಾ, ಈ ತಾತ್ವಿಕ ಸಮಸ್ಯೆಗೆ ಪರಿಹಾರ ರೂಪದಲ್ಲಿ ವಿಶ್ಲೇಷಿಸುವುದಾದರೆ 'ಪೌರಾಣಿಕ, ಕಾಲ್ಪನಿಕ, ಅವಾಸ್ತವಿಕ ಕಥೆಗಳನ್ನು ಮಕ್ಕಳಿಗೆ ತಿಳಿಸಿ ಹೇಳುವುದು ತಪ್ಪಲ್ಲ, ಹೇಳುವಾಗ ಅದರ ಸ್ವರೂಪವನ್ನು ಮೊದಲೇ ತಿಳಿಸಿಬಿಡಬೇಕು. ಮತ್ತು ಸ್ವರ್ಗ, ನರಕ, ಭೂತ, ಭೇತಾಳ ಎಂದು ಹೇಳುವ ಬದಲು ವಿದ್ಯಾರ್ಥಿಗಳಲ್ಲಿ ಯಥಾತ್ಮಿಕ ನೋಟವನ್ನು ಬೆಳೆಯಿಸುವ ಕಥೆಗಳಿರಬೇಕು. ಬೋಧಿಸುವ ವಸ್ತು ವಿಷಯಗಳು ತೀರಾ ಅವಾಸ್ತವಿಕ ಇರುವ ಬದಲು ಮಕ್ಕಳಲ್ಲಿ ಅದು ಜ್ಞಾನಾರ್ಜನೆಯನ್ನು ಉಂಟು ಮಾಡುವಂತೆ ಕಥನ ವಿಧಾನಗಳನ್ನು ರೂಪಿಸಬೇಕು. ಕಥೆಗಳು ಅತೀವ ಕಲ್ಪನಾಧಾರಿತವಾಗಿರುವ ಬದಲು ಜೀವನಕ್ಕೆ ಹತ್ತಿರವಾಗಿ, ವಾಸ್ತವಕ್ಕೆ ಮುಖಮಾಡಿರಬೇಕು. ಕಲ್ಪನಾಧಾರಿತ ಕಥೆಗಳು ಆಯಾ ತರಗತಿಯ ವಿದ್ಯಾರ್ಥಿಗಳಿಗೆ ಅವರ ವಯೋಮಾನಕ್ಕೆ ಅನುಗುಣವಾಗಿ, ಅವರ ಕಲ್ಪನಾ ಶಕ್ತಿಯ ಸಾಮರ್ಥ್ಯವನ್ನು ಅನುಸರಿಸಿ ಕಥೆಗಳನ್ನು ಹೆಣೆದಿರಬೇಕು. ಕಥೆಗಳು ಅವರ ಮನೋಬಲವನ್ನು

ಹೆಚ್ಚಿಸುವಂತೆಯೂ ಆತ್ಮಸ್ಥೈರ್ಯವನ್ನು ಜಾಗೃತಗೊಳಿಸುವಂತಿರಬೇಕು. ಅಂತಹ ಕಥೆಗಳು ಅವಾಸ್ತವಿಕ ಅಥವಾ ಕಾಲ್ಪನಿಕ ನೆಲೆಯಲ್ಲಿದ್ದರೂ ವಿದ್ಯಾರ್ಥಿಗಳಿಗೆ ಬೋಧಿಸುವುದರಿಂದ ಯಾವುದೇ ಅಡ್ಡಪರಿಣಾಮಗಳಾಗುವುದಿಲ್ಲ ಎನಿಸುತ್ತದೆ. (ಕಾರಂತರ ವಿಚಾರಗಳಿಂದ ಪ್ರೇರಿತವಾದ ವಿಶ್ಲೇಷಣೆಯಾಗಿದೆ.)

ವಿದ್ಯಾರ್ಥಿಗಳಿಗೆ ಬೋಧಿಸುವಾಗ ಕೇವಲ ನಾಲ್ಕು ಗೋಡೆಗಳ ಮಧ್ಯೆ ಪಠ್ಯಕ್ರಮಕ್ಕೇ ನಿಷ್ಠರಾಗಿ ಬೋಧಿಸುವುದು ಒಳ್ಳೆಯ ಬೋಧನಾ ಕ್ರಮವಲ್ಲ ಎನಿಸುತ್ತದೆ. ವಿದ್ಯಾರ್ಥಿಗಳಿಗೆ ತಾವು ಕೇಳಿದ್ದಕ್ಕಿಂತ ಹೆಚ್ಚಾಗಿ ತಾವು ಖುದ್ದಾಗಿ ನೋಡಿ ಕಲಿಯುವುದು ಆಸಕ್ತಿಕರ, ಮತ್ತು ಪರಿಣಾಮಕಾರಿಯಾದ ಬೋಧನಾ ವಿಧಾನವಾಗಿದೆ. ರಷ್ಯಾ, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ವಿವಿಧ ಬಗೆಯ ನೂರಾರು ವಸ್ತು ಸಂಗ್ರಹಾಲಯಗಳಿವೆ. ವಿದ್ಯಾರ್ಥಿಗಳು ಈ ಸಂಗ್ರಹಾಲಯಗಳಿಗೆ ಭೇಟಿ ನೀಡಿ ತಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳುವ ಸಾಧ್ಯತೆಗಳನ್ನು ಕಂಡ ದೇ. ಜವರೇಗೌಡರು, ಭಾರತದಲ್ಲಿನ ವಸ್ತು ಸಂಗ್ರಹಾಲಯಗಳನ್ನು ಮತ್ತು ಅದನ್ನು ನಿರ್ವಹಣೆ ಮಾಡುವ ರೀತಿಯನ್ನು ಹೋಲಿಸಿ, ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಎಲ್ಲಿಯತನಕ ನಾವು ಸಣ್ಣ ಸಣ್ಣ ನಗರಗಳಲ್ಲಿಯಾದರೂ ಪ್ರತಿಯೊಂದು ತಾಲ್ಲೂಕಿನ ಮುಖ್ಯ ಕೇಂದ್ರಗಳಲ್ಲಿಯಾದರೂ ಸಣ್ಣ ಸಣ್ಣ ವಸ್ತುಸಂಗ್ರಹಾಲಯಗಳನ್ನು ಬೆಳೆಸುವುದಿಲ್ಲವೊ ಅಲ್ಲಿಯತನಕ ನಾವು ಮಕ್ಕಳಿಗೆ ಕೊಡುವ ಶಿಕ್ಷಣ ಅಪೂರ್ಣವಾಗಿರುತ್ತದೆ. ಪುಸ್ತಕದ ಶಿಕ್ಷಣದಿಂದ ಕಲಿಸಬಹುದಾದ ಜ್ಞಾನ ಸ್ವಲ್ಪ"(ದೇ. ಜವರೇಗೌಡ., ಪ್ರವಾಸಿಯ ದಿನಚರಿ., ಪು-೧೪೩) ಶೈಕ್ಷಣಿಕ ಬೋಧನಾ ಪದ್ಧತಿಯಲ್ಲಿ ವಿದ್ಯಾರ್ಥಿಯ ಕಲಿಕೆಗೆ ಪೂರಕವಾದ ವಸ್ತುಸಂಗ್ರಹಾಲಯಗಳಿಗೆ ಕರೆದುಕೊಂಡು ಹೋಗಿ ಪ್ರಾತ್ಯಕ್ಷಿಕ ಅನುಭವವನ್ನು ನೀಡುವ ಮೂಲಕ ಬೋಧಿಸುವ ಪ್ರಾಯೋಗಿಕ ವಿಧಾನವು ಪರಿಣಾಮಕಾರಿಯಾದುದು ಎಂಬುದು ದೇ. ಜವರೇಗೌಡರ ಅಭಿಪ್ರಾಯದ ಸಾರವಾಗಿದೆ. ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕವಾದ ಬೋಧನಾ ವಿಧಾನದಿಂದ ಕಲಿಕೆಯು ಉಚ್ಚಮಟ್ಟದಲ್ಲಿ ಇರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಶಾಲಾ ಹಂತದಲ್ಲಿಯೂ ಮತ್ತು ಕಾಲೇಜು ಹಂತದಲ್ಲಿಯೂ ವಸ್ತು ಸಂಗ್ರಹಾಲಯಗಳು ಪ್ರಾಯೋಗಿಕ ಶಿಕ್ಷಣವನ್ನು ಯಶಸ್ವಿಯಾಗಿ ನೀಡುವಲ್ಲಿ ಸಹಕರಿಸುತ್ತವೆ. ಆದ್ದರಿಂದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಶೈಕ್ಷಣಿಕ ವಸ್ತು ಸಂಗ್ರಹಾಲಯಗಳ ಸ್ಥಾಪನೆ ಅಗತ್ಯವಿದ್ದು ಲೇಖಕರ ಅಭಿಪ್ರಾಯವನ್ನು ಒಪ್ಪಲಾಗಿದೆ. ಮುಂದುವರೆದು ಪ್ರತಿ ಶಾಲೆ, ಕಾಲೇಜಿನಲ್ಲಿಯೂ ವಿವಿಧ ಶಿಸ್ತುಗಳಿಗೆ ಸಂಬಂಧಿಸಿದ ಪ್ರತ್ಯೇಕ ವಸ್ತು ಸಂಗ್ರಹಾಲಯಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಅದರ ಪ್ರಯೋಜನವನ್ನು ಕಲ್ಪಿಸಿದರೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ.

ಶಿಕ್ಷಕರ ಬೋಧನೆ ಪರಿಣಾಮಕಾರಿ ಆಗಬೇಕಾದರೆ ಏಕಮುಖಿ ಸಂವಹನ ಬೋಧನಾ ವಿಧಾನವನ್ನು ಅನುಸರಿಸಿದರೆ ಸಾಧ್ಯವಾಗುವುದಿಲ್ಲ. ಬಹುಶಿಸ್ತೀಯ ನೆಲೆಯಲ್ಲಿ, ವಿವಿಧ ಸಂವಹನ ಮಾಧ್ಯಮಗಳನ್ನು ಬಳಸಿಕೊಂಡು ಬಹುಮುಖಿ ಸಂವಹನದ ಮೂಲಕ, ವಿವಿಧ ಬೋಧನಾ ವಿಧಾನಗಳನ್ನು ಅನುಸರಿಸಿ ಬೋಧಿಸಿದಾಗ ಬೋಧನೆ ಪರಿಣಾಮಕಾರಿ ಆಗುತ್ತದೆ. ಈ ವಿಧಾನವು ವಿದ್ಯಾರ್ಥಿಗಳ ಸರ್ವತೋಮುಖಿ ಬೆಳವಣಿಗೆಗೆ ನೆರವಾಗುತ್ತದೆ. 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯಲ್ಲಿ ರಷ್ಯಾದ ಮಾಸ್ಕೋ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಅನುಸರಿಸಲಾಗುವ ನೂತನ ಬೋಧನಾ ವಿಧಾನಗಳ ಬಗ್ಗೆ ತಿಳಿಸಲಾಗಿದೆ. "ಕ್ರವತ್ಸೋವ್ ಅವರ ವಿಭಾಗದಲ್ಲಿ ಜಾನಪದವನ್ನು ಸಾಹಿತ್ಯಿಕ ದೃಷ್ಟಿಯಿಂದ ಅಭ್ಯಾಸ ಮಾಡಲಾಗುತ್ತಿದೆ. ವರ್ಷದಲ್ಲಿ ಹಲವು ಬಾರಿ ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ಕರೆದುಕೊಂಡು ಕೆಲವು

ಪ್ರಾಯೋಗಿಕ ಕ್ಷೇತ್ರಗಳಿಗೆ ಹೋಗುತ್ತಾರೆ. ಎರಡು ಮೂರು ತಿಂಗಳ ಕಾಲ ಒಂದು ಪ್ರದೇಶದ ಜನರ ನಡುವೆ ಬದುಕಿ, ಅಲ್ಲಿನ ಜಾನಪದ ಗೀತೆಗಳನ್ನು ಸಂಗ್ರಹಿಸುವುದು ಮಾತ್ರವಲ್ಲದೆ, ಆ ಜನಜೀವನವನ್ನು ಅಭ್ಯಾಸ ನಡೆಯಿಸುತ್ತಾರೆ."(ಜಿ.ಎಸ್ ಶಿವರುದ್ರಪ್ಪ., ಮಾಸ್ಕೋದಲಿ ಇಪ್ಪತ್ತೆರಡು ದಿನ., ಪು-೯೫)ಎಂಬ ವಿವರವಿದೆ. ಜಾನಪದವನ್ನು ವಿವಿಧ ಶಿಸ್ತುಗಳ ಮೂಲಕ ಅಧ್ಯಯನ ಮಾಡಲು ಅವಕಾಶವಿದೆ. ಸಾಮಾಜಿಕ ನೆಲೆಯಲ್ಲಿ, ಮನೋಶಾಸ್ತ್ರೀಯ ನೆಲೆಯಲ್ಲಿ, ಕಲೆ ಮತ್ತು ಶಿಲ್ಪಶಾಸ್ತ್ರದ ನೆಲೆಯಲ್ಲಿ, ಭೌಗೋಳಿಕ ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ. ರಷ್ಯಾದಲ್ಲಿ ವಿದ್ಯಾರ್ಥಿಗಳಿಗೆ ಜಾನಪದ ಅಧ್ಯಯನವನ್ನು ಸಾಹಿತ್ಯಿಕ ದೃಷ್ಟಿಯಿಂದ ಪ್ರಾಯೋಗಿಕ ಬೋಧನಾ ವಿಧಾನಗಳ ಮೂಲಕ ಶಿಕ್ಷಣ ನೀಡುತ್ತಿರುವುದನ್ನು ಉಲ್ಲೇಖಿಸಲಾಗಿದೆ. ಜಾನಪದ ಅಧ್ಯಯನ ಮಾಡುವ ವಿದ್ಯಾರ್ಥಿಗಳನ್ನು ಎರಡು-ಮೂರು ತಿಂಗಳು ಬೇರೆ ಗ್ರಾಮೀಣ ಸಮುದಾಯಕ್ಕೆ ಕರೆದುಕೊಂಡು ಹೋಗಿ, ಅಲ್ಲಿಯೇ ಅವರೊಂದಿಗೆ ಬದುಕಿ, ಅವರ ಜಾನಪದ ಬದುಕಿನ ವೈಖರಿಯನ್ನು ಪ್ರಾಯೋಗಿಕ ಬೋಧನಾ ವಿಧಾನಗಳ ಮೂಲಕ ಬೋಧಿಸಿದಾಗ, ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಕಲಿಕಾಂಶಗಳು ಧನಾತ್ಮಕ ಪರಿಣಾಮವನ್ನು ಬೀರುತ್ತದೆ. ಇದು ಉತ್ತಮ ಬೋಧನಾ ವಿಧಾನವಾಗಿದೆ.

ಆಧುನಿಕ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳನ್ನು ಶಾಲಾ ಪರಿಮಿತಿಯನ್ನು ಬಿಟ್ಟು ಪ್ರಾಯೋಗಿಕ ಶಿಕ್ಷಣಕ್ಕಾಗಿ ಬೇರೆ ಸ್ಥಳಗಳಿಗೆ ಕಳುಹಿಸುವ ಬೋಧನಾ ಪದ್ಧತಿಯನ್ನು ಪಾಲಿಸಿರುವುದು ವಿರಳ. ಸರಕಾರದ ಕೆಲವು ಯೋಜನೆಗಳ ಮೂಲಕ (ರಾಷ್ಟ್ರೀಯ ಸೇವಾ ಯೋಜನೆ, ಎನ್.ಸಿ.ಸಿ. ರೋವರ್ಸ್ ಮತ್ತು ರೇಂಜರ್ಸ್. ಶೈಕ್ಷಣಿಕ ಪ್ರವಾಸ) ವಿದ್ಯಾರ್ಥಿಗಳು ಸಮುದಾಯದೊಂದಿಗೆ ಬೆರೆಯಲು ಅನುಕೂಲವಾಗುವಂತೆ ಅವಕಾಶಗಳನ್ನು ಕಲ್ಪಿಸಲಾಗಿದೆ. ತಾತ್ಕಾಲಿಕವಾದ ಈ ಯೋಜನೆಗಳು ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಪಠ್ಯಪೂರಕ ಮತ್ತು ಪಠ್ಯೇತರ ಚಟುವಟಿಕೆಗಳ ವ್ಯಾಪ್ತಿಗೆ ಬರುತ್ತವೆ. ಈ ಚಟುವಟಿಕೆಗಳಿಂದ ವಿದ್ಯಾರ್ಥಿಗಳು ಸಮುದಾಯದೊಂದಿಗೆ ನೇರವಾಗಿ ಪಾಲ್ಗೊಳ್ಳುವ ಅವಕಾಶ ಇದ್ದರೂ, ಕಲಿಕೆಗೆ ಪೂರಕವಾದ ವಾತಾವರಣವನ್ನು ಪೂರ್ಣವಾಗಿ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಈ ಯೋಜನೆಗಳಿಂದ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು, ಸಾಹಸ ಪ್ರವೃತ್ತಿಯನ್ನು, ಶಿಸ್ತಿನ ಜೀವನವನ್ನು ರೂಢಿಸಲು ಸಹಕಾರಿಯಾಗುತ್ತದೆ. ಇವು ವ್ಯಕ್ತಿತ್ವ ವಿಕಸನಕ್ಕೆ ನೆರವಾಗುವ ಯೋಜನೆಗಳಾಗಿವೆ. ಆದ್ದರಿಂದ ರಷ್ಯಾ ದೇಶದ ಬೋಧನಾ ಪದ್ಧತಿಯನ್ನು ಭಾರತದ ಶೈಕ್ಷಣಿಕ ಪದ್ಧತಿಗೆ ಅನುಗುಣವಾಗಿ ಬದಲಾಯಿಸಿಕೊಂಡು ಉನ್ನತ ಹಂತದ ವಿದ್ಯಾರ್ಥಿಗಳಿಗೆ ಅಳವಡಿಸಿದರೆ ಫಲಪ್ರದವಾದ ಫಲಿತಾಂಶವನ್ನು ಪಡೆಯಲು ಸಾಧ್ಯವಾಗಬಹುದು. ಭಾರತದಲ್ಲಿ ಉನ್ನತ ಶಿಕ್ಷಣದಲ್ಲಿ ಜಾನಪದ ವಿಷಯವನ್ನು ಒಂದು ಕೋರ್ ವಿಷಯವಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಈ ವಿಧಾನವನ್ನು ಅಳವಡಿಸಿಕೊಳ್ಳಬಹುದಾಗಿದೆ. ಈ ಮೇಲಿನ ವಿವರಗಳಿಂದ ಕಂಡುಕೊಳ್ಳಬಹುದಾದ ಸಂಗತಿಯೆಂದರೆ ಸಾಮಾನ್ಯ ಶೈಕ್ಷಣಿಕ ಪದ್ಧತಿಯಲ್ಲಿ ಪ್ರಾಯೋಗಿಕ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡರೆ ಬೋಧನೆ ಪರಿಣಾಮಕಾರಿಯಾಗುತ್ತದೆ, ಶಿಕ್ಷಣದ ಪ್ರಗತಿ ಸಾಧ್ಯವಾಗಲು ನೆರವಾಗುತ್ತದೆ.

೧೦೭೦ರ ದಶಕದಲ್ಲಿಯೇ ಯುರೋಪಿನ ದೇಶಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಬಳಸಿ ಬೋಧನೆ ಮಾಡಲಾಗುತ್ತಿತ್ತು. ರಷ್ಯಾದಲ್ಲಿ 'ಸ್ಮಾರ್ಟ್‌ಕ್ಲಾಸ್' ಎಂಬ ಚಾಕ್ಷುಷ ಬೋಧನಾ ಕ್ರಮವನ್ನು ೧೯೭೦ಕ್ಕೆ ಮೊದಲೇ ಜಾರಿ ತಂದಿದ್ದರು. ಅದನ್ನು 'ನವ ರಷ್ಯದ ನೋಟ' ಪ್ರವಾಸ ಕೃತಿಯಲ್ಲಿ ಕಾಣಲಾಗಿದೆ. "ಚಾಕ್ಷುಸ ಶಿಕ್ಷಣ ಕ್ರಮಕ್ಕೆ ಇಲ್ಲಿ ಮಹತ್ವ ನೀಡಲಾಗುತ್ತದೆ..... ಕೇವಲ ಬಾಯಿ ಮೂಲಕ ಮಾತ್ರವಲ್ಲ, ಎಲ್ಲವನ್ನೂ

ಕಣ್ಣಿಂದ ನೋಡಿ, ಕೈಯಿಂದ ಮುಟ್ಟಿ, ವಸ್ತುವಿನ ಅಂತರ್ಗತಗಳನ್ನು ತಿಳಿದು ತನ್ನ ಜ್ಞಾನವನ್ನು ವಿದ್ಯಾರ್ಥಿ ಹೆಚ್ಚಿಸಿಕೊಳ್ಳಬಲ್ಲ; ಖಚಿತಪಡಿಸಿಕೊಳ್ಳಬಲ್ಲ. ಇವೆಲ್ಲವನ್ನೂ ನೋಡುತ್ತಿದ್ದಂತೆ– ರೊಪ್ಪದಲ್ಲಿ ಕೂಡಿದಂತೆ ತರಗತಿಗಳು, ಗದ್ದಲ, ವಿದ್ಯಾರ್ಥಿಗಳಿಗೆ ತಿಳಿದರೆಷ್ಟು ಬಿಟ್ಟರೆಷ್ಟು ಎಂದು ಊದುವ ಶಂಖ ಊದುವ ಅಧ್ಯಾಪಕ ವರ್ಗ, ಅಶಿಕ್ಷಿತ ವಿದ್ಯಾರ್ಥಿವೃಂದ–ಇವೆಲ್ಲರಿಂದ ಕೂಡಿದ ನಮ್ಮ ಶಾಲಾ ಕಾಲೇಜುಗಳ ಚಿತ್ರ ನನ್ನ ಮನಸ್ಸಿನಲ್ಲಿ ಮೂಡಿತು! ಎಂತಹ ವ್ಯತ್ಯಾಸ".(ಹ.ವೆಂ. ನಾಗರಾಜರಾವ್., ನವರಷ್ಯದ ನೋಟ., ಪು–೮೦)

ರಷ್ಯಾದಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ೧೯೭೦ರ ದಶಕದಲ್ಲಿಯೇ ಪರಿಚಯಿಸಿದ್ದರೆ, ಭಾರತದಲ್ಲಿ ಇಂದಿಗೂ ಪರಿಪೂರ್ಣವಾದ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಅಳವಡಿಸಲು ಸಾಧ್ಯವಾಗಿಲ್ಲ. ಕೆಲವು ಪ್ರತಿಷ್ಠಿತ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ 'ಸ್ಮಾರ್ಟ್‌ಕ್ಲಾಸ್' ಪರಿಕಲ್ಪನೆಯ ಬೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸ್ಮಾರ್ಟ್‌ಕ್ಲಾಸ್ ಮೂಲಕ ವಿದ್ಯಾರ್ಥಿಗಳಿಗೆ ಗಣಕಯಂತ್ರದ ಸಹಾಯದಿಂದ ಪ್ರೊಜೆಕ್ಟರ್‌ಗಳ ಮೂಲಕ ಬೋಧಿಸಲಾಗುತ್ತಿದೆ. ಭಾರತದಲ್ಲಿ ಸರಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಒಂದು ವಿಷಯವಾಗಿ ಪರಿಚಯಿಸಿದ್ದರೂ, ತಂತ್ರಜ್ಞಾನಾಧಾರಿತ ಶಿಕ್ಷಣವನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳಲು ಸಾದ್ಯವಾಗಿಲ್ಲ. ಇಂದಿನ ತಂತ್ರಜ್ಞಾನ ಯುಗದಲ್ಲಿ ಯುವಜನತೆಯು ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಸ್ಪರ್ಧೆಯನ್ನು ಎದುರಿಸಬೇಕಾದರೆ ಕೊಠಡಿಯೊಳಗಿನ ಸಾಮಾನ್ಯ ಬೋಧನೆ 'ಚಾಕ್ ಅಂಡ್ ಟಾಕ್' ಮೂಲಕ ಸಾಧ್ಯವಿಲ್ಲ. ಎಲ್ಲಾ ಸರಕಾರಿ ಶಾಲೆ/ ಕಾಲೇಜುಗಳಲ್ಲೂ 'ಸ್ಮಾರ್ಟ್ ಕ್ಲಾಸ್' ಮೂಲಕ ಬೋಧಿಸುವ ಆಧುನಿಕ ತಂತ್ರಜ್ಞಾನ ಆಧಾರಿತ ಬೋಧನಾ ವ್ಯವಸ್ಥೆ ಪರಿಪೂರ್ಣವಾಗಿ ಜಾರಿಯಾದರೆ ಬೋಧನೆ ಪರಿಣಾಮಕಾರಿಯಾಗಿರುತ್ತದೆ. ಶಿಕ್ಷಕರಿಗೆ ತಂತ್ರಜ್ಞಾನ ಆಧರಿಸಿ ಬೋಧಿಸುವ ಕೌಶಲ್ಯವನ್ನು ಗಳಿಸಿಕೊಳ್ಳಲು ತರಬೇತಿಗಳನ್ನು ನೀಡಿ ಅವರ ಬೋಧನಾ ಶೈಲಿಯನ್ನು ಉನ್ನತೀಕರಿಸಬೇಕಿದೆ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗುತ್ತದೆ. 'ನವ ರಷ್ಯದ ನೋಟ' ಕೃತಿಯು ವ್ಯಕ್ತಪಡಿಸುವ ಅಭಿಪ್ರಾಯವು ಎರಡು ದೇಶಗಳ ನಡುವಿನ ಬೋಧನಾ ವಿಧಾನಗಳಲ್ಲಿರುವ ವ್ಯತ್ಯಾಸಗಳನ್ನು ತಿಳಿಸುವ ಮೂಲಕ ಆತ್ಮಾವಲೋಕನ ಮಾಡಿಕೊಳ್ಳುವಂತೆಯೂ, ಶಿಕ್ಷಣ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವಂತೆಯೂ ಸಲಹೆ ನೀಡುತ್ತದೆ.

ಸೋವಿಯತ್ ರಾಷ್ಟ್ರವು ಶಾಲಾ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾರ್ಜನೆಯ ಜೊತೆಗೆ ಕೃಷಿ ಚಟುವಟಿಕೆಯಲ್ಲಿಯೂ ಪಾಲ್ಗೊಳ್ಳುವ ಅವಕಾಶವನ್ನು ಒದಗಿಸಿದೆ. 'ಸೋವಿಯತ್ ದೇಶ ಕಂಡೆ' ಕೃತಿಯಲ್ಲಿ ಈ ಯೋಜನೆಯನ್ನು ಜಾರಿ ತಂದಿರುವುದರ ಬಗ್ಗೆ ಹೀಗೆ ದಾಖಲಿಸಿದ್ದಾರೆ. "ಗ್ರಾಮಾಂತರ ಪ್ರದೇಶದಲ್ಲಿ ಸುಗ್ಗಿಯ ಕಾಲ ಬಂದಾಗ ತಮ್ಮ ಕೃಷಿಕ ತಂದೆ ತಾಯಿಗಳಿಗೆ ನೆರವಾಗಲೆಂದು ವಿದ್ಯಾರ್ಥಿಗಳನ್ನು ವಾರದಲ್ಲಿ ಎರಡು ಮೂರು ದಿನ ಎರಡು ಮೂರು ಗಂಟೆ ಬೇಗನೆ ಬಿಡುತ್ತಾರೆ"(ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪು–೪೮)ಎಂದು ಉಲ್ಲೇಖಿಸಲಾಗಿದೆ. ಈ ಅವಕಾಶವನ್ನು ಬಳಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಕೃಷಿಯ ಬಗ್ಗೆ ಅನೌಪಚಾರಿಕ ಶಿಕ್ಷಣ ಪದ್ಧತಿಯ ಮೂಲಕ ಪ್ರಾತ್ಯಕ್ಷಿಕವಾಗಿ ಕಲಿಯಲು ಸಾಧ್ಯವಾಗುವುದನ್ನು ಗುರುತಿಸಬಹುದು. ಕೃಷಿಯಲ್ಲಿ ತಂದೆ–ತಾಯಿಯರಿಗೆ ಸಹಕರಿಸಲು ಬೇಗ ಶಾಲೆ ಬಿಡುವುದರಿಂದ ಕೃಷಿಗೆ ಆ ದೇಶ ನೀಡಿರುವ ಮಹತ್ವವೇನೆಂಬುದು ತಿಳಿಯುತ್ತದೆ. ಕೃಷಿ ಕೆಲಸದಲ್ಲಿ ವಿದ್ಯಾರ್ಥಿಗಳನ್ನು ಶಾಲಾ ಹಂತದಲ್ಲಿಯೇ ತೊಡಗಿಸಿಕೊಳ್ಳುವುದು ಪ್ರಾಯೋಗಿಕವಾಗಿ ಕೃಷಿಯನ್ನು ಶಿಕ್ಷಣದ ಜೊತೆ ಜೊತೆಗೆ ಕಲಿಯಲು ಅವಕಾಶ ಮಾಡಿಕೊಡುತ್ತದೆ. ಮನೆಯವರಿಂದಲೇ ಕೃಷಿ ಶಿಕ್ಷಣವನ್ನು

ಪಡೆದಂತಾಗುತ್ತದೆ. ಶಾಲಾ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಕೃಷಿ ಚಟುವಟಿಕೆಯ ಬಗ್ಗೆ ಅರಿವು ಮೂಡಲು ಸಹಕಾರಿಯಾಗುತ್ತದೆ. ಅದರ ಮೂಲಕ ಚಟುವಟಿಕೆ ಆಧಾರಿತ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಿದಂತಾಗಿದೆ. ಶಿಕ್ಷಣವನ್ನು ಗಳಿಸುವ ಉದ್ದೇಶಕ್ಕೆ ಅನುಗುಣವಾದ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸಿರುವುದನ್ನು ಗುರುತಿಸಲಾಗಿದೆ.

ಶಿಕ್ಷಣದ ಉದ್ದೇಶ ವಿದ್ಯಾರ್ಥಿಗಳಲ್ಲಿ ದೇಶಾಭಿಮಾನವನ್ನು ಬೆಳೆಸುವುದು. ಉತ್ತಮ ಸಂಸ್ಕಾರಗಳನ್ನುಳ್ಳ ಉತ್ತಮ ನಾಗರಿಕನನ್ನು ರೂಪಿಸುವುದು. ವಿದ್ಯಾರ್ಥಿಗಳು ಸಂಸ್ಕಾರವನ್ನು ಕಲಿಯುವುದು ಕೇವಲ ಬೋಧನೆಯಿಂದಲ್ಲ. ವಿದ್ಯಾರ್ಥಿಗಳಲ್ಲಿ ಸಂಸ್ಕಾರವು ಬೆಳೆಯಬೇಕಾದರೆ ಸಮಾಜದ ರೀತಿ ರಿವಾಜುಗಳನ್ನು ವಿದ್ಯಾರ್ಥಿಯ ಸ್ವಾನುಭವಕ್ಕೆ ಒಳಗುಮಾಡಬೇಕು. ಅದಕ್ಕೆ ನಾಟಕ ಪ್ರಕಾರ ಉತ್ತಮ ಮಾಧ್ಯಮವಾಗಿದೆ. ಶೈಕ್ಷಣಿಕವಾಗಿ ನಾಟಕಗಳನ್ನು ಶಾಲಾ ಹಂತದಲ್ಲಿ ಬಳಸಿಕೊಳ್ಳುವ ಕುರಿತು 'ಶ್ರೀ–ರಂಗ–ಯಾತ್ರೆ' ಕೃತಿಯಲ್ಲಿ "ಶಾಲೆಯ ಒಂದು ಮಟ್ಟದಲ್ಲಿ ಒಪೆರಾಗಳನ್ನು ನೋಡುವುದು ವಿದ್ಯಾರ್ಥಿಗಳಿಗೆ ಕಡ್ಡಾಯದ ಕ್ರಮವಾಗಿದೆಯಂತೆ. ಹೀಗೆ ಎಳೆವಯಸ್ಸಿನಲ್ಲಿಯೆ ಒಳ್ಳೆಯ ಅಭಿರುಚಿಯ ಸಂಸ್ಕಾರವಾಗುವುದೆಂದ ಮೇಲೆ ಬೆಳೆದ ಮೇಲೆ ಅವರು ನಾಟ್ಯಗೃಹಗಳನ್ನು ತುಂಬುವುದರಲ್ಲಿ ಆಶ್ಚರ್ಯವಿಲ್ಲ"(ಶ್ರೀರಂಗ., ಶ್ರೀ–ರಂಗ–ಯಾತ್ರೆ., ಪು–೨೨)ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬರ್ಲಿನ್ ದೇಶದಲ್ಲಿ ವಿದ್ಯಾರ್ಥಿಗಳಲ್ಲಿ ಸಂಸ್ಕಾರಗಳನ್ನು ಬೆಳೆಸುವ ಉದ್ದೇಶದಿಂದ ನಾಟಕ ಪ್ರದರ್ಶನ ಮಾಡುತ್ತಾರೆ ಎಂದಾಯಿತು. ಇದು ಒಂದು ಬೋಧನಾ ವಿಧಾನವಾಗಿದೆ. ವಿದ್ಯಾರ್ಥಿಗಳಿಗೆ ಹತ್ತು ಬಾರಿ ಕಥೆಗಳನ್ನು ವಿವರಿಸಿ ಹೇಳುವ ಬದಲು ಒಮ್ಮೆ ನಾಟಕ ರೂಪದಲ್ಲಿ ಪ್ರದರ್ಶಿಸಿದರೆ ಕಲಿಕೆ ಸುಲಭವಾಗುತ್ತದೆ. ನಾಟಕಗಳು ವಿದ್ಯಾರ್ಥಿಯಲ್ಲಿ ದೇಶಭಕ್ತಿಯನ್ನು, ಪರಿಸರ ಕಾಳಜಿಯನ್ನು, ಸೇವಾ ಮನೋಭಾವವನ್ನು ಬೆಳೆಸುವಂತಿರುತ್ತವೆ. ಉತ್ತಮ ನಾಗರಿಕನಿಗೆ ಇರಬೇಕಾದ ಲಕ್ಷಣಗಳನ್ನು ನಾಟಕಗಳ ಮೂಲಕ ಶಾಲಾ ಹಂತದಿಂದಲೇ ಬೆಳೆಸಬಹುದಾದ ಪರಿಣಾಮಕಾರಿ ವಿಧಾನವಾಗಿದೆ. ನಾಟಕಾಭಿನಯದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳನ್ನು ಅದೇ ರಂಗದಲ್ಲಿ ಮುಂದುವರೆಯಲು ಅವಕಾಶ ನೀಡಿದಂತಾಗುತ್ತದೆ. ನಾಟಕದಲ್ಲಿಯೇ ತನ್ನ ಬದುಕನ್ನು ಕಂಡುಕೊಳ್ಳಲು ನೆರವಾಗುತ್ತದೆ.

ಕರ್ನಾಟಕದ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗಾಗಿ ನಾಟಕವನ್ನು ರೂಪಿಸಿ ಶಾಲಾ ಕಾಲೇಜುಗಳಲ್ಲಿ ಪ್ರದರ್ಶಿಸುವ ಯೋಜನೆ ಸರಕಾರದ ಮಟ್ಟದಲ್ಲಿಲ್ಲ. ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗಾಗಿ ಮಕ್ಕಳ ಚಲನಚಿತ್ರಗಳನ್ನು ವೀಕ್ಷಿಸುವ ಅವಕಾಶಗಳನ್ನು ಮಾಡಿಕೊಡಲಾಗಿದೆ. ಅದು ಕೂಡ ಸಮರ್ಪಕವಾಗಿ ಜಾರಿಯಾಗದಿರುವುದನ್ನು ಗುರುತಿಸಬಹುದು. ನಾಟಕಗಳು, ಚಲನಚಿತ್ರಗಳು (ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಯೋಗ್ಯವಾದ) ಶೈಕ್ಷಣಿಕ ಹಿತದೃಷ್ಟಿಯಿಂದ ಮಕ್ಕಳ ಬೌದ್ಧಿಕ ವಿಕಾಸಕ್ಕೆ ನೆರವಾಗುತ್ತದೆಯೇ? ಎಂದು ಪ್ರಶ್ನೆ ಮೂಡಬಹುದು. ಇದು ತಾತ್ವಿಕವಾದ ಚರ್ಚೆಗೆ ಅವಕಾಶಮಾಡಿಕೊಡುತ್ತದೆ. ವಿದ್ಯಾರ್ಥಿಯ ಬೌದ್ಧಿಕ ವಿಕಾಸಕ್ಕೆ ನಿಖರವಾಗಿ ಕಾರಣವಾಗುತ್ತದೆ ಎಂದು ಹೇಳಲಾಗದಿದ್ದರೂ, ಪ್ರಚೋದನೆಯನ್ನು, ಸ್ಫೂರ್ತಿಯನ್ನು ನೀಡಬಹುದು ಎಂದು ಸರಳೀಕರಿಸಬಹುದು. ಮೇಲಿನ ಚರ್ಚೆಗಳ ತಾತ್ಪರ್ಯವೆಂದರೆ ಶ್ರೀರಂಗ ಅವರ ಸಲಹೆಯಂತೆ ಶೈಕ್ಷಣಿಕ ಬೋಧನಾ ಪದ್ಧತಿಯಲ್ಲಿ ಒಂದು ವಿಧಾನವಾಗಿ ನಾಟಕ ವಿಧಾನವನ್ನು ಅಳವಡಿಸಿಕೊಳ್ಳುವುದು ಸೂಕ್ತ ಎಂಬುದನ್ನು ಕಂಡುಕೊಳ್ಳಲಾಗಿದೆ.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಗ್ರಂಥಾಲಯಗಳ ಪಾತ್ರ ಪ್ರಮುಖವಾದುದು. ಶಿಕ್ಷಣವನ್ನು ಪಡೆಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಲ್ಲಿ ಒಂದೇ ಪ್ರಕಾರದ ವಿಷಯಗ್ರಹಣ ಸಾಮರ್ಥ್ಯ

ಇರುವುದಿಲ್ಲ. ವೈಯಕ್ತಿಕ ಭಿನ್ನತೆ ಇದ್ದೇ ಇರುತ್ತದೆ. ಕೆಲವು ವಿದ್ಯಾರ್ಥಿಗಳಿಗೆ ಬೋಧನೆಯನ್ನು ಕೇಳಿದರೆ ಸಾಕು ವಿಷಯವನ್ನು ಗ್ರಹಿಸಿಕೊಳ್ಳುತ್ತಾರೆ. ಕೆಲವು ವಿದ್ಯಾರ್ಥಿಗಳಿಗೆ ಬೋಧನೆಯಲ್ಲಿ ಹೇಳಿದ ವಿಷಯಗಳು ಹೆಚ್ಚು ಮನದಟ್ಟಾಗುವುದಿಲ್ಲ. ಅವರಿಗೆ ಸ್ವಯಂ ಓದು ವಿಧಾನ ಹೆಚ್ಚು ಹಿತವಾಗಿರುತ್ತದೆ. ಪುಸ್ತಕಗಳನ್ನು ಸ್ವಯಂ ಆಗಿ ಓದಿ ಆರ್ಜಿಸಿಕೊಳ್ಳುವ ಸಾಮರ್ಥ್ಯ ಇರುವ ಮಕ್ಕಳಿಗಾಗಿ ಮತ್ತು ಇನ್ನೂ ಹೆಚ್ಚು ವಿಷಯ ತಿಳಿಯಬೇಕೆಂಬ ಕುತೂಹಲವುಳ್ಳ ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯ ಉಪಯುಕ್ತವಾದುದು. ಫ್ರಾನ್ಸ್ ದೇಶದಲ್ಲಿ ಪ್ರತಿ ಹಳ್ಳಿಯಲ್ಲೂ ಗ್ರಂಥಾಲಯಗಳಿವೆಯಂತೆ. ನಾಗತಿಹಳ್ಳಿ ಚಂದ್ರಶೇಖರ್ ಅವರು 'ಬಯೋನ್' ಎಂಬ ಹಳ್ಳಿಗೆ ಭೇಟಿ ನೀಡಿದಾಗ ಅಲ್ಲಿನ ಗ್ರಂಥಾಲಯಕ್ಕೂ ಭೇಟಿ ನೀಡಿದ್ದಾರೆ. ಅಲ್ಲಿನ ಗ್ರಂಥಾಲಯದ ಸುವ್ಯವಸ್ಥೆ, ಅಚ್ಚುಕಟ್ಟುತನವನ್ನು ಕಂಡ ಲೇಖಕರು ನಮ್ಮ ಭಾರತೀಯ ಗ್ರಂಥಾಲಯಗಳ ವ್ಯವಸ್ಥೆಯೊಂದಿಗೆ ಹೋಲಿಸಿ "ನುಸಿ ಹಿಡಿದ, ಬೈಂಡ್ ಕಿತ್ತ, ಹಾಳೆ ಹರಿದ, ಅವ್ಯವಸ್ಥೆಯ ಆಗರವಾದ, ತಲೆಬರಹಗಳೇ ಇಲ್ಲದ, ರದ್ದಿಕಾಗದದ ಅಂಗಡಿಯಂತಿರುವ ನಮ್ಮ ಸರಕಾರಿ ಗ್ರಂಥಾಲಯಗಳು ಬೇಡವೆಂದರೂ ನೆನಪಾಗಹತ್ತಿದವು."(ನಾಗತಿಹಳ್ಳಿ ಚಂದ್ರ ಶೇಖರ., ಅಯನ., ಪು-೩೯)ಎಂದಿದ್ದಾರೆ. ಹೋಲಿಕೆಯು ಕಟುವಾಗಿದ್ದರೂ ಸತ್ಯಕ್ಕೆ ದೂರವಲ್ಲ. ಈ ಅಭಿಪ್ರಾಯವನ್ನು ಎಲ್ಲಾ ಗ್ರಂಥಾಲಯಗಳು ಇದೇ ಸ್ಥಿತಿಯಲ್ಲಿವೆ ಎಂದು ಸಾರ್ವತ್ರಿಕತೆಯನ್ನು ಆರೋಪಿಸುವಂತಿಲ್ಲ. ಅಪವಾದಗಳು ಇದ್ದಾವೆ. ಇದರಿಂದ ಗ್ರಂಥಾಲಯಗಳೇ ಶೈಕ್ಷಣಿಕ ವ್ಯವಸ್ಥೆಯ ಪ್ರಮುಖ ಆಧಾರ ಎಂಬ ತೀರ್ಮಾನಕ್ಕೆ ಬರಬೇಕಿಲ್ಲ. ಉತ್ತಮ ನಾಗರಿಕ ಸಮಾಜದ ಲಕ್ಷಣವಾಗಿ ಪ್ರತಿ ಹಳ್ಳಿಯೂ ಗ್ರಂಥಾಲಯವನ್ನು ಹೊಂದಿರಬೇಕೆಂಬುದು ಆದರ್ಶಯುತವಾದ ಪ್ರಜ್ಞೆಯಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿಯೆ ಗ್ರಂಥಾಲಯ ವ್ಯವಸ್ಥೆಗಳಿವೆ. ಆದರೆ ಅವುಗಳ ನಿರ್ವಹಣೆಯಲ್ಲಿ ಲೋಪಗಳಿರುವುದು ಕಂಡುಬರುತ್ತದೆ. ಲೇಖಕರು ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ಮಂಜೂರಾಗಿರುವ ಗ್ರಂಥಾಲಯಗಳನ್ನು ಸುಸಜ್ಜಿತಗೊಳಿಸಬೇಕಾದ ತುರ್ತನ್ನು ಹೇಳಿದ್ದಾರೆ.

'ಕಲಾವಿದ ಕಂಡ ಫ್ರಾನ್ಸ್' ಕೃತಿಯಲ್ಲಿ ಫ್ರಾನ್ಸ್ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಕೃತಿಯ ಬಗ್ಗೆ ಮಾಹಿತಿಯನ್ನು ದಾಖಲಿಸಿರುವ ಪ್ರಕಾರ 'ಫ್ರಾನ್ಸ್ ದೇಶದ ವಿದ್ಯಾರ್ಥಿಗಳು ಶಿಕ್ಷಣವನ್ನು ಪ್ರೈಮರಿ ಶಾಲೆಯಿಂದ ಪ್ರೌಢಶಾಲೆಯವರೆಗೆ ತಂದೆ-ತಾಯಿಯ ಜವಾಬ್ದಾರಿಯಲ್ಲಿ ಪಡೆಯುತ್ತಾರೆ. ಪ್ರೌಢಶಾಲೆ ಮುಗಿದ ಬಳಿಕ ಸ್ವತಂತ್ರವಾಗಿ ವಾಸ ಮಾಡಲು ಬಯಸುತ್ತಾರೆ. ಅವರ ಮುಂದಿನ ಶೈಕ್ಷಣಿಕ ವೆಚ್ಚವನ್ನು ತಾವೇ ಭರಿಸಿಕೊಂಡು ಕಾಲೇಜಿಗೆ ಓದಲು ಹೋಗುತ್ತಾರೆ. ದಿನಕ್ಕೆ ನಾಲ್ಕು ಗಂಟೆ ದುಡಿದರೆ ಸಾಕು ಊಟ, ವಸತಿ, ಶಿಕ್ಷಣದ ವೆಚ್ಚವನ್ನು ಭರಿಸಿಕೊಳ್ಳಬಹುದು. ಅಂಗಡಿ, ಹೋಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗಾಗಿ ಗಂಟೆಯ ಲೆಕ್ಕದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವ ವ್ಯವಸ್ಥೆ ಇರುತ್ತದೆ. ಸರಕಾರವೂ ಕೂಡ ಉನ್ನತ ಶಿಕ್ಷಣ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಶಿಷ್ಯವೇತನವನ್ನು ನೀಡುತ್ತದೆ. ಆದ್ದರಿಂದ ಇಚ್ಛಾ ಶಕ್ತಿಯಿದ್ದಲ್ಲಿ ಉನ್ನತ ಶಿಕ್ಷಣವನ್ನು ಗಳಿಸುವುದು ಕಷ್ಟವೇನಲ್ಲ' ಎಂಬುದು ತಿಳಿಯುತ್ತದೆ. ಈ ವಿಚಾರಗಳನ್ನು ವಿಶ್ಲೇಷಿಸಿದಾಗ 'ಫ್ರಾನ್ಸ್ ದೇಶದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ, ನಾಯಕತ್ವ ಗುಣ, ಸ್ಪರ್ಧಾ ಮನೋಭಾವ ಹಾಗೂ ಯಾವುದೇ ಸಮಸ್ಯೆಗಳನ್ನು ಎದುರಿಸುವ ಧೈರ್ಯವನ್ನು ಹೊಂದಿರಲು ಫ್ರಾನ್ಸ್‌ನ ಸಾಮಾಜಿಕ ಪದ್ಧತಿ ಕಾರಣವಾಗಿದೆ' ಎನ್ನಬಹುದು. ಭಾರತೀಯ ಸಂದರ್ಭದಲ್ಲಿ ಇದೇ ವಿಚಾರದೊಂದಿಗೆ ಹೋಲಿಸಿದಾಗ 'ಭಾರತೀಯ ಸಮಾಜದ ಕೌಟುಂಬಿಕ ವ್ಯವಸ್ಥೆಯಲ್ಲಿ ಮಕ್ಕಳ ಜವಾಬ್ದಾರಿ ತಂದೆ-ತಾಯಿಯರದ್ದಾಗಿರುತ್ತದೆ. ಮಕ್ಕಳನ್ನು ಸಂಪೂರ್ಣವಾಗಿ ಓಡಿತದಿಂದ ಬಿಡುವುದಿಲ್ಲ. ಸಮಾಜವು ಮಕ್ಕಳಿಗೆ ಜವಾಬ್ದಾರಿಯನ್ನು ವಹಿಸುವ ಬದಲು

ಅವರ ಜವಾಬ್ದಾರಿಯನ್ನು ತಂದೆ–ತಾಯಿಯರ ಮೇಲೆ ಹಾಕಿಬಿಡುತ್ತದೆ. ಆದ್ದರಿಂದ ಭಾರತೀಯ ಯುವಕರಲ್ಲಿ ಸಮಸ್ಯೆಗಳನ್ನು ಎದುರಿಸುವ ಧೈರ್ಯ, ಜವಾಬ್ದಾರಿಯನ್ನು ನಿರ್ವಹಿಸುವ ಚಾಕಚಕ್ಯತೆ, ಸ್ಪರ್ಧಾ ಮನೋಭಾವ, ನಾಯಕತ್ವ ಗುಣಗಳು ಕಡಿಮೆ ಎಂದು ಹೇಳಬಹುದು. ಫ್ರಾನ್ಸ್‌ನ ಶೈಕ್ಷಣಿಕ ಪ್ರಗತಿಯನ್ನು ನೋಡಿದಾಗ ಸಾಮಾಜಿಕ ಪದ್ಧತಿಯಿಂದ ಶಿಕ್ಷಣದ ಮೇಲಾಗಿರುವ ಧನಾತ್ಮಕ ಪ್ರಭಾವವನ್ನು ಗುರುತಿಸಲಾಗಿದೆ.

ಸಮಾಜದ ಪದ್ಧತಿಗಳು, ಕೌಟುಂಬಿಕ ಸಂಪ್ರದಾಯ, ಆಚರಣೆಗಳು ಅನೌಪಚಾರಿಕವಾಗಿ ವಿದ್ಯಾರ್ಥಿಗಳ ಬದುಕನ್ನು ರೂಪಿಸುವುದರಲ್ಲಿ ನೇರವಾದ ಪರಿಣಾಮ ಬೀರುತ್ತವೆ ಎಂಬ ತಾತ್ವಿಕ ಅಂಶವನ್ನು ಕಂಡುಕೊಳ್ಳಲಾಗಿದೆ.

ಯುರೋಪಿನ ಪ್ರವಾಸ ಕೃತಿಗಳ ನಿರೂಪಣಾ ಶೈಲಿಯನ್ನು ಆಧರಿಸಿ, ವ್ಯಕ್ತವಾಗಿರುವ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ತಿಳಿದುಬರುವ ಸಂಗತಿಗಳೆಂದರೆ, 'ಅಪೂರ್ವ ಪಶ್ಚಿಮ' ಕೃತಿಯಲ್ಲಿ ಶೈಕ್ಷಣಿಕ ಚಿಂತನೆಗಳು ಬೋಧನಾ ವಿಷಯಗಳನ್ನು ಆಧರಿಸಿದೆ. ವಿದ್ಯಾರ್ಥಿಗಳಿಗೆ ಕಲ್ಪನಾಧಾರಿತ ಬೋಧನಾ ವಿಷಯಗಳನ್ನು ಬೋಧಿಸುವುದು ತಪ್ಪಲ್ಲ ಎಂದಿದ್ದಾರೆ. ಆದರೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುವಾಗ ಅವಾಸ್ತವಿಕ, ಕಾಲ್ಪನಿಕ ಕಥೆಗಳನ್ನು ಹೆಣೆದು ಬೋಧಿಸುವ ಕ್ರಮ ಸಮಂಜಸವೆನಿಸಿದರೂ ಮಕ್ಕಳಿಗೆ ಅನುಮಾನಕ್ಕೆ ಕಾರಣವಾಗುವ, ಅಗೋಚರ ಭಯ ಹುಟ್ಟಿಸುವ, ವಿದ್ಯಾರ್ಥಿಗಳ ಆತಂಕಕ್ಕೆ ಕಾರಣವಾಗುವ ಕಥೆಗಳನ್ನು ಹೇಳದಂತೆ ಎಚ್ಚರಿಕೆ ವಹಿಸಬೇಕು ಎಂಬ ಅಂಶವನ್ನು ಈ ಕೃತಿಯು ನಿರೂಪಿಸಲು ಪ್ರಯತ್ನಿಸುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ. 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯು ಶೈಕ್ಷಣಿಕ ಚಟುವಟಿಕೆಯಲ್ಲಿ ಬೋಧನಾ ವಿಧಾನಕ್ಕೆ ಪ್ರಾಧಾನ್ಯತೆ ಕೊಟ್ಟಿದೆ. ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಅನುಭವಗಳನ್ನು ನೀಡುವ ಪ್ರಾಯೋಗಿಕ ಬೋಧನಾ ವಿಧಾನವನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. 'ನವ ರಷ್ಯದ ನೋಟ' ಕೃತಿಯು ಬೋಧನೆಯಲ್ಲಿ ತಂತ್ರಜ್ಞಾನವನ್ನು ಸೂಕ್ತರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಬಗ್ಗೆ ಸಲಹೆ ನೀಡಿದೆ. 'ಸೋವಿಯತ್ ದೇಶ ಕಂಡೆ' ಕೃತಿಯು 'ಶಿಕ್ಷಣಕ್ಕಿಂತ ಕೃಷಿ ಪ್ರಧಾನವಾಗಿದ್ದು, ಕೃಷಿಯ ಮೂಲಕ ವಿದ್ಯಾರ್ಥಿಗಳು ವಾಸ್ತವ ಶಿಕ್ಷಣವನ್ನು ಗಳಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. 'ಅಯನ' ಕೃತಿಯು ಶಿಕ್ಷಣವು ಬದುಕನ್ನು ರೂಪಿಸುವ ನೆಲೆಯಲ್ಲಿರಬೇಕೆಂಬ ಧೋರಣೆಯನ್ನು ವ್ಯಕ್ತಪಡಿಸಿದೆ. ಶ್ರೀ–ರಂಗ–ಯಾತ್ರೆ ಕೃತಿಯು ಶೈಕ್ಷಣಿಕ ಚಟುವಟಿಕೆಯಲ್ಲಿ ನಾಟಕ ಪದ್ಧತಿಯ ಪಾತ್ರವನ್ನು ಕೇಂದ್ರವಾಗಿಸಿಕೊಂಡು ನೋಡಿದೆ. ಎಲ್ಲರ ಅಭಿಪ್ರಾಯಗಳನ್ನು ಮುಖ್ಯ ಧೋರಣೆಯಲ್ಲಿಟ್ಟುಕೊಂಡು ಶಿಕ್ಷಣ ಕ್ಷೇತ್ರದ ಬಗ್ಗೆ ವಿಚಾರ ಮಂಥನ ಮಾಡಲಾಗಿದೆ.

ಈ ಮೇಲಿನ ವಿಶ್ಲೇಷಣೆಯಿಂದ ತಿಳಿದು ಬರುವ ಸಂಗತಿ ಎಂದರೆ ಬೋಧನಾ ವಿಧಾನಗಳು ಏಕಮುಖಿಯಾಗಿರದೆ ಬಹುಮುಖಿಯಾಗಿರುತ್ತವೆ. ಬೋಧನೆಯಲ್ಲಿ ಲೇಖಕರು ವಿವರಿಸಿರುವ ಎಲ್ಲಾ ಬೋಧನಾ ವಿಧಾನಗಳನ್ನು ಔಚಿತ್ಯಪೂರ್ಣವಾಗಿ, ಸಮಯ ಸಂದರ್ಭಕ್ಕೆ ತಕ್ಕನಾಗಿ, ಬೋಧಿಸುವ ವಿಷಯಗಳನ್ನಾಧರಿಸಿ ಬಳಸಿಕೊಳ್ಳಬೇಕು. ದೇಶ–ಕಾಲಗಳನ್ನು ಮೀರಿ ಬೋಧನಾ ವಿಧಾನಗಳನ್ನು ವಿಷಯಕ್ಕನುಗುಣವಾಗಿ ಅಳವಡಿಸಿಕೊಳ್ಳಬಹುದಾಗಿದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

೫.೨ ಬೋಧನೆ : ಸಂವಹನ ಮಾಧ್ಯಮ

ಆಧುನಿಕ ಯುಗದ ಚಲನಶೀಲ ಪ್ರಕ್ರಿಯೆಗಳಲ್ಲಿ ಸಂವಹನ ಪ್ರಕ್ರಿಯೆಗೆ ಮಹತ್ತರ ಸ್ಥಾನವಿದೆ. ಸಂವಹನ ಎಂದರೆ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆಯುವ ಸಂಭಾಷಣೆಯಾಗಿದೆ. ಸಂಭಾಷಣೆ ವಿವಿಧ ಮಾಧ್ಯಮಗಳ ಮೂಲಕ ನಡೆಯುತ್ತದೆ. ಮಾತು, ಬರೆಹ, ಸಂಜ್ಞೆ ಮೊದಲಾದ ಮಾಧ್ಯಮಗಳು ಸಂವಹನ ಕ್ರಿಯೆಯಲ್ಲಿ ಒಳಗೊಳ್ಳುತ್ತವೆ. ಶಿಕ್ಷಣ ಕೇತ್ರದಲ್ಲಿ ಸಂವಹನ ಪ್ರಕ್ರಿಯೆಗೆ ಮೊದಲ ಆದ್ಯತೆ ಇದೆ. ಶಿಕ್ಷಕ–ವಿದ್ಯಾರ್ಥಿಗಳ ನಡುವೆ ನಡೆಯುವ ಸಂವಹನ ಕ್ರಿಯೆಗೆ ಭಾಷೆ ಅಗತ್ಯವಾದುದು. ಭಾಷೆಯ ಮೂಲಕವೇ ಶಿಕ್ಷಕ ವಿದ್ಯಾರ್ಥಿಯೊಂದಿಗೆ ಸಂವಹನ ಮಾಡಲು ಸಾಧ್ಯ. ಈ ಸಂವಹನ ಕ್ರಿಯೆ ಯಶಸ್ವಿಯಾಗಿ ನಡೆಯಬೇಕಾದರೆ ಶಿಕ್ಷಕ ವಿದ್ಯಾರ್ಥಿಯ ಮಾತೃಭಾಷೆಯಲ್ಲಿಯೇ ಬೋಧಿಸಬೇಕು. ಶಿಕ್ಷಣದಲ್ಲಿ ಭಾಷೆಗೆ ಸಂಬಂಧಿಸಿದ ಚರ್ಚೆಗೆ ಎರಡು ಮುಖಗಳಿವೆ. ಮೊದಲನೆಯದಾಗಿ ವಿದ್ಯಾರ್ಥಿಗೆ ಭಾಷೆಯನ್ನು ವಿಷಯವಾಗಿ ಬೋಧಿಸುವುದು. ಎರಡನೆಯದಾಗಿ ಯಾವುದೇ ವಿಷಯವನ್ನು ಬೋಧಿಸುವಾಗ 'ಸಂವಹನ ಕ್ರಿಯೆಯಲ್ಲಿ ಶಿಕ್ಷಕ ಬಳಸುವ ಭಾಷೆ'. ಇದನ್ನು ಭಾಷಾ ಮಾಧ್ಯಮವೆಂದು ಕರೆಯಲಾಗುತ್ತದೆ.

ಪ್ರಸಕ್ತ ಸಂದರ್ಭದಲ್ಲಿ ಸಂವಹನ ಮಾಧ್ಯಮ ಮತ್ತು ಭಾಷೆಯ ಬೋಧನೆಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳಲ್ಲಿ, ಚರ್ಚಾಕೂಟಗಳಲ್ಲಿ, ಪತ್ರಿಕೆಯಲ್ಲಿ, ಹಾಗೂ ತಂತ್ರಜ್ಞಾನ ಆಧಾರಿತ ದೃಶ್ಯ ಮತ್ತು ಶ್ರವ್ಯ ಮಾಧ್ಯಮಗಳಲ್ಲಿ ಹೆಚ್ಚು ಚರ್ಚೆಯಾಗುತ್ತಿದೆ. ಮಾತೃಭಾಷೆಯಲ್ಲಿ ಆಲಿಸುವ ಮತ್ತು ಮಾತನಾಡುವ ಕೌಶಲ್ಯಗಳು ಮಗುವಿನ ಅಭಿಕ್ಷಮತೆ ಆಗಿರುತ್ತದೆ. ಈ ಕೌಶಲ್ಯಗಳನ್ನು ಆಧರಿಸಿ ಮಗುವಿಗೆ ಮಾತೃಭಾಷೆಯ ಮೂಲಕ ಓದುವ ಮತ್ತು ಬರೆಯುವ ಕೌಶಲ್ಯವನ್ನು ಕಲಿಸಬೇಕು. ಆದ್ದರಿಂದ ಸಂವಹನ ಮಾಧ್ಯಮದ ಚರ್ಚೆಗೆ ಮೊದಲು ಭಾಷಾ ವಿಷಯಗಳ ಆಯ್ಕೆಯ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಚರ್ಚಿಸಬೇಕಾಗುತ್ತದೆ.

ಭಾಷಾ ವಿಷಯಗಳ ಬೋಧನೆ :

ಶಿಕ್ಷಣದಲ್ಲಿ ವಿದ್ಯಾರ್ಥಿಗೆ ವಿಷಯಗಳನ್ನು ಬೋಧಿಸುವಾಗ ಯಾವ ಭಾಷೆಯಲ್ಲಿ ಬೋಧಿಸುತ್ತೇವೆ ಎಂಬುದನ್ನು ಚರ್ಚಿಸುವ ಮೊದಲು, ಮಗುವಿಗೆ ಯಾವ ಯಾವ ಭಾಷೆಯನ್ನು ಕಲಿಸುತ್ತಿದ್ದೇವೆ ಎಂಬುದನ್ನು ಚರ್ಚಿಸಬೇಕಾಗುತ್ತದೆ. ಇದಕ್ಕೆ ಅಪವಾದವಾಗಿ ಯಾವ ಭಾಷೆಗಳನ್ನು ಕಲಿಸಬೇಕು ಎಂಬುದನ್ನು ಚರ್ಚಿಸುವ ಮೊದಲು ಯಾವ ಭಾಷೆಯಲ್ಲಿ ಬೋಧಿಸುತ್ತೇವೆ ಎಂಬ ಪ್ರಶ್ನೆಯು ಮೊದಲಾಗಬಹುದು. ಈ ಎರಡು ಸಂಗತಿಗಳು ಒಂದಕ್ಕೊಂದು ಪೂರಕವಾಗಿವೆ. ಪ್ರಸ್ತುತ ಚರ್ಚೆಯಲ್ಲಿ ಸಂವಹನ ಮಾಧ್ಯಮಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಹಂತದಿಂದ ವಿಷಯವಾಗಿ ಬೋಧಿಸಬೇಕಾದ ಭಾಷೆಯ ಬಗೆಗಿನ ಸಂಗತಿಯನ್ನು ಮೊದಲು ವಿಶ್ಲೇಷಿಸಲಾಗಿದೆ.

ಯಾವುದೇ ಭಾಷೆಯನ್ನು ಮಗುವಿಗೆ ಕಲಿಸುವಾಗ ಅದು ವಿದ್ಯಾರ್ಥಿಯ ಪ್ರಾದೇಶಿಕತೆಯನ್ನು ಆಧರಿಸಿರುತ್ತದೆ, ಮತ್ತು ಇದರಲ್ಲಿ ರಾಜ್ಯ ಸರಕಾರದ ನಿಯಮಗಳು ಕೂಡ ಪ್ರಭಾವಿಸಿರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಕರ್ನಾಟಕ ಸರಕಾರವು ಕರ್ನಾಟಕದಲ್ಲಿ ಪ್ರೌಢಶಾಲೆಯ ಹಂತದವರೆಗೆ ತ್ರಿಭಾಷಾ ಸೂತ್ರವನ್ನು ಜಾರಿ ಮಾಡಿದೆ. ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ಪ್ರೌಢಶಾಲಾ ಹಂತದವರೆಗೆ ಕಲಿಸಲಾಗುತ್ತಿದೆ. ಮಾತೃಭಾಷೆಯನ್ನು ವಿದ್ಯಾರ್ಥಿಗಳಿಗೆ ಪ್ರಥಮ ಭಾಷೆಯಾಗಿ ಕಲಿಸುವುದು ಕಡ್ಡಾಯವಾಗಿದೆ.

ಕೊಠಾರಿ ಆಯೋಗವು ಕೂಡ ಮಾತೃಭಾಷೆಯನ್ನು ಮೊದಲ ಭಾಷೆಯಾಗಿ ಕಲಿಸುವಂತೆ ಶಿಫಾರಸ್ಸು ಮಾಡಿದೆ. ಗಾಂಧೀಜಿಯ ಶೈಕ್ಷಣಿಕ ವಿಚಾರಧಾರೆಗಳ ಅನುಸಾರ ಮಾತೃಭಾಷೆಯನ್ನೇ ಪ್ರಥಮ ಭಾಷೆಯಾಗಿ ಬೋಧಿಸಬೇಕಾಗುತ್ತದೆ. ಪ್ರಸ್ತುತ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಸಾಮಾನ್ಯ ಶಿಕ್ಷಣ ಪಡೆಯುವ ವಿದ್ಯಾರ್ಥಿ ಪ್ರೌಢಶಾಲಾ ಹಂತದವರೆಗೆ ಪ್ರಥಮ ಭಾಷೆಯಾಗಿ ಪ್ರಾದೇಶಿಕ ಭಾಷೆಯನ್ನು, ದ್ವಿತೀಯ ಭಾಷೆಯಾಗಿ ಇಂಗ್ಲೀಷ್, ತೃತೀಯ ಭಾಷೆಯಾಗಿ ಹಿಂದಿಯನ್ನು ಕಲಿಯುತ್ತಾನೆ ಮತ್ತು ಅದು ಕಡ್ಡಾಯವಾಗಿರುತ್ತದೆ. ಇದಕ್ಕೆ ಕೆಲವು ಅಪವಾದಗಳು ಇಲ್ಲದಿಲ್ಲ. ತಮಿಳುನಾಡು ರಾಜ್ಯವು ತ್ರಿಭಾಷಾ ಸೂತ್ರವನ್ನು ಪಾಲಿಸುತ್ತಿಲ್ಲ. ಅಲ್ಲಿನ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಭಾಷೆಯಾಗಿ ತಮಿಳು ಮತ್ತು ದ್ವಿತೀಯ ಭಾಷೆಯಾಗಿ ಇಂಗ್ಲೀಷ್‌ನ್ನು ಕಲಿಯುತ್ತಿದ್ದಾರೆ. ಹಿಂದಿಯ ಕಲಿಕೆಯನ್ನು ಕಡ್ಡಾಯ ಮಾಡಿರುವುದಿಲ್ಲ. ಇತರ ರಾಜ್ಯಗಳಲ್ಲಿ ತ್ರಿಭಾಷಾ ಸೂತ್ರದ ಹಿನ್ನೆಲೆಯಲ್ಲಿ ಮೂರು ಭಾಷೆಗಳನ್ನು ಕಲಿಯುವುದು ಕಡ್ಡಾಯವಾಗಿದೆ. ಪ್ರೌಢಶಾಲೆಯ ನಂತರ ಕಾಲೇಜು ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಗೆ ತನ್ನ ಆಯ್ಕೆಯ ಭಾಷೆಯನ್ನು ವಿಷಯವಾಗಿ ಆಯ್ಕೆ ಮಾಡಿಕೊಂಡು ಕಲಿಯುವ ಅವಕಾಶವಿರುತ್ತದೆ. ಯಾವುದೇ ಬಾಷೆಯನ್ನು ಕಲಿಯುವಂತೆ ವಿದ್ಯಾರ್ಥಿಯ ಮೇಲೆ ಒತ್ತಡ ಹಾಕುವಂತಿಲ್ಲ.

ತ್ರಿಭಾಷಾ ಸೂತ್ರವನ್ನು ಭಾರತದಲ್ಲಿ ಮಾತ್ರವಲ್ಲ, ಪಾಶ್ಚಾತ್ಯ ದೇಶಗಳಲ್ಲಿ ೧೯೬೦ರ ದಶಕದ ಹಿಂದೆಯೇ ಅಳವಡಿಸಿಕೊಳ್ಳಲಾಗಿದೆ. 'ಸೋವಿಯತ್ ದಿನಚರಿ' ಕೃತಿಯಲ್ಲಿ ಎಸ್ತೋನಿಯಾ ರಾಜ್ಯದಲ್ಲಿ ತ್ರಿಭಾಷಾ ಸೂತ್ರದ ಅನ್ವಯ ಭಾಷೆಗಳನ್ನು ವಿಷಯವಾಗಿ ಕಲಿಸುವುದನ್ನು ಉಲ್ಲೇಖಿಸಲಾಗಿದೆ. "ಈ ಶಾಲೆಯಲ್ಲಿ ಮೊದಲನೆಯ ತರಗತಿಯಿಂದಲೇ ಇಂಗ್ಲಿಷನ್ನು ಕಲಿಸುತ್ತಾರೆ. ಆದರೆ ಅದರ ಜೊತೆಗೆ ಎಸ್ತೋನಿಯನ್ನನ್ನೂ ಕಡ್ಡಾಯವಾಗಿ ಕಲಿಯಬೇಕು. ಎರಡನೆಯ ತರಗತಿಯಿಂದ ರಷ್ಯನ್‌ಅನ್ನೂ ಕಲಿಯಬೇಕು. ಹೀಗೆ ಏಳು-ಎಂಟು ವರ್ಷ ವಯಸ್ಸಿನ ಮಕ್ಕಳು ಮೂರು ಭಾಷೆಗಳನ್ನು ಕಲಿಯಬೇಕಾಗುತ್ತದೆ. ಇದು ಶೈಕ್ಷಣಿಕ ದೃಷ್ಟಿಯಿಂದ ಸಮಂಜಸವಲ್ಲವೆಂದು ನನ್ನ ಅಭಿಪ್ರಾಯ" (ಶ್ರೀರಂಗರಾಜು., ಸೋವಿಯತ್ ದಿನಚರಿ., ಪು-೧೦೪)ಎಂದಿದ್ದಾರೆ. ೧೯೬೯ರ ಮೊದಲೇ ಎಸ್ತೋನಿಯಾ ರಾಜ್ಯವು ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿದೆ. ಲೇಖಕರ ಅಭಿಪ್ರಾಯದಲ್ಲಿ ಏಳು-ಎಂಟು ವರ್ಷ ವಯಸ್ಸಿನ ವಿದ್ಯಾರ್ಥಿಗಳಿಗೆ ಮೂರು ಭಾಷೆಯನ್ನು ಕಲಿಸುವುದಕ್ಕೆ ಅಸಮ್ಮತಿಯನ್ನು ವ್ಯಕ್ತಪಡಿಸಿರುವುದನ್ನು ಗುರುತಿಸಬಹುದು. ಇದು ಮಗುವಿನ ಬೌದ್ಧಿಕ ಕ್ಷಮತೆಯನ್ನು ಆಧರಿಸಿದ ಪ್ರಮಾಣವಾಗಿದೆ. ಹೊಸ ಭಾಷೆಯನ್ನು ಶೈಕ್ಷಣಿಕ ವಾತಾವರಣದಲ್ಲಿ ಕಲಿಸಬೇಕಾದರೆ ವಿದ್ಯಾರ್ಥಿಯ ದೈಹಿಕ ಮತ್ತು ಮಾನಸಿಕ ಸಿದ್ಧತೆಗಳು ಅಗತ್ಯ ಎಂಬುದನ್ನು ಮನಗಾಣಲಾಗಿದೆ. ೧೯೬೯ರ ಕಾಲಘಟ್ಟದಲ್ಲಿ ಭಾರತದಲ್ಲಿ ತ್ರಿಭಾಷಾ ಪದ್ಧತಿ ಜಾರಿಯಲ್ಲಿರಲ್ಲಿಲ್ಲ. ಆಗಲೇ ಎಸ್ತೋನಿಯಾ ರಾಜ್ಯವು ಇಂಗ್ಲೀಷ್ ಭಾಷೆಯ ಕಲಿಕೆಗೆ ಪ್ರಾಧಾನ್ಯತೆ ನೀಡಿತ್ತು. ಆದರೆ ಪ್ರಾದೇಶಿಕ ಭಾಷೆಯೇ ಮೊದಲ ಸ್ಥಾನದಲ್ಲಿತ್ತು. ಹಾಗೂ ರಾಷ್ಟ್ರೀಯ ಭಾಷೆ ರಷ್ಯನ್‌ನನ್ನು ಕಲಿಯಬೇಕಾಗಿತ್ತು. ಅಲ್ಲಿನ ಶೈಕ್ಷಣಿಕ ಪರಿಸ್ಥಿತಿಯನ್ನು ಆಧರಿಸಿ ಶ್ರೀರಂಗರಾಜು ಅವರು "ಮಾತೃಭಾಷೆಯನ್ನು ಬಿಟ್ಟು ಮತ್ತಾವ ಭಾಷೆಯನ್ನೂ ಒತ್ತಾಯವಾಗಿ ಕಲಿಸುವುದು ತಪ್ಪು" (ಶ್ರೀರಂಗರಾಜು., ಸೋವಿಯತ್ ದಿನಚರಿ., ಪು-೧೦೨) ಎಂದಿದ್ದಾರೆ. ತ್ರಿಭಾಷಾ ಪದ್ಧತಿಯನ್ನು ಒಪ್ಪಿರುವುದಿಲ್ಲ.

'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯು ಸೋವಿಯತ್ ದೇಶದಲ್ಲಿನ ಶಿಕ್ಷಣ ಪದ್ಧತಿಯ ಬಗ್ಗೆ ವಿವರಿಸುತ್ತಾ ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿರುವ ಬಗ್ಗೆ ಪ್ರಸ್ತಾಪಿಸಿದೆ. ಸೋವಿಯತ್ ದೇಶದಲ್ಲಿ

ಹದಿನಾಲ್ಕು ರಾಜ್ಯಗಳಿವೆ. ಆ ಪ್ರತಿಯೊಂದು ರಾಜ್ಯಕ್ಕೂ ತಮ್ಮದೇ ಆದ ಪ್ರಾದೇಶಿಕ ಭಾಷೆಗಳಿವೆ. ಅವರ ಪ್ರಾದೇಶಿಕ ಭಾಷೆಯೇ ಶಿಕ್ಷಣದ ಮಾಧ್ಯಮವಾಗಿದೆ. ತಮ್ಮ ಪ್ರಾದೇಶಿಕ ಭಾಷೆಯ ಜೊತೆಗೆ ರಷ್ಯನ್ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕೆಂಬ ನಿಯಮವಿದೆ. ಇವೆರಡು ಭಾಷೆಗಳ ಜೊತೆಗೆ ಇನ್ನೊಂದು ವಿದೇಶಿ ಭಾಷೆಯನ್ನು ಕೂಡ ಕಲಿಯಬೇಕಾಗುತ್ತದೆ. ಭಾಷೆಗಳನ್ನು ಕಲಿಸುವಾಗ ಮಾತೃಭಾಷೆಯೇ ಮೊದಲ ಭಾಷೆ ಆಗಿರಬೇಕು ಎಂಬ ನಿಯಮ ಇರುವುದನ್ನು ಕೃತಿಯು ಉಲ್ಲೇಖಿಸಿದೆ.

ಈ ಮೇಲಿನ ವಿವರಗಳನ್ನು ಆಧರಿಸಿ ಹೇಳುವುದಾದರೆ 'ಎರಡೂ ಅಭಿಪ್ರಾಯಗಳು ಸೋವಿಯತ್ ದೇಶದ ತ್ರಿಭಾಷಾ ಪದ್ಧತಿಯನ್ನು ಕುರಿತು ವಿಶ್ಲೇಷಿಸಿದೆ. ಮೊದಲ ಅಭಿಪ್ರಾಯವು ತ್ರಿಭಾಷಾ ಪದ್ಧತಿಯನ್ನು ನಿರಾಕರಿಸಿದರೆ, ಎರಡನೇ ಅಭಿಪ್ರಾಯವು ಒಪ್ಪುತ್ತದೆ. ಈ ಎರಡೂ ಕೃತಿಗಳು ಭಾರತದಲ್ಲಿ ತ್ರಿಭಾಷಾ ಪದ್ಧತಿ ಜಾರಿಯಾಗುವ ಮೊದಲೇ ಪ್ರಕಟವಾಗಿದ್ದವು. ಇವುಗಳ ಪ್ರಕಟಣೆಯ ಅಂತರ ನಾಲ್ಕು ವರ್ಷಗಳಿವೆ. ಹೆಚ್ಚು ಕಡಿಮೆ ಒಂದೇ ಅವಧಿಯ ಕೃತಿಗಳಾಗಿದ್ದರೂ ಅಭಿಪ್ರಾಯ ಬೇಧ ಇರುವುದನ್ನು ಗಮನಿಸಿದರೆ ಲೇಖಕರ ಮನೋಧೋರಣೆಗಳಲ್ಲಿನ ವ್ಯತ್ಯಾಸಗಳು ಕಾರಣವೆಂಬುದಾಗಿ ತಿಳಿಯಲಾಗಿದೆ.

ಪ್ರಸ್ತುತ ಭಾರತೀಯ ಶೈಕ್ಷಣಿಕ ವ್ಯವಸ್ಥೆಯಲ್ಲಿ ತ್ರಿಭಾಷಾ ಸೂತ್ರ ಅಳವಡಿಸಿರುವುದನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿವೇಚಿಸಬೇಕಾಗಿದೆ. ಅದರಂತೆ ಮಾತೃಭಾಷೆ ಅಲ್ಲದ ಒಂದು ಭಾಷೆಯನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಕಲಿಸುವಂತೆ ಏಕರೂಪ ನಿಯಮವನ್ನು ಜಾರಿಮಾಡಲು ಬರುವುದಿಲ್ಲ. ಏಕೆಂದರೆ ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಭಿನ್ನತೆ ಇರುತ್ತದೆ. ದೈಹಿಕ ಮತ್ತು ಮಾನಸಿಕ ವಯಸ್ಸಿನ ಅಂತರ ಇರುತ್ತದೆ. ಹೊಸ ಭಾಷೆಯನ್ನು ಕಲಿಯುವ ಸಾಮರ್ಥ್ಯದಲ್ಲಿ ವ್ಯತ್ಯಾಸವಿರುತ್ತದೆ. ಹಾಗೆಂದು ವೈಯಕ್ತಿಕ ಭಿನ್ನತೆಗೆ ಅನುಗುಣವಾಗಿ ವಿವಿಧ ನಿಯಮಗಳನ್ನು ರೂಪಿಸುವುದು ಸರಿಯಲ್ಲ. ಹಾಗೆ ಮಾಡಿದರೆ ಒಬ್ಬೊಬ್ಬ ವಿದ್ಯಾರ್ಥಿಗೆ ಒಂದೊಂದು ನಿಯಮಗಳನ್ನು ರೂಪಿಸಬೇಕಾಗುತ್ತದೆ. ಮನೋವಿಜ್ಞಾನಿಗಳು ವಿದ್ಯಾರ್ಥಿಗಳಿಗೆ ಪ್ರೌಢಶಾಲಾ ಹಂತದಲ್ಲಿ ಮೂರು ಭಾಷೆಗಳನ್ನು ಕಲಿಯುವ ಸಾಮರ್ಥ್ಯವಿರುತ್ತದೆ ಎಂದಿದ್ದಾರೆ. ಅದರ ಆಧಾರದ ಮೇಲೆ ಒಂದು ಸೂತ್ರಕ್ಕೆ ಬರುವುದಾದರೆ 'ವಿದ್ಯಾರ್ಥಿಗೆ ಭಾಷೆಯಾಗಿ ಮಾತೃಭಾಷೆಯನ್ನೇ ಮೊದಲು ಕಲಿಸಬೇಕು. ಮಾತೃ ಭಾಷೆಯ ಜೊತೆಗೆ ಪ್ರಾದೇಶಿಕ ಭಾಷೆಯನ್ನು ಕಲಿಯುವುದು ಕಡ್ಡಾಯವಾಗಬೇಕು. ಇತರ ಭಾಷೆಯನ್ನು ಹೆಚ್ಚಿನ ವಿದ್ಯಾರ್ಥಿಗಳ ಅಭಿಸಾಮರ್ಥ್ಯವನ್ನು ಲಕ್ಷಿಸಿ ಹಂತ ಹಂತವಾಗಿ ಹೊಸ ಭಾಷೆಯನ್ನು ಪರಿಚಯಿಸಬೇಕು. ಇತರ ಭಾಷೆಯ ಕಲಿಕೆಗೆ ಒತ್ತಾಯ ಮಾಡಬಾರದು. ಆಂಗ್ಲಭಾಷೆಯನ್ನು ಒಂದು ಭಾಷೆಯಾಗಿ ಶಾಲಾ ಹಂತದಲ್ಲಿಯೇ ಕಲಿಸಬಹುದು. ಆದರೆ ಅದು ವಿದ್ಯಾರ್ಥಿಯ ಮತ್ತು ಪೋಷಕರ ಬೇಡಿಕೆಯ ಮೇರೆಗೆ ಕಲಿಸಬೇಕು. ಮಾತೃಭಾಷೆ ಮತ್ತು ಪ್ರಾದೇಶಿಕ ಭಾಷೆಯನ್ನು ಹೊರತುಪಡಿಸಿ ಇತರ ಯಾವ ಭಾಷೆಯನ್ನೂ ಕಲಿಯುವುದು ಕಡ್ಡಾಯ ಮಾಡಬಾರದು. ಮಗು ಕಲಿಯುವ ಆಸಕ್ತಿಯನ್ನು ತೋರಿಸಿದರೆ ಎಷ್ಟು ಭಾಷೆಯನ್ನು ಕಲಿಯಲು ಇಚ್ಛಿಸುತ್ತದೆಯೋ, ಮತ್ತು ಯಾವ ಭಾಷೆಯನ್ನು ಕಲಿಯಬೇಕೆಂದು ಬಯಸುತ್ತದೆಯೋ ಅದನ್ನು ಆಧುನಿಕ ತಂತ್ರಜ್ಞಾನವನ್ನು ಬಳಸಿ ಕಲಿಸುವ ವ್ಯವಸ್ಥೆಯಾಗಬೇಕು' ಎಂಬ ಅಂಶಗಳನ್ನು ಕಂಡುಕೊಳ್ಳಲಾಗಿದೆ.

ಶಿಕ್ಷಣದಲ್ಲಿ ಭಾಷಾ ಮಾಧ್ಯಮ : ಭಾರತವು ಹಲವು ವೈವಿಧ್ಯಮಯ ಭಾಷೆಗಳನ್ನು ಹೊಂದಿರುವ ದೇಶ. ಭಾರತೀಯ ಸಂವಿಧಾನದಲ್ಲಿ ಅಂಗೀಕೃತಗೊಂಡ ಇಪ್ಪತ್ತೆರಡು ಭಾಷೆಗಳಿವೆ. ಪ್ರತಿಯೊಂದು ರಾಜ್ಯವು

ತನ್ನದೇ ಆದ ಅಧಿಕೃತ ರಾಜ್ಯಭಾಷೆಯನ್ನು ಹೊಂದಿದೆ. ಅಧಿಕೃತ ರಾಜ್ಯ ಭಾಷೆಯು ಆ ರಾಜ್ಯದ ಬಹುಜನರ ಮಾತೃಭಾಷೆ ಆಗಿರುತ್ತದೆ. 'ಶೈಕ್ಷಣಿಕ ಮಾಧ್ಯಮ' ಎಂದರೆ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುವಾಗ ಸಂವಹನಕ್ಕಾಗಿ ಬಳಸಿಕೊಳ್ಳುವ ಭಾಷೆ. ಅದು ವಿದ್ಯಾರ್ಥಿಗಳಿಗೆ ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪುವುದು ಮಾತೃಭಾಷೆಯಲ್ಲಿ ಬೋಧಿಸಿದಾಗ ಮಾತ್ರ. ಹಾ.ಮಾ. ನಾಯಕ ಅವರು "ನಮ್ಮ ಭಾಷೆಯಲ್ಲಿ ಓದಿದ್ದೇ ಮೈಗೆ ಹತ್ತುವುದು" ಎಂದಿರುವುದನ್ನು ನೆನಪಿಸಿಕೊಳ್ಳಬಹುದು. ಸೋವಿಯತ್ ದೇಶದಲ್ಲಿ ಶಿಕ್ಷಣದ ಮಾಧ್ಯಮವು ಮಾತೃಭಾಷೆಯೇ ಆಗಿರುತ್ತದೆ. ಮಾತೃಭಾಷೆಯನ್ನು ಕಲಿಸುವುದು ಮತ್ತು ಅವರ ಮಾತೃಭಾಷೆಯ ಮೂಲಕವೇ ಕಲಿಸುವುದು ಕಡ್ಡಾಯವಾಗಿರುವುದನ್ನು ಅನೇಕ ಲೇಖಕರು ಉಲ್ಲೇಖಿಸಿದ್ದಾರೆ.

'ವಿದೇಶದಲ್ಲಿ ನಾಲ್ಕು ವಾರ' ಕೃತಿಯಲ್ಲಿ ಉಕ್ರೇನ್‌ನ ವಿಶ್ವವಿದ್ಯಾನಿಲಯದಲ್ಲಿ ಉಕ್ರೇನಿಯನ್ ಭಾಷೆಯನ್ನೇ ಬೋಧನಾ ಮಾಧ್ಯಮವಾಗಿ ಬಳಸುತ್ತಿರುವುದನ್ನು ಉಲ್ಲೇಖಿಸಲಾಗಿದೆ. ಉಕ್ರೇನ್ ೧೯೯೧ಕ್ಕೂ ಮೊದಲು ಸೋವಿಯತ್ ಒಕ್ಕೂಟದ ಭಾಗವಾಗಿತ್ತು. ೧೯೭೦ರಲ್ಲಿ ದೇ. ಜವರೇಗೌಡರು ಉಕ್ರೇನ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದಾಗ ಅಲ್ಲಿನ ಪ್ರಾದೇಶಿಕ ಭಾಷೆ ಉಕ್ರೇನ್ ಬೋಧನಾ ಮಾಧ್ಯಮವಾಗಿರುವುದನ್ನು ಉಲ್ಲೇಖಿಸಿದ್ದಾರೆ.

'ಸೋವಿಯತ್ ದಿನಚರಿ' ಕೃತಿಯು ಸೋವಿಯತ್ ದೇಶದ ಶೈಕ್ಷಣಿಕ ಚಟುವಟಿಕೆಗಳನ್ನು ಅಭ್ಯಸಿಸಿ ಶಿಕ್ಷಣದ ಉನ್ನತಿಗೆ ಅಲ್ಲಿನ ಶೈಕ್ಷಣಿಕ ಕ್ರಮಗಳು ಹೇಗೆ ಪೂರಕವಾಗಿದೆ ಎಂಬುದನ್ನು ಚರ್ಚಿಸಿದೆ. ಶಿಕ್ಷಣದ ಯಶಸ್ಸಿಗೆ ಮಾತೃಭಾಷೆಯೇ ಮೂಲ ಪ್ರೇರಣೆ ಎಂಬುದು ಈ ಕೃತಿಯ ನಿಲುವಾಗಿದೆ.

ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು, ವೃತ್ತಿಪರ ಕೋರ್ಸ್‌ಗಳನ್ನು ಬೋಧಿಸಲು ಆಂಗ್ಲಭಾಷೆಯನ್ನೇ ಅವಲಂಬಿಸಲಾಗಿದೆ. ಕಾಲೇಜು ಶಿಕ್ಷಣದ ಹಂತದಲ್ಲಿ(ಐಚ್ಛಿಕ ಕನ್ನಡವನ್ನು ಹೊರತುಪಡಿಸಿ) ಬಹುತೇಕ ಎಲ್ಲಾ ಕೋರ್ ವಿಷಯಗಳನ್ನು ಆಂಗ್ಲಭಾಷೆಯ ನೆರವಿನಿಂದಲೇ ಬೋಧಿಸಲಾಗುತ್ತಿದೆ. ಅದು ವಿದ್ಯಾರ್ಥಿಗಳಿಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ ಎಂಬುದರ ಬಗ್ಗೆ ಚಿಂತಿಸುತ್ತಿಲ್ಲ. ಅನೇಕ ಉಪನ್ಯಾಸಕರು ಆಂಗ್ಲಭಾಷೆಯಲ್ಲಿ ಬೋಧಿಸುವುದರಿಂದ ತಮ್ಮ ಪ್ರತಿಷ್ಠೆ ಹೆಚ್ಚುತ್ತದೆ ಎಂದು ಭಾವಿಸಿದ್ದಾರೆ. ಆದರೆ ರಷ್ಯಾದಲ್ಲಿ ವಿಜ್ಞಾನವನ್ನು ರಷ್ಯನ್ ಭಾಷೆಯಲ್ಲಿಯೇ ಬೋಧಿಸಲಾಗುತ್ತದೆ. ಮತ್ತು ಇಂಗ್ಲೀಷ್‌ನ ಪುಸ್ತಕಗಳನ್ನು ರಷ್ಯನ್ ಬಾಷೆಗೆ ತರ್ಜಿಮೆ ಮಾಡಿದ್ದಾರೆ. ತಮ್ಮ ಭಾಷೆಯಲ್ಲಿ ವಿಜ್ಞಾನ ಪುಸ್ತಕಗಳು ಇಲ್ಲವೆಂದು ಯಾರೂ ಕೈಕಟ್ಟಿ ಕುಳಿತಿಲ್ಲ. ತರ್ಜಿಮೆ ಕಾರ್ಯ ಭರದಿಂದ ಸಾಗುತ್ತಿದೆ. ಶ್ರೀರಂಗರಾಜು ಅವರು "ಯಾರೂ ಇಂಗ್ಲೀಷನ್ನು ಶಿಕ್ಷಣ ಮಾಧ್ಯಮವಾಗಿ ಇಟ್ಟುಕೊಂಡಿಲ್ಲ" (ಶ್ರೀರಂಗರಾಜು., ಸೋವಿಯತ್ ದಿನಚರಿ., ಪು-೧೬,೧೭)ಎಂದಿದ್ದಾರೆ. ಸೋವಿಯತ್ ದಿನಚರಿ ಕೃತಿಯು 'ನಾವು ನಮ್ಮ ಮಾತೃಭಾಷೆಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಿಲ್ಲ. ವಿಜ್ಞಾನ ವಿಷಯದ ಬೋಧನೆಗೆ ಆಂಗ್ಲಭಾಷೆಯನ್ನು ನೆಚ್ಚಿಕೊಂಡಿದ್ದೇವೆ. ಈ ಪರಿಸ್ಥಿತಿ ಬದಲಾಗಬೇಕು. ಕನ್ನಡ ಭಾಷೆಯಲ್ಲಿಯು ವಿಜ್ಞಾನವನ್ನು ಬೋಧಿಸುವಂತಾಗಬೇಕು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಉನ್ನತ ಶಿಕ್ಷಣದಲ್ಲಿಯೂ ಆಂಗ್ಲಭಾಷಾ ಮಾಧ್ಯಮಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಮಾತೃಭಾಷೆಯಲ್ಲಿ ಬೋಧಿಸಲು ಆಗುವುದಿಲ್ಲ ಎಂಬ ಸಬೂಬನ್ನು ಕೊಡುತ್ತಿದ್ದಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆಯು ವಿಜ್ಞಾನ ವಿಷಯವನ್ನು ಕನ್ನಡ ಮಾಧ್ಯಮದಲ್ಲಿಯೇ ಬೋಧಿಸಬೇಕೆಂಬ ಸುತ್ತೋಲೆಯನ್ನು ಹೊರಡಿಸಿತ್ತು. ಕನ್ನಡ ಭಾಷಾ ಅಭಿವೃದ್ಧಿಗೆ ಸರಕಾರ ಕೈಗೊಂಡ ಪ್ರಮುಖ ನಿರ್ಣಯಗಳಲ್ಲಿ ಇದೂ ಒಂದಾಗಿದೆ. ಆದರೆ ಈ ಸೂಚನೆಯನ್ನು

ಪರಿಣಾಮಕಾರಿಯಾಗಿ ಜಾರಿ ಮಾಡಬೇಕಿದ್ದ ಬೋಧಕರ ಪ್ರತಿಕ್ರಿಯೆ ನಿರಾಶಾದಾಯಕವಾಗಿತ್ತು. ಉಪನ್ಯಾಸಕರೇ ಕನ್ನಡವನ್ನು ಬೆಳೆಸುವ ವಿಶೇಷ ಪ್ರಯತ್ನ ವಿಫಲವಾಗಲು ಕಾರಣರಾದರು. ಆದರೆ ವಿಜ್ಞಾನವನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಬೋಧಿಸಲು ಸಾಧ್ಯವಿದೆ ಎಂಬುದನ್ನು ಶಿವರಾಮ ಕಾರಂತ, ಸಿ.ಎನ್.ಆರ್. ರಾವ್, ಜೆ.ಆರ್. ಲಕ್ಷ್ಮಣರಾವ್, ಜಿ. ಟಿ. ನಾರಾಯಣರಾವ್ ಮೊದಲಾದವರು ನಿರೂಪಿಸಿದ್ದಾರೆ. ಆದ್ದರಿಂದ ಇಂದಿನ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿಯೂ, ಹಾಗೂ ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು ಮೊದಲಾದ ಕಾಲೇಜು ಹಂತದ ವೃತ್ತಿ ಶಿಕ್ಷಣದಲ್ಲಿಯೂ ವಿದ್ಯಾರ್ಥಿಗಳಿಗೆ ಮಾಧ್ಯಮಗಳ ಆಯ್ಕೆಗೆ ಅವಕಾಶ ನೀಡಬೇಕಿದೆ. ಕನ್ನಡ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗಾಗಿ ಅವರ ಪಠ್ಯಕ್ರಮಕ್ಕೆ ಅನುಗುಣವಾದ ಕನ್ನಡ ಮಾಧ್ಯಮದ ಪುಸ್ತಕಗಳನ್ನೂ ಪ್ರಕಟಿಸಬೇಕಿದೆ. ಕನ್ನಡ ಭಾಷೆಯನ್ನು ಎಲ್ಲಾ ಶೈಕ್ಷಣಿಕ ಹಂತಗಳಲ್ಲೂ ಮಾಧ್ಯಮ ಭಾಷೆ ಆಗುವಂತೆ ಮಾಡಬೇಕಾದರೆ, ಅದಕ್ಕೆ ಸೂಕ್ತ ಪರಿಹಾರಗಳನ್ನು ಆಡಳಿತವರ್ಗ ಮತ್ತು ಸರಕಾರ ಕೈಗೊಳ್ಳಬೇಕಾಗುತ್ತದೆ. ಯುರೋಪಿನ ದೇಶಗಳಲ್ಲಿ ವಿಜ್ಞಾನವನ್ನು ಮಾತೃಭಾಷೆಯಾಗಿ ಬೋಧಿಸಲು ಸಾಧ್ಯವಾಗುವುದಾದರೆ, ಕನ್ನಡ ಮಾಧ್ಯಮದಲ್ಲಿಯೂ ವಿಜ್ಞಾನವನ್ನು ಬೋಧಿಸಲು ಸಾಧ್ಯ ಎಂಬುದನ್ನು ಅರಿಯಬೇಕಿದೆ.

ಮಾತೃಭಾಷೆಯನ್ನು ಒಂದು ಭಾಷೆಯಾಗಿ ಕಲಿಸಲು ಮತ್ತು ಸಂವಹನ ಮಾಧ್ಯಮವಾಗಿ ಅಳವಡಿಸಿಕೊಳ್ಳಲು ರಷ್ಯಾ ಸರಕಾರ ಕೈಗೊಂಡಿರುವ ನೂತನ ಕ್ರಮಗಳ ಬಗ್ಗೆ 'ವಿದೇಶದಲ್ಲಿ ನಾಲ್ಕು ವಾರ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ರಷ್ಯಾ ದೇಶಕ್ಕೆ ಶಿಕ್ಷಣವನ್ನು ಪಡೆಯಲು ಬರುವ ವಿದೇಶಿ ವಿದ್ಯಾರ್ಥಿಗಳು ಕಡ್ಡಾಯವಾಗಿ ರಷ್ಯನ್ ಭಾಷೆಯನ್ನು ಮೊದಲು ಕಲಿಯಬೇಕು. ರಷ್ಯನ್ ಭಾಷೆ ಕಲಿಯುವ ಮೊದಲ ವರ್ಷದ ವಿದ್ಯಾರ್ಥಿಗಳಿಗೆ 'ಪ್ರಿಪೇರಟರಿ ಫ್ಯಾಕಲ್ಟಿ ಫಾರ್ ಫಾರೀನ್ ಸ್ಟೂಡೆಂಟ್ಸ್' ಎಂಬ ಕೋರ್ಸ್ ಇದೆ. ಆ ಕೋರ್ಸ್‌ನ್ನು ಪೂರೈಸುವುದು ಕಡ್ಡಾಯವಾಗಿರುತ್ತದೆ. ಆ ಕೋರ್ಸ್‌ನ್ನು ಪೂರ್ಣಗೊಳಿಸಿದ ಬಳಿಕ ಅವರಿಗೆ ರಷ್ಯನ್ ಭಾಷಾ ಮಾಧ್ಯಮದಲ್ಲೆ ಬೋಧಿಸಲಾಗುತ್ತದೆ. ಆದರೆ ಭಾರತದಲ್ಲಿ ಕಲಿಯಲು ಬರುವ ವಿದೇಶಿ ವಿದ್ಯಾರ್ಥಿಗಳನ್ನು ಬೋಧಿಸಲು ಅವರ ಮಾತೃಭಾಷೆಯನ್ನು ಅಥವಾ ಆಂಗ್ಲಭಾಷೆಯನ್ನು ಮಾಧ್ಯಮವಾಗಿ ಬಳಸುತ್ತಿರುವುದು ಕಂಡುಬರುತ್ತದೆ. ರಷ್ಯನ್ ಮಾದರಿಯಲ್ಲಿ ಪ್ರಾದೇಶಿಕ ಭಾಷೆಯನ್ನು ಅಭಿವೃದ್ಧಿಪಡಿಸಲು ಅವಕಾಶಗಳಿರುವುದನ್ನು ಕಾಣಲಾಗಿದೆ.

'ಶಶಿ ಕಂಡ ಜರ್ಮನಿ' ಕೃತಿಯಲ್ಲಿ ಜರ್ಮನ್ ಶಿಕ್ಷಣ ಪದ್ಧತಿಯಲ್ಲಿ ಮಾತೃಭಾಷೆಯ ಅನುಕೂಲತೆ ಕುರಿತು "ಎಲ್ಲಕ್ಕಿಂತ ಮುಖ್ಯ ಎಲ್ಲವನ್ನೂ ತಮ್ಮ ಮಾತೃಭಾಷೆಯಲ್ಲಿ ಕಲಿಯುವುದರಿಂದ ಯಾವ ಕಷ್ಟವೂ ಇಲ್ಲ, ಕಾಲವೂ ಉಳಿತಾಯ."(ಹೋ ಶ್ರೀನಿವಾಸಯ್ಯ.,, ಶಶಿಕಂಡ ಜರ್ಮನಿ., ಪು-೩೩)ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ವಿಷಯ ಸರಳವಾಗಿ ಅರ್ಥವಾಗಬೇಕಾದರೆ ಅವರ ಮಾತೃಭಾಷೆಯಲ್ಲಿಯೇ ಹೇಳಬೇಕು. ಆಗ ವಿದ್ಯಾರ್ಥಿ ಸರಳವಾಗಿ ವಿಷಯವನ್ನು ಗ್ರಹಿಸುತ್ತಾನೆ. ಮತ್ತು ಅನಗತ್ಯ ವಿಬಂಳವೂ ಆಗುವುದಿಲ್ಲ. ಆದ್ದರಿಂದ ಪ್ರಾಥಮಿಕ ಹಂತದಿಂದ ಕಾಲೇಜು ಹಂತದವರೆಗೆ ವಿದ್ಯಾರ್ಥಿಗಳಿಗೆ ಮಾತೃಭಾಷೆಯ ಮೂಲಕವೇ ಶಿಕ್ಷಣ ನೀಡುವುದು ಸೂಕ್ತವಾದುದು. ಕಾಲೇಜು ಹಂತದಲ್ಲಿ ವಿದ್ಯಾರ್ಥಿಯ ಆಸಕ್ತಿಯನ್ನು ಆಧರಿಸಿ ಮಾಧ್ಯಮವನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ನೀಡಬಹುದಾಗಿದೆ. ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯನ್ನು ಅವಲೋಕಿಸಿದರೆ ಪ್ರಾಥಮಿಕ ಪೂರ್ವ ತರಗತಿಗಳಿಂದಲೇ ಆಂಗ್ಲಭಾಷೆಯನ್ನು ಮಕ್ಕಳಿಗೆ ಕಲಿಸಲಾಗುತ್ತಿದೆ. ಮನೆಯಲ್ಲಿ ಮಾತನಾಡುವ ಭಾಷೆಗೂ. ಶಾಲೆಯಲ್ಲಿ

ಕಡ್ಡಾಯವಾಗಿ ಮಾತನಾಡಲೇಬೇಕಾದ ಆಂಗ್ಲಭಾಷೆಗೂ ಸಂಬಂಧಗಳನ್ನು ಗುರುತಿಸದ ಮಗು 'ಗಿಳಿಪಾಠ'ದಲ್ಲಿ ತೊಡಗಿದೆ. ಅದನ್ನೇ ಶಿಕ್ಷಣವೆಂದು ಭಾವಿಸಲಾಗಿದೆ. ಕಂಠಪಾಠದ ಕಾರಣದಿಂದ ಮಗುವಿನ ಮುಗ್ಧ ಮನಸ್ಸಿನ ಮೇಲೆ ಬೀಳುತ್ತಿರುವ ಒತ್ತಡವನ್ನು ಪರಿಗಣಿಸುತ್ತಿಲ್ಲ.

ಶಿಕ್ಷಣದಲ್ಲಿ ಸಂವಹನ ಮಾಧ್ಯಮವಾಗಿ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲಿ ಕಲಿಸುವುದು ಪರಿಣಾಮಕಾರಿಯೋ? ಮಾತೃಭಾಷೆ ಅಲ್ಲದ ಆಂಗ್ಲ ಭಾಷೆಯ ಮೂಲಕ ಕಲಿಸುವುದೋ ಪರಿಣಾಮಕಾರಿಯೋ ಎಂಬ ವಿಷಯವನ್ನು ಕ್ಷೇತ್ರ ಅಧ್ಯಯನದ ಮೂಲಕ ಕಿರು ಸಂಶೋಧನೆಯನ್ನು ಮಾಡಲು ಅವಕಾಶಗಳಿವೆ.

ಶ್ರೀರಂಗರಾಜು ಅವರು ಭಾಷಾ ಮಾಧ್ಯಮದ ಬಗ್ಗೆ "ಇದುವರೆಗೂ ನಾವು ಬಳಸುತ್ತಿರುವ ಇಂಗ್ಲಿಷ್‌ನ ಪ್ರಾಧಾನ್ಯ ದಿನದಿನಕ್ಕೆ ಹೆಚ್ಚುತ್ತಿರುವುದರಿಂದ ಅದನ್ನು ಬಿಡಬಾರದು. ಇನ್ನೂ ಹೆಚ್ಚಾಗಿ ಅದನ್ನು ಕಲಿಯಬೇಕು. ಆದರೆ ಅದನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಬಲವಂತವಾಗಿ ಕಲಿಸಲು ಪ್ರಯತ್ನಿಸುವುದು ಸರಿಯಲ್ಲ. ಹಾಗೆಯೇ ಅದನ್ನು ಪ್ರಾಥಮಿಕ ಹಂತದಲ್ಲೇ ಶಿಕ್ಷಣ ಮಾಧ್ಯಮವನ್ನಾಗಿ ಬಳಸಲು ನಮ್ಮ ವಿಶಿಷ್ಟವರ್ಗವೊಂದರ ಜನರು ತೋರಿಸುತ್ತಿರುವ ಉತ್ಸಾಹವೂ ಅಪೇಕ್ಷಣೀಯವಲ್ಲ"(ಶ್ರೀರಂಗರಾಜು., ಸೋವಿಯೆತ್ ದಿನಚರಿ., ಪು– ೧೫೮,೧೫೯) ಎನ್ನುತ್ತಾರೆ. ಅಂದರೆ ಕಲಿಯಲು ಆಸಕ್ತಿ ತೋರುವ ಮಕ್ಕಳಿಗೆ ಆಂಗ್ಲಭಾಷೆಯನ್ನು ಮಾತ್ರವಲ್ಲ ಆತ ಕಲಿಯಬೇಕೆನ್ನುವ ಯಾವುದೇ ಭಾಷೆಯನ್ನು ಕಲಿಸಬೇಕು. ಬಲವಂತವಾಗಿ ಯಾವುದೇ ಭಾಷೆಯನ್ನು ಕಲಿಸಬಾರದು ಎಂಬುದು ಲೇಖಕರ ಸ್ಪಷ್ಟ ಅಭಿಪ್ರಾಯವಾಗಿದೆ.

ಯುರೋಪ್ ಪ್ರವಾಸ ಮಾಡಿದ ಬಹುತೇಕ ಲೇಖಕರು ಶಿಕ್ಷಣವನ್ನು ಬೋಧಿಸುವ ಭಾಷಾ ಮಾಧ್ಯಮವನ್ನು ಕುರಿತಂತೆ ಮಾತೃಭಾಷೆಯಲ್ಲಿ ಬೋಧಿಸುವುದೇ ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರವಾಸ ಕೃತಿಯೊಳಗೆ ಲೇಖಕರು ಭಾಷಾ ಮಾಧ್ಯಮದ ಕುರಿತು ಚರ್ಚಿಸಲು ಕಾರಣಗಳಿವೆ. ತಾವು ಸಂದರ್ಶಿಸಿದ ದೇಶಗಳಲ್ಲಿ ಪ್ರಾಯೋಗಿಕವಾಗಿ ಮಾತೃಭಾಷೆಯನ್ನು ಅಳವಡಿಸಿದ್ದು ಅಲ್ಲಿ ಯಶಸ್ವಿಯಾಗಿದೆ. ವಿಜ್ಞಾನ, ತಂತ್ರಜ್ಞಾನ ಮೊದಲಾದ ವಿಷಯಗಳನ್ನು ಕೂಡ ಅವರ ಮಾತೃಭಾಷೆಗೆ ತರ್ಜಿಮೆಗೊಳಿಸಿ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯಲ್ಲಿಯೇ ಬೋಧಿಸುತ್ತಿದ್ದಾರೆ. ಇದು ಅವರ ಭಾಷಾ ಪ್ರೇಮವನ್ನು ಮತ್ತು ತಮ್ಮ ಭಾಷೆಯನ್ನು ಬೆಳೆಸಲು ಅಳವಡಿಸಿಕೊಂಡಿರುವ ಹೊಸ ಬಗೆಯ ವಿಧಾನವನ್ನು ಸೂಚಿಸುತ್ತದೆ. ಲೇಖಕರ ಅಭಿಪ್ರಾಯಗಳನ್ನು ಪುರಸ್ಕರಿಸುತ್ತಾ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಯುರೋಪಿನ ಮಾದರಿಯಲ್ಲಿ ಭಾಷಾ ವ್ಯವಸ್ಥೆಯನ್ನು ಜಾರಿಗೊಳಿಸುವುದರಿಂದ ಅನುಕೂಲಗಳಿವೆ. ಆದರೆ ಭಾರತೀಯ ಸಂದಂರ್ಭದಲ್ಲಿ ಯುರೋಪಿನ ಮಾದರಿಯನ್ನು ಯಥಾವತ್ತಾಗಿ ಜಾರಿ ಮಾಡಲು ಬರುವುದಿಲ್ಲ. ಬದಲಿಗೆ ಭಾರತೀಯ ಸಂದರ್ಭಕ್ಕೆ ಸೂಕ್ತವಾಗುವಂತೆ ಸಿದ್ಧಪಡಿಸಿ ಅಳವಡಿಸಲು ಅಡ್ಡಿಯಿಲ್ಲ ಎನಿಸುತ್ತದೆ.

ಭಾರತ ದೇಶದಲ್ಲಿ ವೈವಿಧ್ಯಮಯ ಪ್ರದೇಶಗಳಿದ್ದು, ಒಂದು ರಾಜ್ಯದಲ್ಲಿಯೇ ಅನೇಕ ಭಾಷೆಗಳಿವೆ. ಉದಾಹರಣೆಗೆ ಕರ್ನಾಟಕದಲ್ಲಿ ರಾಜ್ಯ ಭಾಷೆ ಕನ್ನಡವಾದರೂ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ತುಳು ಮಾತೃಭಾಷೆಯಾಗಿರುವವರ ಸಂಖ್ಯೆ ಅಧಿಕವಾಗಿದೆ. ಬೆಳಗಾವಿಯ ಪ್ರದೇಶದಲ್ಲಿ ಅಧಿಕ ಜನರ ಮಾತೃಭಾಷೆ ಮರಾಠಿ ಆಗಿದೆ. ಮತ್ತೆ ಜನಾಂಗವಾರು ಭಾಷಿಕ ಸಮುದಾಯವನ್ನು ಪರಿಗಣಿಸಿದಾಗ ಆಯಾ ಜನಾಂಗದವರ ಮಾತೃಭಾಷೆ ಬೇರೆ ಬೇರೆ ಆಗಿರುತ್ತದೆ. ಆದ್ದರಿಂದ ಒಂದು ರಾಜ್ಯದಲ್ಲಿ ಭಾಷೆಯನ್ನು ಮಾತೃಭಾಷೆಯಾಗಿ

ಪರಿಗಣಿಸುವಲ್ಲಿ ಅನೇಕ ತೊಡಕುಗಳಿವೆ. ಹೀಗಿರುವಾಗ ಶಿಕ್ಷಣದಲ್ಲಿ ಕನ್ನಡವೇ ಮಾತೃಭಾಷೆಯೆಂದು ನಿರ್ಧರಿಸುವುದು ಕನ್ನಡೇತರ ಭಾಷಿಕರನ್ನು ಪರಿಗಣಿಸಿದಂತೆ ಆಗುವುದಿಲ್ಲ. ಈ ಸಮಸ್ಯೆಯನ್ನು ನಿವಾರಿಸಲು ಸೂಕ್ತವಾದ ಭಾಷಾ ವ್ಯವಸ್ಥೆಯನ್ನು ಜಾರಿ ಮಾಡಬೇಕಾದ ಅಗತ್ಯವಿದೆ ಎನಿಸುತ್ತದೆ.

೫.೩ ಉನ್ನತ ಶಿಕ್ಷಣ : ವಿವಿಧ ಆಯಾಮಗಳ ಮೂಲಕ ವಿಶ್ಲೇಷಣೆ

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಚರ್ಚಿಸಿರುವ ಯುರೋಪ್ ಪ್ರವಾಸ ಕೃತಿಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಿಸಲಾಗಿದೆ. ಪ್ರವಾಸ ಕೃತಿಗಳಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ದೃಷ್ಟಿಕೋನಗಳ ಮೂಲಕ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ಗಮನಿಸಲಾಗಿದೆ. ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಗೂ ಯುರೋಪಿನ ಉನ್ನತ ಶಿಕ್ಷಣದ ವ್ಯವಸ್ಥೆಗೂ ಇರುವ ವ್ಯತ್ಯಾಸಗಳನ್ನು ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ತರಬೇಕಾದ ಬದಲಾವಣೆಗಳ ಬಗ್ಗೆ ಚರ್ಚೆಮಾಡಲಾಗಿದೆ. ಲೇಖಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಮೇಲೆ ಭಾರತೀಯ ಪರಂಪರೆಯ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆನ್ನುವ ಕಲ್ಪನೆ ಮೂಲತಃ ಯುರೋಪಿನವರದ್ದು. 'ಪ್ರವಾಸಿಯ ದಿನಚರಿ ಕೃತಿಯಲ್ಲಿ "ವಿಶ್ವವಿದ್ಯಾನಿಲಯದ ಕಲ್ಪನೆ ಮೊದಲು ಪ್ರಾದುರ್ಭವಿಸಿದ್ದು ಯುರೋಪ್ ಖಂಡದಲ್ಲಿ"(ದೇ.ಜವರೇಗೌಡ, ಪ್ರವಾಸಿಯ ದಿನಚರಿ, ಪು-೯೫)ಎಂದು ಉಲ್ಲೇಖಿಸಲಾಗಿದೆ. ಯುರೋಪಿನ ದೇಶಗಳಲ್ಲಿ ವಿಶ್ವವಿದ್ಯಾಲಯಗಳ ಪರಿಕಲ್ಪನೆ ಭಿನ್ನವಾಗಿದೆ. ವಿವಿಧ ಶಿಸ್ತುಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯಗಳಿವೆ. ಇಂಗ್ಲೆಂಡಿನಲ್ಲಿ ಸಾಹಿತ್ಯದ ವಿಶ್ವವಿದ್ಯಾಲಯ 'ಆಕ್ಸ್‌ಫರ್ಡ್' ಹಾಗೂ ಗಣಿತದ ವಿಶ್ವವಿದ್ಯಾಲಯ 'ಕೆಂಬ್ರಿಡ್ಜ್' ಇದೆ. ವಿಶ್ವವಿದ್ಯಾಲಯಗಳ ಸಂಪೂರ್ಣ ಶಕ್ತಿ ಏಕಮುಖಿಯಾಗಿ ಚಿಂತಿಸುವಾಗ ಆ ವಿಷಯಕ್ಕೆ ಸಾಕಷ್ಟು ಶಕ್ತಿಯನ್ನು ತುಂಬಲು ಸಾಧ್ಯವಾಗುತ್ತದೆ. ಶಿಕ್ಷಣದ ಉದ್ದೇಶ ವಿದ್ಯಾರ್ಥಿಯಲ್ಲಿ ಸಂಸ್ಕಾರವನ್ನು ಬೆಳೆಸುವುದರ ಜೊತೆಗೆ ಮುಂದಿನ ಜೀವನಕ್ಕಾಗಿ ಆರ್ಥಿಕ ಶಕ್ತಿಯನ್ನು ಗಳಿಸಿಕೊಳ್ಳುವ ಯೋಗ್ಯತೆಯನ್ನು ಸೃಷ್ಟಿಸುವುದಾಗಿದೆ. ಈ ಉದ್ದೇಶವನ್ನು ಈಡೇರಿಸುವುದಕ್ಕಾಗಿ ವಿಶ್ವವಿದ್ಯಾಲಯಗಳು ಕಾರ್ಯಪ್ರವೃತ್ತವಾಗಿವೆ. ಈ ಹಿನ್ನೆಲೆಯಲ್ಲಿ ಯುರೋಪಿನ ದೇಶಗಳ ವಿಶ್ವವಿದ್ಯಾಲಯಗಳು ಯಾವ ರೀತಿ ಕಾರ್ಯವನ್ನು ನಿರ್ವಹಿಸುತ್ತಿವೆ ಎಂಬುದನ್ನು ಪ್ರವಾಸಿ ಲೇಖಕರ ಅಭಿಪ್ರಾಯಗಳ ಮೂಲಕ ವ್ಯಕ್ತವಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಸ್ಕಾಟ್ಲೆಂಡ್‌ನ ಅಂಚೆ ತೆರಪಿನ ಶಿಕ್ಷಣ ಪದ್ಧತಿ : 'ಪ್ರವಾಸಿಯ ದಿನಚರಿ' ಕೃತಿಯ ಲೇಖಕರಾದ ದೇ.ಜವರೇಗೌಡರು ಪ್ರವಾಸ ಮಾಡಿದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಆದ್ದರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಕಾಂಗ್ರೆಸ್' ಸಮ್ಮೇಳನದಲ್ಲಿ ಭಾಗವಹಿಸಲು ಪ್ರವಾಸಕ್ಕೆ ತೆರಳಿದ್ದಾರೆ. ಅಲ್ಲಿ ವಿವಿಧ ವಿಶ್ವ ವಿದ್ಯಾಲಯಗಳ ಕುಲಪತಿಗಳ ಪರಿಚಯವಾಗುತ್ತದೆ. ಲೇಖಕರು ಬೇರೆ ಬೇರೆ ವಿಶ್ವವಿದ್ಯಾಲಯಗಳು ಶಿಕ್ಷಣ ನೀಡುವ ಕ್ರಮಗಳನ್ನು ಪ್ರವಾಸ ಕೃತಿಯಲ್ಲಿ ದಾಖಲಿಸಿದ್ದಾರೆ. ಭಾರತೀಯ ವಿಶ್ವವಿದ್ಯಾಲಯಗಳು ನೀಡುವ ಶಿಕ್ಷಣ ಪದ್ಧತಿಗೂ ಯುರೋಪಿನ ವಿಶ್ವವಿದ್ಯಾಲಯಗಳು ನೀಡುವ ಶಿಕ್ಷಣ ಪದ್ಧತಿಗೂ ಇರುವ ಸಾಮ್ಯ ಮತ್ತು ವೈಷಮ್ಯ ಅಂಶಗಳನ್ನು ತೌಲನಿಕ ದೃಷ್ಟಿಕೋನದ ಮೂಲಕ ವಿವರಿಸಿದ್ದಾರೆ.

ಸ್ಕಾಟ್ಲೆಂಡ್ ದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ತಮ್ಮ ದೈನಂದಿನ ದುಡಿಮೆಯ ಜೊತೆಗೆ ಸ್ನಾತಕೋತ್ತರ ಪದವಿಯನ್ನು ಗಳಿಸಲು ಅವಕಾಶವಿರುವುದನ್ನು ಉಲ್ಲೇಖಿಸಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಅಗತ್ಯ ಫೀಜನ್ನು ಕಟ್ಟಿ ಅಂಚೆ ತೆರಪಿನ ಮೂಲಕ ತಮ್ಮ ಪಠ್ಯಕ್ರಮದ ಅನುಸಾರ ಪುಸ್ತಕಗಳನ್ನು ಪಡೆದು ಪರೀಕ್ಷೆಯನ್ನು ಎದುರಿಸಿ ಉತ್ತೀರ್ಣನಾಗಬಹುದು. ಭಾರತದಲ್ಲಿ ಈ ಬಗೆಯ ಸೌಲಭ್ಯವು ದೇ. ಜವರೇಗೌಡರು ಸ್ಕಾಟ್ಲೆಂಡ್‌ಗೆ ಹೋದ ಕಾಲಘಟ್ಟದಲ್ಲಿ(೧೯೭೪) ಇರಲಿಲ್ಲ. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯವು ಭಾರತದಲ್ಲಿ ಅಂಚೆತೆರಪಿನ ಶಿಕ್ಷಣ ಜಾರಿಗೊಳಿಸಿದ ಮೊದಲ ವಿಶ್ವವಿದ್ಯಾನಿಲಯವಾಗಿದೆ. ಇದು ೧೯೮೫ರ ಸೆಪ್ಟೆಂಬರ್‌ನಲ್ಲಿ ಸ್ಥಾಪನೆಯಾಯಿತು. ಆದ್ದರಿಂದ ಲೇಖಕರು ತಮ್ಮ ಅಭಿಪ್ರಾಯದಲ್ಲಿ ಭಾರತದಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಅಗತ್ಯವನ್ನು ಹೇಳಿದ್ದಾರೆ. ಇದರ ಪರಿಣಾಮವೆನ್ನುವಂತೆ ೧೯೯೬ರಲ್ಲಿ ಮೈಸೂರಿನಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು.

ದೇ. ಜವರೇಗೌಡರು ಇಂಗ್ಲೆಂಡ್ ದೇಶದ ಎಡಿನ್‌ಬರ್ಗ್ ನಗರದಲ್ಲಿರುವ 'ಹೆರಿಯಟ್-ವ್ಯಾಟ್' ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿನ(೧೯೭೪) ಶಿಕ್ಷಣ ವ್ಯವಸ್ಥೆಯ ಕುರಿತು ಉಲ್ಲೇಖಿಸಿದ್ದಾರೆ. 'ಎಡಿನ್‌ಬರ್ಗ್‌ನ ಹೆರಿಯಟ್-ವ್ಯಾಟ್ ವಿಶ್ವವಿದ್ಯಾನಿಲಯದಲ್ಲಿ ವೈಜ್ಞಾನಿಕವಾಗಿ ತರಬೇತಿಯನ್ನು ನೀಡುವ ಕೌಶಲ್ಯವರ್ಧಿತ ವಿಭಾಗಗಳಿವೆ. ಸಂಜೆಯ ತರಗತಿಗಳಲ್ಲಿ ಇಟ್ಟಿಗೆಯ ತಯಾರಿಕೆ, ಮರಗೆಲಸ, ಭಾಷಣಕಲೆ, ಶೀಘ್ರಲಿಪಿ ಮೊದಲಾದ ಕೋರ್ಸ್‌ಗಳನ್ನು ಕಲಿಸುವ ವ್ಯವಸ್ಥೆ ಇದೆ' ಎಂದಿದ್ದಾರೆ. ೧೯೭೪ರ ಕಾಲಘಟ್ಟದಲ್ಲಿನ ತುರ್ತುಗಳಿಗೆ ಅನುಗುಣವಾದ ಶಿಕ್ಷಣವನ್ನು ನೀಡುವ ಶಿಕ್ಷಣ ಪದ್ಧತಿಯು ಅನುಕರಣೀಯವಾಗಿದೆ. ಇಂದಿಗೂ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಪ್ರಸ್ತುತ ಅಗತ್ಯಗಳಿಗೆ ಅನುಗುಣವಾದ ಶಿಕ್ಷಣ ವ್ಯವಸ್ಥೆ ಪೂರ್ಣಪ್ರಮಾಣದಲ್ಲಿ ಇಲ್ಲದಿರುವುದು ಕಂಡುಬರುತ್ತದೆ. ಬೋಧನೆಯು ಕೇವಲ ಪಠ್ಯಕ್ರಮವನ್ನು ಪೂರ್ಣಗೊಳಿಸುವ ತರಾತುರಿಯಲ್ಲಿ ನಡೆಯುವುದನ್ನೇ ಶಿಕ್ಷಣವೆನ್ನಬಹುದೇ? ವಿಶ್ವವಿದ್ಯಾನಿಲಯದಿಂದ ಪದವಿ ಗಳಿಸಿದ ವಿದ್ಯಾರ್ಥಿಗೆ ಯಾವುದೇ ಕೌಶಲ್ಯಗಳಿರುವುದಿಲ್ಲ. ಕಾರಣ ಕೌಶಲ್ಯವನ್ನು ಬೆಳೆಯಿಸುವ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಿರುವುದಿಲ್ಲ. ಈ ದಿಸೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸುವ ಅಗತ್ಯ ಕಂಡುಬರುತ್ತದೆ.

ಯುರೋಪ್ ಖಂಡದ ದೇಶಗಳಲ್ಲಿ ಪ್ರೌಢಶಾಲಾ ಹಂತದಿಂದಲೇ ವೃತ್ತಿ ಶಿಕ್ಷಣಕ್ಕೆ ಆದ್ಯತೆ ನೀಡಿರುವುದನ್ನು ಗಮನಿಸಲಾಗಿದೆ. 'ಅಯನ' ಕೃತಿಯಲ್ಲಿ ಫ್ರಾನ್ಸ್ ದೇಶದ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಅರ್ಥವ್ಯವಸ್ಥೆಯ ಸಂಕ್ಷಿಪ್ತ ಪರಿಚಯ ಸಿಗುತ್ತದೆ. ಫ್ರಾನ್ಸ್ ಮತ್ತು ಇತರ ಯುರೋಪಿಯನ್ ದೇಶಗಳ ಶೈಕ್ಷಣಿಕ ಚಟುವಟಿಕೆಗಳ ನಡುವೆ ಇರುವ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದೆ. ಲೇಖಕರಾದ ನಾಗತಿಹಳ್ಳಿ ಚಂದ್ರಶೇಖರ ಅವರು "ಅಧ್ಯಾಪಕ ವೃತ್ತಿಯವನಾದ ನನಗೆ ಅಧಿಕ ಕುತೂಹಲವಿತ್ತು. ಫ್ರಾನ್ಸ್‌ನಲ್ಲಿರುವ ಶಿಕ್ಷಣ ವ್ಯವಸ್ಥೆ ಎಂಥದು? ನಮ್ಮಂತೆಯೇ ನಿರುದ್ಯೋಗಿಗಳನ್ನು ಸೃಷ್ಟಿಸುವ ಕಾಲೇಜುಗಳಿವೆಯೋ? ಬದುಕಿಗೆ ಬೇಕಾದ್ದನ್ನು ಕಲಿಸುತ್ತಾರೋ?"(ನಾಗತಿಹಳ್ಳಿ ಚಂದ್ರ ಶೇಖರ., ಅಯನ., ಪು-೪೦)ಎಂದು ಪ್ರಶ್ನಿಸುತ್ತಲೇ ಫ್ರಾನ್ಸ್ ಶಿಕ್ಷಣ ಪದ್ಧತಿಯಲ್ಲಿನ ಧನಾತ್ಮಕ ಅಂಶಗಳನ್ನು ಗುರುತಿಸಿದ್ದಾರೆ. ಫ್ರಾನ್ಸಿನ ಶಿಕ್ಷಣ ವ್ಯವಸ್ಥೆಯನ್ನು ಭಾರತೀಯ ಶಿಕ್ಷಣ ವ್ಯವಸ್ಥೆಯೊಂದಿಗೆ ಹೋಲಿಸಿದಾಗ ಲೇಖಕರಿಗೆ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿರುವ ನ್ಯೂನತೆಗಳು ಗೋಚರಿಸಿದೆ. ಅವುಗಳನ್ನು ಅಳುಕಿಲ್ಲದೆ, ನಿರ್ಭಿಡೆಯಿಂದಲೇ ಟೀಕಿಸಿದ್ದಾರೆ. ಲೇಖಕರು ಫ್ರಾನ್ಸಿನ ಶಿಕ್ಷಣ ವ್ಯವಸ್ಥೆಯೊಂದಿಗೆ ಮುಖಾಮುಖಿಯಾಗಿದ್ದರೂ

ಅಭಿಪ್ರಾಯವು ಭಾರತೀಯ ಶಿಕ್ಷಣ ವ್ಯವಸ್ಥೆಯ ಕುರಿತಾಗಿದೆ. ಪ್ರವಾಸ ಕೃತಿಗಳು ವಿದೇಶಗಳನ್ನು ವಿವರಿಸುವುದು ಭಾರತೀಯತೆಯ ಹಿನ್ನೆಲೆಯಲ್ಲಿಯೇ ಎಂಬುದನ್ನು ಗುರುತಿಸಲಾಗಿದೆ.

ಪ್ರಸಕ್ತ ಭಾರತೀಯ ಶೈಕ್ಷಣಿಕ ಪದ್ಧತಿಯಲ್ಲಿ ವಿದ್ಯಾರ್ಥಿಗಳನ್ನು ನಾಲ್ಕು ಗೋಡೆಗಳ ಮಧ್ಯೆ ಅವರ ಶಕ್ತಿಯನ್ನು ಬಂಧಿಸಲಾಗಿದೆ, ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳುವಲ್ಲಿ ವಿಫಲವಾಗಿದೆ ಎನಿಸುತ್ತದೆ. ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೆ ಪ್ರಸ್ತುತ ಶಿಕ್ಷಣ ಪದ್ಧತಿಯಲ್ಲಿ ಅವಕಾಶಗಳ ಕೊರತೆ ಇರುವುದನ್ನು ಗುರುತಿಸಲಾಗಿದೆ. ನಾಗತಿಹಳ್ಳಿ ಚಂದ್ರಶೇಖರ ಅವರು ವ್ಯಕ್ತಪಡಿಸಿರುವ ಆತಂಕವು ಇಂದಿಗೂ ಮುಂದುವರೆಯುತ್ತಿರುವುದನ್ನು ಕಾಣಬಹುದು. ಲೇಖಕರ ಅಭಿಪ್ರಾಯಕ್ಕೆ ಅನುಗುಣವಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಯು ನಿರುದ್ಯೋಗಿಗಳ ಹೆಚ್ಚಳಕ್ಕೆ ಕಾರಣವಾದರೆ, ಫ್ರಾನ್ಸ್ ಶಿಕ್ಷಣ ಪದ್ಧತಿಯು ಸ್ವಯಂ ಉದ್ಯೋಗಿಗಳನ್ನು ಸೃಷ್ಟಿಸುತ್ತಿದೆ. ಶಿಕ್ಷಣದ ಮೂಲ ಉದ್ದೇಶ 'ಶಿಕ್ಷಣ ಪಡೆದ ವಿದ್ಯಾರ್ಥಿ ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಬೇಕು' ಎಂಬುದಾಗಿದೆ. ಫ್ರಾನ್ಸ್‌ನ ಶಿಕ್ಷಣ ವ್ಯವಸ್ಥೆಯಲ್ಲಿ ಈ ಉದ್ದೇಶದ ಈಡೇರಿಕೆ ಸಾಧ್ಯವಾದಂತೆ ಕಂಡುಬರುತ್ತದೆ. ಲೇಖಕರ ಬೇಡಿಕೆಯು ಭಾರತದಲ್ಲಿ ಫ್ರಾನ್ಸಿನ ಶಿಕ್ಷಣ ವ್ಯವಸ್ಥೆಯನ್ನು ಅಳವಡಿಸಬೇಕೆಂಬುದಲ್ಲ. ಬದಲಿಗೆ ಬದುಕನ್ನು ರೂಪಿಸುವ ಯಾವುದೇ ರೀತಿಯ ಶೈಕ್ಷಣಿಕ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂಬ ಮಾರ್ಗವನ್ನು ಸೂಚಿಸುತ್ತದೆ. ಅದಕ್ಕೆ ಲೇಖಕರು "ಬರೀ ಬಿ.ಎ.ಗಾಗಿ ಬದುಕನ್ನೇ ಮೀಸಲಿಡುವ ಬಡಭಾರತದ ವಿದ್ಯಾರ್ಥಿ ನನಗೆ ತುಂಬಾ ನೆನಪಾಗುತ್ತಿದ್ದ"(ನಾಗತಿಹಳ್ಳಿ ಚಂದ್ರ ಶೇಖರ., ಅಯನ., ಪು–೪೬) ಎನ್ನುತ್ತಾರೆ. ೧೯೯೧ರಲ್ಲಿನ ಭಾರತದ ಶೈಕ್ಷಣಿಕ ವ್ಯವಸ್ಥೆಗೂ ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆಗೂ ಅನೇಕ ಬದಲಾವಣೆಗಳಾಗಿದೆ. ಆದರೆ ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆಯಲ್ಲಿಯೂ ನಿರುದ್ಯೋಗ ಸಮಸ್ಯೆಗೆ ಪರಿಹಾರವನ್ನು ನೀಡುವ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸದಿರುವುದನ್ನು ಕಾಣಲಾಗಿದೆ.

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ವೃತ್ತಿ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗಿಲ್ಲ. ವೃತ್ತಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಕೇವಲ ವಿಷಯಾಧಾರಿತ ಜ್ಞಾನವನ್ನು ಹೊಂದಿರುತ್ತಾರೆ. ಏಕೆಂದರೆ ಪ್ರಾಯೋಗಿಕ ಜ್ಞಾನವನ್ನು ಪಡೆಯುವ ಅವಕಾಶಗಳು ಹೆಚ್ಚಾಗಿ ಸಿಗುವುದಿಲ್ಲ. ಶಿಕ್ಷಣವನ್ನು ಪೂರೈಸಿ ವೃತ್ತಿಗೆ ಸೇರ್ಪಡೆಗೊಳ್ಳುವ ವಿದ್ಯಾರ್ಥಿಗೆ ವೃತ್ತಿಜ್ಞಾನದ ಪ್ರಾಯೋಗಿಕ ಅನುಭವಗಳನ್ನು ಪುನಃ ನೀಡಬೇಕಾಗುತ್ತದೆ. ಯುರೋಪಿನ ಶೈಕ್ಷಣಿಕ ಪದ್ಧತಿಯ ಬೋಧನಾ ವಿಧಾನವು ತಾವು ಮುಂದೆ ನಿರ್ವಹಿಸಬೇಕಾದ ಕಾರ್ಯಗಳ ಹಿನ್ನೆಲೆಯಲ್ಲಿಯೇ ಸೂಕ್ತ ತರಬೇತಿಯನ್ನು ನೀಡಿ ತಯಾರು ಮಾಡಿ ಕಳುಹಿಸಲಾಗುತ್ತದೆ. ಅನುಭವದ ಕೊರತೆ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಸೋವಿಯತ್ ದೇಶದ ಶಿಕ್ಷಣ ಪದ್ಧತಿಯಲ್ಲಿ ರಾಜಕಾರಣಿಗಳು ಪ್ರೊಫೆಸರ್ ಕೂಡ ಆಗಿರುತ್ತಾರೆ. ಶ್ರೀರಂಗರಾಜು ಅವರು "ಮಂತ್ರಿಗಳು ಬಂದರು. ಅವರು ಪಾಲಿಟೆಕ್ನಿಕ್‌ನಲ್ಲಿ ಒಬ್ಬ ಪ್ರೊಫೆಸರ್. ಮಂತ್ರಿಯಾದ ಮೇಲೂ ಪಾಠ ಹೇಳುವುದನ್ನು ಬಿಟ್ಟಿಲ್ಲ"(ಶ್ರೀರಂಗರಾಜು, ಸೋವಿಯೆತ್ ದಿನಚರಿ, ಪು–೧೦೩)ಎಂದಿದ್ದಾರೆ. ಈ ಮೂಲಕ ರಾಜಕಾರಣದ ಹೊಸ ಆಯಾಮವನ್ನು ಕಟ್ಟಿಕೊಳ್ಳಲು ಸಾಧ್ಯತೆ ಇರುವುದನ್ನು ಗುರುತಿಸಬಹುದಾಗಿದೆ. ಮಂತ್ರಿಗಳು ತಮ್ಮ ಕಾರ್ಯದ ಜೊತೆಜೊತೆಯಲ್ಲಿ ಶಿಕ್ಷಣ ವ್ಯವಸ್ಥೆಯಲ್ಲೂ ಗುರುತಿಸಿಕೊಳ್ಳಲು ಸಾಧ್ಯತೆ ಇರುವುದನ್ನು, ಸಾಮರ್ಥ್ಯದ ಸದ್ಬಳಕೆ ಆಗುವುದನ್ನು ಕಾಣಬಹುದಾಗಿದೆ. ಯಾವುದೇ ಕ್ಷೇತ್ರದ ವಿಷಯ ತಜ್ಞರು, ಮೇಧಾವಿಗಳು, ಕಲಾಕಾರರು, ರಾಜಕಾರಣಿಗಳು ಹಾಗೂ ವಿವಿಧ ಬಗೆಯ ವೃತ್ತಿ ಕೌಶಲ್ಯಗಳನ್ನು ಹೊಂದಿದವರು ತಮ್ಮ ಬಿಡುವಿನ ವೇಳೆಯಲ್ಲಿ ಶಾಲಾ ಕಾಲೇಜುಗಳಿಗೆ ಭೇಟಿ

ನೀಡಿ ತಮ್ಮ ಅನುಭವಗಳನ್ನು ಹಂಚಿಕೊಂಡಾಗ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅನುಭವಗಳು ದೊರೆಯುವಂತಾಗುತ್ತದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ವಿಚಾರಗಳನ್ನು ತಮ್ಮ ವೃತ್ತಿ ರಂಗದ ನೈಪುಣ್ಯತೆಯನ್ನು ಪರಿಚಯಿಸಿದಾಗ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಬೋಧನೆಯಲ್ಲಿ ಕಲಿತಿರುವ ವಿಷಯಕ್ಕಿಂತ ಪರಿಣಾಮಕಾರಿಯಾದ ಶಿಕ್ಷಣವನ್ನು ನೀಡಲು ಸಾಧ್ಯವಾಗುತ್ತದೆ. ಈ ಬಗೆಯ ವಿಶೇಷ ಉಪನ್ಯಾಸಗಳ ವಿಡಿಯೋಗಳನ್ನು ರಚಿಸಿ ಇತರ ಶಾಲೆಗಳಿಗೂ ತಲುಪಿಸುವ ವ್ಯವಸ್ಥೆಯನ್ನು ಕಲ್ಪಿಸುವುದರಿಂದ ಗ್ರಾಮೀಣ ಭಾಗದಲ್ಲಿರುವ ಶಾಲಾ-ಕಾಲೇಜಿನ ವಿದ್ಯಾರ್ಥಿಗಳಿಗೂ ಪ್ರೇರಣೆ ದೊರೆಯುವಂತಾಗುತ್ತದೆ. ಇದರಿಂದ ಶಾಲಾ-ಕಾಲೇಜುಗಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ.

ಯುರೋಪ್ ದೇಶಗಳಲ್ಲಿ ವೃತ್ತಿ ಅಧಾರಿತ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿರುವುದನ್ನು ಗಮನಿಸಬಹುದು. ನಾಟಕ ಶಿಕ್ಷಣ, ನಾಟ್ಯ ಶಿಕ್ಷಣ, ಮೀನುಗಾರಿಕಾ ಶಿಕ್ಷಣ ಹೀಗೆ ಪ್ರತ್ಯೇಕವಾಗಿ ವೃತ್ತಿಯಾಧಾರಿತ ಡಿಪ್ಲೋಮಾ ಕೋರ್ಸಗಳಿವೆ. ಶಿಕ್ಷಣವು ಕಲಿಕೆಯ ಜೊತೆಗೆ ಅನ್ನವನ್ನು ಗಳಿಸುವ ಮಾರ್ಗವನ್ನು ತೋರಿಸಬೇಕು. ಆಗ ಶಿಕ್ಷಣವನ್ನು ಪಡೆದುದಕ್ಕೆ ಸಾರ್ಥಕ್ಯ ಭಾವ ಮೂಡುತ್ತದೆ.

ಅನುಪಮಾ ನಿರಂಜನ ಅವರು ಬರ್ಲಿನ್ ಪ್ರವಾಸ ಸಂದರ್ಭದಲ್ಲಿ "ಇಲ್ಲಿ ಮುನ್ನೂರು ಬಗೆಯ ಔದ್ಯೋಗಿಕ ಶಿಕ್ಷಣಗಳಿವೆ"(ಅನುಪಮಾ ನಿರಂಜನ., ಸ್ನೇಹಯಾತ್ರೆ., ಪು-೭೬)ಎಂದಿದ್ದಾರೆ. ಪ್ರೌಢಶಾಲಾ ಹಂತದಲ್ಲೆ ಔದ್ಯೋಗಿಕ ಶಿಕ್ಷಣವನ್ನು ನೀಡಲಾಗುತ್ತಿದ್ದು, ಶಿಕ್ಷಣ ಮುಗಿದ ಕೂಡಲೇ ಕೆಲಸಕ್ಕೆ ಸೇರಬಹುದಾಗಿದೆ. ಅನುಪಮಾ ನಿರಂಜನ ಅವರಿಗೆ ಔದ್ಯೋಗಿಕ ಶಿಕ್ಷಣ ಪಡೆದು ಕೆಲಸ ಗಿಟ್ಟಿಸಿಕೊಂಡ ಇಬ್ಬರು ಮಹಿಳೆಯ ಪರಿಚಯವಾಗುತ್ತದೆ. ಅವರು ಮದುವೆಯ ನಂತರವೂ ಔದ್ಯೋಗಿಕ ಶಿಕ್ಷಣವನ್ನು ಗಳಿಸಿ, ಉದ್ಯೋಗವನ್ನು ಪಡೆದುಕೊಂಡ ಬಗ್ಗೆ ಲೇಖಕಿಗೆ ಹೇಳಿದಾಗ ಭಾರತೀಯ ಸ್ತ್ರೀಯರ ಸ್ಥಿತಿಗತಿಗಳನ್ನು ನೆನಪಿಗೆ ತಂದುಕೊಂಡಿದ್ದಾರೆ. ಸ್ನೇಹಯಾತ್ರೆ ಕೃತಿಯು ಯುರೋಪಿನ ಶಿಕ್ಷಣ ಕ್ರಮದ ಬದ್ಧತೆ, ಸಾಧನೆಗಳನ್ನು ಹೇಳುತ್ತಲೇ ಭಾರತೀಯ ಸ್ತ್ರೀಯರು ಶಿಕ್ಷಣದಲ್ಲಿ ಹಿಂದುಳಿದಿರುವುದರ ಬಗ್ಗೆ ಅಸಹನೆಯನ್ನು, ಅಸಹಾಯಕತೆಯನ್ನು ಪ್ರಕಟಿಸಿದೆ.

'ಯುರೋಪ್ ನೆನಪುಗಳು' ಕೃತಿಯಲ್ಲಿ ಗ್ರೀಕ್ ದೇಶದ ಶಿಕ್ಷಣ ಪದ್ಧತಿಯ ಕುರಿತು "ಇಲ್ಲಿ ವಿದ್ಯಾಭ್ಯಾಸಕ್ಕೂ ಉದ್ಯೋಗಕ್ಕೂ ನಂಟಿಲ್ಲ"(ಪುಂಡಿಕಾಯ್ ಗಣಪಯ್ಯ ಭಟ್., ಯುರೋಪ್ ನೆನಪುಗಳು., ಪು-೧೩)ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಇದಕ್ಕೆ ಕಾರಣಗಳನ್ನು ಪರಿಶೀಲಿಸಿದಾಗ ತಿಳಿದ ಸಂಗತಿಯೆಂದರೆ 'ಗ್ರೀಕ್ ದೇಶದಲ್ಲಿ ಉನ್ನತ ಶಿಕ್ಷಣ ಪಡೆದವರಿಗೂ, ಕಡ್ಡಾಯ ಶಿಕ್ಷಣವನ್ನು ಪೂರೈಸಿರುವ ಸಾಮಾನ್ಯ ಶಿಕ್ಷಿತರಿಗೂ ಒಂದೇ ಬಗೆಯ ಸಂಬಳ ವ್ಯವಸ್ಥೆ ಇರುತ್ತದೆ. ಇಲ್ಲಿ ಒಂಭತ್ತು ವರ್ಷದವರೆಗೆ ಶಿಕ್ಷಣ ಪಡೆಯುವುದು ಕಡ್ಡಾಯವಾಗಿದೆ. ಕೆಲವರು ಹತ್ತು ಅಥವಾ ಹನ್ನೆರಡು ವರ್ಷಗಳವರೆಗೆ ವಿದ್ಯಾಭ್ಯಾಸ ಮುಂದುವರೆಸುತ್ತಾರೆ. ಅದರ ನಂತರ ಹೆಚ್ಚಿನ ಮಕ್ಕಳು ಉನ್ನತ ಅಭ್ಯಾಸಕ್ಕೆ ಹೋಗುವುದಿಲ್ಲ. ಗ್ರೀಕ್ ದೇಶದಲ್ಲಿ ಎಲ್ಲರಿಗೂ ಉದ್ಯೋಗ ಕಡ್ಡಾಯವಾಗಿ ದೊರೆಯುತ್ತದೆ. ನಿರುದ್ಯೋಗ ಸಮಸ್ಯೆ ಇಲ್ಲ. ಆದ್ದರಿಂದ ಇಲ್ಲಿ ಉನ್ನತ ಶಿಕ್ಷಣ ಓದುವವರ ಸಂಖ್ಯೆ ತುಂಬಾ ಕಡಿಮೆ ಪ್ರಮಾಣದಲ್ಲಿದೆ.' ಗ್ರೀಕ್ ದೇಶದಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕೂ ಇರುವ ಸಂಬಂಧವನ್ನು ಭಾರತದ ಪರಿಸ್ಥಿತಿಯೊಂದಿಗೆ ಮುಖಾಮುಖಿಯಾಗಿಸಿ ನೋಡಿದಾಗ ಅಕ್ಷರಸ್ಥ ನಿರುದ್ಯೋಗಿಗಳ ಸಮಸ್ಯೆಗೆ ಕಾರಣವನ್ನು ತಿಳಿಯಬಹುದಾಗಿದೆ. ಭಾರತದಲ್ಲಿ ಉನ್ನತ ಶಿಕ್ಷಣ ಪಡೆದವರಿಗೆ ಹೆಚ್ಚಿನ ಸಂಬಳ ಮತ್ತು ಸಮಾಜದಲ್ಲಿ ಉನ್ನತ ಸ್ಥಾನ ಇದೆ. ಆದಕಾರಣ ಉನ್ನತ ಶಿಕ್ಷಣ

ಪಡೆಯುವವರ ಸಂಖ್ಯೆ ಹೆಚ್ಚಾಗಿದೆ. ಉನ್ನತ ಶಿಕ್ಷಣ ಪಡೆದವರೆಲ್ಲರಿಗೂ ಉದ್ಯೋಗದ ಭರವಸೆ ಇರುವುದಿಲ್ಲ. ಹಾಗಾಗಿ ಅಕ್ಷರಸ್ಥ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ. ಗ್ರೀಕ್ ದೇಶಕ್ಕಿಂತ ಭಾರತದ ಜನಸಂಖ್ಯೆ ಹೆಚ್ಚಿದ್ದು ನಿರುದ್ಯೋಗಿಗಳ ಪ್ರಮಾಣ ಹೆಚ್ಚಳವಾಗಲು ಕಾರಣ ಎಂದು ಆರ್ಥಿಕ ದೃಷ್ಟಿಯಿಂದ ವಿಶ್ಲೇಷಣೆ ಮಾಡಲಾಗಿದೆ. ನಿರುದ್ಯೋಗದ ಸಮಸ್ಯೆಗೆ ಪರಿಹಾರರೂಪವಾಗಿ ಶಿಕ್ಷಣ ಕ್ಷೇತ್ರ ಕಾರ್ಯನಿರ್ವಹಿಸಬೇಕಾಗುತ್ತದೆ. ಅದರಲ್ಲಿ ಚ್ಯುತಿ ಕಂಡುಬಂದರೆ ಉದ್ಯೋಗವನ್ನು ಗಳಿಸಲು ಉನ್ನತ ಶಿಕ್ಷಣ ಪಡೆಯುವುದು ಅನಿವಾರ್ಯವಲ್ಲ ಎನಿಸಿಬಿಡುತ್ತದೆ. ಅಂದರೆ ಉನ್ನತ ಶಿಕ್ಷಣದ ಉದ್ದೇಶ ಉದ್ಯೋಗವನ್ನು ದೊರಕಿಸಿಕೊಡುವುದಲ್ಲ ಎಂಬುದು ಖಾತ್ರಿಯಾಗುತ್ತದೆ. ಹಾಗಾದರೆ ಸರಕಾರ ಉನ್ನತ ಶಿಕ್ಷಣಕ್ಕೆ ಕೋಟ್ಯಂತರ ರೂಪಾಯಿಗಳನ್ನು ವ್ಯಯಿಸುವುದರ ಉದ್ದೇಶವಾದರೂ ಏನು? ವಿದ್ಯಾರ್ಥಿಗಳು ಉದ್ಯೋಗವನ್ನು ದೊರಕಿಸಿಕೊಡದ ಶಿಕ್ಷಣವನ್ನು ಸಾವಿರಾರು ರೂಪಾಯಿಗಳನ್ನು ವ್ಯಯಿಸಿ ಏಕೆ ಪಡೆಯಬೇಕು? ಎಂಬ ಪ್ರಶ್ನೆಗಳು ಮೂಡುತ್ತವೆ' ಈ ವಿಷಯಕ್ಕೆ ಸಂಬಂಧಿಸಿದಂತೆ ಮುಂದಿನ ಸಂಶೋಧನೆಗೆ ಇನ್ನು ಅವಕಾಶಗಳಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ವಿಶ್ವವಿದ್ಯಾನಿಲಯಗಳಲ್ಲಿ ಪ್ರತಿಭಾ ಪಲಾಯನಕ್ಕೆ ಕಡಿವಾಣ : ಮಾಸ್ಕೋ ವಿಶ್ವವಿದ್ಯಾನಿಲಯವು ತನ್ನ ಪ್ರಜೆಗಳಿಗೆ ಉದ್ಯೋಗವನ್ನು ದೊರಕಿಸಿಕೊಡಲು ಅನುಕೂಲವಾಗುವ ಕೆಲವು ನಿಯಮಗಳನ್ನು ರೂಪಿಸಿದೆ. ಪ್ರೊಫೆಸರ್ ಹುದ್ದೆಗಳನ್ನು ಭರ್ತಿ ಮಾಡುವಾಗ ಮೊದಲ ಆದ್ಯತೆ ತನ್ನ ಪ್ರಜೆಗಳಿಗೆ ನೀಡಿದೆ. ಬೇರೆ ದೇಶದವರಿಗೆ ಅವರಲ್ಲಿ ಅಭ್ಯರ್ಥಿಗಳಿಲ್ಲದ ಪಕ್ಷದಲ್ಲಿ ಮಾತ್ರ ಅವಕಾಶ ನೀಡಲಾಗುತ್ತದೆ. ಆ ಮೂಲಕ ಪ್ರತಿಭಾ ಪಲಾಯನಕ್ಕೆ ಅವಕಾಶ ನೀಡದೆ ತಮ್ಮೊಳಗೆ ಉದ್ಯೋಗವನ್ನು ಸೃಷ್ಟಿಸಿ ತಮ್ಮವರಿಗೆ ನೀಡುವಂತೆ ನಿಯಮಗಳನ್ನು ರೂಪಿಸಿಕೊಂಡಿದ್ದಾರೆ.

ರಷ್ಯಾ ಸರಕಾರವು ತನ್ನ ಪ್ರಜೆಗಳಿಗೆ ಉದ್ಯೋಗದಲ್ಲಿ ಹೆಚ್ಚು ಅವಕಾಶ ದೊರೆಯುವಂತೆ ಮಾಡಲು ಮತ್ತೊಂದು ನಿಯಮವನ್ನು ಅಳವಡಿಸಿಕೊಂಡಿದೆ. ಹ.ವೆಂ. ನಾಗರಾಜರಾವ್ ಅವರು ಮೈತ್ರಿ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ 'ನಿಮ್ಮ ಶಿಕ್ಷಣ ಪೂರ್ಣಗೊಂಡ ಬಳಿಕ ನೀವು ಇದೇ ದೇಶದಲ್ಲಿ ಇರಲು ಬಯಸುವಿರಾ? ಎಂದು ಕೇಳಿದಾಗ ವಿದ್ಯಾರ್ಥಿಗಳು "ಅದು ಸಾಧ್ಯವಿಲ್ಲ. ಭಾರತಕ್ಕೆ ಹಿಂದಿರುಗಲೇ ಬೇಕು. ಇಲ್ಲಿಯೆ ನೆಲೆಸಲು ಸೋವಿಯೆತ್ ಸರ್ಕಾರ ಅವಕಾಶ ಕೊಡದು. ಅವರೇ ಭಾರತಕ್ಕೆ ಮರಳಿಸುತ್ತಾರೆ" (ಹ.ವೆಂ. ನಾಗರಾಜರಾವ್, ನವ ರಷ್ಯದ ನೋಟ, ಪು-೨೫)ಎನ್ನುತ್ತಾರೆ. ಇದರ ಪರಿಣಾಮವೆಂದರೆ ಯೂರೋಪಿನ ಇತರ ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಹೋಲಿಸಿದರೆ ರಷ್ಯಾ ದೇಶದಲ್ಲಿರುವ ಅನಿವಾಸಿ ಭಾರತೀಯರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಇಂಗ್ಲೆಂಡಿನಲ್ಲಿರುವ ಅನಿವಾಸಿ ಭಾರತೀಯರ ಸಂಖ್ಯೆ ೨.೩% ಇದ್ದರೆ ರಷ್ಯಾ ದೇಶದಲ್ಲಿ ೦.೦೧% ಇದೆ.(ಅಂತರ್ಜಾಲದಿಂದ ಮಾಹಿತಿಯನ್ನು ಸ್ವೀಕರಿಸಲಾಗಿದೆ)

ರಷ್ಯಾ ದೇಶವು ಕೈಗೊಂಡಿರುವ ಮೇಲ್ಕಂಡ ಎರಡು ಕ್ರಮಗಳಲ್ಲಿ ತನ್ನ ದೇಶದ ಪ್ರಜೆಗಳಿಗೆ ಆದ್ಯತೆ ನೀಡುವುದರ ಜೊತೆಗೆ ವಿದೇಶಿಯರು ತಮ್ಮ ಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಬಳಿಸಿದಂತೆ ಎಚ್ಚರ ವಹಿಸಿದೆ. ಇವು ಪ್ರತಿಯೊಂದು ದೇಶವೂ ಕೈಗೊಳ್ಳಬೇಕಾದ ಸಾಮಾನ್ಯ ಕ್ರಮಗಳಾದರೂ ಭಾರತದಲ್ಲಿ ಪ್ರತಿಭಾ ಪಲಾಯನದ ಪ್ರಮಾಣ ಇತರ ದೇಶಗಳಿಗೆ ಹೋಲಿಸಿದರೆ ಅಧಿಕವಾಗಿದೆ. ಅಮೆರಿಕಾ ಪ್ರಪಂಚದಲ್ಲಿಯೇ ಅತಿ

ಹೆಚ್ಚು ವಲಸಿಗರನ್ನು ಹೊಂದಿರುವ ದೇಶವಾಗಿದೆ. ಅರಬ್ ರಾಷ್ಟ್ರಗಳು ಅತಿ ಹೆಚ್ಚು ಭಾರತೀಯ ವಲಸಿಗರನ್ನು ಹೊಂದಿದೆ. ಒಟ್ಟು ಜನಸಂಖ್ಯೆಯ ಶೇ. ೩೦ರಷ್ಟು ಭಾರತೀಯರೇ ಇರುವುದನ್ನು ಇತ್ತೀಚಿನ ಅಧ್ಯಯನಗಳು ಧೃಢಪಡಿಸಿವೆ. (ಅಂತರ್ಜಾಲದಿಂದ ಮಾಹಿತಿಯನ್ನು ಸ್ವೀಕರಿಸಲಾಗಿದೆ) ಈ ಅಂಕಿಅಂಶಗಳಿಂದ ತಿಳಿದು ಬರುವ ಸಂಗತಿಗಳೆಂದರೆ ಭಾರತವು ಅತಿ ಹೆಚ್ಚು ಪ್ರತಿಭೆಗಳನ್ನು ವಲಸೆ ಹೋಗಲು ಅವಕಾಶ ನೀಡಿದೆ. ಜೊತೆಗೆ ಪ್ರತಿಭಾನ್ವಿತರಿಗೆ ಯುಕ್ತವಾದ ಉದ್ಯೋಗಗಳನ್ನು ಕಲ್ಪಿಸಿಕೊಡುವಲ್ಲಿಯೂ ವಿಫಲವಾಗಿರುವುದು ಕಂಡುಬರುತ್ತದೆ.

ವಿದೇಶದಲ್ಲಿರುವ ಅನಿವಾಸಿ ಭಾರತೀಯರ ಅಭಿಪ್ರಾಯಗಳಲ್ಲಿನ ವೈರುಧ್ಯಗಳು : ಭಾರತದಲ್ಲಿ ಹುಟ್ಟಿ, ಬೆಳೆದು, ಕಲಿತು, ಬೌದ್ಧಿಕ ಸಂಪತ್ತನ್ನು ಗಳಿಸಿ, ತಾವು ಕಾಣದ ಯಾವುದೋ ಆಸೆ, ಆಕಾಂಕ್ಷೆ, ಹಂಬಲಗಳನ್ನು ಈಡೇರಿಸಿಕೊಳ್ಳಲು ಹೊರದೇಶಗಳಿಗೆ ಹೋಗಿ ನೆಲೆಸುವುದು ಸಾಮಾನ್ಯವಾದ ಘಟನೆಯಾಗಿದೆ. ಈ ರೀತಿ ವಲಸೆ ಹೋಗಿ ವಿದೇಶಗಳಲ್ಲಿ ನೆಲೆಸಿದ ವ್ಯಕ್ತಿಗಳು ಅನುಭವಿಸುವ ಸಾಂಸ್ಕೃತಿಕ ತೊಳಲಾಟಗಳ ಬಗ್ಗೆ ಅನೇಕ ಪ್ರವಾಸಿ ಲೇಖಕರು ಚರ್ಚಿಸಿದ್ದಾರೆ. ಕಾರಂತರು ಜರ್ಮನಿಯ ಬಾನ್ ನಗರದಲ್ಲಿ 'ವೆಲೆಂಟೈನ್' ಎಂಬ ವ್ಯಕ್ತಿಯನ್ನು ಭೇಟಿಯಾಗುತ್ತಾರೆ. ಆತ "ಸ್ವಂತ ಊರಾದ ಭಾರತಕ್ಕೆ ಹೋಗೋಣ, ಇಂದಲ್ಲ ನಾಳೆಯಾದರೂ ಜನ್ಮ ಭೂಮಿಯಲ್ಲಿ ಆಯುಷ್ಯವನ್ನು ಕಳೆಯುವ" (ಶಿವರಾಮ ಕಾರಂತ, ಅರಸಿಕರಲ್ಲ, ಪು-೧೧೭)ಎಂಬ ಹಂಬಲವನ್ನು ಕಾರಂತರ ಬಳಿ ಹೇಳಿಕೊಳ್ಳುತ್ತಾನೆ. ಈ ಅಭಿಪ್ರಾಯಕ್ಕೆ ಹಿನ್ನೆಲೆಯಾಗಿ ಆತನ ಜೀವನದ ಕೆಲವು ಮಾಹಿತಿಗಳನ್ನು ಉಲ್ಲೇಖಿಸಬೇಕಾಗುತ್ತದೆ. ವೆಲೆಂಟೈನ್ ಕ್ರಿಶ್ಚಿಯನ್ ಪಂಥದವನು. ಮುಂಬಯಿಯಲ್ಲಿ ಜನಿಸಿದ ಈತ ಉದ್ಯೋಗಕ್ಕಾಗಿ ಜರ್ಮನಿಯ ಬಾನ್ ನಗರದಲ್ಲಿ ನೆಲೆಸಿದ್ದಾನೆ. ಅವರ ಬಂಧುಬಾಂಧವರು ಮುಂಬೈಯಲ್ಲಿಯೇ ಇದ್ದಾರೆ. ಆತನ ಸಮಸ್ಯೆ ಎಂದರೆ ಪೂರ್ವ ಜರ್ಮನಿಯ ಬಾನ್ ನಗರದ ಜನರು ಇವರನ್ನು ಭಾರತದವರಂತೆಯೇ ಕಾಣುತ್ತಾರೆ. ಇವರನ್ನು ತಮ್ಮವರಲ್ಲಿ ಒಬ್ಬ ಎಂದು ಸ್ವೀಕರಿಸುವುದಿಲ್ಲ. ಹಾಗಾಗಿ ಭಾರತದಲ್ಲಿ ದುಡಿಮೆ ಕಡಿಮೆಯಿದ್ದರೂ ಪರವಾಗಿಲ್ಲ ತಾನು ನಮ್ಮವರ ಮಧ್ಯೆ ಇರಬೇಕು ಎಂದು ಬಯಸಿದ್ದಾನೆ. ಕಾರಂತರು ವೆಲೆಂಟೈನ್ ಎದುರಿಸುತ್ತಿರುವ ಸಾಂಸ್ಕೃತಿಕ ತೊಳಲಾಟವನ್ನು ವಿದೇಶದಲ್ಲಿರುವ ಹಲವಾರು ಜನರು ಎದುರಿಸುತ್ತಿದ್ದಾರೆ ಎಂದು ವಿವಿಧ ಉದಾಹರಣೆಗಳ ಮೂಲಕ ಹೇಳಿದ್ದಾರೆ.

ವೆಲೆಂಟೈನ್‌ನ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಅಭಿಪ್ರಾಯ ಹೊಂದಿರುವ ಅನಿವಾಸಿ ಭಾರತೀಯನನ್ನು ಪ್ರಭಾಕರ ಶಿಶಿಲ ಅವರು ಭೇಟಿಯಾಗುತ್ತಾರೆ. ಲೇಖಕರು ಫ್ರಾನ್ಸ್‌ಗೆ ವಿಮಾನದಲ್ಲಿ ತೆರಳುತ್ತಿದ್ದಾಗ ಮುಖರ್ಜಿ ಎಂಬವವರ ಪರಿಚಯವಾಗುತ್ತದೆ. ಮುಖರ್ಜಿ ಅವರು ವೈದ್ಯರು. ಸ್ವೀಡನ್ನಿನ ರಾಜಧಾನಿ ಸ್ಟಾಕ್‌ಹೋಂನಲ್ಲಿ ಇಪ್ಪತ್ತೆಂಟು ವರ್ಷಗಳಿಂದ ನೆಲೆಸಿದ್ದಾರೆ. ಅಲ್ಲಿಯ ಪೌರತ್ವವನ್ನು ಪಡೆದುಕೊಂಡಿದ್ದಾರೆ. ಲೇಖಕರು ಅವರೊಂದಿಗೆ ಮಾತನಾಡುತ್ತ ಭಾರತದಲ್ಲೆ ನೆಲೆಸುವಂತೆ ಸಲಹೆ ನೀಡಿದರು. ಅದಕ್ಕೆ ಮುಖರ್ಜಿ ಅವರ ಪ್ರತಿಕ್ರಿಯೆ ಈ ರೀತಿ ಇದೆ. "ಏನಿದೇಂತ ನಿಂತು ಬಿಡಬೇಕು ನಿನ್ನ ದೇಶದಲ್ಲಿ? ಕುಡಿಯೋದಿಕ್ಕೆ ಶುದ್ಧ ನೀರು? ಉಸಿರಾಡೋದಕ್ಕೆ ಪರಿಶುದ್ಧ ಗಾಳಿ? ಓಡಾಡೋದಿಕ್ಕೆ ಒಳ್ಳೆಯ ರಸ್ತೆ? ಚಿಕಿತ್ಸೆಗೆ ಒಳ್ಳೆಯ ಆಸ್ಪತ್ರೆ? ನಂಬಿಕೆಗೆ ಅರ್ಹರಾದ ಜನ? ಬದಿಕಿಗೊಂದು ಗುರಿ? ನಿನ್ನ ದೇಶದಲ್ಲಿ ಒಂದು ತಿಂಗಳು ನಿಂತರೆ ನಾನು ಸತ್ತೇ ಹೋಗುತ್ತೇನೆ........ ನಾನೀಗ ಭಾರತೀಯನಲ್ಲ. ಒಂದಷ್ಟು ಕೋಟಿ ಉಳಿಸಿದ್ದೇನೆ. ಅದನ್ನು ನಿನ್ನ ಭಾರತಕ್ಕೆ ತಂದರೆ ತೆರಿಗೆ ಕೊಡಬೇಕು. ತೆರಿಗೆ ಹಣ ಯಾರೋ ಯಾವುದೋ ಪ್ರೋಗ್ರಾಂನಲ್ಲಿ ತಿಂದು ಹಾಕ್ತಾರೆ. ನಿಜಾ

ಹೇಳು. ನೂರು ಕೋಟಿ ಜನರ ನಿನ್ನ ದೇಶದಲ್ಲಿ ಎಷ್ಟು ಜನ ತೆರಿಗೆ ಕೊಡ್ತಾರೆ? ಸ್ವೀಡನ್ನಿನ ಸೋಶಿಯಲ್ ಸೆಕ್ಯುರಿಟಿ ಸಿಸ್ಟಂ ಜಗತ್ತಿನಲ್ಲೇ ಉತ್ತಮವಾದದ್ದು. ಅಲ್ಲಿ ನಾನು ಗಳಿಸಿದ ಹಣ ಅಲ್ಲಿಗೇ ಸೇರಬೇಕು. ನಿನ್ನ ಭಾರತಕ್ಕಲ್ಲ"(ಪ್ರಭಾಕರ ಶಿಶಿಲ., ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ., ಪು-೧೧)

ವೆಲೆಂಟೈನ್ ಮತ್ತು ಮುಖರ್ಜಿ ಅವರ ಅಭಿಪ್ರಾಯಗಳನ್ನು ಇಡಿಯಾಗಿ ಗಮನಿಸಿದಾಗ ಕೇವಲ ಭಿನ್ನಾಭಿಪ್ರಾಯಗಳು ಎಂದು ಸರಳೀಕರಿಸಿ ತೀರ್ಮಾನಿಸಲು ಬರುವುದಿಲ್ಲ. ಈ ಅಭಿಪ್ರಾಯಗಳ ಹಿಂದೆ ಸಾಂಸ್ಕೃತಿಕ ತಾಕಲಾಟಗಳನ್ನು ಕಾಣಬಹುದಾಗಿದೆ. ಭಾವನಾತ್ಮಕ ಅಂಶಗಳು ಸಂಸ್ಕೃತಿಯೊಂದಿಗೆ ತಳಕುಹಾಕಿಕೊಂಡಿರುವುದನ್ನು ಗುರುತಿಸಬಹುದು. ಕೌಟುಂಬಿಕ ಸನ್ನಿವೇಶಗಳ, ಸಮಾಜದ ಪರಿಸ್ಥಿತಿಗಳ ಒತ್ತಡವು ಅಭಿಪ್ರಾಯ ಭೇದಕ್ಕೆ ಕಾರಣವಾಗಿರುವುದನ್ನು ತಿಳಿಯಬಹುದು. 'ನಾನೊಬ್ಬ ಭಾರತೀಯ ಪ್ರವಾಸಿ' ಕೃತಿಯು ಅನಿವಾಸಿ ಭಾರತೀಯರ ಸಾಂಸ್ಕೃತಿಕ ತಾಕಲಾಟಗಳನ್ನು ಕುರಿತು ಚರ್ಚಿಸುತ್ತದೆ. ಅಧ್ಯಯನದ ಸ್ವರೂಪದಲ್ಲಿ ಮಾಹಿತಿಯನ್ನು ಕಲೆಹಾಕಿದೆ. ಅನಿವಾಸಿ ಭಾರತೀಯರಲ್ಲಿ ಸಾಂಸ್ಕೃತಿಕ ಪಲ್ಲಟತೆಯಿಂದ ಅಸುಖಿಗಳಾಗಿರುವವರ ಪ್ರಮಾಣವೇ ಹೆಚ್ಚಿದೆ ಎಂದು ತೀರ್ಮಾನಿಸಿದೆ. ಯುರೋಪಿನ ಕೃತಿಗಳಲ್ಲಿ ಈ ಮೇಲೆ ಉಲ್ಲೇಖಿಸಿದ ವೈರುಧ್ಯ ಅಭಿಪ್ರಾಯಗಳನ್ನು ಹೊರತುಪಡಿಸಿ ಬೇರೆ ಯಾವ ಕೃತಿಯೂ ಅನಿವಾಸಿ ಭಾರತೀಯರ ಅಭಿಪ್ರಾಯಗಳನ್ನು ಹೆಚ್ಚಾಗಿ ಪರಿಗಣಿಸಿದಂತಿಲ್ಲ.

ಶೈಕ್ಷಣಿಕ ಆಡಳಿತ : ಯುರೋಪಿನ ಬೇರೆ ಬೇರೆ ದೇಶಗಳಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಆಡಳಿತವನ್ನು ನಡೆಸುವ ಬಗೆಯನ್ನು ಯುರೋಪ್ ಪ್ರವಾಸ ಕೃತಿಗಳು ಗ್ರಹಿಸಿ, ವ್ಯಕ್ತಪಡಿಸಿದ ಅಭಿಪ್ರಾಯಗಳ ಮೂಲಕ ಅಧ್ಯಯನ ಮಾಡಲಾಗಿದೆ. ಪ್ರವಾಸಿ ಲೇಖಕರು ಉನ್ನತ ಶಿಕ್ಷಣ ಸಂಸ್ಥೆಗಳ ಆಡಳಿತ ಕ್ರಮಗಳನ್ನು ವಿವರಿಸುತ್ತಾ ಭಾರತೀಯ ಆಡಳಿತ ಕ್ರಮಗಳ ಸುಧಾರಣೆಗೆ ಕೆಲವು ಚಿಂತನೆ ಮಾಡಿರುವುದನ್ನು ಕಾಣಬಹುದಾಗಿದೆ.

ರಷ್ಯಾ ಹಾಗೂ ಜರ್ಮನಿ ದೇಶಗಳು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಗೆ ರಾಜಕಾರಣದಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವಂತಹ ನಿಯಮಾವಳಿಗಳನ್ನು ಒಳಗೊಂಡಿವೆ. ಪ್ರಾಧ್ಯಾಪಕರು ಇಚ್ಛಿಸಿದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಬಹುದಾಗಿದೆ. ಸ್ಪರ್ಧೆಯಲ್ಲಿ ಗೆದ್ದರೆ ನಿಗದಿತ ಅವಧಿಗೆ ಮಂತ್ರಿಗಳಾಗಿರುತ್ತಾರೆ. ಅವಧಿ ಮುಗಿದ ಬಳಿಕ ಮತ್ತೆ ತಮ್ಮ ಅಧ್ಯಾಪನ ವೃತ್ತಿಯಲ್ಲಿ ಮುಂದುವರೆಯಲು ಅವಕಾಶಗಳಿರುವುದನ್ನು ವಿದೇಶದಲ್ಲಿ ನಾಲ್ಕು ವಾರ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಶೈಕ್ಷಣಿಕ ಆಡಳಿತದ ಕ್ರಮಗಳು ದೇಶದ ಅಭಿವೃದ್ಧಿಗೆ ಪೂರಕವಾಗಿರಬೇಕು. ರಷ್ಯಾ ಮತ್ತು ಜರ್ಮನಿಯ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಲು ಪಿಎಚ್.ಡಿ. ಪದವಿ ಕಡ್ಡಾಯ ಎಂಬ ನಿಯಮವಿದೆ. ಪಿಎಚ್.ಡಿ ಪದವಿ ಪಡೆದ ಪ್ರಾಧ್ಯಾಪಕರು ಮಂತ್ರಿಗಳಾದರೆ ದೇಶದ ಒಳಿತಿಗಾಗಿ, ಜನರ ಹಿತಕ್ಕಾಗಿ ಅನುಕೂಲವಾಗುವ ಯೋಜನೆಗಳನ್ನು ರೂಪಿಸಬಲ್ಲರು. ಉತ್ತಮ ಶೈಕ್ಷಣಿಕ ಅರ್ಹತೆಯುಳ್ಳವರು ಜನಪರವಾದ ಆಡಳಿತವನ್ನು ನೀಡಲು ಸಮರ್ಥರಾಗಿರುತ್ತಾರೆ ಎಂಬುದು ಸಾಮಾನ್ಯ ಸಂಗತಿಯಾಗಿದೆ. ಭಾರತೀಯ ರಾಜಕಾರಣದೊಂದಿಗೆ ಹೋಲಿಸಿದಾಗ ರಾಜಕಾರಣದಲ್ಲಿ ಸಕ್ರಿಯರಾಗಿರುವವರ ಶೈಕ್ಷಣಿಕ ಅರ್ಹತೆಯು ಕಡಿಮೆ ಮಟ್ಟದಲ್ಲಿರುವವರ ಪ್ರಮಾಣವೇ ಹೆಚ್ಚಿದೆ. ಹೀಗಿರುವಾಗ ರಷ್ಯಾ, ಜರ್ಮನಿಯಲ್ಲಿನ ಶೈಕ್ಷಣಿಕ

ಆಡಳಿತದ ಕ್ರಮಗಳನ್ನು ಅಳವಡಿಸಿಕೊಂಡರೆ ದೇಶವನ್ನು ಪ್ರತಿನಿಧಿಸುವ ಮಂತ್ರಿಗಳು ಉತ್ತಮ ಶೈಕ್ಷಣಿಕ ಅರ್ಹತೆಗಳನ್ನು ಹೊಂದಿದವರಾಗಿರುತ್ತಾರೆ. ಇವರಿಂದ ಉತ್ತಮ ಯೋಜನೆಗಳನ್ನು ನಿರೀಕ್ಷಿಸಬಹುದಾಗಿದೆ.

೫.೪.ಉದ್ಯೋಗ ಆಧಾರಿತ ವಿವಿಧ ಬಗೆಯ ಶಾಲೆಗಳು

ನರ್ಸರಿ ಶಾಲೆಗಳಲ್ಲಿ ಉದ್ಯೋಗ : ಯುರೋಪ್ ದೇಶಗಳಲ್ಲಿ ಲಿಂಗಭೇದ ಇಲ್ಲದೆ ಉದ್ಯೋಗದಲ್ಲಿ ಎಲ್ಲರಿಗೂ ಸಮಾನ ಅವಕಾಶವಿದೆ. ಮಕ್ಕಳಿರುವ ತಾಯಂದಿರು ಉದ್ಯೋಗಕ್ಕೆ ತೆರಳುವ ವೇಳೆಯಲ್ಲಿ ಮಕ್ಕಳನ್ನು ನರ್ಸರಿಗಳಲ್ಲಿ ಬಿಟ್ಟು ಹೋಗುತ್ತಾರೆ. ನರ್ಸರಿಗಳನ್ನು ನಡೆಸುವವರು ಪ್ರತಿ ಮಗುವಿಗೆ ಇಂತಿಷ್ಟು ದರ ಎಂದು ನಿಗದಿಪಡಿಸಿ, ನಿಗದಿತ ಸಮಯದವರೆಗೆ ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಇದು ಸ್ವಯಂ ಉದ್ಯೋಗವನ್ನು ಮಾಡಬಯಸುವವರಿಗೆ, ಮತ್ತು ಮಕ್ಕಳ ಲಾಲನೆ–ಪಾಲನೆಯಲ್ಲಿ ಕೌಶಲ್ಯ ಉಳ್ಳವರಿಗೆ ಸೂಕ್ತವಾಗಿರುತ್ತದೆ. ತಂದೆ–ತಾಯಿಯರು ಮಕ್ಕಳನ್ನು ಬಿಟ್ಟು ಎರಡು–ಮೂರು ದಿನ ಹೊರಗೆ ಹೋಗ ಬೇಕಾಗಿ ಬಂದಾಗ ಮಕ್ಕಳನ್ನು ಅಷ್ಟು ದಿನಗಳ ಕಾಲ ನೋಡಿಕೊಳ್ಳುವುದಕ್ಕಾಗಿ ಮಕ್ಕಳ ಹೋಟೆಲ್‌ಗಳು ಇರುತ್ತವೆ. ಮಕ್ಕಳ ಜವಾಬ್ದಾರಿಯನ್ನು ಮಕ್ಕಳ ಹೋಟೆಲ್‌ಗಳು ವಹಿಸಿಕೊಳ್ಳುತ್ತವೆ. ಅದಕ್ಕೆ ತಗಲುವ ವೆಚ್ಚವನ್ನು ಪೋಷಕರು ಭರಿಸಬೇಕಾಗುತ್ತದೆ. ಸ್ತ್ರೀ ಧೋರಣೆಯ ಹಿನ್ನೆಲೆಯಲ್ಲಿ ಯುರೋಪಿನ ದೇಶಗಳನ್ನು ವಿಶ್ಲೇಷಿಸಿರುವ ಅನುಪಮಾ ನಿರಂಜನ ಅವರು ಈ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಹೊಸ ಬಗೆಯ ಉದ್ಯೋಗ ಅವಕಾಶಗಳು ಇರುವುದನ್ನು ಗುರುತಿಸಿದ್ದಾರೆ. ಭಾರತದಲ್ಲಿ ಮಕ್ಕಳ ಹೋಟೆಲ್‌ಗಳ ವ್ಯವಸ್ಥೆ ಇರುವಂತೆ ಕಂಡುಬರುವುದಿಲ್ಲ. ನಮ್ಮಲ್ಲಿ ತಂದೆ–ತಾಯಿ ಮಕ್ಕಳನ್ನು ಬಿಟ್ಟು ದೂರ ಹೋಗಬೇಕಾದ ಅನಿವಾರ್ಯತೆ ಉಂಟಾದರೆ; ಬಂಧುಬಾಂಧವರಲ್ಲಿಯೋ, ಪರಿಚಯಸ್ಥರಲ್ಲಿಯೋ ಬಿಟ್ಟು ಹೋಗುತ್ತಾರೆ. ಭಾರತದಲ್ಲಿಯೂ ಇತ್ತೀಚಿನ ದಿನಗಳಲ್ಲಿ 'ಬೇಬಿ ಸಿಟ್ಟಿಂಗ್'ಗಳನ್ನು ನಡೆಸಲಾಗುತ್ತಿದೆ. ಇವು ಯುರೋಪಿನ ದೇಶಗಳಲ್ಲಿರುವ ನರ್ಸರಿ ಶಾಲೆಗಳಂತೆ ಕಾರ್ಯ ನಿರ್ವಹಿಸುವುದಿಲ್ಲ; ಬದಲಾಗಿ 'ಬೇಬಿ ಕೇರ್'ಗಳಂತೆ ಕಾರ್ಯ ನಿರ್ವಹಿಸುತ್ತವೆ. ಯುರೋಪಿನ ನರ್ಸರಿ ಶಾಲೆಗಳು ನಮ್ಮ ಅಂಗನವಾಡಿಗಳಿದ್ದಂತೆ. ಅಲ್ಲಿ ಪ್ರಾಥಮಿಕ ಪೂರ್ವ ಹಂತದಲ್ಲಿನ ವಿಷಯಗಳನ್ನು ಬೋಧಿಸಲಾಗುತ್ತದೆ. ಮಕ್ಕಳಿಗೆ ಆಟೋಟಗಳಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗಿರುತ್ತದೆ. ಭಾರತದಲ್ಲಿನ ನಿರುದ್ಯೋಗ ಸಮಸ್ಯೆಗೆ ನರ್ಸರಿ ಶಾಲೆಗಳು ಮತ್ತು ಮಕ್ಕಳ ಹೋಟೆಲ್‌ಗಳು ಪರಿಹಾರವಾಗಬಲ್ಲ ಅಂಶಗಳಾಗಿವೆ.

ಯುರೋಪಿನ ದೇಶಗಳಲ್ಲಿ ಉದ್ಯೋಗಸ್ಥ ಸ್ತ್ರೀಯರು ತಮಗೆ ಮಗುವಾದ ಬಳಿಕ ಒಂದು ವರ್ಷದವರೆಗೆ ಮಗುವಿನ ಲಾಲನೆ–ಪಾಲನೆಯಲ್ಲಿಯೇ ಸಮಯವನ್ನು ವ್ಯಯಿಸುತ್ತಾರೆ. ಒಂದು ವರ್ಷದ ಬಳಿಕ ಉದ್ಯೋಗಕ್ಕೆ ಹೋಗದೆ ಇರಲು ಸಾಧ್ಯವಾಗುವುದಿಲ್ಲ. ಆಗ ಮಗುವನ್ನು ಈ ರೀತಿಯ ನರ್ಸರಿ ಶಾಲೆಗಳಲ್ಲಿ ಬಿಟ್ಟು ಕೆಲಸಕ್ಕೆ ಹೋಗುತ್ತಾರೆ. ಇದು ಅಲ್ಲಿನ ಸಮಾಜದ ಅನಿವಾರ್ಯತೆಯನ್ನು ಬಿಂಬಿಸುತ್ತದೆ. ಸ್ತ್ರೀಯರು ತಾವು ಉದ್ಯೋಗಕ್ಕೆ ಹೋಗುವ ಮೂಲಕ ಮತ್ತೊಬ್ಬರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದನ್ನು ಗುರುತಿಸಬಹುದು. ಭಾರತೀಯ ಮಹಿಳೆಯರಲ್ಲಿ ಮದುವೆಯಾದ ಬಳಿಕ ಉದ್ಯೋಗಕ್ಕೆ ಹೋಗುವವರ ಪ್ರಮಾಣವು ವಿರಳವಾಗಿದೆ. ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ನೌಕರರು ಮಗುವಿನ ಜನನದ ಸಂದರ್ಭದಲ್ಲಿ ತಮ್ಮ ಕೆಲಸಗಳಿಗೆ ರಾಜೀನಾಮೆ ಸಲ್ಲಿಸಬೇಕಾಗುತ್ತದೆ. ಇದರ ಪ್ರಮಾಣವು ಅಧಿಕವಾಗಿದೆ.

ಭಾರತೀಯ ಕೌಟುಂಬಿಕ ವ್ಯವಸ್ಥೆಯ ರಚನೆಯು ಇದಕ್ಕೆ ಕಾರಣವಾಗಿದೆ. ಇದರ ಪರಿಣಾಮವಾಗಿ ಖಾಸಗಿ ಕ್ಷೇತ್ರದಲ್ಲಿ ಮಹಿಳೆಯರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಖಾಲಿ ಹುದ್ದೆಗಳಿಗೆ ಸ್ಥಾನವನ್ನು ತುಂಬಲು ಪುರುಷ ಉದ್ಯೋಗಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುತ್ತಿದೆ. ಇದರಿಂದ ಮಹಿಳೆಯರಿಗೆ ಉದ್ಯೋಗಾವಕಾಶಗಳ ಪ್ರಮಾಣ ಕುಂಠಿತವಾಗಿದೆ. ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಸಮಾಜರೂಪಿತ ಅಡೆತಡೆಗಳು ಇರುವುದನ್ನು ಕಾಣಬಹುದು. ಯುರೋಪಿನ ದೇಶಗಳು ಈ ಸಾಮಾಜಿಕ ವಿಷಚಕ್ರವನ್ನು ಮೀರಿ ಸುಸ್ಥಿರ ಸಾಮಾಜಿಕ ರಚನೆಯನ್ನು ಮಾಡಿಕೊಂಡಿದೆ. ಸಮಸ್ಯೆಗಳಿಗೆ ಪರಿಹಾರೋಪಾಯ ಮಾರ್ಗಗಳನ್ನು ಕಂಡುಕೊಂಡಿದೆ. ಇದರಿಂದ ತಿಳಿಯುವುದೇನೆಂದರೆ ಭಾರತದ ಸಾಂಪ್ರದಾಯಿಕವಾದ ನಕಾರಾತ್ಮಕ ಸಾಮಾಜಿಕ ಮನಸ್ಥಿತಿಗಳನ್ನು, ಪೂರ್ವಾಗ್ರಹಗಳನ್ನು ತೊಡೆದುಹಾಕದ ಹೊರತು ಸಾಮಾಜಿಕ ಸಮಾನತೆ ತರಲು ಸಾಧ್ಯವಿಲ್ಲ. ನಿರುದ್ಯೋಗ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ ಎನಿಸುತ್ತದೆ.

ವೃತ್ತಿನಿರತ ಶಾಲೆಗಳು : 'ಅಯನ' ಕೃತಿಯಲ್ಲಿ 'ಕ್ಯಾಂಟ' ಎಂಬ ಪ್ರೌಢಶಾಲೆಯಲ್ಲಿ ಹುಡುಗರು ಮರಗೆಲಸದ ಪ್ರಾಯೋಗಿಕ ತರಗತಿಯನ್ನು ಕಲಿಯುತ್ತಿದ್ದ ಬಗ್ಗೆ ವಿವರಿಸಲಾಗಿದೆ. ಫ್ರಾನ್ಸ್ ದೇಶದಲ್ಲಿ 'ಕಾರ್ಪೆಂಟರ್' ಕೆಲಸವನ್ನು ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಇವು ವೃತ್ತಿಪರ ಶಿಕ್ಷಣ ನೀಡುವ ಶಾಲೆಗಳಾಗಿವೆ. ಗಮನಿಸಬೇಕಾದ ಅಂಶವೆಂದರೆ ಮರಗೆಲಸದ ವೃತ್ತಿಯಲ್ಲೂ ಕಂಪ್ಯೂಟರ್‌ನ್ನು ಬಳಕೆ ಮಾಡಿಕೊಳ್ಳುವ ಹೊಸ ತಂತ್ರಜ್ಞಾನವನ್ನು ಅನುಸರಿಸುತ್ತಿರುವುದು. ಸಾಂಪ್ರದಾಯಿಕ ವೃತ್ತಿಗಳಲ್ಲಿಯೂ ಆಧುನಿಕತೆ, ತಂತ್ರಜ್ಞಾನ ಪ್ರವೇಶಿಸಿದೆ. ಭಾರತದ ಸಾಂಪ್ರದಾಯಿಕ ವೃತ್ತಿಗಳು (ಮರಗೆಲಸ, ಬಿದಿರಿನ ವಸ್ತುಗಳ ತಯಾರಿಕೆ, ನೇಯ್ಗೆ, ಹೆಣಿಗೆ, ಕುಂಬಾರಿಕೆ) ಹಳೆಯ ವಿಧಾನಗಳನ್ನೇ ಅನುಸರಿಸುತ್ತಿದ್ದು, ಹೊಸ ಬಗೆಯ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮೇಲ್ದರ್ಜೆಗೆ ಏರಬೇಕಾದ ಅಗತ್ಯವಿದೆ. ವೃತ್ತಿನಿರತ ಕುಟುಂಬದಿಂದ ಬಂದ ವಿದ್ಯಾರ್ಥಿಯು ಸಹಜವಾಗಿ ಮನೆಯಲ್ಲಿ ಸಾಂಪ್ರದಾಯಿಕ ವೃತ್ತಿಯನ್ನು ಕಲಿತಿರುತ್ತಾನೆ. ಅದು ಅಪ್ಪನ ಕಾಲದ ಹಳೆಯ ವಿಧಾನವಾಗಿದ್ದು ಪ್ರಸ್ತುತ ಸಮಾಜದಲ್ಲಿ ಬೇಡಿಕೆಯನ್ನು ಕಳೆದುಕೊಂಡಿರುತ್ತದೆ. ಆದ್ದರಿಂದ ಆತ ಪಾರಂಪರಿಕ ವೃತ್ತಿಯನ್ನು ಮುನ್ನಡೆಸಿಕೊಂಡು ಹೋಗಲು ನಿರಾಕರಿಸುತ್ತಾನೆ. ಏಕೆಂದರೆ ಆತ ಶಿಕ್ಷಣ ಪಡೆಯುತ್ತಿರುವ ಶಾಲೆಯಲ್ಲಿ ಮನೆಯ ಹಿರಿಯರಿಂದ ಕಲಿತ ಸಾಂಪ್ರದಾಯಿಕ ವೃತ್ತಿಯಲ್ಲಿನ ನೂತನ ಆವಿಷ್ಕಾರಗಳ ಬಗ್ಗೆ, ಹೊಸ ಬಗೆಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ಬೋಧಿಸುವುದಿಲ್ಲ. ಶಾಲೆಯಲ್ಲಿ ಪಡೆಯುವ ಸಾಮಾನ್ಯ ಶಿಕ್ಷಣವು ಆದ್ದರಿಂದ ಪಾರಂಪರಿಕ ವೃತ್ತಿಯನ್ನು ಕೈಬಿಟ್ಟು ತಾನು ಶಿಕ್ಷಣವನ್ನು ಗಳಿಸಿದುದರ ಆಧಾರದ ಮೇಲೆ ಪ್ರಸ್ತುತ ಸಮಾಜದ ಬೇಡಿಕೆಗೆ ಅನುಗುಣವಾದ ಯಾವುದಾದರೂ ಹೊಸ ವೃತ್ತಿಯನ್ನು ಕೈಗೊಳ್ಳುತ್ತಾನೆ. ಹೊಸ ಪೀಳಿಗೆಯು ಇದೇ ರೀತಿಯಲ್ಲಿ ಮುನ್ನಡೆಯುವುದರ ಪರಿಣಾಮವಾಗಿ ಸಾಂಪ್ರದಾಯಿಕ ವೃತ್ತಿಗಳು ನಾಶವಾಗುತ್ತಿವೆ. ಇದು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಆಮದು ಮಾಡಿಕೊಳ್ಳುವ ಪ್ರಮಾಣ ಹೆಚ್ಚಾಗುತ್ತಿದೆ. ರಫ್ತಿನ ಪ್ರಮಾಣ ಕಡಿಮೆಯಾಗುತ್ತಿದೆ. ರೂಪಾಯಿ ಮೌಲ್ಯ ದಿನೇ ದಿನೇ ಕುಸಿಯಲು ಗುಡಿಕೈಗಾರಿಕೆಗಳನ್ನು ಕಡೆಗಣಿಸಿರುವುದೇ ಕಾರಣವಾಗಿದೆ. ದೇಶದ ಆರ್ಥಿಕ ವ್ಯವಸ್ಥೆಗೆ ಚೇತರಿಕೆಯನ್ನು ತರಬೇಕಾದರೆ ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ಔದ್ಯೋಗಿಕ ಶಿಕ್ಷಣವನ್ನು ನೀಡಬೇಕೆಂಬ ಒತ್ತಾಯವನ್ನು ಪ್ರವಾಸ

ಕೃತಿಗಳು ಸೂಚಿಸುತ್ತಿವೆ. ಸಾಮಾನ್ಯ ಶಿಕ್ಷಣದ ಜೊತೆಗೆ ಔದ್ಯೋಗಿಕ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಯು ವೃತ್ತಿಯಲ್ಲಿ ಕೌಶಲ್ಯವರ್ಧನೆಯನ್ನು ಆಧುನಿಕ ತಂತ್ರಜ್ಞಾನದ ಮೂಲಕ ಕೌಶಲ್ಯಗಳನ್ನು ಕಲಿಸುವುದರಿಂದ ಶಿಕ್ಷಣದ ಮೂಲ ಉದ್ದೇಶ ಈಡೇರಿದಂತಾಗುತ್ತದೆ.

'ಸ್ನೇಹಯಾತ್ರೆ' ಕೃತಿಯಲ್ಲಿ ಬರ್ಲಿನ್ ದೇಶದ ಶಿಕ್ಷಣದ ಪದ್ಧತಿಯ ಬಗೆಗೆ ವಿವರಗಳನ್ನು ದಾಖಲಿಸಲಾಗಿದೆ. ಎರಡರಿಂದ ಐದು ವರ್ಷದ ಮಕ್ಕಳು ನರ್ಸರಿ ಶಾಲೆಯನ್ನು ಕಲಿಯುತ್ತಾರೆ. ಆರರಿಂದ ಹನ್ನೊಂದು ವರ್ಷದ ಬಾಲರಿಗೆ ಪ್ರಾಥಮಿಕ ಶಾಲೆ. ಮೂರನೇ ಹಂತ ಪ್ರೌಢಶಾಲೆ ಆಗಿರುತ್ತದೆ. ಈ ಪ್ರೌಢಶಾಲಾ ಹಂತದಲ್ಲಿ ಮೂರು ಬಗೆಯ ಅಭಿವ್ಯಕ್ತಿಗೆ ಅವಕಾಶ ಇರುವ ಶಾಲೆಗಳಿವೆ. ಸಂಯುಕ್ತ ಶಾಲೆ, ವೃತ್ತಿಪರ ಶಾಲೆಗಳು, ಪ್ರೌಢ ಅಥವಾ ತಾಂತ್ರಿಕ ಶಾಲೆ. ಈ ಶಾಲೆಗಳಲ್ಲಿ ೨೫ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನಿರುತ್ತಾನೆ. ಇಲ್ಲಿ ಶಿಕ್ಷಣ ಗಳಿಸಿದ ವಿದ್ಯಾರ್ಥಿಗಳಿಗೆ ಅವರ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿರುವುದರಿಂದ ಹೆಚ್ಚಿನ ವಿದ್ಯಾರ್ಥಿಗಳು ಶಾಲಾ ಶಿಕ್ಷಣವನ್ನು ಪೂರೈಸಿದ ಬಳಿಕ ಉದ್ಯೋಗನಿರತರಾಗುತ್ತಾರೆ. ಬರ್ಲಿನ್ ದೇಶದಲ್ಲಿ ಹದಿನಾಲ್ಕು ವಯಸ್ಸಿನವರೆಗಿನ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲಾಗುತ್ತದೆ. ಪಠ್ಯ ಪುಸ್ತಕಗಳನ್ನು ವಿತರಿಸುವ ಹೊಣೆ ಪೋಷಕರ ಸಂಘಕ್ಕೆ ಸೇರಿರುತ್ತದೆ. ಪ್ರತಿ ಶಾಲೆಯಲ್ಲೂ ಪೋಷಕರ ಸಂಘಗಳಿರುತ್ತವೆ. ಕೆಲವು ವಸತಿ ಶಾಲೆಗಳೂ ಇವೆ. ಹೀಗೆ ಕೃತಿಯು ಬರ್ಲಿನ್ ದೇಶದ ಶೈಕ್ಷಣಿಕ ವ್ಯವಸ್ಥೆಯ ಶಾಲೆಗಳ ಪೂರ್ಣ ವಿವರಗಳನ್ನು ನೀಡುತ್ತದೆ.

ಈ ಮೇಲಿನ ಅಂಶಗಳಿಂದ ಶಿಕ್ಷಣ ಕ್ಷೇತ್ರದ ಸಮಗ್ರ ವಿವರಗಳಲ್ಲಿ ಅನೇಕ ಹೊಳವುಗಳನ್ನು ಕಾಣಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಪಾತ ನಿರ್ದಿಷ್ಟ ಸಂಖ್ಯೆಯಿಂದ ಕೂಡಿರುವುದು. ಪ್ರೌಢಶಾಲಾ ಹಂತದಲ್ಲಿಯೇ ವಿದ್ಯಾರ್ಥಿಗಳ ಆಸಕ್ತಿಯನ್ನು ಆಧರಿಸಿ ಮೂರು ಬಗೆಯ ಶಾಲೆಗಳನ್ನು ಸ್ಥಾಪಿಸಿರುವುದು. ಶಿಕ್ಷಣ ಪೂರೈಸಿದ ಕೂಡಲೇ ಪ್ರತಿ ವಿದ್ಯಾರ್ಥಿಗೂ ಉದ್ಯೋಗ ಕಲ್ಪಿಸುವ ಅವಕಾಶಗಳನ್ನು ವ್ಯವಸ್ಥೆಗೊಳಿಸಿರುವುದು ಕಂಡುಬರುತ್ತದೆ. ಶಿಕ್ಷಣ ಪದ್ಧತಿಯ ವಿಧಾನಗಳನ್ನು ದಾಖಲಿಸುವಾಗ ಭಾರತದ ಶಿಕ್ಷಣದ ಪದ್ಧತಿಯ ವಿಧಾನಗಳೊಂದಿಗೆ ತುಲನೆ ಮಾಡುತ್ತಾ ನಮ್ಮ ಪದ್ಧತಿಯ ಲೋಪದೋಷಗಳ ಬಗ್ಗೆ ಗಮನ ಹರಿಸುವಂತೆ ಮಾಡಿದ್ದಾರೆ.

ನಾಟಕ ಶಾಲೆ : ಸೋವಿಯತ್ ದಿನಚರಿ ಕೃತಿಯಲ್ಲಿ ನಾಟಕ ಕ್ಷೇತ್ರದಲ್ಲಿರುವ ಔದ್ಯೋಗಿಕ ಅವಕಾಶಗಳ ಬಗ್ಗೆ ಮಾಹಿತಿ ಕ್ರೋಢೀಕರಿಸಲಾಗಿದೆ. ಹಂಗೇರಿಯಲ್ಲಿ ನಾಟಕಕಾರರ ಶಿಕ್ಷಣ ತರಬೇತಿ ಶಾಲೆಗಳನ್ನು ಸರಕಾರದ ವತಿಯಿಂದ ನಡೆಸಲಾಗುತ್ತದೆ. ನಾಟಕ ಶಾಲೆಗೆ ಸೇರ ಬಯಸುವ ವಿದ್ಯಾರ್ಥಿಗಳು ೧೨ ರಿಂದ ೩೦ ವರ್ಷ ವಯಸ್ಸಿನ ಒಳಗಿನವರಾಗಿರಬೇಕು. ನಾಟಕದಲ್ಲಿ ಡಿಪ್ಲೋಮಾ ಕೋರ್ಸ್‌ನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಸರಕಾರವೆ ಮಾಸಿಕ ವೇತನವನ್ನು ನೀಡುತ್ತದೆ. ಹಂಗೇರಿಯ ಸರಕಾರವು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ನಾಟ್ಯ ಶಿಕ್ಷಣ ವೃತ್ತಿ ಕೋರ್ಸ್‌ಗಳನ್ನು ಸಹ ಪರಿಚಯಿಸಿದೆ. ಇಲ್ಲಿ ತರಬೇತಿ ಹೊಂದಿದ ವಿದ್ಯಾರ್ಥಿಗಳು ಅದೇ ವೃತ್ತಿಯನ್ನು ಆಧರಿಸಿ ಆರ್ಥಿಕಶಕ್ತಿಯನ್ನು ಗಳಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿರುವುದನ್ನು ಪ್ರವಾಸ ಕೃತಿಯು ಉಲ್ಲೇಖಿಸಿದೆ. ಜೊತೆಗೆ ನಾಟಕ ಶಿಕ್ಷಣ ಶಾಲೆಗಳಲ್ಲಿ ಎಲ್ಲರಿಗೂ ಪ್ರವೇಶಾವಕಾಶ ದೊರೆಯುವುದಿಲ್ಲ. ಪ್ರತಿವರ್ಷ ಐನೂರರಿಂದ ಆರುನೂರು ಅರ್ಜಿಗಳು ಬರುತ್ತವೆ. ಅದರಲ್ಲಿ ಹದಿನೈದರಿಂದ ಇಪ್ಪತ್ತು ವಿದ್ಯಾರ್ಥಿಗಳಷ್ಟೆ ಈ ಶಾಲೆಯಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆಯುತ್ತವೆ.

ಇದಕ್ಕೆ ಕಾರಣ ಲೇಖಕರು ಪಡೆದ ಮಾಹಿತಿಯಂತೆ ಅವರ ದೇಶದ ರಂಗಭೂಮಿಯ ಕಲಾವಿದರ ಸಂಖ್ಯೆ ಅಗತ್ಯಕ್ಕಿಂತ ಹೆಚ್ಚು ಮೀರಬಾರದು ಎಂಬ ಸದುದ್ದೇಶವಾಗಿದೆ. ಪ್ರವೇಶ ಪಡೆದ ವಿದ್ಯಾರ್ಥಿಗಳು ನಟನೆ, ಮಾತುಗಾರಿಕೆ, ಚಲನವಲನಗಳನ್ನು ಮೊದಲ ವರ್ಷದಲ್ಲಿ ಕಲಿಯುತ್ತಾರೆ. ಎರಡನೇ ವರ್ಷದಲ್ಲಿ ಸಂಗೀತ ಮತ್ತು ಧ್ವನಿ ಸಾಧನೆಯನ್ನು ಅಭ್ಯಾಸ ಮಾಡಿಸುತ್ತಾರೆ. ಉಳಿದ ಮೂರು ವರ್ಷಗಳಲ್ಲಿ ರಂಗಭೂಮಿಯ ಸಮಗ್ರ ಜ್ಞಾನವನ್ನು ತುಲನಾತ್ಮಕ ಅಭ್ಯಾಸದೊಂದಿಗೆ ಕಲಿಯುತ್ತಾರೆ. ಕೊನೆಯ ವರ್ಷದಲ್ಲಿ ವಿದ್ಯಾರ್ಥಿಗೆ ಡಿಪ್ಲೋಮಾ ದೊರೆಯಬೇಕಾದರೆ ಒಂದು ಸಾರ್ವಜನಿಕ ನಾಟ್ಯಗೃಹದಲ್ಲಿ ಸ್ವತಃ ಒಂದು ನಾಟಕವನ್ನು ನಿರ್ದೇಶಿಸಿ ರಂಗದಲ್ಲಿ ಪ್ರಯೋಗಿಸಬೇಕು ಎಂದು ಪರಿಪೂರ್ಣ ಮಾಹಿತಿ ನೀಡಲಾಗಿದೆ.

ಈ ಬಗೆಯ ನಾಟಕ ಶಿಕ್ಷಣ ಶಾಲೆಗಳು ವಿದ್ಯಾರ್ಥಿಗಳನ್ನು ಸೃಜನಶೀಲರನ್ನಾಗಿ ರೂಪಿಸುತ್ತವೆ. ಅವರಲ್ಲಿರುವ ಪ್ರತಿಭೆಯನ್ನು ಬೆಳಕಿಗೆ ತರಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಭಾರತದಲ್ಲಿ ಈ ಬಗೆಯ ನಾಟಕ ತರಬೇತಿ ಶಾಲೆಗಳು ಸರಕಾರದ ಸಹಭಾಗಿತ್ವದಲ್ಲಿ ನಡೆಯುತ್ತಿರುವುದು ವಿರಳವಾಗಿದೆ. ಕರ್ನಾಟಕದಲ್ಲಿ ಮೈಸೂರಿನ 'ರಂಗಾಯನ' ನಾಟಕ ಶಾಲೆಯು ಆದಾಗಲೇ ತರಬೇತಿ ಪಡೆದಿರುವ ನಾಟಕಕಾರರನ್ನು ಸೇರಿಸಿಕೊಂಡು ನಾಟಕಗಳನ್ನು ನಿರ್ದೇಶಿಸಿ ರಂಗಪ್ರಯೋಗಗಳನ್ನು ವಿವಿಧೆಡೆಗಳಲ್ಲಿ ಕೊಡುತ್ತದೆ. ಆದರೆ ನಾಟಕ ತರಬೇತಿ ಶಾಲೆಗಳನ್ನು ನಡೆಸುವುದಿಲ್ಲ. 'ನೀನಾಸಂ' ನಾಟಕ ತರಬೇತಿ ಶಾಲೆಯು ಖಾಸಗಿ ಶಾಲೆಯಾಗಿದೆ. ಇದು ವೃತ್ತಿ ಆಧಾರಿತ ತರಬೇತಿ ಶಾಲೆಯಾಗಿದ್ದು, ಆಸಕ್ತರಿಗೆ ರಂಗ ತರಬೇತಿ ಶಿಬಿರಗಳನ್ನು ಕಾಲ ಕಾಲಕ್ಕೆ ಏರ್ಪಡಿಸಿ ರಂಗ ಕಲೆಗಳ ವಿವಿಧ ಮಜಲುಗಳನ್ನು ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತದೆ. ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಸರಕಾರದ ಮಾನ್ಯತೆಯುಳ್ಳ ಪ್ರಮಾಣಪತ್ರ ಸಿಗುವುದಿಲ್ಲ. ನೀನಾಸಂನಲ್ಲಿ ತರಬೇತಿ ಪಡೆದವರಿಗೆ ಉದ್ಯೋಗದಲ್ಲಿ ಯಾವುದೇ ಭರವಸೆ ಇರುವುದಿಲ್ಲ. ಆದ್ದರಿಂದ ಈ ಬಗೆಯ ನಾಟಕ ಶಾಲೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಇದೇ ಬಗೆಯ ನಾಟಕ ತರಬೇತಿ ನೀಡುವ ಸಂಸ್ಥೆಗಳು ಭಾರತದಲ್ಲಿ ಹೇರಳವಾಗಿದ್ದರೂ ಅವುಗಳು ವಿದ್ಯಾರ್ಥಿಗಳ ಬದುಕನ್ನು ರೂಪಿಸಿ ಉದ್ಯೋಗ ಖಾತ್ರಿ ಮಾಡುವಲ್ಲಿ ವಿಫಲವಾಗಿವೆ. ಸಾಮಾನ್ಯ ಶಾಲಾ ಶಿಕ್ಷಣದ ಜೊತೆಯಲ್ಲಿ ನಾಟಕ ಕಲೆಯನ್ನು ವಿದ್ಯಾರ್ಥಿಯಲ್ಲಿ ಬೆಳೆಸಲು ನಿಗದಿತ ಅವಧಿಯ ಕೋರ್ಸ್‌ಗಳನ್ನು ನಡೆಸಬೇಕಿದೆ. ರಂಗ ತರಬೇತಿ ಶಾಲೆಯನ್ನು ತಾಲೂಕು ಕೇಂದ್ರಗಳಲ್ಲಿ ಸ್ಥಾಪಿಸಿ, ಅವುಗಳ ಮೂಲಕ ಆಸಕ್ತರಿಗೆ ಅವಕಾಶಗಳನ್ನು ಕಲ್ಪಿಸಿಕೊಡಬೇಕಿದೆ.

ರಂಗಕಲೆಗಳ ಶಿಕ್ಷಣ ಶಾಲೆ : 'ಅರಸಿಕರಲ್ಲ' ಕೃತಿಯು ಬರ್ಲಿನ್ ನಗರದಲ್ಲಿ ಸರ್ಕಸ್ಸುಗಳಲ್ಲಿ ಕಸರತ್ತುಗಳನ್ನು ಮಾಡುವ ಕಲೆಯನ್ನು ಕಲಿಸುವ 'ಜಿಮ್ನಾಸಿಯಮ್ ಶಾಲೆ'ಯ ವಿವರಗಳನ್ನು ದಾಖಲಿಸಿದೆ. 'ಈ ಶಾಲೆಗಳಲ್ಲಿ ತರುಣ-ತರುಣಿಯರು ವಿವಿಧ ಬಗೆಯ ಕಸರತ್ತುಗಳನ್ನು ಅಭ್ಯಾಸ ಮಾಡುತ್ತಿರುತ್ತಾರೆ. ಹತ್ತು ಹನ್ನೆರಡು ವಯಸ್ಸಿನಿಂದ ಮಧ್ಯ ವಯಸ್ಸಿನವರೆಗೆ ಈ ಕಸರತ್ತುಗಳನ್ನು ಮಾಡಲು ಅವಕಾಶ ಇರುತ್ತದೆ. ಇಲ್ಲಿ ಸೇರ್ಪಡೆಗೊಳಿಸಲು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಹಂತದಲ್ಲಿಯೇ ಗುರುತಿಸಿ ಅವರ ಅಭಿರುಚಿ ಮತ್ತು ಯೋಗ್ಯತೆಗೆ ಅನುಗುಣವಾಗಿ ಈ ಬಗೆಯ ಶಾಲೆಗಳಲ್ಲಿ ಕಲಿಸುತ್ತಾರೆ. ಅವರು ಇಚ್ಛೆಪಟ್ಟರೆ ಇದರಲ್ಲಿಯೇ ಉನ್ನತ ಶಿಕ್ಷಣ ಪಡೆಯುವವರೆಗೆ ಕಲಿಸಲಾಗುತ್ತದೆ' ಎಂದಿದ್ದಾರೆ. ಶಿಕ್ಷಣವನ್ನು ಪಡೆಯುವಲ್ಲಿ ವಿದ್ಯಾರ್ಥಿಯ ವೈಯಕ್ತಿಕ ಆಸಕ್ತಿಯ ಕಡೆಗೆ ಗಮನ ನೀಡಿರುವುದನ್ನು ಗುರುತಿಸಬಹುದು. ಯಾವ

ವಿದ್ಯಾರ್ಥಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಅದರಲ್ಲಿಯೇ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಿಕೊಟ್ಟು, ಅದರಲ್ಲೇ ಉದ್ಯೋಗವನ್ನು ಗಳಿಸಿ ಮುನ್ನಡೆದಾಗ ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಭಾರತದ ಶಿಕ್ಷಣ ಪದ್ಧತಿಯಲ್ಲಿ ಪ್ರಸಕ್ತ ಶೈಕ್ಷಣಿಕ ಚಟುವಟಿಕೆಗಳನ್ನು ಗಮನಿಸಿದಾಗ ಕಂಡುಬರುವ ವೈರುಧ್ಯವೆಂದರೆ ವಿದ್ಯಾರ್ಥಿಯ ಓದಿಗೂ ಆತನಿಗೆ ದಕ್ಕಿದ ಉದ್ಯೋಗಕ್ಕೂ ಸಮಾನಾಂತರ ಸಂಬಂಧ ಇಲ್ಲದಿರುವುದು. ಹೀಗಿರುವಾಗ ಆತ ತನ್ನ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ಹೇಗೆ ಸಾಧ್ಯವಾಗುತ್ತದೆ ಎಂಬ ಪ್ರಶ್ನೆ ಮೂಡುತ್ತದೆ.

ಬ್ಯಾಲೆ ಶಾಲೆ : ರಷ್ಯಾದಲ್ಲಿ ಬ್ಯಾಲೆಗಳು ಪ್ರಪಂಚದಲ್ಲೆ ಪ್ರಸಿದ್ಧಿಯನ್ನು ಗಳಿಸಿದೆ. ಪೆಲೂಕ ಎಂಬ ಮಹಿಳೆಯು ಬ್ಯಾಲೆ ಶಾಲೆಯನ್ನು ಸ್ಥಾಪಿಸಿದ್ದಾಳೆ. ಆದ್ದರಿಂದ ಈ ಶಾಲೆಗಳಿಗೆ 'ಪೆಲೂಕ ಬ್ಯಾಲೆ ಶಾಲೆ' ಎಂದು ಕರೆಯುವುದನ್ನು ಅರಸಿಕರಲ್ಲ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಪೆಲೂಕ ಶಾಲೆಗಳು ಸರಕಾರದ ಸಹಾಯಧನದಿಂದ ನಡೆಯುತ್ತವೆ. ಆಸಕ್ತಿಯುತ ಮಕ್ಕಳನ್ನು ಕಲೆಹಾಕಿ ಬ್ಯಾಲೆ ತರಬೇತಿಗಳನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ. ನಾಟಕ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳನ್ನು ಕುರಿತು "ನಾಟಕಗಳ ಸಲುವಾಗಿಯೇ ಆಗಲಿ, ಸರ್ಕಸ್ಸುಗಳ ಸಲುವಾಗಿಯೇ ಆಗಲಿ ಯಾರ್ಯಾರಿಗೆ ಯಾವ್ಯಾವ ಅಭಿರುಚಿ ಇದೆಯೆಂಬುದನ್ನು ಎಳೆಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳ ಹಂತದಲ್ಲೇ ಗುರುತಿಸುತ್ತಾರೆ. ಅವರ ಅಭಿರುಚಿ ಮತ್ತು ಯೋಗ್ಯತೆಗಳನ್ನಳೆದು ಮುಂದೆ ಅವರವರು ಆರಿಸಿದ ಕಸುಬಿನಲ್ಲಿ ಉಚ್ಚ ಶಿಕ್ಷಣ ಕೊಡುತ್ತಾರೆ"(ಶಿವರಾಮ ಕಾರಂತ, ಅರಸಿಕರಲ್ಲ ಪು-೬೫,೬೬)ಎಂದಿದ್ದಾರೆ. ಎಳೆಯರಲ್ಲಿಯೇ ಪ್ರತಿಭೆಯನ್ನು ಗುರುತಿಸಿ ಆ ಪ್ರತಿಭೆಗೆ ಪೂರಕವಾಗಿ ಶಿಕ್ಷಣ ಪದ್ಧತಿಯನ್ನು ಅನುಸರಿಸಿದಾಗ ಅದು ಬದುಕನ್ನು ರೂಪಿಸುವ ಶಿಕ್ಷಣವಾಗಿರುತ್ತದೆ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳಲ್ಲಿ ಹುದುಗಿರುವ ಪ್ರತಿಭೆಗಳನ್ನು ಗುರುತಿಸುವ ಅದಕ್ಕೆ ಪೂರಕವಾದ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸುವ ಕಾರ್ಯ ಸಮರ್ಪಕವಾಗಿ ನಡೆದಿಲ್ಲ ಎಂಬ ಅಂಶಗಳನ್ನು ಕೃತಿಯು ವ್ಯಕ್ತಗೊಳಿಸಿದೆ.

ಮೀನುಗಾರಿಕಾ ತರಬೇತಿ ಶಾಲೆ: 'ಅಯನ' ಕೃತಿಯಲ್ಲಿ ಫ್ರಾನ್ಸ್ ದೇಶದಲ್ಲಿ ಮೀನುಗಾರಿಕಾ ತರಬೇತಿ ಶಾಲೆಗಳು ಇರುವುದನ್ನು ವಿವರಿಸಲಾಗಿದೆ. ಹದಿನೈದರಿಂದ ಹದಿನೆಂಟು ವಯಸ್ಸಿನ ಹುಡುಗ-ಹುಡುಗಿಯರು ಈ ಶಾಲೆಗಳಲ್ಲಿ ಒಂದು ವರ್ಷದ ಅವಧಿಯ ಕೋರ್ಸ್‌ಗೆ ಸೇರಬಹುದಾಗಿದೆ. ಮೀನುಗಾರಿಕಾ ಶಾಲೆಯಲ್ಲಿ ಶಿಕ್ಷಣವನ್ನು ಪಡೆಯಲು ದೃಷ್ಟಿ ಪರೀಕ್ಷೆ, ದೇಹದಾರ್ಢ್ಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು. ಜೊತೆಗೆ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಮತ್ತು ಕಂಪ್ಯೂಟರ್‌ಗಳ ಬಳಕೆ ತಿಳಿದಿರಬೇಕು. ಈ ಅರ್ಹತೆಯನ್ನು ಉಳ್ಳವರು ಮೀನುಗಾರಿಕಾ ಶಾಲೆಗಳಿಗೆ ಪ್ರವೇಶವನ್ನು ಗಿಟ್ಟಿಸಬಹುದು. ಅಲ್ಲಿ ಅವರಿಗೆ ದೋಣಿ ರಿಪೇರಿ ಮಾಡುವ ಬಗ್ಗೆ, ಆಧುನಿಕ ಸಲಕರಣೆಗಳನ್ನು ಬಳಸಿ ಮೀನು ಹಿಡಿಯುವ ಬಗ್ಗೆ, ಅಪಾಯಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ವಿಧಾನಗಳ ಬಗ್ಗೆ ಹಾಗೂ ಕಡಲು ಬೇರೆ ಬೇರೆ ಕಾಲಮಾನಗಳಲ್ಲಿ ಹೇಗೆ ವರ್ತಿಸುತ್ತದೆ ಎಂಬುದರ ಬಗ್ಗೆ ಹೇಳಿಕೊಡಲಾಗುತ್ತದೆ. ಹುಡುಗರು ತಮ್ಮ ಕಲಿಕೆಯ ಹಂತದಲ್ಲಿಯೇ ತಿಂಗಳಿಗೆ ಐದು ಸಾವಿರ ಫ್ರಾಂಕ್‌ಗಳನ್ನು ಸಂಪಾದಿಸುತ್ತಾರಂತೆ.

ಭಾರತದಲ್ಲಿ ಮೀನುಗಾರಿಕಾ ಸಂಶೋಧನಾ ಕೇಂದ್ರ ಕೇರಳದ ಕೊಚ್ಚಿನ್‌ನಲ್ಲಿದೆ. ಆದರೆ ಇಲ್ಲಿ ತರಬೇತಿಯನ್ನು ನೀಡಲಾಗುವುದಿಲ್ಲ. ಕೇವಲ ಸಂಶೋಧನಾ ಕಾರ್ಯ ನಡೆಯುತ್ತದೆ. ಮೀನುಗಾರರನ್ನು ತರಬೇತುಗೊಳಿಸುವ ಸಂಸ್ಥೆಗಳು ಇಲ್ಲ. ನಮ್ಮ ದೇಶದಲ್ಲಿ ಕರಾವಳಿ ತೀರ ಸುಮಾರು ಏಳು ಸಾವಿರದ ಐದುನೂರಾ ಹದಿನಾರು ಕಿಲೋ ಮೀಟರ್ ಉದ್ದವಿದೆ. ಇಲ್ಲಿ ಸಾಕಷ್ಟು ಮೀನುಗಾರರು ವಾಸಿಸುತ್ತಾರೆ. ಈ ಮೀನುಗಾರರಲ್ಲಿ ಬಹುತೇಕರು ಅನಕ್ಷರಸ್ಥರಾಗಿದ್ದಾರೆ. ಹವಾಮಾನಗಳ ತಿಳಿವು ಇಲ್ಲದೆ, ಕಡಲಿನ ಬಗ್ಗೆ ತಮಗೆ ಒಪ್ಪಿಸಲಾದ ಪುರಾತನ ನಂಬಿಕೆಗಳನ್ನು ನೆಚ್ಚಿಕೊಂಡು ಮೀನು ಬೇಟೆಗೆ ಇಳಿಯುತ್ತಾರೆ. ತಮಗರಿವಿಲ್ಲದೆ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಾರೆ. ಅವರನ್ನು ನಂಬಿದ ಇಡೀ ಕುಟುಂಬ ಬೀದಿಗೆ ಬರುತ್ತದೆ. ಏಕೆಂದರೆ ಇವರ ಜೀವನಕ್ಕೆ ಆಧಾರ ಮತ್ಸ್ಯೋದ್ಯಮ ಮಾತ್ರ. ಈ ಜನಾಂಗದ ಎಳೆಯರಿಗೆ ಶಾಲೆಗಳಲ್ಲಿ ದಿನನಿತ್ಯದ ಪಾಠ ಪ್ರವಚನದ ಜೊತೆಗೆ ಮೀನುಗಾರಿಕೆಯ ತಾಂತ್ರಿಕ ಕುಶಲತೆಯ ತರಬೇತಿಯನ್ನು ನೀಡಬಹುದು. ವೈಜ್ಞಾನಿಕ ರೀತಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅನುಸರಿಸಿ ಮೀನು ಹಿಡಿಯುವ ಕಲೆಯನ್ನು ಶಿಕ್ಷಣದ ಮೂಲಕ ನೀಡುವುದಾದರೆ ಮೀನುಗಾರರ ಜೀವನ ಮತ್ತಷ್ಟು ಸುಧಾರಣೆಗೊಳ್ಳಲು ಅನುಕೂಲವಾಗುವುದನ್ನು 'ಅಯನ' ಕೃತಿಯ ವಿವರಣೆಗಳಿಂದ ಗ್ರಹಿಸಲಾಗಿದೆ.

ಅಂಗವಿಕಲರಿಗೆ ಪ್ರತ್ಯೇಕ ಶಾಲೆಗಳು : 'ಸೋವಿಯೆತ್ ದಿನಚರಿ' ಕೃತಿಯಲ್ಲಿ ಎಸ್ತೋನಿಯಾ ರಾಜ್ಯದಲ್ಲಿ ಅಂಗವಿಕಲರಿಗೆ ಪ್ರತ್ಯೇಕ ಶಾಲೆಗಳನ್ನು ನಡೆಸಲಾಗುವ ಬಗ್ಗೆ ಉಲ್ಲೇಖಿಸಲಾಗಿದೆ. "ದೇಶದ ಎಲ್ಲಾ ಮಕ್ಕಳಿಗೆ ಉಚಿತವಾದ ವಿದ್ಯಾಭ್ಯಾಸವನ್ನು ಎಲ್ಲ ಮಟ್ಟದಲ್ಲೂ ಒದಗಿಸುತ್ತಿರುವುದು......ಇಷ್ಟೇ ಅಲ್ಲದೆ ಅಂಗವಿಕಲರಿಗೆ ಮತ್ತು ಆರೋಗ್ಯ ಸರಿಯಿಲ್ಲದ ಮಕ್ಕಳಿಗೆ ವಿಶೇಷ ವ್ಯವಸ್ಥೆ ಮಾಡಿದ್ದಾರೆ. ಕಿವುಡರು, ಮೂಗರು ಮತ್ತು ಇತರ ಬಗೆಯ ಅಂಗವಿಕಲರು, ರೋಗಿಗಳು– ಇವರಿಗೆ ಪ್ರತ್ಯೇಕವಾದ ಶಾಲೆಗಳಿವೆ"(ಶ್ರೀರಂಗರಾಜು., ಸೋವಿಯೆತ್ ದಿನಚರಿ., ಪು–೧೦೩)ಎಂಬ ಸಂಗತಿಗಳನ್ನು ಉಲ್ಲೇಖಿಸಲಾಗಿದೆ. ಅಂಗವಿಕಲರ ಪ್ರತ್ಯೇಕ ಶಾಲೆಗಳು ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಇರುತ್ತದೆ. ಅವರಿಗೆ ಸಂಪೂರ್ಣ ಉಚಿತ ಶಿಕ್ಷಣದ ಜೊತೆಗೆ ಅವರ ದೇಹಾರೋಗ್ಯವನ್ನು ನೋಡಿಕೊಳ್ಳುವ ವ್ಯವಸ್ಥೆಯು ಇರುತ್ತದೆ. ದೈಹಿಕವಾಗಿ ದುರ್ಬಲರಾಗಿರುವವರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಪ್ರತ್ಯೇಕ ಶಾಲೆಗಳನ್ನು ನಿರ್ಮಿಸಿ ಕಾರ್ಯ ನಿರ್ವಹಿಸುತ್ತಿರುವ ವೈಖರಿಯು ಉತ್ತಮವಾದ ಆಡಳಿತ ವ್ಯವಸ್ಥೆಯನ್ನು ಸೂಚಿಸುತ್ತದೆ. ದೇಶವನ್ನು ಸಮರ್ಥವಾಗಿ ಕಟ್ಟಬೇಕಾದರೆ ದೇಶದೊಳಗಿನ ಸರ್ವಜನರನ್ನು ಪರಿಗಣಿಸಬೇಕು. ದಕ್ಷ ಪ್ರಜೆಗಳನ್ನು ನಿರ್ಮಿಸುವ ನೆಲೆಯಲ್ಲಿ ಯಾವ ವ್ಯಕ್ತಿಗೆ ಏನು ಅಗತ್ಯವಿದೆಯೋ ಅದನ್ನು ಪೂರೈಸಬೇಕು ಎಂಬ ಅಂಶವನ್ನು ಕೃತಿಯು ತಿಳಿಸಿದೆ.

ಅಯನ ಕೃತಿಯಲ್ಲಿ 'ಫ್ರಾನ್ಸ್‌ನ ಶಿಕ್ಷಣ ವ್ಯವಸ್ಥೆ ಒಂದು ಪರಿಪೂರ್ಣ ಶಿಕ್ಷಣ ವ್ಯವಸ್ಥೆ ಅಲ್ಲ' ಎಂದು ಉಲ್ಲೇಖಿಸಲಾಗಿದೆ. ಸೋವಿಯೆತ್ ದಿನಚರಿ ಕೃತಿಯಲ್ಲಿ "ನಮ್ಮ ಶಿಕ್ಷಣ purposeless ಮತ್ತು rudderless ಆಗಿರುವಂತೆ ಕಾಣಿಸುತ್ತದೆ"(ಶ್ರೀರಂಗರಾಜು., ಸೋವಿಯೆತ್ ದಿನಚರಿ., ಪು–18) ಎಂದು ಉಲ್ಲೇಖಿಸಿದೆ. ಈ ಎರಡು ಅಭಿಪ್ರಾಯಗಳನ್ನು ಗಮನಿಸಿದಾಗ ಒಂದು ಪ್ರಶ್ನೆ ಉದ್ಭವಿಸುತ್ತದೆ. ಒಂದು ಪರಿಪೂರ್ಣ ಶೈಕ್ಷಣಿಕ ವ್ಯವಸ್ಥೆ ಎಂಬುದು ಇರಲು ಸಾಧ್ಯವೇ? ಯಾವುದೇ ದೇಶದ ಶೈಕ್ಷಣಿಕ ವ್ಯವಸ್ಥೆಯನ್ನು ವಿವಿಧ ಆಯಾಮಗಳಲ್ಲಿ ನೋಡಿದಾಗ ಒಂದಲ್ಲ ಒಂದು ಕೊರತೆಗಳು ಇದ್ದೇ ಇರುತ್ತದೆ. ಈ ಕೊರತೆಗಳ ಪ್ರಮಾಣವನ್ನು ಕಡಿಮೆ ಮಾಡಿಕೊಂಡಾಗ ಮಾತ್ರ ಒಂದು ಉತ್ತಮ ಶೈಕ್ಷಣಿಕ ವ್ಯವಸ್ಥೆಯ ಕಡೆಗೆ

ಮುನ್ನಡೆಯಲು ಸಾಧ್ಯವಾಗುತ್ತದೆ. ಭಾರತದ ಶೈಕ್ಷಣಿಕ ವ್ಯವಸ್ಥೆಯಲ್ಲಿಯೂ ನ್ಯೂನತೆಗಳಿವೆ. ಅವುಗಳನ್ನು ಸರಿಪಡಿಸಿಕೊಂಡು ಸಾಗುವ ಅವಕಾಶಗಳಿರುವುದನ್ನು ಕಂಡುಕೊಳ್ಳಲಾಗಿದೆ.

ಪ್ರವಾಸ ಕೃತಿಗಳಲ್ಲಿ ಶಿಕ್ಷಣದ ಬಗೆಗಿನ ವಿವರಗಳನ್ನು ದಾಖಲಿಸುವುದು ಪ್ರವಾಸಿ ಲೇಖಕರ ಆಸಕ್ತಿಯನ್ನು ಅವಲಂಬಿಸಿದೆ. ಹೆಚ್ಚಿನ ಕೃತಿಗಳು ಶಿಕ್ಷಣ ಕೇತ್ರದ ಬಗ್ಗೆ ತಮ್ಮದೇ ನಿಲುವುಗಳನ್ನು ಪ್ರಕಟಿಸಿವೆ. ಅವುಗಳ ಶಿಕ್ಷಣ ಕೇತ್ರದ ಬಗೆಗಿನ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಿಸಿದಾಗ ಕೆಲವು ಸಾಮಾನ್ಯ ಅಂಶಗಳು ಕಂಡುಬರುತ್ತವೆ. ಕೆಲವು ಅಭಿಪ್ರಾಯಗಳಿಗೆ ಪಾರ್ಶ್ವ ನೋಟಗಳಿರುವುದನ್ನು ಕಾಣಬಹುದು. ಇವು ಕತೃಕೇಂದ್ರಿತ ದೃಷ್ಟಿಕೋನಗಳನ್ನು ವ್ಯಕ್ತಪಡಿಸುತ್ತವೆ. ಮತ್ತೆ ಕೆಲವು ಅಭಿಪ್ರಾಯಗಳು ವಸ್ತು ಕೇಂದ್ರಿತ ಧೋರಣೆಗಳನ್ನು ಹೊಂದಿವೆ. ಯರೋಪ್ ದೇಶಗಳಲ್ಲಿ ಪ್ರತಿಯೊಂದು ದೇಶವು ತಮಗೆ ಸರಿಹೊಂದುವ ತಮ್ಮದೇ ಆದ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತವೆ. ಸಾಮಾನ್ಯವಾಗಿ ಹೆಚ್ಚಿನ ಕೃತಿಗಳು ಗುರುತಿಸಿರುವ ಅಂಶವೆಂದರೆ ವೃತ್ತಿ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿರುವುದು. ನರ್ಸರಿ ಶಾಲೆಗಳು, ವೃತ್ತಿನಿರತ ಶಾಲೆಗಳು, ನಾಟಕ ಶಾಲೆ, ಬ್ಯಾಲೆ ಶಾಲೆ, ಮೀನುಗಾರಿಕಾ ತರಬೇತಿ ಶಾಲೆ ಮೊದಲಾದ ಉದ್ಯೋಗವನ್ನು ದೊರಕಿಸಿಕೊಡುವ ಶಾಲೆಗಳು ಯುರೋಪಿನಲ್ಲಿ ಹೇರಳವಾಗಿವೆ. ಇವು ನಿರುದ್ಯೋಗವನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಅಂಶಗಳನ್ನು ಗಮನಿಸುವುದರಿಂದ ಭಾರತೀಯ ಶಿಕ್ಷಣ ಪದ್ಧತಿಯಲ್ಲಿನ ಲೋಪಗಳನ್ನು ಕಂಡುಕೊಳ್ಳಲು ಮತ್ತು ಆ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗಲು ಕೃತಿಗಳ ಅಭಿಪ್ರಾಯಗಳು ಸಹಾಯಕವಾಗುವುದನ್ನು ಗುರುತಿಸಲಾಗಿದೆ.

ಯುರೋಪಿನ ಶಿಕ್ಷಣ ವ್ಯವಸ್ಥೆಯ ಕುರಿತು ಕೃತಿಗಳು ವ್ಯಕ್ತಪಡಿಸುವ ಸಮಗ್ರ ಧನಾತ್ಮಕ ಅಂಶಗಳನ್ನು ಹೀಗೆ ಕ್ರೋಢೀಕರಿಸಬಹುದು. ಯುರೋಪಿನ ದೇಶಗಳು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿವೆ. ಶಿಕ್ಷಣ ಪದ್ಧತಿಯಲ್ಲಿ ಮತ್ತು ಪರೀಕ್ಷಾ ಪದ್ಧತಿಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡಿವೆ. ಮೌಖಿಕ ಪರೀಕ್ಷೆಗೆಳಿಗೆ ಹೆಚ್ಚು ಮಾನ್ಯತೆ ನೀಡಿರುವುದನ್ನು ಗುರುತಿಸಬಹುದು. ಬೋಧನಾ ವಿಧಾನಗಳನ್ನು ವೈಜ್ಞಾನಿಕವಾಗಿ ರೂಪಿಸಿವೆ. ಮತ್ತು ಬೋಧನೆಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರಿಣಾಮಕಾರಿಯಾಗಿಸಿರುವುದನ್ನು ಕಾಣಬಹುದು. ಮಾತೃಭಾಷೆಗೆ ಹೆಚ್ಚು ಪಾಧಾನ್ಯತೆಯನ್ನು ನೀಡಿರುವುದು ಶೈಕ್ಷಣಿಕ ವ್ಯವಸ್ಥೆಯಲ್ಲಿ ಮಾತೃಭಾಷೆಯ ಸ್ಥಾನವನ್ನು ಸೂಚಿಸುತ್ತದೆ. ವಿದ್ಯಾರ್ಥಿಗಳಿಗೆ ಪಠ್ಯಗಳು ಬಹುಮುಖಿ ನೆಲೆಯನ್ನು ಬೋಧಿಸುವಂತೆ ಸಿದ್ದಗೊಳಿಸಲಾಗಿದೆ. ಸರಕಾರದ ಸ್ವಾಮ್ಯಗಳಲ್ಲಿರುವ ಶಾಲೆಯಲ್ಲಿ ವಿದ್ಯಾರ್ಥಿ ಪಡೆಯುವ ಶಿಕ್ಷಣದ ಗುಣಮಟ್ಟಕ್ಕೂ, ಖಾಸಗಿ ಶಾಲೆಯಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟಕ್ಕೂ ಹೆಚ್ಚು ವ್ಯತ್ಯಾಸಗಳಿರುವುದಿಲ್ಲ. ಖಾಸಗಿ ಸಂಸ್ಥೆಗಳು ಡೊನೇಶನ್‌ಗಳನ್ನು ಪಡೆಯುವುದಿಲ್ಲ. ಇವುಗಳ ನಡುವೆ ಪೈಪೋಟಿಗಳಿಲ್ಲ ಎಂಬ ವಿಚಾರಗಳು ತಿಳಿದು ಬರುತ್ತವೆ.

ಯುರೋಪಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕಂಡುಕೊಂಡ ಅಂಶಗಳನ್ನು ಭಾರತೀಯ ಶೈಕ್ಷಣಿಕ ವ್ಯವಸ್ಥೆಯೊಂದಿಗೆ ಹೋಲಿಸಿದಾಗ; ಬದಲಾವಣೆಯ ಅಗತ್ಯವಿರುವುದನ್ನು ಕೃತಿಗಳು ಸೂಚಿಸುವುದು ಕಂಡುಬರುತ್ತದೆ. ಕೃತಿಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದಾದ ಸಂಗತಿಗಳೆಂದರೆ– ಖಾಸಗಿ ಒಡೆತನದ ಶಾಲೆಗಳು ಶಿಕ್ಷಣ ವ್ಯವಸ್ಥೆಯನ್ನು ವ್ಯಾಪಾರಿಕರಣಗೊಳಿಸಿದ್ದು, ಅವುಗಳ ಪ್ರಭಾವವನ್ನು ಕಡಿಮೆ ಮಾಡಬೇಕಾದ ಅನಿವಾರ್ಯತೆ ಇದೆ. ಸರಕಾರಿ ಶೈಕ್ಷಣಿಕ ಸಂಸ್ಥೆಗಳನ್ನು ಆಧುನೀಕರಿಸಬೇಕಿದೆ. ಸರಕಾರಿ ಒಡೆತನದ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಗತ್ಯವಾದ ಸೌಕರ್ಯಗಳನ್ನು ಪೂರೈಸಬೇಕಿದೆ. ಮಾತೃಭಾಷೆಯಲ್ಲಿ

ಶಿಕ್ಷಣವನ್ನು ನೀಡುವುದು ಮತ್ತು ಪ್ರಾದೇಶಿಕ ಭಾಷೆಯನ್ನು ಶಿಕ್ಷಣದ ಸಂವಹನದ ಮಾಧ್ಯಮವನ್ನಾಗಿ ರೂಪಿಸುವ ಅಗತ್ಯವಿದೆ. ಪರೀಕ್ಷಾ ಪದ್ಧತಿಯಲ್ಲಿ ಸೂಕ್ತ ಸುಧಾರಣೆಗಳನ್ನು ತರುವುದು ಮತ್ತು ತಂತ್ರಜ್ಞಾನಧಾರಿತ ಮೌಲ್ಯಮಾಪನ ವ್ಯವಸ್ಥೆಯನ್ನು ಜಾರಿಗೊಳಿಸುವುದು ಪ್ರವಾಸ ಕೃತಿಗಳ ನಿರೀಕ್ಷೆಯಾಗಿದೆ.

ಕೊನೆ ಟಿಪ್ಪಣಿ

೧. ಸಾಹಿತ್ಯ ಸಂಪದ., ೨೦೧೫-೧೬(ಪರಿಷ್ಕೃತ ಆವೃತ್ತಿ)., ದ್ವಿತೀಯ ಪಿ.ಯು.ಸಿ. ಕನ್ನಡ ಭಾಷಾ ಪಠ್ಯ.., ಪುಟ-೧೦೮

ಅಧ್ಯಾಯ ೬

ಸ್ತ್ರೀ ಸಂವೇದನೆಗಳು

೬. ೧. ಕನ್ನಡದ ಮಹಿಳಾ ಯುರೋಪ್ ಪ್ರವಾಸ ಕೃತಿಗಳ ಚಾರಿತ್ರಿಕ ಅವಲೋಕನ

೬. ೨. ಸ್ತ್ರೀ ಸಂಕಥನ

೬. ೩. ಮಹಿಳಾಪರ ಧೋರಣೆಗಳು

ಅಧ್ಯಾಯ : ೬
ಸ್ತ್ರೀ ಸಂವೇದನೆಗಳು

ಕನ್ನಡದ ಯುರೋಪ್ ಪ್ರವಾಸ ಕೃತಿಗಳಲ್ಲಿ ಹೆಚ್ಚಿನ ಕೃತಿಗಳು ಪುರುಷಕೇಂದ್ರಿತವಾಗಿಯೇ ನಿರೂಪಿಸಲ್ಪಟ್ಟಿವೆ. ಸ್ತ್ರೀಕೇಂದ್ರಿತ ಕೃತಿಗಳು ರಚಿತವಾಗಿದ್ದರೂ ಕೇವಲ ಬೆರಳೆಣಿಕೆಯಷ್ಟಿದೆ. ಸ್ತ್ರೀಯರು ವಿದೇಶ ಪ್ರವಾಸಕ್ಕೆ ತೆರಳುವುದೇ ಪರಂಪರಾಗತ ಸಾಮಾಜಿಕ ಬಂಧನದಿಂದ ಮುಕ್ತಗೊಳ್ಳುವ ಪ್ರಕ್ರಿಯೆಯಾಗಿದೆ. ಸ್ವತಂತ್ರ ಮನೋವೃತ್ತಿಯಿಂದ ಪುರುಷರ ಬೆಂಬಲವಿಲ್ಲದೆ ವಿದೇಶಕ್ಕೆ ತೆರಳುವುದು ಸ್ತ್ರೀವಾದವು ಆಶಿಸುವ ಪ್ರಕಲ್ಪನೆಯಾಗಿದೆ. ಈ ದಿಸೆಯಲ್ಲಿ ಕನ್ನಡದ ಯುರೋಪ್ ಪ್ರವಾಸ ಕೃತಿಗಳು ದುಡಿದಿರುವ ಸ್ತ್ರೀತ್ವದ ಪ್ರಜ್ಞೆ ಯಾವ ನೆಲೆಯಲ್ಲಿದೆ ಎಂಬ ಜಿಜ್ಞಾಸೆಯನ್ನು ಸ್ತ್ರೀ ಸಂವೇದನೆಗಳ ಪರಿಕಲ್ಪನೆಯ ಅಡಿಯಲ್ಲಿ ಮಾಡಲಾಗಿದೆ. ಇತರ ಅಧ್ಯಾಯಗಳಲ್ಲಿಯೂ ಸ್ತ್ರಿಪರವಾದ ಧೋರಣೆಗಳನ್ನು ವಿಶ್ಲೇಷಿಸಲಾಗಿದ್ದರು ಪ್ರಧಾನವಾಗಿ ಸ್ತ್ರಿಕೇಂದ್ರಿತ ಚಿಂತನಾ ಮಾದರಿಯಲ್ಲಿ ಯುರೋಪಿನ ಪ್ರವಾಸ ಕೃತಿಗಳನ್ನು ನೋಡುವ ಕ್ರಮವನ್ನು ಇಲ್ಲಿ ನಿರ್ವಹಿಸಲಾಗಿದೆ.

ವಸಾಹತುಶಾಹಿ ಕಾಲಘಟ್ಟದಲ್ಲಿ ಮಧ್ಯಮ ವರ್ಗದ ಸ್ತ್ರೀಯರಿಂದ ಪ್ರವಾಸ ಕೃತಿಗಳು ರಚಿತವಾಗಿಲ್ಲ. ಏಕೆಂದರೆ ಈ ಕಾಲಘಟ್ಟದಲ್ಲಿ ಭಾರತೀಯ ಸಮಾಜದಲ್ಲಿ ಮಹಿಳೆಯರನ್ನು ನೈತಿಕತೆಯ ಚೌಕಟ್ಟಿನಲ್ಲಿ ನೋಡಲಾಗುತ್ತಿದ್ದು, ಮುಕ್ತವಾಗಿ ವಿದೇಶಗಳಿಗೆ ಪ್ರವಾಸ್ಕೆ ತೆರಳುವ ಅವಕಾಶದಿಂದ ವಂಚಿತರಾಗಿದ್ದರು. ಉನ್ನತ ವರ್ಗದ ಮಹಿಳೆಯರಿಗೆ ಸಮಾಜದಲ್ಲಿನ ಸ್ಥಾನಮಾನದ ಕಾರಣದಿಂದ ವಿನಾಯಿತಿ ದೊರಕಿತ್ತು. ಆದ್ದರಿಂದ ಉನ್ನತ ವರ್ಗದ ಮಹಿಳೆಯರಿಗೆ ಸಮಾಜದಲ್ಲಿ ಗೌರವದ ಜೊತೆಗೆ ಶಿಕ್ಷಣವನ್ನೂ ಪಡೆಯುವ ಅವಕಾಶವಿತ್ತು. ಅಲ್ಪ ಸಂಖ್ಯಾತರಾದ ಮೇಲ್ವರ್ಗದ ಸ್ತ್ರೀಯರಿಗೆ ವಿದೇಶ ಪ್ರವಾಸಕ್ಕೆ ನಿರ್ಭಂಧಗಳು ಇದ್ದಾಗ್ಯೂ ಅವುಗಳನ್ನು ಮೀರಿ ಪ್ರವಾಸಕ್ಕೆ ತೆರಳಿದ ಉದಾಹರಣೆಗಳಿವೆ. ಮಧ್ಯಮ ವರ್ಗದ ಮಹಿಳೆಯರ ಬದುಕು ಸರಳವಾಗಿರಲಿಲ್ಲ. ಅವರ ಮೇಲೆ ಶೀಲ, ಪಾವಿತ್ರ್ಯತೆಯ ಭಾರ ಹೆಚ್ಚಾಗಿತ್ತು. ಅವರು ಮನೆಯಿಂದ ಹೊರಗಡೆ ಬರಬೇಕಾದರೆ ಮುಖಕ್ಕೆ ಮುಸುಕು ಹಾಕಿ ಓಡಾಡಬೇಕಿತ್ತು. ಯಾವುದೇ ಗಂಡಸರನ್ನು (ತನ್ನ ಗಂಡನನ್ನು ಹೊರತುಪಡಿಸಿ) ನೋಡುವಂತಿರಲಿಲ್ಲ. ಏಕಾಂಗಿಯಾಗಿ ಎಲ್ಲೂ ಓಡಾಡುವಂತಿರಲಿಲ್ಲ. ಮನೆಯ ನಾಲ್ಕು ಗೋಡೆಯ ಮಧ್ಯೆ ಶಿಕ್ಷಣವಿಲ್ಲದೆ ಕೇವಲ ಮಗುವನ್ನು ಹೆರುವ ಯಂತ್ರವಾಗಿ ಬದುಕಬೇಕಿತ್ತು. ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿ, ಸತಿಪದ್ಧತಿ, ದೇವದಾಸಿ ಪದ್ಧತಿ, ವಿಧವಾ ಪದ್ಧತಿ ಮೊದಲಾದ ಸಮಾಜದ ಪಿಡುಗುಗಳಿಂದ ಆಕೆಯ ಬದುಕು ನಿಸ್ತೇಜವಾಗಿತ್ತು. ಈ ಸಂದರ್ಭದಲ್ಲಿ ಮಹಿಳೆಯರ ಬದುಕನ್ನು ಹಸನುಗೊಳಿಸಲು ಅನೇಕ ಮಹನೀಯರು ಪ್ರಯತ್ನಪಟ್ಟರು. ರಾಜರಾಮ ಮೋಹನರಾಯ್, ಕಸ್ತೂರ ಬಾ, ಈಶ್ವರಚಂದ್ರ ವಿದ್ಯಾ ಸಾಗರ್, ಜಸ್ಟೀಸ್ ಮಹದೇವ, ಗೋವಿಂದ ರಾನಡೆ, ಮಹರ್ಷಿ ಕರ್ವೆ, ಪಂಡಿತ ರಮಾಬಾಯಿ ಮೊದಲಾದವರು ಸ್ವಾತಂತ್ರ್ಯಪೂರ್ವದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಪ್ರಯತ್ನಪಟ್ಟರು. ಆದರೆ ಮಹಿಳೆಯರು ಅಂದಿನ ಸಮಾಜದ ಕಟ್ಟಳೆಗಳನ್ನು ಮೀರಿ ನಡೆಯಲು, ಸಾಮಾಜಿಕ ಬಂಧನಗಳಿಂದ ಮುಕ್ತಗೊಳ್ಳಲು ಸಾಧ್ಯವಾಗಿಲ್ಲ ಎಂಬ ಸಂಗತಿ ವಸಾಹತು ಕಾಲಘಟ್ಟದಲ್ಲಿನ ಸಾಮಾಜಿಕ ಚಿತ್ರಣದಿಂದ ತಿಳಿಯುತ್ತದೆ. ಈ ಕಾರಣಗಳಿಂದಾಗಿ ವಸಾಹತು ಕಾಲಘಟ್ಟದಲ್ಲಿ ಪ್ರವಾಸ ಕೃತಿಗಳ ಸಂಖ್ಯೆ ವಿರಳವಾಗಿದೆ.

ವಸಾಹತೋತ್ತರ ಕಾಲಘಟ್ಟದಲ್ಲಿ ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡಿದ ಬಳಿಕ ಸಮಾಜದಲ್ಲಿ ಮಧ್ಯಮ ವರ್ಗದ ಮಹಿಳೆಯ ಸ್ಥಾನಮಾನಗಳಲ್ಲಿ ಬದಲಾವಣೆ ಕಂಡುಬಂದಿತು. ಪುರುಷಪರವಾದ ಸಾಮಾಜಿಕ ಪದ್ಧತಿಗಳನ್ನು ಮೀರುವ ದಿಸೆಯಲ್ಲಿ ಅನೇಕ ಮಹಿಳೆಯರು ಚಿಂತಿಸತೊಡಗಿದರು. ಇದರ ಪರಿಣಾಮವಾಗಿ ಸ್ತ್ರೀಯರಿಗೆ ಕನಸಾಗಿದ್ದ ವಿದೇಶ ಪ್ರಯಾಣ ನನಸಾಗತೊಡಗಿತು. ಉನ್ನತ ಶಿಕ್ಷಣಕ್ಕಾಗಿ, ರಾಜತಾಂತ್ರಿಕ ವಿಷಯಗಳಿಗಾಗಿ, ಅನೇಕ ಸ್ತ್ರೀಯರು ವಿದೇಶ ಪ್ರಯಾಣ ಮಾಡತೊಡಗಿದರು. ಪ್ರವಾಸ ಕ್ಷೇತ್ರದಲ್ಲಿಯೂ ಮಹಿಳೆಯರು ಗುರುತಿಸಿಕೊಳ್ಳತೊಡಗಿದರು. ಈ ಅಧ್ಯಾಯದಲ್ಲಿ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಯುರೋಪ್ ದೇಶದ ಮಹಿಳೆಯರ ಸ್ಥಾನಮಾನಗಳೊಂದಿಗೆ ಹೋಲಿಸುತ್ತಾ, ತೌಲನಿಕ ದೃಷ್ಟಿಕೋನದಿಂದ ನೋಡಿರುವ ಪ್ರವಾಸ ಕೃತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಇದುವರೆಗೆ ಪ್ರಕಟವಾಗಿರುವ ಸುಮಾರು ನೂರಕ್ಕೂ ಅಧಿಕವಾದ ಯುರೋಪ್ ಪ್ರವಾಸ ಕೃತಿಗಳಲ್ಲಿ ಸುಮಾರು ೧೮ ಕೃತಿಗಳು ಲೇಖಕಿಯರಿಂದ ರಚಿತವಾಗಿವೆ. ಲೇಖಕರಿಂದ ನಿರೂಪಿತವಾಗಿರುವ ಕೃತಿಗಳಲ್ಲೂ ಸ್ತ್ರೀ ಸ್ಥಾನಮಾನಗಳ ಕುರಿತು ತೌಲನಿಕ ದೃಷ್ಟಿಕೋನವುಳ್ಳ ಅಭಿಪ್ರಾಯಗಳು ವ್ಯಕ್ತವಾಗಿವೆ. ಸಮಾಜದಲ್ಲಿ ಮಹಿಳೆಯ ಸ್ಥಾನಮಾನಗಳ ಬಗ್ಗೆ ಮತ್ತು ಮಹಿಳೆಯರ ಸ್ವಾತಂತ್ರ್ಯ ಹಾಗೂ ಸ್ವಾಯತ್ತ ಬದುಕಿನ ಬಗ್ಗೆ, ಎಲ್ಲಾ ಕೃತಿಗಳಲ್ಲೂ ಸಾಂದರ್ಭಿಕವಾಗಿ ಚರ್ಚಿಸಲಾಗಿದೆ. ಕೆಲವು ಕೃತಿಗಳು ಮಹಿಳಾ ಪರವಾದ ಧ್ವನಿಯನ್ನೇ ಪ್ರಮುಖವಾಗಿ ಪ್ರಕಟಿಸಿವೆ. ಈ ಬಗೆಯ ಕೃತಿಗಳನ್ನು ಅಧ್ಯಯನ ಮಾಡಲಾಗಿದೆ.

೬. ೧ ಕನ್ನಡದ ಮಹಿಳಾ ಯುರೋಪ್ ಪ್ರವಾಸ ಕೃತಿಗಳ ಚಾರಿತ್ರಿಕ ಅವಲೋಕನ

ಕನ್ನಡದಲ್ಲಿ ಮಹಿಳೆಯರಿಂದ ರಚಿತವಾಗಿರುವ ಯುರೋಪ್ ಪ್ರವಾಸ ಕೃತಿಗಳ ಚಾರಿತ್ರಿಕ ಅವಲೋಕನ ಮಾಡುವುದು ಈ ಉಪಶೀರ್ಷಿಕೆಯ ಉದ್ದೇಶವಾಗಿದೆ. ಭಾರತೀಯ ಸಮಾಜದಲ್ಲಿ ಮಹಿಳೆಗೆ ವಿಧಿಸಲಾಗಿದ್ದ ಕಟ್ಟು ನಿರ್ಬಂಧಗಳನ್ನು ಮೀರಿ ಕೆಲವು ಮಹಿಳೆಯರು ವಿದೇಶಗಳಿಗೆ ಪ್ರವಾಸ ತೆರಳಿ ಪ್ರವಾಸ ಕೃತಿಯನ್ನು ಬರೆದಿದ್ದಾರೆ. ಅಂತಹ ಕೃತಿಗಳನ್ನು ಇಲ್ಲಿ ಚಾರಿತ್ರಿಕ ದೃಷ್ಟಿಕೋನದ ಮೂಲಕ ವಿಶ್ಲೇಷಿಸಲಾಗುವುದು. ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಗೊಂಡ ಏಕೈಕ ಮಹಿಳಾ ಯುರೋಪ್ ಪ್ರವಾಸ ಕೃತಿ ರಾಜಕುಮಾರಿ ಚನ್ನಾಜಮ್ಮಣ್ಣಿ ಅವರು ಬರೆದಿರುವ 'ನನ್ನ ಪ್ರಪಂಚ ಸಂಚಾರ'. ಈ ಕೃತಿಯು ಮಹಿಳೆಯಿಂದ ರಚಿತವಾದ ಮೊದಲ ಯುರೋಪ್ ಪ್ರವಾಸ ಕೃತಿಯಾಗಿದೆ. ಮೈಸೂರು ರಾಜಮನೆತನದ ಮಹಾರಾಣಿ ರಾಜಕುಮಾರಿ ಚನ್ನಾಜಮ್ಮಣ್ಣಿ ೧೯೩೭ ರಲ್ಲಿ ಯುರೋಪ್ ಪ್ರವಾಸ ಮಾಡಿರುವ ಬಗ್ಗೆ ವಿವರಗಳು ದೊರಕುತ್ತವೆ.[೧]

ಭಾರತ ಸ್ವತಂತ್ರಗೊಂಡ ನಂತರ ಪ್ರಕಟವಾದ ಕನ್ನಡದ ಮೊದಲ ಮಹಿಳಾ ಯುರೋಪ್ ಪ್ರವಾಸ ಕೃತಿ ಚಂದ್ರಭಾಗಾದೇವಿ ಅವರು ಬರೆದಿರುವ 'ಗೆಜ್ಜೆಯ ಹೆಜ್ಜೆ ನುಡಿ'(೧೯೭೧).[೨] ಇದು ವಿಶ್ವ ಪರ್ಯಟನಾ ಕೃತಿಯಾಗಿದೆ. ಪತ್ರ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ. ಚಂದ್ರಭಾಗಾದೇವಿ ಮತ್ತು ಕೃಷ್ಣರಾವ್ ಕನ್ನಡಿಗ ದಂಪತಿಗಳು ತಮ್ಮ ನೃತ್ಯಕಲೆಯ ಪ್ರದರ್ಶನದ ಮೂಲಕ ಭಾರತೀಯ ನೃತ್ಯ ಪದ್ಧತಿಯ ವೈಶಿಷ್ಟ್ಯಗಳನ್ನು ವಿದೇಶಿಯರಿಗೆ ಪರಿಚಯಿಸುವ ಕಾರ್ಯ ಮಾಡಿರುವುದನ್ನು ಈ ಕೃತಿ ವಿವರಿಸಿದೆ. ವಿದೇಶಗಳಲ್ಲಿ ಸಂಚರಿಸುತ್ತಾ, ಸಂದರ್ಶಿಸಿದ ದೇಶಗಳ ಆಚಾರ ವಿಚಾರಗಳನ್ನು, ಪಡೆದ ಅನುಭವಗಳನ್ನು ತಮ್ಮ

ಕುಟುಂಬದವರಿಗೆ ಪತ್ರಗಳ ಮೂಲಕ ಬರೆದಿದ್ದಾರೆ. ಅವರು ಬರೆದ ಪತ್ರಗಳೇ ಮುಂದೆ ಕೃತಿಯ ರೂಪ ತಾಳಿದೆ. ಆದ್ದರಿಂದ ಈ ಕೃತಿಯಲ್ಲಿ ಕೌಟುಂಬಿಕ ಕ್ಷೇಮ ಸಮಾಚಾರದ ವಿವರಗಳು ಹೆಚ್ಚಾಗಿ ಬಂದಿದೆ.

ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಸರಕಾರವು ಮಹಿಳಾ ಸಬಲೀಕರಣಕ್ಕಾಗಿ ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಿತು. ಸ್ತ್ರೀ ಶಿಕ್ಷಣಕ್ಕೆ ಆದ್ಯತೆ, ವರದಕ್ಷಿಣೆ ಕಾಯಿದೆ ನಿಷೇಧ, ಬಾಲ್ಯವಿವಾಹ ನಿಷೇಧ, ವಿಧವಾ ಪುನರ್ ವಿವಾಹ ಕಾಯಿದೆ ಮೊದಲಾದವುಗಳನ್ನು ಜಾರಿ ಮಾಡಲಾಯಿತು. ಇವುಗಳ ಜೊತೆಗೆ ಅನೇಕ ಸಾಮಾಜಿಕ ಕಾರ್ಯಕರ್ತರು ಮಹಿಳಾ ಸಬಲೀಕರಣಕ್ಕಾಗಿ ಹೋರಾಟ ಮಾಡಿದರು. ಇದರಿಂದ ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ದೊರಕತೊಡಗಿತು. ಶಿಕ್ಷಣ ಪಡೆಯಲು ಮನೆಯಿಂದ ಹೊರಗಡೆ ಬರಲು ಇದ್ದ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ಕೆಲವು ಮಹಿಳೆಯರು ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡರು. ಸಮಾಜದಿಂದ ಸ್ತ್ರೀಯರ ಮೇಲೆ ಹೇರಲಾಗಿದ್ದ ಸಂಪ್ರದಾಯ, ಆಚರಣೆಗಳನ್ನು ಮೀರಲಾಯಿತು. ಮಹಿಳೆಯರು ಶಿಕ್ಷಣವನ್ನು ಪಡೆಯಲು ವಿದೇಶಕ್ಕೆ ಹೋಗಲು ಉದ್ಯುಕ್ತರಾದರು. ಇಂದಿರಾಗಾಂಧಿ, ಕಲ್ಪನಾಚಾವ್ಲ, ಲೀಲಾ ಸೇಠ್, ಮೀರಾ ನಾಯರ್, ಇಂದಿರಾನೂಯಿ ಮೊದಲಾದವರು ವಿದೇಶದಲ್ಲಿ ಶಿಕ್ಷಣವನ್ನು ಪಡೆದಿದ್ದಾರೆ.

ಈ ಕಾಲಘಟ್ಟದಲ್ಲಿ ಇಂದಿರಾಗಾಂಧಿ ಭಾರತದ ಪ್ರಧಾನಿಯಾಗಿ ದಿಟ್ಟತನದಿಂದ ಸರಕಾರವನ್ನು ನಡೆಸಿ ದೇಶದ ಮಹಿಳೆಯರಿಗೆ ಸ್ಫೂರ್ತಿಯಾದರು. ಭಾರತೀಯ ಮಹಿಳಾ ಸಮಾಜದ ಪರಿವರ್ತನೆಯಲ್ಲಿ ಇಂದಿರಾಗಾಂಧಿ ಅವರ ಪಾತ್ರ ಹಿರಿದಾದುದು. ಇದು ಆಕೆಯು ಗಳಿಸಿದ ಶಿಕ್ಷಣದಿಂದ ಸಾಧ್ಯವಾಯಿತು. ಶಿಕ್ಷಣವನ್ನು ಪಡೆಯುವುದರ ಅಗತ್ಯತೆಯನ್ನು ಅರಿತ ಸಮಾಜವು ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡಲು ಮುಂದಾಯಿತು. ಮಹಿಳೆಯರು ವಿವಿಧ ರಂಗಗಳಲ್ಲಿ ಪ್ರಗತಿ ಸಾಧಿಸ ತೊಡಗಿದರು. 'ತಾನು ಗಂಡಿಗಿಂತ ಕಡಿಮೆಯೇನಿಲ್ಲ, ಪ್ರಯತ್ನಪಟ್ಟರೆ ಗಂಡಿಗೆ ಸಮಾನವಾದ ಸ್ಥಾನಮಾನವನ್ನು ಗಳಿಸಬಹುದು' ಎಂಬ ಮನೋಭಾವವನ್ನು ತಾಳಿದರು. ಇದರ ಫಲವಾಗಿ ಅನೇಕ ಮಹಿಳೆಯರು ಯುರೋಪ್ ಪ್ರವಾಸಕ್ಕೆ ತೆರಳಲು ಮುಂದಾದರು.

ಅನುಪಮಾ ನಿರಂಜನ ಅವರು ೧೯೭೭ರಲ್ಲಿ ಅಂತರರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ನಲ್ಲಿ ಭಾಗವಹಿಸಲು ಜರ್ಮನಿಯ ರಾಜಧಾನಿ ಬರ್ಲಿನ್‌ಗೆ ತೆರಳಿದ್ದಾರೆ. ಅಲ್ಲಿ ತಾವು ಪಡೆದ ಅನುಭವಗಳನ್ನು ವಿವರವಾಗಿ 'ಸ್ನೇಹಯಾತ್ರೆ' ಪ್ರವಾಸ ಕೃತಿಯಲ್ಲಿ ದಾಖಲಿಸಿದ್ದಾರೆ. ಇದೊಂದು ಸ್ತ್ರೀವಾದಿ ಪ್ರವಾಸ ಕೃತಿಯಾಗಿದೆ. ಅಭಿಪ್ರಾಯಗಳು ಸ್ತ್ರೀ ಕೇಂದ್ರಿತ ನೆಲೆಯಲ್ಲಿ ವ್ಯಕ್ತವಾಗಿವೆ. ಪ್ರಪಂಚದಲ್ಲಿನ ವಿವಿಧ ದೇಶದ ಮಹಿಳೆಯರ ಸ್ಥಾನಮಾನಗಳ ಬಗ್ಗೆ ತಿಳಿದುಕೊಂಡಿದ್ದಲ್ಲದೆ, ವಿಶೇಷವಾಗಿ ಯುರೋಪಿನ ದೇಶಗಳಲ್ಲಿನ ಮಹಿಳೆಯರ ಬದುಕಿನ ವಿವರಗಳನ್ನು ತಿಳಿದು, ಭಾರತೀಯ ಮಹಿಳೆಯರ ಬದುಕಿನೊಂದಿಗೆ ಹೋಲಿಸಿದ್ದಾರೆ. ವೈವಾಹಿಕ ಜೀವನ, ಕುಟುಂಬ, ಮಹಿಳಾ ಶಿಕ್ಷಣ, ಮಹಿಳಾ ಸಬಲೀಕರಣ, ಉದ್ಯೋಗದಲ್ಲಿ ಮಹಿಳೆಯ ಸ್ಥಾನ, ಸಾಮಾಜಿಕವಾಗಿ ಮಹಿಳೆಯ ಸ್ಥಾನಮಾನ ಹೀಗೆ ಅನೇಕ ಮಹಿಳಾ ಸಂಬಂಧಿತ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ.

ಭಾರತೀಯ ಸಮಾಜದಲ್ಲಿ ಉನ್ನತ ವರ್ಗದ ಮಹಿಳೆಯರು ಶಿಕ್ಷಣವನ್ನು ಗಳಿಸಲು ಮುಂದಾದರೂ, ಮಧ್ಯಮ ವರ್ಗದ ಹೆಣ್ಣು ಮಕ್ಕಳು ಮುಕ್ತವಾಗಿ ಶಿಕ್ಷಣವನ್ನು ಗಳಿಸುವುದು ಸಾಧ್ಯವಾಗಲಿಲ್ಲ. ಮಧ್ಯಮ ವರ್ಗದ ಕುಟುಂಬಗಳಲ್ಲಿ ಪೋಷಕರು ಶಿಕ್ಷಣಕ್ಕಾಗಿ ಹೆಣ್ಣು ಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸಲು

ಸಿದ್ಧರಿರಲಿಲ್ಲ. ಸಮಾಜವು ಕೂಡ ಸ್ತ್ರೀಯರು ಶಿಕ್ಷಣವನ್ನು ಪಡೆದುಕೊಂಡು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಮಹಿಳಾ ಸಬಲೀಕರಣವು ನಿರೀಕ್ಷೆಯ ಮಟ್ಟಕ್ಕೆ ಆಗಲಿಲ್ಲ. ಆದಕಾರಣ ಯುರೋಪ್ ಪ್ರವಾಸಕ್ಕೆ ತೆರಳಿರುವವರಲ್ಲಿ ಪುರುಷರ ಸಂಖ್ಯೆಯೇ ಹೆಚ್ಚಾಗಿತ್ತು. ಭಾರತ ಸ್ವತಂತ್ರಗೊಂಡು ಮೂವತ್ತಾರು ವರ್ಷಗಳು ಕಳೆದ ಬಳಿಕ (೧೯೮೪ರವರೆಗೆ) ಪ್ರಕಟಗೊಂಡ ಯುರೋಪ್ ಪ್ರವಾಸ ಕೃತಿಗಳಲ್ಲಿ ಮಹಿಳೆಯರಿಂದ ರಚಿತವಾದ ಕೃತಿಗಳ ಸಂಖ್ಯೆ ಕೇವಲ ಮೂರು. ಅದೇ ಸಮಯದಲ್ಲಿ ಪುರುಷರಿಂದ ರಚಿತವಾದ ಕೃತಿಗಳ ಸಂಖ್ಯೆ ಮೂವತ್ತೆಂಟು.[೩] ಈ ಅಂಕಿ ಅಂಶಗಳ ಆಧಾರದ ಮೇಲೆ ವಿದೇಶ ಪ್ರವಾಸಕ್ಕೆ ತೆರಳಿದ ಪುರುಷರ ಪ್ರಮಾಣವನ್ನು ಅದೇ ಕಾಲಘಟ್ಟದಲ್ಲಿ ವಿದೇಶ ಪ್ರವಾಸ ಮಾಡಿದ ಮಹಿಳೆಯರ ಪ್ರಮಾಣದೊಂದಿಗೆ ಹೋಲಿಸಿ ನೋಡಿದಾಗ ಭಾರತದಲ್ಲಿನ ಮಹಿಳೆಯರ ಅಂದಿನ ಸ್ಥಿತಿಗತಿಯ ಅರಿವಾಗುತ್ತದೆ. ಶಿಕ್ಷಣವಿಲ್ಲದೆ, ಸಾಮಾಜಿಕ ಕಟ್ಟುಪಾಡುಗಳ ಬಂಧನದಲ್ಲಿದ್ದ ಮಹಿಳೆಯರು ಯುರೋಪ್ ಪ್ರವಾಸ ಮಾಡಲು ಸಾಧ್ಯವಾಗಿಲ್ಲ ಎಂಬ ತಿಳಿವನ್ನು ಈ ಅಂಕಿ ಅಂಶಗಳು ಪ್ರುತಪಡಿಸುತ್ತವೆ.

ಅನುಪಮಾ ನಿರಂಜನ ಅವರು 'ಸ್ನೇಹಯಾತ್ರೆ' ಕೃತಿಯು ಪ್ರಕಟವಾದ ಏಳು ವರ್ಷಗಳ ಬಳಿಕ ೧೯೮೪ರಲ್ಲಿ ಮತ್ತೊಮ್ಮೆ ಯುರೋಪ್ ಪ್ರವಾಸ ಮಾಡಿದ್ದಾರೆ. ಈ ಪ್ರವಾಸದ ಅನುಭವಗಳನ್ನು 'ಅಂಗೈಯಲ್ಲಿ ಯೂರೊ ಅಮೆರಿಕ' ಕೃತಿಯಲ್ಲಿ ದಾಖಲಿಸಿದ್ದಾರೆ. ಒಮ್ಮೆ ಯುರೋಪ್ ದೇಶಗಳನ್ನು ಸುತ್ತಿ ಬಂದ ಬಳಿಕ ಅದರ ಆಗು ಹೋಗುಗಳನ್ನು ತಿಳಿದ ಮೇಲೆ ಎರಡನೇ ಬಾರಿ ನಿಯೋಜಿತ ಪ್ರವಾಸದ ಮೂಲಕ ಯುರೋಪ್ ಮತ್ತು ಅಮೆರಿಕ ಖಂಡದ ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಈ ಕೃತಿಯಲ್ಲಿಯೂ ಭಾರತೀಯ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು, ಅಮೆರಿಕಾ ಮತ್ತು ಯುರೋಪ್ ದೇಶಗಳಲ್ಲಿನ ಮಹಿಳೆಯರ ಬದುಕಿನ ಸ್ಥಿತಿಗಳೊಂದಿಗೆ ಹೋಲಿಸಿದ್ದಾರೆ. ಹೀಗೆ ಹೋಲಿಸುವಾಗ ಭಾರತೀಯ ಹೆಣ್ಣು ಮಕ್ಕಳ ದುಸ್ಥಿತಿಗೆ ಮರುಗಿದ್ದಾರೆ. ಅದೇ ಸಂದರ್ಭದಲ್ಲಿ ಯುರೋಪಿನ ಮಹಿಳೆಯರಿಗೆ ದಕ್ಕಿರುವ ಸ್ವಾತಂತ್ರ್ಯವು ಸ್ವೇಚ್ಛಾ ಪ್ರವೃತ್ತಿಗೆ ಹೇಗೆ ಕಾರಣವಾಗುತ್ತಿದೆ ಎಂಬುದನ್ನೂ ಗುರುತಿಸಿದ್ದಾರೆ. ಮಹಿಳೆಯರು ಕುಡಿತಕ್ಕೆ ದಾಸರಾಗಿರುವುದು, ಧೂಮಪಾನದ ಚಟಕ್ಕೆ ಬಿದ್ದಿರುವುದನ್ನು ಉಲ್ಲೇಖಿಸಿದ್ದಾರೆ. ಯುರೋಪಿನ ದೇಶಗಳಲ್ಲಿಯೂ ಸ್ತ್ರೀ ಶೋಷಣೆ ನಡೆಯುತ್ತಿರುವ ಬಗ್ಗೆ ಉಲ್ಲೇಖಿಸಿದ್ದಾರೆ. ಅಂಗೈಯಲ್ಲಿ ಯುರೋ ಅಮೆರಿಕ ಕೃತಿಯ ನಿರೂಪಣೆಯು ಪುರುಷ ವಿರೋಧಿ ನಿಲುವು ವ್ಯಕ್ತವಾಗಿಲ್ಲ. ಬದಲಿಗೆ ಯುರೋಪ್ ಮತ್ತು ಅಮೆರಿಕಾದ ಮಹಿಳೆಯರಂತೆ ಧನಾತ್ಮಕ ಮನೋಭಾವಗಳನ್ನು ಭಾರತೀಯ ಮಹಿಳೆಯರು ಹೊಂದಬೇಕು ಎಂಬ ನಿಲುವು ವ್ಯಕ್ತವಾಗಿರುವುದನ್ನು ಗುರುತಿಸಲಾಗಿದೆ.

ಅನುಪಮಾ ನಿರಂಜನ ಅವರ ಎರಡೂ ಮಹಿಳಾ ಯುರೋಪ್ ಪ್ರವಾಸ ಕೃತಿಗಳನ್ನು ಗಮನಿಸಿದಾಗ ವೈಚಾರಿಕ ಭಿನ್ನತೆ ಇರುವುದು ತಿಳಿಯುತ್ತದೆ. ಮೊದಲ ಕೃತಿ 'ಸ್ನೇಹಯಾತ್ರೆ'ಯಲ್ಲಿ ಲೇಖಕಿಯು ಮಹಿಳೆಯರ ಅಂದಿನ ಸ್ಥಿತಿಗತಿಗೆ ಪುರುಷ ವರ್ಗವೇ ಕಾರಣ ಎಂಬ ಧೋರಣೆಯನ್ನು ಹೊಂದಿದ್ದಾರೆ. ಅದಕ್ಕೆ ಪುರುಷ ವರ್ಗವು ರಚಿಸಿರುವ ಕಟ್ಟಳೆಗಳನ್ನು ಮೀರಿ ಮಹಿಳೆಯು ಬೆಳೆಯಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದ್ದಾರೆ. ಮಹಿಳೆಯನ್ನು ಪುರುಷ ಸಮಾಜ ಕೇವಲ ಭೋಗದ ವಸ್ತುವಾಗಿ ನೋಡುತ್ತಿದೆ, ಅದರ ವಿರುದ್ಧ ವಿಶ್ವದ ಮಹಿಳೆಯರೆಲ್ಲಾ ಒಂದಾಗಬೇಕು ಎಂಬ ದೂರದೃಷ್ಟಿತ್ವವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರ ಎರಡನೇ ಯುರೋಪ್ ಪ್ರವಾಸ ಕೃತಿ 'ಅಂಗೈಯಲ್ಲಿ ಯೂರೊ ಅಮೆರಿಕ'ದಲ್ಲಿ ಮೊದಲ ಕೃತಿಯಲ್ಲಿನ ಬರವಣಿಗೆಯ ಬಿರುಸು ಕಾಣಬರುವುದಿಲ್ಲ. ಇಲ್ಲಿ ಚಿಂತನೆಗಳಲ್ಲಿ ವ್ಯತ್ಯಾಸ ಇದೆ. ಪುರುಷ ಸಮಾಜವನ್ನು ದೂಷಿಸುವ ಬದಲು

ಮಹಿಳೆಯೇ ಬದಲಾಗಬೇಕೆಂಬ ಪ್ರಬುದ್ಧ ಚಿಂತನೆ ಕಾಣಸಿಗುತ್ತದೆ. ಈ ಬದಲಾವಣೆಗೆ ಕಾರಣವನ್ನು ಹುಡುಕುವಾಗ ಈ ಕೆಳಗಿನ ಅಂಶಗಳು ಪ್ರಭಾವ ಬೀರಿರುವ ಸಾಧ್ಯತೆಗಳಿರುವುದನ್ನು ಊಹಿಸಬಹುದು. ಅನುಪಮಾ ಅವರ ಎರಡು ಕೃತಿಗಳ ನಡುವೆ ಏಳು ವರ್ಷಗಳ ಅಂತರವಿದೆ. ಈ ಅವಧಿಯಲ್ಲಿ ಸಮಾಜದಲ್ಲಿ ಅನೇಕ ಬದಲಾವಣೆಗಳಾಗಿರುತ್ತದೆ. ಪುರುಷರ ದೃಷ್ಟಿಕೋನವು ಬದಲಾಗಿರುತ್ತದೆ. ಪುರುಷರೇ ಮಹಿಳೆಯರ ಪರವಾಗಿ ದನಿ ಎತ್ತುವ ಸಂದರ್ಭಗಳು ಘಟಿಸಿದ ಸಾಧ್ಯತೆಗಳಿರುತ್ತವೆ. ಈ ಏಳು ವರ್ಷಗಳ ಅವಧಿಯಲ್ಲಿ ಮೇಲೆ ತಿಳಿಸಲಾದ ಅಂಶಗಳು ಲೇಖಕಿಯ ಮೇಲೆ ಪ್ರಭಾವ ಬೀರಿ ಪುರುಷರ ಪರವಾದ ಧೋರಣೆ ಮೃದುವಾಗಿರಲು ಕಾರಣವಾಗಿರಬಹುದು. 'ಸ್ನೇಹಯಾತ್ರೆ' ಕೃತಿಯು ಮಹಿಳಾ ಸಮಾವೇಶದಲ್ಲಿ ಭಾಗವಹಿಸಿದ ಮೊದಲ ಪ್ರವಾಸದ ವಿವರವಾಗಿದೆ. ಆಗ ಸಹಜವಾಗಿ ಮಹಿಳಾ ಪರವಾದ ಧ್ವನಿ ಗಟ್ಟಿ ಆಗಿರುತ್ತದೆ. ಎರಡನೇ ಪ್ರವಾಸವು ಸ್ವಯಂ ಖರ್ಚಿನಲ್ಲಿ ಏರ್ಪಟ್ಟಿತ್ತು. ಲೇಖಕಿಯ ಗಂಡ, ತಂದೆ, ಮಗ ಈ ಪುರುಷರೂ ಎರಡನೇ ಪ್ರವಾಸ ಸಾಧ್ಯವಾಗಲು ಕಾರಣಕರ್ತರಾಗಿರುತ್ತಾರೆ. ಈ ಅಂಶವು ಲೇಖಕಿಯ ಮೇಲೆ ಧನಾತ್ಮಕ ಪ್ರಚೋದನೆಗೆ ಕಾರಣವಾಗಿರಬಹುದು ಎನಿಸುತ್ತದೆ. ಅನುಪಮಾ ನಿರಂಜನ ಅವರ ಎರಡು ಕೃತಿಗಳ ಮುಖಪುಟಗಳ ಚಿತ್ರಗಳನ್ನು ಗಮನಿಸಿದಾಗ ಅವರ ವಿಚಾರಗಳಲ್ಲಿ ಬದಲಾವಣೆಯಾಗಿರುವುದನ್ನು ಗುರುತಿಸಬಹುದಾಗಿದೆ. ಸ್ನೇಹಯಾತ್ರೆ ಕೃತಿಯ ಮುಖಪುಟದಲ್ಲಿ ಚಿಂತನೆಯಲ್ಲಿ ಮಗ್ನರಾಗಿರುವ ಸ್ತ್ರೀಯ ಚಿತ್ರವಿದ್ದರೆ, ಅಂಗೈಯಲ್ಲಿ ಯೂರೊ ಅಮೆರಿಕ ಕೃತಿಯ ಮುಖ ಪುಟದ ಮೇಲೆ ಚಿತ್ರಗಳಿಲ್ಲದ ಖಾಲಿ ಜಾಗವಿದೆ. ಕೃತಿಯನ್ನು ಓದಿ ಕಲ್ಪಿಸಿಕೊಂಡು ನಾವು ಲೇಖಕಿಯ ಮನೋಧೋರಣೆ ಹೇಗೆ ಎಂದು ಕಲ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವಂತಿದೆ.

೧೯೮೮ರಲ್ಲಿ ಅನುಪಮಾ ನಿರಂಜನ ಅವರ 'ಅಂಗೈಯಲ್ಲಿ ಯೂರೊ ಅಮೆರಿಕ' ಪ್ರವಾಸ ಕೃತಿ ಪ್ರಕಟವಾದ ನಾಲ್ಕು ವರ್ಷಗಳ ಬಳಿಕ ೧೯೮೮ರಲ್ಲಿ ರಾಜಮಣಿ ನಾಗರಾಜರಾವ್ ಅವರ 'ಸುವರ್ಣ ಮಧುಚಂದ್ರ' ಕೃತಿ ಪ್ರಕಟವಾಗಿದೆ. ಇದು ರಾಜಮಣಿ ಮತ್ತು ಅವರ ಪತಿ ನಾಗರಾಜರಾವ್ ಅವರ ಐವತ್ತನೇ ವರ್ಷದ ಸುವರ್ಣ ವಿವಾಹ ವಾರ್ಷಿಕ ಸಂದರ್ಭದ ನೆನಪಿಗಾಗಿ ವಿದೇಶ ಪ್ರವಾಸ ಮಾಡಿದ ವಿವರಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ದಾಂಪತ್ಯದ ಅನ್ಯೋನ್ಯತೆ, ಮತ್ತು ತುಂಬು ಬದುಕಿನ ಸರಸತ್ಮಾಕ ವಿವರಗಳನ್ನು ನಿರೂಪಿಸಲಾಗಿದೆ.

೧೯೮೯ರಲ್ಲಿ ಹೋ. ಶ್ರೀನಿವಾಸಯ್ಯ ಅವರ 'ಜಯಶ್ರೀ ಕಂಡ ಜಗತ್ತು' ಕೃತಿಯು ಸ್ತ್ರೀ ಕೇಂದ್ರಿತ ನಿರೂಪಣೆಯನ್ನು ಹೊಂದಿರುವಂತೆ ಶೀರ್ಷಿಕೆಯನ್ನು ನೀಡಲಾಗಿದೆ. ಆದರೆ ಪುರುಷಕೇಂದ್ರಿತ ಧೋರಣೆಗಳನ್ನೇ ವ್ಯಕ್ತಪಡಿಸಿದೆ. ನಿರೂಪಕರು ಗಾಂಧೀಜಿ ಅವರ ಅನುಯಾಯಿ. ಸ್ತ್ರೀಯರನ್ನು ಗೌರವದಿಂದ ಕಾಣುವ ಮನೋಭಾವದವರು. ಆದ್ದರಿಂದ ಕೃತಿಯನ್ನು ಹೆಣ್ಣಿನ ದೃಷ್ಟಿಕೋನದಲ್ಲಿ ಜಗತ್ತು ನೋಡುವಂತೆ ಶೀರ್ಷಿಕೆ ನೀಡಿದ್ದರೂ, ಸ್ತ್ರೀಕೇಂದ್ರಿತ ದೃಷ್ಟಿಕೋನದಿಂದ ನಿರೂಪಿಸಿಲ್ಲ. ಜಯಶ್ರೀ ಕಂಡ ಜಗತ್ತು ಕೃತಿಯ ಮೂಲ ಸಂವೇದನೆ ಸಾಮಾಜಿಕ ವಿಮರ್ಶೆ. ಆದ್ದರಿಂದ ಈ ಕೃತಿಯನ್ನು ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧೯೯೦ ರಿಂದ ೨೦೦೦ದ ಕಾಲಘಟ್ಟದಲ್ಲಿ ಭಾರತೀಯ ಸಮಾಜದಲ್ಲಿ ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿತ್ತು. ಆದ್ದರಿಂದ ಶಿಕ್ಷಿತ ಮಹಿಳೆಯರ ಸಂಖ್ಯೆಯಲ್ಲಿ ಏರಿಕೆ ಕಂಡಿತ್ತು. ಮಹಿಳೆಯರ ಸಬಲೀಕರಣದೊಂದಿಗೆ ಕುಟುಂಬ ಹಾಗೂ ಸಮಾಜದ ಏಳಿಗೆ ಸಾಧ್ಯ ಎಂಬ ಮನೋಭಾವ ನಿಧಾನವಾಗಿ

ಬಲಿಯತೊಡಗಿತ್ತು. ಪರಿಣಾಮವಾಗಿ ಮಹಿಳೆಯರ ಯುರೋಪ್ ಪ್ರವಾಸ ಕೃತಿಗಳ ಸಂಖ್ಯೆಯಲ್ಲಿ ಏರಿಕೆಯಾಯಿತು. ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಅನೇಕ ಮಹಿಳೆಯರು ಯುರೋಪ್ ಪ್ರವಾಸಕ್ಕೆ ತೆರಳಿ ಕೃತಿಗಳನ್ನು ರಚಿಸಿದ್ದಾರೆ. ಭಾರತ ಸ್ವಾತಂತ್ರ್ಯ ಪಡೆದ ನಂತರ ನಲವತ್ತು ವರ್ಷಗಳಲ್ಲಿ ಕನ್ನಡದಲ್ಲಿ ಮೂರು ಮಹಿಳಾ ಯುರೋಪ್ ಪ್ರವಾಸ ಕೃತಿ ಪ್ರಕಟವಾದರೆ; ೧೯೯೦ ರಿಂದ ೨೦೦೦ದ ಅವಧಿಯಲ್ಲಿ ಐದು ಪ್ರವಾಸ ಕೃತಿಗಳು ಪ್ರಕಟವಾಗಿವೆ. ಇದೇ ಅವಧಿಯಲ್ಲಿ ಪುರುಷರಿಂದ ರಚಿತವಾದ ಪ್ರವಾಸ ಕೃತಿಗಳ ಸಂಖ್ಯೆ ಏಳು.[೩] ಸ್ತ್ರೀಕೇಂದ್ರಿತ ಚಿಂತನೆಯ ನೆಲೆಯಲ್ಲಿ ಇದೊಂದು ಕ್ರಾಂತಿಕಾರಿಯಾದ ಬದಲಾವಣೆಯಾಗಿದೆ. ಸಮಾಜಕ್ಕೆ ಒಂದು ಸಂದೇಶವನ್ನು ನೀಡಿದೆ. ಜೊತೆಗೆ ಸಮಕಾಲೀನ ಮಹಿಳೆಯರಿಗೆ ಪ್ರೇರಣೆಯಾಗಿದೆ. ಈ ಅಂಕಿಅಂಶಗಳು ಮಹಿಳೆಯರು ವಿದೇಶಗಳಿಗೆ ಹೋಗುತ್ತಿರುವ ಪ್ರಮಾಣದಲ್ಲಿ ಏರಿಕೆ ಆಗಿರುವುದನ್ನು ಸೂಚಿಸುತ್ತದೆ. ಮತ್ತು ಮಹಿಳೆಯರು ಪ್ರವಾಸ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿರುವುದನ್ನು ಸೂಚಿಸುತ್ತದೆ.[೪]

೧೯೯೦ರ ದಶಕದಲ್ಲಿ ಮಹಿಳೆಯರು ಬರೆದಿರುವ ಯುರೋಪ್ ಪ್ರವಾಸ ಕೃತಿಗಳು ಸಾಹಿತ್ಯದ ದೃಷ್ಟಿಯಲ್ಲಿ ಉತ್ಕೃಷ್ಟ ಕೃತಿಗಳಾಗಿವೆ. 'ಸುವರ್ಣ ಮಧುಚಂದ್ರ' ಕೃತಿಯ ಬಳಿಕ ಲತಾಗುತ್ತಿ ಅವರ 'ಯುರೋ ನಾಡಿನಲ್ಲಿ'(೧೯೯೩) ಕೃತಿ ಪ್ರಕಟವಾಯಿತು. ಈ ಕೃತಿಯು ೧೯೯೦ರ ದಶಕದ ಮೊದಲ ಮಹಿಳಾ ಯುರೋಪ್ ಪ್ರವಾಸ ಕೃತಿಯಾಗಿದೆ. ಕೃತಿಯು ದಂಪತಿಗಳು ಯುರೋಪ್ ದೇಶಗಳನ್ನು ಸುತ್ತಿದ ಅನುಭವಗಳ ವಿವರಗಳನ್ನು ಹೊಂದಿದೆ. ವಿದೇಶಗಳಿಗೆ ದಂಪತಿಗಳು ಇಬ್ಬರೇ ಪ್ರವಾಸ ಹೋಗಿರುವ ಬಗ್ಗೆ ಕೃತಿಯ ಮುನ್ನುಡಿಯನ್ನು ಬರೆದಿರುವ 'ಎನ್ಕೆ' ಅವರು 'ಸಾಹಸಮಯ ಜೀವನ' ಎಂದು ಬಣ್ಣಿಸಿದ್ದಾರೆ. ಮಹಿಳಾ ನೆಲೆಯಲ್ಲಿ ಗ್ರಹಿಸುವಾಗ ದಂಪತಿಗಳಿಬ್ಬರೇ ವಿದೇಶ ಪ್ರವಾಸಕ್ಕೆ ತೆರಳಿರುವುದು 'ಸಾಹಸ' ಎಂದು ಬಣ್ಣಿಸಿರುವುದರಲ್ಲಿ ಉತ್ಪ್ರೇಕ್ಷೆಯಿಲ್ಲ. 'ಯುರೋ ನಾಡಿನಲ್ಲಿ' ಕೃತಿಯು ಯುರೋಪಿನ ಬಹುತೇಕ ದೇಶಗಳನ್ನು ಸ್ತ್ರೀ ದೃಷ್ಟಿಕೋನದಲ್ಲಿಯೇ ವಿವರಿಸಿರುವುದು ಕಂಡುಬರುತ್ತದೆ. ಯುರೋಪಿನ ರಾಷ್ಟ್ರಗಳು ಸಾಮಾಜಿಕವಾಗಿ ಸ್ತ್ರೀಯನ್ನು ಪುರುಷನಿಗೆ ಸಮಾನ ಎಂಬ ದೃಷ್ಟಿಕೋನದಲ್ಲಿ ನೋಡುತ್ತವೆ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರ ಜೊತೆಗೆ ಲೇಖಕಿಯು ತಮ್ಮ ದಾಂಪತ್ಯದ ರಸ ನಿಮಿಷಗಳನ್ನು ಸಹೃದಯರೊಂದಿಗೆ ಹಂಚಿಕೊಳ್ಳುತ್ತಾರೆ. ಹೀಗೆ ಹಂಚಿಕೊಳ್ಳುವಾಗಲೇ ಭಾರತೀಯ ನಾರಿಯ ಮನೋಭಾವಗಳನ್ನು ಅವ್ಯಕ್ತ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ.

ದೇವಕಿ ಮೂರ್ತಿ ಅವರು 'ಯೂರೋ ಅಮೆರಿಕದ ಇಣುಕು ನೋಟ'(೧೯೯೪) ಎಂಬ ಎರಡು ಖಂಡಗಳ ಪ್ರವಾಸ ಕಥನ ಬರೆದಿದ್ದಾರೆ. ಇದೊಂದು ಸರಳ ಕಥಾನಕವಾಗಿದೆ. ನಿಯೋಜಿತ ಪ್ರವಾಸದ ಮೂಲಕ ದೇವಕಿ ಮೂರ್ತಿ ಅವರು ಪತಿಯೊಂದಿಗೆ ಪ್ರವಾಸ ಮಾಡಿದ್ದಾರೆ. ಮಹಿಳಾ ದೃಷ್ಟಿಕೋನದಲ್ಲಿಯೇ ಪ್ರವಾಸದ ಅನುಭವಗಳನ್ನು ವಿವರಿಸಿದ್ದಾರೆ. ಸಾಧ್ಯವಿರುವ ಕಡೆಯಲ್ಲಿ ಭಾರತೀಯ ಸ್ತ್ರೀಯರ ಬದುಕಿನೊಂದಿಗೆ ತಾವು ನೋಡಿದ ಯುರೋಪ್ ಮತ್ತು ಅಮೆರಿಕ ಸ್ತ್ರೀಯರ ಬದುಕಿನ ಚಿತ್ರಣಗಳನ್ನು ತುಲನೆ ಮಾಡಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಲಿಂಗ ತಾರತಮ್ಯ ಇಲ್ಲದ ಸಮಾಜ ನಿರ್ಮಾಣವಾಗಬೇಕೆಂಬ ಆಕಾಂಕ್ಷೆಯನ್ನು ವ್ಯಕ್ತಪಡಿಸಿದ್ದಾರೆ.

ಇಪ್ಪತ್ತನೇಯ ಶತಮಾನದ ಕೊನೆಯ ವರ್ಷ(೧೯೯೯) ಮತ್ತು ಇಪ್ಪತ್ತೊಂದನೇಯ ಶತಮಾನದ ಪ್ರಾರಂಭದ ದಶಕವು (೨೦೦೧-೧೦) ಮಹಿಳಾ ಪರವಾದ ದನಿಗೆ ಒಂದು ಹೊಸ ರೂಪವನ್ನು ನೀಡಿದ

ಕಾಲಘಟ್ಟವಾಗಿದೆ. ೧೯೯೯ರ ವರ್ಷ ಮಹಿಳೆಯರಿಂದ ರಚಿತವಾದ ಕನ್ನಡದ ಯುರೋಪ್ ಪ್ರವಾಸ ಕೃತಿಗಳು ಸ್ತ್ರೀವಾದಿ ವಿಮರ್ಶೆಗೆ ಹೊಸ ಆಯಾಮವನ್ನು ನೀಡಿತು. ನೇಮಿಚಂದ್ರ ಮತ್ತು ಹೇಮಲತಾ ಮಹಿಷಿ ಅವರ ಪ್ರವಾಸ ಕೃತಿಗಳು ಈ ಹೆಗ್ಗಳಿಕೆಗೆ ಬಾಧ್ಯವಾಗಿವೆ. ಲೇಖಕಿಯರಿಬ್ಬರೇ ಭಾಷೆ ಬರದ ದೇಶದಲ್ಲಿ ಯಾರಿಗೂ ಹೆದರದೆ, ತಮಗೆದುರಾದ ಯಾವ ಸಂಕಷ್ಟಗಳಿಗೂ ಜಗ್ಗದೆ ಧೈರ್ಯದಿಂದ ಯುರೋಪಿನ ಅನೇಕ ದೇಶಗಳನ್ನು ಸುತ್ತಿ ಬಂದಿದ್ದಾರೆ. ಹೆಂಗಣ್ಣಿನಿಂದ ಜಗತ್ತನ್ನು ಕಂಡು ಭಾರತೀಯ ಮಹಿಳೆಯರ ದಾಸ್ಯ ಮನೋಭಾವದ ಬದುಕನ್ನು ಪ್ರಶ್ನಿಸಿದ್ದಾರೆ. ಮಹಿಳೆಯರು ಸಾಮಾಜಿಕ ಬಂಧನಗಳಿಂದ ಮುಕ್ತರಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಪ್ರವಾಸ ಕಾಲದಲ್ಲಿ ಗಂಡಿನ ನೆರವು ಇಲ್ಲದೆ ಪ್ರಪಂಚದ ಯಾವುದೇ ದೇಶಕ್ಕೆ ಪ್ರವಾಸ ಮಾಡಲು ಸಾಧ್ಯ ಎಂಬುದನ್ನು ನಿರೂಪಿಸಿದ್ದಾರೆ. ತಮ್ಮ ಸಾಹಸಗಾಥೆಯ ಪ್ರವಾಸದ ಅನುಭವಗಳನ್ನು ನವೀನ ನಿರೂಪಣೆಯ ಶೈಲಿಯ ಮೂಲಕ ಸಹೃದಯರಿಗೆ ಮನಮುಟ್ಟುವಂತೆ ಬರೆದಿದ್ದಾರೆ. ಇವರ ಕೈಯಲ್ಲಿ ಪ್ರವಾಸ ಕಥನಗಳು ಕಾದಂಬರಿಯ ಸ್ವರೂಪವನ್ನು ಪಡೆದಿದ್ದಾವೆ. ಓದಿಸಿಕೊಂಡು ಹೋಗುವ ಗುಣವುಳ್ಳ ಇವರ ಕೃತಿಗಳು ಆಸಕ್ತಿಯನ್ನು ಕೆರಳಿಸುವಂತಿವೆ. ಇವರ ಕೃತಿಯಲ್ಲಿ ಹೆಚ್ಚಿನ ಭಾಗ ಸ್ತ್ರೀಕೇಂದ್ರಿತ ವಿಚಾರಗಳಿಗೆ ಮೀಸಲಾಗಿದ್ದರೂ, ಚಾರಿತ್ರಿಕ ಮತ್ತು ಸಾಮಾಜಿಕ ವಿಚಾರ ಮಂಥನವು ಜೊತೆಯಲ್ಲಿಯೇ ಸಾಗಿರುವುದನ್ನು ಗುರುತಿಸಬಹುದು.

ಇಪ್ಪತ್ತನೇ ಶತಮಾನದ ಕೊನೆಯ ಕೃತಿ 'ಭಾರತಿಭಟ್' ಅವರ 'ನನ್ನ ಬೆಲ್ಜಿಯಂ ಪ್ರವಾಸ'.(೨೦೦೦) ಇವರು ಡಿ.ಎನ್. ಶಂಕರಭಟ್ ಅವರ ಧರ್ಮಪತ್ನಿ. ಡಿ.ಎನ್. ಶಂಕರಭಟ್ ಅವರು ಬೆಲ್ಜಿಯಂ ದೇಶದ ಅಂಟ್‌ವರ್ಪ್ ವಿಶ್ವವಿದ್ಯಾಲಯಕ್ಕೆ ಆರು ತಿಂಗಳಿಗೆ ಸಂಶೋಧಕರಾಗಿ ತೆರಳುವ ಸಂದರ್ಭದಲ್ಲಿ ಲೇಖಕಿಗೂ ವಿದೇಶವನ್ನು ನೋಡುವ ಅವಕಾಶ ಒದಗಿ ಬಂದಿರುತ್ತದೆ. ಆದರೆ ವೀಸಾ, ಪಾಸ್‌ಪೋರ್ಟ್ ಮೊದಲಾದ ತಾಂತ್ರಿಕ ತೊಂದರೆಗಳ ಕಾರಣದಿಂದ ಪತಿಯೊಂದಿಗೆ ಜೊತೆಯಾಗಿ ಹೋಗಲು ಸಾಧ್ಯವಾಗದೆ ಏಕಾಂಗಿಯಾಗಿಯೇ ಪ್ರಯಾಣ ಮಾಡಿದ್ದಾರೆ. ಲೇಖಕಿಗೆ ಆಂಗ್ಲಭಾಷೆಯ ಪರಿಚಯ ಚೆನ್ನಾಗಿ ಇದ್ದುದರಿಂದ ವಿಮಾನ ಯಾನದ ಸಂದರ್ಭದಲ್ಲಿ ಎಲ್ಲೂ ಭಾಷೆಯ ತೊಡಕು ಉಂಟಾಗಿರುವುದಿಲ್ಲ. ಭಾರತೀಭಟ್ ಅವರಿಗೆ ನೆರವಾಗಿದ್ದು ಅವರು ಪಡೆದ ಶಿಕ್ಷಣ. ಸಮಾಜವು ಮಹಿಳೆಯರ ಮೇಲೆ ಹೊರಿಸಿರುವ ಅಲಿಖಿತ ನಿಯಮಗಳನ್ನು, ಮೌಢ್ಯಗಳನ್ನು ಮೀರಿ ಮುನ್ನಡೆಯಲು, ತಮ್ಮ ಬದುಕನ್ನು ಸ್ವಚ್ಛಂದವಾಗಿ ಕಟ್ಟಿಕೊಳ್ಳಲು ಶಿಕ್ಷಣದಿಂದ ಸಾಧ್ಯ ಎಂಬುದನ್ನು ಈ ಕೃತಿಯು ನಿರೂಪಿಸಿದೆ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಮಹಿಳೆಯರು ಶಿಕ್ಷಣದಲ್ಲಿ ಪ್ರಗತಿಯನ್ನು ಹೊಂದಬೇಕೆಂದು; ಸರಕಾರವೇ ಆಸಕ್ತಿಯನ್ನು ತೋರಿ, ಅನೇಕ ಪ್ರಗತಿಪರ ಕಾರ್ಯಗಳನ್ನು ಹಮ್ಮಿಕೊಂಡಿತು. ಹೆಣ್ಣು ಮಕ್ಕಳಿಗೆ ಶಿಕ್ಷಣದಲ್ಲಿ ಶುಲ್ಕ ವಿನಾಯಿತಿ, ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನ, ಮಹಿಳಾ ಕಾಲೇಜುಗಳ ಸ್ಥಾಪನೆ ಮೊದಲಾದ ಯೋಜನೆಗಳನ್ನು ಜಾರಿಗೊಳಿಸಿತು. ಈ ಯೋಜನೆಗಳು ಫಲ ನೀಡಿದವು. ಹೆಣ್ಣು ಮಕ್ಕಳ ಶಿಕ್ಷಣ ಪಡೆಯುವ ಪ್ರಮಾಣದಲ್ಲಿ ನಿಧಾನವಾಗಿ ಹೆಚ್ಚಳವಾಗತೊಡಗಿತು. ಆಧುನಿಕತೆಯ ವಿದ್ಯಮಾನಗಳು, ಸಂಶೋಧನೆಗಳು ಸಮಾಜದಲ್ಲಿದ್ದ ಮೂಢನಂಬಿಕೆಗಳನ್ನು ಪ್ರಶ್ನಿಸುವಂತೆ ಮಾಡಿತು. ಸ್ತ್ರೀಯರು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬಹುದು. ತಾವು ಯಾವುದೇ ಬಂಧನಗಳಿಗೆ ಒಳಗಾಗಿ ಜೀವಿಸಬೇಕಿಲ್ಲ ಎಂಬ ಪ್ರಜ್ಞೆ ಮಹಿಳೆಯರಲ್ಲಿ ಮೂಡತೊಡಗಿತು. ಶಿಕ್ಷಣವು ಮಹಿಳೆಯರನ್ನು ಪ್ರಬುದ್ಧರನ್ನಾಗಿಸಲು ನೆರವಾಯಿತು. ಆದ್ದರಿಂದ ಇಪ್ಪತ್ತೊಂದನೇ ಶತಮಾನದ ಮೊದಲ ದಶಕದಲ್ಲಿ ಮಹಿಳಾ

ಪ್ರವಾಸ ಕೃತಿಗಳ ಸಂಖ್ಯೆ ಹೆಚ್ಚಾಯಿತು. ಇಂದಿರಾ ಶಿವಣ್ಣ, ಶ್ಯಾಮಲಾ ಪ್ರಸಾದ್, ಮೀನಾ ಮೈಸೂರು, ಅಂದನೂರು ಶೋಭ, ಪ್ರೇಮಾಭಟ್, ಸರಸ್ವತಿ ಭೋಸಲೆ ಮೊದಲಾದವರು ಈ ದಶಕದಲ್ಲಿ ಪ್ರವಾಸ ಕೃತಿ ರಚಿಸಿದ್ದಾರೆ.[೫]

ಈ ಹಿಂದಿನ ದಶಕಗಳ ಕೃತಿಗಳನ್ನು ಹೋಲಿಸಿಕೊಂಡರೆ ಹೊಸ ಶತಮಾನದ ಆದಿಯಲ್ಲಿ ಬಂದ ಮಹಿಳಾ ಪ್ರವಾಸ ಕೃತಿಗಳು ಹೆಚ್ಚು ಸ್ತ್ರೀ ಸಂವೇದನೆಗಳನ್ನು ಒಳಗೊಂಡಿವೆ. ಜೊತೆಗೆ ಮಹಿಳೆಯರ ಅಸ್ತಿತ್ವಕ್ಕಾಗಿ ಹೋರಾಡಬೇಕೆಂಬ ಮನೋಭಾವವನ್ನು ವ್ಯಕ್ತಪಡಿಸಿವೆ.

೨೦೧೧ರಿಂದ ೨೦೧೫ರ ಕಾಲಘಟ್ಟದೊಳಗೆ ಎರಡು ಕೃತಿಗಳು ಪ್ರಕಟಗೊಂಡಿವೆ. ಇಂದಿರಾ ಶಿವಣ್ಣ ಅವರ 'ಬದುಕಿಗೆ ಬಂಗಾರದ ಲೇಪನ' ಮತ್ತು ಸರಸ್ವತಿ ಭೋಸಲೆ ಅವರ 'ನಾ ಕಂಡ ಮಿನಿ ಯುರೋಪ'. ಇಪ್ಪತ್ತೊಂದನೇ ಶತಮಾನದ ಕೃತಿಗಳಲ್ಲಿ ಅಧ್ಯಯನಕ್ಕೆ ಪೂರಕವಾಗುವ ಮತ್ತು ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿರುವ ಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

೬. ೨ ಸ್ತ್ರೀ ಸಂಕಥನ

೧೯೭೦ ರ ಕಾಲಘಟ್ಟದಲ್ಲಿ ಭಾರತೀಯ ಸಾಮಾಜಿಕ ಬದುಕಿನಲ್ಲಿ ವಿದೇಶ ಪ್ರವಾಸ ಸಾಧ್ಯವಾಗುವ ಮಾತಾಗಿರಲಿಲ್ಲ. ಅಂತಹ ಕಟ್ಟುಪಾಡುಗಳಿದ್ದಿತು. ಆದರೆ ಆ ಕಾಲಘಟ್ಟದಲ್ಲೆ ಅನುಪಮಾ ನಿರಂಜನ ಅವರು ವಿದೇಶ ಪ್ರವಾಸದ ಧೈರ್ಯ ಮಾಡಿದ್ದರು. ಬರ್ಲಿನ್‌ನಲ್ಲಿ ನಡೆಯುತ್ತಿದ್ದ 'ವಿಶ್ವ ಮಹಿಳಾ ಕಾಂಗ್ರೆಸ್' ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶವನ್ನು ಪಡೆದು ಯುರೋಪ್ ದೇಶಗಳಿಗೆ ಪ್ರವಾಸಕ್ಕೆ ತೆರಳಿದ್ದರು. ಪ್ರವಾಸಕ್ಕೆ ತೆರಳಲು ಕಾರಣವಾಗಿರುವ ಉದ್ದೇಶವೇ ಮಹಿಳಾ ನೆಲೆಯನ್ನು ಹೊಂದಿರುವುದರಿಂದ ಕೃತಿಯ ಸಂವೇದನೆಯು ಸಹಜವಾಗಿ ಸ್ತ್ರೀ ಪರವಾದ ಧೋರಣೆಗಳಿಂದ ಕೂಡಿದೆ. ಅನುಪಮಾ ನಿರಂಜನ ಅವರು 'ಸ್ತ್ರೀ ಸಾಮಾಜಿಕವಾಗಿ, ಆರ್ಥಿಕವಾಗಿ ಕುಂಠಿತವಾಗಿರಲು ಪುರುಷಪರವಾದ ಸಮಾಜ ಎಷ್ಟು ಕಾರಣವೋ ಸ್ತ್ರೀಯು ತಾನು ಅಷ್ಟೇ ಕಾರಣ' ಎಂಬ ಧೋರಣೆಯುಳ್ಳವರು. 'ಸ್ತ್ರೀಯ ಬೆಳವಣಿಗೆ ಆಕೆಯ ಪರಿಶ್ರಮದಿಂದ ಮಾತ್ರ ಸಾಧ್ಯ' ಎಂಬುದು ಅವರ ದೃಢನಿಲುವಾಗಿದೆ. ಲೇಖಕಿಯು ಮಾರ್ಗದರ್ಶಕಿ ಫ್ರಾಲಿನ್‌ರುತ್‌ಗೆ ಒಮ್ಮೆ "ಇಲ್ಲಿ ಹೆಂಗಸರೆಲ್ಲಾ ಮನೆಯ ಹೊರಗೆ ದುಡೀತಾರಾ?"(ಅನುಪಮಾ ನಿರಂಜನಾ., ಸ್ನೇಹಯಾತ್ರೆ., ಪು-೩೭)ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಮಾರ್ಗದರ್ಶಕಿ "ಹೌದು. ವೃದ್ಧೆಯರು ಮಾತ್ರ ಮನೇಲಿರ್ತಾರೆ. ಉಳಿದೋರೆಲ್ಲಾ ಕೆಲ್ಸ ಮಾಡ್ತಾರೆ"(ಅನುಪಮಾ ನಿರಂಜನ., ಸ್ನೇಹಯಾತ್ರೆ., ಪು-೩೮)ಎನ್ನುತ್ತಾರೆ. ಅದಕ್ಕೆ ಲೇಖಕಿಯು 'ದೇಶದ ಪ್ರಗತಿ ಸಾಧ್ಯವಾಗುವುದು ಲಿಂಗ ತಾರತಮ್ಯವಿಲ್ಲದೆ ಎಲ್ಲರೂ ದುಡಿಮೆಯಲ್ಲಿ ತೊಡಗಿಸಿಕೊಂಡಾಗ ಮಾತ್ರ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ನಮ್ಮ ದೇಶದ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ಕಡಿಮೆ, ಅದರ ಪ್ರತಿಫಲವನ್ನು ಅನುಭವಿಸುವವರ ಸಂಖ್ಯೆ ಹೆಚ್ಚಾಗಿರುತ್ತದೆ. ಮಹಿಳೆಯರು ಪರಾವಲಂಬಿಗಳಾಗಿರುತ್ತಾರೆ. ಈ ಅಂಶಗಳೇ ಅಭಿವೃದ್ಧಿಯ ವೇಗಕ್ಕೆ ತಡೆಯನ್ನುಂಟು ಮಾಡುವ ಕಾರಣಗಳಾಗಿವೆ' ಎಂಬ ಭಾವವನ್ನು ಲೇಖಕಿಯ ಅಭಿಪ್ರಾಯದಲ್ಲಿ ಕಂಡುಕೊಳ್ಳಲಾಗಿದೆ. ಇದರ ಜೊತೆಗೆ ಮಹಿಳೆಯರು ಉದ್ಯೋಗಕ್ಕಾಗಿ ತಮ್ಮ ಮನೆಯಿಂದ ದೂರ ನೆಲೆಸಲು ಮತ್ತು ಶಿಕ್ಷಣಕ್ಕಾಗಿ

ಮನೆಯಿಂದ ದೂರ ಹೋಗಲು ಇರುವ ಸಾಮಾಜಿಕ ಬಂಧನಗಳನ್ನು ಕಳಚಿ ಮುಕ್ತವಾಗಿ ಸ್ತ್ರೀಯು ಮನ್ನಡೆಯಬೇಕೆಂಬ ಆಶಯವು ವ್ಯಕ್ತವಾಗಿದೆ.

ಭಾರತೀಯ ಪುರುಷ ಸಮಾಜವು ಸ್ತ್ರೀಯ ಮೇಲೆ ಪಾತಿವ್ರತ್ಯದ ಭಾರವನ್ನು, ಶಂಕೆಯ ಭಾರವನ್ನು, ಮೂಢನಂಭಿಕೆಗಳ ಭಾರವನ್ನು ಹೊರಿಸಿದೆ ಎಂದು ಲೇಖಕಿ ಆರೋಪಿಸಿದ್ದಾರೆ. ಆದ್ದರಿಂದ ಅವುಗಳನ್ನು ಖಂಡಿಸುತ್ತಾ ಸಮಾಜದ ಪುರುಷಕೇಂದ್ರಿತ ನಿಲುವುಗಳನ್ನು ಮತ್ತು ಸಾಂಪ್ರದಾಯಿಕ ಆಚರಣೆಗಳನ್ನು ಪ್ರಶ್ನಿಸಿದ್ದಾರೆ. ಮದುವೆಯಾದ ಸ್ತ್ರೀ ತಾನು ಮಾಂಗಲ್ಯವನ್ನು ಧಾರಣೆ ಮಾಡಬೇಕೆಂಬ ಆಚರಣೆಯ ಕುರಿತು "ನಮ್ಮ ದೇಶದಲ್ಲಾದರೋ ಹೆಂಗಸಿಗೆ ಮದುವೆಯಾಗಿದೆ ಎಂಬ ಸಂಕೇತವಿರುವಾಗ, ಮೂಲಭೂತವಾಗಿ ಗಂಡುಹೆಣ್ಣಿಗಿರುವ ಅಸಮಾನತೆಯ ಈ ಸಂಕೇತವನ್ನು ಯಾಕೆ ನಾವ್ಯಾರು ವಿಶೇಷವಾಗಿ ಗಮನಿಸಿಲ್ಲ ಅನಿಸಿತು" (ಅನುಪಮಾ ನಿರಂಜನಾ., ಸ್ನೇಹಯಾತ್ರೆ., ಪು-೩೮,೩೯)ಎಂದಿದ್ದಾರೆ. ಈ ಅಭಿಪ್ರಾಯವು ಮಾಂಗಲ್ಯವು ಮುತ್ತೈದೆಯ ಸಂಕೇತ ಎಂದು ನಂಬಿಸಲಾಗಿರುವುದನ್ನು ಪ್ರಶ್ನಿಸುತ್ತದೆ. ಮಹಿಳೆ ವಿವಾಹವಾಗಿದ್ದಾಳೆ ಎಂಬುದನ್ನು ಗುರುತು ಮಾಡಲು ಸಂಪ್ರದಾಯದ ಸೋಗಿನಲ್ಲಿರುವ ಅಂಧ ಆಚರಣೆಯಾಗಿದ್ದು; ಮಾಂಗಲ್ಯಧಾರಣೆ ಸಂಪ್ರದಾಯವು ಲಿಂಗ ತಾರತಮ್ಯವನ್ನು ಸೂಚಿಸುವುದರ ಸಂಕೇತ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಮತ್ತು ಅದೇ ರೀತಿ ಗಂಡಸರಿಗೆ ಮದುವೆ ಆಗಿದೆ ಎಂಬುದನ್ನು ಸೂಚಿಸಲು ಯಾವುದೇ ಗುರುತು, ಆಚರಣೆ ಪದ್ಧತಿಗಳಿಲ್ಲ ಏಕೆ? ಎಂದು ಪ್ರಶ್ನಿಸುವ ಭಾವವು ಈ ಅಭಿಪ್ರಾಯದಲ್ಲಿ ವ್ಯಕ್ತವಾಗಿದೆ. ಪ್ರವಾಸ ಕೃತಿಯೊಳಗೂ ಸಮಾಜದಲ್ಲಿನ ಅಂಧಾಚರಣೆಗಳನ್ನು ತೊಡೆದು ಹಾಕಲು ವೈಜ್ಞಾನಿಕ ಹಾಗೂ ವೈಚಾರಿಕ ನೆಲೆಯಲ್ಲಿ ಪ್ರಶ್ನಿಸುವ ಮನೋಭಾವವನ್ನು ಹುಟ್ಟು ಹಾಕುವ ದಿಸೆಯಲ್ಲಿ ಪ್ರಯತ್ನವಿದೆ. ಕೃತಿಯು ಸ್ತ್ರೀಯರನ್ನು ಮೌಖಿಕ ಕಾನೂನುಗಳೆಂಬ ಅಂಧಾಚರಣೆಗಳ ಮೂಲಕ ಬಂಧಿಸಿರುವುದನ್ನು ವಿರೋಧಿಸುವ ಮೂಲಕ ಸ್ತ್ರೀ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ.

'ಸ್ನೇಹಯಾತ್ರೆ' ಕೃತಿಯಲ್ಲಿ 'ಸಮಾಜದಲ್ಲಿ ಆಚರಣೆಯಲ್ಲಿರುವ ಬಹುತೇಕ ಸಂಪ್ರದಾಯಗಳು ಮಹಿಳೆಯನ್ನು ದುರುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿಯೇ ಪಾಲನೆಯಾಗಿದೆ. ಸಾಮಾಜಿಕ ಅನಿಷ್ಟ ಪದ್ಧತಿಗಳೆಲ್ಲ ಮಹಿಳೆಯನ್ನು ನಿಯಂತ್ರಿಸಬೇಕೆಂಬ ನೆಲೆಯಲ್ಲಿಯೇ ರೂಪಗೊಂಡಿವೆ. ಅವುಗಳನ್ನು ಈ ಸಮಾಜದಿಂದ ಇಲ್ಲವಾಗಿಸಿ, ಲಿಂಗ ತಾರತಮ್ಯವಿಲ್ಲದ ನವೀನ ಸಮಾಜವನ್ನು ಕಟ್ಟಬೇಕು' ಎಂಬ ಆಶಯ ವ್ಯಕ್ತವಾಗಿದೆ.

'ಮಹಿಳೆಯರ ಬದುಕಿನಲ್ಲಿ ಏಕರೀತಿಯ ಜೀವನ ಪದ್ಧತಿ ಅನುಸರಿಸುವಂತೆ ಒತ್ತಡ ಹೇರಲಾಗಿದೆ' ಎಂದು ಲೇಖಕಿಯು ಬೇಸರ ವ್ಯಕ್ತಪಡಿಸಿದ್ದಾರೆ. ಹೆಣ್ಣುಮಗು ಹುಟ್ಟಿತೆಂದರೆ ತಾತ್ಸಾರದಿಂದ ನೋಡಲಾಗುತ್ತದೆ. ಹೆಣ್ಣುಮಗು ತಾರತಮ್ಯದ ನಡುವೆ ಬೆಳೆಯಬೇಕಾದ ಅನಿವಾರ್ಯತೆ ಇರುತ್ತದೆ. ಮದುವೆ, ಮಕ್ಕಳು, ಲಾಲನೆ-ಪಾಲನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಗಂಡನ ಅಧೀನದಲ್ಲಿ ಬದುಕನ್ನು ಕಳೆಯಬೇಕಾದ ಒತ್ತಡ ನಿರ್ಮಾಣವಾಗಿರುತ್ತದೆ. ಹೀಗೆ ಸ್ವತಂತ್ರವಾಗಿ ಜೀವನವನ್ನು ಕಟ್ಟಿಕೊಳ್ಳಲು ಆಸ್ಪದ ಇಲ್ಲದಂತೆ ಮಾಡಲಾಗಿದೆ ಎಂದಿದ್ದಾರೆ. ಸ್ತ್ರೀಯ ಬದುಕು ಪರಿಪೂರ್ಣ ಪರಾವಲಂಬಿತವಾಗಿರುವಂತೆ ಸಾಮಾಜಿಕ ಪದ್ಧತಿಗಳನ್ನು ಪುರುಷ ಸಮಾಜವು ರೂಪಿಸಿದೆ. ಮಹಿಳೆಯರ ಮೇಲೆ ಹೇರಲಾದ ನಿರ್ಬಂಧಗಳು ಕೆಲವರ ಹಿತಾಸಕ್ತಿಗಳನ್ನು ಪೂರೈಸಲು ಸ್ಥಾಪಿತವಾಗಿದೆ ಎಂದು ಲೇಖಕಿಯು ಆರೋಪ

ಮಾಡಿರುವುದನ್ನು ಕಾಣಲಾಗಿದೆ. ಅದರ ಮೂಲಕ ತಾನು ನ್ಯಾಯಯುತವಾದ ಬೇಡಿಕೆಯನ್ನು ಸಲ್ಲಿಸುತ್ತಿದ್ದೇನೆ ಎಂಬ ದೃಢ ನಿರ್ಧಾರವಿರುವುದನ್ನು ಕಂಡುಕೊಳ್ಳಲಾಗಿದೆ.

ಲೇಖಕಿಯ ಜೊತೆಗಾರ್ತಿ ಸರಳಾದೇವಿ ಅವರು ಮಾರ್ಗದರ್ಶಕಿಯಾದ ಫ್ರಾನ್ಸಿಸ್ ರುತ್‌ಗೆ "ನಿಮ್ ದೇಶದಲ್ಲಿ ವಿವಾಹವಿಚ್ಛೇದನಗಳು ಜಾಸ್ತಿ ಅಂತಾರಲ್ಲ, ಹೌದೆ?" ಎಂದು ಪ್ರಶ್ನಿಸುತ್ತಾರೆ. ಆಗ ರುತ್ ಅವರು "ನಮ್ಮಲ್ಲಿ ಆರ್ಥಿಕ ಸ್ವಾತಂತ್ರ್ಯ ಇರೋದರಿಂದ ಹೆಣ್ಣು ಗಂಡನ್ನ ಅವಲಂಬಿಸಿ ಬದುಕಬೇಕಿಲ್ಲ. ಇಬ್ಬರೂ ಸ್ವತಂತ್ರ ಮನೋವೃತ್ತಿಯವರಾದ್ದರಿಂದ ಯಾರೂ ಅವಹೇಳನ, ಅಪಮಾನಗಳನ್ನು ಸಹಿಸೊಲ್ಲ. ಒಟ್ಟಿಗೆ ಇದ್ದುಕೊಂಡು ಜಗಳವಾಡೋದಕ್ಕಿಂತ ಬೇರೆ ಬೇರೆಯಾಗಿ ಇರೋದೆ ಸರಿ ಅನ್ಸುತ್ತೆ"(ಅನುಪಮಾ ನಿರಂಜನ., ಸ್ನೇಹಯಾತ್ರೆ., ಪು–೧೧೬,೧೧೭)ಎನ್ನುತ್ತಾರೆ. ಆಗ ಸರಳಾ ದೇವಿ ಅವರು ಫ್ರಾನ್ಸ್ ದೇಶದ ಸಾಮಾಜಿಕ ಪದ್ಧತಿಗಳು ಮಹಿಳೆಯರ ಸ್ವಾಯತ್ತತೆಗೆ ಅವಕಾಶ ನೀಡಿವೆ ಎಂತಲೂ, ಭಾರತೀಯ ಸಮಾಜದಲ್ಲಿಯೂ ಮಹಿಳೆಯರಿಗೆ ಸ್ವಾಯತ್ತತೆ ಮತ್ತು ಆತ್ಮನಿರ್ಭರತೆಯನ್ನು ಗಳಿಸಿಕೊಳ್ಳಲು ಸಾಧ್ಯವಾಗುವ ನೆಲೆಯಲ್ಲಿ ಸಾಮಾಜಿಕ ಪರಿವರ್ತನೆ ಆಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಯುರೋಪಿನ ದೇಶಗಳಲ್ಲಿ ವಿವಾಹ ವಿಚ್ಛೇದನ ಪ್ರಕರಣಗಳು ಸಾಮಾನ್ಯವಾಗಿದೆ. ಸ್ತ್ರೀಯರನ್ನು ಆರ್ಥಿಕವಾಗಿ ಸಬಲಗೊಳಿಸುವುದು ಇಂದಿನ ತುರ್ತಾಗಿರುವ ಬಗ್ಗೆ ಕೃತಿಯು ಗಮನ ಸೆಳೆಯುತ್ತದೆ.

ಫ್ರಾನ್ಸಿಸ್ ರುತ್ ಅವರ ವಿವರಣೆಯು 'ಕುಟುಂಬದಲ್ಲಿ ಸ್ತ್ರೀಯ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತಿದ್ದರೆ ವಿವಾಹ ವಿಚ್ಛೇಧನ ಬಯಸುವುದು ಸರಿ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಹಾಗಾದರೆ ಗಂಡ–ಹೆಂಡತಿಯ ನಡುವಿನ ಕೌಟುಂಬಿಕ ಕಲಹಕ್ಕೆ, ಮನಸ್ತಾಪಕ್ಕೆ ವಿಚ್ಛೇದನ ಪರಿಹಾರ ಮಾರ್ಗವೇ? ಕುಟುಂಬದ ಚೌಕಟ್ಟಿನಿಂದ ಹೊರಬಂದ ಕೂಡಲೇ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತದೆಯೇ? ವಿಚ್ಛೇದನಗಳು ಭವಿಷ್ಯದ ಜೀವನದ ಮೇಲೆ ಋಣಾತ್ಮಕ ಪರಿಣಾಮ ಬೀರುವುದಿಲ್ಲವೇ? ವಿಚ್ಛೇದನೆಗಳು ಏಕಾಂಗಿಯಾಗಿ ಜೀವನ ಸಾಗಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿ ಮಾಡುವುದಿಲ್ಲವೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಈ ನೆಲೆಯಲ್ಲಿ ಚಿಂತಿಸಿದಾಗ ವೃದ್ಧಾಶ್ರಮಗಳು ಹೆಚ್ಚಳವಾಗಲು ವಿಚ್ಛೇದನೆಗಳೇ ಕಾರಣವಾಗಿರುವುದು ಕಂಡುಬರುತ್ತದೆ. ಇಂದು ಯುರೋಪಿನ ದೇಶಗಳಲ್ಲಿ ವಿವಾಹ ವಿಚ್ಛೇದನ ಸಾಮಾಜಿಕ ಸಮಸ್ಯೆಯಾಗಿ ರೂಪಿತವಾಗುತ್ತಿರುವುದನ್ನು ಕಂಡುಕೊಳ್ಳಲಾಗಿದೆ. ಇದರಿಂದ ತಿಳಿಯುದೇನೆಂದರೆ ಕೌಟುಂಬಿಕ ಸಮಸ್ಯೆಗಳಿಗೆ ವಿಚ್ಛೇದನೆ ಪರಿಹಾರವಲ್ಲ. ಬದಲಿಗೆ ಪುರುಷ ಪ್ರಧಾನ ಸಮಾಜವು ಸ್ತ್ರೀಯರ ಮೇಲೆ ವಿಧಿಸಲಾಗಿರುವ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಸ್ತ್ರೀ ಸಮೂಹವೇ ಮೀರುವ ಅಗತ್ಯವಿದ್ದು ಅದಕ್ಕಾಗಿ ಆರ್ಥಿಕವಾಗಿ ತಮ್ಮನ್ನು ಸಬಲಗೊಳಿಸಿಕೊಳ್ಳಲು ಶಿಕ್ಷಿತರಾಗಬೇಕಾದ ಅನಿವಾರ್ಯತೆಯನ್ನು ಸೂಚಿಸುತ್ತದೆ.

ಸ್ನೇಹಯಾತ್ರೆ ಕೃತಿಯಲ್ಲಿ "ಎಲ್ಲ ಕ್ಷೇತ್ರಗಳಲ್ಲೂ ಗಂಡಸರಿಗೆ ಸರಿಸಮಾನರಾಗಿ ಕೆಲಸ ಮಾಡುತ್ತಿರುವ ರಷ್ಯನ್ ಮಹಿಳೆಯರ ಬಗ್ಗೆ ನನಗೆ ಗೌರವ ಭಾವನೆ ಮೂಡಿತು" (ಅನುಪಮಾ ನಿರಂಜನ., ಸ್ನೇಹಯಾತ್ರೆ., ಪು–೧೩೩) ಎಂಬ ಹೇಳಿಕೆ ಉಲ್ಲೇಖಿತವಾಗಿದೆ. ಈ ಹೇಳಿಕೆಯಲ್ಲಿ 'ಭಾರತದಲ್ಲಿಯೂ ಸ್ತ್ರೀಯರನ್ನು ಪುರುಷರಿಗೆ ಸಮಾನವಾದ ಕೆಲಸಗಳಿಗೆ ನಿಯೋಜಿಸಬೇಕು' ಎಂಬ ಧೋರಣೆ ವ್ಯಕ್ತವಾಗಿರುವುದನ್ನು ಕಾಣಲಾಗಿದೆ. ಹಾಗೂ ರಷ್ಯನ್ ಮಹಿಳೆಯರ ಬಗ್ಗೆ ಗೌರವ ಭಾವನೆ ಮೂಡುವುದು ಅವರ ಕಾರ್ಯದಕ್ಷತೆಯನ್ನು ಮೆಚ್ಚಿಕೊಳ್ಳುವುದರಿಂದ ಎಂಬುದು ಗಮನೀಯವಾದುದು. ಭಾರತೀಯ ಸ್ತ್ರೀಯರಲ್ಲಿ ತಾನು ದುರ್ಬಲಳು ಎಂಬ ಭಾವನೆ ಇರುವ ಕಾರಣ ನಾವು ದಕ್ಷತೆಯಿಂದ ಕಾರ್ಯ ನಿರ್ವಹಿಸುವಲ್ಲಿ

ಸೋತಿದ್ದೇವೆ ಎಂಬ ಧ್ವನಿಯೂ ಇದೆ. ಭಾರತೀಯ ಸಾಮಾಜಿಕ ಪದ್ಧತಿಯಲ್ಲಿ ಹೆಣ್ಣು ಮಗು ಜನಿಸಿದಾಗ ಪುರುಷ ಪ್ರಧಾನ ಮನಸ್ಥಿತಿಗಳು ತಾಳುವ ಅಭಿಪ್ರಾಯಗಳಿಗೂ, ಯುರೋಪಿನ ದೇಶಗಳ ಜನರು ತಾಳುವ ಅಭಿಪ್ರಾಯಗಳಿಗೂ ಇರುವ ವ್ಯತ್ಯಾಸಗಳನ್ನು ಈ ನೆಲೆಯಲ್ಲಿಯೇ ಚರ್ಚಿಸಿರುವುದನ್ನು ಕಾಣಲಾಗಿದೆ.

ಭಾರತೀಯ ಕುಟುಂಬಗಳಲ್ಲಿ ಪುರುಷರು ದುಡಿಮೆಗಾಗಿ ಹೊರಗೆ ಹೋಗುತ್ತಾರೆ. ಸ್ತ್ರೀಯರು ತಮ್ಮ ಗಂಡಂದಿರ ಅನುಪಸ್ಥಿತಿಯಲ್ಲಿ ಮಕ್ಕಳ ಲಾಲನೆ ಪೋಷಣೆ ಮಾಡಿಕೊಂಡು ಮನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಭಾರತೀಯ ಸಮಾಜವು ಹೆಚ್ಚಿನ ಸಂದರ್ಭಗಳಲ್ಲಿ ದುಡಿಮೆಗಾಗಿ ಸ್ತ್ರೀಯರು ಹೊರಗೆ ಹೋಗುವುದಕ್ಕೆ ಸಮ್ಮತಿಸುವುದಿಲ್ಲ. ಲೇಖಕಿಯು ಭಾರತೀಯ ಸ್ತ್ರೀಯರನ್ನು ಜರ್ಮನ್ ಸ್ತ್ರೀಯರೊಂದಿಗೆ ಹೋಲಿಸುತ್ತಾ, ಜರ್ಮನ್ ದೇಶದಲ್ಲಿನ ಕುಟುಂಬ ಪದ್ಧತಿಯ ಬಗ್ಗೆ "ಗಂಡು ಹೆಣ್ಣುಗಳಿಗೆ ಸಮಾನ ಹಕ್ಕುಗಳಿರುವ ಈ ದೇಶದಲ್ಲಿ ಮನೆಗೆಲಸ ಹೊರಗೆಲಸಗಳನ್ನು ಗಂಡು ಹೆಣ್ಣು ಇಬ್ಬರೂ ಸಮಾನವಾಗಿ ಹಂಚಿಕೊಂಡು ದುಡಿಯುತ್ತಿದ್ದಾರೆ"(ಅನುಪಮಾ ನಿರಂಜನ., ಸ್ನೇಹಯಾತ್ರೆ., ಪು-೧೧೧)ಎಂದಿದ್ದಾರೆ. ಜರ್ಮನ್ ದೇಶದ ಅಭಿವೃದ್ಧಿಗೆ ಲಿಂಗಭೇಧವಿಲ್ಲದೆ ಎಲ್ಲರೂ ದುಡಿಯುತ್ತಿರುವುದೇ ಕಾರಣವಾಗಿದೆ ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ. ಅಂತೆಯೇ ಭಾರತವು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕಾದರೆ ಕೆಲಸದ ಹಂಚಿಕೆಯಲ್ಲಿ ಲಿಂಗ ತಾರತಮ್ಯ ಇರಬಾರದು ಎಂಬ ಚಿಂತನೆ ವ್ಯಕ್ತವಾಗಿದೆ. ಲೇಖಕಿಯ ಅಭಿಪ್ರಾಯವನ್ನು ಒಪ್ಪುತ್ತಾ 'ದೇಶದ ಅಭಿವೃದ್ಧಿಯು ಆ ದೇಶದ ಜನರು ಹೊಂದಿರುವ ಕೌಶಲ್ಯ, ಸಾಮರ್ಥ್ಯ, ಮತ್ತು ಕರ್ತವ್ಯಪರತೆ ಹಾಗೂ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಲಿಂಗ ತಾರತಮ್ಯವಿಲ್ಲದೆ ಎಲ್ಲರೂ ತಮ್ಮ ಕೌಶಲ್ಯ, ಸಾಮರ್ಥ್ಯಗಳಿಗೆ ಅನುಗುಣವಾಗಿ, ರಾಷ್ಟ್ರಕ್ಕಾಗಿ ಸಮರ್ಪಣೆಯಿಂದ ದುಡಿದಾಗ ದೇಶ ಪ್ರಗತಿಯನ್ನು ಸಾಧಿಸುವುದು ಅಸಾಧ್ಯವೇನಲ್ಲ. ದೇಶದ ಪ್ರಗತಿಗೆ ಸ್ತ್ರೀಯರ ಯೋಗದಾನವೂ ಪ್ರಮುಖವಾದುದು. ದೇಶದ ಯಾವೊಬ್ಬ ನಾಗರಿಕನನ್ನೂ ಕಡೆಗಣಿಸಿ ದೇಶ ಅಭಿವೃದ್ಧಿ ಹೊಂದುವುದು ಸಾಧ್ಯವಾಗುವುದಿಲ್ಲ.

ಅನುಪಮಾ ನಿರಂಜನ ಅವರ ಎರಡನೇ ಯುರೋಪ್ ಪ್ರವಾಸ ಕೃತಿ 'ಅಂಗೈಯಲ್ಲಿ ಯೂರೊ ಅಮೆರಿಕ'. ಈ ಕೃತಿಯಲ್ಲಿಯೂ ಸ್ತ್ರೀಪರವಾದ ಧೋರಣೆಗಳು ವ್ಯಕ್ತವಾಗಿದ್ದರೂ, ಪ್ರಬುದ್ಧವಾದ ಚಿಂತನೆ ಇರುವುದನ್ನು ಗುರುತಿಸಬಹುದು. ಈ ಕೃತಿಯಲ್ಲಿ 'ಮಹಿಳೆಯರ ದುಸ್ಥಿತಿಗೆ ಪುರುಷರೇ ಕಾರಣ' ಎಂದು ಆರೋಪಿಸುವ ಧ್ವನಿ ಇಲ್ಲ. ಬದಲಿಗೆ ಮಹಿಳೆಯ ಪ್ರಸ್ತುತ ಪರಿಸ್ಥಿತಿಗೆ ಪುರುಷನೆಷ್ಟು ಕಾರಣನೋ, ಸ್ತ್ರೀಯು ಅಷ್ಟೇ ಕಾರಣ ಎಂಬ ಆತ್ಮ ವಿಮರ್ಶೆ ಇದೆ. ಮಹಿಳೆಯು ಪ್ರಸ್ತುತ ಜಾಗತಿಕ ಮಟ್ಟದ ಸ್ಪರ್ಧೆಗೆ ತನ್ನನ್ನು ಸಿದ್ಧಗೊಳಿಸಿಕೊಳ್ಳಬೇಕೆಂಬ ಆಶಯವಿದೆ. ಮಹಿಳೆಯೇ ಬದಲಾಗಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ.

೧೯೮೦ರ ದಶಕದಲ್ಲಿ ಉದ್ಯೋಗದಲ್ಲಿ ಮಹಿಳೆಯರಿಗೆ ಹೆಚ್ಚು ಅವಕಾಶಗಳಿರಲಿಲ್ಲ. ಅನೇಕ ವೃತ್ತಿಗಳು ಪುರುಷರಿಗಾಗಿಯೇ ಮೀಸಲಾಗಿತ್ತು. ಆದರೆ ಯುರೋಪಿನ ದೇಶಗಳಲ್ಲಿ ಪುರುಷರಿಗೆ ಮೀಸಲು ಎನಿಸಿದ ವೃತ್ತಿಗಳನ್ನೂ ಕೂಡ ಸ್ತ್ರೀಯರು ನಿರ್ವಹಿಸುತ್ತಿದ್ದುದನ್ನು ಕಂಡ ಲೇಖಕಿ "ನಗರದ ಚೌಕಗಳಲ್ಲಿ ನಿಂತು ವಾಹನಗಳನ್ನು ಗೈಡ್ ಮಾಡುತ್ತಿದ್ದ ಪೊಲೀಸ್ ಮಹಿಳೆ ಎಂದು ತಿಳಿದು ನನಗೆ ಆಶ್ಚರ್ಯವೂ ಸಂತೋಷವೂ ಉಂಟಾದುವು"(ಅನುಪಮಾ ನಿರಂಜನ., ಅಂಗೈಯಲ್ಲಿ ಯೂರೊ ಅಮೆರಿಕ., ಪು-೪೯)ಎಂದಿದ್ದಾರೆ. ಈ ಹೇಳಿಕೆಯಲ್ಲಿ ಉದ್ಯೋಗ ಹಂಚಿಕೆಯಲ್ಲಿ ತಾರತಮ್ಯ ಮಾಡುವುದನ್ನು ವಿರೋಧಿಸುವ ಭಾವವಿದೆ.

'ಯಾವುದೇ ಭೇಧ-ಭಾವ ಇಲ್ಲದೆ ಎಲ್ಲರಿಗೂ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಯ ಹಂಚಿಕೆ ಮಾಡಬೇಕು' ಎಂಬ ಧೋರಣೆ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಕೆಲಸದ ಹಂಚಿಕೆಯಲ್ಲಿ ಸ್ತ್ರೀ-ಪುರುಷರು ಎಂದು ಭೇದ ಮಾಡುವ ಬದಲು ಅವರ ಸಾಮರ್ಥ್ಯ ಪ್ರಮಾಣವಾಗಬೇಕು. ದಕ್ಷತೆ ಎಂಬುದು ಲಿಂಗವನ್ನು ಆಧರಿಸಿರುವುದಿಲ್ಲ; ಅದು ವೈಯಕ್ತಿಕವಾದ ಆಸೆ, ಶಕ್ತಿ, ಸಾಮರ್ಥ್ಯಗಳನ್ನು ಆಧರಿಸಿರುತ್ತದೆ.

ಅನುಪಮಾ ನಿರಂಜನ ಅವರು ೧೯೮೮ರಲ್ಲಿ ಸ್ವಿಟ್ಜರ್‌ಲ್ಯಾಂಡ್ ದೇಶಕ್ಕೆ ಹೋದಾಗ ಅಲ್ಲಿನ ಮಹಿಳೆಯರ ರಾಜಕೀಯ ಅಧಿಕಾರಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ಸಂಗ್ರಹಿಸಿ "ಇಷ್ಟು ಮುಂದುವರಿದ ರಾಷ್ಟ್ರವಾದರೂ ಇಲ್ಲಿನ ಹೆಂಗಸರಿಗೆ ಓಟು ಮಾಡುವ ಹಕ್ಕಿರಲಿಲ್ಲ. 'ನಮಗ್ಯಾಕೆ ಬೇಕು ಓಟಿನ ಹಕ್ಕು? ನಮಗೆ ಬೇಕು ಅಂದದ್ದನ್ನು ನಮ್ಮ ಗಂಡಂದಿರ ಮೂಲಕ ಪಡಕೋತೀವಿ' ಎನ್ನುತ್ತಿದ್ದರಂತೆ. ಕೆಲವು ವರ್ಷಗಳಿಂದೀಚೆಗೆ ಮಾತ್ರ ಅವರಿಗೆ ಓಟು ಮಾಡುವ ಹಕ್ಕು ದೊರೆತಿದೆ"(ಅನುಪಮಾ ನಿರಂಜನ., ಅಂಗೈಯಲ್ಲಿ ಯೂರೊ ಅಮೆರಿಕ., ಪು-೪೬) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಲೇಖಕಿಯು ಸ್ವಿಸ್ ಜನರ ಮನೋಭಾವವನ್ನು ವಿವರಿಸುವ ಮೂಲಕ ಭಾರತೀಯ ಸ್ತ್ರೀಯರ ಮನೋಭಾವದೊಂದಿಗೆ ಹೋಲಿಕೆ ಮಾಡಿಕೊಳ್ಳುವಂತೆ ಮಾಡಿದ್ದಾರೆ. ಭಾರತೀಯ ಸ್ತ್ರೀಯರು 'ತನ್ನ ಗಂಡ ಎಲ್ಲವನ್ನು ನಿಭಾಯಿಸುವಾಗ ನಮಗೇಕೆ ಸುಖಾ ಸುಮ್ಮನೆ ತೊಂದರೆ.' ಎನ್ನುವ ಧೋರಣೆ ಉಳ್ಳವರು. ಈ ಬಗೆಯ ಮನೋಭಾವವು ಈಗಲೂ ಇರುವುದರಿಂದ ಮಹಿಳೆಯರು ಸಬಲರಾಗಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ. ಇಂದು ಸ್ವಿಸ್ ಮಹಿಳೆಯರು ಅಂದಿನಂತೆಯೇ ಇಲ್ಲ. ಅವರು ಎಚ್ಚೆತ್ತುಕೊಂಡು ತಮ್ಮ ಹಕ್ಕನ್ನು ಕೇಳಿ ಪಡೆಯುವ ಮಟ್ಟಕ್ಕೆ ಬೆಳೆದಿದ್ದಾರೆ, ಪಡೆದಿದ್ದಾರೆ. ಭಾರತೀಯ ಮಹಿಳೆಯು ಅವರಂತೆಯೇ ತಮ್ಮ ಹಕ್ಕನ್ನು ಕೇಳಿ ಪಡೆಯುವ ಹಾಗೆ ವಿದ್ಯಾವಂತರಾಗಬೇಕಿದೆ ಎಂಬ ಆಶಯ ವ್ಯಕ್ತವಾಗಿರುವುದನ್ನು ಗುರುತಿಸಲಾಗಿದೆ.

ಅನುಪಮಾ ನಿರಂಜನ ಅವರ ಬಳಿಕ ಲತಾಗುತ್ತಿ ಅವರು ಗಂಡನೊಂದಿಗೆ ಯುರೋಪ್ ಪ್ರವಾಸಕ್ಕೆ ತೆರಳಿ, ಪಡೆದ ಅನುಭವಗಳನ್ನು 'ಯುರೋ ನಾಡಿನಲ್ಲಿ'(೧೯೯೩) ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಇವರು ಪ್ರವಾಸ ಕೃತಿಯ ಮುನ್ನುಡಿಯಲ್ಲಿ "ನಮ್ಮ ಬದುಕು, ಕಲ್ಪನೆ, ಅಹಂಕಾರಗಳೆಲ್ಲ ಎಷ್ಟು ಸಣ್ಣವೆಂಬುದರ ಅರಿವು ನನಗಾಗಿದ್ದು ಈ ಪ್ರವಾಸದ ದೊಡ್ಡ ಲಾಭ"(ಲತಾಗುತ್ತಿ., ಯುರೋ ನಾಡಿನಲ್ಲಿ., ಮುನ್ನುಡಿ) ಎಂದಿದ್ದಾರೆ. ಪ್ರವಾಸವು ಅನೌಪಚಾರಿಕ ಶಿಕ್ಷಣದ ಒಂದು ಭಾಗವಾಗಿ ಹೆಚ್ಚು ಲಾಭಕರ ಎಂಬುದನ್ನು ಈ ಹೇಳಿಕೆ ನಿರ್ದೇಶಿಸುತ್ತದೆ. ಮಹಿಳಾ ನೆಲೆಯಲ್ಲಿ ಈ ಹೇಳಿಕೆಯನ್ನು ಪರಾಮರ್ಶಿಸಿದಾಗ 'ಮನೆಯಿಂದ ಹೊರಗೆ ಕಾಲಿಡದೆ ತನ್ನ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿರುವ, ಅವಕಾಶ ವಂಚಿತ ಭಾರತೀಯ ಸ್ತ್ರೀಯರ ಪ್ರಸ್ತುತ ಸ್ಥಿತಿಗೆ ಕಾರಣವನ್ನು ಸೂಚಿಸುತ್ತದೆ. ಸ್ತ್ರೀಯರ ಬದುಕಿನ ಆವರಣವನ್ನು ರೂಪಿಸುವಲ್ಲಿ ಪ್ರವಾಸ ಎಷ್ಟು ಲಾಭಕರ ಎಂಬುದನ್ನು ತಿಳಿಯುತ್ತದೆ. ವಿದೇಶ ಪ್ರವಾಸದಿಂದ ವಿಶ್ವ ಪ್ರಜ್ಞೆ ಮೂಡುತ್ತದೆ. ಜ್ಞಾನದ ವಿಸ್ತಾರ, ಅರಿವಿನ ಆಳ-ಅಗಲಗಳು ತಿಳಿದ ಬಳಿಕ ವ್ಯಕ್ತಿಯ ಮಾನಸಿಕ ಕುಬ್ಜತೆಯನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಒಂದು ಪ್ರಜ್ಞೆಯು ಪ್ರವಾಸ ಮಾಡಿದ ಪ್ರತಿ ವ್ಯಕ್ತಿಯಲ್ಲೂ ಉಂಟಾಗುತ್ತದೆ ಎಂದು ಹೇಳುವಂತಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆ ಇರುತ್ತದೆ. ಮತ್ತೆ ಕೆಲವರಿಗೆ ಪ್ರಪಂಚದ ಬಗ್ಗೆ ತಿಳಿದುಕೊಳ್ಳಲು ಪ್ರವಾಸ ಮಾಡಿಯೇ ತೀರಬೇಕಿಲ್ಲ. ಕುವೆಂಪು. ಬೇಂದ್ರೆ. ಪು.ತಿ.ನ ಅವರು ಹೆಚ್ಚು ಪ್ರವಾಸ ಮಾಡಿದವರಲ್ಲ. ಕುವೆಂಪು ಅವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃತಿಗಳನ್ನು ಬರೆದಿದ್ದರೂ, ಪ್ರವಾಸ ಸಾಹಿತ್ಯದಲ್ಲಿ ಕೃತಿ ಬರೆದಿಲ್ಲ. ಆದರೆ ಯುರೋಪ್ ದೇಶಗಳ ವೈಚಾರಿಕ

ಮತ್ತು ತತ್ವಶಾಸ್ತ್ರೀಯ ಅಂಶಗಳು ಕುವೆಂಪು ಅವರನ್ನೂ ಸೆಳೆದಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕವನ ಸಂಕಲನವು ಇದಕ್ಕೆ ನಿದರ್ಶನವಾಗಿದೆ.

ಲತಾಗುತ್ತಿ ಅವರು ತಮ್ಮ ಅರಿವಿನ ಪ್ರಜ್ಞೆಯನ್ನು ವಿಸ್ತರಿಸಿಕೊಂಡಿದ್ದು ಯುರೋಪ್ ದೇಶಗಳ ವೈಭವದ ಬದುಕನ್ನು ನೋಡಿ ಅಲ್ಲ. ಬದಲಾಗಿ ಯುರೋಪ್ ಜನರ ಸರಳತೆಯೇ ಬದುಕಾಗಿರುವ ರೀತಿಯನ್ನು ಕಂಡು. ಸಮಾಜದಲ್ಲಿ ಸ್ತ್ರೀಯನ್ನು ಎಷ್ಟು ಗೌರವದಿಂದ ನಡೆಸಿಕೊಳ್ಳಬೇಕು, ಪುರುಷನಷ್ಟೇ ಸಮಾನ ಸ್ಥಾನಮಾನವನ್ನು ನೀಡಿ ಎಲ್ಲಾ ಕೆಲಸದಲ್ಲಿಯೂ ಹೇಗೆ ಸಕ್ರಿಯಗೊಳಿಸಿಕೊಳ್ಳಬೇಕು ಎಂಬುದರ ಬಗ್ಗೆ ಹೊಸ ಅರಿವನ್ನು ಉಂಟು ಮಾಡಿತ್ತು. ಆಧುನಿಕತೆ ಮತ್ತು ಪರಂಪರೆಯನ್ನು ಜೊತೆಜೊತೆಯಲ್ಲಿಯೇ ಮೇಳೈಸಿಕೊಂಡು ಹೋಗುವ ಚಾಕಚಕ್ಯತೆ ಯೂರೋಪಿನ ದೇಶಗಳಿಗಿದೆ ಎಂಬ ಅರಿವು ಗುತ್ತಿಯವರಿಗಾಗಿತ್ತು. ಆದ್ದರಿಂದ ಅವರು "ಪ್ಯಾರೀಸ್ ಆಧುನಿಕತೆಯನ್ನು ಮೈಗೂಡಿಸಿಕೊಂಡಿದ್ದರೂ ಸಾಕಷ್ಟು ಹಸಿರನ್ನು ಉಳಿಸಿಕೊಂಡಿದೆ" (ಲತಾಗುತ್ತಿ., ಯುರೋ ನಾಡಿನಲ್ಲಿ., ಪು–ಮುನ್ನುಡಿ) ಎಂದಿದ್ದಾರೆ.

ನಾವು ತೊಡುವ ಬಟ್ಟೆಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆಯೇ ಅಥವಾ ವ್ಯಕ್ತಿತ್ವವನ್ನು ತೋರ್ಪಡಿಸುತ್ತದೆಯೇ ಎಂಬ ಬಗ್ಗೆ ಜಿಜ್ಞಾಸೆ ಸಾಮಾನ್ಯವಾಗಿ ಚರ್ಚಿಸಬಹುದಾದ ವಿಷಯವಾಗಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಲತಾಗುತ್ತಿ ಅವರು ಯುರೋಪಿಯನ್ನರು ಧರಿಸಿರುವ ಬಟ್ಟೆಗಳನ್ನು ಕಂಡು ವ್ಯಕ್ತಪಡಿಸಿರುವ ಅಭಿಪ್ರಾಯವು ಈ ಮೇಲಿನ ಜಿಜ್ಞಾಸೆಯನ್ನು ಹುಟ್ಟುಹಾಕಿದೆ. ಲತಾಗುತ್ತಿ ಅವರು ರೋಂ ನಗರಕ್ಕೆ ಭೇಟಿ ನೀಡಿದಾಗ ಅಲ್ಲಿನ ಮಹಿಳೆಯರ ಉಡುಪುಗಳನ್ನು ಕಂಡು "ತೊಡೆ–ಎದೆ ಕಾಣುವಂತಹ ಮಿನಿ ಮಿನಿ ಡ್ರೆಸ್‌ಗಳು, ಬಿಗಿಯಾದ ಉಡುಪುಗಳು ಜೊತೆಗೆ ಬಿಂಕ ವೈಯಾರಗಳ ನಾಟಕ, ಮೊದಲ ನೋಟಕ್ಕೆ ನಮಗೆಲ್ಲ ಇದು ವಿಚಿತ್ರ ಅನಿಸುತ್ತದೆ" (ಲತಾಗುತ್ತಿ., ಯುರೋ ನಾಡಿನಲ್ಲಿ., ಪು–೪)ಎಂದಿದ್ದಾರೆ. ಲತಾಗುತ್ತಿ ಮೂಲತಃ ಕರ್ನಾಟಕದ ಬೆಳಗಾವಿಯವರು. ಇಲ್ಲಿನ ಸುಸಂಸ್ಕೃತ ಉಡುಗೆ–ತೊಡುಗೆಗಳನ್ನು ಕಂಡವರು. ವಿದೇಶದ ಸಂಸ್ಕೃತಿಯ ಉಡುಗೆಗಳು ಮೊದಲ ನೋಟಕ್ಕೆ ವಿಚಿತ್ರ ಎನಿಸುವುದು ಸಹಜ. ಆದರೆ ಈ ವಿಚಿತ್ರ ಅನಿಸುವುದರ ಹಿಂದೆ ಲೇಖಕಿಯ ಮನಸ್ಸನ್ನು ರೂಪಿಸಿದ ಪಾರಂಪರಿಕ ಪ್ರಜ್ಞೆಯು ಪ್ರಭಾವಿಸಿರುವುದನ್ನು ಕಾಣಲಾಗಿದೆ. ಗುತ್ತಿ ಅವರ ಈ ಅಭಿಪ್ರಾಯಕ್ಕೆ ಮನೆಯ ಸಾಂಪ್ರದಾಯಿಕ ವಾತಾವರಣವು ಕಾರಣವಾಗಿದೆ ಎನಿಸುತ್ತದೆ. ಮೈತುಂಬಾ ಬಟ್ಟೆಯನ್ನು ಹೊದ್ದು, ನಮ್ಮ ದೇಹದ ಭಾಗಗಳು ಎಲ್ಲೂ ಪ್ರದರ್ಶನಗೊಳ್ಳುತ್ತಿಲ್ಲ ಎಂಬುದನ್ನು ಖಾತರಿ ಪಡಿಸಿಕೊಂಡು ಮನೆಯಿಂದ ಹೊರಗೆ ಕಾಲಿಡುವ ಸಂಪ್ರದಾಯ ಪಾಲನೆಯೇ ಈ ಅಭಿಪ್ರಾಯದ ಹಿಂದೆ ಇದೆ ಎನಿಸುತ್ತದೆ. ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ಲೇಖಕಿ ಒಳಗಾಗಿರುವುದಕ್ಕೆ ಇದು ನಿದರ್ಶನವಾಗಿದೆ. ಮನೆಯ ಸಂಸ್ಕೃತಿ–ಸಂಸ್ಕಾರಗಳಿಗೆ ಒಗ್ಗಿಕೊಂಡ ಲೇಖಕಿಯ ಮನಸ್ಸಿಗೆ ವಿದೇಶಿ ಸಂಸ್ಕೃತಿಯ ಉಡುಗೆ ತೊಡುಗೆಗಳು ವಿಚಿತ್ರವಾಗಿ ಕಾಣಿಸಿದ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಲತಾಗುತ್ತಿ ಅವರಲ್ಲಿಯೂ ಪುರುಷ ಪ್ರಧಾನ ಧೋರಣೆಯು ಆಳವಾಗಿ ಬೇರೂರಿದ್ದು ಅದರ ಹಿಡಿತದಿಂದ ಬಿಡಿಸಿಕೊಂಡು ನಿರ್ಲಿಪ್ತ ಧೋರಣೆಯಿಂದ ಮಹಿಳಾ ಸ್ವಾತಂತ್ರ್ಯವನ್ನು ಕಾಣುವ ದೃಷ್ಟಿಯು ಪಕ್ವವಾಗಿಲ್ಲ ಎಂಬುದನ್ನು ಈ ಹೇಳಿಕೆಯು ಸೂಚಿಸುತ್ತದೆ.

ಯುರೋಪಿನ ಪ್ರಮುಖ ನಗರಗಳಲ್ಲಿ ಮಹಿಳೆಯರನ್ನು ಸ್ವಾರ್ಥ ಲಾಲಸೆಗಳಿಗೆ ಬಳಸಿಕೊಳ್ಳುವ ದಲ್ಲಾಳಿಗಳ ದಂಡು ಹೆಚ್ಚಾಗಿದೆ ಎಂದು ಲೇಖಕಿ ಹೇಳಿದ್ದಾರೆ. ಗುತ್ತಿಯವರು ಪ್ಯಾರಿಸ್ ನಗರ ಪ್ರವಾಸದ ಸಂದರ್ಭದಲ್ಲಿ ಸುತ್ತಾಡುತ್ತ ತಾವು ಕಂಡ ವೇಶ್ಯಾವೃತ್ತಿಯ ಧಂದೆಗಳನ್ನು ವಿವರಿಸಿದ್ದಾರೆ. ಪ್ಯಾರಿಸ್‌ನಲ್ಲಿ

"ಬ್ಲೂಫಿಲ್ಮ್, ರೆಡ್‌ಲಾಯಿಟ್‌ಗಳಿಗೇನೂ ಕೊರತೆ ಇಲ್ಲ. ಧೈರ್ಯವಾಗಿ ಬೋರ್ಡುಗಳನ್ನು ಹಾಕಿಕೊಂಡು ಉದ್ಯೋಗ ನಡೆಸುತ್ತಾರೆ. ಹೆಂಗಸರನ್ನು ಬಹಳ exploit ಮಾಡುತ್ತಾರೇನೋ ಅನ್ನುವದರಲ್ಲಿ ಸಂಶಯವೇ ಇಲ್ಲ. ವೇಶ್ಯಾವೃತ್ತಿಯಲ್ಲಿ ನಿರತರಾದ ಸುಂದರ ಹುಡುಗಿಯರನ್ನು ದಲ್ಲಾಳಿಗಳು ಪೇಟೆಯಲ್ಲಿ ವಸ್ತು ಮಾರಿದಂತೆ ಮಾರುತ್ತಿರುವ ದೃಶ್ಯ ಬಹಳ ಕೆಡುಕೆನಿಸುವುದು"(ಲತಾಗುತ್ತಿ., ಯುರೋ ನಾಡಿನಲ್ಲಿ., ಪು-೯೦) ಎಂದಿದ್ದಾರೆ. ಮಹಿಳೆಯನ್ನು ಲಾಭದ ವಸ್ತುವಾಗಿ ನೋಡುವ ಮನಸ್ಥಿತಿಗಳು ಎಲ್ಲಾ ಕಡೆ ಇದೆ. ಲತಾಗುತ್ತಿ ಅವರಿಗೆ ಈ ದೃಶ್ಯಗಳು ಬಹಳ ಕೆಡುಕಾಗಿ ಕಾಣಿಸುತ್ತದೆ. ಇಲ್ಲಿ ಲೇಖಕಿಯು ಸಂವೇದನೆಗೆ ಒಳಗಾಗಿ ಸ್ತ್ರಿ ಪರವಾದ ಧೋರಣೆಗಳನ್ನು ವ್ಯಕ್ತಪಡಿಸಿದ್ದಾರೆ. 'ಹೆಂಗಸರನ್ನು ಎಕ್ಸ್‌ಪ್ಲೋಯಿಟ್ ಮಾಡುತ್ತಾರೆ' ಎಂದು ಹೇಳುವಾಗ ಲೇಖಕಿಯ ಮಹಿಳಾಪರ ಧೋರಣೆ ಮತ್ತು ಮಹಿಳೆಯರ ಬಗೆಗಿನ ಕಾಳಜಿಯ ಪ್ರಜ್ಞೆಯನ್ನು ತೋರಿಸುತ್ತದೆ. ಈ ಬಗೆಯ ಸ್ಥಳಗಳು ಹೊರಗಿನಿಂದ ಹೋದವರಿಗೆ ತುಂಬಾ ಮುಜುಗರವನ್ನು ಉಂಟು ಮಾಡುತ್ತದೆ. ಲತಾಗುತ್ತಿ ಅವರು "ನಾವೇ ತಲೆ ಕೆಳಗೆ ಹಾಕಿಕೊಂಡು ಹೋಗಬೇಕು......ಅಲ್ಲಿಯ ಅತಿ ಸ್ವತಂತ್ರತೆಗೆ ಒಂದಿಷ್ಟು ಬಯ್ದು" (ಲತಾಗುತ್ತಿ., ಯುರೋ ನಾಡಿನಲ್ಲಿ., ಪು-೯೧)ಎನ್ನುತ್ತಾರೆ. ಮುಕ್ತ ಸಮಾಜದಲ್ಲಿ ಈ ಬಗೆಯ ಮುಜುಗರವನ್ನು ತಂದೊಡ್ಡುವ ಘಟನೆಗಳು ಸಾಮಾನ್ಯವಾಗಿಬಿಟ್ಟಿದೆ ಎಂದಿದ್ದಾರೆ. 'ಸ್ತ್ರೀಯ ಅತಿ ಸ್ವತಂತ್ರತೆಯ ಪ್ರತಿಫಲ'ವೇ ವೇಶ್ಯಾವೃತ್ತಿ ಮತ್ತು ಅಸಹ್ಯ ಎನಿಸುವ ಉಡುಗೆ-ತೊಡುಗೆಗಳು ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ. ಯಾವುದೇ ಸ್ವಾತಂತ್ರ್ಯಕ್ಕೆ ಪ್ರಾದೇಶಿಕತೆಯ ಅನುಸಾರ ಕಾನೂನಿನ ನಿರ್ಬಂಧ ಇರಬೇಕೆಂಬ ಆಶಯ ವ್ಯಕ್ತವಾಗಿದೆ. ಲೇಖಕಿಯು ತಮಗರಿವಿಲ್ಲದೆ ಪುರುಷ ಪ್ರಧಾನ ಧೋರಣೆಗಳಿಗೆ ಒಳಗಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ದೇವಕಿ ಮೂರ್ತಿ ಅವರು ತಮ್ಮ 'ಯೂರೋ ಅಮೆರಿಕದ ಇಣುಕು ನೋಟ' ಕೃತಿಯಲ್ಲಿ ಪ್ರವಾಸದ ಅನುಭವಗಳ ವಿವರಗಳನ್ನು ದಾಖಲಿಸಿದ್ದಾರೆ. ಅವರು ತಮ್ಮ ಪ್ರವಾಸದ ಉದ್ದೇಶದ ಬಗ್ಗೆ ಹೇಳುತ್ತಾ "ಆಧುನಿಕತೆಯ ಜೊತೆಗೆ ಪ್ರಾಚೀನ ಸಂಸ್ಕೃತಿ ಹಾಗೂ ಕಲಾವೈಭವವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಐರೋಪ್ಯ ದೇಶಗಳ ಸೌಂದರ್ಯ, ಅಲ್ಲಿಯ ಜನರ ಜೀವನ ವಿಧಾನ, ರೂಢಿ ಸಂಪ್ರದಾಯಗಳು, ಆಚಾರ ವ್ಯವಹಾರಗಳು, ಅವರ ಪ್ರಗತಿ ಹಾಗೂ ಅದ್ಭುತ ಸಾಧನೆಗಳನ್ನು ಕಣ್ಣಾರೆ ಕಂಡು ತಣಿಯಬೇಕು"(ದೇವಕಿ ಮೂರ್ತಿ., ಯೂರೋ ಅಮೆರಿಕದ ಇಣುಕು ನೋಟ., ಪು-೪)ಎಂದಿದ್ದಾರೆ. ಕೃತಿಯನ್ನು ಅವಲೋಕಿಸಿದಾಗ ಲೇಖಕಿಯ ಉದ್ದೇಶ ಸಫಲವಾಗಿಲ್ಲ ಎನಿಸುತ್ತದೆ. ಇದಕ್ಕೆ ಕಾರಣ ದೇವಕಿ ಮೂರ್ತಿ ಅವರ ಕೃತಿಯ ಶೀರ್ಷಿಕೆಯು ನಿರ್ದೇಶಿಸುವಂತೆ ಲೇಖಕಿಗೆ ಸಾಧ್ಯವಾಗಿರುವುದು ಕೇವಲ ಇಣುಕು ನೋಟ ಮಾತ್ರ. ನಿಯೋಜಿತ ಪ್ರವಾಸಲ್ಲಿ ಏಕಾಕಿ ಪ್ರವಾಸದಲ್ಲಿರುವಂತೆ ಮುಕ್ತತೆ, ಸ್ವತಂತ್ರತೆ ಇರುವುದಿಲ್ಲ. ಹಲವು ಜನರ ಅಪೇಕ್ಷೆಗಳಿಗೆ ಒಳಪಟ್ಟು, ಹೊಂದಾಣಿಕೆಯಿಂದ ಪ್ರವಾಸಿ ಸಂಸ್ಥೆಯ ನಿರ್ದೇಶನದಂತೆ ನಿಗದಿಪಡಿಸಿದ ಸ್ಥಳಗಳಿಗೆ, ನಿಗದಿಪಡಿಸಿದ ಸಮಯದೊಳಗೆ ನೋಡಿ ಬರಬೇಕಾದ ಒತ್ತಡವು ಇರುತ್ತದೆ. ಆದ್ದರಿಂದ ಪ್ರವಾಸವು ಕೇವಲ ಸ್ಥಳಗಳ ಇಣುಕು ನೋಟ ಆಗುತ್ತದೆ. ನಿಯೋಜಿತವಲ್ಲದ ಪ್ರವಾಸಗಳಲ್ಲಿ ಯಾವುದೇ ಒತ್ತಡಗಳಿರುವುದಿಲ್ಲ. ತಮಗೆ ಇಷ್ಟವೆನಿಸಿದ ಸ್ಥಳಗಳಲ್ಲಿ ಖುಷಿಯಿಂದ ಸಮಯವನ್ನು ಕಳೆಯಬಹುದು. ತಮ್ಮ ಯೋಜನೆಯ ಪ್ರಕಾರ ಪ್ರವಾಸ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲು ಸಾಕಷ್ಟು ಸಮಯವನ್ನು ವಿನಿಯೋಗಿಸಬಹುದು. ಈ ಕಾರಣದಿಂದಾಗಿ ದೇವಕಿ ಮೂರ್ತಿ ಅವರ ಕೃತಿಯು ಯುರೋಪಿನ ದೇಶಗಳ ಸಾಮಾಜಿಕ ವಿಮರ್ಶೆ ಮಾಡುವಲ್ಲಿ ಹಾಗೂ ಸ್ತ್ರೀಯರ ಬದುಕಿನ ಬಗ್ಗೆ ವಿಶ್ಲೇಷಣೆ

ಮಾಡುವಲ್ಲಿ ಪೂರ್ಣ ಪ್ರಮಾಣದ ಸಮಯಾವಕಾಶವನ್ನು ವಿನಿಯೋಗಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

ಹೇಮಲತಾ ಮಹಿಷಿ ಅವರ ಕೃತಿಯಲ್ಲಿ ಗುರುತಿಸಬಹುದಾದ ಪ್ರಮುಖ ದೃಷ್ಟಿಕೋನವೆಂದರೆ ಮಹಿಳಾಪರ ಧೋರಣೆಗಳು. ಕೃತಿಯ ಆರಂಭದಲ್ಲಿಯೇ ತಮ್ಮ ಪ್ರವಾಸದ ಉದ್ದೇಶಗಳನ್ನು ಹೇಳುವಾಗ "ಯುರೋಪಿನ ಮಹಿಳಾ ಚಳುವಳಿಯ ಬಗ್ಗೆ ತಿಳಿಯುವ ಆಸಕ್ತಿ" (ಹೇಮಲತಾ ಮಹಿಷಿ, ಯುರೋ-ದರ್ಶನ, ಪು-೬)ಇದೆ ಎಂದಿದ್ದಾರೆ. ಲೇಖಕಿ ಭೇಟಿ ನೀಡಿದ ಪ್ರವಾಸಿ ಸ್ಥಳಗಳನ್ನು ಗಮನಿಸಿದಾಗ ಇವರ ಪ್ರವಾಸದ ಪ್ರಮುಖ ಉದ್ದೇಶವೇ ಮಹಿಳೆಯರ ಬಗೆಗಿನ ಅಧ್ಯಯನವೆಂಬಂತೆ ತೋರುತ್ತದೆ. ಏಕೆಂದರೆ ಆಯ್ಕೆ ಮಾಡಿಕೊಂಡಿರುವ ಪ್ರವಾಸಿ ಸ್ಥಳಗಳು ಬಹುತೇಕ ಲೇಖಕಿಯರು ಮತ್ತು ಮಹಿಳೆಯರಿಗೆ ಸಂಬಂಧಿಸಿದ್ದಾಗಿದೆ. ಇವರು ಪ್ರವಾಸವು ಹೋಗಿರುವುದು ಸಾಮಾನ್ಯವಾಗಿ ಎಲ್ಲಾ ಪ್ರವಾಸಿಗಳೂ ಹೋಗುವ ನಗರಗಳಿಗೆ ಹೋಗಿದ್ದರೂ, ಅದರ ಜೊತೆಗೆ ಇದುವರೆಗೂ ಪ್ರವಾಸಕ್ಕೆ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗದ ಅಥವಾ ಆಯ್ಕೆ ಮಾಡಿಲ್ಲದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುವುದು ಇವರ ಧೈರ್ಯ ಮತ್ತು ಸಾಹಸ ಮನೋವೃತ್ತಿಯನ್ನು ತೋರಿಸುತ್ತದೆ. ಅದಕ್ಕೆ ಉದಾಹರಣೆಯಾಗಿ ಬ್ರಾಂಟಿ ಸೋದರಿಯರ 'ಹಾವರ್ಥ್', ನಾಜಿಗಳ ಕ್ರೌರ್ಯವನ್ನು ಮೆರೆದ ಸ್ಥಳವಾದ 'ಡಕಾವ್', ಆನ್ ಫ್ರಾಂಕ್‌ಳ ಗುಪ್ತಗೃಹ, ಸಿಲ್ವರ್ ಮ್ಯೂಸ್ ಎಂಬ ಮಹಿಳೆಯರಿಗೆ ಮೀಸಲಾದ ಪುಸ್ತಕದ ಅಂಗಡಿ, ಫ್ಲಾರೆನ್ಸ್ ನೈಟಿಂಗೇಲ್‌ನ ಮನೆ, ಹೀಗೆ ಇವರ ಪ್ರವಾಸಕ್ಕೆ ಆಯ್ಕೆ ಮಾಡಿಕೊಂಡಿರುವ ಸ್ಥಳಗಳೇ ಲೇಖಕಿಯರ ಸ್ವತಂತ್ರ ಮನೋವೃತ್ತಿಯನ್ನು ವ್ಯಕ್ತಪಡಿಸುತ್ತದೆ. ಲೇಖಕಿಯು ಪುರುಷ ನಿರ್ಮಿತ ಕಾಲ್ಪನಿಕ ಬಂಧಗಳಿಂಧ ಮುಕ್ತರಾಗಿ ಬದುಕನ್ನು ರೂಪಿಸಿಕೊಳ್ಳಲು ಮತ್ತು ಸ್ವಂತಿಕೆಯನ್ನು ಗಳಿಸಿಕೊಳ್ಳಲು ಸಾಧ್ಯ ಎಂಬುದನ್ನು ನಿರೂಪಿಸಿದ್ದಾರೆ. ಪುರುಷರ ನೆರವಿಲ್ಲದೆಯೂ ವಿದೇಶ ಪ್ರವಾಸ ಮಾಡಬಹುದು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಹೇಮಲತಾ ಮಹಿಷಿ ಅವರು ಪ್ರವಾಸಕ್ಕೆ ಹೊರಡುವ ಮೊದಲು ವೀಸಾ ಪಡೆಯಲು ಅನುವಾದಾಗ ನಿಯಮದಂತೆ ಗಂಡನಿಂದ ಅನುಮತಿ ಪತ್ರ ತರುವಂತೆ ಹೇಳಲಾಗುತ್ತದೆ. ಆಗ ಲೇಖಕಿ "ಗಂಡಂದಿರಿಗೆ ಮಾತ್ರ ವಿದೇಶಕ್ಕೆ ಹೋಗಲು ಹೆಂಡಂದಿರ ಪರವಾನಿಗೆ ಅವಶ್ಯಕವಿಲ್ಲ, ಆದರೆ ಹೆಂಡತಿಯರಿಗೆ ಮಾತ್ರ ಈ ನಿರ್ಬಂಧವೇಕೋ ಅರ್ಥವಾಗಲಿಲ್ಲ"(ಹೇಮಲತಾ ಮಹಿಷಿ, ಯುರೋ-ದರ್ಶನ, ಪು-೮)ಎಂದಿದ್ದಾರೆ. ಲೇಖಕಿಯ ಈ ಅಭಿಪ್ರಾಯದಲ್ಲಿ 'ಭಾರತೀಯ ಸಮಾಜದಲ್ಲಿ ಸರಕಾರದ ನಿಯಮಗಳಲ್ಲಿಯೇ ಲಿಂಗ ತಾರತಮ್ಯ ಇದೆ' ಎಂಬ ಧ್ವನಿ ಇದೆ. ಅದರ ಜೊತೆಗೆ 'ನಿಯಮಗಳಲ್ಲಿರುವ ಈ ತಾರತಮ್ಯವನ್ನು ವಿರೋಧಿಸುವ ಭಾವ ಇರುವುದನ್ನು ಗಮನಿಸಲಾಗಿದೆ'.

ಹೇಮಲತಾ ಮಹಿಷಿ ಅವರು ತಮ್ಮ ಯುರೋಪ್ ಪ್ರವಾಸವನ್ನು ಲಂಡನ್‌ನಿಂದ ಪ್ರಾರಂಭಿಸಿದ್ದಾರೆ. ಲಂಡನ್‌ಗೆ ಸೌದಿ ಅರೇಬಿಯಾದ ಮೂಲಕ ಪ್ರಯಾಣ ಮಾಡುವಾಗ ಮಸ್ಕಟ್‌ನಲ್ಲಿ ವಿಮಾನದ ಬದಲಾವಣೆ ಮಾಡಬೇಕಾಗಿರುತ್ತದೆ. ಮಸ್ಕಟ್‌ನಲ್ಲಿ ಇಳಿದ ಲೇಖಕಿ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಗಮನಿಸುತ್ತಾರೆ. ವೀಸಾ ತಪಾಸಣೆಗೆ ಒಳಗಾದಾಗ ತಪಾಸಣಾ ಸಿಬ್ಬಂದಿಯಾಗಿ ಅನೇಕ ಮಹಿಳೆಯರು ಕೆಲಸ ನಿರ್ವಹಿಸುತ್ತಿರುವುದನ್ನು ಕಂಡು "ಆ ಸಿಬ್ಬಂದಿಯಲ್ಲಿ ಮಹಿಳೆಯರೂ ಇದ್ದುದು ವಿಶೇಷ"(ಹೇಮಲತಾ ಮಹಿಷಿ., ಯುರೋ-ದರ್ಶನ., ಪು-೧೮)ಎನ್ನುತ್ತಾರೆ. ಲೇಖಕಿಯು ಅರಬ್ ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳನ್ನು ಸಾಮಾನ್ಯವಾಗಿ ಹೊರಗಡೆ ಕೆಲಸಕ್ಕೆ ಕಳುಹಿಸುವುದಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಆದರೆ

ಮಹಿಳಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದನ್ನು ಕಂಡು ಅದು ವಿಶೇಷ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನೋಡುವ ದೃಷ್ಟಿಕೋನವು ಮಹಿಳಾ ಕೇಂದ್ರಿತವಾಗಿದ್ದಾಗ ಈ ಬಗೆಯ ಅಭಿಪ್ರಾಯಗಳು ವ್ಯಕ್ತವಾಗುತ್ತದೆ.

ಹೇಮಲತಾ ಮಹಿಷಿ ಅವರು ಕಾಫಿಯನ್ನು ಸವಿಯಲು ಮಸ್ಕಟ್‌ನ ರೆಸ್ಟೋರಾಂಟ್‌ಗೆ ಹೋದಾಗ ಅಲ್ಲಿನ ಕೆಲಸಗಾರರನ್ನು ಕಂಡು ಮಾತನಾಡಿಸಿ ವಿಷಯಗಳನ್ನು ಸಂಗ್ರಹಿಸಿ "ಆ ಹೋಟೆಲ್‌ನಲ್ಲಿ ಕೇರಳದ ಮಹಿಳೆಯರು ಬೇರರ್‌ಗಳಾಗಿ ಕೆಲಸದಲ್ಲಿದ್ದರು. ಅರಬ್ ಮಹಿಳೆಯರು ಕಾಣಲಿಲ್ಲ"(ಹೇಮಲತಾ ಮಹಿಷಿ, ಯುರೋ-ದರ್ಶನ, ಪು-೧೯)ಎಂದಿದ್ದಾರೆ. ಅರಬ್ ರಾಷ್ಟ್ರಗಳಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯುವ ಕುತೂಹಲ ತಾಳಿದ್ದಾರೆ. ಲೇಖಕಿಯು ಮಹಿಳೆಯರ ಬದುಕಿನ ವಿವಿಧ ಮಜಲುಗಳನ್ನು ಆಸಕ್ತಿದಾಯಕವಾಗಿ ಕಾಣುವ ಹಂಬಲವುಳ್ಳವರು ಎಂಬ ಅಂಶವನ್ನು ಈ ಉದಾಹರಣೆಗಳಿಂದ ಗ್ರಹಿಸಬಹುದಾಗಿದೆ. ಲೇಖಕಿಯರಿಗೆ ಹದಿನೆಂಟು-ಹತ್ತೊಂಬತ್ತು ವರ್ಷದ ಇಬ್ಬರು ನರ್ಸಿಂಗ್ ಓದುತ್ತಿದ್ದ ಅರಬ್ ಹುಡುಗಿಯರ ಪರಿಚಯವಾಗುತ್ತದೆ. ಅವರಲ್ಲಿ ಅರಬ್ ಮಹಿಳೆಯರ ಜನಜೀವನದ ಬಗ್ಗೆ ವಿಚಾರಿಸಿದಾಗ "ಹುಡುಗಿಯರಿಗೆ ಓದುವ ಅವಕಾಶವಿದೆ. ವಿವಾಹದ ವಿಷಯದಲ್ಲಿ ಸ್ವಾತಂತ್ರ್ಯವಿದೆ, ವಯಸ್ಕರಾದ ಮೇಲೆಯೇ ವಿವಾಹ ಎಂದು ಹೇಳಿದರು. ಮಸ್ಕಟ್-ಬಹರೀನ್‌ನಲ್ಲಿ ಸೌದಿ ಅರೇಬಿಯಾದಂತಲ್ಲದೇ ಮಹಿಳೆಯರೂ ಹೊರಗೆ ಕೆಲಸ ಮಾಡುತ್ತಾರೆ"(ಹೇಮಲತಾ ಮಹಿಷಿ, ಯುರೋ-ದರ್ಶನ, ಪು-೨೧)ಎಂದಿದ್ದಾರೆ. ಅದಕ್ಕೆ ಪೂರಕವಾಗಿ ಬಹರೀನ್‌ನಲ್ಲಿ ಮಹಿಳಾ ಡ್ರೈವರ್‌ಗಳನ್ನು ನೋಡಿದ್ದಾಗಿ ಲೇಖಕಿ ಹೇಳಿದ್ದಾರೆ. ಇದರ ಮೂಲಕ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ತಿಳಿಯುವ ಪ್ರಯತ್ನ ಮಾಡಿದ್ದಾರೆ. ಲೇಖಕಿಯ ನಿಲುವುಗಳೇನು ಎಂಬುದನ್ನು ತಿಳಿಯಲು ಈ ಅಂಶಗಳು ನೆರವಾಗುತ್ತವೆ. ಹೇಮಲತಾ ಅವರು ಯಾವುದೇ ಸ್ಥಳಗಳಿಗೆ ಹೋದರೂ ಅವಕಾಶ ಸಿಕ್ಕಾಗ ಮಹಿಳೆಯರ ಸ್ವಾತಂತ್ರ್ಯ, ಬದುಕು ಮತ್ತು ಸಾಧಕ ಮಹಿಳೆಯರ ಬಗ್ಗೆ ತಿಳಿದುಕೊಳ್ಳುವ ಹಂಬಲ ವ್ಯಕ್ತವಾಗಿರುವುದನ್ನು ಕಾಣಲಾಗಿದೆ.

ಬೆಂಗಳೂರಿನಲ್ಲಿ 'ಸ್ತ್ರೀಲೇಖ' ಎಂಬ ಹೆಸರಿನ ಪುಸ್ತಕದ ಅಂಗಡಿ ಇದೆ. ಮಹಿಳೆಯರಿಗೆ ಸಂಬಂಧಿಸಿದ ಎಲ್ಲಾ ಪುಸ್ತಕಗಳು ದೊರೆಯುತ್ತವೆ. ಹೇಮಲತಾ ಮಹಿಷಿ ಅವರು ಲಂಡನ್ ನಗರದಲ್ಲಿಯೂ 'ಸಿಲ್ವರ್ ಮ್ಯೂಸ್' ಎಂಬ ಮಹಿಳೆಯರಿಗೆ ಸಂಬಂಧಿಸಿದ ಪುಸ್ತಕಗಳಿರುವ ಮಳಿಗೆಯನ್ನು ಹುಡುಕಿಕೊಂಡು ಹೋಗಿ ಎರಡು ಪುಸ್ತಕ ಕೊಂಡು ಬರುತ್ತಾರೆ. ಮಹಿಳಾಪರವಾದ ಧೋರಣೆಗಳು ಸ್ತ್ರೀಪ್ರಜ್ಞೆಯನ್ನು ಜಾಗೃತಗೊಳಿಸಿರುವುದನ್ನು ಗುರುತಿಸಲಾಗಿದೆ.

ಹೇಮಲತಾ ಮಹಿಷಿ ಅವರು ಮಹಿಳೆಯರ ಉನ್ನತಿಗೆ ಶ್ರಮಿಸುವ ಅಂತರರಾಷ್ಟ್ರಿಯ ಮಟ್ಟದ ಸಾಮಾಜಿಕ ಸೇವಕರನ್ನು ಭೇಟಿ ಮಾಡುವುದು; ಮತ್ತು ಅವರ ಕಾರ್ಯವೈಖರಿಗಳ ಬಗ್ಗೆ ತಿಳಿಯುವುದು; ಹಾಗೂ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಅವರೊಂದಿಗೆ ಚರ್ಚಿಸಿ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಕೈಗೊಳ್ಳಬಹುದಾದ ಹತ್ತು ಹಲವು ಕಾರ್ಯಕ್ರಮಗಳನ್ನು ಯೋಜಿಸುವ ಪ್ರವೃತ್ತಿ ಹೊಂದಿರುವುದನ್ನು ಅವರ ಪ್ರವಾಸ ಕೃತಿಯ ವಿವರಗಳಿಂದ ಕಂಡುಕೊಳ್ಳಲಾಗಿದೆ. ಇಂಗ್ಲೆಂಡಿನಲ್ಲಿ ಮಹಿಳಾ ಪರವಾದ ಸಾಮಾಜಿಕ ಸೇವಾಕರ್ತರನ್ನು ಭೇಟಿಯಾದ ಬಳಿಕ ಲೇಖಕಿಯು "ಶ್ರೀ ಗೋರೆಯವರು ಕ್ಯಾಂಟರ್ ಬರಿಯಲ್ಲಿ ವಕೀಲರು. ಶ್ರೀಮತಿ ಗೋರೆ ಹಾಗೂ ಅವರೊಂದಿಗಿದ್ದ ಶ್ರೀಮತಿ ಹೆಲನ್ ಸೆಲ್ಫ್ ನಮ್ಮಿಬ್ಬರನ್ನೂ ಆತ್ಮೀಯವಾಗಿ ಸ್ವಾಗತಿಸಿ ನಮ್ಮ ಬಗ್ಗೆ ಭಾರತದ ಮಹಿಳೆಯರ ಬಗ್ಗೆ ಪ್ರಶ್ನೆ ಕೇಳಿ. ನಮ್ಮ ಪ್ರವಾಸದ ಬಗ್ಗೆ

ಮೆಚ್ಚುಗೆ ವ್ಯಕ್ತಪಡಿಸಿದರು.......ಇವರಿಬ್ಬರೂ ವೇಶ್ಯಾವೃತ್ತಿ ನಿರ್ಮೂಲನೆಯ ಸಂಬಂಧವಾಗಿ ಕೆಲಸ ಮಾಡುತ್ತಾರೆಂದು ತಿಳಿಯಿತು"(ಹೇಮಲತಾ ಮಹಿಷಿ, ಯುರೋ-ದರ್ಶನ, ಪು-೩೭)ಎಂದು ಅವರ ಭೇಟಿಯ ವಿವರಗಳನ್ನು ನಮೂದಿಸಿದ್ದಾರೆ. ಲೇಖಕಿ ಅವರಿಗೆ ಇಂಗ್ಲೆಂಡಿಗೆ ಹೋಗುವ ಪೂರ್ವದಲ್ಲಿಯೇ ಇಂಗ್ಲೆಂಡಿನ ಸಮಾಜ ಸೇವಕಿಯರ ಒಡನಾಟ ಇತ್ತೆಂಬುದು ವಿಧಿತವಾಗುತ್ತದೆ. ಸ್ತ್ರೀ ಪರವಾದ ನಿಲುವುಗಳಿದ್ದಾಗ ಮಾತ್ರ ವಿಶ್ವದಲ್ಲಿ ಮಹಿಳೆಯರ ಪರವಾಗಿ ಕೆಲಸ ಮಾಡಿದವರ ಬಗ್ಗೆ ತಿಳಿದು, ಅವರ ಒಡನಾಟವನ್ನು ಬೆಳೆಸಿ, ವಿಚಾರ ವಿನಿಮಯ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಯುರೋಪ್ ದೇಶಗಳಲ್ಲಿ 'ವೇಶ್ಯಾವೃತ್ತಿ ನಿರ್ಮೂಲನೆ'ಯ ಬಗ್ಗೆ ಸಾಮಾಜಿಕ ಸೇವೆ ಬಹಳ ತ್ವರಿತಗತಿಯಲ್ಲಿ ನಡೆಯುತ್ತಿದೆ ಎಂಬ ಅಂಶ ತಿಳಿದುಬರುತ್ತದೆ. ಈ ಅಭಿಪ್ರಾಯದ ಜೊತೆಗೆ ಲತಾಗುತ್ತಿ ಅವರು ಉಲ್ಲೇಖಿಸಿದ 'ಯುರೋಪ್ ದೇಶಗಳಲ್ಲಿ ಮಹಿಳೆಯರನ್ನು ತುಂಬಾ ಎಕ್ಸ್‌ಪ್ಲೋಯಿಟ್ ಮಾಡುತ್ತಾರೆ' ಎಂಬ ಅಭಿಪ್ರಾಯವನ್ನು ಹಾಗೂ ನೇಮಿಚಂದ್ರ ಅವರ 'ಟೆಲಿಫೋನ್ ಬೂತ್‌ಗಳಲ್ಲಿ ವೇಶ್ಯೆಯರ ಜಾಹಿರಾತು ಪ್ರಕಟಿಸಿರುವುದನ್ನು ಉಲ್ಲೇಖಿಸಿರುವ ಅಂಶಗಳನ್ನು ಒಟ್ಟಿಗೆ ನೋಡಬೇಕಾಗುತ್ತದೆ. ಇಂಗ್ಲೆಂಡಿನಂತಹ ಲೈಂಗಿಕ ಮುಕ್ತ ಸಮಾಜದಲ್ಲಿಯೂ ವೇಶ್ಯಾವೃತ್ತಿ ನಡೆಯುತ್ತಿದೆ. ಯುರೋಪಿನ ಬಹುತೇಕ ದೇಶಗಳಲ್ಲಿ ವೇಶ್ಯಾವೃತ್ತಿಯನ್ನು ಕಾನೂನುಬದ್ಧವಾಗಿಯೇ ನಡೆಸಲಾಗುತ್ತಿದೆ ಎಂಬ ಅಂಶವು ತಿಳಿದುಬರುತ್ತದೆ. ಇದರ ಬಗ್ಗೆ ಹೇಮಲತಾ ಮಹಿಷಿ ಅವರು "ಲಂಡನ್ನಿನ ರಸ್ತೆಗಳಲ್ಲಿ ಹೆಜ್ಜೆ ಹೆಜ್ಜೆಗಿರುವ ಟೆಲಿಫೋನ್ ಬೂತ್‌ಗಳಲ್ಲಿ ಅಂಟಿಸಿರುವ, ಹುಡುಗಿಯರ ಅರೆನಗ್ನ ಚಿತ್ರ-ಟೆಲಿಫೋನ್ ನಂಬರ್‌ಗಳಿರುವ, ಅವರು ಒದಗಿಸುವ ಸೇವೆಯನ್ನು ಪಡೆಯಲು ಆಹ್ವಾನಿಸುವ ಕಾರ್ಡುಗಳು ನಮಗೆ 'ಶಾಕ್' ಉಂಟುಮಾಡಿದವು" (ಹೇಮಲತಾ ಮಹಿಷಿ., ಯುರೋ-ದರ್ಶನ., ಪು-೭೪)ಎಂದಿದ್ದಾರೆ. ಯುರೋಪಿನ ದೇಶಗಳಲ್ಲಿ 'ಮಹಿಳೆಯರ ಬದುಕು ಸುಧಾರಿತವಾಗಿದೆ, ಸ್ವಾವಲಂಬಿಗಳಾಗಿ ಜೀವಿಸುತ್ತಿದ್ದಾರೆ' ಎಂಬ ಅಭಿಪ್ರಾಯಗಳಿಗೂ ಲೇಖಕಿಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೂ ಹೋಲಿಸಿ ನೋಡಿದಾಗ ಸ್ತ್ರೀಯರ ಬದುಕು ಯುರೋಪಿನ ದೇಶಗಳಲ್ಲಿಯೂ ಪೂರ್ಣವಾಗಿ ಸುಧಾರಣೆ ಸಾಧ್ಯವಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಪುರುಷ ಲೇಖಕರು ಯುರೋಪಿನ ಮಹಿಳೆಯರ ಸಾಮಾಜಿಕ ಜೀವನದ ಬಗ್ಗೆ ತಿಳಿಸಿರುವ ಬಗೆಗೂ; ಮಹಿಳಾ ಲೇಖಕರು ಚಿತ್ರಿಸಿರುವ ಬಗೆಗೂ ತುಂಬಾ ವ್ಯತ್ಯಾಸವಿರುವುದನ್ನು ಕಾಣಲಾಗಿದೆ. ಪುರುಷ ಲೇಖಕರು ಯುರೋಪಿನ ದೇಶಗಳಲ್ಲಿನ ಮಹಿಳೆಯರು ಸ್ವತಂತ್ರರು, ಪುರುಷರು ನಿರ್ವಹಿಸುವ ಕೆಲಸವನ್ನು ಮಹಿಳೆಯರೇ ನಿರ್ವಹಿಸುತ್ತಾರೆ' ಎಂದು ಧನಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಹಿಳಾ ಲೇಖಕಿಯರು ಯುರೋಪಿನ ದೇಶಗಳಲ್ಲಿ ಮಹಿಳೆಯರನ್ನು ಎಕ್ಸ್‌ಪ್ಲೋಯಿಟ್ ಮಾಡಲಾಗುತ್ತದೆ ಎಂದಿದ್ದಾರೆ. ಇದರಿಂದ ಪ್ರವಾಸ ಕೃತಿಗಳ ನಿರೂಪಣಾ ಶೈಲಿ ಮತ್ತು ಕೃತಿಯಲ್ಲಿ ನಮೂದಿಸಲಾಗುವ ಘಟನೆಗಳ ಮೇಲೆ ವಸ್ತುಸ್ಥಿತಿ ಮತ್ತು ಸಂದರ್ಭಗಳು ಪ್ರಭಾವ ಬೀರುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಹೇಮಲತಾ ಮಹಿಷಿ ಮತ್ತು ನೇಮಿಚಂದ್ರ ಅವರು ಇಂಗ್ಲೆಂಡಿನಲ್ಲಿ 'ಬ್ರಾಂಟಿ ಸೋದರಿಯರು' ಸಾಹಿತ್ಯ ರಚಿಸಿದ ಸ್ಥಳಗಳನ್ನು ಹುಡುಕಿ ಹೋಗಿದ್ದಾರೆ. ಜಿ.ಎಸ್. ಶಿವರುದ್ರಪ್ಪ, ನಾಗತಿಹಳ್ಳಿ ಚಂದ್ರಶೇಖರ್, ದೇ. ಜವರೇಗೌಡ ಮೊದಲಾದ ಕನ್ನಡದ ಪ್ರಮುಖ ಲೇಖಕರು ವರ್ಡ್ಸ್‌ವರ್ಥ್‌ನ ಹುಟ್ಟೂರು 'ಲೇಕ್ ಡಿಸ್ಟ್ರಿಕ್ಟ್'ಗೆ ಷೇಕ್ಸ್‌ಪಿಯರ್‌ನ 'ಸ್ಟ್ರಾಟ್‌ಫರ್ಡ್'ಗೆ ಭೇಟಿ ನೀಡಿದ್ದಾರೆ. ಆದರೆ ಅಷ್ಟೇ ಪ್ರಖ್ಯಾತಿಯನ್ನು ಮತ್ತು ಆಂಗ್ಲ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ 'ಬ್ರಾಂಟಿ ಸೋದರಿಯರ' ಯಾರ್ಕ್‌ಷೈರಿನ 'ಹಾವರ್ಥ್'ಗೆ

ಭೇಟಿ ನೀಡಿರುವುದಿಲ್ಲ. ಹೇಮಲತಾ ಮಹಿಷಿ ಮತ್ತು ನೇಮಿಚಂದ್ರ ಅವರನ್ನು ಹೊರತುಪಡಿಸಿ ಬೇರೆ ಯಾವ ಪ್ರವಾಸಿ ಲೇಖಕರೂ ಹಾವರ್ಥಿಗೆ ಭೇಟಿ ನೀಡಿಲ್ಲ. ಇಬ್ಬರೇ ಲೇಖಕಿಯರು ಈ ಸ್ಥಳಕ್ಕೆ ಭೇಟಿ ನೀಡಲು ಕಾರಣವಿದೆ. ಹೇಮಲತಾ ಮಹಿಷಿ ಅವರು "ಕನ್ನಡ ಲೇಖಕಿಯರ ಪರಂಪರೆಯನ್ನು ಹುಡುಕುತ್ತಿದ್ದ, ಗುರುತಿಸಲು ಪ್ರಯತ್ನಿಸುತ್ತಿದ್ದ, ಸಾಹಿತ್ಯದಲ್ಲಿ ಅವರಿಗೂ ತಕ್ಕ ಸ್ಥಾನ ಸಲ್ಲಬೇಕೆಂದು ಲೇಖಕಿಯರ ಸಂಘದ ಮೂಲಕ ರೂಪಿಸಿದ್ದ ಯೋಜನೆಯಲ್ಲಿ ಸೇರಿದ್ದ ನಮಗೆ ಬ್ರಾಂಟಿ ಸೋದರಿಯವರು ಮುಖ್ಯರೆನಿಸಿದ್ದು ಸಹಜ"(ಹೇಮಲತಾ ಮಹಿಷಿ., ಯುರೋ-ದರ್ಶನ., ಪು-೪೩,೪೪)ಎಂದಿದ್ದಾರೆ. ಹೇಮಲತಾ ಮಹಿಷಿ ಮತ್ತು ನೇಮಿಚಂದ್ರ ಅವರ ಪ್ರವಾಸವು ಯೋಜನಾಬದ್ಧವಾಗಿ ರೂಪಿತವಾಗಿದೆ. ತಾವು ಭೇಟಿ ನೀಡಬೇಕಿದ್ದ ಸ್ಥಳಗಳು, ವ್ಯಕ್ತಿಗಳನ್ನು ಮೊದಲೇ ಗುರುತಿಸಿಕೊಂಡು ಪೂರ್ವಯೋಜಿತವಾಗಿ ಪ್ರವಾಸಕ್ಕೆ ಹೊರಟಿದ್ದಾರೆ ಎಂಬುದು ತಿಳಿಯುತ್ತದೆ. ಬ್ರಾಂಟಿ ಸೋದರಿಯರಾದ 'ಎಮಿಲಿ' 'ಆನ್' 'ಚಾರ್ಲೆಟ್' ಅವರ ಬಗ್ಗೆ ವಿಶೇಷ ಕಾಳಜಿಯಿಂದ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಲೇಖಕಿ ಇಲ್ಲಿ ಭೇಟಿ ನೀಡಿದ ಸಂಗತಿಯ ಜೊತೆಗೆ ಇವರ ಸಾಹಿತ್ಯ ರಚನೆಯ ಕುರಿತು ವಿಸ್ತಾರವಾಗಿ ಬರೆದಿದ್ದಾರೆ. ಇವರ ಸಾಹಿತ್ಯಕ್ಕೆ ಪ್ರೇರಣೆ ನೀಡಿದ್ದ 'ಮೂರ್'ಗಳಲ್ಲಿ ಅಲೆದಾಡಿ ಬಂದಿದ್ದಾರೆ. 'ವುದರಿಂಗ್ ಹೈಟ್ಸ್' ಎಂಬ ಸಾಹಿತ್ಯ ಕೃತಿಯ ಮೇಲೆ ಈ 'ಮೂರ್'ಗಳ ಪ್ರಭಾವ ಆಗಿರುವುದನ್ನು ಗುರುತಿಸಿ "ಪರಿಸರ ಸಾಹಿತಿಯನ್ನು ರೂಪುಗೊಳಿಸುತ್ತದೆ ಎನ್ನುವುದು ಎಷ್ಟು ನಿಜ!" (ಹೇಮಲತಾ ಮಹಿಷಿ., ಯುರೋ-ದರ್ಶನ., ಪು-೪೩ ರಿಂದ ೪೭) ಎಂದು ಉದ್ಗರಿಸಿದ್ದಾರೆ. ಕುವೆಂಪು, ಬೇಂದ್ರೆ, ದೇವನೂರು ಮಹದೇವ ಇವರ ಸಾಹಿತ್ಯದ ಮೇಲೆ ಅವರ ಸುತ್ತಮುತ್ತಲಿನ ಪರಿಸರದ ಪ್ರಭಾವ ಆಗಿರುವುದನ್ನು ಗುರುತಿಸಲಾಗಿದೆ. ಸಾಹಿತ್ಯ ಕೃತಿಗಳ ಮೇಲೆ ಲೇಖಕರು ಬೆಳೆಯುವ ಪರಿಸರದ ದಟ್ಟ ಪ್ರಭಾವ ಆಗಿರುತ್ತದೆ. ಪ್ರವಾಸ ಕೃತಿಗಳಲ್ಲಿಯೂ ಲೇಖಕರ ಚಿಂತನೆಗಳು, ಯೋಚನೆಗಳು, ದೃಷ್ಟಿಕೋನಗಳ ಮೇಲೆ ಅವರು ಬೆಳೆದು ಬಂದ ಪರಿಸರದ ಪ್ರಭಾವ ಆಗಿರುವುದನ್ನು ಗುರುತಿಸಬಹುದಾಗಿದೆ. ಈ ನೆಲೆಯಲ್ಲಿಯೇ ಈ ಅಧ್ಯಯನ ಸಾಗಿದೆ. ಹೇಮಲತಾ ಮಹಿಷಿ ಅವರ ಸ್ತ್ರೀ ಪರವಾದ ಧೋರಣೆಗಳನ್ನು ಬ್ರಾಂಟಿ ಸೋದರಿಯರ ಭೇಟಿಯ ಉದ್ದೇಶದ ಹಿನ್ನೆಲೆಯಲ್ಲಿ ಗುರುತಿಸಬಹುದು. 'ಮನಸ್ಸಿನಂತೆ ಮಾದೇವ' ಎನ್ನುವಂತೆ ಪ್ರತಿಯೊಬ್ಬ ಲೇಖಕನಲ್ಲೂ ಅವರ ಮೇಲಾಗಿರುವ ಪರಿಸರದ ಪ್ರಭಾವದ ಸುಪ್ತ ಎಳೆಯನ್ನು ಅವರ ಪ್ರವಾಸ ಕೃತಿಯಲ್ಲಿ ಗುರುತಿಸಬಹುದಾಗಿದೆ. ಅದು ಯಾವುದೇ ಪ್ರಕಾರದ ಸಾಹಿತ್ಯವಾದರೂ ಅದರಲ್ಲಿ ಅವರ ಅನುಭವಗಳ ಹಿನ್ನೆಲೆ ಇದ್ದೇ ಇರುತ್ತದೆ. ಎಂಬುದನ್ನು ಈ ಮೇಲಿನ ವಿವರಣೆಗಳ ಮೂಲಕ ತಿಳಿಯಲಾಗಿದೆ.

ಹೇಮಲತಾ ಮಹಿಷಿ ಅವರು 'ಯುರೋಪ್‌ನ ಹಲವು ದೇಶಗಳು ಮಹಿಳೆಯರ ಪಾಲಿಗೆ ಹೆಚ್ಚು ಸುರಕ್ಷಿತ' ಎಂದಿದ್ದಾರೆ. ಭಾರತದಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ, ಯುರೋಪ್ ದೇಶಗಳಲ್ಲಿನ ಸುರಕ್ಷಾ ಕ್ರಮಗಳೊಂದಿಗೆ ಹೋಲಿಸಿದ್ದಾರೆ. ಲೇಖಕಿಗೆ ಲಂಡನ್‌ನಲ್ಲಿ ತಡರಾತ್ರಿವರೆಗೆ ಬಸ್ಸನ್ನು ಕಾಯುವ ಪರಿಸ್ಥಿತಿ ಬರುತ್ತದೆ. ಆ ಸಮಯದಲ್ಲಿ ರಾತ್ರಿ ೯.೩೦ ಗಂಟೆಗೆ ಬಸ್ಸಿಗಾಗಿ ಕಾಯುತ್ತಿದ್ದ ಭಾರತೀಯ ಹುಡುಗಿಯೊಬ್ಬಳನ್ನು ಅವರ ಸುರಕ್ಷತೆಯ ಕುರಿತು ವಿಚಾರಿಸಿದಾಗ, ಆ ಹುಡುಗಿಯು "ಲಂಡನ್ನಿನಲ್ಲಿ ಆ ರೀತಿ ನಿರ್ಜನ ಬಸ್‌ಸ್ಟಾಪಿನಲ್ಲಿ ರಾತ್ರಿ ಒಂಟಿ ಹುಡುಗಿಯೊಬ್ಬಳು ಬಸ್ಸಿಗಾಗಿ ಕಾಯುವುದು, ನಡೆದುಕೊಂಡು ಹೋಗುವುದು ಸರ್ವೇಸಾಮಾನ್ಯವೆಂದು, ಅಪಾಯಕಾರಿಯಲ್ಲವೆಂದು ತಿಳಿಸಿದಾಗ ಬೆಂಗಳೂರಿನ ಪರಿಸ್ಥಿತಿ ನೆನಪಾಯಿತು" (ಹೇಮಲತಾ ಮಹಿಷಿ., ಯುರೋ-ದರ್ಶನ., ಪು-೭೫)ಎಂದು ಉಲ್ಲೇಖಿಸಿದ್ದಾರೆ. ಯುರೋಪಿನ ಸಮಾಜದಲ್ಲಿ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮಗಳನ್ನು

ಜಾರಿಗೊಳಿಸಲಾಗಿದೆ. ಹಾಗಾಗಿ ಯುರೋಪಿನ ದೇಶಗಳಲ್ಲಿ ಮಹಿಳೆಯರು ಯಾವುದೇ ಆತಂಕವಿಲ್ಲದೆ ರಾತ್ರಿ ಸಮಯದಲ್ಲಿಯೂ ಓಡಾಡುತ್ತಾರೆ. ಲೇಖಕಿ ಅಲ್ಲಿನ ಪರಿಸ್ಥಿತಿಯನ್ನು ಭಾರತದೊಂದಿಗೆ ಹೋಲಿಸುತ್ತಾ 'ಬೆಂಗಳೂರಿನ ಪರಿಸ್ಥಿತಿ ನೆನಪಾಯಿತು' ಎಂದು ಹೇಳಿದ್ದಾರೆ. ಭಾರತದಲ್ಲಿ ಇಂದಿಗೂ ಮಹಿಳೆಯರ ಅತ್ಯಾಚಾರ, ಕೊಲೆ ಮೊದಲಾದ ಪ್ರಕರಣಗಳು ಅವ್ಯಾಹತವಾಗಿ ನಡೆಯುತ್ತಿದೆ. ಅದಕ್ಕೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತರದೆ ಹೋದರೆ ಈ ಪ್ರಕರಣಗಳು ಮತ್ತಷ್ಟು ಹೆಚ್ಚಾಗುವ ಸಂಭವವಿದೆ ಎಂಬುದು ಲೇಖಕಿಯ ಕಾಳಜಿಯಾಗಿದೆ.

ಆನ್ ಫ್ರಾಂಕಳ ಡೈರಿ : ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಜರ್ಮನಿಯ ಹಿಟ್ಲರ್‌ನಿಂದ ಸ್ಥಾಪಿಸಲಾದ 'ನಾಜಿಪಕ್ಷ'ವು ಯುರೋಪಿನ ಇತರ ದೇಶಗಳ ಮೇಲೆ ಯುದ್ಧ ಸಾರಿತು. ಆಮ್‌ಸ್ಟಾರ್‌ಡಾಂ ಮೇಲೆ ಯುದ್ಧ ಮಾಡುವಾಗ ಯಹೂದಿಗಳನ್ನು ಸೆರೆ ಹಿಡಿದು ನಿರ್ದಯವಾಗಿ ಕೊಲ್ಲಲಾಯಿತು. ಈ ಸಂದರ್ಭದಲ್ಲಿ ಯಹೂದಿ ಕುಟುಂಬಕ್ಕೆ ಸೇರಿದ 'ಆನ್‌ಫ್ರಾಂಕ್' ಎಂಬ ಹದಿಮೂರರ ಹರೆಯದ ಹುಡುಗಿ ಆಮ್‌ಸ್ಟಾರ್‌ಡಾಂನಲ್ಲಿದ್ದಳು. ಈಕೆ ಯುದ್ಧದ ಸಂದರ್ಭದಲ್ಲಿ ನಾಜಿ ಪಕ್ಷದವರ ಕಣ್ಣಿಗೆ ಬೀಳದೆ ಎರಡು ವರ್ಷಗಳ ಕಾಲ ಅಜ್ಞಾತವಾಸದಲ್ಲಿರುತ್ತಾಳೆ. ಅಜ್ಞಾತವಾಸದ ಸಂದರ್ಭದಲ್ಲಿ ಆನ್‌ಫ್ರಾಂಕ್ ತಾನು ಅನುಭವಿಸಿದ ನೋವು, ಹತಾಶೆಗಳನ್ನು ಡೈರಿಯಲ್ಲಿ ಬರೆದಿದ್ದಾಳೆ. ಈಕೆ ಬರೆದ ಡೈರಿ ಸಿಕ್ಕ ಬಳಿಕವೆ ಪ್ರಪಂಚಕ್ಕೆ ನಾಜಿಗಳ ಕ್ರೌರ್ಯದ ಬಗ್ಗೆ ತಿಳಿಯಿತು. ಹೇಮಲತಾ ಮಹಿಷಿ ಅವರು ಆನ್‌ಫ್ರಾಂಕ್‌ಳ ಬಗ್ಗೆ ಬರೆಯುತ್ತಾ "ತಾವು ಅಡಗಿಕುಳಿತಿದ್ದ ಜಾಗದಲ್ಲಿ ತನ್ನ ಮನದಲ್ಲಿ ಏಳುತ್ತಿದ್ದ ಭಾವನೆಗಳನ್ನು, ಕಾತರ–ಆತಂಕಗಳನ್ನು, ಹೊರ ಪ್ರಪಂಚದೊಂದಿಗೆ ಸಂಬಂಧ ಕಡಿದು ಹೋಗಿರುವ ಸ್ಥಿತಿಯಲ್ಲಿನ ನೀರಸ ಜೀವನದ ಬೇಸರವನ್ನು, ನಾಜಿ ಪೋಲಿಸರು ಯಾವ ಸಮಯದಲ್ಲಿಯೂ ಬಂದು ತಮ್ಮನ್ನು ಸೆರೆ ಹಿಡಿಯಬಹುದಾದ ಭಯವನ್ನು, ಜ್ಯೂ ಆಗಿದ್ದ ಕಾರಣಕ್ಕಾಗಿ ತಾವು ಅನುಭವಿಸಬೇಕಾಗಿ ಬಂದ ಮಾನಸಿಕ, ದೈಹಿಕ ಯಾತನೆಯನ್ನು, ಕಳೆದುಕೊಂಡ ಅಮೂಲ್ಯ ಸ್ವಾತಂತ್ರ್ಯದ ಬಗ್ಗೆಯೆ ಹಾತೊರೆಯುವಿಕೆಯನ್ನು ಹೃದಯ ಕರಗುವಂತೆ ಚಿತ್ರಿಸಿದ್ದಾಳೆ"(ಹೇಮಲತಾ ಮಹಿಷಿ., ಯುರೋ–ದರ್ಶನ., ಪು–೧೬೯)ಎಂದು ದಾಖಲಿಸಿದ್ದಾರೆ. ಇಷ್ಟೆಲ್ಲಾ ಯಾತನೆಯನ್ನು ಎರಡು ವರ್ಷಗಳ ಕಾಲ ಅನುಭವಿಸಿದ ಆನ್‌ಫ್ರಾಂಕ್ ಕೊನೆಗೆ ನಾಜಿ ಪೋಲೀಸರ ಕೈಗೆ ಸಿಕ್ಕು ಅಸುನೀಗಿದ್ದಾಳೆ. ಆದರೆ ಆಕೆ ಬರೆದ ಡೈರಿ ಉಳಿದು ಪುಸ್ತಕವಾಗಿ ಪ್ರಕಟವಾಗಿದೆ. ನಾಜಿಗಳ ಹಿಂಸಾ ಕೃತ್ಯಗಳ ಬಗ್ಗೆ ಅದು ಸಾಕ್ಷ್ಯವಾಗಿ ನಿಲ್ಲುತ್ತದೆ. ಮತ್ತು ಆ ಕೃತಿಯು ಹಲವು ಜನರಿಗೆ ಪ್ರೇರಣೆ ನೀಡಿದೆ. ಜಾನ್. ಎಫ್. ಕೆನಡಿ, ನೆಲ್ಸನ್ ಮಂಡೇಲಾ ಮೊದಲಾದವರು ಈ ಕೃತಿಯಿಂದ ಪ್ರಭಾವಿತರಾಗಿದ್ದಾರೆ. 'ರಾಬಿನ್ ದ್ವೀಪದಲ್ಲಿ ಇದನ್ನು ನಾವು ಕೆಲವರು ಓದಿ, ಅದರಿಂದ ಉತ್ತೇಜನ ಪಡೆದೆವು' ಎಂದು ನೆಲ್ಸನ್ ಮಂಡೇಲಾ ಅವರು ಹೇಳಿದ ಮಾತನ್ನು ಲೇಖಕಿ ದಾಖಲಿಸಿದ್ದಾರೆ.

ಆನ್‌ಫ್ರಾಂಕ್‌ಳ ಡೈರಿಯ ಬಗ್ಗೆ ಹೇಮಲತಾ ಮಹಿಷಿ, ನೇಮಿಚಂದ್ರ, ಅನುಪಮಾ ನಿರಂಜನ, ಲತಾಗುತ್ತಿ ಮೊದಲಾದವರು ತಮ್ಮ ಪ್ರವಾಸ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. ಆನ್‌ಫ್ರಾಂಕ್‌ಳ ಬಗ್ಗೆ ಮಹಿಳಾ ಲೇಖಕಿಯರು ಮಾತ್ರ ಉಲ್ಲೇಖಿಸಿದ್ದಾರೆ. ಪುರುಷ ಲೇಖಕರು ಆನ್‌ಫ್ರಾಂಕ್‌ಳ ಬಗ್ಗೆಯಾಗಲಿ, ಆಕೆಯ ಡೈರಿಯ ಬಗ್ಗೆಯಾಗಲಿ ತಮ್ಮ ಪ್ರವಾಸ ಕೃತಿಯಲ್ಲಿ ದಾಖಲಿಸಿರುವುದಿಲ್ಲ. ಈ ವಿವರಗಳು ಸೂಚಿಸುವುದೇನೆಂದರೆ ಪ್ರವಾಸ ಕೃತಿಗಳ ರಚನೆಯ ಮೇಲೆ ಲೇಖಕರ ಆಸಕ್ತಿಯ ವಿಷಯಗಳು, ಸೈದ್ಧಾಂತಿಕ ಒನ್ನೆಲೆ, ಮತ್ತು ಲಿಂಗಭೇಧದ ಮನಸ್ಥಿತಿಯ ಪ್ರಭಾವ ಬೀರುತ್ತದೆ ಎಂಬದನ್ನು ಕಂಡುಕೊಳ್ಳಲಾಗಿದೆ.

ಹೇಮಲತಾ ಮಹಿಷಿ ಅವರಿಗೆ ಯುರೋಪ್ ಪ್ರವಾಸದಲ್ಲಿ ಜೊತೆಯಾಗಿದ್ದವರು ನೇಮಿಚಂದ್ರ. ನೇಮಿಚಂದ್ರ ಅವರು ಯುರೋಪ್ ಪ್ರವಾಸದ ರೂಪುರೇಷೆಗಳನ್ನು ತಯಾರಿಸಿಕೊಂಡು ಮಹಾತ್ವಾಕಾಂಕ್ಷೆಯ ಪ್ರವಾಸವನ್ನು ಕಾರ್ಯಗತಗೊಳಿಸಿದವರು. ಇವರ ಪ್ರವಾಸದ ಪ್ರಮುಖ ಉದ್ದೇಶವೇ ಮಹಿಳಾ ಅಧ್ಯಯನ ಮಾಡುವುದು. ಅವರೇ ತಿಳಿಸಿರುವಂತೆ 'ಮಹಿಳಾ ವಿಜ್ಞಾನಿಗಳು ನನ್ನ ತೀವ್ರ ಆಸಕ್ತಿ ಮತ್ತು ಅಧ್ಯಯನ ವಿಷಯ' ಎಂದು ಹೇಳಿಕೊಂಡಿದ್ದಾರೆ. ಮತ್ತು ನೇಮಿಚಂದ್ರ ಅವರು ಭೇಟಿಯಾಗಲು ಬಯಸುವ ಸ್ಥಳಗಳ ಮತ್ತು ವ್ಯಕ್ತಿಗಳ ಪಟ್ಟಿಯು ಈ ಉದ್ದೇಶದ ಹಿನ್ನೆಲೆಯಲ್ಲಿಯೇ ರೂಪಿತವಾಗಿವೆ. ತಮ್ಮ ಪ್ರವಾಸ ಕೃತಿಯಲ್ಲಿ ೧೮೬೬ರಲ್ಲಿ ಮದ್ರಾಸ್ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿದವರು 'ಮೇರಿ ಶೆರ್ಲಿ' ಎಂತಲೂ; ಈಕೆ ಭಾರತದ ಮೊದಲ ಮೆಡಿಕಲ್ ವಿದ್ಯಾರ್ಥಿನಿ ಮತ್ತು ಇದು ಭಾರತದ ಮೊದಲ ಮೆಡಿಕಲ್ ಕಾಲೇಜು ಎಂದು ತಮ್ಮ ಅಧ್ಯಯನದಿಂದ ಕಂಡುಕೊಂಡ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಸ್ತ್ರೀವಾದಿ ಲೇಖಕಿ 'ಅಫ್ರಾಬೆನ್' ಅವರ ಊರು 'ಹಾರ್ಬರ್ ಡೌನ್'ಗೆ ಹೋಗಿ ಆಕೆಯ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದ್ದಾರೆ. ೧೮೬೦ರಲ್ಲಿ ಸೆಂಟ್ ಥಾಮಸ್ ಆಸ್ಪತ್ರೆಯನ್ನು ಸ್ಥಾಪಿಸಿದ, 'ಲೇಡಿ ವಿಥ್ ದ ಲ್ಯಾಂಪ್' ಖ್ಯಾತಿಯ, ಕ್ರಿಮಿಯಾ ಯುದ್ಧದಲ್ಲಿ ಗಾಯಗೊಂಡ ಖೈದಿಗಳನ್ನು ತಾಯಿಯಂತೆ ಪೋಷಿಸಿದ 'ಫ್ಲಾರೆನ್ಸ್ ನೈಟೀಂಗೇಲ್'ಳ ಬಗ್ಗೆ ಬರೆದಿದ್ದಾರೆ. ಯುರೇನಸ್ ಗ್ರಹವನ್ನು ಕಂಡುಹಿಡಿದ ವಿಲಿಯಂ ಹರ್ಷೆಲ್‌ನ ತಂಗಿ 'ಕ್ಯಾರೋಲಿನ್ ಹರ್ಷೆಲ್'ಳ ವೈಯುಕ್ತಿಕ ವಿಷಯಗಳನ್ನು ಆಸಕ್ತಿಯಿಂದ ಕಲೆಹಾಕಿದ್ದಾರೆ. ವಿಶ್ವದ ಮೊದಲ ಮಹಿಳಾ ಡಾಕ್ಟರ್ 'ಎಲಿಜಬೆತ್ ಬ್ಲಾಕ್ವೆಲ್'ನ ಬಗ್ಗೆ ವಿಷಯ ಸಂಗ್ರಹಿಸುವ ಉದ್ದೇಶವನ್ನು ಹೇಳಿಕೊಂಡಿದ್ದಾರೆ. ಹೀಗೆ ಸ್ತ್ರೀ ಸಾಧಕಿಯರ ಬಗ್ಗೆ ತಿಳಿಯುವ ಉತ್ಸಾಹವನ್ನು ತೋರಿದ್ದಾರೆ. ನೇಮಿಚಂದ್ರ ಅವರು "ನನ್ನ ಆಸಕ್ತಿ ಐನ್‌ಸ್ಟೈನ್‌ಗಿಂತ ಹೆಚ್ಚು ಆತನ ಪತ್ನಿ ಮಿಲೇವಾ ಮಾರಿ ಬಗೆಗಿತ್ತು"(ನೇಮಿಚಂದ್ರ., ಒಂದು ಕನಸಿನ ಪಯಣ., ಪು-೩೭)ಎಂದಿರುವುದು ಅವರ ಆಸಕ್ತಿಯನ್ನು ಮತ್ತು ಕರ್ತವ್ಯಪರತೆಯನ್ನು ಸೂಚಿಸುತ್ತದೆ. ಇವರ ಇಡೀ ಪ್ರವಾಸ ಕೃತಿಯನ್ನು ಗಮನಿಸಿದರೆ ಮಹಿಳೆಯರ ಬದುಕಿನ ಹಿನ್ನೆಲೆಯ ವಿಷಯಗಳನ್ನು ಸಂಗ್ರಹಿಸಲು ಪ್ರವಾಸ ಮಾಡಿದಂತಿದೆ. ನೇಮಿಚಂದ್ರ ಅವರ ಪ್ರವಾಸ ಕೃತಿಯ ಹೆಸರೇ ಸೂಚಿಸುವಂತೆ ಒಂದು ಕನಸಿನ ಪಯಣವಾಗಿತ್ತು. ಆ ಪಯಣದಲ್ಲಿ ಮಹಿಳಾ ವಿಜ್ಞಾನಿಗಳನ್ನು, ಸಾಧಕರನ್ನು ಕನ್ನಡದಲ್ಲಿ ವಿವರವಾಗಿ ಪರಿಚಯಿಸುವ ಉದ್ದೇಶವನ್ನು ಹೊಂದಿದ್ದರು. ಆದ್ದರಿಂದಲೆ ಹೇಮಲತಾ ಮಹಿಷಿ ಅವರು ಲಂಡನ್‌ನಲ್ಲಿ ತಮ್ಮ ಆಸಕ್ತಿಯಂತೆ ಓಲ್ಡ್‌ಬೇಲಿ ಕೋರ್ಟ್‌ಗೆ ಹೋದರೆ, ನೇಮಿಚಂದ್ರ ಅವರು ಮಹಿಳಾ ವಿಜ್ಞಾನಿಯ ಮನೆ ಹುಡುಕಿಕೊಂಡು ಹೋಗಿದ್ದಾರೆ. ಭಾಷೆ ಬಾರದ ಊರಿನಲ್ಲಿಯೂ ತಮ್ಮ ಕನಸಿನ ಈಡೇರಿಕೆಗಾಗಿ ಏಕಾಂಗಿಯಾಗಿಯೇ ಓಡಾಡಿದ್ದಾರೆ. ಅವರ ಭವಿಷ್ಯದ ಯೋಜನೆಯನ್ನು ಕಾರ್ಯಗತಗೊಳಿಸಲು ಯುರೋಪ್ ಪ್ರವಾಸ ಕೈಗೊಂಡಿರುವುದು ಈ ಮೇಲಿನ ಉದಾಹರಣೆಗಳಿಂದ ತಿಳಿಯುತ್ತದೆ. ಲೇಖಕಿಯರ ವೈಯಕ್ತಿಕ ಆಸಕ್ತಿಯ ಹಿನ್ನೆಲೆಗಳು, ಹಾಗೂ ಸೈದ್ಧಾಂತಿಕ ನಂಬಿಕೆಗಳು ಕೃತಿಯ ಒಳಗೆ ಪ್ರವೇಶ ಪಡೆದಿರುವುದನ್ನು ಕಾಣಲಾಗಿದೆ. ಸ್ತ್ರೀವಾದ ಸಿದ್ಧಾಂತದ ಹಿನ್ನೆಲೆಯನ್ನು ಹೊಂದಿರುವ ನೇಮಿಚಂದ್ರ ಅವರು ಪ್ರವಾಸ ಕೃತಿಯನ್ನು ನಿರೂಪಿಸುವಾಗ ಮಹಿಳಾಪರ ಧೋರಣೆಗಳಿಗೆ ಸ್ಪಂಧಿಸಿರುವುದನ್ನು ಗಮನಿಸಲಾಗಿದೆ.

ನೇಮಿಚಂದ್ರ ಅವರು 'ಒಂದು ಕನಸಿನ ಪಯಣ' ಕೃತಿಯಲ್ಲಿ ಸ್ತ್ರೀಕೇಂದ್ರಿತ ವಿಮರ್ಶೆಯ ಜೊತೆಗೆ ಮಹಿಳೆಯರ ಸಾಮಾಜಿಕ ಬದುಕಿನ ವಿಸ್ತಾರಗಳನ್ನು, ವಿಶ್ಲೇಷಣಾತ್ಮಕ ದೃಷ್ಟಿಕೋನದ ಮೂಲಕ ಮಹಿಳಾಪರ ನೆಲೆಯಲ್ಲಿಯೇ ವಿವರಿಸಿದ್ದಾರೆ. ಅವರ ಪ್ರವಾಸದ ಬರೆವಣಿಗೆಯಲ್ಲಿ ಸಾಮಾಜಿಕ ಬದುಕಿನ ವಿವಿಧ

ಆಯಾಮಗಳನ್ನು, ಮಹಿಳೆಯರ ಸ್ಥಿತಿಗತಿಗಳನ್ನು ಹಾಗೂ ಆರ್ಥಿಕ ಮತ್ತು ರಾಜಕೀಯ ವಿಡಂಬನೆಗಳನ್ನು ಕಾಣಲಾಗಿದೆ. ಇಂಗ್ಲೆಂಡಿನಲ್ಲಿ ಪಬ್ಲಿಕ್ ಟೆಲಿಫೋನ್ ಬೂತ್‌ನಲ್ಲಿ ವೇಶ್ಯೆಯರ ಜಾಹಿರಾತು ಪ್ರಕಟಿಸಿರುವುದನ್ನು ಕಂಡು ವ್ಯಂಗ್ಯವಾಗಿ ಟೀಕಿಸಿದ್ದಾರೆ. 'ಹದಿನಾರರ ಶಾಲಾ ಹುಡುಗಿ' ಎಂಬ ಜಾಹಿರಾತನ್ನು ನೋಡಿ "ಸಭ್ಯ ನಾಗರಿಕತೆಯ ಅಂತರಾಳದ ಕತ್ತಲು" (ನೇಮಿಚಂದ್ರ., ಒಂದು ಕನಸಿನ ಪಯಣ., ಪು-೪೮)ಎಂದು ವಿಡಂಬಿಸಿದ್ದಾರೆ. ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಕಟ್ಟಿದ ಇಂಗ್ಲೆಂಡ್ ದೇಶವು ತಾನು ಬಹಳ ಸಭ್ಯ ಸಂಸ್ಕೃತಿಯನ್ನು ಹೊಂದಿರುವಂತೆ ತೋರ್ಪಡಿಸಿಕೊಂಡಿತ್ತು. ಆದರೆ ಈ ಸಭ್ಯ ಸಮಾಜದಲ್ಲಿಯೂ ಮಹಿಳೆಯರನ್ನು ಅನೈತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುವುದನ್ನು ಟೀಕಿಸಿದ್ದಾರೆ. ಈ ಮೇಲಿನ ಹೇಳಿಕೆಯಲ್ಲಿ ಲೇಖಕಿಯು ಮಹಿಳಾಪರವಾದ ಧೋರಣೆ ಹೊಂದಿರುವುದನ್ನು ಕಾಣಲಾಗಿದೆ.

ನೇಮಿಚಂದ್ರ ಅವರು ಮಹಿಳಾಪರ ಧೋರಣೆಯನ್ನು ಹೊಂದಿರುವುದು ಕೇವಲ ಸೈದ್ಧಾಂತಿಕ ನೆಲೆಯಲ್ಲಿ ಮಾತ್ರವಲ್ಲ; ನಿಜ ಜೀವನದಲ್ಲಿಯೂ ಮಹಿಳೆಯರ ಪರವಾದ ಕಾಳಜಿಯನ್ನು ಹೊಂದಿದ್ದಾರೆ ಎಂಬುದನ್ನು ಪ್ರವಾಸ ಕೃತಿಯಲ್ಲಿ ನಮೂದಾಗಿರುವ ಈ ಘಟನೆಯ ಮೂಲಕ ಕಂಡುಕೊಳ್ಳಲಾಗಿದೆ. ಲೇಖಕಿ ಇಂಗ್ಲೆಂಡಿಗೆ ಪ್ರಯಾಣಿಸುವ ಮಾರ್ಗದಲ್ಲಿ ದುಬೈನ ಮಸ್ಕಟ್ ವಿಮಾನ ನಿಲ್ದಾಣದಲ್ಲಿದ್ದಾಗ, ಅಲ್ಲಿನ ತಪಾಸಣಾ ಅಧಿಕಾರಿ ಒಬ್ಬ ಮಹಿಳೆಗೆ ಬೋರ್ಡಿಂಗ್ ಪಾಸ್‌ನ್ನು ಕೊಡಲು ನಿರಾಕರಿಸುತ್ತಾನೆ. ಆಗ ಲೇಖಕಿ ತಾನೇ ಮುಂದೆ ಬಂದು ವಿಚಾರಿಸಿದ್ದಲ್ಲದೆ, ತಪಾಸಣಾ ಅಧಿಕಾರಿಯನ್ನು ಜೋರು ಮಾಡಿ ಆಕೆಗೆ ಬೋರ್ಡಿಂಗ್ ಪಾಸ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಲೇಖಕಿಯು 'ನಾನು ಇರುವುದೇ ಬೇರೋಂದು ದೇಶದಲ್ಲಿ, ಅನ್ಯರ ಚಿಂತೆ ನಮಗೇಕೆ' ಎಂದು ಸುಮ್ಮನಿರಬಹುದಿತ್ತು. ಆದರೆ ಲೇಖಕಿ ತಾವೇ ಮುಂದು ನಿಂತು ಮಹಿಳೆಗೆ ಸಹಾಯ ಮಾಡಿದ್ದಾರೆ. ವಿದೇಶಗಳಲ್ಲಿ ಪ್ರವಾಸದಲ್ಲಿರುವಾಗ ಈ ಬಗೆಯಲ್ಲಿ ಸಹಾಯ ಮಾಡುವುದು ತುಸು ಕಷ್ಟವೇ ಆಗುತ್ತದೆ. ತಿಳಿಯದ ದೇಶ, ತಿಳಿಯದ ಭಾಷೆ, ತಿಳಿಯದ ಜನರ ನಡುವೆ ಈ ಬಗೆಯಲ್ಲಿ ಸಹಾಯವನ್ನು ಮಾಡುವುದು ಅಪಾಯಕಾರಿಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅವು ಯಾವುದನ್ನೂ ಲೆಕ್ಕಿಸದೆ ಲೇಖಕಿಯು ಸಹಾಯ ಮಾಡಿರುವುದನ್ನು ಗಮನಿಸಿದಾಗ ಲೇಖಕಿ ಕೇವಲ ಸೈದ್ಧಾಂತಿಕ ನೆಲೆಗೆ ಸೀಮಿತವಾಗಿ ಮಹಿಳಾಪರ ಧೋರಣೆ ಪ್ರಕಟಿಸುವುದಿಲ್ಲ, ಬದಲಾಗಿ ನಿಜ ಜೀವನದಲ್ಲಿಯೂ ಮಹಿಳಾಪರವಾದ ಕಾಳಜಿಯನ್ನು ಹೊಂದಿರುವುದನ್ನು ಗುರುತಿಸಲಾಗಿದೆ. ಪ್ರವಾಸ ಕೃತಿಗಳು ಆತ್ಮಕಥೆಯ ಒಂದು ಭಾಗವಾಗಿ ಲೇಖಕರ ವೈಯಕ್ತಿಕ ಹಿತಾಸಕ್ತಿಗಳನ್ನು ಅರಿಯಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

ನೇಮಿಚಂದ್ರ ಅವರು ಯುರೋಪಿನ ಅನೇಕ ಭಾಗಗಳಲ್ಲಿ ಸಂಚರಿಸಿದ ಬಳಿಕ, ಮಹಿಳೆಯರ ಪರಿಸ್ಥಿತಿಗಳನ್ನು ಆಧರಿಸಿ "ಹೆಣ್ಣ ಮೇಲಿನ ಶೀಲದ ಹೊರೆ, ಅವರ ಮೇಲೆ ಆರೋಪಿಸುವ ಶಂಕೆಯ ಭಾರ ಎಲ್ಲಾ ಸಮಾಜಗಳಲ್ಲೂ ಸಮಾನ" (ನೇಮಿಚಂದ್ರ., ಒಂದು ಕನಸಿನ ಪಯಣ., ಪು-೮೫)ಎಂದಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಲಿಂಗಭೇಧ ಇಲ್ಲ. ಯುರೋಪಿನ ಸಮಾಜದಲ್ಲಿ ಮಹಿಳೆಯು ಪುರುಷರಿಗೆ ಸಮಾನವಾಗಿ ನಿಂತಿದ್ದಾಳೆ ಎಂಬ ಅಭಿಪ್ರಾಯಗಳನ್ನು ಹಲವು ಲೇಖಕರು ವ್ಯಕ್ತಪಡಿಸಿದರೆ, ನೇಮಿಚಂದ್ರ ಅವರಿಗೆ ಯುರೋಪಿನ ದೇಶಗಳನ್ನು ಒಳಗೊಂಡಂತೆ ಪ್ರಪಂಚದ ಯಾವುದೇ ದೇಶಕ್ಕೆ ಹೋದರೂ ಹೆಣ್ಣಿನ ಮೇಲೆ ಹೊರಿಸಲಾಗಿರುವ ಶೀಲದ ಭಾರ ಮತ್ತು ಶಂಕೆಯ ಸ್ವರೂಪವು ಒಂದೇ ಇದೆ ಎಂದಿದ್ದಾರೆ. ಜಾಗತಿಕ ಮಟ್ಟದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಲು ಯುರೋಪ್ ಪ್ರವಾಸ ನೆರವಾಗಿದೆ.

ಹಾಗಾದರೆ ಜಾಗತಿಕ ಮಟ್ಟದಲ್ಲಿ ಲಿಂಗ ಭೇದ ಇರುವುದನ್ನು ಲೇಖಕಿ ಗುರುತಿಸಲು ಕಾರಣವೇನೆಂದು ಪರಿಶೀಲಿದಾಗ ನೋಡುವ ದೃಷ್ಟಿಕೋನವು ಆಕೆಯ ಅಭಿಪ್ರಾಯವನ್ನು ರೂಪಿಸುತ್ತದೆಯೇ? ಅಥವಾ ಪೂರ್ವಾಗ್ರಹಗಳ ಕಾರಣದಿಂದ ಈ ಬಗೆಯ ಅಭಿಪ್ರಾಯಗಳು ವ್ಯಕ್ತವಾಗುತ್ತದೆಯೇ? ಇದರ ಸ್ವರೂಪವನ್ನು ವಿವರಿಸಿಕೊಳ್ಳಬೇಕಾದ ಅಗತ್ಯವಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಇಂದಿರಾ ಶಿವಣ್ಣ ಅವರ 'ಹಾಲೆಂಡ್‌ನಿಂದ ಲಂಡನ್‌ವರೆಗೆ' ಪ್ರವಾಸ ಕೃತಿಯು ಪ್ರಮುಖವಾಗಿ ಚಾರಿತ್ರಿಕ ಮನೋಧರ್ಮವುಳ್ಳ ಕೃತಿಯಾಗಿದೆ. ಸ್ತ್ರೀ ಪರವಾದ ಸಂಗತಿಗಳ ಬಗ್ಗೆ ಹೆಚ್ಚು ಚರ್ಚೆಗಳಿಲ್ಲದಿರುವುದು ಕಂಡುಬರುತ್ತದೆ. ಚಾರಿತ್ರಿಕ ವಿವರಗಳ ಹಿನ್ನೆಲೆಯಲ್ಲಿಯೇ ಸ್ತ್ರೀ ಪರವಾದ ಧೋರಣೆಗಳು ವ್ಯಕ್ತವಾಗಿರುವುದನ್ನು ಕಾಣಲಾಗಿದೆ.

ಇಂಗ್ಲೆಂಡಿನ ರಾಜಮನೆತನದ ರಾಣಿಯರ ಶಿರಚ್ಛೇಧನ : ಇಂದಿರಾ ಶಿವಣ್ಣ ಅವರು ಐತಿಹಾಸಿಕ ವಸ್ತು ವಿಷಯಗಳನ್ನು ಸರಳವಾದ ಭಾಷೆಯಲ್ಲಿ ಓದುಗರಿಗೆ ಅರ್ಥವಾಗುವಂತೆ ಬರೆದಿದ್ದಾರೆ. ಇಂಗ್ಲೆಂಡಿನಲ್ಲಿ ರಾಣಿಯರ ಶಿರಚ್ಛೇಧನ ಮಾಡಿದ ಘಟನೆಯನ್ನು ಹೇಳಿದ್ದಾರೆ. ಇಂಗ್ಲೆಂಡ್ ಸಾಮ್ರಾಜ್ಯವು ವಿಶ್ವದಲ್ಲಿ ಎಷ್ಟು ಪ್ರಸಿದ್ಧಿಯನ್ನು ಗಳಿಸಿತ್ತೋ; ಅಷ್ಟೇ ಅಪಖ್ಯಾತಿ ಪಡೆದುಕೊಂಡಿರುವುದನ್ನು ಈ ಚಾರಿತ್ರಿಕ ವಿವರಗಳು ಧೃಢಪಡಿಸುತ್ತವೆ. ಇಂಗ್ಲೆಂಡಿನ ರಾಜಮನೆತನದಲ್ಲಿ ಮಹಿಳೆಗೆ ರಾಣಿಯ ಪಟ್ಟ ನೀಡಿದರೂ ಆಕೆಯ ಬದುಕು ಒಂದು ಬಗೆಯಲ್ಲಿ ಅನಿಶ್ಚಿತತೆಯ ಗೂಡಾಗಿತ್ತು ಎಂದು ಲೇಖಕಿ ಮಹಿಳಾಪರ ಧೋರಣೆಯೊಂದಿಗೆ ಐತಿಹಾಸಿಕ ಘಟನೆಯನ್ನು ವಿವರಿಸಿದ್ದಾರೆ. 'ಇಂಗ್ಲೆಂಡಿನ ರಾಜ 'ಎಂಟನೇ ಹೆನ್ರಿ'ಯು ಹದಿನೆಂಟನೇ ವಯಸ್ಸಿಗೆ ಸಿಂಹಾಸನವನ್ನು ಏರುತ್ತಾನೆ. ತನ್ನ ಅಣ್ಣ ತೀರಿಕೊಂಡ ಬಳಿಕ ಆಕೆಯ ಹೆಂಡತಿಯನ್ನು ಮದುವೆ ಆಗುತ್ತಾನೆ. ಆಕೆಗೆ ಗಂಡು ಸಂತಾನವಿಲ್ಲವೆಂದು ವಿಚ್ಛೇದನೆ ಪಡೆದು 'ಆನ್– ಬೋಲಿಸ್'ಳೊಂದಿಗೆ ವಿವಾಹವಾಗುತ್ತಾನೆ. ಆಕೆಯ ಶೀಲ ಸರಿಯಿಲ್ಲವೆಂದು ಆಪಾದನೆ ಹೊರಿಸಿ ಗ್ರೀನ್ ಟವರ್‌ನಲ್ಲಿ ತಲೆಯನ್ನು ಕಡಿಸುತ್ತಾನೆ. ನಂತರ ಜೇನ್ ಮೂರಳನ್ನು ಮದುವೆಯಾಗುತ್ತಾನೆ. ಆಕೆಗೆ ಗಂಡು ಮಗು ಹುಟ್ಟಿತು. ಆದರೆ ಜೇನ್ ತೀರಿ ಹೋಗುತ್ತಾಳೆ. ನಂತರ ಕ್ಲೆವಿಸನ್ ಡ್ಯೂಕ್ ಎಂಬುವವಳನ್ನು ಮದುವೆ ಆಗುತ್ತಾನೆ. ಎಂಟನೇ ಹೆನ್ರಿಗೆ ಇದು ನಾಲ್ಕನೇ ಮದುವೆ ಆಗಿರುತ್ತದೆ. ಈಕೆಯನ್ನು ವಿವಾಹ ವಿಚ್ಛೇದನ ಪಡೆದು ಇಪ್ಪತ್ತರ ಹುಡುಗಿ ಕ್ಯಾಥರಿನ್ ಹಾರ್ವರ್ಡ್‌ಳನ್ನು ಮದುವೆಯಾಗುತ್ತಾನೆ. ಆಗ ಎಂಟನೇ ಹೆನ್ರಿಗೆ ಐವತ್ತು ವರ್ಷ ವಯಸ್ಸಾಗಿರುತ್ತದೆ. ಈಕೆಯ ತಲೆಯನ್ನು ಲಂಡನ್ ಟವರ್‌ನಲ್ಲಿ ಕಡಿಸಿ ಮತ್ತೆ ಕ್ಯಾಥರೇನಾ ಪಾರ್ ಎಂಬುವವಳನ್ನು ಆರನೇ ಮದುವೆಯಾದನು' ಎಂಬುದಾಗಿ ವಿವರಿಸಿದ್ದಾರೆ.

ಇಂಗ್ಲೆಂಡಿನಲ್ಲಿ ಮಹಿಳೆಯರಿಗೆ ಪುರುಷನಷ್ಟೇ ಸಮಾನ ಸ್ಥಾನಮಾನ ಇದೆ ಎಂಬುದು ಸತ್ಯವಾದರೂ, ಅಲ್ಲಿನ ಮೇಲ್ವರ್ಗದ ಮಹಿಳೆಯರೇ ಶೋಷಣೆಗೆ ಒಳಗಾಗಿದ್ದಾರೆ ಎಂಬುದನ್ನು ಈ ಮೇಲಿನ ಐತಿಹಾಸಿಕ ಘಟನೆಗಳು ತಿಳಿಸಿಕೊಡುತ್ತವೆ. ನೇಮಿಚಂದ್ರ ಅವರು ನಿರೂಪಿಸಿದ 'ಹೆಣ್ಣಿನ ಮೇಲಿನ ಶಂಕೆಯ ಭಾರ ಎಲ್ಲಾ ಸಮಾಜಗಳಲ್ಲೂ ಸಮಾನ' ಎಂಬ ಅಭಿಪ್ರಾಯವನ್ನು ಒಪ್ಪಬೇಕಾಗುತ್ತದೆ. ಸ್ತ್ರೀ ತಾನು ಪುರುಷನಷ್ಟೇ ಶಕ್ತಳು ಎಂಬುದನ್ನು ಹೇಳಿಕೊಂಡರೂ ಬಹುತೇಕ ಸಂದರ್ಭಗಳಲ್ಲಿ ಮಹಿಳೆಯು ಅಸಹಾಯಕಳಾಗಿ ಬಿಡುತ್ತಾಳೆ. ಆದಕ್ಕೆ ಇಂದಿರಾ ಶಿವಣ್ಣ ಅವರು "ರಾಜಮನೆತನದಲ್ಲಿ ಹುಟ್ಟಿ ರಾಣಿಯರಾಗಿ ಮೆರೆದ ಈ ದುರಂತ ಹೆಣ್ಣುಗಳು ನಮ್ಮ ಸತಿಹೋದ ಹೆಣ್ಣುಗಳಿಗಿಂತಲೂ ದುರ್ದೈವಿಗಳು ಅನ್ನಿಸಿತು.(ಇಂದಿರಾ ಶಿವಣ್ಣ, ಹಾಲೆಂಡ್‌ನಿಂದ ಲಂಡನ್‌ವರೆಗೆ, ಪು–೨೦೩)ಎಂದಿದ್ದಾರೆ. ಈ ಅಭಿಪ್ರಾಯವು ಭಾರತೀಯ ಮಹಿಳೆಯ

ಸ್ಥಿತಿಗತಿಗೂ; ಇಂಗ್ಲೆಂಡಿನ ಮಹಿಳೆಯರ ಸ್ಥಿತಿಗತಿಗೂ ಕೆಲವೊಂದು ವ್ಯತ್ಯಾಸಗಳಿದ್ದರೂ ಬಹುತೇಕ ಇಂಗ್ಲೆಂಡಿನ ಮಹಿಳೆಯರ ಬದುಕು ಕೂಡ ಸಂಪೂರ್ಣ ಸ್ವತಂತ್ರವಲ್ಲ ಎಂಬುದನ್ನು ಶ್ರುತಪಡಿಸುತ್ತದೆ.

ಸ್ತ್ರೀಸಂಕಥನದೊಳಗೆ ಪುರುಷ ಸಂವೇದನೆಯ ನೆಲೆಗಳು : ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾರತೀಯತ್ವವನ್ನು ವಿವರಿಸ ಹೊರಟಾಗ ಸ್ತ್ರೀತ್ವದ ಪರಿಕಲ್ಪನೆ ಒಳಗೊಳ್ಳದಿದ್ದರೆ ಅಪೂರ್ಣ ವಿವರಣೆಯಾಗುತ್ತದೆ. ಭಾರತದ ಸಂಸ್ಕೃತಿಯು ಪುರುಷತ್ವ ಮತ್ತು ಸ್ತ್ರೀತ್ವದ ಎರಡೂ ಪರಿಕಲ್ಪನೆಯ ಮಿಶ್ರಣವಾಗಿದೆ. ಒಂದುನ್ನುಳಿದು ಮತ್ತೊಂದನ್ನು ಪರಿಗಣಿಸಲಾಗುವುದಿಲ್ಲ. ಪ್ರತಿಯೊಬ್ಬ ಪುರುಷನೊಳಗೂ ಹೆಣ್ತನ ಇರುತ್ತದೆ, ಅಂತೆಯೇ ಎಲ್ಲಾ ಮಹಿಳೆಯರಲ್ಲಿಯೂ ಪುರುಷತ್ವ ಇರುತ್ತದೆ ಎಂದು ವಿಮರ್ಶಕರು ಹೇಳಿದ್ದಾರೆ. ಯುರೋಪಿನ ಸಂಸ್ಕೃತಿಯಲ್ಲಿ ಮಹಿಳೆಯು ಸಾಮಾಜಿಕ ಕಟ್ಟುಪಾಡುಗಳಿಂದ ಮುಕ್ತಳಾಗಿದ್ದಾಳೆ ಎಂದು ಯುರೋಪ್ ಪ್ರವಾಸ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಭಾರತದಲ್ಲಿ ಸ್ತ್ರೀಯರನ್ನು ಪುರುಷರಿಗೆ ಸಮಾನವಾಗಿ ನೋಡುವ ದೃಷ್ಟಿಕೋನ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ. ಈ ಬೆಳೆವಣಿಗೆಗೆ ಹೋರಾಟದ ಲೇಪವೂ ಸೇರಿಕೊಂಡಿದೆ.

ಭಾರತೀಯ ಸಮಾಜದಲ್ಲಿ ಮಹಿಳೆಯರು ಪುರುಷರ ದಬ್ಬಾಳಿಕೆಗೆ ಒಳಗಾಗಿರುವ ಅನೇಕ ಘಟನೆಗಳು ನಡೆದಿದೆ. ಪ್ರಾಚೀನ ರಾಜರುಗಳ ಕಾಲದಲ್ಲಿ ಸಾಮ್ರಾಜ್ಯಗಳ ನಡುವೆ ಯುದ್ಧಗಳಾದಾಗ ಸೋತ ರಾಜನ ಸಂಪೂರ್ಣ ಸಾಮ್ರಾಜ್ಯವು ಗೆದ್ದ ರಾಜನ ಪಾಲಾಗುತ್ತಿತ್ತು. ಗೆದ್ದ ರಾಜನ ಕಡೆಯ ಸೈನಿಕರು ಸೋತ ಸಾಮ್ರಾಜ್ಯದ ಸ್ತ್ರೀಯರನ್ನು ಅತ್ಯಾಚಾರ ಮಾಡುತ್ತಿದ್ದರು. ಅವರನ್ನು ಬಂಧಿಗಳನ್ನಾಗಿ ಮಾಡಿಕೊಂಡು ತಮ್ಮ ಜೊತೆ ಕರೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದರು. ಈ ಬಗೆಯ ಸ್ತ್ರೀ ಶೋಷಣೆ ಯುರೋಪಿನ ದೇಶಗಳಲ್ಲಿಯೂ ನಡೆಯುತ್ತಿತ್ತು ಎಂಬುದನ್ನು ಯುರೋಪ್ ಪ್ರವಾಸ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಯುರೋಪಿನ ರೋಮ್ ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದಲ್ಲಿ ನಡೆದ ಘಟನೆಯನ್ನು ದೊಡ್ಡೇರಿ ವೆಂಕಟಗಿರಿರಾವ್ ಅವರು ಉಲ್ಲೇಖಿಸಿದ್ದಾರೆ. ರೋಮನ್ನರು ತಾವು ಯಾವ ಪ್ರದೇಶವನ್ನು ಆಕ್ರಮಿಸಿಕೊಳ್ಳುತ್ತಾರೋ ಆ ಪ್ರದೇಶದ ಹೆಣ್ಣು ಮಕ್ಕಳನ್ನು ಹೊತ್ತು ತಂದು ಮಾನಭಂಗ ಮಾಡುತ್ತಿದ್ದರಂತೆ. ಅದನ್ನು ಬೆರ್ನಿನಿ ಎಂಬ ಶಿಲ್ಪಿ ತನ್ನ ಶಿಲ್ಪಕಲಾ ನೈಪುಣ್ಯದಿಂದ ಅದರ ಚಿತ್ರಕೃತಿಯನ್ನು ನಿರ್ಮಿಸಿದ್ದಾನೆ. ದೊಡ್ಡೇರಿ ವೆಂಕಟಗಿರಿರಾವ್ ಅವರು ರೋಮ್ ದೇಶದ ಸೈಬಾನ್ ಎಂಬ ಸ್ಥಳದ ಬಗ್ಗೆ ಈ ರೀತಿ ಹೇಳಿದ್ದಾರೆ. "ಸೈಬಾನ್ ಸ್ತ್ರೀಯರ ಮಾನಭಂಗವಾದ ಸ್ಥಳ. ರೋಂ ಯೋಧರು ನೆರೆಕೆರೆಯವರೊಡನೆ ಹೋರಾಡಿ ಸೋತವರ ಸ್ತ್ರೀಯರನ್ನು ಹೊತ್ತು ತಂದು ಈ ಮೈದಾನದಲ್ಲಿ ಸಾವಿರ ಜನರೆದುರು ಅವರ ಮಾನಾಪಹರಣ ಮಾಡುತ್ತಿದ್ದರು. ಇದು ದಂತಕಥೆಯಲ್ಲ–ಐತಿಹಾಸಿಕ ಸತ್ಯ. ಸ್ತ್ರೀಯರ ಮಾನಾಪಹರಣ ಹೆಮ್ಮೆಯ ಕಾರ್ಯ ಎಂದು ಪರಿಗಣಿಸುವ ಜನರು ಎಂಥ ಅಮಾನುಷರಿರಬೇಕು."(ದೊಡ್ಡೇರಿ ವೆಂಕಟಗಿರಿರಾವ್., ಏಕಾಕಿ ಪ್ರವಾಸಿ., ಪು–೧೫೫)ಎಂದಿದ್ದಾರೆ. ಬೆರ್ನಿನಿಯು ಸೈಬಾನ್ ಸ್ಥಳದಲ್ಲಿ ಮಾನಾಪಹರಣ ನಡೆಯುವ ಚಿತ್ರಣವನ್ನು ಶಿಲ್ಪಕಲೆಯಲ್ಲಿ ನಿರ್ಮಿಸಿದ್ದಾನೆ. ಈ ಶಿಲ್ಪಕೃತಿಯನ್ನು ಕಂಡ ಲೇಖಕರು ಪುರುಷರ ಅಮಾನವೀಯ ಕೃತ್ಯವನ್ನು ಖಂಡಿಸುತ್ತಲೇ ಸ್ತ್ರೀ ಪರವಾದ ಧೋರಣೆಯನ್ನು ವ್ಯಕ್ತಪಡಿಸಿದ್ದಾರೆ. ಹಿಂದಿನ ಕಾಲದಲ್ಲಿ ಸ್ತ್ರೀಯರನ್ನು ಸಮಾಜ ನಡೆಸಿಕೊಳ್ಳುವ ರೀತಿ ಎಲ್ಲಾ ಕಡೆಯೂ

ಸಾಮಾನ್ಯವಾಗಿ ಒಂದೇ ರೀತಿಯಲ್ಲಿತ್ತು. ಭಾರತದ ಸ್ತ್ರೀಯರ ಪರಿಸ್ಥಿತಿಗಿಂತ ಯುರೋಪಿನ ಸ್ತ್ರೀಯರ ಪರಿಸ್ಥಿತಿ ಭಿನ್ನವಾಗಿರಲಿಲ್ಲ ಎಂಬುದನ್ನು ಗ್ರಹಿಸಲಾಗಿದೆ.

ಸೈಬಾನ್ ಸ್ತ್ರೀಯರ ಬಗ್ಗೆ ಶಿವರಾಮ ಕಾರಂತರು ಇದೇ ಬಗೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ರೋಮನ್ ಇತಿಹಾಸದಲ್ಲಿ ಸೆಬ್ಯಾನ್ ಸ್ತ್ರೀಯರ ಮಾನಭಂಗದ ಕಥಾನಕವು ದಾರುಣವಾದ ಒಂದು ಐತಿಹಾಸಿಕ ಸತ್ಯ. ವಿಜಯಿಗಳಾದವರ ಪಾಲಿನ ಈ ದುರಹಂಕಾರ, ಕಾಮುಕತೆ ಮಾನವತೆಯ ಅತಿ ದಾರುಣ ದುರಂತ"(ಶಿವರಾಮ ಕಾರಂತ, ಅಪೂರ್ವ ಪಶ್ಚಿಮ, ಪು-೩೯೯)ಎಂದಿದ್ದಾರೆ. ಕಾರಂತರು ಸೆಬ್ಯಾನ್ ಸ್ತ್ರೀಯರ ಮಾನಭಂಗದ ಘಟನೆಯನ್ನು ಮಾನವೀಯತೆಯ ನೆಲೆಯಲ್ಲಿ ಗ್ರಹಿಸಿದ್ದಾರೆ. ಈ ಹಿಂದೆ ಆಳ್ವಿಕೆ ಮಾಡಿದ ರಾಜರುಗಳಲ್ಲಿ ಸ್ತ್ರೀಯರ ಮಾನಭಂಗ ಮಾಡುವ ಕಾರ್ಯ ವಿಜಯಿಗಳಾದವರ ಹಕ್ಕು ಎಂಬಂತೆ ಭಾವಿಸಿದಂತಿತ್ತು. ಮಾನವೀಯತೆಯನ್ನು ಮೀರಿ ನಡೆದ ಈ ಐತಿಹಾಸಿಕ ಘಟನೆಗಳು ಮಹಿಳೆಯರನ್ನು ಅಂದಿನ ಸಮಾಜ ನಡೆಸಿಕೊಳ್ಳುತ್ತಿದ್ದ ಬಗ್ಗೆ ತಿಳಿಸುತ್ತದೆ. ಯುರೋಪಿನ ದೇಶಗಳಲ್ಲಿ ಮಹಿಳೆಯರ ಬದುಕು ಕಾಲಾಂತರಗಳಲ್ಲಿ ಸುಧಾರಣೆಗೊಳ್ಳುತ್ತಾ ಬರುತ್ತಿರುವುದನ್ನು ಗಮನಿಸಬಹುದು. ಯುದ್ಧದಲ್ಲಿ ಗೆದ್ದವರ ಅಟ್ಟಹಾಸಕ್ಕೆ ಬಲಿಯಾಗುತ್ತಿದ್ದ ಅಂದಿನ ಹೆಣ್ಣು ಮಕ್ಕಳು ರಾಜಕೀಯ ಧ್ರುವೀಕರಣದ ಮೂಲಕ ಸುಧಾರಣೆಯ ನೆಲೆಗೆ ಬಂದಿದ್ದಾರೆ. ವಿಶ್ವದ ಎರಡು ಮಹಾನ್ ಯುದ್ಧಗಳು ಪ್ರಪಂಚಕ್ಕೆ ಮಾನವೀಯತೆಯ ಅರ್ಥವನ್ನು ಕಲಿಸಿಕೊಟ್ಟಿದೆ. ಯುದ್ಧಗಳು ಮಾನವನ ಸಂತತಿನ್ನು ನಾಶ ಮಾಡುತ್ತದೆ ಎಂಬ ಪ್ರಜ್ಞೆ ಬೆಳೆದಿದೆ. ಸಮಾಜದಲ್ಲಿ ಸರ್ವರ ಹಿತವನ್ನು ಕಾಪಾಡುವುದು ಎಲ್ಲರ ಕರ್ತವ್ಯ ಎಂಬ ಚಿಂತನೆಗಳು ಮಹಿಳೆಯರ ಸ್ಥಿತಿಯನ್ನು ಉತ್ತಮಗೊಳಿಸಲು ಕಾರಣವಾಗಿದೆ. ಶಿವರಾಮ ಕಾರಂತರು ಸೆಬ್ಯಾನ್ ಸ್ತ್ರೀಯರ ದುರಂತ ಬದುಕಿನ ಬಗ್ಗೆ ಹೇಳುತ್ತಾ ಇಂತಹ ವಿಕೃತಿಗಳು ಈ ಪ್ರಪಂಚದಲ್ಲಿ ಮತ್ತೆ ನಡೆಯದಿರಲಿ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ದೊಡ್ಡೇರಿ ವೆಂಕಟಗಿರಿರಾವ್ ಮತ್ತು ಶಿವರಾಮ ಕಾರಂತರು ಒಂದೇ ಘಟನೆಯನ್ನು ಉಲ್ಲೇಖಿಸಿದ್ದರು ಸ್ತ್ರೀ ಪರವಾದ ಧೋರಣೆಯಲ್ಲಿ ಭಿನ್ನತೆ ಇರುವುದನ್ನು ಕಾಣಲಾಗಿದೆ. ದೊಡ್ಡೇರಿ ವೆಂಕಟಗಿರಿರಾವ್ ಅವರ ಅಭಿಪ್ರಾಯದಲ್ಲಿ ಆಕ್ರೋಶ ಮತ್ತು ವೇದನೆಯ ಭಾವನೆ ವ್ಯಕ್ತವಾಗಿದೆ. ಕಾರಂತರು ಮಾನವೀಯ ನೆಲೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಯುದ್ಧದ ಪರಿಣಾಮಗಳನ್ನು ತಿಳಿದುಕೊಳ್ಳಬೇಕೆಂಬ ಆಶಯವಿರುವುದನ್ನು ಗಮನಿಸಲಾಗಿದೆ.

ರಾ.ಶಿ. ಅವರ 'ಕೊರವಂಜಿಯ ಪಡುವಣ ಯಾತ್ರೆ' ಕೃತಿಯು ತಿಳಿಹಾಸ್ಯದೊಂದಿಗೆ ಪ್ರವಾಸದ ವಿವರಗಳನ್ನು ಹೇಳಿದ್ದರೂ, ಧರ್ಮ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಲಪಂಥೀಯ ಧೋರಣೆಗಳಿಗೆ ಬದ್ಧವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಕೃತಿಯಾಗಿದೆ. ಧಾರ್ಮಿಕ ಪ್ರಜ್ಞೆಯ ಜೊತೆಗೆ ಮಹಿಳೆಯರನ್ನು ವಿಮರ್ಶನ ದೃಷ್ಟಿಯಿಂದ ನೋಡಿದ ಕೃತಿಯಾಗಿ ಕಂಡುಬರುತ್ತದೆ. ಈ ಕೃತಿಯ ಶೀರ್ಷಿಕೆಯೇ ಮಹಿಳೆಯನ್ನು ಪ್ರತಿನಿಧಿಸುತ್ತದೆ. ಆದರೆ ಮಹಿಳೆಯರ ಸ್ವತಂತ್ರ ಬದುಕಿನ ಬಗ್ಗೆ ಋಣಾತ್ಮಕ ಧೋರಣೆಗಳನ್ನು ವ್ಯಕ್ತಪಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಉದಾಹರಣೆಯನ್ನು ನೀಡಲಾಗಿದೆ. ರಾ.ಶಿ ಅವರು ಯುರೋಪ್ ದೇಶಕ್ಕೆ ಪ್ರವಾಸಕ್ಕಾಗಿ ತೆರಳುತ್ತಿದ್ದಾಗ ಟಾಷ್‌ಕಂಟ್ ವಿಮಾನ ನಿಲ್ದಾಣದಲ್ಲಿ, 'ರಾಣಿ ಆಫ್ ಝಾನ್ಸಿ' ಎಂಬ ವಿಮಾನದಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಮಾಸ್ಕೋಗೆ ಹೊರಡಲು ತಡವಾಗುತ್ತದೆ. ಆಗ ಲೇಖಕರು ಪ್ರಯಾಣದ ವಿಮೆಯನ್ನು ಮಾಡದಿರುವ ಬಗ್ಗೆ ಉಲ್ಲೇಖಿಸುತ್ತಾ, ಏನಾದರೂ ಆಕಸ್ಮಿಕ ಆದರೆ

"ಗಂಡನ ಅಡಚಣೆ ಇಲ್ಲದೆ, ಲಕ್ಷ ರೂಪಾಯಿ ಕೈಗೆ ಬಂದರೆ ಹೆಣ್ಣು ಸೌಜನ್ಯದಿಂದ ಬಾಳುವುದು ಕಷ್ಟ ಅಂತ ಅನ್ನಿಸಿತಾದ್ದರಿಂದ ವಿಮೆ ಮಾಡಿಸ್ತಿಲ್ಲ"(ರಾ.ಶಿ., ಕೊರವಂಜಿಯ ಪಡುವಣ ಯಾತ್ರೆ., ಪು–7)ಎಂದಿದ್ದಾರೆ. ಲಕ್ಷ ರೂಪಾಯಿ ಹಣ ಬಂದರೆ ಹೆಣ್ಣು ಸೌಜನ್ಯಯುತವಾಗಿ ಬಾಳುವುದು ಕಷ್ಟ ಎಂಬ ಅಭಿಪ್ರಾಯವು ಮಹಿಳೆಯರ ಪರವಾದ ಕಾಳಜಿಯನ್ನು ತೋರಿಸುತ್ತಿಲ್ಲ, ಬದಲಿಗೆ ಅನುಮಾನವನ್ನು ವ್ಯಕ್ತಪಡಿಸುತ್ತದೆ. ಹಣವು ಸ್ತ್ರೀಯರ ಸೌಜನ್ಯವನ್ನು ಮೀರಿದ ನಡೆವಳಿಕೆಗೆ ಕಾರಣವಾಗುತ್ತದೆ ಎಂಬ ಧ್ವನಿ ಇದೆ. ಹೆಣ್ಣಿಗೆ ಸೌಜನ್ಯತೆ ಮುಖ್ಯ ಎಂಬ ಮಾತು ಸಮಾಜದಲ್ಲಿ ವಿಧಿಸಲಾಗಿರುವ ಕಟ್ಟುಪಾಡುಗಳನ್ನು ಮೀರಬಾರದು ಎಂಬ ಚೌಕಟ್ಟನ್ನು ಸೂಚಿಸುತ್ತದೆ. ಲೇಖಕರು ಮಹಿಳೆಯರ ಪರವಾದ ಸಂವೇದನೆಯನ್ನು ವ್ಯಕ್ತಪಡಿಸಿದ್ದರೂ; ಅಂದಿನ ಕಾಲದ ಮಹಿಳೆಯರ ಸ್ಥಿತಿಗತಿಯನ್ನೂ ಸೂಚಿಸುತ್ತದೆ.

ಭಾರತದಲ್ಲಿ ಸ್ತ್ರಿಯರು ಏಕಾಂಗಿಯಾಗಿ ಮನೆಗಳಲ್ಲಿ ವಾಸ ಮಾಡುವುದು ಅಪಾಯಕಾರಿಯಾದುದು ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿದೆ. ಆದ್ದರಿಂದ ಬಹುತೇಕ ಮಹಿಳೆಯರು ತಾವು ಯಾರಾದರೂ ಗಂಡಸರ ಆಶ್ರಯದಲ್ಲಿರಲು ಬಯಸುವುದು ಸಾಮಾನ್ಯವಾಗಿದೆ. ಇದು ಭಾರತೀಯ ಸಮಾಜದಲ್ಲಿ ಮಹಿಳೆಯರಿಗೆ ಇರುವ ಅಸುರಕ್ಷತೆಯ ಭಾವವನ್ನು ತೊರ್ಪಡಿಸುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಒಂಟಿ ಮಹಿಳೆಯರ ಮೇಲೆ ಕಳ್ಳರು, ದರೋಡೆಕೋರರ, ಅತ್ಯಾಚಾರಿಗಳ ಧಾಳಿ ಆಗಿರುವುದನ್ನು ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ವರದಿಯಾಗಿದೆ. ಇಂದಿಗೂ ಈ ರೀತಿಯ ಘಟನೆಗಳು ಮರುಕಳಿಸುತ್ತಿದೆ. ಯುರೋಪಿನ ಬಹುತೇಕ ದೇಶಗಳಲ್ಲಿ ಮಹಿಳೆಯರಿಗೆ ಈ ಬಗೆಯ ಸಮಸ್ಯೆಗಳಿಲ್ಲ. ಅಲ್ಲಿ ಮಹಿಳೆಯರು ಒಂಟಿಯಾಗಿರುವುದು ಸಾಮಾನ್ಯವಾಗಿದೆ. ನಾಗತಿಹಳ್ಳಿ ಚಂದ್ರಶೇಖರ ಅವರು "ಒಬ್ಬೊಬ್ಬರೇ ಹೆಣ್ಣುಮಕ್ಕಳು ಹೀಗೆ ಏಕಾಂತವಾಸ ಮಾಡುವುದು ಪಾಶ್ಚಾತ್ಯರಲ್ಲಿ ಸಾಮಾನ್ಯ ಸಂಗತಿ"(ನಾಗತಿಹಳ್ಳಿ ಚಂದ್ರಶೇಖರ., ಅಯನ., ಪು–12)ಎಂದಿದ್ದಾರೆ. ಪಾಶ್ಚಾತ್ಯರಲ್ಲಿ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಲಿಂಗ ತಾರತಮ್ಯ ಮಾಡದೆ ಪುರುಷ ಸಮಾನ ದೃಷ್ಟಿಯಿಂದ ಕಾಣುವುದರಿಂದ ಮಹಿಳೆಯರಲ್ಲಿ ಒಂದು ಬಗೆಯ ಸುರಕ್ಷತಾ ಭಾವ ಇರುತ್ತದೆ. ಮಹಿಳೆಯರು ತಮಗೆ ಯಾವುದೇ ಸಮಸ್ಯೆ ಎದುರಾದರೂ ಸ್ವತಃ ತಾವೇ ಅದನ್ನು ಪರಿಹರಿಸಿಕೊಳ್ಳುವಷ್ಟು ಸಾಮರ್ಥ್ಯವನ್ನು ಗಳಿಸಿದ್ದಾರೆ. ಅಲ್ಲಿನ ಸಾಮಾಜಿಕ ವ್ಯವಸ್ಥೆಯು ಮಕ್ಕಳು ಪ್ರೌಢಾವಸ್ಥೆಗೆ ಬಂದ ಕೂಡಲೇ ಸ್ವತಂತ್ರವಾಗಿ ಬದುಕುವ ಅವಕಾಶವನ್ನು ಕಲ್ಪಿಸಿಕೊಡುವುದರಿಂದ ಸಮಸ್ಯೆಗಳನ್ನು ಎದುರಿಸುವ ಮನೋಭಾವ ಬಲಿಯಲು ಸಹಕಾರಿ ಆಗಿದೆ. ಆದ್ದರಿಂದಲೇ ರಾತ್ರಿಯ ಸಮಯದಲ್ಲಿಯೂ ಮಹಿಳೆಯರು ಏಕಾಂಗಿಯಾಗಿ ಓಡಾಡುತ್ತಾರೆ. ನಾಗತಿಹಳ್ಳಿ ಅವರು ದಕ್ಷಿಣ ಫ್ರಾನ್ಸ್‌ನ 'ಬಯೋನ್' ಎಂಬ ಹಳ್ಳಿಯ ಕಡೆಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಸರಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಸೇವೆ ಸಲ್ಲಿಸುವ ತರುಣಿಯ ಪರಿಚಯವಾಗುತ್ತದೆ. ಅವಳು ಅಂದು ರಾತ್ರಿಯ ಕತ್ತಲಲ್ಲಿಯೇ ರೈಲಿನಿಂದ ಇಳಿದು ಮನೆಗೆ ಹೋಗುತ್ತಾಳೆ. ಅದನ್ನು ಕಂಡ ಲೇಖಕರು "ರಾತ್ರಿ ಹನ್ನೆರಡು ಗಂಟೆಯಲ್ಲಿ ಯಾವುದೋ ಸ್ಟೇಶನ್‌ನಲ್ಲಿ ಆಕೆ ಇಳಿದು ಹೋದಳು. ಹೀಗೆ ಹೆಣ್ಣುಮಗಳೊಬ್ಬಳು ಸರಿ ರಾತ್ರಿಯಲ್ಲಿ ನಿರಾತಂಕವಾಗಿ ಅಡ್ಡಾಡುವ ಸ್ವಾತಂತ್ರ್ಯ ನಮ್ಮಲ್ಲಿ ಎಲ್ಲಿದೆ?"(ನಾಗತಿಹಳ್ಳಿ ಚಂದ್ರಶೇಖರ.,ಅಯನ., ಪು–17)ಎಂದು ಪ್ರಶ್ನಿಸಿದ್ದಾರೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿನ ಲೋಪಗಳನ್ನು ದಿಟ್ಟವಾಗಿಯೇ ಹೇಳಿದ್ದಾರೆ. ಇದರ ಮೂಲಕ ನಮ್ಮ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸುರಕ್ಷತೆಗೆ ಸಂಬಂಧಿಸಿದಂತೆ ಲೋಪಗಳಿವೆ ಎಂಬ ಸಂಗತಿಯನ್ನು ಸೂಚಿಸಿದ್ದಾರೆ.

ಯುರೋಪ್ ಪ್ರವಾಸ ಮಾಡುವ ಪ್ರವಾಸಿ ಲೇಖಕರು ತಮ್ಮ ಪ್ರವಾಸಾನುಭವಗಳನ್ನು ವ್ಯಕ್ತಪಡಿಸುವಾಗ ತಮ್ಮ ಮನಸ್ಸಿಗೆ ಹಿತವಾಗುವ, ಭಾವೋದ್ವೇಗಕ್ಕೆ ಒಳಗುಮಾಡುವ ಘಟನಾವಳಿಗಳನ್ನು ವಿವರವಾಗಿ ಬರೆದಿದ್ದಾರೆ. ಆದರೆ ತಮ್ಮ ಸೈದ್ಧಾಂತಿಕ ನಿಲುವುಗಳಿಗೆ ಒಗ್ಗದ, ತಮ್ಮ ಧೋರಣೆಗಳಿಗೆ ರುಚಿಸದ ಸಂಗತಿಗಳನ್ನು ಕೇವಲ ಮಾಹಿತಿಗಾಗಿ ಸೂಚಿಸುತ್ತಾರೆ. ಅನೇಕ ಮಹಿಳಾ ಪರವಾದ ಘಟನಾವಳಿಗಳ ಬಗ್ಗೆ ವಿವರಿಸಲು ಅವಕಾಶವಿದ್ದರೂ ವಿಶ್ಲೇಷಣೆ ಮಾಡಿರುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರವಾಸ ಕೃತಿಗಳ ವಿವರಗಳ ಮೇಲೆ ಲೇಖಕರ ನಂಬಿಕೆಗಳು, ಸಿದ್ಧಾಂತಗಳು, ಮತ್ತು ಬರೆಯುವಾಗಿನ ಮನಸ್ಥಿತಿಗಳು, ಪ್ರಭಾವ ಬೀರುತ್ತವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೬.೩. ಮಹಿಳಾಪರ ಧೋರಣೆಗಳು

ಕನ್ನಡದ ಯುರೋಪ್ ಪ್ರವಾಸ ಕೃತಿಗಳಲ್ಲಿ ಮಹಿಳೆಯನ್ನು ಕೇಂದ್ರೀಕರಿಸಿ ಚರ್ಚಿಸಿರುವ ಅಂಶಗಳನ್ನು ಈ ಉಪಶೀರ್ಷಿಕೆಯಡಿಯಲ್ಲಿ ವಿಶ್ಲೇಷಿಸಲಾಗಿದೆ. ಪ್ರಮುಖವಾಗಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ, ಉದ್ಯೋಗಪರತೆಯ ಬಗ್ಗೆ, ಸ್ತ್ರೀ ಶಿಕ್ಷಣದ ಬಗ್ಗೆ, ಹಾಗೂ ವಸ್ತ್ರ ಸಂಹಿತೆಗಳ ಬಗ್ಗೆ ಚರ್ಚಿಸಲಾಗಿದೆ.

ಸ್ತ್ರೀ ಸ್ವಾತಂತ್ರ್ಯ : ಅಧ್ಯಯನದ ವ್ಯಾಪ್ತಿಗೆ ಒಳಪಡುವ ಪ್ರವಾಸ ಕೃತಿಗಳಲ್ಲಿ ವ್ಯಕ್ತವಾಗಿರುವ ಸ್ತ್ರಿ ಸ್ವಾತಂತ್ರ್ಯದ ನಿಲುವುಗಳನ್ನು ಎರಡು ಕಾಲಘಟ್ಟದಲ್ಲಿ ವಿಭಾಗಿಸಿಕೊಂಡು ಚರ್ಚಿಸಲಾಗಿದೆ. ಎರಡನೇ ವಿಶ್ವಯುದ್ಧ ಘಟಿಸುವ ಮೊದಲು ಮತ್ತು ಘಟಿಸಿದ ನಂತರ ಎಂದು ವಿಭಾಗಿಸಿಕೊಳ್ಳಲಾಗಿದೆ. ೧೯೩೯ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಗುವ ಪೂರ್ವದಲ್ಲಿ ಪ್ರಕಟವಾದ ಏಕೈಕ ಕೃತಿ 'ಚನ್ನಾಜಮ್ಮಣ್ಣಿ ರಾಜಕುಮಾರಿ' ಅವರ 'ನನ್ನ ಪ್ರಪಂಚ ಸಂಚಾರ'. ಈ ಕೃತಿಯು ಕನ್ನಡದಲ್ಲಿ ಪ್ರಕಟವಾದ ಮೊದಲ ಮಹಿಳಾ ಯುರೋಪ್ ಪ್ರವಾಸ ಕೃತಿಯಾಗಿದೆ. ಈ ಕೃತಿಯಲ್ಲಿ ಮಹಿಳಾ ಪರವಾದ ವಿಚಾರಗಳು ವ್ಯಕ್ತವಾಗಿದ್ದರೂ ಜಾಗತಿಕ ಮಟ್ಟದಲ್ಲಿ ಮಹಿಳೆಯ ಉಪಸ್ಥಿತಿಯ ಕುರಿತು ಚರ್ಚಿಸಿಲ್ಲ. ಕಾರಂತರು ಮತ್ತು ದೊಡ್ಡೇರಿ ವೆಂಕಟಗಿರಿರಾವ್ ಅವರು ಸೈಬಾನ್ ಸ್ತ್ರೀಯರ ಬಗ್ಗೆ ಉಲ್ಲೇಖಿಸಿದ ಐತಿಹಾಸಿಕ ಘಟನೆಗಳು ಯುರೋಪಿನ ಮಹಿಳೆಯರ ಅಂದಿನ ಸ್ಥಿತಿಗತಿಗಳ ಬಗ್ಗೆ ಸ್ಥೂಲ ಪರಿಚಯ ನೀಡುತ್ತದೆ. ಸೈಬಾನ್ ಸ್ತ್ರೀಯರ ಘಟನಾವಳಿಗಳ ಪ್ರಕಾರ ವಿಶ್ವಯುದ್ಧ ನಡೆಯುವ ಪೂರ್ವದಲ್ಲಿ ಮಹಿಳೆಯರ ಸ್ಥಿತಿಗತಿಗಳು ಉತ್ತಮವಾಗಿರಲಿಲ್ಲ. ಅಂದಿನ ಸಾಮಾಜಿಕ ಕಟ್ಟುಪಾಡುಗಳು ಕೂಡ ಪುರುಷರ ಪರವಾಗಿದ್ದವು ಎಂಬುದು ತಿಳಿದುಬರುತ್ತದೆ. ಆದರೆ ವಿಶ್ವಯುದ್ಧಗಳು ಮುಗಿದ ಬಳಿಕ ಯುರೋಪಿನ ಸ್ತ್ರೀಯರ ಸಾಮಾಜಿಕ ಸ್ಥಾನಮಾನಗಳಲ್ಲಿ ಸುಧಾರಣೆಯಾಗಿದೆ. ಯುದ್ಧಗಳು ಮಾನವೀಯತೆಯನ್ನು ಮತ್ತು ಸಮಾನತೆಯ ಮಹತ್ವವನ್ನು ಜಗತ್ತಿಗೆ ಬೋಧಿಸಿರುವುದನ್ನು ಕಾಣಲಾಗಿದೆ. ಇದರಿಂದ ಯುರೋಪ್ ದೇಶಗಳಲ್ಲಿ ಮಹಿಳೆಯರಿಗೆ ಸ್ವತಂತ್ರವಾಗಿ ಕಾನೂನಿನ ಮಿತಿಯೊಳಗೆ ಮುಕ್ತವಾಗಿ ಬದುಕಲು ಅವಕಾಶವಾಗಿದೆ. 'ಸ್ವಾತಂತ್ರ್ಯ' ಎಂಬ ಪರಿಕಲ್ಪನೆಯನ್ನು ಸಾಮಾಜಿಕವಾಗಿ ಕಟ್ಟುಪಾಡುಗಳಿಲ್ಲದ, ಮೂಢನಂಬಿಕೆಗಳಿಗೆ ಬಲಿಯಾಗಿ ತಮ್ಮ ಅಸ್ತಿತ್ವವನ್ನು, ಪ್ರತಿಭೆಯನ್ನು ಗುರುತಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿಯಿಂದ ಮುಕ್ತವಾಗಿರುವುದು ಎಂದು ಅರ್ಥೈಸಿಕೊಳ್ಳಲಾಗಿದೆ. ಅದರ ಪ್ರಕಾರ ಸ್ತ್ರೀಯರಿಗೆ ಶಿಕ್ಷಣವನ್ನು ಗಳಿಸಲು ಮತ್ತು ಪುರುಷನಿಗೆ ಸಮನಾದ ಕೆಲಸವನ್ನು ಮಾಡಲು ಸೋವಿಯತ್ ದೇಶದಲ್ಲಿ ಸಂಪೂರ್ಣ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದನ್ನು ಕಾಣಬಹುದು. ಪಾಟೀಲ

ಪುಟ್ಟಪ್ಪ ಅವರು "ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲದಂಥ ಸಾಂಪತ್ತಿಕ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಸುರಕ್ಷಿತತೆ ಸೋವಿಯತ್ ಸ್ತ್ರೀಗೆ ಇದೆ" (ಪಾಟೀಲ ಪುಟ್ಟಪ್ಪ., ಸೋವಿಯತ್ ದೇಶ ಕಂಡೆ., ಪು–೧೩೮)ಎಂದಿದ್ದಾರೆ.

ಹೇಮಲತಾ ಮಹಿಷಿ ಅವರು ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ, ಫ್ಲಾರೆನ್ಸ್‌ನಲ್ಲಿ ೧೯–೨೦ ವರ್ಷ ಪ್ರಾಯದ ಮೂವರು ಹುಡುಗಿಯರು ಪರಿಚಯವಾಗುತ್ತದೆ. ಲೇಖಕಿಯು ಅವರನ್ನು ಮಾತನಾಡಿಸಿದಾಗ ಅವರು ಸ್ವತಂತ್ರವಾದ ಬದುಕನ್ನು ನಡೆಸುತ್ತಿರುವ ಬಗ್ಗೆ ತಿಳಿಯುತ್ತದೆ. ಆ ಮೂವರು ಹುಡುಗಿಯರಲ್ಲಿ ಇಬ್ಬರು ದಕ್ಷಿಣ ಆಫ್ರಿಕಾದವರು ಮತ್ತು ಒಬ್ಬಳು ಅಮೇರಿಕದವಳು. ಮೂವರು ಸೇರಿ ಜರ್ಮನಿಯಲ್ಲಿ 'ಬೇಬಿ ಸಿಟ್ಟಿಂಗ್' ಶಾಲೆಯನ್ನು ಪ್ರಾರಂಭ ಮಾಡಿ, ಅದರ ಮೂಲಕ ಹಣ ಗಳಿಸಿ ರಜೆಯ ಸಂದರ್ಭದಲ್ಲಿ ಪ್ರವಾಸಕ್ಕೆ ಬಂದಿದ್ದಾರೆ. ಈ ವಿಷಯಗಳನ್ನು ಕೇಳಿದ ಲೇಖಕಿ "ಚಿಕ್ಕ ವಯಸ್ಸಿನ ಹುಡುಗಿಯರ ಧೈರ್ಯ, ಸ್ವತಂತ್ರ ಜೀವನ ಪ್ರವೃತ್ತಿ ನೋಡಿ ಸಂತೋಷವಾಯಿತು"(ಹೇಮಲತಾ ಮಹಿಷಿ., ಯುರೋ ದರ್ಶನ., ಪು–೧೩೦) ಎಂದಿದ್ದಾರೆ. ಲೇಖಕಿಗೆ ಆ ಹುಡುಗಿಯರ ಬದುಕನ್ನು ಕಂಡು ಭಾರತೀಯ ಮಹಿಳೆಯರ ಅಂದಿನ ಸಾಮಾಜಿಕವಾಗಿ ಮುಕ್ತವಾದ ವಾತಾವರಣ ಇಲ್ಲದ ಅಂದಿನ ಸಮಾಜದ ಬಗ್ಗೆ ಹೇಳುತ್ತಾ "ನಮ್ಮ ದೇಶದ ಆ ವಯಸ್ಸಿನ ಹುಡುಗಿಯರ ಪರಿಸ್ಥಿತಿಯೊಂದಿಗೆ ಮನಸ್ಸಿನಲ್ಲೇ ಹೋಲಿಸಿ ನೋಡಿದೆ"(ಹೇಮಲತಾ ಮಹಿಷಿ, ಯುರೋ ದರ್ಶನ, ಪು–೧೨೯)ಎಂದಿದ್ದಾರೆ. ಹೇಮಲತಾ ಮಹಿಷಿ ಅವರಿಗೆ ಮಹಿಳೆಯರು ತಮ್ಮ ದೇಶವನ್ನು ಬಿಟ್ಟು ಬೇರೆ ದೇಶಗಳಿಗೆ ಹೋಗಿ, ಹೊಸ ಉದ್ಯೋಗವನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನು ಕಲ್ಪಿಸಿರುವ ಯುರೋಪಿನ ದೇಶಗಳ ಬಗ್ಗೆ ಅಭಿಮಾನ ಮೂಡಿದೆ. ಅದೇ ಸಂದರ್ಭದಲ್ಲಿ ಭಾರತೀಯ ಮಹಿಳೆಯರು ಸಶಕ್ತರಾಗಲು ಭಾರತೀಯ ಸಮಾಜದಲ್ಲಿ ಸೂಕ್ತ ಅವಕಾಶಗಳಿಲ್ಲದಿರುವ ಬಗ್ಗೆ ಅಸಹನೆ ವ್ಯಕ್ತವಾಗಿದೆ.

ಪಾಟೀಲ ಪುಟ್ಟಪ್ಪ ಹಾಗೂ ಹೇಮಲತಾ ಮಹಿಷಿ ಅವರ ಅಭಿಪ್ರಾಯಗಳನ್ನು ಆಧರಿಸಿ ವಿಶ್ಲೇಷಿಸುವುದಾದರೆ ಯುರೋಪ್ ದೇಶಗಳಲ್ಲಿ ಲಿಂಗಾಧಾರಿತ ತಾರತಮ್ಯಗಳಿಲ್ಲ. ಯಾವುದೇ ಉದ್ಯೋಗವಾದರೂ ಸ್ತ್ರೀ–ಪುರುಷರಿಬ್ಬರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಸ್ತ್ರೀಯರು ಸ್ವತಃ ಸ್ವಾವಲಂಬಿಯಾಗಿ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಅವಕಾಶಗಳಿವೆ. ಸ್ತ್ರೀಯರಿಗೆ ಸುರಕ್ಷತೆಯ ಬಗ್ಗೆ ಆತಂಕವಿಲ್ಲದಂತಹ ನಿರ್ಮಲ ವಾತಾವರಣವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಭಾರತದಲ್ಲಿ ಮಹಿಳೆಯರಿಗೆ ಈ ರೀತಿಯ ಅನುಕೂಲಗಳಿಲ್ಲ ಎಂದಿದ್ದಾರೆ.

ಉದ್ಯೋಗಿಯಾಗಿ ಮಹಿಳೆಯ ಸ್ಥಾನ : ಭಾರತೀಯ ಸಮಾಜದಲ್ಲಿ ಉದ್ಯೋಗವನ್ನು ಆಧರಿಸಿ ಪುರುಷರಿಗೆ ಮೀಸಲಾದ ಉದ್ಯೋಗಗಳು, ಸ್ತ್ರೀಯರಿಗೆ ಮೀಸಲಾದ ಉದ್ಯೋಗಗಳೆಂದು ವಿಂಗಡಿಸಲಾಗಿದೆ. ೧೯೭೦ರ ದಶಕದಲ್ಲಿ ಪೋಲೀಸ್ ಇಲಾಖೆಗೆ ಮತ್ತು ಸೈನ್ಯಕ್ಕೆ ಸೇರುವ ಉದ್ಯೋಗಗಳು ಸಾಮಾನ್ಯವಾಗಿ ಪುರುಷರಿಗೆ ಎಂಬಂತೆ ಸಾಮಾಜಿಕ ನಿಯಮಗಳು ರೂಪಿತವಾಗಿತ್ತು. ಭಾರತದಲ್ಲಿ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಸ್ವಿಟ್ಜರ್‌ಲ್ಯಾಂಡ್‌ನ ರಾಜಧಾನಿ ಬರ್ನ್‌ಗೆ ಅನುಪಮಾ ನಿರಂಜನ ಅವರು ಭೇಟಿ ನೀಡಿದಾಗ ಅಲ್ಲಿ "ನಗರದ ಚೌಕಗಳಲ್ಲಿ ನಿಂತು ವಾಹನಗಳನ್ನು ಗೈಡ್ ಮಾಡುತ್ತಿದ್ದ ಪೋಲೀಸ್ ಮಹಿಳೆ ಎಂದು ತಿಳಿದು ನನಗೆ ಆಶ್ಚರ್ಯವೂ ಸಂತೋಷವು ಉಂಟಾದವು" (ಅನುಪಮಾ ನಿರಂಜನಾ.,

ಅಂಗೈಯಲ್ಲಿ ಯೂರೊ ಅಮೇರಿಕ., ಪು-೪೯)ಎಂದಿದ್ದಾರೆ. ಭಾರತದ ಮಹಿಳೆಯರ ಅಂದಿನ ಕಾಲದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಅಭಿಪ್ರಾಯ ಸಾಮಾನ್ಯವಾದುದು ಎನಿಸುತ್ತದೆ. ಅದೇ ಸಂದರ್ಭದಲ್ಲಿ ಮಹಿಳೆಯರಿಗೆ ಯುರೋಪ್ ದೇಶಗಳು ನೀಡಿದ್ದ ಅವಕಾಶಗಳನ್ನು ಇಲ್ಲಿ ಗಮನಿಸಬೇಕಾಗಿದೆ.

ಯುರೋಪಿನಲ್ಲಿ ಮಹಿಳೆಯರನ್ನು ತಾರತಮ್ಯದ ನೆಲೆಯಲ್ಲಿಯೇ ನೋಡಲಾಗುತ್ತಿತ್ತು ಎಂಬುದನ್ನು ರಾ.ಶಿ ಅವರು 'ಕೊರವಂಜಿಯ ಪಡುವಣ ಯಾತ್ರೆ'(೧೯೬೮) ಕೃತಿಯಲ್ಲಿನ ಉಲ್ಲೇಖದಿಂದ ಅರಿಯಲಾಗಿದೆ. ರಾ.ಶಿ ಅವರು ಜರ್ಮನಿಯಲ್ಲಿ ಔಷಧಿ ತಯಾರಿಕಾ ಕಂಪನಿಗೆ ಭೇಟಿ ನೀಡುತ್ತಾರೆ. ಅಲ್ಲಿ ಹೆಂಗಸರಿಗೆ ಎಂತಲೇ ಕೆಲವು ಕೆಲಸಗಳನ್ನು ನಿಯಮಿಸಲಾಗಿರುತ್ತದೆ. "ಆ ಸಂಸ್ಥೆಯೊಂದರಲ್ಲಿ ಮಾತ್ರೆಗಳನ್ನು ಎಣಿಸಿ ಶೀಷೆಗೆ ಹಾಕುವುದಕ್ಕೆ ಹೆಣ್ಣು ಮಕ್ಕಳು ನಿಯಮಿತರಾಗಿದ್ದಾರೆ"(ರಾ.ಶಿ, ಕೊರವಂಜಿಯ ಪಡುವಣ ಯಾತ್ರೆ, ಪು-೯೦)ಎಂದು ಉಲ್ಲೇಖಿಸಿದ್ದಾರೆ. ಲಿಂಗ ತಾರತಮ್ಯ ಇಲ್ಲದೆ ಮಹಿಳೆಯರಿಗೂ ಪೋಲಿಸ್ ಕೆಲಸವನ್ನು ನೀಡಿರುವ ಘಟನೆ ಒಂದೆಡೆಯಾದರೆ, ಮತ್ತೊಂದು ಕಡೆಯಲ್ಲಿ ಮಹಿಳೆಯರಿಗೆ ಎಂದೇ ಮೀಸಲಾದ ಕೆಲಸಗಳನ್ನು ನೀಡುವ ಮೂಲಕ ಲಿಂಗ ತಾರತಮ್ಯ ಮಾಡಲಾಗುತ್ತದೆ ಎಂದು ಉಲ್ಲೇಖಿಸಿರುವುದನ್ನು ಗ್ರಹಿಸಲಾಗಿದೆ. ಈ ಮೇಲಿನ ಎರಡು ಸಂದರ್ಭಗಳನ್ನು ಆಧರಿಸಿ ಹೇಳುವುದಾದರೆ ಕಾಲ ಬದಲಾದಂತೆ, ವ್ಯಕ್ತಿ ಬದಲಾದಂತೆ ಅವರಿಗೆ ದೊರೆಯುವ ಅನುಭವಗಳಲ್ಲಿ ವ್ಯತ್ಯಾಸಗಳಾಗುತ್ತಾ ಹೋಗುತ್ತದೆ. ಇದೇ ಅಂತಿಮ ಎಂದು ಯಾವುದನ್ನೂ ನಿರ್ದರಿಸಲಾಗುವುದಿಲ್ಲ. ಒಬ್ಬರ ಅನುಭವ ವಿವರಣೆಯನ್ನು ಆಧರಿಸಿ ಇಡೀ ಸಮಾಜದ ಬಗ್ಗೆ ತೀರ್ಮಾನಿಸಲಾಗುವುದಿಲ್ಲ. ಪ್ರವಾಸ ಕಥನಗಳನ್ನು ಈ ಮಿತಿಗಳ ನೆಲೆಯಲ್ಲಿಯೇ ನೋಡಲಾಗಿದೆ.

ಜಿ. ಎಸ್. ಶಿವರುದ್ರಪ್ಪ ಅವರು ಮಹಿಳೆಯರು ಉದ್ಯೋಗದಲ್ಲಿ ನಿರತರಾಗಿರುವುದರ ಬಗ್ಗೆ ಹೀಗೆ ಹೇಳಿದ್ದಾರೆ. "ಇಲ್ಲಿ ಗಂಡಸರು -ಹೆಂಗಸರು ಇಬ್ಬರೂ ಉದ್ಯೋಗಸ್ಥರೆ. ಹೆಂಗಸರದೇ ಮೇಲುಗೈ ಎಲ್ಲಾ ಕಡೆ-ಅಂಗಡಿ ಮಳಿಗೆಗಳಲ್ಲಿ, ಪುಸ್ತಕ ಭಂಡಾರಗಳಲ್ಲಿ, ಮ್ಯೂಸಿಯಂಗಳಲ್ಲಿ, ರೆಸ್ಟೋರಾಂಟುಗಳಲ್ಲಿ ಮಹಿಳೆಯರೆ. ಬಸ್ ಡ್ರೈವರ್‌ಗಳಾಗಿ, ಮೆಟ್ರೋ ರೈಲಿನ ಚಾಲಕರಾಗಿ ಕೂಡಾ ಕೆಲಸ ಮಾಡುತ್ತಾರೆ. ಹೆಣ್ಣು ಕೂಡ ದುಡಿಯುವುದರಿಂದ ಹೆಣ್ಣು ಗಂಡಿನ ಕೈ ಕಾಯಬೇಕಿಲ್ಲ ಗಂಡನಿಗೆ ತಾನು ಅಧೀನಳೆಂಬ ದೈನ್ಯತೆಯಿಲ್ಲ. 'ನೀನಿಲ್ಲದಿದ್ದರೆ ಇನ್ನೊಬ್ಬ' ಎಂಬ ನಿರ್ಲಕ್ಷತೆ ಹೆಚ್ಚು"(ಜಿ.ಎಸ್. ಶಿವರುದ್ರಪ್ಪ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಪು-೨೮)ಎಂದಿದ್ದಾರೆ. ರಷ್ಯಾ ದೇಶದಲ್ಲಿ ಮಹಿಳೆಯರು ಎಲ್ಲಾ ರಂಗದಲ್ಲೂ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಪುರುಷರಿಗೆ ಸೀಮಿತವಾದ ಕೆಲಸಗಳು ಎನಿಸಿರುವ ವೃತ್ತಿಗಳನ್ನು ಕೂಡ ಮಹಿಳೆಯರು ನಿರ್ವಹಿಸುತ್ತಿದ್ದಾರೆ. ೧೯೭೩ಕ್ಕೆ ಮೊದಲೇ ಮಹಿಳೆಯರು ಸಮಾಜದಲ್ಲಿ ಈ ಬಗೆಯ ಸ್ಥಾನಮಾನಗಳನ್ನು ಹೊಂದಿದ್ದರು. ಭಾರತೀಯ ಸಂದರ್ಭಕ್ಕೆ ಹೋಲಿಸುವುದಾದರೆ ಇಂದಿಗೂ ಕೂಡ ಮಹಿಳೆಯರಿಗೆ ಪುರುಷರಿಗೆ ಸಮಾನವಾದ ಅವಕಾಶಗಳನ್ನು ಕಲ್ಪಿಸಿಕೊಡಲು ಸಾಧ್ಯವಾಗಿಲ್ಲ. ಮಹಿಳೆ ತನ್ನ ಅಸ್ತಿತ್ವಕ್ಕಾಗಿ ಇಂದಿಗೂ ಹೋರಾಡಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚು ಬೆಳವಣಿಗೆಯನ್ನು ಕಂಡಿದ್ದರೂ ಸಾಮಾಜಿಕ ಬಂಧನಗಳಿಂದ ಸಂಪೂರ್ಣ ಸ್ವತಂತ್ರಗೊಂಡು ಬದುಕುವ ಮಟ್ಟಿಗೆ ಪ್ರಗತಿ ಆಗಿಲ್ಲವೆಂಬ ಸಂಗತಿಯನ್ನು ಒಪ್ಪಲೇಬೇಕಾಗುತ್ತದೆ.

ಜಿ.ಎಸ್ ಶಿವರುದ್ರಪ್ಪ ಅವರ ಮೇಲಿನ ಹೇಳಿಕೆಯಲ್ಲಿ ಮತ್ತಷ್ಟು ಸಂಗತಿಗಳನ್ನು ಚರ್ಚಿಸಲು ಅವಕಾಶವಿದೆ. ಸ್ತ್ರೀ ಉದ್ಯೋಗದಲ್ಲಿ ಪುರುಷನಷ್ಟೆ ಸಮಾನವಾಗಿ ಬೆಳೆದಿರುವುದು ಸರಿಯಷ್ಟೆ. ಈ

ಬೆಳವಣಿಗೆಯ ಕಾರಣದಿಂದ ಆಕೆ ಆರ್ಥಿಕವಾಗಿ ಸ್ವತಂತ್ರಳಾಗಿದ್ದಾಳೆ. ಆರ್ಥಿಕವಾಗಿ ಸ್ವತಂತ್ರ ಪಡೆದ ಹೆಣ್ಣು ಯಾರಿಗೂ ಅಧೀನಳಾಗಿ ಇರಬೇಕಾಗಿಲ್ಲ. ಈ ಕಾರಣದಿಂದಲೇ ಈ ದೇಶಗಳಲ್ಲಿ ಕೌಟುಂಬಿಕ ಏಕತೆ ಉಳಿದಿಲ್ಲ. ಲೇಖಕರೇ ಉಲ್ಲೇಖಿಸಿರುವಂತೆ ಹೆಣ್ಣು ತಾನು ಆರ್ಥಿಕ ಸ್ವಾತಂತ್ರ್ಯ ಪಡೆದಿರುವುದರಿಂದ ಗಂಡನೊಂದಿಗೆ ಕುಟುಂಬವಾಗಿ ಏಕತೆಯಿಂದ ಇರುವ ತಾಳ್ಮೆಯನ್ನು ಕಳೆದುಕೊಳ್ಳುತ್ತಾಳೆ. ಆದ್ದರಿಂದಲೇ ಈ ದೇಶಗಳಲ್ಲಿ ವಿವಾಹ ವಿಚ್ಛೇದನ ಪ್ರಕರಣಗಳ ಪ್ರಮಾಣ ಅಧಿಕವಾಗುತ್ತಿದೆ ಎಂಬ ಅಂಶವನ್ನು ಗ್ರಹಿಸಬಹುದಾಗಿದೆ.

ಯಾವುದೇ ಉದ್ಯೋಗವನ್ನು ಲಿಂಗ, ಜಾತಿ, ಪಂಥಗಳ ಆಧಾರದ ಮೇಲೆ ಹಂಚದೆ ಕೌಶಲ್ಯಗಳ ಆಧಾರದ ಮೇಲೆ ಮುಕ್ತವಾಗಿ ಎಲ್ಲರಿಗೂ ಉದ್ಯೋಗವನ್ನು ನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂಬ ಆಶಯಗಳನ್ನು ಪ್ರವಾಸ ಕೃತಿಗಳು ವ್ಯಕ್ತಪಡಿಸಿವೆ.

ದೇವಕಿಮೂರ್ತಿ ಅವರು ಸ್ವಿಟ್ಜರ್‌ಲ್ಯಾಂಡ್‌ನ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಲು ತೆರಳುತ್ತಿದ್ದಾಗ, ಅವರ ಬಸ್ಸಿನ ಸಾರಥಿಯು "ಹೆಂಗಸರು ಎಲ್ಲ ಉದ್ಯೋಗಗಳಲ್ಲಿ ಗಂಡಸರಿಗೆ ಹೆಗಲೆಣೆಯಾಗಿ ಸರಿಸಮವಾಗಿ ದುಡಿಯುತ್ತಿದ್ದಾರೆ"(ದೇವಕಿಮೂರ್ತಿ., ಯುರೋ ಅಮೇರಿಕಾದ ಇಣುಕು ನೋಟ., ಪು-೪೨)ಎನ್ನುತ್ತಾನೆ. ಅದಕ್ಕೆ ಪೂರಕವಾಗಿ ಲೇಖಕಿಯ ಮಾರ್ಗದರ್ಶಿಯು "ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ವ್ಯಾಪಿಸಿರುವುದು ಕಾಣುತ್ತದೆ. ಇಲ್ಲಿನ ಹೋಟೆಲಿನ ಆಡಳಿತ ನಿರ್ವಹಣೆಯಲ್ಲಿ ಮಹಿಳೆಯರದೇ ಬಹುಸಂಖ್ಯೆ. ಪುರುಷರು ನಿರ್ವಹಿಸುವಂತಹ ಶ್ರಮ ಸಾಧ್ಯವಾದ ಕೆಲಸಗಳನ್ನೂ ಅವರು ಮಾಡುತ್ತಾರೆ. ಬೆವರು ಸುರಿಸಿ ದುಡಿಯುತ್ತಾರೆ" (ದೇವಕಿಮೂರ್ತಿ., ಯುರೋ ಅಮೇರಿಕಾದ ಇಣುಕು ನೋಟ., ಪು-೪೩)ಎಂದಿದ್ದಾರೆ. ಲೇಖಕಿ ಇವರ ಮಾತುಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದಿದ್ದರೂ, ಭಾರತದಲ್ಲಿಯೂ ಈ ಬಗೆಯ ಪ್ರಜ್ಞೆ ಬೆಳೆದರೆ ಒಳ್ಳೆಯದು ಎಂಬ ಭಾವ ವ್ಯಕ್ತವಾಗಿರುವುದುನ್ನು ಗುರುತಿಸಬಹುದು.

ಇಂದಿರಾ ಅವರು ಇಟಲಿಯ ಉದ್ಯೋಗಸ್ತ ಮಹಿಳೆಯರ ಬಗ್ಗೆ ಮಾರ್ಗದರ್ಶಕಿಯಿಂದ ಮಾಹಿತಿಯನ್ನು ಪಡೆದಿದ್ದಾರೆ. ಲೇಖಕಿಯ ಮಾರ್ಗದರ್ಶಕಿ "ನಮ್ಮಲ್ಲಿ ಪ್ರತಿ ಮಹಿಳೆಯು ಆರ್ಥಿಕವಾಗಿ ಸ್ವಾವಲಂಬಿಯಾಗ ಬಯಸುತ್ತಾಳೆ"(ಇಂದಿರಾ ಶಿವಣ್ಣ., ಹಾಲೆಂಡ್‌ನಿಂದ ಲಂಡನ್‌ವರೆಗೆ., ಪು-೧೦೪) ಎಂದಾಗ ಉದ್ಯೋಗನಿರತ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಲೇಖಕಿ ವಿಚಾರ ಮಾಡಿದ್ದಾರೆ. ನಮ್ಮ ಸಮಾಜದಲ್ಲಿ ಮಹಿಳೆಯನ್ನು ಉದ್ಯೋಗಕ್ಕೆ ಕಳುಹಿಸಲು ಅನೇಕ ಸಾಮಾಜಿಕ ಕಟ್ಟುಪಾಡುಗಳಿವೆ. ಆ ಕಟ್ಟುಪಾಡುಗಳನ್ನು ಮೀರಿ ಕೆಲಸಕ್ಕೆ ಹೋದರೆ ನಿಕೃಷ್ಟವಾಗಿ ನೋಡುತ್ತಾರೆ. "ಪುರುಷರ ಕೆಲಸ ಎಂತಹುದೇ ಆದರೂ ಅದಕ್ಕೆ ಅದರದೇ ಆದ ಮಹತ್ವವಿದೆ. ನಾವೆಷ್ಟು ಹೋರಾಟಗಾರರಾದರೂ ನಮ್ಮ ಕೆಲಸಕ್ಕೆ ನಮ್ಮ ಶ್ರಮಕ್ಕೆ ನಮ್ಮ ಸಂಪಾದನೆಗೆ ಸಿಗುವ ಮಹತ್ವವೇ ಬೇರೆ"(ಇಂದಿರಾ ಶಿವಣ್ಣ, ಹಾಲೆಂಡ್‌ನಿಂದ ಲಂಡನ್‌ವರೆಗೆ, ಪು-೧೦೪)ಎಂದು ಲೇಖಕಿ ಅಭಿಪ್ರಾಯ ಪಟ್ಟಿದ್ದಾರೆ. ಅದು ಪ್ರಸ್ತುತ ಸಮಾಜವು ಮಹಿಳೆಯನ್ನು ನೋಡುವ ದೃಷ್ಟಿಕೋನವೇ ಆಗಿದೆ. ಅದನ್ನು ಮೀರಿ ಇಂದು ಬಹುಮಂದಿ ಮಹಿಳೆಯರು ಕೆಲಸಕ್ಕೆ ಹೋಗುತ್ತಿದ್ದರೂ ಮಕ್ಕಳನ್ನು ಸಲುಹುವ ಸಂದರ್ಭದಲ್ಲಿ ಆಕೆಗೆ ಅನೇಕ ಅಡಚಣೆಗಳು ಬರುವುದು ಸಹಜವಾಗಿದೆ. ಆದ್ದರಿಂದಲೇ ಎಷ್ಟೋ ಹೆಣ್ಣುಮಕ್ಕಳು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ತಮ್ಮ ಉದ್ಯೋಗಗಳನ್ನು ತ್ಯಾಗ ಮಾಡಿರುವ ಉದಾಹರಣೆಗಳಿವೆ.

ಯುರೋಪಿನ ಬಹುತೇಕ ದೇಶಗಳಲ್ಲಿ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಲಿಂಗ ತಾರತಮ್ಯವಿಲ್ಲ. ಗಂಡಸರು ಮಾಡಬಹುದಾದ ಕೆಲಸಗಳನ್ನು ಮಹಿಳೆಯರು ಮಾಡುತ್ತಾರೆ. ತಮಗೆ ಬೇಕಾದ ಉದ್ಯೋಗವನ್ನು ತಾವೇ ಹುಡುಕಿಕೊಳ್ಳುತ್ತಾರೆ. ಹೇಮಲತಾ ಮಹಿಷಿ ಅವರಿಗೆ ಟ್ರೈನ್‌ನಲ್ಲಿ ಭೇಟಿಯಾದ ಮೂವರು ಹುಡುಗಿಯರು ಹೇಳುವಂತೆ, ಅವರು ಜರ್ಮನಿಯಲ್ಲಿ ತಮ್ಮದೇ ಆದ ಸ್ವಂತ 'ಬೇಬಿ ಸಿಟ್ಟಿಂಗ್'ನ್ನು ನಡೆಸುತ್ತಿದ್ದರು. ಇವರು ವೃತ್ತ ಪತ್ರಿಕೆಯಲ್ಲಿ ಬಂದ ಜಾಹೀರಾತನ್ನು ಕಂಡು ಅರ್ಜಿಯನ್ನು ಗುಜರಾಯಿಸಿ ಬೇಬಿ ಸಿಟ್ಟಿಂಗ್ ನಡೆಸುವ ಕೆಲಸವನ್ನು ಪಡೆದುಕೊಂಡಿದ್ದರು. ಅವರಿಗೆ ಈ ಕೆಲಸವನ್ನು ಮಾಡಲು ಮುಜುಗರ ಪಡುತ್ತಿರಲಿಲ್ಲ. ಇವರೇ ಹಣವನ್ನು ಗಳಿಸಿಕೊಂಡು, ಬಂದ ಹಣದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುವ ಯೋಚನೆ ಇದೆ ಎಂದು ಹೇಳುತ್ತಾರೆ. ಭಾರತದಲ್ಲಿ ಇನ್ನೂ 'ಉದ್ಯೋಗಂ ಪುರುಷ ಲಕ್ಷಣಂ' ಎಂದೇ ಭಾವಿಸಿಕೊಂಡಿರುವಂತಿದೆ. ಯುರೋಪಿನ ದೇಶಗಳಲ್ಲಿ ಪುರುಷನಿಗೆ ಸಿಗಬೇಕಾದ ಕೆಲಸಗಳಲ್ಲಿಯೂ ಮಹಿಳೆಯರು ಪ್ರತಿಸ್ಪರ್ಧಿಗಳಾಗಿದ್ದಾರೆ. ಹೇಮಲತಾ ಮಹಿಷಿ ಅವರು ಲಂಡನ್ ನಗರದ ಬಕಿಂಗ್‌ಹ್ಯಾಮ್ ಪ್ಯಾಲೇಸ್‌ನಲ್ಲಿ ನಡೆಯುವ ಕಾವಲುಗಾರರ ಬದಲಾವಣೆ ಸಮಾರಂಭದಲ್ಲಿ "ಮಹಿಳಾ ಕುದುರೆ ಸವಾರರು" (ಹೇಮಲತಾ ಮಹಿಷಿ., ಯುರೋ ದರ್ಶನ., ಪು–೬೧)ಇರುವುದನ್ನು ಗುರುತಿಸುತ್ತಾರೆ. "ಮಹಿಳಾ ಡ್ರೈವರರ್‌ಗಳನ್ನು ಬಹರೇನ್‌ನಲ್ಲಿ ನೋಡಿದೆವು" (ಹೇಮಲತಾ ಮಹಿಷಿ, ಯುರೋ ದರ್ಶನ, ಪು–೨೧)ಎನ್ನುತ್ತಾರೆ. "ಆ ಹೋಟೆಲ್‌ನಲ್ಲಿ ಮಹಿಳೆಯರು ಬೇರರ್‌ಗಳಾಗಿ ಕೆಲಸದಲ್ಲಿದ್ದರು" (ಹೇಮಲತಾ ಮಹಿಷಿ, ಯುರೋ ದರ್ಶನ, ಪು–೧೯) "ಪಾಸ್ ಪೋರ್ಟ್, ವೀಸಾ ತಪಾಸಣೆ ನಡೆಸಿದರು. ಆ ಸಿಬ್ಬಂದಿಯಲ್ಲಿ ಮಹಿಳೆಯರು ಇದ್ದುದು ವಿಶೇಷ" (ಹೇಮಲತಾ ಮಹಿಷಿ, ಯುರೋ ದರ್ಶನ, ಪು–೧೮) ಎಂದು ತಮ್ಮ ಕತಿಯಲ್ಲಿ ಉಲ್ಲೇಖಿಸಿದ್ದಾರೆ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಕೆಲಸ ನಿರ್ವಹಿಸಬಲ್ಲಳು ಎಂಬುದನ್ನು ಈ ದೇಶಗಳಲ್ಲಿ ಸಾಬೀತು ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಲೇಖಕಿಯರು ನಮ್ಮ ಭಾರತದಲ್ಲಿರುವ ಹೆಣ್ಣು ಮಕ್ಕಳ ಬಗ್ಗೆ, ಅವರ ಇರುವಿಕೆಯ ಬಗ್ಗೆ ವ್ಯಥೆಪಟ್ಟಿದ್ದಾರೆ. ವಿದೇಶಗಳಲ್ಲಿ ಸ್ತ್ರೀಯರಿಗೆ ಸಿಕ್ಕಿರುವ ಉದ್ಯೋಗದ ಅವಕಾಶಗಳಂತೆ ಭಾರತದಲ್ಲಿಯೂ ಪುರುಷರಿಗೆ ಸಮಾನವಾಗಿ ಉದ್ಯೋಗ ಅವಕಾಶಗಳು ಸಿಗಬೇಕು, ಮಹಿಳೆ ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕು ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಪಿ. ಆರ್ ತಿಪ್ಪೇಸ್ವಾಮಿ ಅವರು ಫ್ರಾನ್ಸ್‌ನ ಆವಗಾನ್ ನಗರಕ್ಕೆ ತಮ್ಮ ಸೂತ್ರದ ಗೊಂಬೆಮೇಳವನ್ನು ಪ್ರದರ್ಶನ ಮಾಡಲು ಹೋಗಿದ್ದಾಗ ಹೇರ್ ಕಟಿಂಗ್ ಶಾಪ್‌ನಲ್ಲಿ ಮಹಿಳೆ ಹೇರ್ ಕಟ್ ಮಾಡುವುತ್ತಿರುವುದನ್ನು ಕಂಡು ವಿಸ್ಮಯ ಗೊಳ್ಳುವ ಸಂದರ್ಭವನ್ನು ವಿವರಿಸಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಕೆಲವು ವೃತ್ತಿಗಳನ್ನು ಪುರುಷರೇ ಮಾಡತಕ್ಕದ್ದು ಎಂಬ ಅಲಿಖಿತ ನಿಯಮವನ್ನು ಪ್ರಾಚೀನ ಕಾಲದಿಂದ ಚಾಚು ತಪ್ಪದೆ ಪಾಲನೆ ಮಾಡಿಕೊಂಡು ಬರಲಾಗಿದೆ. ಅವುಗಳಲ್ಲಿ ಕ್ಷೌರಿಕ ವೃತ್ತಿ ಕೂಡ ಒಂದು. ಭಾರತದಲ್ಲಿ ಇಂದಿಗೂ ಮಹಿಳೆಯರು ಈ ವೃತ್ತಿಯಲ್ಲಿ ತೊಡಗಿರುವವರ ಸಂಖ್ಯೆ ಬಹಳ ಕಡಿಮೆ. ಇಂದಿನ ಆಧುನಿಕ ಯುಗದಲ್ಲಿಯೂ ವೃತ್ತಿ ನಿಷ್ಠೆಗಳನ್ನು ಪಾಲನೆ ಮಾಡಿಕೊಂಡು ಬರಲಾಗಿದೆ. ಮಹಿಳೆಯರು ಪುರುಷರ ಹೇರ್ ಕಟ್ ಮಾಡುವುದು ಸಾಮಾಜಿಕ ನಿಯಮಗಳಿಗೆ ವಿರುದ್ಧ ಎಂಬ ಭಾವ ಇಂದಿಗೂ ಪಾಲನೆಯಾಗುತ್ತಿದೆ. ಆಧುನಿಕ ಸಲಕರಣೆಗಳ ಮೂಲಕ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿ 'ಬ್ಯೂಟಿ ಪಾರ್ಲರ್'ಗಳಂತಹ ನೂತನ ಮಳಿಗೆಗಳು ಬಂದಿದ್ದರೂ ಅದು ಕೇವಲ ಮಹಿಳೆಯರಿಗಾಗಿ ಎಂಬ ಪರಿಕ್ರಮ

ಬೆಳೆದು ಬಂದಿದೆ. ಒಬ್ಬ ಗಂಡಸು ಬ್ಯೂಟಿ ಪಾರ್ಲರ್‌ನ್ನು ತೆರೆಯುವುದು ಮತ್ತು ಹೆಣ್ಣು ಮಕ್ಕಳಿಗೆ ಅಲಂಕಾರ ಮಾಡುವುದು ತಪ್ಪು ಎಂಬ ಭಾವನೆ ಇಂದಿಗೂ ಚಾಲ್ತಿಯಲ್ಲಿದೆ. ಅಂತೆಯೇ ಒಬ್ಬ ಮಹಿಳೆಯು ಪುರುಷರ ಹೇರ್ ಕಟ್ ಮಾಡುವ ಕ್ರಮವನ್ನು ಸಮಾಜ ಎಂದಿಗೂ ಪುರಸ್ಕರಿಸುವುದಿಲ್ಲ. ಈ ನೆಲೆಯಲ್ಲಿ ಸಾಮಾಜಿಕವಾದ ಈ ನಿಯಮಗಳ ನಿರ್ಬಂಧಗಳ ಕಾರಣದಿಂದ ಮಹಿಳೆಯರಿಗೆ ಔದ್ಯೋಗಿಕ ಅವಕಾಶಗಳ ಪ್ರಮಾಣ ಕಡಿಮೆಯಾಗಿದೆ. ಯುರೋಪಿನ ಅನೇಕ ದೇಶಗಳಲ್ಲಿ ಮಹಿಳೆಯರು ತಮ್ಮ ಸ್ವಂತ ಸಲೂನ್‌ಗಳನ್ನು ನಡೆಸುತ್ತಾರೆ. ಪುರುಷರು, ಸ್ತ್ರೀಯರು, ಮಕ್ಕಳು ಹೀಗೆ ಎಲ್ಲರೂ ತಮ್ಮ ಕಾಯಕವನ್ನು ಪೂರೈಸುವ ಮೂಲಕ ವೃತ್ತಿಪರತೆಯನ್ನು ಕಾಯ್ದುಕೊಂಡಿದ್ದಾರೆ. ಲೇಖಕರು ಈ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದ್ದಾರೆ.

ಉದ್ಯೋಗದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಕುರಿತಂತೆ ಅನೇಕ ಲೇಖಕರು ಯುರೋಪಿನಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲದೆ ಮುಕ್ತ ಅವಕಾಶಗಳಿರುವುದನ್ನು ಮೆಚ್ಚಿಕೊಂಡಿದ್ದಾರೆ. ಮಹಿಳಾ ಲೇಖಕರು ಮಾತ್ರ ಭಾರತದಲ್ಲಿಯೂ ಇದೇ ರೀತಿಯ ಅವಕಾಶಗಳು ದೊರೆಯಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ಪುರುಷ ಲೇಖಕರಲ್ಲಿ ತಾರತಮ್ಯ ಇರಬಾರದು ಎಂಬ ಭಾವನೆಗಳಿದ್ದರೂ ಸ್ತ್ರಿಯರಿಗೆ ನೀಡುವ ಆರ್ಥಿಕ ಸ್ವಾತಂತ್ರ್ಯವು ಕುಟುಂಬಗಳ ವಿಘಟನೆಗೆ ಕಾರಣವಾಗುತ್ತದೆ ಎಂದಿದ್ದಾರೆ. ಈ ವಿವರಗಳಿಂದ ತಿಳಿದುಬರುವ ಸಂಗತಿಯೆಂದರೆ ಭಾರತಿಯ ಸಮಾಜದಲ್ಲಿ ಯಾವುದೇ ಬಗೆಯ ತಾರತಮ್ಯಗಳಿಲ್ಲದೆ ಉದ್ಯೋಗದಲ್ಲಿ ಎಲ್ಲರಿಗೂ ಅವಕಾಶಗಳನ್ನು ನೀಡಬೇಕು. ಉದ್ಯೋಗವು ಪಡೆಯುವ ವ್ಯಕ್ತಿಯ ಸಾಮರ್ಥ್ಯವನ್ನು, ಕೌಶಲ್ಯವನ್ನು ಆಧರಿಸಿರಬೇಕು. ಉದ್ಯೋಗಸ್ಥ ಮಹಿಳೆಯರು ಆರ್ಥಿಕ ಸ್ವಾತಂತ್ರ್ಯ ಗಳಿಸಿದ ಕೂಡಲೇ ಕುಟುಂಬಗಳು ಒಡೆಯುತ್ತವೆ ಎನ್ನಲಾಗುವುದಿಲ್ಲ. ಆರ್ಥಿಕ ಗಳಿಕೆಯು ಕುಟುಂಬಗಳಲ್ಲಿ ಅನ್ಯೋನ್ಯತೆಯನ್ನು ಬೆಳೆಸುವಲ್ಲಿಯೂ ಕಾರಣವಾಗಬಹುದು ಎಂಬ ಅಂಶಗಳನ್ನು ಕಂಡುಕೊಳ್ಳಲಾಗಿದೆ.

ವಸ್ತ್ರ ಸಂಹಿತೆ : ಯುರೋಪ್ ದೇಶಗಳಲ್ಲಿ ಸ್ತ್ರೀ–ಪುರುಷರು ಧರಿಸುವ ಉಡುಪುಗಳ ಬಗ್ಗೆ ವಿಶ್ವದಾದ್ಯಂತ ಚರ್ಚೆ ಆಗುತ್ತದೆ. ಪ್ರವಾಸಕ್ಕೆ ತೆರಳಿದ ಲೇಖಕರು ಕೂಡ ಮಹಿಳೆಯರು ಮತ್ತು ಪುರುಷರು ಧರಿಸಿರುವ ಉಡುಪುಗಳ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯಗಳಲ್ಲಿ ಭೇಧಗಳಿದ್ದು ಅದಕ್ಕೆ ಲೇಖಕರ ಸಾಂಪ್ರದಾಯಿಕ ಮನೋಧೋರಣೆಗಳು ಮತ್ತು ದೃಷ್ಟಿಕೋನ ಕಾರಣವಾಗಿದೆ.

ವಿ.ಕೃ. ಗೋಕಾಕ್ ಅವರು ಲಂಡನ್‌ಗೆ ತೆರಳಲು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅಲ್ಲಿನ ಆಂಗ್ಲ ಸ್ತ್ರೀಯರ ಉಡುಗೆಗಳ ಬಗ್ಗೆ ಹೀಗೆ ಹೇಳುತ್ತಾರೆ. "ಅರ್ಧಮರ್ಧ ಕಫನಿ(Gown)ಗಳನ್ನು ಹಾಕಿಕೊಂಡು ಆಂಗ್ಲ ಸ್ತ್ರೀಯರು ಸಹಜವಾಗಿ ಇಲ್ಲಿ ತಿರುಗಾಡುತ್ತಾರೆ. ಇಲ್ಲವೆ ಈಸುವ ವೇಷದಲ್ಲಿ(ಇದು ನಗ್ನಾವಸ್ಥೆಯ ಪರ್ಯಾಯವೆಂದು ಕಾಣುತ್ತದೆ) ಗೋಪಿಯರಂತೆ ಅನೇಕ ತಾಸುಗಳವರೆಗೆ ಜಲಕ್ರೀಡೆಯಾಡುತ್ತಾರೆ. ಗಂಡಸರಿಗೆ ಬೇರೆ ಸ್ನಾನಗೃಹಗಳಿವೆ. ಅಲ್ಲಿ ಅವರು ಬತ್ತಲೆ ಕುಣಿಯುತ್ತಾರೆ. ಬಂದು ಹೋದವರೆದುರಿಗೆ ಸಂಕೋಚವೇ ಇಲ್ಲ. ಭಾರತದ ಹಳ್ಳಿಗಳಲ್ಲಿ ಜನರು ಹೀಗೆ ಮಾಡಿದರೆ, ಅನಾಗರಿಕತೆಯ ಕುರುಹೆಂದು ಬಯಲಿಗೆ ಬರುವದು. ಇದು ವಿಲಾಯತಿಯ ಸಂಸ್ಕೃತಿಯೆಂದು ಮನ್ನಣೆ ಹೊಂದುವದು"(ವಿ.ಕೃ.ಗೋಕಾಕ್., ಸಮುದ್ರದಾಚೆಯಿಂದ., ಪು–೨)ಎಂದಿದ್ದಾರೆ. ಇಲ್ಲಿ ಉಡುಪುಗಳ ಬಳಕೆಯ ವಿಷಯದಲ್ಲಿ ಭಾರತೀಯರು ಮಾನ, ಗೌರವ, ಮರ್ಯಾದೆ ಎಂಬ ದೃಷ್ಟಿಕೋನದಲ್ಲಿ ನೋಡಿದರೆ,

ಆಂಗ್ಲರು ತಾವು ಬತ್ತಲೆಯಾದಷ್ಟು ಅದು ವಿಲಾಯಿತಿಯ ಸಂಸ್ಕೃತಿಯೆಂದು ಮನ್ನಣೆಯನ್ನು ಗಳಿಸುತ್ತದೆ ಎಂದಿದ್ದಾರೆ. ಆದರೆ ಇಲ್ಲಿ ಗೋಕಾಕ್‌ರು ಸಂಸ್ಕಾರಗಳ ಪರಿಪಾಲಕರಾದ ಕಾರಣ ಈ ಬಗೆಯ ಸಂಸ್ಕೃತಿಯನ್ನು ತಿರಸ್ಕಾರದಿಂದ ಕಂಡಿದ್ದಾರೆ.

ಬಸವರಾಜ ಕಟ್ಟಿಮನಿ ಅವರು ತಾವು ಸೋವಿಯತ್ ದೇಶಕ್ಕೆ ವಿಮಾನದಲ್ಲಿ ಪ್ರಯಾಣ ಮಾಡುವಾಗ "ಗಗನ ಸಖಿಯರು 'ಬೆಲೆವೆಣ್ಣು'ಗಳಂತೆ ಬಟ್ಟೆ ಧರಿಸಿ ದೇಹದ ಉಬ್ಬು-ತಗ್ಗುಗಳನ್ನು ಪ್ರದರ್ಶಿಸುವುದು ನಮ್ಮ ದೇಶಕ್ಕೆ ಮರ್ಯಾದೆ ತರುವ ವಿಷಯವಲ್ಲ"(ಬಸವರಾಜ ಕಟ್ಟಿಮನಿ., ನಾ ಕಂಡ ರಷ್ಯಾ., ಪು-೪) ಎನ್ನುತ್ತಾರೆ. ಇಲ್ಲಿ ಲೇಖಕರಿಗೆ ವಿಮಾನಯಾನ ಸಂಸ್ಥೆಯು ನಿಗದಿ ಪಡಿಸಿರುವ ಉಡುಗೆಯನ್ನು ಧರಿಸಿರುವ ಗಗನಸಖಿಯರ ಕಂಡು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗಗನಸಖಿಯರು ಭಾರತೀಯ ಸಮಾಜವು ವಿಧಿಸಿರುವ ಅಲಿಖಿತ ಉಡುಗೆ ನಿಯಮಗಳನ್ವಯ ಇಲ್ಲದಿರುವುದರಿಂದ ಹೊಸ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮನಸ್ಸಿಲ್ಲದ ಲೇಖಕರು ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದ್ದಾರೆ. ೧೯೭೦ರ ಕಾಲಘಟ್ಟದಲ್ಲಿ ಮಹಿಳೆಯರು ಧರಿಸುವ ಉಡುಪುಗಳಿಗೆ ಸಂಬಂಧಿಸಿದಂತೆ ಅನೇಕ ನಿರ್ಬಂಧಗಳು ಇತ್ತೆಂಬುದನ್ನು ಸೂಚಿಸುತ್ತದೆ. ಭಾರತೀಯ ಸಾಂಪ್ರದಾಯಿಕ ಮನಸ್ಥಿತಿಯು ಈ ಬಗೆಯ ಅಭಿಪ್ರಾಯಕ್ಕೆ ಕಾರಣವಾಗಿರುವುದನ್ನು ಗುರುತಿಸಲಾಗಿದೆ.

ಪುಂಡಿಕಾಯ್ ಗಣಪಯ್ಯ ಭಟ್ ಅವರು ಇಥಾಕಾ ಸಮ್ಮೇಳನದಲ್ಲಿ ಸ್ತ್ರೀ-ಪುರುಷರೆಲ್ಲರೂ ತುಂಡು ಬಟ್ಟೆಗಳನ್ನು ಹಾಕಿಕೊಂಡು ಓಡಾಡುವುದನ್ನು ಕಂಡು ಮುಜುಗರವಾಯಿತು ಎಂದಿದ್ದಾರೆ. ಸಮ್ಮೇಳನದಲ್ಲಿ ಭಾಗವಹಿಸಿದವರು ತಮ್ಮ ಸಂಸ್ಕೃತಿಯ ಅನುಸಾರ, ಅವರ ಸಮಾಜದಲ್ಲಿ ಒಪ್ಪಿತವಾದ ಉಡುಪುಗಳನ್ನೇ ಧರಿಸಿದ್ದರು. ಅವರು ಧರಿಸಿದ್ದ ಉಡುಪುಗಳ ಶೈಲಿಯು ಲೇಖಕರಿಗೆ ನವೀನವಾಗಿತ್ತು. ಭಾರತೀಯ ಸಂಸ್ಕೃತಿಯ ನೆಲೆಯಲ್ಲಿ ಚಿಂತಿಸುವ ಲೇಖಕರಿಗೆ ಅವರ ಉಡುಪುಗಳ ಶೈಲಿಯು ವಿಕಾರವಾಗಿ ಕಂಡಿದೆ.

ಉ.ಕಾ. ಸುಬ್ಬಾಚಾರ್ ಅವರು ರಷ್ಯನ್ ಗಗನ ಸಖಿಯರ ಉಡುಪುಗಳನ್ನು ಕುರಿತು ಹೀಗೆ ಹೇಳುತ್ತಾರೆ. "ಸರಳ ಶುಭ್ರ ಉಡುಗೆ ಧರಿಸಿ, ಕರ್ತವ್ಯ ನಿಷ್ಠರಾಗಿ ಕೆಲಸ ಮಾಡುತ್ತಿದ್ದ ರಷ್ಯನ್ ಗಗನಸಖಿಯರನ್ನು ಕಂಡು ಅವರಲ್ಲಿ ಗೌರವ ಮೂಡಿತು"(ಉ.ಕಾ. ಸುಬ್ಬಾಚಾರ್, ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು, ಪು-೭)ಎಂದಿದ್ದಾರೆ. ಇಲ್ಲಿ ಲೇಖಕರ ಅಭಿಪ್ರಾಯ ಭಿನ್ನವಾಗಿದೆ. ಉಡುಪುಗಳಲ್ಲಿ ಗೌರವ ಭಾವ ಮೂಡಿಸುವ ಉಡುಪುಗಳನ್ನು ಧರಿಸಿರುವುದು ಇಲ್ಲಿ ವಿಶೇಷ. ಸಮಯ ಸಂದರ್ಭಗಳು ಬೇರೆ ಬೇರೆ ಉಡುಪುಗಳಿಗೆ ಕಾರಣವಾಗಿರುವುದು ನಿಶ್ಚಿತವಾದರೂ, ಅದಕ್ಕೆ ತಕ್ಕನಾದ ಅಭಿಪ್ರಾಯ ಭೇಧವು ವ್ಯಕ್ತವಾಗಿದೆ. ಇಲ್ಲಿ ಲೇಖಕರ ಮನಸ್ಥಿತಿಯೇ ಈ ಭೇಧಗಳಿಗೆ ಕಾರಣ ಎನ್ನಬಹುದು.

ಶ್ರೀರಂಗರಾಜು ಅವರು ಬ್ಯಾಲೆ ನೃತ್ಯಗಾರ್ತಿಯರು ಧರಿಸಿದ್ದ ಉಡುಪುಗಳನ್ನು ಕುರಿತು "ಎಲ್ಲಾ ನೃತ್ಯಗಾರರು ಮೈಯನ್ನು ಬಿಗಿ ಹಿಡಿದಿರುವ ಬಟ್ಟೆಗಳನ್ನು ಧರಿಸುತ್ತಾರೆ. ಇಂಥ ಒಂದು ಸುಂದರ ಕಲೆಯನ್ನು ಪರಿಣಾಮಕಾರಿಯಾಗಿ ತೋರಲು ಅದೇ ಪೋಷಾಕುಗಳು ಬೇಕೇ? ಅದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿಕೊಂಡು ಉತ್ತಮೋತ್ತಮ ಅಭಿರುಚಿಗೆ ಹೊಂದುವ ಪೋಷಾಕನ್ನು ಧರಿಸಿ ಅಂಥದ್ದೇ ಪರಿಣಾಮವನ್ನು ತರಲು ಸಾಧ್ಯವಿಲ್ಲವೆ? ಅಥವಾ ಪಾಶ್ಚಿಮಾತ್ಯರ ದೇಹ ಸೌಂದರ್ಯ ಪ್ರದರ್ಶನ ಅಂತಹ ದಿವ್ಯಕಲೆಯ ಒಂದು ಅಂಗವೋ? ಹೀಗಾದರೆ ಸ್ವಲ್ಪ ಕುಂದೇ ಹೌದು"(ಶ್ರೀರಂಗರಾಜು, ಸೋವಿಯತ್ ದಿನಚರಿ, ಪು-೨೨)ಎಂದಿದ್ದಾರೆ. ಇಲ್ಲಿ ಬ್ಯಾಲೆ ನೃತ್ಯಗಾರ್ತಿಯರು ಸಹಜವಾಗಿ ತಾವು ತಮ್ಮ ಪರಂಪರೆಗೆ ಒಗ್ಗುವ ಮತ್ತು

ತಮ್ಮ ನೃತ್ಯಕ್ಕೆ ಸಹಕಾರಿ ಆಗುವ ಉಡುಪುಗಳನ್ನು ಧರಿಸಿರುವುದು ಲೇಖಕರಿಗೆ ಅಶ್ಲೀಲವಾಗಿ ಕಂಡಿದೆ. ಮತ್ತು ಅವರು ಈ ಬಗೆಯ ದೇಹ ಸೌಂದರ್ಯವನ್ನು ಪ್ರದರ್ಶಿಸುವುದರ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಈ ಕಲೆಯಲ್ಲಿ ದೇಹದ ಸೌಂದರ್ಯ ಪ್ರದರ್ಶನ ಕಲೆಯ ಒಂದು ಭಾಗ ಎನ್ನುವುದಾದರೆ ಅದು ಕುಂದು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಲೇಖಕರು ವ್ಯಕ್ತಪಡಿಸಿದ ದೃಷ್ಟಿಕೋನವು ಭಾರತೀಯ ಸಂಸ್ಕೃತಿಯಿಂದ ಪ್ರೇರಿತವಾಗಿರುವುದನ್ನು ಗುರುತಿಸಲಾಗಿದೆ.

ಜಿ.ಎಸ್. ಶಿವರುದ್ರಪ್ಪ ಅವರು "ಗಂಡಸರು ಅಡಿಯಿಂದ ಮುಡಿಯವರೆಗೆ ಬಟ್ಟೆ ತೊಟ್ಟಿದ್ದರೆ, ಹೆಂಗಸರಂತೂ ಕನಿಷ್ಠ ವಸ್ತ್ರಧಾರಣೆಯರು. ನಮ್ಮಲ್ಲಾದರೊ ಹೆಂಗಸರು, ಗಂಡಸರ ನಡುವೆ ಕುಸಿದು ಕುಗ್ಗಿ, ಒಂದು ಥರಾ ನಾಚಿಕೆಯ, ಸಂಕೋಚದ ದುರ್ಬಲ ಪ್ರಾಣಿಗಳಂತೆ ವರ್ತಿಸಿದರೆ, ಇಲ್ಲಿ ಹೆಂಗಸರು ತಾವು ಯಾರಿಗೇನು ಕಡಿಮೆ ಎಂಬ ಧೈರ್ಯದಿಂದ ತಲೆಯೆತ್ತಿ ದಿಟ್ಟತನದಿಂದ ನಡೆದುಕೊಳ್ಳುತ್ತಾರೆ. ತಮಗೆ ದೈವದತ್ತವಾದ ದೇಹದ ಚೆಲುವನ್ನು ಅದೊಂದು 'ವರ'ವೆಂಬಂತೆ ಪ್ರದರ್ಶಿಸುವುದರಲ್ಲಿ ಅವರಿಗೆ ಯಾವ ಹಿಂಜರಿಕೆಯೂ ಇಲ್ಲ"(ಜಿ.ಎಸ್. ಶಿವರುದ್ರಪ್ಪ., ಇಂಗ್ಲೆಂಡಿನಲ್ಲಿ ಚತುರ್ಮಾಸ., ಪು-೨೨)ಎಂದಿದ್ದಾರೆ. ಇಲ್ಲಿ ಲೇಖಕರು ಉಡುಪುಗಳನ್ನು ತೊಡುವುದರಲ್ಲಿ ಇಂಗ್ಲೆಂಡಿನ ಮಹಿಳೆಯರ ಮನೋಭಾವಕ್ಕೂ ಭಾರತದ ಮಹಿಳೆಯರ ಮನೋಧರ್ಮಕ್ಕೂ ತೌಲನಿಕ ದೃಷ್ಟಿಯಿಂದ ವಿವೇಚಿಸುತ್ತಾ ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆಯಾ ಸಮಾಜವು ರೂಢಿಸಿಕೊಂಡು ಬಂದಿರುವ ಪದ್ಧತಿಗಳು ಅವರು ತೊಡುವ ಉಡುಪನ್ನು ನಿರ್ಧರಿಸುತ್ತದೆ. ಲೇಖಕರು ವಿದೇಶಿ ಮಹಿಳೆಯರ ಉಡುಪಿನ ಬಗ್ಗೆ ಧನಾತ್ಮಕವಾಗಿಯಾಲೀ ಅಥವಾ ಋಣಾತ್ಮಕವಾಗಿಯಾಗಲೀ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಬದಲಿಗೆ ಅದು ಅಲ್ಲಿಗೆ ಸರಿ ಇದೆ. ನಮ್ಮ ದೇಶದ ಉಡುಪು ನಮಗೆ ಸರಿ ಎಂಬ ಭಾವ ವ್ಯಕ್ತವಾಗಿರುವುದನ್ನು ಕಾಣಲಾಗಿದೆ.

ಸ್ತ್ರೀ-ಪುರುಷರ ಉಡುಪುಗಳನ್ನು ಆಧರಿಸಿ ವ್ಯಕ್ತಪಡಿಸಿರುವ ವಿವಿಧ ಲೇಖಕರ ಅಭಿಪ್ರಾಯಗಳನ್ನು ವಿಶ್ಲೇಷಣೆ ಮಾಡಲಾಯಿತು. ಅದರ ಪ್ರಕಾರ ಉಡುಪುಗಳು ಆಯಾ ದೇಶದ ಸಂಸ್ಕೃತಿಗೆ ಅನುಗುಣವಾಗಿದ್ದು ಪ್ರಾದೇಶಿಕ ಭಿನ್ನತೆ ಇರುತ್ತದೆ. ಉದ್ಯೋಗದಲ್ಲಿ ಇರುವವರು, ಕಲೆಯನ್ನು ಪ್ರದರ್ಶಿಸುವವರು, ಸಾಮಾನ್ಯ ಜನರು ತಮ್ಮ ಪ್ರದೇಶ ಮತ್ತು ವಾತಾವರಣಕ್ಕೆ ಅನುಗುಣವಾಗಿ ಉಡುಪುಗಳನ್ನು ಧರಿಸುತ್ತಾರೆ. ಈ ಉಡುಪುಗಳು ಅವರ ವೈಯುಕ್ತಿಕ ಹಿತಾಸಕ್ತಿಯನ್ನು ತಿಳಿಸುವ ಮಾನದಂಡಗಳಾಗಿರುತ್ತದೆ. ಬೇರೆಯವರ ಉಡುಪುಗಳು ನಮ್ಮ ಉಡುಪಿನಂತೆ ಇರದೆ ಭಿನ್ನವಾಗಿದ್ದರೆ ಅದು ನಮಗೆ ಅಸಭ್ಯವಾಗಿ ಕಾಣುತ್ತದೆ. ಈ ರೀತಿ ಕಾಣಲು ನೋಡುಗನ ಮನಸ್ಥಿತಿಯೇ ಕಾರಣವಾಗಿರುತ್ತದೆ ಎಂಬುದನ್ನು ಲೇಖಕರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಲಾಗಿದೆ.

ಕೊನೆ ಟಿಪ್ಪಣಿ

೧. ಈ ಕೃತಿಯ ಪ್ರತಿ ಲಭ್ಯವಾಗಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಶೋಧನಾ ಪ್ರಬಂಧ ಮಂಡಿಸಿದ ಶೇಖರ ಸಿ. ಕೆ. ಇವರ ಸಂಶೋಧನಾ ಪ್ರಬಂಧದಿಂದ ಈ ಕೃತಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ.

೨. ಈ ಕೃತಿಯ ಪ್ರತಿ ಲಭ್ಯವಾಗಿಲ್ಲ. ಮಲ್ಲೇಪುರಂ ಜಿ. ವೆಂಕಟೇಶ್, 'ಪ್ರವಾಸ ಸಾಹಿತ್ಯ : ಒಂದು ಅಧ್ಯಯನ' ಕೃತಿಯಿಂದ ಮಾಹಿತಿಯನ್ನು ಪಡೆಯಲಾಗಿದೆ.

೩. ನನ್ನ ಅಧ್ಯಯನದ ಮಿತಿಯಲ್ಲಿ ಗಮನಕ್ಕೆ ಬಂದಿರುವ ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ಆಧರಿಸಿ ಈ ಸಂಖ್ಯೆಗಳನ್ನು ಉಲ್ಲೇಖಿಸಲಾಗಿದೆ.

೪. ೧೯೯೦ ರಿಂದ ೨೦೦೦ರ ದಶಕದಲ್ಲಿ ಐದು ಮಹಿಳಾ ಯುರೋಪ್ ಪ್ರವಾಸ ಕೃತಿಗಳು ಪ್ರಕಟಗೊಂಡಿವೆ.

ಅ. ಲತಾಗುತ್ತಿ– ಯುರೋ ನಾಡಿನಲ್ಲಿ, (೧೯೯೩)

ಆ. ದೇವಕೀಮೂರ್ತಿ– ಯುರೋ ಅಮೇರಿಕಾದ ಇಣುಕು ನೋಟ, (೧೯೯೪)

ಇ. ಹೇಮಲತಾ ಮಹಿಷಿ– ಯುರೋ ದರ್ಶನ, (೧೯೯೯)

ಈ. ನೇಮಿಚಂದ್ರ– ಒಂದು ಕನಸಿನ ಪಯಣ, (೧೯೯೯)

ಉ. ಭಾರತಿ ಭಟ್– ನನ್ನ ಬೇಲ್ಜಿಯಂ ಪ್ರವಾಸ(೨೦೦೦)

೫. ೨೦೦೧ ರಿಂದ ೨೦೧೦ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಕೃತಿಗಳು –೬

ಅ. ಇಂದಿರಾ ಶಿವಣ್ಣ, ಹಾಲೆಂಡ್‌ನಿಂದ ಲಂಡನ್‌ವರೆಗೆ. ೨೦೦೧

ಆ. ಶ್ಯಾಮಲಾ ಪ್ರಸಾದ್, ನಾನು ಕಂಡ ಯುರೋಪ್, ೨೦೦೩

ಇ. ಮೀನಾ ಮೈಸೂರು, ಫ್ರಾನ್ಸ್ ಪ್ರವಾಸದ ಎತ್ತಣಿಂದೆತ್ತ, ೨೦೦೩

ಈ. ಅಂದನೂರು ಶೋಭ, ಯುರೋಪ್‌ನಲ್ಲಿ ಒಂದು ಸುತ್ತು, ೨೦೦೫

ಉ. ಪ್ರೇಮಾಭಟ್, ಪಶ್ಚಿಮದತ್ತ ಪಯಣ, ೨೦೧೦

ಅಧ್ಯಾಯ: ೭

ಸಮಾರೋಪ

ಅಧ್ಯಯನದ ಫಲಿತಗಳು
ಆಕರ ಗ್ರಂಥಗಳು
ಪರಾಮರ್ಶನ ಗ್ರಂಥಗಳು

ಅಧ್ಯಾಯ : ೭
ಅಧ್ಯಯನದ ಫಲಿತಗಳು

'ಕನ್ನಡದ ಯುರೋಪ್ ಪ್ರವಾಸ ಕಥನಗಳು' ಎಂಬ ಶೀರ್ಷಿಕೆ ಅಡಿಯಲ್ಲಿ ಸಂಶೋಧನಾ ಅಧ್ಯಯನವನ್ನು ಮಾಡಲಾಗಿದೆ. ಅಧ್ಯಯನದ ಉದ್ದೇಶಗಳಿಗೆ ಅನುಗುಣವಾಗಿ ಯುರೋಪ್ ಪ್ರವಾಸ ಕೃತಿಗಳನ್ನು ವರ್ಗೀಕರಿಸಿ ಮೂಲ ಆಕರಗಳನ್ನು ಆಯ್ದುಕೊಳ್ಳಲಾಗಿದೆ. ಆನುಷಂಗಿಕ ಆಕರಗಳನ್ನು ಅಧ್ಯಯನಕ್ಕೆ ಪೂರಕವಾಗಿ ಮತ್ತು ವ್ಯಾಪ್ತಿಯ ಮಿತಿಯನ್ನು ಅನುಸರಿಸಿ ಬಳಸಿಕೊಳ್ಳಲಾಗಿದೆ. ಅಧ್ಯಯನದ ರೂಪುರೇಷೆಗಳಿಗೆ ಅನುಗುಣವಾಗಿ ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಯುರೋಪ್ ಪ್ರವಾಸ ಕೃತಿಗಳನ್ನು ಸಾಂಸ್ಕೃತಿಕ ದೃಷ್ಟಿಕೋನದ ಮೂಲಕ ವಿಶ್ಲೇಷಣೆ ಮಾಡಲಾಗಿದ್ದು, ವಿವಿಧ ಬಗೆಯ ಹೊಸ ಹೊಳವುಗಳನ್ನು ಕಾಣಲಾಗಿದೆ. ಪ್ರವಾಸ ಕೃತಿಗಳು ವ್ಯಕ್ತಿನಿಷ್ಠ ಕೃತಿಗಳಾಗಿದ್ದು ಲೇಖಕರ ಬರೆವಣಿಗೆಯ ಶೈಲಿಯನ್ನು ಅನುಸರಿಸಿ ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಯನದ ಫಲಿತಗಳೆಂದರೆ

೧. ಕನ್ನಡದ ಯುರೋಪ್ ಪ್ರವಾಸ ಕೃತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದಾಗ ಯುರೋಪ್ ದೇಶಗಳಲ್ಲಿನ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಸಾಮ್ಯತೆಗಳಿರುವುದು ಕಂಡುಬರುತ್ತದೆ. ಕ್ರಿಸ್ತಪೂರ್ವದಲ್ಲಿಯೇ ರೋಮ್ ಮತ್ತು ಗ್ರೀಕ್‌ನ ಬುಡಕಟ್ಟು ಜನರಲ್ಲಿ ಆಚರಣೆಯಲ್ಲಿದ್ದ 'ಪಿಥಿಯಾ' ಪರಂಪರೆಯು ಭಾರತೀಯ ಸಂಪ್ರದಾಯದಲ್ಲಿನ ಆಚರಣೆಗಳೊಂದಿಗೆ ಹೋಲಿಕೆ ಇರುವುದನ್ನು ಕಾಣಬಹುದು. ಕರಾವಳಿ ಪ್ರದೇಶದ ದೈವ, ಕೋಲ, ನೇಮಗಳಲ್ಲಿನ 'ದರ್ಶನ ಪಾತ್ರಿ'ಯನ್ನು, ಹಾಲಕ್ಕಿ ಸಂಪ್ರದಾಯದ ಶಕುನ ಹೇಳುವ ಪದ್ಧತಿ ಮತ್ತು ಕಣಿ ಹೇಳುವ ಪದ್ಧತಿಯೊಂದಿಗೆ ಹೋಲಿಕೆ ಇರುವುದನ್ನು ಕಂಡುಕೊಳ್ಳಲಾಗಿದೆ.

೨. ಪ್ರವಾಸಿ ಲೇಖಕರು ಯುರೋಪಿನ ದೇಶಗಳಲ್ಲಿನ ಆಚರಣೆ, ಸಂಪ್ರದಾಯಗಳನ್ನು ಮತ್ತು ಸ್ಥಳಗಳನ್ನು ಭಾರತೀಯ ನೆಲೆಯಲ್ಲಿಯೇ ಗ್ರಹಿಸಿದ್ದರೂ, ದಕ್ಷಿಣ ಭಾರತದ ಸಂಸ್ಕೃತಿಯ ಪ್ರಭಾವವೇ ದಟ್ಟವಾಗಿರುವುದನ್ನು ಕಾಣಲಾಗಿದೆ. ಅಪೂರ್ವ ಪಶ್ಚಿಮ ಕೃತಿಯು ಮಾತೃ ಪ್ರಧಾನ ಕುಟುಂಬ ಪದ್ಧತಿಯ ನೆಲೆಯಲ್ಲಿ ವಿಚಾರಗಳನ್ನು ಚರ್ಚಿಸಿರುವುದನ್ನು ಕಾಣಲಾಗಿದೆ.

೩. ಸರಕಾರದ ವತಿಯಿಂದ ಆಯೋಜಿಲ್ಪಟ್ಟ ಪ್ರವಾಸ ಕಥನಗಳಿಗೂ; ಸ್ವಂತ ಖರ್ಚಿನಲ್ಲಿ ಪ್ರವಾಸ ಮಾಡಿರುವ ಪ್ರವಾಸ ಕೃತಿಗಳಿಗೂ ನಿರೂಪಣೆಯಲ್ಲಿನ ಸ್ವತಂತ್ರತೆ ಮತ್ತು ಅಭಿಪ್ರಾಯಗಳಲ್ಲಿನ ಖಚಿತತೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿವೆ. ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ' ಮತ್ತು 'ಅರಸಿಕರಲ್ಲ' ಕೃತಿಗಳ ನಡುವೆ ಹಾಗೂ ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ' ಮತ್ತು 'ಅಂಗೈಯಲ್ಲಿ ಯೂರೋ ಅಮೆರಿಕ' ಕೃತಿಗಳ ನಡುವೆ ನಿರೂಪಣೆಯ ಧಾಟಿ, ವಿಷಯಗಳ ಮಂಡನೆ, ಸ್ಥಳಗಳ ಆಯ್ಕೆಗಳನ್ನು ಆಧರಿಸಿ ವಿಶ್ಲೇಷಿಸಿದಾಗ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳಿರುವುದನ್ನು ಕಂಡುಕೊಳ್ಳಲಾಗಿದೆ.

೪. ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಕೃತಿಗಳನ್ನು ಆಧರಿಸಿ, ಲೇಖಕರು ತಮ್ಮ ಬರೆವಣಿಗೆಯಲ್ಲಿ ದೇಶಗಳನ್ನು ಕೇಂದ್ರವಾಗಿರಿಸಿಕೊಂಡು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಈ ಕೆಳಗಿನಂತೆ ನಾಲ್ಕು ಬಗೆಯಲ್ಲಿ ವಿಂಗಡಿಸಲಾಗಿದೆ.

ಅ) **ಸ್ವದೇಶದಲ್ಲಿನ ಕೊರತೆಗಳನ್ನು ಮುಂದುಮಾಡಿ ವಿದೇಶಗಳನ್ನು ಹೊಗಳುವ ಅಭಿಪ್ರಾಯಗಳನ್ನು ಹೊಂದಿದವರು** : ಇವರು ತಮಗೆ ಕಂಡದ್ದೆಲ್ಲವೂ ಒಳ್ಳೆಯದು, ಸರಿಯಾದುದು, ಇಂತಹದ್ದು ಬೇರೆ ಎಲ್ಲಿಯೂ ಇಲ್ಲ ಎಂದು ಸ್ವದೇಶದೊಂದಿಗೆ ಹೋಲಿಸುತ್ತಾ ತಾವು ಕಂಡ ದೇಶಗಳನ್ನು ಹೊಗಳುವ ದೃಷ್ಟಿಕೋನವುಳ್ಳವರಾಗಿದ್ದಾರೆ. ಪ್ರಭುವರ್ಯರ ಯುರೋಪ್ ಪ್ರವಾಸ, ರಾಗ ತಾನ : ಸೇನ ದಡದಲ್ಲಿ, ನಮ್ಮ ವಿದೇಶ ಯಾತ್ರೆ ಕೃತಿಗಳಲ್ಲಿ ಈ ಬಗೆಯ ಅಭಿಪ್ರಾಯಗಳು ಹೆಚ್ಚು ವ್ಯಕ್ತವಾಗಿರುವುದನ್ನು ಕಾಣಲಾಗಿದೆ.

ಆ) **ಸ್ವಂತ ದೇಶದ ಸಮರ್ಥನೆಗೆ ನಿಲ್ಲುವ ಅಭಿಪ್ರಾಯ ಹೊಂದಿದವರು:** ಇವರಿಗೆ ತಮ್ಮ ದೇಶವೇ ಶ್ರೇಷ್ಠ. ಬೇರೆ ದೇಶದಲ್ಲಿ ಅದೆಷ್ಟೇ ಚೆನ್ನಾಗಿದ್ದರೂ ಸ್ವದೇಶವೇ ಮೇಲು. ಆ ಕಾರಣದಿಂದ ಪ್ರಪಂಚದ ಅದ್ಭುತಗಳು ಎನಿಸಿದ ವಸ್ತು/ಸಂಗತಿಗಳೂ ಕೂಡ ಇವರಿಗೆ ಸಪ್ಪೆಯಾಗಿಯೇ ಕಾಣುತ್ತದೆ. ಇವರನ್ನು ಸ್ಥೂಲವಾಗಿ 'ರಾಷ್ಟ್ರೀಯ ಪ್ರಜ್ಞೆ'ಯಿಂದ ಪ್ರಭಾವಿತರಾದ ಲೇಖಕರು ಎಂದು ಕರೆಯಬಹುದಾಗಿದೆ.

ಇ) **ತಟಸ್ಥ ಧೋರಣೆಯನ್ನು ಹೊಂದಿದವರು:** ಇವರು ತಮ್ಮ ದೇಶವನ್ನು ತೆಗಳುವುದೂ ಇಲ್ಲ, ಹೊಗಳುವುದೂ ಇಲ್ಲ. ಅಂತೆಯೇ ಬೇರೆ ದೇಶಗಳನ್ನು ಅತಿಯಾಗಿ ಹೊಗಳುವುದಾಗಲಿ, ತೆಗಳುವುದಾಗಲಿ ಮಾಡುವುದಿಲ್ಲ. ಇವರ ಬರಹಗಳು ತೌಲನಿಕ ವಿಶ್ಲೇಷಣೆಯನ್ನು ನಿರಾಕರಿಸುವುದರಿಂದ ಕೇವಲ ವರದಿ ರೂಪದಲ್ಲಿ ಪ್ರವಾಸದ ಅನುಭವಗಳು ದಾಖಲಾಗಿರುತ್ತದೆ.

ಈ) **ಸಮತೂಕದ, ವಾಸ್ತವ ಪ್ರಜ್ಞೆಯುಳ್ಳವರು** : ಇವರು ಆಯಾ ದೇಶದ ಸಂಸ್ಕೃತಿಯನ್ನು, ಪರಿಸ್ಥಿತಿಯನ್ನು ಇರುವಂತೆಯೇ ಒಪ್ಪಿಕೊಂಡವರು. ಅದು ಅಲ್ಲಿಗೆ ಸರಿ, ಇದು ಇಲ್ಲಿಗೆ ಸರಿ ಎನ್ನುವ ಮನಸ್ಸಿನವರು. ತಪ್ಪಿದ್ದರೆ ಯಾವುದೇ ದೇಶವಾಗಿರಲಿ ನೇರವಾಗಿ ಖಂಡಿಸುವವರು. ತೌಲನಿಕ ದೃಷ್ಟಿಕೋನದಿಂದ ವಿಮರ್ಶಿಸಿ ನಿರ್ಭೀತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮನೋಭಾವ ಹೊಂದಿದವರಾಗಿದ್ದಾರೆ.

೫. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಯುರೋಪ್ ನೆನಪುಗಳು, ವಿದೇಶದಲ್ಲಿ ನಾಲ್ಕು ವಾರ– ಮೊದಲಾದ ಕೃತಿಗಳು 'ಯುರೋಪಿಯನ್ನರ ನಾಸ್ತಿಕ ಭಾವಕ್ಕೆ ಯುರೋಪಿನ ತತ್ವಜ್ಞಾನಿಗಳ ಪ್ರಭಾವ ಮತ್ತು ಕ್ರಾಂತಿಗಳು ಕಾರಣ' ಎಂದು ನಿರೂಪಿಸಿವೆ. ಜೊತೆಗೆ ಭಾರತೀಯರಲ್ಲಿನ ಆಸ್ತಿಕ ಭಾವನೆ ಬದಲಾಗದಿರಲು ರಾಷ್ಟ್ರ ಮಟ್ಟದಲ್ಲಿ ವೈಚಾರಿಕ ಕ್ರಾಂತಿ ಘಟಿಸದಿರುವುದೇ ಪ್ರಮುಖ ಕಾರಣ ಎಂದು

ಭಾವಿಸುವಂತೆ ನಿರೂಪಿಸಲಾಗಿದೆ. ಫ್ರೆಂಚ್ ಕ್ರಾಂತಿಯ ಪ್ರಭಾವದಿಂದ ಫ್ರಾನ್ಸಿನಲ್ಲಿ ದೈವೀ ನಂಬಿಕೆಗಳ ಮೇಲೆ ಋಣಾತ್ಮಕ ಪ್ರಭಾವ ಬೀರಿರುವುದನ್ನು ಒಪ್ಪಲಾಗಿದೆ. ಆದರೆ ಕ್ರಾಂತಿಗಳೆಲ್ಲವೂ ಸಾರ್ವತ್ರಿಕವಾಗಿಯೂ, ಸಾರ್ವಕಾಲಿಕವಾಗಿಯೂ ಜನರ ಭಾವನೆಯನ್ನು ಬದಲಾಯಿಸುತ್ತದೆ ಎಂದು ಹೇಳಲಾಗುವುದಿಲ್ಲ. ವಚನ ಕ್ರಾಂತಿಯು ನಿರೀಕ್ಷಿಸಿದ ಸಾಮಾಜಿಕ ಬದಲಾವಣೆಯನ್ನೂ, ಭಾರತೀಯ ಸ್ವಾತಂತ್ರ್ಯ ಚಳುವಳಿಗಳು ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ನಡೆಸಿದ ಪ್ರಯತ್ನಗಳನ್ನು ಆಧರಿಸಿ ಈ ಅಂಶವನ್ನು ಕಂಡುಕೊಳ್ಳಲಾಗಿದೆ.

೬. ಯುರೋಪ್‌ನಲ್ಲಿ ದುಡಿಮೆಗೆ ಹೆಚ್ಚು ಗೌರವ ಇದೆ. ಲಿಂಗಭೇಧ ಇಲ್ಲದೆ ಎಲ್ಲರೂ ದುಡಿಯುವುದನ್ನು ಲೇಖಕರು ಗುರುತಿಸಿದ್ದಾರೆ. ಮಹಿಳಾ ಪ್ರವಾಸಿ ಲೇಖಕರು ಭಾರತದಲ್ಲಿ ಮಹಿಳೆಯರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವಾಗ ತಾರತಮ್ಯ ಮಾಡುತ್ತಿದ್ದಾರೆ ಎಂದು ಅಸಹನೆ ವ್ಯಕ್ತಪಡಿಸಿದ್ದಾರೆ. ಪುರುಷ ಲೇಖಕರು ತಾರತಮ್ಯವನ್ನು ಉಲ್ಲೇಖಿಸಿದರೂ, ಎಲ್ಲರೂ ಪ್ರತಿಕ್ರಿಯೆ ನೀಡುವುದಿಲ್ಲ. ಹೆಚ್ಚು ಪುರುಷ ಲೇಖಕರು ಭಾರತದಲ್ಲಿ ಉದ್ಯೋಗದಲ್ಲಿನ ಲಿಂಗ ತಾರತಮ್ಯಕ್ಕೆ ಪರೋಕ್ಷವಾಗಿ ಸಹಮತ ವ್ಯಕ್ತಪಡಿಸುವಂತಿದೆ.

೭. ಇಪ್ಪತ್ತನೇ ಶತಮಾನದಲ್ಲಿ ರಚಿತವಾಗಿರುವ ಯುರೋಪ್ ಪ್ರವಾಸ ಕೃತಿಗಳಲ್ಲಿ ಸುಮಾರು ಶೇಕಡಾ ೫೦ಕ್ಕಿಂತ ಹೆಚ್ಚಿನ ಕೃತಿಗಳು ಸರಕಾರ ಮತ್ತು ಸಂಘಸಂಸ್ಥೆಗಳ ಧನಸಹಾಯವನ್ನು ಪಡೆದು ತೆರಳಿರುವುದನ್ನು ಕಾಣಲಾಗಿದೆ. ಅವುಗಳಲ್ಲಿ ಸೋವಿಯತ್ ರಷ್ಯಾ ದೇಶದ ಆಹ್ವಾನದ ಮೇರೆಗೆ ಪ್ರವಾಸ ಮಾಡಿದವರ ಸಂಖ್ಯೆಯೇ ಅಧಿಕವಾಗಿದೆ. ಅನುದಾನದಲ್ಲಿ ತೆರಳಿದ ಕೃತಿಗಳಲ್ಲಿ ಹೆಚ್ಚಿನ ಕೃತಿಗಳು ತಮ್ಮನ್ನು ಬರಮಾಡಿಕೊಂಡ ದೇಶಗಳ ಬಗ್ಗೆ ಧನಾತ್ಮಕ ಧೋರಣೆಗಳನ್ನೇ ವ್ಯಕ್ತಪಡಿಸಿವೆ.

೮. ಯುರೋಪಿನ ಸಮಾಜದಲ್ಲಿ ಅನುಸರಣೆಯಲ್ಲಿರುವ ಸಾಮಾಜಿಕ ಪದ್ಧತಿಯು ಹದಿಹರೆಯದ ಯುವಕ-ಯುವತಿಯರ ಮನೋಬಲವನ್ನು ವೃದ್ಧಿಸುವಲ್ಲಿ ಪ್ರಮುಖಪಾತ್ರ ವಹಿಸಿದೆ. ಪ್ರೌಢಶಾಲೆ ಮುಗಿದ ಬಳಿಕ ತಂದೆತಾಯಿಯರ ಜೊತೆಯಲ್ಲಿ ವಾಸಿಸದೇ ಪ್ರತ್ಯೇಕವಾಗಿಯೇ ವಾಸಿಸಬೇಕಾದ ಅಲ್ಲಿನ ಸಮಾಜದ ಪದ್ಧತಿಯು ಅವರ ಮನೋಬಲ ವೃದ್ಧಿಗೊಳ್ಳಲು ಕಾರಣವಾಗಿದೆ. ತಂದೆ-ತಾಯಿಗಳಿಂದ ದೂರವಾಗಿ ವಾಸಿಸುವ ಹದಿಹರೆಯದ ಯುವಕ-ಯುವತಿಯರಲ್ಲಿ ಸಹಜವಾಗಿ ಕಷ್ಟಗಳನ್ನು ಪರಿಹರಿಸಿಕೊಳ್ಳುವ, ಜವಾಬ್ದಾರಿಯನ್ನು ನಿರ್ವಹಿಸುವ, ಅನಿಶ್ಚಿತತೆಗಳನ್ನು ಎದುರಿಸುವ ಮನೋಬಲವು ಬೆಳೆಯುತ್ತದೆ. ಅವರಲ್ಲಿ ನಾಯಕತ್ವದ ಗುಣ, ಕೆಲಸ ನಿರ್ವಹಣೆಯಲ್ಲಿ ಚಾತುರ್ಯತೆಯನ್ನು ಗಳಿಸಿ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುತ್ತಾರೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ತಂದೆ-ತಾಯಿಯರು ಮಕ್ಕಳನ್ನು ಅವರ ಇಚ್ಛಾನುಸಾರ ಸ್ವತಂತ್ರ ಮನೋವೃತ್ತಿಯಿಂದ ಬದುಕಲು ಬಿಡುವ ಪರಿಸ್ಥಿತಿ ಇಲ್ಲ. ಈ ಕಾರಣದಿಂದ ಯುರೋಪಿನ ವಿದ್ಯಾರ್ಥಿಗಳಿಗೆ ಹೋಲಿಸಿದರೆ ನಾಯಕತ್ವದ ಗುಣ, ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿ, ಅನಿಶ್ಚಿತತೆಗಳನ್ನು ಎದುರಿಸುವ ಧೈರ್ಯದ ಸ್ವಭಾವವು ಭಾರತೀಯ ಹದಿಹರೆಯದ ಯುವಕ-ಯುವತಿಯರಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಸಾಮಾಜಿಕ ಪದ್ಧತಿಗಳು ಆಯಾ ಸಮಾಜದ ಹದಿಹರೆಯದವರಲ್ಲಿ ಮಾನಸಿಕ ಸಿದ್ಧತೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೯. ವಸಾಹತು ಕಾಲಘಟ್ಟದಲ್ಲಿ ಭಾರತೀಯ ಸಾಮಾಜಿಕ ಪದ್ಧತಿಗಳ ಅನುಸಾರ ಸ್ತ್ರೀಯರು ವಿದೇಶ ಪ್ರವಾಸಕ್ಕೆ ತೆರಳಲು ಅವಕಾಶಗಳಿರಲಿಲ್ಲ. ಈ ನಿಯಮವು ಸಮಾಜದ ಎಲ್ಲಾ ವರ್ಗದ ಮಹಿಳೆಯರಿಗೆ

ಅನ್ವಯಿಸುತ್ತಿರಲಿಲ್ಲ. ಏಕೆಂದರೆ ಆರ್ಥಿಕವಾಗಿ ಬಲಿಷ್ಠರಾದ, ಉನ್ನತ ವರ್ಗಕ್ಕೆ ಸೇರಿದ ಮಹಿಳೆಯರು ವಿದೇಶ ಪ್ರವಾಸ ಮಾಡಿ ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ಅರಸರ ರಾಜಕುಮಾರಿ ಚನ್ನಾಜಮ್ಮಣ್ಣಿ ಅವರು ೧೯೩೭ರಲ್ಲಿ ಯುರೋಪ್ ಪ್ರವಾಸ ಕೈಗೊಂಡು 'ನನ್ನ ಪ್ರಪಂಚ ಸಂಚಾರ' ಎಂಬ ಕೃತಿಯನ್ನು ರಚಿಸಿರುವುದನ್ನು ಕಾಣಬಹುದು. ಸಾಮಾಜಿಕ ಪದ್ಧತಿಗಳು ವಿದೇಶ ಪ್ರವಾಸಗಳ ಮೇಲೆ ನೇರ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೧೦. ಸೋವಿಯತ್ ರಷ್ಯಾ ದೇಶವು ಹದಿನಾಲ್ಕು ದೇಶಗಳಾಗಿ ವಿಭಜಿಸುವ ಪೂರ್ವದಲ್ಲಿ, ಪ್ರಪಂಚದಲ್ಲಿಯೇ ತಾನು ಶಕ್ತಿಯುತವಾದ ರಾಷ್ಟ್ರ ಎಂದು ತೋರ್ಪಡಿಸಲು ಕೆಲವು ಅಜೆಂಡಾಗಳನ್ನು ಅನುಸರಿಸುತ್ತಿತ್ತು. ಪ್ರಪಂಚದ ತೃತೀಯ ರಾಷ್ಟ್ರಗಳಿಂದ ವಿದ್ವಾಂಸರನ್ನು, ಆರ್ಥಿಕ ತಜ್ಞರನ್ನು, ಸಾಹಿತಿಗಳನ್ನು, ಪತ್ರಕರ್ತರನ್ನು ಆಹ್ವಾನಿಸುತ್ತಿತ್ತು. ಅತಿಥಿಗಳಿಗೆ ದ್ವಿಭಾಷಿಯ ಸೌಲಭ್ಯ, ಪ್ರವಾಸ ಸ್ಥಳಗಳಿಗೆ ಹೋಗಿಬರಲು ವಾಹನಗಳ ಸೌಕರ್ಯ, ವಸತಿ ಮತ್ತು ಊಟ ಹೀಗೆ ಅನುಕೂಲಕರವಾದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿತ್ತು. ಅವುಗಳ ಸಂಪೂರ್ಣ ಲಾಭವನ್ನು ಪಡೆದ ಅನೇಕ ಲೇಖಕರು ಸಹಜವಾಗಿ ಸೋವಿಯತ್ ದೇಶದ ಬಗೆಗೆ ಧನಾತ್ಮಕ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಿದ್ದಾರೆ. ಪ್ರವಾ ಸಾಹಿತ್ಯ ಕೃತಿಗಳು ಆಯಾ ದೇಶದ ಪ್ರಚಾರಕ ಸಾಮಾಗ್ರಿಗಳಾಗಿ ಬಳಕೆಯಾಗಿವೆಯೇ ಎನಿಸುತ್ತದೆ. ಅರಸಿಕರಲ್ಲ ಮತ್ತು ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ ಕೃತಿಗಳು ಮಾತ್ರ ಇದಕ್ಕೆ ಅಪವಾದವಾಗಿವೆ.

೧೧. ಗೋಪಾಲ್ ಜಿ. ಅವರ 'ವೈದ್ಯನ ವಿದೇಶ ಪ್ರವಾಸ'(೧೯೮೦) ಮತ್ತು 'ಬೆಂಗಳೂರಿಂದ ಬಾರ್ಸೆಲೋನಕ್ಕೆ'(೧೯೮೫) ಕೃತಿಗಳು ದಲಿತ ಮತ್ತು ಬಂಡಾಯ ಸಾಹಿತ್ಯದ ಕಾಲಘಟ್ಟದಲ್ಲಿ ರಚನೆಯಾಗಿದ್ದು ಈ ಕೃತಿಗಳು ದಲಿತ ಮತ್ತು ಬಂಡಾಯ ಪ್ರಜ್ಞೆಯ ಹಿನ್ನೆಲೆಯಲ್ಲಿ ನಿರೂಪಿತವಾಗಿವೆ.

೧೨. ದಿನಚರಿ ರೂಪದ ಪ್ರವಾಸ ಕೃತಿಗಳಿಗೂ ದಿನಚರಿಗಳಲ್ಲದ ಪ್ರವಾಸ ಕೃತಿಗಳಿಗೂ ವ್ಯತ್ಯಾಸಗಳಿವೆ. ದಿನಚರಿ ರೂಪದ ಪ್ರವಾಸ ಕೃತಿಗಳು ಪ್ರವಾಸದ ಸಮಗ್ರ ಪರಿಣಾಮವನ್ನು, ಪ್ರವಾಸದ ಒಟ್ಟು ನೋಟವನ್ನು, ಪ್ರವಾಸದಿಂದಾದ ಒಟ್ಟು ಪ್ರಯೋಜನಗಳನ್ನು ನೀಡುವುದರಲ್ಲಿ ವಿಫಲವಾಗಿವೆ. ಪ್ರವಾಸ ಮುಗಿದ ಬಳಿಕ ಅಲ್ಲಲ್ಲಿ ಗುರುತಿಸಿಕೊಂಡ ತಮ್ಮ ಟಿಪ್ಪಣಿಗಳನ್ನು ಆಧರಿಸಿ ಬರೆದ ದಿನಚರಿಗಳಲ್ಲದ ಪ್ರವಾಸ ಕೃತಿಗಳು ಸಮಗ್ರ ನೋಟವನ್ನು ನೀಡುತ್ತವೆ. ಆದರೂ ಈ ಕೃತಿಗಳಿಗೆ ಕೆಲವು ಮಿತಿಗಳಿವೆ. ದೈನಂದಿನ ಘಟನೆಗಳ ವಿವರಗಳನ್ನು ದಾಖಲಿಸದೇ ಇರುವುದರಿಂದ ಕೆಲವು ಸಂಗತಿಗಳನ್ನು ಮರೆತು ಹೋಗುವ ಸಾಧ್ಯತೆ ಇರುತ್ತದೆ. ಈ ಎರಡು ಬಗೆಯ ಪ್ರವಾಸಕೃತಿಗಳನ್ನು ಮುಖಾಮುಖಿಯಾಗಿಸಿ ವಿಶ್ಲೇಷಿಸಿದಾಗ ಕೃತಿಯ ರಚನಾ ಕ್ರಮಕ್ಕಿಂತ ನಿರೂಪಣಾ ಶೈಲಿಯೇ ಪ್ರಧಾನ ಎಂಬುದನ್ನು ತಿಳಿಯಲಾಗಿದೆ.

೧೩. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಕನ್ನಡದ ಪ್ರವಾಸ ಸಾಹಿತ್ಯವನ್ನು ಗುಣವರ್ಗದ ಅನುಸಾರ ಮೂರು ಬಗೆಯಲ್ಲಿ ವಿಂಗಡಿಸಿದ್ದಾರೆ.

ಅ) ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಂದ ಕೂಡಿದ ಪ್ರವಾಸ ಕಥನಗಳು.

ಆ) ಸಾಮಾಜಿಕ ವಿವರಗಳಿಂದ ಕೂಡಿದ ಪ್ರವಾಸ ಕಥನಗಳು.

ಇ) ಸಾಮಾನ್ಯ ಪ್ರವಾಸ ಕಥನಗಳು(ಸಂ. ಮಲ್ಲೇಪುರಂ ಜಿ ವೆಂಕಟೇಶ, ಪ್ರವಾಸ ಸಾಹಿತ್ಯ: ಒಂದು ಅಧ್ಯಯನ, ಪು-೫)

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಪ್ರವಾಸ ಕೃತಿಗಳನ್ನು ಅವು ನಿರೂಪಿಸುವ ಅಂಶಗಳನ್ನು ಆಧರಿಸಿ

ಅ) ವಿವರಗಳ ಮಟ್ಟದಲ್ಲಿಯೇ ನಿಲ್ಲುವಂಥಹವು

ಆ) ವಿವರಗಳ ಜೊತೆಗೆ ಅಧ್ಯಯನದ ಮಾಹಿತಿಗಳನ್ನು ನೀಡುವಂಥದ್ದು

ಇ) ಅನುಭವ ಕಥನ

ಎಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ.

ಈ ರೀತಿಯ ವಿಭಾಗಗಳಿಗೆ ಪೂರಕವಾಗಿ ಮತ್ತು ಸ್ಪಷ್ಟವಾಗಿ ಕನ್ನಡದ ಯುರೋಪ್ ಪ್ರವಾಸ ಕೃತಿಗಳ ಬರೆವಣಿಗೆ ಶೈಲಿಯನ್ನು ಆಧರಿಸಿ ಈ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ.

ಅ) ಸ್ಥೂಲವರದಿ ರೂಪದ ಪ್ರವಾಸ ಬರೆವಣಿಗೆಗಳು

ಆ) ಸಮಗ್ರವರದಿಯನ್ನು ನೀಡುವ ಪ್ರವಾಸದ ಬರೆವಣಿಗೆಗಳು

ಇ) ತೌಲನಿಕ ಮಟ್ಟದ, ವಿಮರ್ಶಾರೂಪದ ಪ್ರವಾಸ ಬರೆವಣಿಗೆಗಳು

ಈ) ಅನ್ವಯಿಕ ರೂಪದ ಪ್ರವಾಸ ಬರೆವಣಿಗೆಗಳು

ಉ) ತಾತ್ವಿಕಮಟ್ಟದ ಪ್ರವಾಸ ಬರೆವಣಿಗೆಗಳು

೧೪. ಪ್ರವಾಸದ ಸಂದರ್ಭದಲ್ಲಿ ಲೇಖಕರು ಆಯಾ ಸ್ಥಳ/ನಗರದಲ್ಲಿ ತಂಗುವ ಅವಧಿ ಮತ್ತು ಸಂದರ್ಭ, ಸನ್ನಿವೇಶಗಳು ಕೃತಿಯ ನಿರೂಪಣೆಯ ಮೇಲೆ ಪ್ರಭಾವ ಬೀರುತ್ತವೆ. ಉನ್ನತ ಶಿಕ್ಷಣಕ್ಕಾಗಿ ಲಂಡನ್‌ನಲ್ಲಿ ಧೀರ್ಘ ಅವಧಿಗೆ ನೆಲೆಸಿದ ವಿ.ಕೃ. ಗೋಕಾಕ್, ಜಿ. ಗೋಪಾಲ್ ಅವರ ಕೃತಿಗಳಲ್ಲಿ ಆಳವಾದ ಸಾಮಾಜಿಕ ವಿಮರ್ಶೆಯನ್ನು ಕಾಣಬಹುದು. ಆದರೆ ಇಬ್ಬರ ವಿಮರ್ಶೆಗಳ ಮೇಲೆ ಅವರ ಸೈದ್ಧಾಂತಿಕ ನಿಲುವುಗಳಲ್ಲಿ ವ್ಯತ್ಯಾಸಗಳಿರುವುದನ್ನು ಗುರುತಿಸಲಾಗಿದೆ. ಅವರು ಇಂಗ್ಲೆಂಡಿಗೆ ತೆರಳಿರುವ ಕಾಲಘಟ್ಟದಲ್ಲಿನ ವ್ಯತ್ಯಾಸವು ನಿಲುವುಗಳಲ್ಲಿನ ವ್ಯತ್ಯಾಸಕ್ಕೆ ಖಚಿತವಾಗಿ ಕಾರಣವಾಗಿದೆ. ಈ ಎರಡು ಪ್ರವಾಸ ಕೃತಿಗಳು ನಡುವೆ ಸುಮಾರು ಐವತ್ತು ವರ್ಷಗಳ ಅಂತರವಿದೆ. ಈ ಅಂತರವು ಕೂಡ ಭಿನ್ನ ಮನೋಧರ್ಮಗಳಿಗೆ ಕಾರಣವಾಗಿದೆ. ವಿ. ಕೃ. ಗೋಕಾಕ್ ಅವರ ಬರೆವಣಿಗೆಗಿಂತ ಭಿನ್ನವಾಗಿ ಜಿ. ಗೋಪಾಲ್ ಅವರ ಬರೆವಣಿಗೆಯಲ್ಲಿ ದಲಿತ ಸಂವೇದನೆ ಮತ್ತು ಬಂಡಾಯ ಧೋರಣೆಯ ಪ್ರಭಾವ ದಟ್ಟವಾಗಿರುವುದನ್ನು ಗುರುತಿಸಲಾಗಿದೆ.

೧೫. ಕನ್ನಡದ ಯುರೋಪ್ ಪ್ರವಾಸದ ಕೃತಿಗಳು ವಿವಿಧ ಸಿದ್ಧಾಂತಗಳ ಪ್ರಭಾವಕ್ಕೆ ಒಳಗಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದನ್ನು ಗುರುತಿಸಲಾಗಿದೆ. ಆ ಕೃತಿಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

ಅ) ಪ್ರಜಾಪ್ರಭುತ್ವವಾದಿ ಪ್ರವಾಸ ಕೃತಿಗಳು

ಆ) ಸಮತಾವಾದಿ ಪ್ರವಾಸ ಕೃತಿಗಳು

ಇ) ಕಮ್ಯುನಿಸ್ಟ್‌ವಾದಿ ಪ್ರವಾಸ ಕೃತಿಗಳು

ಈ) ದಲಿತ ಮತ್ತು ಬಂಡಾಯವಾದಿ ಪ್ರವಾಸ ಕೃತಿಗಳು

ಉ) ಸ್ತ್ರೀವಾದಿ ಪ್ರವಾಸ ಕೃತಿಗಳು

ಊ) ಮಾನವತಾವಾದಿ ಪ್ರವಾಸ ಕೃತಿಗಳು

೧೬. ಕನ್ನಡದಲ್ಲಿ ಪ್ರಕಟವಾಗಿರುವ ಯುರೋಪ್ ಪ್ರವಾಸ ಕೃತಿಗಳನ್ನು ಗಮನಿಸಿದಾಗ ಫ್ರಾನ್ಸ್, ಇಂಗ್ಲೆಂಡ್, ಇಟಲಿ, ರಷ್ಯಾ, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್ ದೇಶಗಳಿಗೆ ಪ್ರವಾಸ ಹೋಗಿರುವವರ ಸಂಖ್ಯೆ ಹೆಚ್ಚಾಗಿದೆ. ಡೆನ್ಮಾರ್ಕ್, ಪೋಲ್ಯಾಂಡ್, ನೆದರ್‌ಲ್ಯಾಂಡ್, ವ್ಯಾಟಿಕನ್, ಜರ್ಮನಿ ದೇಶಗಳಿಗೆ ಪ್ರವಾಸಕ್ಕೆ ಹೋಗುವವರ ಸಂಖ್ಯೆ ಕಡಿಮೆ ಇದೆ. ಉಳಿದ ಯುರೋಪ್ ದೇಶಗಳಿಗೆ ಕನ್ನಡ ಲೇಖಕರು ಪ್ರವಾಸ ಹೋಗಿಲ್ಲ. ಈ ವ್ಯತ್ಯಾಸಗಳಿಗೆ ಕಾರಣವನ್ನು ಪರಿಶೀಲಿಸಿದಾಗ ಅಭಿವೃದ್ಧಿ ಹೊಂದಿದ ದೇಶಗಳ 'ಪ್ರವಾಸೋದ್ಯಮ'ದ ಪರಿಕಲ್ಪನೆ ಪ್ರಮುಖ ಕಾರಣವಾಗಿದೆ. ಪ್ರವಾಸಿ ಸ್ಥಳಗಳ ಆಕರ್ಷಣೆ, ಪ್ರವಾಸಿಗಳಿಗೆ ಆಯಾ ದೇಶಗಳು ಒದಗಿಸಿರುವ ಸವಲತ್ತುಗಳು ಹಾಗೂ ನಿಯಮಾವಳಿಗಳು ಆ ದೇಶಕ್ಕೆ ಭೇಟಿ ನೀಡುವ ಲೇಖಕರ ಪ್ರಮಾಣವನ್ನು ನಿರ್ಧರಿಸುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳ ಪ್ರಭಾವ ಮತ್ತು ಹಸ್ತಕ್ಷೇಪವೂ ತೃತಿಯ ರಾಷ್ಟ್ರಗಳಲ್ಲಿ ಪ್ರವಾಸೋದ್ಯಮವು ಅಭಿವೃದ್ಧಿ ಹೊಂದದಿರಲು ಕಾರಣವಾಗಿರುವುದನ್ನು ಗುರುತಿಸಲಾಗಿದೆ.

ಯುರೋಪ್ ಪ್ರವಾಸ ಕೃತಿಗಳನ್ನು ವಿವರವಾಗಿ ವಿಶ್ಲೇಷಿದಾಗ ಈ ಮೇಲಿನ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ನನ್ನ ಅಧ್ಯಯನದ ಮಿತಿಯಲ್ಲಿ ನನಗೆ ಹೊಳೆದ ಹೊಳವುಗಳನ್ನು ಇಲ್ಲಿ ಹೇಳಲಾಗಿದೆ. ನನ್ನ ಅಧ್ಯಯನದ ವ್ಯಾಪ್ತಿಗೆ ಬಾರದ, ನನ್ನ ಅಧ್ಯಯನದ ವ್ಯಾಪ್ತಿಯನ್ನು ಮೀರಿ ಇನ್ನೂ ಅನೇಕ ಅಂಶಗಳನ್ನು ಇಲ್ಲಿ ಕಂಡುಕೊಳ್ಳಲು ಸಾಧ್ಯತೆಗಳಿವೆ. ಈ ಫಲಿತಗಳೇ ಅಂತಿಮವೆಂದು ಭಾವಿಸಲಾಗಿಲ್ಲ. ಈ ವಿಷಯದಲ್ಲಿ ಇನ್ನೂ ಹೆಚ್ಚು ಅಧ್ಯಯನ ಮಾಡಲು ಅವಕಾಶಗಳಿವೆ.

ಈ ಅಧ್ಯಯನದ ಮೂಲಕ ಯುರೋಪ್ ದೇಶಗಳ ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ, ನೋಟಗಳನ್ನು ಮರು ಓದಲಾಗಿದೆ. ಈ ಅಧ್ಯಯನದ ಮೂಲಕ ಹೊಸ ಬಗೆಯಲ್ಲಿ ಕೃತಿಯನ್ನು ನೋಡುವ ಬಗೆಯನ್ನು ಕಂಡುಕೊಳ್ಳಲಾಗಿದೆ. ಅನುಭವಗಳ ನಿರೂಪಣೆಯಲ್ಲಿ ಭಾಷಾ ಬಿಗುವು, ಬರೆವಣಿಗೆಯ ಕಸುವು ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಪ್ರವಾಸಿ ತಾನು ಪಡೆದ ಅನುಭವಗಳನ್ನು ವಿಶಿಷ್ಟ ಬಗೆಯಿಂದ ನಿರೂಪಿಸುವಾಗ ಬರೆವಣಿಗೆಯಲ್ಲಿನ ಕಲಾತ್ಮಕತೆ ಎಷ್ಟು ಪ್ರಧಾನವಾದುದು ಎಂಬುದನ್ನು ಇಲ್ಲಿ ತಿಳಿಯಲಾಗಿದೆ. ರಸಾತ್ಮಕವಾದ ಬರೆವಣಿಗೆ ಶೈಲಿ ಪ್ರವಾಸ ಕಥನದ ನಿರೂಪಣೆಗೆ ಮುಖ್ಯವಾಗುತ್ತದೆ. ತಾನು ಕಂಡ ದೃಶ್ಯಗಳನ್ನು ಭಾವುಕರಾಗಿ ವರ್ಣಿಸಿದರೆ ಸಹೃದಯನಿಗೆ ನೀರಸವಾಗಿ ಭಾವಿತವಾಗುತ್ತದೆ. ಆದ್ದರಿಂದ ಪ್ರವಾಸಿ ಲೇಖಕನಿಗೆ ಸೂಕ್ಷ್ಮ ಸಂವೇದನೆ ಇರಬೇಕಾಗುತ್ತದೆ.

ಪ್ರವಾಸಿ ಲೇಖಕ ತಾನು ಕೇವಲ ನೋಟಗಳ ವಿವರಣೆಗಾರನಾಗಿ ಇದ್ದರೆ ಆತನ ಕೃತಿಯು ಪತ್ರಿಕೆಯ ವರದಿಯಂತಿರುತ್ತದೆ. ಆದ್ದರಿಂದ ಪ್ರವಾಸಿ ಲೇಖಕ ಇತಿಹಾಸಕಾರನಾಗಿ, ಸಮಾಜಶಾಸ್ತ್ರಜ್ಞನಾಗಿ, ಮನೋವಿಜ್ಞಾನಿಯಾಗಿ, ಶಿಲ್ಪಿಯಾಗಿ, ಸೌಂದರ್ಯೋಪಾಸಕನಾಗಿ, ವಾಸ್ತವ ಪ್ರಜ್ಞೆ ಉಳ್ಳವನಾಗಿ ಎಲ್ಲದಕ್ಕಿಂತ ಮಿಗಿಲಾಗಿ ಕವಿಹೃದಯವುಳ್ಳವನಾಗಿರಬೇಕು. ಅನ್ಯಶಿಸ್ತುಗಳ ಜ್ಞಾನ ವಿಶಾಲವಾಗಿದ್ದಷ್ಟು ಬರೆವಣಿಗೆಯ ನೋಟಗಳು ವಿಸ್ತಾರವಾಗಿರುತ್ತದೆ.

ಸಾಹಿತ್ಯದ ಪರಮೋಚ್ಚ ಉದ್ದೇಶ ಬ್ರಹ್ಮಾನಂದವನ್ನು ಪಡೆಯುವುದು ಎಂದು ಶಾಸ್ತ್ರಗಳಲ್ಲಿ ಬರೆಯಲಾಗಿದೆ. ಲೇಖಕನಿಗೂ ಮತ್ತು ಓದುಗನಿಗೂ ಅದು ದಕ್ಕಬೇಕು. ಲೇಖಕನು ಪ್ರಶಸ್ತಿ, ಪ್ರಸಿದ್ಧಿಯನ್ನು ಪಡೆಯುವ ಮೂಲಕ ಆನಂದವನ್ನು ಗಳಿಸಿಕೊಂಡರೆ; ಓದುಗ ಕೃತಿಯ ಮೂಲಕ ತನ್ನ ಬದುಕನ್ನು ಕಟ್ಟಿಕೊಳ್ಳುವ ನೆಲೆಯಲ್ಲಿ ಪ್ರಯೋಜನಕ್ಕೆ ಬಾಧ್ಯನಾಗುತ್ತಾನೆ. ಇಲ್ಲಿ ಓದುಗ ಬದುಕನ್ನು ಕಟ್ಟಿಕೊಳ್ಳುವುದು ಎಂದರೆ 'ಪ್ರವಾಸಿ ಕೃತಿಗಳು ಓದುಗನಿಗೆ ಬೋಧಿಸಿದ ಜ್ಞಾನಾಂಶಗಳನ್ನು ಆಧರಿಸಿ ತನ್ನ ಬದುಕನ್ನು ಸರಾಗವಾಗಿ ನಿರ್ವಹಿಸಿಕೊಳ್ಳಲು ಆತನು ಶಕ್ತನಾಗುವುದು' ಎಂಬುದಾಗಿದೆ.

ಇದುವರೆಗೂ ಪ್ರಕಟವಾಗಿರುವ(ನನ್ನ ಅಧ್ಯಯನದ ಮಿತಿಗೆ ದಕ್ಕಿರುವ ಕೃತಿಗಳನ್ನು ಪರಿಗಣಿಸುತ್ತಾ) ಒಟ್ಟು 106 ಕೃತಿಗಳನ್ನು ಆಧರಿಸಿ ಯುರೋಪಿನ ಯಾವ ದೇಶಗಳು ಹೆಚ್ಚು ಪ್ರವಾಸಿಗರನ್ನು ತನ್ನತ್ತ ಸೆಳೆದಿದೆ ಎಂಬುದನ್ನು ಗಮನಿಸಿದಾಗ(ಕೃತಿಗಳಲ್ಲಿ ಸಂದರ್ಶಿಸಿರುವ ದೇಶಗಳ\ಸ್ಥಳಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ)ಇಂಗ್ಲೆಂಡ್, ಫ್ರಾನ್ಸ್, ರಷ್ಯಾ, ಇಟಲಿ ದೇಶಗಳು ಮೊದಲ ಸಾಲಿಗೆ ಬರುತ್ತವೆ. ಲೇಖಕರು ಈ ನಾಲ್ಕು ದೇಶಗಳಿಗೆ ಹೆಚ್ಚು ಪ್ರವಾಸ ಮಾಡಲು ಕೆಲವು ಕಾರಣಗಳಿವೆ. ಇಂಗ್ಲೆಂಡ್ ದೇಶಕ್ಕೆ ಲೇಖಕರು ಹೆಚ್ಚಾಗಿ ಹೋಗಲು ಕಾರಣ ಭಾಷೆಯ ತೊಡಕಿಲ್ಲದಿರುವಿಕೆ. ಬೇರೆ ದೇಶಗಳಿಗೆ ಹೋಲಿಸಿಕೊಂಡರೆ ಇಂಗ್ಲೆಂಡ್ ದೇಶದಲ್ಲಿ ಆಂಗ್ಲಭಾಷೆಯನ್ನು ಸಂವಹನಕ್ಕಾಗಿ ಬಳಸಲಾಗುತ್ತದೆ. ಇಂಗ್ಲೆಂಡ್ ದೇಶಿಗರು ಭಾರತೀಯರಿಗೆ ಅಪರಿಚಿತರೇನಲ್ಲ. ಭಾರತವನ್ನಾಳುತ್ತಿದ್ದ ಸಂದರ್ಭದಿಂದ ಈ ದೇಶದೊಂದಿಗೆ ನಂಟನ್ನು ಹೊಂದಿದ್ದೇವೆ. ಉನ್ನತ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡ್ ದೇಶಕ್ಕೆ ಹೋಗುವವರ ಸಂಖ್ಯೆಯೂ ಹೆಚ್ಚಿದೆ. ಅಲ್ಲಿ ಶಿಕ್ಷಣ ಮುಗಿದ ಬಳಿಕ ಅಲ್ಲೇ ತಮ್ಮ ವೃತ್ತಿಯನ್ನು ಆರಂಭಿಸಿ ಅಲ್ಲೇ ನೆಲೆಸಿದವರೂ ಇದ್ದಾರೆ. ಜಿ. ಎಸ್. ಶಿವರುದ್ರಪ್ಪ ಅವರ ಮಗ ಇಂಗ್ಲೆಂಡಿನಲ್ಲಿ ನೆಲೆಸಿದ್ದರಿಂದ ಯುರೋಪ್ ಪ್ರವಾಸ ಮಾಡಿದರು. ಇಂದಿರಾ ಶಿವಣ್ಣ ಅವರು ಅವರ ಮಗನನ್ನು ಕಾಣಲು ಇಂಗ್ಲೆಂಡಿಗೆ ಹೋಗಿದ್ದಾರೆ. ಉನ್ನತ ಶಿಕ್ಷಣವನ್ನು ಪಡೆಯಲು ವಿ.ಕೃ. ಗೋಕಾಕ್ ಮತ್ತು ಜಿ. ಗೋಪಾಲ್ ಅವರು ಹೋಗಿದ್ದಾರೆ. ರಷ್ಯಾ ಅಥವಾ ಸೋವಿಯತ್ ದೇಶಕ್ಕೆ ಪ್ರವಾಸದ ಉದ್ದೇಶದಿಂದ ಹೋಗಿರುವವರಿಗಿಂತ ಸೋವಿಯತ್ ದೇಶದ ಆಮಂತ್ರಣದ ಮೇರೆಗೆ ಹೋಗಿರುವವರ ಸಂಖ್ಯೆಯೇ ಹೆಚ್ಚಿದೆ. ರಾ. ಶಿ., ಶ್ರೀರಂಗರಾಜು, ಬಸವರಾಜ ಕಟ್ಟಿಮನಿ, ದೇ.ಜವರೇಗೌಡರು, ಶ್ರೀರಂಗ, ಜಿ.ಎಸ್. ಶಿವರುದ್ರಪ್ಪ, ಹ.ವೆಂ.ನಾಗರಾಜರಾವ್, ಉ.ಕಾ. ಸುಬ್ಬಾಚಾರ್, ಕು.ಶಿ. ಹರಿದಾಸ ಭಟ್, ಪುಂಡಿಕಾಯ್ ಗಣಪಯ್ಯ ಭಟ್, ಶಿವರಾಮ ಕಾರಂತ, ಪಾಟೀಲ ಪುಟ್ಟಪ್ಪ ಮೊದಲಾದವರನ್ನು ಸೋವಿಯತ್ ದೇಶ ಆಹ್ವಾನಿಸಿದೆ. ಹಾಗಾಗಿ ಈ ದೇಶಕ್ಕೆ ಪ್ರವಾಸಕ್ಕೆ ಹೋದವರ ಸಂಖ್ಯೆಯ ಪ್ರಮಾಣ ಹೆಚ್ಚಿದೆ. ಫ್ರಾನ್ಸ್ ಮತ್ತು ಇಟಲಿ ದೇಶಗಳು ಇಂಗ್ಲೆಂಡ್ ಮತ್ತು ರಷ್ಯಾ ದೇಶಗಳ ನೆರೆದೇಶಗಳಾಗಿರುವುದರಿಂದ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ. ಮತ್ತು ಈ ದೇಶಗಳಲ್ಲಿ ಪ್ರಪಂಚದ ಅದ್ಭುತಗಳನ್ನ

ಹೊಂದಿರುವ ಪ್ರವಾಸಿ ಸ್ಥಳಗಳಿರುವುದರಿಂದ ಇಂಗ್ಲೆಂಡ್ ಮತ್ತು ರಷ್ಯಾ ದೇಶಗಳಿಗೆ ಪ್ರವಾಸಕ್ಕೆ ಬರುವ ಜನರು ಈ ದೇಶಗಳಿಗೂ ಪ್ರವಾಸ ಮಾಡದೆ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಈ ನಾಲ್ಕು ದೇಶಗಳಿಗೆ ಪ್ರವಾಸ ಹೋಗಿರುವವರ ಸಂಖ್ಯೆ ಅಧಿಕವಾಗಿದೆ.

ಪ್ರವಾಸಿಗರು ಭೇಟಿ ನೀಡಿರುವ ಸಂಖ್ಯೆಯನ್ನು ಆಧರಿಸಿ ಎರಡನೇ ಸ್ಥಾನದಲ್ಲಿರುವ ದೇಶಗಳೆಂದರೆ ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಬೆಲ್ಜಿಯಂ, ಹಂಗೇರಿ, ಸ್ವೀಡನ್, ಡೆನ್ಮಾರ್ಕ್, ನೆದರ್‌ಲ್ಯಾಂಡ್(ಆಮ್‌ಸ್ಟರ್‌ಡಾಂ) ಮೊದಲಾದವು. ಫ್ರಾನ್ಸ್, ಇಂಗ್ಲೆಂಡ್, ರಷ್ಯಾ, ಇಟಲಿ ದೇಶಗಳಿಗೆ ಪ್ರವಾಸ ಹೋಗುವವವರು ಈ ದೇಶಗಳಿಗೂ ಭೇಟಿ ನೀಡಿದ್ದಾರೆ. ಯುರೋಪಿನಲ್ಲಿ ಇನ್ನೂ ಅನೇಕ ದೇಶಗಳಿವೆ ಅವುಗಳಿಗೆ ಪ್ರವಾಸಿ ಲೇಖಕರು ಭೇಟಿ ನೀಡಿರುವ ಸಂಖ್ಯೆ ಕಡಿಮೆ ಇದೆ. ಶಿವರಾಮ ಕಾರಂತರು ನಾರ್ವೆಗೆ, ದೇ. ಜವರೇಗೌಡರು ಎಸ್ತೋನಿಯ ದೇಶಕ್ಕೆ, ಕೃಷ್ಣಾನಂದ ಹೆಗಡೆ ಅವರು ಲಿಚೆನ್‌ಸ್ಟಾಯಿನ್‌ಗೆ ಭೇಟಿ ನೀಡಿದ್ದಾರೆ. ಬೇರೆ ಯಾವ ಲೇಖಕರು ಈ ದೇಶಗಳಿಗೆ ಭೇಟಿ ನೀಡಿಲ್ಲ.

ಯುರೋಪಿನಲ್ಲಿರುವ ಇನ್ನು ಹತ್ತು ಹಲವಾರು ದೇಶಗಳಿಗೆ ಲೇಖಕರು ಪ್ರವಾಸ ಹೋಗಿಲ್ಲ. (ಕನ್ನಡದಲ್ಲಿ ಪ್ರಕಟವಾಗಿರುವ ಯುರೋಪ್ ಪ್ರವಾಸ ಕೃತಿಗಳನ್ನು ಆಧರಿಸಿ)ಅಂಡೋರಾ, ಐಸ್ಲೆಂಡ್, ಮಾಂಟೆಗ್ರೋ, ಮಾಲ್ಡೋವಾ, ಬೆಲಾರಸ್, ಸಿಜೇಷಿಯಾ, ಸ್ಲೋವೇನಿಯಾ, ಸ್ಲೋವಾಕಿಯಾ, ಬೋಸ್ನಿಯಾ, ರುಮೇನಿಯಾ ಮೊದಲಾದ ಇನ್ನೂ ಅನೇಕ ದೇಶಗಳಿಗೆ ಕನ್ನಡದ ಪ್ರವಾಸಿ ಲೇಖಕರು ಭೇಟಿ ನೀಡಿಲ್ಲ. ಪ್ರಸ್ತುತ ಪ್ರಕಟಿತ ಕೃತಿಗಳಲ್ಲಿಯೂ ಈ ದೇಶಗಳಿಗೆ ಭೇಟಿ ನೀಡಿರುವ ಬಗ್ಗೆ ಮಾಹಿತಿಗಳಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರವಾಸಿಗರನ್ನು ಕೆಲವೇ ಕೆಲವು ದೇಶಗಳು ಸೆಳೆಯುತ್ತವೆ ಏಕೆ? ಪ್ರವಾಸಿಗಳು ಭೇಟಿಯೇ ನೀಡದ ದೇಶಗಳಲ್ಲಿರುವ ಕೊರತೆಗಳೇನು? ಪ್ರವಾಸಿಗಳು ಕೇವಲ ಹೆಚ್ಚು ಜನರು ಪ್ರವಾಸ ಹೋಗುವ ಸ್ಥಳಗಳನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣವೇನು? ತಮ್ಮ ಕಡೆ ಪ್ರವಾಸಿಗರನ್ನು ಸೆಳೆಯುವಲ್ಲಿ ವಿಫಲವಾಗಿರುವ ದೇಶಗಳ ಪ್ರಾಕೃತಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳೇನು? ಎಂಬುದರ ಬಗ್ಗೆ ಗಮನಿಸಬೇಕು. ಈ ಅಂಶಗಳ ಆಧಾರದ ಮೇಲೆ ಮುಂದಿನ ಅಧ್ಯಯನಕ್ಕೆ ಸಾಧ್ಯತೆಗಳಿದೆ. ಪ್ರವಾಸಕ್ಕೆ ಹೋಗಲು ಅನುಕೂಲವಿರುವ ಸ್ಥಳಗಳಿಗೆ ಮಾತ್ರ ಪ್ರವಾಸಿಗರು ಹೋಗುತ್ತಾರೆ. ವಾಹನ ಸೌಕರ್ಯಗಳಿಲ್ಲದ, ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರಿಗೆ ಸೂಕ್ತ ರಕ್ಷಣೆಯ ಕೊರತೆ ಇರುವ, ಆತಂಕವಾದಿಗಳ, ಭಯೋತ್ಪಾದಕರ ಭಯವಿರುವ, ಪ್ರವಾಸಿಗರಿಗೆ ಸೂಕ್ತ ವ್ಯವಸ್ಥೆಗಳಿಲ್ಲದ ಸ್ಥಳಗಳಿಗೆ ಸಾಮಾನ್ಯವಾಗಿ ಪ್ರವಾಸಿಗರು ಹೋಗುವುದಿಲ್ಲ. ಅಲ್ಲದೆ ಅಭಿವೃದ್ಧಿ ಹೊಂದಿದ ದೇಶಗಳ ಪ್ರಾಬಲ್ಯವೂ ತೃತೀಯ ರಾಷ್ಟ್ರಗಳಿಗೆ ಪ್ರವಾಸಿಗರು ತೆರಳದಂತೆ ಮಾಡಿರುವ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಈ ಕಾರಣಗಳಿಂದಾಗಿ ಯುರೋಪಿನ ಅನೇಕ ಚಿಕ್ಕ ಪುಟ್ಟ ದೇಶಗಳು ಪ್ರವಾಸಿಗರನ್ನು ತಮ್ಮೆಡೆ ಸೆಳೆಯುವಲ್ಲಿ ವಿಫಲವಾಗಿವೆ ಎನಿಸುತ್ತದೆ.

ಯುರೋಪಿನ ಪ್ರವಾಸ ಕೃತಿಗಳು ಹೊಂದಿರುವ ಶೀರ್ಷಿಕೆಗಳು ವೈವಿಧ್ಯಮಯವಾಗಿದೆ. ಹೆಚ್ಚಿನ ಶೀರ್ಷಿಕೆಗಳು 'ಯುರೋಪ್' ಎಂಬ ತಲೆಬರಹವನ್ನು ಒಳಗೊಂಡಿವೆ. ಯುರೋಪ್ ನೆನಪುಗಳು, ಯುರೋ ನಾಡಿನಲ್ಲಿ, ಯುರೋ ಅಮೆರಿಕಾದ ಇಣುಕು ನೋಟ, ಯುರೋ-ದರ್ಶನ, ಪ್ರಭುವರ್ಯರ ಯುರೋಪ್ ಪ್ರವಾಸ, ನಾ ಕಂಡ ಯುರೋಪ್, ಯುರೋಪ್‌ನಲ್ಲಿ ಒಂದು ಸುತ್ತು, ಯುರೋಪ್‌ಲ್ಲಿ ಬಾಗೇಪಲ್ಲಿ, ನಾ ಕಂಡ ಮಿನಿ ಯುರೋಪ್, ಯುರೋಪ್‌ನ ಹದಿನಾಲ್ಕು ದೇಶಗಳು, ಮೊದಲಾದವು. ಈ ಶೀರ್ಷಿಕೆಗಳು

ಯುರೋಪ್ ಎಂಬ ತಲೆಬರಹವನ್ನು ಹೊಂದಿದ್ದರೂ ಪ್ರವಾಸ ಹೋಗಿರುವುದು ಕೇವಲ ಯುರೋಪಿನ ಕೆಲವು ದೇಶಗಳಿಗೆ ಮಾತ್ರ. ಯುರೋಪಿನ ಎಲ್ಲಾ ದೇಶಗಳನ್ನು ಸಂದರ್ಶಿಸಿರುವುದಿಲ್ಲ. ಆದರೆ ಅವರು ಪ್ರವಾಸದ ಸಂದರ್ಭದಲ್ಲಿ ತಾವು ನೋಡಿದ ತಮ್ಮ ನೋಟಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವಾಗ 'ಯುರೋಪ್ ಖಂಡದ ದೇಶಗಳ ಸ್ಥಿತಿಗತಿಯು ತಾನು ಗ್ರಹಿಸಿದಂತೆ ಹೀಗಿದೆ' ಎಂದೇ ಹೇಳಿಕೊಂಡಿದ್ದಾರೆ. ಆದ್ದರಿಂದ ಶೀರ್ಷಿಕೆಯು ಆ ಕೃತಿಯ ಪೂರ್ಣ ಅಂತಸ್ಸತ್ವವನ್ನು ಪ್ರತಿಬಿಂಬಿಸುವುದಿಲ್ಲ.

ಕೆಲವು ಶೀರ್ಷಿಕೆಗಳಲ್ಲಿ 'ಕಾಣು' 'ನೋಟ' ಎಂಬ ಅರ್ಥದಲ್ಲಿ ಬಳಕೆಯಾಗಿವೆ. ನಾನು ಕಂಡ ರಷ್ಯಾ, ನಾನು ಕಂಡ ಜರ್ಮನಿ, ಕನ್ನಡ ಕಾರ್ಮಿಕ ಕಂಡ ಜರ್ಮನಿ, ನಾ ಕಂಡ ಪಡುವಣ, ಸೃಷ್ಟಿ–ದೃಷ್ಟಿ, ನೋಟ–ನಿಲುವು, ನಾ ಕಂಡ ಯುರೋಪ್, ನಾ ಕಂಡ ಮಿನಿ ಯುರೋಪ್ ಮೊದಲಾದ ಶೀರ್ಷಿಕೆಗಳು ದೃಷ್ಟಿಯನ್ನು ಕುರಿತು ಹೇಳುತ್ತವೆ. ಪ್ರವಾಸಿ ಲೇಖಕ ಪ್ರವಾಸ ಕೃತಿಯನ್ನು ಬರೆಯುವಾಗ ತನ್ನ ಮಿತಿಯನ್ನು ಅರಿತಿದ್ದಾನೆ. ತಾನು ಕಂಡದ್ದೆಲ್ಲಾ ಸಾರ್ವಕಾಲಿಕ ಆಗಿರುವುದಿಲ್ಲ. ಅದು ಆ ಸಂದರ್ಭಕ್ಕೆ ಮಾತ್ರ ಅನ್ವಯಿಸುತ್ತದೆ ಎಂಬ ಪ್ರಜ್ಞೆ ಇದೆ. ಆದ್ದರಿಂದಲೇ ನಾನು ಕಂಡಂತೆ ಎಂಬ ಅರ್ಥವುಳ್ಳ ಶೀರ್ಷಿಕೆಗಳನ್ನು ನೀಡಿದ್ದಾರೆ. ಏಕೆಂದರೆ ಒಬ್ಬರ ದೃಷ್ಟಿಕೋನಕ್ಕೂ ಮತ್ತೊಬ್ಬರ ದೃಷ್ಟಿಕೋನಕ್ಕೂ ಭಿನ್ನತೆ ಇರುತ್ತದೆ ಎಂಬುದನ್ನು ಈ ಶೀರ್ಷಿಕೆಗಳೇ ತಿಳಿಸುತ್ತವೆ.

ಯುರೋಪ್ ಪ್ರವಾಸ ಕೃತಿಗಳ ಶೀರ್ಷಿಕೆಗಳಲ್ಲಿ ಕಾಣುವ ಮತ್ತೊಂದು ಅಂಶವೆಂದರೆ ತಮ್ಮ ಪ್ರವಾಸದ ಅವಧಿಯನ್ನು ಆಧರಿಸಿ ಶೀರ್ಷಿಕೆಗಳನ್ನು ನೀಡಿರುವುದು. 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' 'ಇಂಗ್ಲೆಂಡಿನಲ್ಲಿ ಚತುರ್ಮಾಸ' 'ವಿದೇಶದಲ್ಲಿ ನಾಲ್ಕು ವಾರ' 'ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು' 'ಯುರೋಪಿನಲ್ಲಿ ನಲವತ್ತೈದು ದಿನಗಳು' ಮೊದಲಾದ ಶೀರ್ಷಿಕೆಗಳು ತಮ್ಮ ಪ್ರವಾಸದ ಅವಧಿಯನ್ನು ಹೇಳಿಕೊಳ್ಳುತ್ತವೆ. ಪ್ರವಾಸದ ಅವಧಿಯನ್ನು ಘೋಷಿಸಿಕೊಳ್ಳುವ ಶೀರ್ಷಿಕೆಗಳು ತಮ್ಮ ದೃಷ್ಟಿಕೋನ, ವಿಚಾರ–ವಿಮರ್ಶೆಯ ಮಿತಿಯನ್ನು ಕೂಡ ಮೊದಲೇ ತಿಳಿಸಿಬಿಡುತ್ತವೆ. 'ಈ ಅವಧಿಯ ಮಿತಿಯೊಳಗೆ ನಾನು ನೋಡಿದ, ಸುತ್ತಿದ, ಅನುಭವದ ವಿವರ ಇರುವ ಕಾರಣ ನಾನು ನಿರೂಪಿಸಿದ ಹೇಳಿಕೆಗಳು ಆ ಅವಧಿಗೆ ಸೀಮಿತವಾಗಿದೆ'ಎಂಬ ಅಂಶವನ್ನು ತಿಳಿಸುತ್ತವೆ.

ಯುರೋಪ್ ಪ್ರವಾಸದ ಕೆಲವು ಪ್ರವಾಸ ಕೃತಿಗಳ ಶೀರ್ಷಿಕೆಗಳು ಆಕರ್ಷಣೀಯವಾಗಿವೆ. ಅವು ಸಾಂಪ್ರದಾಯಿಕವಾದ ಶೀರ್ಷಿಕೆಗಳನ್ನು ಬಳಸದೆ ತಮ್ಮ ಅನುಭವ ಕಥನವನ್ನು ನೋಡುವ ನೆಲೆಯನ್ನು ಪರಿಚಯಿಸುತ್ತವೆ. ಉದಾಹರಣೆಗೆ 'ರಾಗ–ತಾನ–ಸೇನ ದಡದಲ್ಲಿ' 'ಕೊರವಂಜಿಯ ಪಡುವಣ ಯಾತ್ರೆ', 'ಅಯನ' 'ಸ್ನೇಹಯಾತ್ರೆ', 'ದೇವರಿಲ್ಲದ ಗುಡಿ' 'ಅರಸಿಕರಲ್ಲ' ಈ ಶೀರ್ಷಿಕೆಗಳು ಲೇಖಕರ ದೃಷ್ಟಿಕೋನವನ್ನು ಪರಿಚಯಿಸುತ್ತವೆ. ಈ ಕೃತಿಗಳನ್ನು ಶೀರ್ಷಿಕೆಯನ್ನು ಅನುಸರಿಸಿಯೇ ಅಧ್ಯಯನ ಮಾಡಲಾಗಿದೆ.

ಕನ್ನಡದ ಯುರೋಪ್ ಪ್ರವಾಸ ಕೃತಿಗಳಲ್ಲಿಯೂ ಕೆಲವು ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ, ಕೃತಿಗಳಿವೆ. ಕಥೆ, ಕಾದಂಬರಿಗಳು ಓದುಗರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವಂತೆ, ಕೆಲವು ಪ್ರವಾಸ ಕೃತಿಗಳೂ ಆ ಕಾರ್ಯವನ್ನು ಮಾಡುತ್ತವೆ. ಆ ಮೂಲಕ ಪ್ರವಾಸ ಎಂದರೆ ಕೇವಲ ಅನುಭವಗಳ ವರದಿಯಾಗದೆ, ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವ ನೆಲೆಯಲ್ಲಿ ಪ್ರವಾಸ ಕೃತಿಗಳನ್ನು ಓದಬಹುದಾಗಿದೆ.

ಪ್ರವಾಸದಲ್ಲಿ ಲೇಖಕನ ದೃಷ್ಟಿಕೋನಗಳನ್ನು ಗಮನಿಸಿದಾಗ ಲೇಖಕರು ಯಾವುದೇ ದೇಶವನ್ನು ಪ್ರೀತಿಸುತ್ತಾ ಪ್ರವಾಸ ಮಾಡುತ್ತಾರೋ ಅಥವಾ ಪ್ರವಾಸ ಮುಗಿದ ಬಳಿಕ ಆ ದೇಶದ ಮೇಲೆ ಪ್ರೀತಿ ಹುಟ್ಟುತ್ತದೆಯೋ ಎಂಬುದು ಪ್ರವಾಸದ ಪರಿಣಾಮವನ್ನು ಮತ್ತು ಲೇಖಕನ ಮೇಲಾದ ಪ್ರಭಾವವನ್ನು ಸೂಚಿಸುತ್ತದೆ.

ಅಧ್ಯಯನದ ಮುಂದಿನ ಸಾಧ್ಯತೆಗಳು

ಈ ಅಧ್ಯಯನದಿಂದ ಮುಂದೆ ಮಾಡಬಹುದಾದ ಸಂಶೋಧನಾ ವಿಷಯಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಇದುವರೆಗೂ ಕನ್ನಡದಲ್ಲಿ ಸುಮಾರು 106ಕ್ಕೂ ಹೆಚ್ಚು ಯುರೋಪ್ ಪ್ರವಾಸ ಕೃತಿಗಳು ಪ್ರಕಟವಾಗಿವೆ. ಆ ಕೃತಿಗಳಲ್ಲಿ 45 ಕೃತಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಉಳಿದ ಕೃತಿಗಳನ್ನು ಆಧರಿಸಿ ಅಧ್ಯಯನ ಮಾಡಲು ಅವಕಾಶವಿದೆ. ಈ ಸಂಶೋಧನಾ ಅಧ್ಯಯನದಲ್ಲಿ ಯುರೋಪಿನ ಪ್ರವಾಸ ಕೃತಿಗಳಲ್ಲಿ ಲೇಖಕರ ಅಭಿಪ್ರಾಯಗಳನ್ನು ಆಧರಿಸಿ ವ್ಯಕ್ತವಾಗುವ ಸಂವೇದನೆಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಯುರೋಪಿನ ದೇಶಗಳಲ್ಲಿ ಯಾವುದಾದರೂ ಒಂದು ದೇಶವನ್ನು ಆಯ್ಕೆ ಮಾಡಿಕೊಂಡು ಆ ದೇಶದ ಅಭಿವೃದ್ಧಿಯ ಪಥಗಳನ್ನು ಪ್ರವಾಸ ಕೃತಿಗಳು ಗ್ರಹಿಸಿರುವ ನೆಲೆಗಳನ್ನು ಆಧರಿಸಿ ಅಧ್ಯಯನ ಮಾಡಲು ಅವಕಾಶವಿದೆ.

ಯುರೋಪಿನಲ್ಲಿ ಒಟ್ಟು ನಲವತ್ನಾಲ್ಕು ದೇಶಗಳಿವೆ. ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ದೇಶಗಳು ಪ್ರವಾಸಿಗರನ್ನು ತಮ್ಮತ್ತ ಸೆಳೆಯಲು ವಿಫಲವಾಗಿವೆ ಎನಿಸುತ್ತದೆ. ಪ್ರವಾಸಿಗರನ್ನು ಕೆಲವೇ ಕೆಲವು ದೇಶಗಳು ಸೆಳೆಯುತ್ತವೆ ಏಕೆ? ಪ್ರವಾಸಿಗಳು ಭೇಟಿಯೇ ನೀಡದ ದೇಶಗಳಲ್ಲಿರುವ ಕೊರತೆಗಳೇನು? ಪ್ರವಾಸಿಗಳು ಕೇವಲ ಹೆಚ್ಚು ಜನರು ಪ್ರವಾಸ ಹೋಗುವ ಸ್ಥಳಗಳನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣವೇನು? ತಮ್ಮ ಕಡೆ ಪ್ರವಾಸಿಗರನ್ನು ಸೆಳೆಯುವಲ್ಲಿ ವಿಫಲವಾಗಿರುವ ದೇಶಗಳ ಪ್ರಾಕೃತಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳೇನು? ಎಂಬುದರ ಬಗ್ಗೆ ಸಂಶೋಧನಾ ಅಧ್ಯಯನ ಕೈಗೊಳ್ಳಲು ಅವಕಾಶಗಳಿವೆ.

ಯುರೋಪ್ ಖಂಡದ ದೇಶಗಳನ್ನು ಆಧರಿಸಿ ಪ್ರವಾಸ ಕೃತಿಗಳ ಮೂಲಕ ನೋಡುವ ಕ್ರಮವನ್ನು ವಿಶ್ಲೇಷಣೆ ಮಾಡಿದಂತೆಯೇ ಇತರ ಖಂಡಗಳನ್ನು ಆಯ್ಕೆ ಮಾಡಿಕೊಂಡು ಆಯಾ ದೇಶಗಳ ಪ್ರವಾಸ ಕೃತಿಗಳ ಮೂಲಕ ಸಂಶೋಧನೆಯನ್ನು ಕೈಗೊಳ್ಳಲು ಅವಕಾಶವಿದೆ.

ಯುರೋಪಿನ ದೇಶಗಳಲ್ಲಿ ವಿಜ್ಞಾನವನ್ನು ವಿದ್ಯಾರ್ಥಿಯ ಮಾತೃಭಾಷೆಯಲ್ಲಿಯೇ ಬೋಧಿಸಲಾಗುತ್ತಿದೆ. ಭಾರತದಲ್ಲಿ ವಿಜ್ಞಾನವನ್ನು ಆಂಗ್ಲಭಾಷೆಯ ಮೂಲಕ ಕಲಿಸಲಾಗುತ್ತದೆ. ಹಾಗಾದರೆ ಶಿಕ್ಷಣದಲ್ಲಿ ಸಂವಹನ ಮಾಧ್ಯಮವಾಗಿ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲಿ ಕಲಿಸುವುದು ಪರಿಣಾಮಕಾರಿಯೋ? ಮಾತೃಭಾಷೆ ಅಲ್ಲದ ಆಂಗ್ಲ ಅಥವಾ ಹಿಂದಿ ಭಾಷೆಯ ಮೂಲಕ ಕಲಿಸುವುದೋ ಪರಿಣಾಮಕಾರಿಯೋ ಎಂಬ ವಿಷಯವನ್ನು ಕ್ಷೇತ್ರ ಅಧ್ಯಯನದ ಮೂಲಕ ಸಂಶೋಧನಾ ಅಧ್ಯಯನ ಮಾಡಲು ಅವಕಾಶಗಳಿರುವುದನ್ನು ಕಾಣಲಾಗಿದೆ.

ಆಕರ ಗ್ರಂಥಗಳು

ಪ್ರಾಥಮಿಕ ಆಕರಗಳು

೧೯೩೦ ರಿಂದ ೧೯೩೯ ರ ಕಾಲಘಟ್ಟದ ಕೃತಿಗಳು–೨

೧. **ವಿ.ಕೃ. ಗೋಕಾಕ್.**, ೧೯೩೬., **ಸಮುದ್ರದಾಚೆಯಿಂದ.**, ಸುರುಚಿ ಪ್ರಕಾಶನ., ಮೈಸೂರು,

೨. **ಆರ್.ಎಸ್ ನಾರಾಯಣರಾವ್.**, ೧೯೩೭., **ಪ್ರಭುವರ್ಯರ ಯೂರೋಪ್ ಪ್ರವಾಸ** (ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್)., ಗ್ರಂಥಕರ್ತ ಅರಳೇಪೇಟೆ., ಬೆಂಗಳೂರು.

೧೯೫೦ ರಿಂದ ೧೯೫೯ ರ ಕಾಲಘಟ್ಟದ ಕೃತಿಗಳು–೨

೩. **ಕೆ. ಶಿವರಾಮ ಕಾರಂತ.**, ೧೯೫೪., **ಅಪೂರ್ವ ಪಶ್ಚಿಮ.**, ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್., ಬೆಂಗಳೂರು.

೪. **ಬಿಳಿಗೆರೆ ರಾಮಚಂದ್ರರಾಯ.**, ೧೯೫೬., **ನಾನು ಕಂಡ ರಷ್ಯಾ.**, ಜನಶಕ್ತಿ ಪ್ರಕಾಶನ., ಬೆಂಗಳೂರು.

೧೯೬೦ ರಿಂದ ೧೯೬೯ ರ ಕಾಲಘಟ್ಟದ ಕೃತಿಗಳು–೩

೫. **ಹೊ. ಶ್ರೀನಿವಾಸಯ್ಯ.**, ೧೯೬೭., **ನಾ ಕಂಡ ಜರ್ಮನಿ.**, ಜಯಶ್ರೀ ಟ್ರಸ್ಟ್., ಮಲ್ಲೇಶ್ವರಂ., ಬೆಂಗಳೂರು.

೬. **ರಾ.ಶಿ**, ೧೯೬೮., **ಕೊರವಂಜಿಯ ಪಡುವಣ ಯಾತ್ರೆ.**, ವಸಂತ ಪ್ರಕಾಶನ., ಬೆಂಗಳೂರು.

೭. **ಶ್ರೀರಂಗರಾಜ್.**, ೧೯೬೯., **ಸೋವಿಯೆತ್ ದಿನಚರಿ.**, ಪ್ರ. ಜೆ. ಎಸ್. ಎಸ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್., ಮೈಸೂರು.

೧೯೭೦ ರಿಂದ ೧೯೭೯ ರ ಕಾಲಘಟ್ಟದ ಕೃತಿಗಳು–೧೦

೮. **ಬಸವರಾಜ ಕಟ್ಟೀಮನಿ.**, ೧೯೭೦., **ನಾನು ಕಂಡ ರಶಿಯಾ.**, ಉಷಾ ಸಾಹಿತ್ಯ ಮಾಲೆ., ಮೈಸೂರು.

೯. **ದೇ. ಜವರೇಗೌಡ.**, ೧೯೭೦., **ವಿದೇಶದಲ್ಲಿ ನಾಲ್ಕುವಾರ.**, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ., ನಿಯಮಿತ., ಬೆಂಗಳೂರು.

೧೦. **ಶ್ರೀರಂಗ.**, ೧೯೭೦., **ಶ್ರೀ–ರಂಗ–ಯಾತ್ರೆ.**, ಉಷಾ ಸಾಹಿತ್ಯ ಮಾಲೆ., ಮೈಸೂರು.

೧೧. **ದೇ. ಜವರೇಗೌಡ.**, ೧೯೭೧., **ಪ್ರವಾಸಿಯ ದಿನಚರಿ.**, ತ. ವೆಂ. ಸ್ಮಾರಕ ಮಾಲೆ.,. ಮೈಸೂರು.

೧೨. **ಜಿ.ಎಸ್. ಶಿವರುದ್ರಪ್ಪ.**, ೧೯೭೩., **ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ.**, ತ. ವೆಂ. ಸ್ಮಾರಕ ಮಾಲೆ, ಮೈಸೂರು.

೧೩. **ಬೀಚಿ.**, ೧೯೭೪., **ದೇವರಿಲ್ಲದ ಗುಡಿ.**, ಸಮಾಜ ಪುಸ್ತಕಾಲಯ., ಧಾರವಾಡ.

೧೪. **ಹ.ವೆಂ. ನಾಗರಾಜರಾವ್.**, ೧೯೭೪., **ನವ ರಷ್ಯದ ನೋಟ.**, ಸಾಹಿತ್ಯ ಲೋಕ., ಬೆಂಗಳೂರು.

೧೫. **ಅನುಪಮಾ ನಿರಂಜನ.**, ೧೯೭೮., **ಸ್ನೇಹಯಾತ್ರೆ.**, ಡಿ.ವಿ.ಕೆ. ಮೂರ್ತಿ ಪ್ರಕಾಶನ., ಮೈಸೂರು.

೧೬. **ವಸಂತ ಕವಲಿ.**, ೧೯೭೯., **ರಾಗ ತಾನ : ಸೇನ ದಡದಲ್ಲಿ.**, ಮಾನಸೋಲ್ಲಾಸ ಪ್ರಕಾಶನ., ಬೆಂಗಳೂರು.

೧೭. **ಮೂಜಗಂ.**, ೧೯೭೯., **ನಮ್ಮ ವಿದೇಶಯಾತ್ರೆ**, ಶ್ರೀ ಜಗದ್ಗುರು ಧರ್ಮ ಪ್ರಚಾರ ಮಂಡಳಿ., ಹುಬ್ಬಳ್ಳಿ.

೧೯೮೦ ರಿಂದ ೧೯೮೯ ರ ಕಾಲಘಟ್ಟದ ಕೃತಿಗಳು–೧೪

೧೮. **ಉ.ಕಾ. ಸುಬ್ಬರಾಯಾಚಾರ್.**, ೧೯೮೦., **ಸೋವಿಯೆತ್ ನಾಡಿನಲ್ಲಿ ಹತ್ತು ದಿನಗಳು.**, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್., ಮೈಸೂರು.

೧೯. **ಜಿ. ಗೋಪಾಲ್.**, ೧೯೮೦., **ವೈದ್ಯನ ವಿದೇಶ ಪ್ರವಾಸ.**, ಗಿರಿ ಪ್ರಕಾಶನ, ಮೈಸೂರು.

೨೦. **ಹೊ ಶ್ರೀನಿವಾಸಯ್ಯ.**. ೧೯೮೦., **ಶಶಿ ಕಂಡ ಜರ್ಮನಿ.**, ಕಿರಿಯರ ಪುಸ್ತಕ ಮಾಲೆ., ಕನ್ನಡ ಸಾಹಿತ್ಯ ಪರಿಷತ್., ಚಾಮರಾಜಪೇಟೆ., ಬೆಂಗಳೂರು.

೨೧. **ಕು.ಶಿ. ಹರಿದಾಸಭಟ್ಟ.**, ೧೯೮೩., **ಒಮ್ಮೆ ರಶಿಯ ಇನ್ನೊಮ್ಮೆ ಇತಾಲಿಯಾ.**, ವಾಣಿ ಪ್ರೆಸ್., ಮೈಸೂರು.

೨೨. **ಕು.ಶಿ ಹರಿದಾಸಭಟ್ಟ.**, ೧೯೮೩., **ಇತಾಲಿಯಾ ನಾನು ಕಂಡಂತೆ.**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಬೆಂಗಳೂರು.

೨೩. **ದೊಡ್ಡೇರಿ ವೆಂಕಟಗಿರಿರಾವ್.**, ೧೯೮೪., **ಏಕಾಕಿ ಪ್ರವಾಸಿ.**, ಐ.ಬಿ.ಹೆಚ್ ಪ್ರಕಾಶನ., ಬೆಂಗಳೂರು.

೨೪. **ಅನುಪಮಾ ನಿರಂಜನ.**, ೧೯೮೪., **ಅಂಗೈಯಲ್ಲಿ ಯೂರೊ ಅಮೆರಿಕ.**, ಡಿ.ವಿ.ಕೆ. ಮೂರ್ತಿ ಪ್ರಕಾಶನ., ಮೈಸೂರು.

೨೫. **ವೈ. ಎನ್. ಕೃಷ್ಣಮೂರ್ತಿ.**, ೧೯೮೪., **ಹೈಡ್ ಪಾರ್ಕ್.**, ಅಕ್ಷರ ಪ್ರಕಾಶನ., ಹೆಗ್ಗೋಡು., ಶಿವಮೊಗ್ಗ.

೨೬. **ಜಿ. ಗೋಪಾಲ್.**, ೧೯೮೫., **ಬೆಂಗಳೂರಿಂದ ಬಾರ್ಸೆಲೋನಕ್ಕೆ.**, ಗಿರಿ ಪ್ರಕಾಶನ., ಮೈಸೂರು.

೨೭. **ಪುಂಡಿಕಾಯ್ ಗಣಪಯ್ಯ ಭಟ್ಟ.**, ೧೯೮೫., **ಯುರೋಪ್ ನೆನಪುಗಳು.**, ಕನ್ನಡ ಸಂಘ., ದರ್ಭೆ., ಪುತ್ತೂರು.

೨೮. **ವ್ಯಾಸರಾಯ ಬಲ್ಲಾಳ.**, ೧೯೮೭., **ನಾನೊಬ್ಬ ಭಾರತೀಯ ಪ್ರವಾಸಿ.**, ಗೀತಾ ಬುಕ್ ಹೌಸ್., ಮೈಸೂರು.

೨೯. **ಕೆ ಶಿವರಾಮ ಕಾರಂತ.**, ೧೯೮೭., **ಅರಸಿಕರಲ್ಲ.**, ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್., ಬೆಂಗಳೂರು.

೩೦. **ಹೊ. ಶ್ರೀನಿವಾಸಯ್ಯ.**, ೧೯೮೯., **ಜಯಶ್ರೀ ಕಂಡ ಜಗತ್ತು.**, ಸುವಿದ್ಯಾ ಪ್ರಕಾಶನ., ಬೆಂಗಳೂರು.

೩೧. **ಪಾಟೀಲ ಪುಟ್ಟಪ್ಪ.**, ೧೯೮೯., **ಸೋವಿಯತ್ ದೇಶ ಕಂಡೆ.**, ಸಾಹಿತ್ಯ ಪ್ರಕಾಶನ., ಹುಬ್ಬಳ್ಳಿ.

೧೯೯೦ ರಿಂದ ೧೯೯೯ ರ ಕಾಲಘಟ್ಟದ ಕೃತಿಗಳು–೮

೩೨. **ನಾಗತಿಹಳ್ಳಿ ಚಂದ್ರಶೇಖರ.**, ೧೯೯೧., **ನನ್ನ ಗ್ರಹಿಕೆಯ ಫ್ರಾನ್ಸ್ (ಅಯನ).**, ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ., ಬೆಂಗಳೂರು.

೧೯೯೧ರಲ್ಲಿ ಸೋವಿಯತ್ ಒಕ್ಕೂಟ ಹೊಡೆದು ಹದಿನಾಲ್ಕು ದೇಶಗಳಾಗಿ ವಿಭಜನೆ ಹೊಂದಿದ ಬಳಿಕ ಬಂದ ಕೃತಿಗಳು

೩೩. **ಲತಾ ಗುತ್ತಿ.**, ೧೯೯೩., **ಯುರೋ ನಾಡಿನಲ್ಲಿ.**, ಸುಂದರ ಪುಸ್ತಕ ಪ್ರಕಾಶನ., ಧಾರವಾಡ.

೩೪. **ದೇವಕಿ ಮೂರ್ತಿ.**, ೧೯೯೪., **ಯೂರೋ ಅಮೆರಿಕದ ಇಣುಕು ನೋಟ.**, ಕಾವ್ಯಾಲಯ ಪ್ರಕಾಶನ., ಮೈಸೂರು.

೩೫. **ಪಿ. ಆರ್. ತಿಪ್ಪೇಸ್ವಾಮಿ.**, ೧೯೯೪., **ಕಲಾವಿದ ಕಂಡ ಫ್ರಾನ್ಸ್.**, ಮಯೂರ್ ಪಬ್ಲಿಕೇಷನ್ಸ್., ಬೆಂಗಳೂರು.

೩೬. **ಕೃಷ್ಣಾನಂದ ಹೆಗ್ಡೆ.**, ೧೯೯೫., **ಯೂರೋಪ್ ಯಾತ್ರೆ.**., ಗೋವಿಂದ ಪೈ ಸಂಶೋಧನ ಕೇಂದ್ರ., ಉಡುಪಿ.

೩೭. **ಜಿ.ಎಸ್. ಶಿವರುದ್ರಪ್ಪ.**, ೧೯೯೭., **ಇಂಗ್ಲೆಂಡಿನಲ್ಲಿ ಚತುರ್ಮಾಸ.**, ಇಳಾ ಪ್ರಕಾಶನ., ಬೆಂಗಳೂರು.

೩೮. **ಹೇಮಲತಾ ಮಹಿಷಿ.**, ೧೯೯೯., **ಯುರೋ-ದರ್ಶನ.**, ಮನೋಹರ ಗ್ರಂಥಮಾಲೆ., ಧಾರವಾಡ.

೩೯. **ನೇಮಿಚಂದ್ರ**, ೧೯೯೯., **ಒಂದು ಕನಸಿನ ಪಯಣ.**, ಚೈತನ್ಯ ಆಫ್‌ಸೆಟ್ ಪ್ರಿಂಟರ್ಸ್., ಗದಗ.

೨೦೦೦ ರಿಂದ ೨೦೧೨ ರವರೆಗಿನ ಕೃತಿಗಳು-೬

೪೦. **ಭಾರತಿ ಭಟ್**, ೨೦೦೦., **ನನ್ನ ಬೆಲ್ಜಿಯಂ ಪ್ರವಾಸ.**, ಭಾಷಾ ಪ್ರಕಾಶನ., ಮೈಸೂರು.

೪೧. **ಇಂದಿರಾ ಶಿವಣ್ಣ.**, ೨೦೦೧., **ಹಾಲೆಂಡ್‌ನಿಂದ ಲಂಡನ್‌ವರೆಗೆ.**, ಸಪ್ನ ಬುಕ್‌ಹೌಸ್., ಬೆಂಗಳೂರು.

೪೨. **ಪ್ರಭಾಕರ ಶಿಶಿಲ.**, ೨೦೦೮., **ಫ್ರೆಂಚ್ ಸಂಸ್ಕೃತಿಯ ಶೋಧದಲ್ಲಿ.**, ರಾಜ್ ಪ್ರಕಾಶನ., ಮೈಸೂರು.

೪೩. **ಕೆ.ಜಿ. ಸುಬ್ರಾಯಶರ್ಮಾ.**, ೨೦೦೮., **ಜರ್ಮನಿಯಲ್ಲಿ ಶರ್ಮರು.**, ಶ್ರೀ ನಿತ್ಯಾನಂದ ಪ್ರಕಾಶನ., ಬೆಂಗಳೂರು.

೪೪. **ಟಿ. ಆರ್. ಅನಂತರಾಮು.**, ೨೦೦೮., **ಪಶ್ಚಿಮ ಮುಖಿ.**, ನವಕರ್ನಾಟಕ ಪಬ್ಲಿಕೇಶನ್ಸ್., ಬೆಂಗಳೂರು.

೪೫. **ಇಂದಿರಾ ಶಿವಣ್ಣ,.** ೨೦೧೨., **ಬದುಕಿಗೆ ಬಂಗಾರದ ಲೇಪನ.**, ಸಪ್ನ ಬುಕ್‌ಹೌಸ್., ಬೆಂಗಳೂರು.

ಆನುಷಂಗಿಕ ಆಕರಗಳು

ಸಂಶೋಧನಾ ಅಧ್ಯಯನಕ್ಕೆ ಪೂರಕವಾಗಿರುವ ಇತರ ಯುರೋಪ್ ಪ್ರವಾಸ ಕೃತಿಗಳ ಪಟ್ಟಿ

ಈ ಕೆಳಗಿನ ಯುರೋಪ್ ಪ್ರವಾಸ ಕೃತಿಗಳನ್ನು ನನ್ನ ಸಂಶೋಧನಾ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧೯೨೦ರಿಂದ ೧೯೨೯ ರ ಕಾಲಘಟ್ಟದ ಕೃತಿಗಳು–೨

೧. **ಬಿ ಪುಟ್ಟಯ್ಯ., ೧೯೨೧., ಅಭಿವೃದ್ಧಿಯ ಸಂದೇಶ.,** ಮೈಸೂರು ವಿಧ್ಯಾಭ್ಯಾಸ ಇಲಾಖೆ., ಮೈಸೂರು.

೨. **ಕರವೀರಪ್ಪ ಅಂದಾನೆಪ್ಪ ಕುಲಕರ್ಣಿ., ೧೯೨೯., ಯುರೋಪ ಖಂಡದ ಪ್ರವಾಸವು.**

೧೯೩೦ ರಿಂದ ೧೯೩೯ ರ ಕಾಲಘಟ್ಟದ ಕೃತಿಗಳು–೧

೩. **ಚನ್ನಾಜಮ್ಮಣ್ಣಿ ರಾಜಕುಮಾರಿ,.** ೧೯೩೭., **ನನ್ನ ಪ್ರಪಂಚ ಸಂಚಾರ.,** ಡೈಲಿಪೋಸ್ಟ್ ಪ್ರೆಸ್ಸ್., ಬೆಂಗಳೂರು.

೧೯೬೦ ರಿಂದ ೧೯೬೯ ರ ಕಾಲಘಟ್ಟದ ಕೃತಿಗಳು–೧

೪. **ಎಸ್. ರಜತಾದ್ರಿ,** ೧೯೬೮ **ಪಶ್ಚಿಮದ ಹೊಂಬೆಳಕು.,** ವಿ.ವಿ. ಮೊಹಲ್ಲಾ., ಮೈಸೂರು.

೧೯೬೮ ರಿಂದ ೧೯೭೯ ರ ಕಾಲಘಟ್ಟದ ಕೃತಿಗಳು–೧೧

೫. **ಅನಂತರಾಮ ಕೃಷ್ಣಪ್ಪ.,** ೧೯೭೦., **ಎಕ್ಸ್ ಪೋ–೭೦.,** ಅನಂತ ಪ್ರಕಾಶನ., ಮೈಸೂರು.

೬. **ವಿ.ಸಿ. ಮಾಲಗತ್ತಿ.,** ೧೯೭೧., **ಪಶ್ಚಿಮದ ಪತ್ರಗಳು.,** ಮಾಲಗತ್ತಿ ಪ್ರಿಂಟರ್ಸ್., ಬೆಳಗಾವಿ.

೭. **ಟಿ. ಕೆ. ರಾಮರಾವ್.,** ೧೯೭೧., **ಗೋಳದ ಮೇಲೊಂದು ಸುತ್ತು.,** ಹಂಸಧ್ವನಿ ಪ್ರಕಾಶನ., ಬೆಂಗಳೂರು.

೮. **ಪಿ.ಎಸ್. ಶಂಕರ್.,** ೧೯೭೧., **ನೆನಪಿನ ಸುಳಿಯಲ್ಲಿ ಲಂಡನ್.,** ಉಷಾ ಸಾಹಿತ್ಯ ಮಾಲೆ., ಮೈಸೂರು.

೯. **ಚಂದ್ರಭಾಗದೇವಿ (ಉಡುಪಿ ಕೃಷ್ಣರಾವ್)., ೧೯೭೧.,** ಗೆಜ್ಜೆಯ ಹೆಜ್ಜೆ ನುಡಿ., ಲೋಕಶಿಕ್ಷಣ ಮಾಲೆ., ಬೆಂಗಳೂರು.

೧೦. **ಗುರುಮೂರ್ತಿ ವಿ ಪೆಂಡಕೂರು.,** ೧೯೭೩., **ಬಹುರೂಪ ವಸುಂಧರ.,** ಸಾಹಿತ್ಯ ಪ್ರಚಾರ ಪುಸ್ತಕ ಮಾಲೆ., ರಾಮನಗರ.

೧೧. **ಎಸ್. ಲಕ್ಷ್ಮೀನಾರಾಯಣ್.,** ೧೯೭೪., **ನಿರ್ದೇಶಕನ ವಿದೇಶಿ ಯಾತ್ರೆ.,** ಸುರುಚಿ ಪ್ರಕಾಶನ., ಮೈಸೂರು.

೧೨. **ವಿ.ವಿ. ಉಪಾಧ್ಯಾಯ.,** ೧೯೭೪., **ಲೆನಿನರ ನಾಡಿನಲ್ಲಿ.**

೧೩. **ಕೆ. ಅನಂತರಾಮು.,** ೧೯೭೪., **ಉದಯರವಿಯ ನಾಡಿನಲ್ಲಿ.**

೧೪. **ಎಸ್. ರಾಮಸ್ವಾಮಿ.,** ೧೯೭೪., **ಇಂಗ್ಲೆಂಡಿನಲ್ಲಿ ಅಲೆಮಾರಿ.,** ಇಳಾ ಪ್ರಕಾಶನ., ಬೆಂಗಳೂರು.

೧೫. **ಪೇಜಾವರ ವಾಸುದೇವರಾವ್.,** ೧೯೭೭., **ನಾವು ಯುರೋಪಿಗೆ ಹೋಗಿದ್ದೆವು.**

೧೯೮೦ ರಿಂದ ೧೯೮೯ ರ ಕಾಲಘಟ್ಟದ ಕೃತಿಗಳು– ೧೫

೧೬. **ಎಸ್. ವೆಂಕಟರಾಮ್.**, ೧೯೮೧., **ಪ್ರದಕ್ಷಿಣೆ.**, ಅಕ್ಷರ ಪ್ರಕಾಶನ., ಸಾಗರ.

೧೭. **ಸರೋಜ ಗೋಪಾಲ್.**, ೧೯೮೨., **ಭೂ ಪ್ರದಕ್ಷಿಣೆ.**, ಗೀತಾ ಬುಕ್ ಹೌಸ್., ಮೈಸೂರು.

೧೮. **ಹೆಚ್.ವಿ ಶ್ರೀರಂಗರಾಜ್.**, ೧೯೮೨., **ವೇಲ್ಸ್ ದಿನಚರಿಯಿಂದ.**, ತ.ವೆಂ. ಸ್ಮಾರಕ ಗ್ರಂಥಮಾಲೆ., ಮೈಸೂರು.

೧೯. **ಹಿರೇಮಲ್ಲೂರು ಈಶ್ವರನ್.**, ೧೯೮೨., **ವಲಸೆ ಹೋದ ಕನ್ನಡಿಗನ ಕಥೆ.**, ಸುರಭಿ ಪ್ರಕಾಶನ., ಮೈಸೂರು.

೨೦. **ಜಿ. ಎಂ. ಓಂಕಾರಸ್ವಾಮಿ.**, ೧೯೮೨., **ಕನ್ನಡ ಕಾರ್ಮಿಕ ಕಂಡ ಜರ್ಮನಿ.**, ಜಯಲಕ್ಷ್ಮಿ ಪ್ರಕಾಶನ., ಬೆಂಗಳೂರು.

೨೧. **ಜಿ ಗೋಪಾಲ್.**, ೧೯೮೩., **ಮೈಸೂರಿನಿಂದ ಮೆಕ್ಸಿಕೋಗೆ.**, ಗಿರಿ ಪ್ರಕಾಶನ., ಮೈಸೂರು.

೨೨. **ನ. ಭದ್ರಯ್ಯ**, ೧೯೮೩., **ಕ್ಯಾಮರೂನಿನ ಬಣಗಳೊಡನೆ ಮತ್ತು ಅರಬ್ ದೇಶಗಳಲ್ಲಿ.**, ಸಾಧನ ಸಾಹಿತ್ಯ ಮಂದಿರ., ಮೈಸೂರು.

೨೩. **ನ. ಭದ್ರಯ್ಯ.** ೧೯೮೫., **ಪ್ರಪಂಚ ಪರ್ಯಟನೆ.**, ಸಾಧನ ಸಾಹಿತ್ಯ., ಮೈಸೂರು.

೨೪. **ದಿನಕರ ದೇಸಾಯಿ.**, ೧೯೮೫., **ನಾ ಕಂಡ ಪಡುವಣ.**, ಸಾಹಿತ್ಯ ಭಂಡಾರ., ಹುಬ್ಬಳ್ಳಿ.

೨೫. **ಹೆಚ್.ಎಸ್. ಹರಿಶಂಕರ.**, ೧೯೮೫., **ಸುಂದರ ಮಾಸ್ಕೋ ಸುಂದರ ರಷ್ಯಾ**, ಶಾರದಾ ಮಂದಿರ., ಮೈಸೂರು.

೨೬. **ಎನ್.ಕೆ. ಉಪಾಧ್ಯಾ.**, ೧೯೮೬., **ದೇವರ ಗುಡಿ.**, ಭಾರತಿ ಪ್ರಕಾಶನ., ಮೈಸೂರು.

೨೭. **ಕು. ಶಿ ಹರಿದಾಸ ಭಟ್.**, ೧೯೮೭., **ರಂಗಾಯನ.**, ಗೀತಾ ಬುಕ್ ಹೌಸ್., ಮೈಸೂರು.

೨೮. **ಎಸ್. ಶಿವರಾಂ.**, ೧೯೮೭., **ಶಾಂತಿ ಸಂದೇಶದ ನಾಡಿನಲ್ಲಿ.**, ಸ್ನೇಹ ಪ್ರಕಾಶನ., ಬೆಂಗಳೂರು.

೨೯. **ರಾಜಮಣಿ ನಾಗರಾಜರಾವ್.**, ೧೯೮೮., **ಸುವರ್ಣ ಮಧುಚಂದ್ರ**, ಶ್ರೀಕಾಂತ್ ಪ್ರಕಾಶನ., ಬೆಂಗಳೂರು.

೩೦. **ಹೆಚ್. ಎಲ್. ನಾಗೇಗೌಡ.**, ೧೯೮೯., **ನಾ ಕಂಡ ಪ್ರಪಂಚ.**, ಕುಮಾರ ಪಾರ್ಕ್ ಪಶ್ಚಿಮ., ಬೆಂಗಳೂರು.

೧೯೯೦ ರಿಂದ ೧೯೯೯ ರ ಕಾಲಘಟ್ಟದ ಕೃತಿಗಳು–೬

೩೧. **ಕು. ಶಿ. ಹರಿದಾಸ ಭಟ್.**, ೧೯೯೩., **ರಷ್ಯಾದಲ್ಲಿ ಡೊಳ್ಳಿನ ದಿಗ್ವಿಜಯ.**, ಕಲಾಪ್ರಸಾರ ಕಥನ.

೩೨. **ವಿ.ಸಿ, ಮಾಲಗತ್ತಿ.**, ೧೯೯೬., **ಸೃಷ್ಟಿ ದೃಷ್ಟಿ.**, ಮಾಲಗತ್ತಿ ಪ್ರಿಂಟರ್ಸ್., ಬೆಳಗಾವಿ.

೩೩. **ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮೀಜಿ.**, ೧೯೯೮., **ಜಗವ ಸುತ್ತಿದೆ.**, ಶ್ರೀ ಮುರುಘರಾಜೇಂದ್ರ ಗ್ರಂಥ ಸಮಿತಿ., ಚಿತ್ರದುರ್ಗ.

೩೪. **ಸುಭಾಷಿಣಿ.**, ೧೯೯೮., **ಜರ್ಮನಿಯ ಒಡಲಲ್ಲಿ.**, ಸುಭಾಷಿಣಿ ಪ್ರಕಾಶನ., ವಿವೇಕನಗರ., ಬೆಂಗಳೂರು.

೩೫. **ಪ್ರಭಾಕರ ಶಿಶಿಲ.**, ೧೯೯೮., **ದೇಶ ಯಾವುದಾದರೇನು?.**, ಸ್ವಂತಿಕಾ ಸಾಹಿತ್ಯ ಬಳಗ., ಸುಳ್ಯ.

೩೬. **ದೇ. ಜವರೇಗೌಡ**, ೧೯೯೯., **ನಿಚ್ಚ ಹಸುರಿನ ನಾಡಿನಲ್ಲಿ.**, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ., ಮೈಸೂರು.

೨೦೦೦ ರಿಂದ ೨೦೧೭ ರವರೆಗಿನ ಕೃತಿಗಳು–೨೫

೩೭. ಹೆಮ್ಮಿಗೆ ಮೋಹನ., ೨೦೦೧., ಯುರೋಪ್ ಪ್ರವಾಸದ ಅನುಭವಗಳು., ಹೇಮಾವತಿ ಪ್ರಕಾಶನ., ಹಾಸನ.

೩೮. ಕೆ. ಮರುಳುಸಿದ್ದಪ್ಪ., ೨೦೦೨., ನೋಟ ನಿಲುವು., ಅಂಕಿತ ಪ್ರಕಾಶನ., ಬೆಂಗಳೂರು.

೩೯. ವೆಂಕಟೇಶ ಮೂರ್ತಿ., ೨೦೦೨., ಥೇಮ್ಸ್‌ನಿಂದ ಟೈಬರ್‌ವರೆಗೆ., ಲೋಹಿಯ ಪ್ರಕಾಶನ., ಬಳ್ಳಾರಿ.

೪೦. ಡಿ.ವಿ. ಗುರುಪ್ರಸಾದ್., ೨೦೦೨., ಯುರೋಪಿನಿಂದ ಆಸ್ಟ್ರೇಲಿಯಾವರೆಗೆ ವಿಶ್ವ ಪರ್ಯಟನಾ ದಿನಚರಿ.

೪೧. ಜಗದಂಬಾ ಮಲ್ಲೇದೇವರು., ೨೦೦೨., ಪಯಣಿಗಳಾಗಿ ಪಶ್ಚಿಮದೆಡೆಗೆ., ಸಂವಹನ., ಮೈಸೂರು.

೪೨. ಶ್ಯಾಮಲ ಪ್ರಸಾದ್., ೨೦೦೩., ನಾನು ಕಂಡ ಯುರೋಪ್., ಕರ್ಮವೀರ., ದೀಪಾವಳಿ ವಿಶೇಷಾಂಕ.,

೪೩. ಮೀನಾ ಮೈಸೂರು., ೨೦೦೩., ಫ್ರಾನ್ಸ್ ಪ್ರವಾಸದ ಎತ್ತಣಿಂದೆತ್ತ.

೪೪. ಎಚ್. ಎಂ. ನಾಗರಾಜು., ೨೦೦೩., ಸೂರ್ಯ ಮುಳುಗದ ಸಾಮ್ರಾಜ್ಯದಲ್ಲಿ.

೪೫. ಅಂದನೂರು ಶೋಭ., ೨೦೦೫., ಯುರೋಪ್‌ನಲ್ಲಿ ಒಂದು ಸುತ್ತು., ಅರಿವು ಪ್ರಕಾಶನ., ಬೆಂಗಳೂರು.

೪೬. ಹೆಚ್.ಎ. ಅನಿಲ್ ಕುಮಾರ್., ೨೦೧೦., ಕಿಟಕಿಯಾಚೆಗೊಂದು ಉತ್ತರ ಧ್ರುವ., ಬೆಳಕಿಂಡಿ ಪ್ರಕಾಶನ,

೪೭. ಸತೀಶ್ ಚಪ್ಪರಿಕೆ., ೨೦೦೯., ಥೇಮ್ಸ್ ತಟದ ತವಕ ತಲ್ಲಣ., ಅಂಕಿತ ಪ್ರಕಾಶನ., ಬೆಂಗಳೂರು.

೪೮. ಎಸ್.ಎಂ. ಜಂಬುಕೇಶ್ವರ., ೨೦೦೬., ಯುರೋಪಿನಲ್ಲಿ ನಲವತ್ತೈದು ದಿನಗಳು., ಸಂವಹನ ಪಬ್ಲಿಕೇಶನ್ಸ್.

೪೯. ಪ್ರೇಮಾಭಟ್., ೨೦೧೦., ಪಶ್ಚಿಮದತ್ತ ಪಯಣ., ಶ್ರೀ ಪ್ರೇಮಸಾಯಿ ಪ್ರಕಾಶನ.

೫೦. ಮತ್ತಿಹಳ್ಳಿ ನಾಗರಾಜ್., ೨೦೧೦., ಭೂ ಸ್ವರ್ಗ ಸ್ವಿಟ್ಜರ್‌ಲ್ಯಾಂಡ್ 'ಇಲ್ಲಿ ಪ್ರಜೆಯೇ ಪ್ರಭು'., ಸಾಹಿತ್ಯ ಪ್ರಕಾಶನ., ಹುಬ್ಬಳ್ಳಿ.

೫೧. ಎಸ್. ವಿದ್ಯಾಶಂಕರ್., ೨೦೧೧., ಸ್ವರ್ಗ ಮತ್ತು ಮರ್ತ್ಯಗಳ ನಡುವೆ (ಯುರೋಪ್ ಪ್ರವಾಸ ಸಾಹಿತ್ಯ)., ಪ್ರಿಯದರ್ಶಿನಿ ಪ್ರಕಾಶನ.

೫೨. ಮಲ್ಲಿಕಾರ್ಜುನ ಪಾಟೀಲ., ೨೦೦೬., ಶೇಕ್ಸ್‌ಪಿಯರ್‌ನ ಇಂಗ್ಲೇಂಡ್‌ನಲ್ಲಿ., ಶಿವನಗೌಡ ಪಾಟೀಲ ಪ್ರಕಾಶನ.

೫೩. ಜಿ. ಗಂಗಪ್ಪ., ೨೦೧೨., ಪುರದಿಂದ ಗೋಪುರದವರೆಗೆ., ಗಂಗಪ್ಪ ಪ್ರಕಾಶನ., ಬೆಂಗಳೂರು.

೫೪. ಬಾಗೇಪಲ್ಲಿ ಕೃಷ್ಣಮೂರ್ತಿ.,೨೦೧೪., ಯುರೋಪ್‌ನಲ್ಲಿ ಬಾಗೇಪಲ್ಲಿ., ಮಂಗಳ ಪ್ರಕಾಶನ., ಬೆಂಗಳೂರು.

೫೫. ಸರಸ್ವತಿ ಭೋಸಲೆ., ೨೦೧೪., ನಾ ಕಂಡ ಮಿನಿ ಯುರೋಪ್., ಕೃಷಿ ಕಾಮದೇನು ಪ್ರಕಾಶನ., ಧಾರಾವಾಡ.

೫೬. ಡಿ.ವಿ. ಗುರುಪ್ರಸಾದ್., ೨೦೧೬., ಯುರೋಪ್‌ನ ಹದಿನಾಲ್ಕು ದೇಶಗಳು., ಸ್ವಪ್ನ ಬುಕ್ ಹೌಸ್., ಬೆಂಗಳೂರು.

೫೭. ಕೆ. ಆರ್. ಕಾರಂತ್., ಪ್ರವಾಸಿಯ ಪತ್ರಗಳು.

೫೮. ವಿ. ರಾಮಸ್ವಾಮಿ., ಫ್ರಾನ್ಸ್‌ನಲ್ಲಿ ಅಲೆಮಾರಿ.

೫೯. ಸುಧಾಮೂರ್ತಿ., ಅಟ್ಲಾಂಟಿಕ್‌ದಾಚೆಗೆ, (ಪುಸ್ತಕದ ಕೊನೆಯ ಇಪ್ಪತ್ಮೂರು ಪುಟ)

೬೦. ಕೆ. ಮುಕುಂದನ್., ೨೦೧೭., ಯುರೋಪ್ ಪ್ರವಾಸ., ಅಂಕಿತ ಪುಸ್ತಕ., ಬೆಂಗಳೂರು.

೬೧. ಹೆಚ್. ನಾಗರತ್ನ ೨೦೧೭., ಯುರೋಪ್ ಪ್ರವಾಸ., ಪದ್ಮಶ್ರೀ ಪ್ರಕಾಶನ.

ಪರಾಮರ್ಶನ ಗ್ರಂಥಗಳು

(ಕೃತಿಗಳು ಪ್ರಕಟಗೊಂಡ ವರ್ಷವನ್ನು ಆಧರಿಸಿ ಏರಿಕೆಯ ಕ್ರಮದಲ್ಲಿ ಪಟ್ಟಿಯನ್ನು ಮಾಡಲಾಗಿದೆ.)

೧) **ಟಿ.ಎಸ್. ವೆಂಕಣ್ಣಯ್ಯ.,** ೧೯೪೮., **ಪ್ರಾಚೀನ ಸಾಹಿತ್ಯ.,** ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್., ಮೈಸೂರು.

೨) **ಹಾ.ಮಾ. ನಾಯಕ,** ೧೯೮೭., **ಕನ್ನಡವನ್ನು ಕಟ್ಟುವ ಕೆಲಸ,** ಐ.ಬಿ.ಹೆಚ್. ಪ್ರಕಾಶನ., ಬೆಂಗಳೂರು.

೩) **ಎನ್. ಎಸ್. ತಾರಾನಾಥ.,** ೧೯೯೦., **ಪ್ರವಾಸ ಸಾಹಿತ್ಯ.,** ಶಕ್ತಿ ಪ್ರಕಾಶನ., ಮೈಸೂರು.

೪) **ಎಸ್. ವಿದ್ಯಾಶಂಕರ.,** ೧೯೯೧., **ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ.,** ಸ್ನೇಹ ಪ್ರಕಾಶನ., ಬೆಂಗಳೂರು.

೫) **ವಿಮರ್ಶೆ ಮಾರ್ಗ., (ಪರಂಪರೆ ಮತ್ತು ಸಮಕಾಲೀನ ಕನ್ನಡ ಸಾಹಿತ್ಯ–ಜಿ.ಹೆಚ್. ನಾಯಕ)** ೧೯೯೨., ಕನ್ನಡ ಅಧ್ಯಯನ ಸಂಸ್ಥೆ., ಮೈಸೂರು ವಿಶ್ವವಿದ್ಯಾಲಯ., ಮೈಸೂರು.

೬) **ಮಲ್ಲೇಪುರಂ ಜಿ. ವೆಂಕಟೇಶ.,** ೧೯೯೨., **ಪ್ರವಾಸ ಸಾಹಿತ್ಯ: ಒಂದು ಅಧ್ಯಯನ.,** ಹೊನ್ನ ಪ್ರಕಾಶನ., ಬೆಂಗಳೂರು.

೭) **ಎಲ್.ಎಸ್. ಶೇಷಗಿರಿ ರಾವ್.,(ಪ್ರಸಂ)** ೧೯೯೩., **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ.,** ಉದಯಭಾನು ಕಲಾಸಂಘ., ಬೆಂಗಳೂರು.

೮) **ಎಂ.ಜಿ. ಹೆಗಡೆ(ಸಂ),** ೧೯೯೪., **ಸಾಹಿತ್ಯ ವಿಮರ್ಶೆ.,** ಕರ್ನಾಟಕ ಸಾಹಿತ್ಯ ಅಕಾಡೆಮಿ., ನೃಪತುಂಗ ರಸ್ತೆ., ಬೆಂಗಳೂರು.

೯) **ರಹಮತ್ ತರಿಕೆರೆ(ಸಂ).,** ೧೯೯೮., **ಕನ್ನಡ ಅಧ್ಯಯನ, ಚಳಿ ಸಂಚಿಕೆ.,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ., ವಿದ್ಯಾರಣ್ಯ., ಹಂಪಿ.

೧೦) **ರಹಮತ್ ತರಿಕೆರೆ(ಸಂ).,** ೧೯೯೯., **ಕನ್ನಡ ಅಧ್ಯಯನ, ಗಾಳಿ ಸಂಚಿಕೆ.,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ., ವಿದ್ಯಾರಣ್ಯ., ಹಂಪಿ.

೧೧) **ಸಂಕ್ಷಿಪ್ತ ಕನ್ನಡ ನಿಘಂಟು.,** ೨೦೦೧(ತೃತೀಯ ಆವೃತ್ತಿ)(ಪರಿಷ್ಕೃತ)., ಕನ್ನಡ ಸಾಹಿತ್ಯ ಪರಿಷತ್ತು., ಬೆಂಗಳೂರು.

೧೨) **ಎಂ. ಚಿದಾನಂದ ಮೂರ್ತಿ,** ೨೦೦೨., **ಕನ್ನಡ ಸಂಸ್ಕೃತಿ: ನಮ್ಮ ಹೆಮ್ಮೆ,** ಚಿಕ್ಕಮಗಳೂರು ಜಿಲ್ಲಾ ಪ್ರಥಮ ಸಮ್ಮೇಳನ, ಸ್ವಾಗತ ಸಮಿತಿ, ಚಿಕ್ಕಮಗಳೂರು.

೧೩) **ಎಂ. ಚಿದಾನಂದ ಮೂರ್ತಿ.,** ೨೦೦೩., **ಕರ್ನಾಟಕ–ನೇಪಾಳ ಸಾಂಸ್ಕೃತಿಕ ಸಂಬಂಧ,** ಪ್ರಸಾರಾಂಗ., ಕನ್ನಡ ವಿಶ್ವವಿದ್ಯಾನಿಲಯ., ಹಂಪಿ.

೧೪) **ರಹಮತ್ ತರಿಕೆರೆ.,** ೨೦೦೪., **ಸಾಂಸ್ಕೃತಿಕ ಅಧ್ಯಯನ.,** ಕರ್ನಾಟಕ ಸಾಹಿತ್ಯ ಅಕಾಡೆಮಿ., ಬೆಂಗಳೂರು.

೧೫) **ಸಿ. ಕೆ. ಶೇಖರ.,** ೨೦೦೭., **ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಉಗಮ ಮತ್ತು ವಿಕಾಸ,** ಸಂಶೋಧನ ಕೃತಿ., ಬೆಂಗಳೂರು ವಿಶ್ವವಿದ್ಯಾಲಯ., ಬೆಂಗಳೂರು.

೧೬) **ಬಿ. ಟಿ. ಅನುರಾಧ.,** ೨೦೦೭., **ಕನ್ನಡದಲ್ಲಿ ಪ್ರವಾಸ ಸಾಹಿತ್ಯ– ಒಂದು ಸಾಂಸ್ಕೃತಿಕ ಅಧ್ಯಯನ,** ಸಂಶೋಧನ ಕೃತಿ., ಬೆಂಗಳೂರು ವಿಶ್ವವಿದ್ಯಾಲಯ., ಬೆಂಗಳೂರು.

೧೭) **ಸಂಗಮೇಶ ಸವದತ್ತಿಮಠ(ಸಂ).**, ೨೦೦೯., **ವಿಶ್ವವಿದ್ಯಾಲಯಗಳಲ್ಲಿ ಸ್ವೀಕೃತ ಕನ್ನಡ ಸಂಶೋಧನ ಪ್ರಬಂಧಗಳ ವರ್ಗೀಕೃತ ಸೂಚಿ.**, ವಿದ್ಯಾನಿಧಿ ಪ್ರಕಾಶನ., ಗದಗ.

೧೮) **ರಹಮತ್ ತರಿಕೆರೆ,** ೨೦೧೦., **ಚಿಂತನೆಯ ಪಾಡು.**, ಅಭಿನವ ಪ್ರಕಾಶನ., ಬೆಂಗಳೂರು.

೧೯) **ತೀ. ನಂ. ಶಂಕರನಾರಾಯಣ(ಸಂ).**, ೨೦೧೦., **ಆಧುನಿಕತೆ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು.**, ಪ್ರಸಾರಾಂಗ., ಕುವೆಂಪು ವಿಶ್ವವಿದ್ಯಾನಿಲಯ., ಶಂಕರಘಟ್ಟ., ಶಿವಮೊಗ್ಗ.

೨೦) **ಬಿ.ಎಂ. ಪುಟ್ಟಯ್ಯ,** ೨೦೧೦., **ಸಂಶೋಧನೆಯ ತಾತ್ವಿಕ ಆಯಾಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ., ಹಂಪಿ.

೨೧) **ಎಸ್. ನಳಿನಾ.**, ೨೦೧೦., **ಕನ್ನಡ ಸಾಹಿತಿಗಳ ವಿದೇಶಿ ಪ್ರವಾಸ: ಒಂದು ತೌಲನಿಕ ಅಧ್ಯಯನ,** ಸಂಶೋಧನ ಕೃತಿ., ಬೆಂಗಳೂರು ವಿಶ್ವವಿದ್ಯಾಲಯ., ಬೆಂಗಳೂರು.

೨೨) **ಅಮರೇಶ ನುಗಡೋಣಿ(ಸಂ).**, ೨೦೧೧., **ಕನ್ನಡ ಸಂಶೋಧನೆಯ ವೈಧಾನಿಕತೆಗಳು.**,(ದ್ವಿತೀಯ ಅವೃತ್ತಿ) ಪ್ರಸಾರಾಂಗ., ಕನ್ನಡ ವಿಶ್ವವಿದ್ಯಾಲಯ., ಹಂಪಿ.

೨೩) **ಎಂ. ಚಂದ್ರ ಪೂಜಾರಿ,** ೨೦೧೧., **ಸಂಶೋಧನ ಪ್ರಸ್ತಾವ.**, (ದ್ವಿತೀಯ ಆವೃತ್ತಿ) ಪ್ರಸಾರಾಂಗ., ಕನ್ನಡ ವಿಶ್ವವಿದ್ಯಾಲಯ., ಹಂಪಿ.

೨೪) **ಎಂ. ಚಿದಾನಂದ ಮೂರ್ತಿ.**, ೨೦೧೨ **ಸಂಶೋಧನೆ.**,(ನಾಲ್ಕನೇ ಆವೃತ್ತಿ) ಡಿ.ವಿ.ಕೆ ಮೂರ್ತಿ ಪ್ರಕಾಶನ., ಮೈಸೂರು,

೨೫) **ಕೆ.ಪಿ. ಪೂರ್ಣಚಂದ್ರ ತೇಜಸ್ವಿ,** ೨೦೧೨., **ಹೊಸ ವಿಚಾರಗಳು,** ಪುಸ್ತಕ ಪ್ರಕಾಶನ., ಮೈಸೂರು.

೨೬) **ಶ್ರೀದೇವಿ ವಿ. ಆಲೂರ.**, ೨೦೧೨., **ಶೈಕ್ಷಣಿಕ ವಲಯದಲ್ಲಿ ಮಹಿಳಾ ದೌರ್ಜನ್ಯದ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨೭) **ಬಿ. ಪಿ. ಮಹೇಶ್ ಚಂದ್ರ ಗುರು.**, ೨೦೧೩., **ಸಾಹಿತ್ಯ, ಮಹಿಳೆ ಮತ್ತು ಸಬಲೀಕರಣ,** ಪ್ರಸಾರಾಂಗ., ಮೈಸೂರು ವಿಶ್ವವಿದ್ಯಾನಿಲಯ., ಮೈಸೂರು.

೨೮) **ಎ. ಸುಬ್ಬಣ್ಣ ರೈ., ಮಾಧವ ಪೆರಾಜೆ.**, ೨೦೧೩., ಸಂಕ್ಷಿಪ್ತ ಆಧುನಿಕ ಕನ್ನಡ ನಿಘಂಟು., ಪ್ರಸಾರಾಂಗ., ಕನ್ನಡ ವಿಶ್ವವಿದ್ಯಾಲಯ., ಹಂಪಿ.

೨೯) **ಕಾ. ವೆಂ. ಶ್ರೀನಿವಾಸ ಮೂರ್ತಿ.**, ೨೦೧೩., **ನೆಲದ ಕಣ್ಣು.**,(ತೃತೀಯ ಆವೃತ್ತಿ) ಪ್ರಿಯದರ್ಶಿನಿ ಪ್ರಕಾಶನ., ಬೆಂಗಳೂರು.

೩೦) **ಬಿ.ವಿ. ಶಿರೂರ.**, ೨೦೧೪., **ಸಂಶೋಧನ ಸ್ವರೂಪ.**, (ಆರನೇ ಆವೃತ್ತಿ)ಅನ್ನಪೂರ್ಣ ಪ್ರಕಾಶನ., ಹುಬ್ಬಳ್ಳಿ.

೩೧) **ರಹಮತ್ ತರಿಕೆರೆ.**, ೨೦೧೪., **ಸಂಶೋಧನಾ ಮೀಮಾಂಸೆ.**,(ತೃತೀಯ ಆವೃತ್ತಿ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨) **ಬಿ.ಎ. ವಿವೇಕ ರೈ.**, ೨೦೧೪., **ಪ್ರವಾಸಿ ಕಂಡ ವಿಜಯನಗರ.**, ಪ್ರಸಾರಾಂಗ., ಕನ್ನಡ ವಿಶ್ವವಿದ್ಯಾಲಯ., ಹಂಪಿ.

೩೩) **ಎಂ. ಚಂದ್ರ ಪೂಜಾರಿ.**, ೨೦೧೪., **ಸಂಶೋಧನಾ ಪರಿಭಾಷೆ.**, ಪ್ರಸಾರಾಂಗ., ಕನ್ನಡ ವಿಶ್ವವಿದ್ಯಾಲಯ., ಹಂಪಿ.

೩೪) **ಕೀರ್ತಿನಾಥ ಕುರ್ತಕೋಟಿ.**, ೨೦೧೫., **ನೂರು ಮರ ನೂರು ಸ್ವರ.**, (ದ್ವಿತೀಯ ಆವೃತ್ತಿ) ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್., ಧಾರವಾಡ.

೩೫) **ಹೆಚ್. ತಿಪ್ಪೇರುದ್ರಸ್ವಾಮಿ.**, ೨೦೧೫., **ಕರ್ಣಾಟಕ ಸಂಸ್ಕೃತಿ ಸಮೀಕ್ಷೆ.**, (ಹದಿನಾರನೇ ಆವೃತ್ತಿ) ಡಿ.ವಿ.ಕೆ. ಮೂರ್ತಿ ಪ್ರಕಾಶನ., ಮೈಸೂರು.

೩೬) **ಎನ್. ಎಸ್. ಮಹಾಂತೇಶ(ಸಂ).**, ೨೦೧೫., **ಗತಕಥನ.**, ಸಂಶೋಧನಾ ಅರ್ಧವಾರ್ಷಿಕ, ಸಂಪುಟ ೧, ಸಂಚಿಕೆ,೨, ಜುಲೈ–ಡಿಸೆಂಬರ್.

೩೭) **ಎಸ್. ನಟರಾಜ ಬೂದಾಳು.**, ೨೦೧೬ **ಕನ್ನಡ ಕಾವ್ಯ ಮೀಮಾಂಸೆ.**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ., ಹಂಪಿ.

೩೮) **ನ. ರವಿಕುಮಾರ. (ಸಂ).**, ೨೦೧೭., **ಆಯ್ದ ವಿಮರ್ಶೆ.**,(ನಾಲ್ಕನೇ ಆವೃತ್ತಿ) ಅಭಿನವ ಪ್ರಕಾಶನ., ವಿಜಯನಗರ., ಬೆಂಗಳೂರು.

----******-------

ಅನುಬಂಧಗಳು–

೧. ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕೃತಿಗಳ ವಿವರವನ್ನು ಒಳಗೊಂಡ ಪಟ್ಟಿ.

೨. ಯುರೋಪ್ ಪ್ರವಾಸ ಲೇಖನಗಳ ಸಂಕ್ಷಿಪ್ತ ಪರಿಚಯ.

೩. ಮಹಿಳಾ ಯುರೋಪ್ ಪ್ರವಾಸ ಕೃತಿಗಳ ಪಟ್ಟಿ.

೪. ಯುರೋಪ್ ಪ್ರವಾಸ ಕೃತಿಗಳು ಸಂದರ್ಶಿಸಿದ ದೇಶಗಳ/ಸ್ಥಳಗಳ ಪಟ್ಟಿ

ಅನುಬಂಧ–೧

ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕೃತಿಗಳ ವಿವರವನ್ನು ಒಳಗೊಂಡ ಪಟ್ಟಿ

ಕ್ರ ಸಂ	ಲೇಖಕರ ಹಸರು	ಪುಸ್ತಕದ ಹೆಸರು	ವೃತ್ತಿ	ಸ/ ಮಾ	ಪ್ರವಾಸಕ್ಕೆ ಹೋದ ವರ್ಷ	ಪುಸ್ತಕ ಪ್ರಕಟವಾದ ವರ್ಷ	ಪ್ರವಾಸಕ್ಕೆ ಹೋಗಿರುವ ವಿಧಾನ	ಪ್ರವಾಸದ ದಿನಗಳು
1	ಸಮುದ್ರದಾಚೆಯಿಂದ	ವಿ.ಕೃ ಗೋಕಾಕ್	ಬರಹಗಾರ	ಸ	1936	1937	ದಕ್ಷಿಣ ವಿದ್ಯಾ ಪ್ರಸಾರಕ ಪೂನ, ಇವರು ನೀಡಿದ ವಿದ್ಯಾರ್ಥಿ ವೇತನದ ಸಹಾಯದಿಂದ	9 ತಿಂಗಳು
2	ಪ್ರಭುವರ್ಯರ ಯುರೋಪ್ ಪ್ರವಾಸ–	ಆರ್. ಎಸ್. ನಾರಾಯಣ ರಾವ್.	---	ಸ	1936	1937	ಸ್ವಂತ ವೆಚ್ಚದಲ್ಲಿ	---
3	ಅಪೂರ್ವ ಪಶ್ಚಿಮ	ಶಿವರಾಮ ಕಾರಂತ	ಬರಹಗಾರ	ಸ	1953	1954	ಸ್ವಂತ ವೆಚ್ಚದಲ್ಲಿ	3 ತಿಂಗಳು
4	ನಾನು ಕಂಡ ರಷ್ಯಾ	ಬಿಳಿಗೆರೆ ರಾಮಚಂದ್ರರಾಯ	---	–	–	1955	ವಿಶ್ವ ಶಾಂತಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ	–
5	ನಾ ಕಂಡ ಜರ್ಮನಿ	ಹೊ. ಶ್ರೀನಿವಾಸಯ್ಯ	ಗಾಂಧೀವಾದಿ	ಸ	–	1967	ಹೆಚ್.ಎ.ಎಲ್. ಬೆಂಗಳೂರು ಕಡೆಯಿಂದ ವಿಶೇಷ ತರಬೇತಿಗಾಗಿ ಜರ್ಮನಿಗೆ ಹೋಗಿದ್ದರು.	
6	ಕೊರವಂಜಿಯ ಪಡುವಣ ಯಾತ್ರೆ	ರಾ.ಶಿ.	ವೈದ್ಯ	ಸ	1960	1968	ವೈದ್ಯ ಸಂಘದ ಅಡಿಯಲ್ಲಿ ಕೇಂದ್ರ ಸರಕಾರದ ಅನುದಾನದಲ್ಲಿ	15 ದಿನ
7	ಸೋವಿಯತ್ ದಿನಚರಿ	ಶ್ರೀರಂಗರಾಜು	ಶಿಕ್ಷಣ ತಜ್ಞ	ಸ	1967	1969	ಯುನೆಸ್ಕೋ ಸಂಸ್ಥೆ ಮತ್ತು ಮೈಸೂರು ಸರಕಾರದ ಅನುದಾನದಲ್ಲಿ	3 ತಿಂಗಳು
8	ನಾನು ಕಂಡ ರಶಿಯಾ	ಬಸವರಾಜ ಕಟ್ಟೀಮನಿ	ಬರಹಗಾರ	ಸ	1969	1970	ಸರಕಾರದ ಅನುದಾನದಲ್ಲಿ	---
9	ವಿದೇಶದಲ್ಲಿ ನಾಲ್ಕು ವಾರ	ದೇ. ಜವರೇಗೌಡ	ಕುಲಪತಿ	ಮಾ	1970	1970	ಮೈಸೂರು ಸರಕಾರ ಮತ್ತು ಯು.ಜಿ.ಸಿ.ಯ ಅನುದಾನದಲ್ಲಿ	4 ತಿಂಗಳು

10	ಶ್ರೀರಂಗ ಯಾತ್ರೆ	ಶ್ರೀರಂಗ	ನಾಟಕಕಾರ	–	1969	1970	ಕೇಂದ್ರ ಶಿಕ್ಷಣ ಇಲಾಖೆ ಕಾರ್ಯಾಲಯದಿಂದ ಬರ್ಲಿನ್‌ನಲ್ಲಿ 13ನೇ ನಾಟಕ ಮತ್ತು ಸಂಗೀತ ಮಹೋತ್ಸವದಲ್ಲಿ ಪಾಲ್ಗೊಳ್ಳಲು.	4 ತಿಂಗಳು
11	ಪ್ರವಾಸಿಯ ದಿನಚರಿ	ದೇ. ಜವರೇಗೌಡ	ಕುಲಪತಿ	ಮಾ	1973	1974	ಕಾಮನ್‌ವೆಲ್ತ್ ರಾಷ್ಟ್ರಗಳ ಕುಲಪತಿಗಳ ಸಮಾವೇಶದಲ್ಲಿ ಭಾಗವಹಿಸಲು	---
12	ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ	ಜಿ. ಎಸ್. ಶಿವರುದ್ರಪ್ಪ	ಲೇಖಕ	ಸ	1972	1973	ಭಾರತ–ಸೋವಿಯತ್ ಸಾಂಸ್ಕೃತಿಕ ವಿನಿಮಯ ಯೋಜನೆಯ ಮೂಲಕ ಪ್ರವಾಸ	22 ದಿನ
13	ದೇವರಿಲ್ಲದ ಗುಡಿ	ಬೀಚಿ	ಪೋಲೀಸ್	ಸ	1973	1989 (ತೃತೀಯ ಆವೃತ್ತಿ)	ಆಫ್ರೋ–ಏಷ್ಯನ್ ಬರಹಗಾರರ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.	---
14	ನವ ರಷ್ಯದ ನೋಟ	ಹ.ವೆಂ. ನಾಗರಾಜರಾವ್	ಪತ್ರಿಕೋದ್ಯಮಿ	ಸ	1973	1974	ಸೋವಿಯತ್ ನೊವೋಸ್ತಿ ಏಜೆನ್ಸಿಯ ವತಿಯಿಂದ	2 ವಾರ
15	ಸ್ನೇಹಯಾತ್ರೆ	ಅನುಪಮಾ ನಿರಂಜನ	ವೈದ್ಯ	ಸ	1975	1978	ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಭಾರತೀಯ ನಿಯೋಗದ ಸದಸ್ಯೆಯಾಗಿ ಭಾಗವಹಿಸಿದ್ದರು	15 ದಿನ
16	ರಾಗ ತಾನ : ಸೀನ ದಡದಲ್ಲಿ	ವಸಂತ ಕವಲಿ	ಸಂಗೀತಗಾರ	ಸ		1979	ಸಂಗೀತ ಕಛೇರಿಗಳನ್ನು ನಡೆಸಲು, ಸ್ವಂತ ದುಡಿಮೆಗಾಗಿ	----
17	ನಮ್ಮ ವಿದೇಶ ಯಾತ್ರೆ	ಮೂಜಗಂ	ಮಠದ ಸ್ವಾಮಿ	ಸ	1974	1979	ದ್ವಿತೀಯ ವಿಶ್ವ ಧರ್ಮಗಳ ಶಾಂತಿ ಪರಿಷತ್‌ನಲ್ಲಿ ಭಾಗವಹಿಸಲು	2 ವಾರ
18	ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು	ಉ.ಕಾ. ಸುಬ್ಬರಾಯಾಚಾರ್	---	ಸ	1979	1980	ಭಾರತ ಸೋವಿಯತ್ ಸಾಂಸ್ಕೃತಿಕ ಸಂಘದ ವತಿಯಿಂದ ಕರ್ನಾಟಕ ಪ್ರತಿನಿಧಿಯಾಗಿ	10 ದಿನ
17	ವೈದ್ಯನ ವಿದೇಶ ಪ್ರವಾಸ	ಜಿ. ಗೋಪಾಲ್	ವೈದ್ಯ	ಮಾ	1968/77	1980	ಮಕ್ಕಳ ಶಸ್ತ್ರಚಿಕಿತ್ಸಾ ವಿಧಾನ ಕಲಿಯಲು ಭಾರತ ಸರಕಾರದ ವಿದ್ಯಾರ್ಥಿ ವೇತನದಿಂದ	8 ತಿಂಗಳು
18	ಶಶಿ ಕಂಡ ಜರ್ಮನಿ	ಹೋ. ಶ್ರೀನಿವಾಸಯ್ಯ		ಸ		1980	---	----
19	ಒಮ್ಮೆ ರಷಿಯಾ ಇನ್ನೊಮ್ಮೆ ಇಟಾಲಿಯಾ	ಕು.ಶಿ. ಹರಿದಾಸ ಭಟ್	ಬರಹಗಾರ	ಸ		1983	---	---

20	ಇತಾಲಿಯಾ ನಾನು ಕಂಡಂತೆ	ಕು.ಶಿ. ಹರಿದಾಸ ಭಟ್	ಬರಹಗಾರ	ಸ	1962	1983	ಇತಾಲಿಯಾ ಸರಕಾರದ ಶಿಷ್ಯವೃತ್ತಿಯ ಸಹಕಾರದಿಂದ	6 ತಿಂಗಳು
21	ಏಕಾಕಿ ಪ್ರವಾಸಿ	ದೊಡ್ಡೇರಿ ವೆಂಕಟಗಿರಿ ರಾವ್	ವೈದ್ಯರು	ಸ	1980	1984	ಸ್ವಯಂ ಖರ್ಚಿನ ಪ್ರವಾಸ	13 ವಾರ
22	ಅಂಗೈಯಲ್ಲಿ ಯೂರೋ ಅಮೆರಿಕ	ಅನುಪಮಾ ನಿರಂಜನ	ವೈದ್ಯೆ	ಸ	1981	1984	ಸ್ವಯಂ ಖರ್ಚಿನ ನಿಯೋಜಿತ ಪ್ರವಾಸ	12 ದಿನ
23	ಹೈಡ್ ಪಾರ್ಕ್	ವೈ.ಎನ್.ಕೆ		–	1967/77/79/82	1984	1967 ರಲ್ಲಿ ಥಾಮ್ಸನ್ ಪ್ರತಿಷ್ಠಾನದವಿದ್ಯಾರ್ಥಿ ವೇತನದ ಅನುದಾನದಿಂದ, 1979ರಲ್ಲಿ ಪೋಲೆಂಡ್, ಹಂಗೇರಿಯ ಪತ್ರಕರ್ತರ ಸಂಸ್ಥೆಗಳಿಂದ ಆಹ್ವಾನ, 1982 ರಲ್ಲಿ ಜರ್ಮನ್ ಸರಕಾರದ ಆಹ್ವಾನದ ಮೇರೆಗೆ	----
24	ಬೆಂಗಳೂರಿನಿಂದ ಬಾರ್ಸಿಲೋನಾಕ್ಕೆ	ಜಿ. ಗೋಪಾಲ್	ವೈದ್ಯ	ಮಾ	197	1985	4ನೇ ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞರ ಸಮ್ಮೇಳನ	1 ವಾರ
25	ಯುರೋಪ್ ನೆನಪುಗಳು	ಪುಂಡಿಕಾಯ್ಯೆ ಗಣಪಯ್ಯ ಭಟ್	ಉಪನ್ಯಾಸಕರು	ಸ	1979	1985	ಭಾರತ–ಗ್ರೀಸ್ ದೇಶಗಳ ನಡುವಿನ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ, ಉತ್ಖನನ ವಿಷಯದ ಜಿಜ್ಞಾಸು,	1.1/2 ವರ್ಷ
26	ನಾನೊಬ್ಬ ಭಾರತೀಯ ಪ್ರವಾಸಿ	ವ್ಯಾಸರಾಯ ಬಲ್ಲಾಳ್	ಬರಹಗಾರ	–	1984	1987	ಸ್ವಯಂ ಖರ್ಚಿನ ಪ್ರವಾಸ	---
27	ಅರಸಿಕರಲ್ಲ	ಶಿವರಾಮ ಕಾರಂತ	ಬರಹಗಾರ	ಸ	1985	1976	ಭಾರತ ಸಾಂಸ್ಕೃತಿಕ ಸಂಬಂಧ ಸಂಸ್ಥೆ ವತಿಯಿಂದ ಪ್ರವಾಸ	1 ತಿಂಗಳು
28	ಜಯಶ್ರೀ ಕಂಡ ಜಗತ್ತು	ಹೋ. ಶ್ರೀನಿವಾಸಯ್ಯ	ಯಂತ್ರ ಶಿಲ್ಪಿ	ಸ		1989	ವಿಶ್ವ ಪರ್ಯಟನೆ, ಸ್ವಯಂ ಪ್ರವಾಸ.	---
29	ಸೋವಿಯತ್ ದೇಶ ಕಂಡೆ	ಪಾಟೀಲ ಪುಟ್ಟಪ್ಪ	ಪತ್ರಕರ್ತರು	ಸ		1989	ಸೋವಿಯತ್ ಸರಕಾರದ ವಾರ್ತಾ ಸಂಸ್ಥೆಯಿಂದ ಆಮಂತ್ರಣ	15 ದಿನ
30	ಯುರೋ ನಾಡಿನಲ್ಲಿ	ಲತಾ ಗುತ್ತಿ	---	ಸ	1986	1993	ಸ್ವಯಂ ಖರ್ಚಿನ ಪ್ರವಾಸ	---
31	ಇಂಗ್ಲೆಂಡಿನಲ್ಲಿ ಚತುರ್ಮಾಸ	ಜಿ.ಎಸ್. ಶಿವರುದ್ರಪ್ಪ	ಬರಹಗಾರ	ಸ		1997	ಇಂಗ್ಲೆಂಡಿನ ಬರ್ಟನ್ ಎಂಬ ಊರಿನಲ್ಲಿ ವೈದ್ಯ ವೃತ್ತಿಯಲ್ಲಿರುವ ಮಗನ ಬಳಿ–ಸ್ವಯಂ ನಿಯೋಜಿತ ಪ್ರವಾಸ	4 ತಿಂಗಳು
32	ಯೂರೋ ಅಮೆರಿಕಾದ	ದೇವಕೀ ಮೂರ್ತಿ		ಸ	1987	1994	ಪ್ರವಾಸಿ ಸಂಸ್ಥೆಯ ವತಿಯಿಂದ ಆಯೋಜಿಸಲಾದ	

	ಇಣುಕು ನೋಟ		---				ನಿಯೋಜಿತ ಸ್ವಯಂ ಖರ್ಚಿನ ಪ್ರವಾಸ	---
33	ಕಲಾವಿದ ಕಂಡ ಫ್ರಾನ್ಸ್	ಪಿ.ಆರ್. ತಿಪ್ಪೇಸ್ವಾಮಿ	ಕಲಾವಿದ	ಸ	1991	1994	ಬೆಂಗಳೂರು ಚಿತ್ರಕಲಾ ಪರಿಷತ್ ವತಿಯಿಂದ ಸರಕಾರದ ವೆಚ್ಚದಲ್ಲಿ ಪ್ರವಾಸ	15 ದಿನ
36	ಯೂರೋಪ್ ಯಾತ್ರೆ	ಕೃಷ್ಣಾನಂದ ಹೆಗ್ಡೆ		–	1995	1995	----	---
37	ಯುರೋ-ದರ್ಶನ	ಹೇಮಲತಾ ಮಹಿಷಿ	ವಕೀಲರು	ಸ	1997	1999	ಸ್ವಯಂ ವೆಚ್ಚದಲ್ಲಿನ ಸ್ವತಂತ್ರ ಪ್ರವಾಸ	---
38	ಒಂದು ಕನಸಿನ ಪಯಣ	ನೇಮಿಚಂದ್ರ	ಎಂಜಿನಿಯರ್	ಸ	1997	1999	ಸ್ವಯಂ ವೆಚ್ಚದಲ್ಲಿನ ಸ್ವತಂತ್ರ ಪ್ರವಾಸ	---
39	ನನ್ನ ಬೆಲ್ಜಿಯಂ ಪ್ರವಾಸ	ಭಾರತೀ ಭಟ್	ಮನೆಯೊಡತಿ	ಸ	1997/ 1998	2000	ಸ್ವಯಂ ವೆಚ್ಚದಲ್ಲಿನ ಸ್ವತಂತ್ರ ಪ್ರವಾಸ	---
40	ಹಾಲೆಂಡ್‌ನಿಂದ ಲಂಡನ್‌ವರೆಗೆ	ಇಂದಿರಾ ಶಿವಣ್ಣ	ಬರಹಗಾರ್ತಿ	ಸ		2001	ಪ್ರವಾಸಿ ಸಂಸ್ಥೆಯ ವತಿಯಿಂದ ಆಯೋಜಿಸಲಾದ ನಿಯೋಜಿತ ಸ್ವಯಂ ಖರ್ಚಿನ ಪ್ರವಾಸ	---
41	ಫ್ರೆಂಚ್ ಸಂಸ್ಕೃತಿಯ ಪರಿಶೋಧದಲ್ಲಿ	ಪ್ರಭಾಕರ ಶಿಶಿಲ	ಬರಹಗಾರರು	ಸ	2004	2008	ವಿಶ್ವ ರೋಟರಿ ಸಂಸ್ಥೆಯ ವತಿಯಿಂದ	5 ವಾರ
42	ಜರ್ಮನಿಯಲ್ಲಿ ಶರ್ಮರು	ವಿದ್ವಾನ್ ಕೆ. ಜಿ. ಸುಬ್ರಾಯಶರ್ಮ	ಜ್ಯೋತಿಷಿ	ಸ	2008	2008	ಭಕ್ತರ ಆಹ್ವಾನದ ಮೇರೆಗೆ ಭೇಟಿ	13 ದಿನ
43	ಅಯನ	ನಾಗತಿಹಳ್ಳಿ ಚಂದ್ರಶೇಖರ್	ನಿರ್ದೇಶಕ/ ಬರಹಗಾರ	ಮಾ	1990	1991	ಈಸ್ಟ್ ವೆಸ್ಟ್ ಕಲ್ಚರಲ್ ಅಸೋಸಿಯೇಶನ್ ವತಿಯಿಂದ	---
44	ಪಶ್ಚಿಮ ಮುಖಿ	ಟಿ.ಆರ್. ಅನಂತರಾಮು	ಭೂ ವಿಜ್ಞಾನಿ	ಸ		2008	---	42 ದಿನ
45	ಬದುಕಿಗೆ ಬಂಗಾರದ ಲೇಪನ	ಇಂದಿರಾ ಶಿವಣ್ಣ	ಬರಹಗಾರ್ತಿ	ಸ	2008	2012	ಸ್ವಯಂ ಖರ್ಚಿನ ಪ್ರವಾಸ	---

ವಿಸ್ತರಣೆಗಳು :– ಸ : ಸಸ್ಯಾಹಾರಿ,

ಮಾ:ಮಾಂಸಾಹಾರಿ

ಅನುಬಂಧ-೨
ಯುರೋಪ್ ಪ್ರವಾಸ ಲೇಖನಗಳು

ಯುರೋಪ್ ಪ್ರವಾಸಕ್ಕೆ ಹೋಗಿ ಬರುವವರಲ್ಲಿ ಕೆಲವರು ಕೃತಿಗಳನ್ನು ರಚಿಸಿದರೆ, ಮತ್ತೆ ಕೆಲವರು ಲೇಖನದ ರೂಪದಲ್ಲಿ ತಮ್ಮ ಪ್ರವಾಸಾನುಭವಗಳನ್ನು ದಾಖಲಿಸಿದ್ದಾರೆ. ಅವುಗಳ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ನೀಡಲಾಗಿದೆ.

ಮಧುಸೂದನ ಹೆಗ್ಡೆ ಅವರು ತಾವು ಯುರೋಪ್ ಪ್ರವಾಸಕ್ಕೆ ಹೋಗಿ ಬಂದ ಬಳಿಕ ತಮ್ಮ ಅನುಭವಗಳನ್ನು "ಪ್ರವಾಸಿಗರ ಸ್ವರ್ಗ :ಯುರೋಪ್ ಖಂಡದಲ್ಲೊಂದು ಸುತ್ತು" ಎಂಬ ಚಿಕ್ಕ ಲೇಖನ ಬರೆದಿದ್ದಾರೆ. ಇದು ಯುರೋಪ್ ಪ್ರವಾಸ ಕೃತಿಗಳನ್ನು ವಿಶ್ಲೇಷಣೆ ಮಾಡಿರುವ ಕೃತಿಯಲ್ಲ. ತಾವು ಹೋಗಿ ಬಂದ ದೇಶಗಳಲ್ಲಿನ ಪ್ರವಾಸಿ ಸ್ಥಳಗಳ ಬಗ್ಗೆ ಪರಿಚಯ ನೀಡುವಂತೆ ಬರೆದಿದ್ದಾರೆ.

ಅಗರ ಪ್ರಸಾದ್‌ರಾವ್ ಅವರು ಕುಟುಂಬದೊಂದಿಗೆ ಬೇಸಿಗೆ ರಜೆಯನ್ನು ಕಳೆಯಲು ಯುರೋಪ್ ಪ್ರವಾಸ ಮಾಡಿದ್ದಾರೆ. ತಮ್ಮ ಅನುಭವಗಳನ್ನು "ಮಧ್ಯ ಯುರೋಪ್-ಸುಂದರ ನಗರಗಳ ಪ್ರವಾಸ" ಎಂಬ ಲೇಖನರೂಪದಲ್ಲಿ ಬರೆದಿದ್ದಾರೆ. ಸಿ-ಝೆಕ್, ಸ್ಲೋವೋಕಿಯ, ಹಂಗೇರಿ, ಆಸ್ಟ್ರೀಯ ದೇಶಗಳಿಗೆ ಪ್ರವಾಸ ಮಾಡಿರುವ ವಿವರಗಳಿವೆ.

ರಾಜಾರಾಯರು 'ಯುರೋಪ್ ಯಾತ್ರೆ' 'ಯುರೋಪ್ ಮತ್ತು ನಾವು' ಮತ್ತು 'ಪಾಷಾಂಡಿಯ ಪ್ರಾಯಶ್ಚಿತ್ತ' ಮೊದಲಾದ ಮೂರು ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳಲ್ಲಿ ಪ್ರವಾಸದ ಅನುಭವಗಳು ದಾಖಲಾಗಿಸಿದ್ದಾರೆ. ಯುರೋಪ್‌ನಲ್ಲಿ ಹೋಗಿ ನೆಲೆಸಿ ವಿದೇಶಿ ಹುಡುಗಿಯನ್ನು ಮದುವೆಯಾದ ರಾಜಾರಾಯರು ತಮ್ಮ ಅನುಭವಗಳನ್ನು ಆತ್ಮಕಥನ ರೂಪದಲ್ಲಿ ದಾಖಲಿಸಿದ್ದಾರೆ. ಅದು ಯುರೋಪ್ ಮತ್ತು ಭಾರತದ ಸಾಂಸ್ಕೃತಿಕ ವೈವಿಧ್ಯಗಳ ತೌಲನಿಕ ಅಧ್ಯಯನದ ರೂಪವನ್ನು ಪಡೆದಿದೆ. ಯುರೋಪಿನಿಂದ ಭಾರತ ಕಲಿಯಬೇಕಿರುವ ಅಂಶಗಳೇನು, ಅಂತೆಯೇ ಭಾರತ ಯುರೋಪಿನಿಂದ ಕಲಿಯಬೇಕಾಗಿರುವ ಅಂಶಗಳೇನು ಎಂಬ ಬಗ್ಗೆ ಸುಧೀರ್ಘ ಚರ್ಚೆಯ ಮೂಲಕ ಆತ್ಮಾವಲೋಕನ ಮಾಡಿಕೊಳ್ಳುವಂತೆ ಹೇಳಿದ್ದಾರೆ. ಅವರೇ ಹೇಳುವಂತೆ "ಕನಕದಾಸರು ಕೀಟ್ಸ್‌ನ ಪಕ್ಕದಲ್ಲಿ ಕುಳಿತುಕೊಳ್ಳಬೇಕು, ಪಂಪನು ಪೋಪಿನ ಸಂಗಡ ವಾದಿಸಬೇಕು, ರೋಮೇ ರೋಲಾರವರು ಶ್ರೀನಿವಾಸ ಕೈಲಾಸಂರವರ ಪುಸ್ತಕಗಳ ಮಧ್ಯೆ ತೇಜಿಸಬೇಕು" ಎಂದಿರುವುದು ರಾಜಾರಾಯರು ಸಾಂಸ್ಕೃತಿಕ ಪರಂಪರೆಗಳು ಒಂದೂಗೂಡಬೇಕು, ಪ್ರಪಂಚವು ವಿಶ್ವಕುಟುಂಬವಾಗಬೇಕು ಎಂದು ಬಯಸಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. (ಕೃತಿ ಪರೀಕ್ಷೆ- ಪು-೧೧೧-೧೨೭)

ಅನುಬಂಧ ೩

ಮಹಿಳಾ ಯುರೋಪ್ ಪ್ರವಾಸ ಕೃತಿಗಳ ಪಟ್ಟಿ (೧೮)

ವಸಾಹತು ಕಾಲಘಟ್ಟದ ಕೃತಿ- ೧

೧.ರಾಜಕುಮಾರಿ ಚನ್ನಾಜಮ್ಮಣ್ಣಿ., ೧೯೩೭., ನನ್ನ ಪ್ರಪಂಚ ಸಂಚಾರ.

ವಸಹತೋತ್ತರ ಕಾಲಘಟ್ಟದ ಕೃತಿಗಳು-೧೭

೧೯೭೦ ರಿಂದ ೧೯೯೦ ರ ಕಾಲಘಟ್ಟದವರೆಗೆ ಪ್ರಕಟಗೊಂಡ ಕೃತಿಗಳು -೫

೨.ಚಂದ್ರಭಾಗದೇವಿ., ೧೯೭೧., ಗೆಜ್ಜೆ ಹೆಜ್ಜೆಯ ನುಡಿ.

೩.ಅನುಪಮಾ ನಿರಂಜನ., ೧೯೭೭., ಸ್ನೇಹಯಾತ್ರೆ.

೪.ಅನುಪಮಾ ನಿರಂಜನ., ೧೯೮೪., ಅಂಗೈಯಲ್ಲಿ ಯುರೋ ಅಮೇರಿಕ.

೫.ದೇವಕಿಮೂರ್ತಿ., ೧೯೮೪., ಯುರೋ ಅಮೇರಿಕಾದ ಇಣುಕು ನೋಟ,

೬.ರಾಜಮಣಿ ನಾಗರಾಜರಾವ್., ೧೯೮೮., ಸುವರ್ಣ ಮಧುಚಂದ್ರ.

೧೯೯೧ರಿಂದ ೨೦೦೦ರ ಕಾಲಘಟ್ಟದಲ್ಲಿ ಪ್ರಕಟಗೊಂಡ ಕೃತಿಗಳು- ೪

೭.ಲತಾ ಗುತ್ತಿ., ೧೯೯೩., ಯುರೋ ನಾಡಿನಲ್ಲಿ.

೮.ಹೇಮಲತಾ ಮಹಿಷಿ., ೧೯೯೯., ಯುರೋ-ದರ್ಶನ.

೯.ನೇಮಿಚಂದ್ರ., ೧೯೯೯., ನನ್ನ ಕನಸಿನ ಪಯಣ.

೧೦.ಭಾರತಿ ಭಟ್., ೨೦೦೦., ನನ್ನ ಬೆಲ್ಜಿಯಂ ಪ್ರವಾಸ.

೨೦೦೧ರ ನಂತರ ೨೦೧೫ರವರೆಗೆ ಪ್ರಕಟಗೊಂಡ ಕೃತಿಗಳು -೮

೧೧.ಇಂದಿರಾ ಶಿವಣ್ಣ., ೨೦೦೧., ಹಾಲೆಂಡ್‌ನಿಂದ ಲಂಡನ್‌ವರೆಗೆ.

೧೨.ಶ್ಯಾಮಲಾ ಪ್ರಸಾದ್., ೨೦೦೩., ನಾನು ಕಂಡ ಯುರೋಪ್.

೧೩.ಮೀನಾ ಮೈಸೂರು., ೨೦೦೩., ಫ್ರಾನ್ಸ್ ಪ್ರವಾಸದ ಎತ್ತಣಿಂದೆತ್ತ.

೧೪.ಅಂದನೂರು ಶೋಭ., ೨೦೦೫., ಯುರೋಪ್‌ನಲ್ಲಿ ಒಂದು ಸುತ್ತು.

೧೫.ಪ್ರೇಮಾಭಟ್., ೨೦೧೦., ಪಶ್ಚಿಮದತ್ತ ಪಯಣ.

೧೬.ಇಂದಿರಾ ಶಿವಣ್ಣ., ೨೦೧೨., ಬದುಕಿಗೆ ಬಂಗಾರದ ಲೇಪನ.

೧೭.ಸರಸ್ವತಿ ಭೋಸಲೆ., ೨೦೧೪., ನಾ ಕಂಡ ಮಿನಿ ಯುರೋಪ.

ಅನುಬಂಧ–ಳ

ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರವಾಸ ಕೃತಿಗಳಲ್ಲಿ ಲೇಖಕರು ಸಂದರ್ಶಿಸಿದ ದೇಶಗಳು ಮತ್ತು ಪ್ರಮುಖ ಸ್ಥಳಗಳ ಪಟ್ಟಿಯನ್ನು ಈ ಕೆಳಗಿನಂತೆ ನೀಡಲಾಗಿದೆ.

ಕ್ರ. ಸಂ ಕೃತಿಗಳು ಸಂದರ್ಶಿಸಿರುವ ದೇಶ\ಸ್ಥಳ

1. ಸಮುದ್ರದಾಚೆಯಿಂದ– ಇಂಗ್ಲೆಂಡ್–ಲಂಡನ್, ಆಕ್ಸಫರ್ಡ್, ಸ್ಟ್ರಾಟ್‌ಫರ್ಡ್.
2. ಪ್ರಭುವರ್ಯರ ಯುರೋಪ್ ಪ್ರವಾಸ– ಇಂಗ್ಲೆಂಡ್–ಲಂಡನ್,. ಸ್ಕಾಟ್‌ಲ್ಯಾಂಡ್, ಮಧ್ಯ ಯುರೋಪ್.
3. ಅಪೂರ್ವ ಪಶ್ಚಿಮ– ಇಂಗ್ಲೆಂಡ್–ಲಂಡನ್,. ನಾರ್ವೆ–ಓಸ್ಲೋ,. ಸ್ವೀಡನ್,. ಹೆಂಬರ್ಗ್, ಹಾಲೆಂಡ್, ಬೆಲ್ಜಿಯಂ, ನೀಸ್, ಫ್ರಾನ್ಸ್–ಪ್ಯಾರೀಸ್.ಇಟಲಿ–ಮಿಲಾನ್, ವೆನ್ನೀಸ್, ಫ್ಲಾರೆನ್ಸ್, ರೋಮ್.
4. ನಾ ಕಂಡ ರಷ್ಯಾ– ರಷ್ಯಾ,– ಫಿನ್ಲೆಂಡ್–ಹೆಲ್ಸಿಂಕಿ, ಸೋವಿಯತ್ ರಷ್ಯಾ, ಜೆಕೋಸ್ಲೋವಾಕಿಯಾ.
5. ನಾ ಕಂಡ ಜರ್ಮನಿ –ಜರ್ಮನಿ, ಬೆಲ್ಜಿಯಂ, ಹಾಲೆಂಡ್, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್,
6. ಕೊರವಂಜಿಯ ಪಡುವಣ ಯಾತ್ರೆ – ರಷ್ಯಾ– ತಾಷ್ಕೆಂಟ್, ಮಾಸ್ಕೋ, ಲೆನಿನ್‌ಗ್ರಾಡ್,. ಜರ್ಮನಿ– ಸ್ಟಾಕ್ ಹೋಂ, ಕೂಪನ್ ಹೇಗನ್, ಫ್ರಾಂಕ್‌ಫರ್ಟ್, ಇಂಗ್ಲೆಂಡ್–ಲಂಡನ್, ಪ್ರಾನ್ಸ್– ಪ್ಯಾರೀಸ್, ಜರ್ಮನಿ–ಬರ್ಲಿನ್, ಮ್ಯಾನ್ಷನ್, ವಿಯೆನ್ನಾ, ಸ್ವಿಟ್ಜರ್‌ಲ್ಯಾಂಡ್, ಇಟಲಿ–ನೇಪಲ್ಸ್, ಪಾಂಪೆ, ರೋಮ್,. ವ್ಯಾಟಿಕನ್.
7. ಸೋವಿಯತ್ ದಿನಚರಿ – ರಷ್ಯಾ–ಮಾಸ್ಕೋ, ಟಾಲಿನ್, ಲೆನಿನ್ ಗ್ರಾಡ್, ಅಲ್ಮಾ–ಅಟಾ.
8. ನಾ ಕಂಡ ರಷ್ಯಾ – ರಷ್ಯನ್ ಫೆಡರೇಷನ್, ಬೈಲೋರಷಿಯಾ, ಉಕ್ರೇನ್
9. ವಿದೇಶದಲ್ಲಿ ನಾಲ್ಕು ವಾರ – ರಷ್ಯಾ, ಆಸ್ಟ್ರಿಯಾ, ಜರ್ಮನಿ, ಇಂಗ್ಲೆಂಡ್
10. ಶ್ರೀರಂಗ ಯಾತ್ರೆ – ರಷ್ಯಾ –ಮಾಸ್ಕೋ, ದ್ರೆಸ್‌ದೆನ್, ಲಿಪ್‌ತ್ಸಿಗ್, ಜರ್ಮನಿ–ಬರ್ಲಿನ್, ಬುಡಾಫೆಸ್ಟ್, ಹಂಗೇರಿ.
11. ಪ್ರವಾಸಿಯ ದಿನಚರಿ – ಇಟಲಿ–ರೋಮ್, ಇಂಗ್ಲೆಂಡ್–ಲಂಡನ್
12. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ – ರಷ್ಯಾ – ಮಾಸ್ಕೋ, ಬಾಲ್ಷಾಯ್, ಟಾಲ್‌ಸ್ಟಾಯ್ ಮನೆ.
13. ದೇವರಿಲ್ಲದ ಗುಡಿ – ಸೋವಿಯತ್ ದೇಶ
14. ನವರಷ್ಯಾದ ನೋಟ– ರಷ್ಯಾ–ಮಾಸ್ಕೋ, ಲೆನಿನ್‌ಗ್ರಾಡ್, ಓಲ್ಗಾಗ್ರಾಡ್.

15. ಸ್ನೇಹಯಾತ್ರೆ – ಜರ್ಮನಿ– ಬರ್ಲಿನ್.

16. ರಾಗ ತಾನ ಸೇನ ದಡದಲ್ಲಿ – ಫ್ರಾನ್ಸ್, ಇಂಗ್ಲೆಂಡ್.

17. ನಮ್ಮ ವಿದೇಶ ಯಾತ್ರೆ– ಬೆಲ್ಜಿಯಂ–ಬ್ರಸ್ಸೆಲ್, ಇಂಗ್ಲೆಂಡ್–ಲಂಡನ್, ಫ್ರಾನ್ಸ್–ಪ್ಯಾರೀಸ್, ಜರ್ಮನಿ–ಬರ್ಲಿನ್, ಸ್ವಿಟ್ಜರ್‌ಲ್ಯಾಂಡ್–ಜಿನೇವಾ, ಮಹರ್ಷಿ ಇಂಟರ್ ನ್ಯಾಷನಲ್ ಯೂನಿವರ್ಸಿಟಿ, ರೋಮ್.

18. ಸೋವಿಯತ್ ನಾಡಿನಲ್ಲಿ ಹತ್ತು ದಿನಗಳು – ತಾಷ್ಕೆಂಟ್, ಉಜ್‌ಬೆಕ್, ಬೈಲೋರಷಿಯಾ, ಗ್ರೋಡ್ನಾ ನಗರ.

19. ವೈದ್ಯನ ವಿದೇಶ ಪ್ರವಾಸ – ಇಂಗ್ಲೆಂಡ್– ಲಂಡನ್, ಸ್ಕಾಟ್‌ಲ್ಯಾಂಡ್–ಎಡಿನ್‌ಬರೋ.

20. ಶಶಿ ಕಂಡ ಜರ್ಮನಿ – ಜರ್ಮನಿ.

21. ಒಮ್ಮೆ ರಷಿಯಾ ಇನ್ನೊಮ್ಮೆ ಇತಾಲಿಯಾ – ರಷ್ಯಾ, ಇಟಲಿ.

22. ಇತಾಲಿಯಾ ನಾನು ಕಂಡಂತೆ – ಇಟಲಿ, ಲಂಡನ್.

23. ಏಕಾಕಿ ಪ್ರವಾಸ – ರೋಂ–ಅಥೆನ್ಸ್, ವ್ಯಾಟಿಕನ್, ಇಟಲಿ–ಫ್ಲಾರೆನ್ಸ್, ವೆನ್ನೀಸ್, ವಿಯೆನ್ನಾ, ಮ್ಯೂನಿಕ್, ಜ್ಯೂರಿಕ್,. ಆಮ್‌ಸ್ಟರ್‌ಡಾಂ,. ಬೆಲ್ಜಿಯಂ–ಬ್ರಸ್ಸೆಲ್, ಫ್ರಾನ್ಸ್–ಪ್ಯಾರೀಸ್, ಇಂಗ್ಲೆಂಡ್–ಲಂಡನ್.

24. ಅಂಗೈಯಲ್ಲಿ ಯುರೋ ಅಮೇರಿಕ – ಇಟಲಿ– ರೋಮ್, ಫ್ಲಾರೆನ್ಸ್,. ಸ್ವಿಟ್ಜರ್‌ಲ್ಯಾಂಡ್,. ಫ್ರಾನ್ಸ್.

25. ಹೈಡ್ ಪಾರ್ಕ್ – ಸೋವಿಯತ್ ರಷ್ಯಾ– ಮಾಸ್ಕೋ,. ಪೂರ್ವ ಯುರೋಪ್–ಪೋಲೆಂಡ್, ಹಂಗೇರಿ, ಪಶ್ಚಿಮ ಜರ್ಮನಿ, ಬ್ರಿಟನ್–ಸ್ಟಾಟ್‌ಫರ್ಡ್ ಅಪಾನ್ ಏವನ್, ಹೈಡ್‌ಪಾರ್ಕ್.

26. ಬೆಂಗಳೂರಿನಿಂದ ಬಾರ್ಸಿಲೋನಾಕ್ಕೆ – ಬಾರ್ಸಿಲೋನಾ, ಸ್ಪೈನ್, ಫ್ರಾಂಕ್‌ಫರ್ಟ್.

27. ಯುರೋಪ್ ನೆನಪುಗಳು – ರೋಮ್–ಅಥೆನ್ಸ್, ಗ್ರೀಕ್, ಇಂಗ್ಲೆಂಡ್, ಲಂಡನ್.

28. ನಾನೊಬ್ಬ ಭಾರತೀಯ ಪ್ರವಾಸಿ – ಆಮ್‌ಸ್ಟರ್‌ಡಾಂ, ಫ್ರಾಂಕ್‌ಫರ್ಟ್, ಫ್ರಾನ್ಸ್–ಪ್ಯಾರಿಸ್, ಇಂಗ್ಲೆಂಡ್–ಲಂಡನ್.

29. ಅರಸಿಕರಲ್ಲ– ಜರ್ಮನಿ–ಬರ್ಲಿನ್, ಫ್ರಾಂಕ್‌ಫರ್ಟ್,. ಹಾಲೆಂಡ್, ವೈಮಾರ್, ಲಿಪ್‌ತ್ಸಿಗ್, ಡ್ರೆಸ್‌ದನ್, ಲಂಡನ್.

30. ಜಯಶ್ರೀ ಕಂಡ ಜಗತ್ತು – ಇಟಲಿ– ರೋಮ್, ಜೂರಿಚ್,. ವ್ಯಾಟಿಕನ್,. ಜರ್ಮನಿ–ಬರ್ಲಿನ್, ನ್ಯೂರೆಂಬರ್ಗ್,. ಆಮ್‌ಸ್ಟರ್‌ಡಾಂ,. ಇಂಗ್ಲೆಂಡ್–ಲಂಡನ್,. ಫ್ರಾನ್ಸ್– ಪ್ಯಾರೀಸ್.

31. ಸೋವಿಯತ್ ದೇಶ ಕಂಡೆ– ಸೋವಿಯತ್ ರಷ್ಯಾ–ಲೆನಿನ್‌ಗ್ರಾಡ್, ಬಿಲೀಸಿ.

32. ಅಯನ – ಫ್ರಾನ್ಸ್, ಇಂಗ್ಲೆಂಡ್, ಸ್ವಿಟ್ಜರ್‌ಲ್ಯಾಂಡ್, ಬೆಲ್ಜಿಯಂ– ಲಕ್ಸಂಬರ್ಗ್,. ಹಾಲೆಂಡ್.

33. ಯುರೋ ನಾಡಿನಲ್ಲಿ – ಇಟಲಿ–ರೋಂ, ಫ್ಲಾರೆನ್ಸ್,. ವ್ಯಾಟಿಕನ್, ಇಂಗ್ಲೆಂಡ್–ಲಂಡನ್, ಫ್ರಾನ್ಸ್, ಬೆಲ್ಜಿಯಮ್–ಬ್ರಸ್ಸೆಲ್,. ಹಾಲೆಂಡ್.

34. ಯುರೋ ಅಮೇರಿಕಾದ ಇಣುಕು ನೋಟ– ಇಟಲಿ– ರೋಮ್, ವೆನ್ನೀಸ್, ಸ್ವಿಟ್ಜರ್‌ಲ್ಯಾಂಡ್,. ಫ್ರಾನ್ಸ್–ಪ್ಯಾರಿಸ್, ಇಂಗ್ಲೆಂಡ್–ಲಂಡನ್.

35. ಕಲಾವಿದ ಕಂಡ ಫ್ರಾನ್ಸ್ – ಫ್ರಾನ್ಸ್– ಪ್ಯಾರಿಸ್, ಅವಿನಿಯೊ ನಗರ.

36. ಯುರೋಪ್ ಯಾತ್ರೆ – ಇಂಗ್ಲೆಂಡ್– ಲಂಡನ್, ಸ್ಟ್ರಾಟ್‌ಫರ್ಡ್, ಆಕ್ಸ್‌ಫರ್ಡ್. ಫ್ರಾನ್ಸ್–ಪ್ಯಾರಿಸ್,. ಇಟಲಿ– ಪೀಸಾ, ಫ್ಲಾರೆನ್ಸ್, ರೋಮ್, ಪಾಂಪೆ, ವೆನ್ನೀಸ್,. ಆಸ್ಟ್ರೀಯಾ–ವಿಯೆನ್ನಾ, ಸಾಲ್ಸ್‌ಬರ್ಗ್,. ಸ್ವಿಟ್ಜರ್‌ಲ್ಯಾಂಡ್, ಜರ್ಮನಿ, ಆಮ್‌ಸ್ಟರ್‌ಡಾಂ, ಹಾಲೆಂಡ್, ಸ್ಕಾಟ್‌ಲ್ಯಾಂಡ್–ಎಡಿನ್‌ಬರೋ,.

37. ಇಂಗ್ಲೆಂಡಿನಲ್ಲಿ ಚತುರ್ಮಾಸ– ಇಂಗ್ಲೆಂಡ್–ಬರ್ಟನ್, ಸ್ಟ್ರಾಟ್‌ಫರ್ಡ್, ಸ್ಕಾಟ್‌ಲ್ಯಾಂಡ್, ಫ್ರಾನ್ಸ್–ಪ್ಯಾರಿಸ್,. ಇಟಲಿ– ರೋಂ, ವೆನ್ನೀಸ್,. ಸ್ವಿಟ್ಜರ್‌ಲ್ಯಾಂಡ್.

38. ಯುರೋ ದರ್ಶನ – ಇಂಗ್ಲೆಂಡ್– ಲಂಡನ್,. ಫ್ರಾನ್ಸ್–ಪ್ಯಾರೀಸ್,. ಇಟಲಿ–ರೋಂ, ಪಾಂಪೆ, ವೆನ್ನೀಸ್, ಮ್ಯೂನಿಕ್.

39. ಒಂದು ಕನಸಿನ ಪಯಣ– ಇಂಗ್ಲೆಂಡ್– ಲಂಡನ್,. ಫ್ರಾನ್ಸ್–ಪ್ಯಾರೀಸ್,. ಇಟಲಿ–ರೋಂ, ಪಾಂಪೆ, ವೆನ್ನೀಸ್, ಮ್ಯೂನಿಕ್.

40. ನನ್ನ ಬೆಲ್ಜಿಯಂ ಪ್ರವಾಸ – ಬೆಲ್ಜಿಯಂ– ಅಂಟ್‌ವರ್ಪ್, ಕೋನ್‌ಸ್ಟಾನ್ಸ್,. ಆಮ್‌ಸ್ಟರ್ ಡಾಮ್.

41. ಹಾಲೆಂಡ್‌ನಿಂದ ಲಂಡನ್‌ವರೆಗೆ – ಹಾಲೆಂಡ್, ಇಟಲಿ– ವೆನ್ನೀಸ್, ರೋಮ್,. ವ್ಯಾಟಿಕನ್,. ಸ್ವಿಟ್ಜರ್‌ಲ್ಯಾಂಡ್,. ಫ್ರಾನ್ಸ್,. ಇಂಗ್ಲೆಂಡ್–ಲಂಡನ್.

42. ಫ್ರೆಂಚ್ ಸಂಸ್ಕೃತಿಯ ಪರಿಶೋಧದಲ್ಲಿ – ಫ್ರಾನ್ಸ್– ಪ್ಯಾರೀಸ್, ಅಲ್ಬೀ. ನಾಬೀನ್, ಮಾಂಪಿಲಿಯೇ, ಲೂರ್ಡ್ಸ್, ರಕಮದೂರು.

43. ಜರ್ಮನಿಯಲ್ಲಿ ಶರ್ಮರು – ಜರ್ಮನಿ.

44. ಪಶ್ಚಿಮ ಮುಖಿ – ಸ್ಪೇನ್, ಫ್ರಾನ್ಸ್, ಪೋರ್ಚುಗಲ್, ಇಟಲಿ.

45. ಬದುಕಿಗೆ ಬಂಗಾರದ ಲೇಪನ – ಇಂಗ್ಲೆಂಡ್, ದುಬೈ(ಯು.ಎ.ಇ), ಸ್ಕಾಟ್‌ಲ್ಯಾಂಡ್

––––*****––––